ಶೇಕ್ಸ್‌ಪಿಯರ್

ಎರಡು ನಾಟಕಗಳ ಅಧ್ಯಯನ

ಜಿ. ಕೆ. ಗೋವಿಂದರಾವ್



ಆಕರ ಗ್ರಂಥಮಾಲೆ

ಶೇಕ್ಸ್‌ಪಿಯರ್

ಎರಡು ನಾಟಕಗಳ ಅಧ್ಯಯನ

ಜಿ.ಕೆ. ಗೋವಿಂದರಾವ್

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

SHAKESPEARE - ERADU NATAKAGALA ADHYAYANA
Writer
Prof. G. K. Govinda Rao
Formerly Professor of English
St. Joseph Commerce College, Bangalore
Publisher
Ashok N. Chalavadi
Administrative Officer
Kannada Pustaka Pradhikara
(Kannada Book Authority), Kannada Bhavana
J.C. Road, Bangalore - 560 002.

Pages : xvi + 233

ಮೊದಲ ಆವೃತ್ತಿ: 2003
ಪರಿಷ್ಕೃತ ಮುದ್ರಣ : 2008

ISBN 81-7713-136-2

ಮುಖಪುಟ : ಲಿಪಿ

ಬೆಲೆ: ರೂ. 100/-

ಮುದ್ರಣ :
ಲಿಪಿ ಮುದ್ರಣ
ಬ್ಯೂಗಲ್‌ರಾಕ್ ರಸ್ತೆ
ಬೆಂಗಳೂರು - 560 004
ದೂರವಾಣಿ : 26622061

ಬಿ. ವಿ. ಕಾರಂತರಿಗೆ

ಪ್ರೀತಿ ಗೌರವ ಹಾಗೂ ಕೃತಜ್ಞತೆಗಳಿಂದ

ಅಧ್ಯಕ್ಷರ ಮಾತು

ಸಮಕಾಲೀನ ಸಂದರ್ಭದ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ವಿದ್ಯಮಾನಗಳ ಆಡ್ಡನಡೆಗಳಿಗೆ ತಕ್ಷಣವೇ ಆರೋಗ್ಯಕರ ಭಾವದಲ್ಲಿ ಪ್ರತಿಕ್ರಿಯಿಸುವ ಪ್ರೊ. ಜಿ. ಕೆ. ಗೋವಿಂದರಾವ್ ಬುದ್ಧಿಜೀವಿವಲಯದ ಎಚ್ಚರ ಪ್ರಜ್ಞೆಯ ಪ್ರತೀಕ. ಈ ಎಚ್ಚರ ಸಮಸ್ಯೆಗಳನ್ನು ಕೇವಲ ತಾತ್ವಿಕ ಮಟ್ಟದಲ್ಲಿ ಗ್ರಹಿಸುವುದಲ್ಲ, ಸಾಮಾಜಿಕ ನ್ಯಾಯದ ತಳಮೂಲಕ್ಕೆ ಅನ್ವಯಿಸಿ ಅರ್ಥೈಯಿಸುವ ಹಾಗೂ ಸಮಸ್ಯೆಗಳ ನಿವಾರಣೆಗೆ ಹಾತೊರೆಯುವ ಕ್ರಿಯಾಶೀಲತೆಯದು. ಈ ಕ್ರಿಯಾಶೀಲತೆಯ ಆಂತರ್ಯದಲ್ಲಿ ಸದಾ ತುಡಿಯುವ ಒಬ್ಬ ಅಧ್ಯಾಪಕನಿದ್ದಾನೆ, ರಂಗನಟನಿದ್ದಾನೆ, ಸಾಮಾಜಿಕ ಚಿಂತಕನಿದ್ದಾನೆ. ಈ ಕಾರ್ಯಕ್ಷೇತ್ರಗಳು ಬೇರೆ ಬೇರೆಯಾದರೂ ಅವುಗಳ ಆಶಯ ಪ್ರಮಾಣುವಿನಲ್ಲಿ ಒಂದೇ ಆಗಿ ತುಡಿಯುವ ವ್ಯಕ್ತಿತ್ವದ ಅಸ್ಮಿತೆ ಅನನ್ಯವಾದುದು.

ಇಂಗ್ಲೀಷ್ ಪ್ರಾಧ್ಯಾಪಕರಾಗಿ ದೇಶ ಭಾಷೆ ಸಂಸ್ಕೃತಿಗಳ ಗಡಿಗೆರೆಗಳನ್ನು ದಾಟಿ ಸಾಹಿತ್ಯವನ್ನು ಮಾನವೀಕರಣದ ದ್ರವ್ಯಮೂಲದಲ್ಲಿ ಅರ್ಥೈಯಿಸುವ ವಿಶೇಷತೆ ಪ್ರೊ. ಜಿ. ಕೆ. ಗೋವಿಂದರಾವ್ ಅವರದು. ಇದು ಕಾರಣವಾಗಿ ಶೇಕ್ಸ್‌ಪಿಯರನ ಎರಡು ನಾಟಕಗಳನ್ನು ಕುರಿತ ಅಧ್ಯಯನದ ಈ ಕೃತಿ ಕನ್ನಡದ ಓದುಗರಿಗೆ ಒಂದು ಅನನ್ಯ ಕೊಡುಗೆ. ನಾಟಕಗಳ ವಸ್ತುದ್ರವ್ಯದಲ್ಲಿ ಮಾನವ ಸ್ವಭಾವಗಳನ್ನು ನಿರೀಕ್ಷಿಸುವ ಮಹಾನ್ ಕಲಾಕಾರ ಶೇಕ್ಸ್‌ಪಿಯರ್. ಕಾಲದ ಸದ್ಯತನವನ್ನು ಮೀರಿ ಎಲ್ಲ ಕಾಲದ ತವಕ ತಲ್ಲಣಗಳಿಗೆ ಉತ್ತರ ಮುಖಿಯಾಗಬಲ್ಲ ಧಾತು ಸಂಪನ್ನತೆ ಈ ನಾಟಕಗಳ ವಿಶೇಷತೆ.

ಸಂದರ್ಭವಶದಲ್ಲಿನ ಮನುಷ್ಯನ ವರ್ತನೆ ಜೀವನ ಮೌಲ್ಯಗಳನ್ನು ಬಲಿತೆಗೆದು ಕೊಳ್ಳುತ್ತ ವ್ಯವಸ್ಥೆಗೆ ಬೇರೊಂದು ಬಗೆಯ ಆವಸ್ಥಾಂತರವನ್ನು ಕೊಡುವ ಪರಿಯನ್ನು 'ಸೀಸರ್' ನಾಟಕ ಮನೋಜ್ಞವಾಗಿ ಅನ್ವೇಷಿಸಿದೆ. ಕೋಮಲವಾದ ಪ್ರೇಮ ಪ್ರಸಂಗವು ಮಾನವ ಸಹಜ ದೌರ್ಬಲ್ಯ ಕಾರಣದಿಂದಾಗಿ ದುರಂತವನ್ನೈದುವ ಪರಿಯನ್ನು 'ಒಥೆಲೋ' ನಾಟಕ ಗಂಭೀರವಾಗಿ ಶೋಧಿಸಿದೆ. ಈ ಎರಡೂ ನಾಟಕಗಳಲ್ಲಿ ಅಂತರ್ ಗಾಮಿಯಾಗಿ ಸಂಚರಿಸಿರುವ ಮನೋವ್ಯಾಪಾರಗಳನ್ನು ಪ್ರೊ. ಜಿ. ಕೆ. ಗೋವಿಂದರಾವ್ ರವರು ವಿಶ್ಲೇಷಿಸಿರುವ ರೀತಿ ವಿಸ್ಮಯ ಹುಟ್ಟಿಸುತ್ತದೆ.

ತಮ್ಮ ಕೃತಿಯನ್ನು ಪರಿಷ್ಕರಿಸಿಕೊಟ್ಟು ಮರು ಮುದ್ರಣಕ್ಕೆ ಅನುಮತಿ ನೀಡಿದ ಹಿರಿಯರಾದ ಪ್ರೊ. ಜಿ.ಕೆ. ಗೋವಿಂದರಾವ್‌ರವರಿಗೆ ಪ್ರಾಧಿಕಾರದ ಆತ್ಮೀಯ ಕೃತಜ್ಞತೆಗಳು.

ಸುಂದರವಾಗಿ ಪುಸ್ತಕವನ್ನು ಮುದ್ರಿಸಿಕೊಟ್ಟ ಮಿತ್ರರಾದ ಬಾಕಿನ ಮತ್ತು ಲಿಪಿ ಮುದ್ರಣ ಬಳಗಕ್ಕೆ ಆತ್ಮೀಯ ಧನ್ಯವಾದಗಳು.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ

ಅಕ್ಷರ ಸೂರ್ಯನಿಗೆ ನಮನ

ಶೇಕ್ಸ್‌ಪಿಯರ್ ಕನ್ನಡ ಸಂಸ್ಕೃತಿಯ ಅನುಸಂಧಾನಕ್ಕೆ ಸಿಕ್ಕಿ ಒಂದು ಶತಮಾನ ಉರುಳಿತು. ಅವನ ಜತೆ ನಡೆದ ಅನುಸಂಧಾನದ ಬಗೆಗಳು ಹಲವಾರು. ಅವು ವಸಾಹತುಶಾಹಿ ಕಾಲಘಟ್ಟದಿಂದ ವಸಾಹತೋತ್ತರ ಕಾಲಘಟ್ಟದ ಚಹರೆಗಳಲ್ಲಿ ಸಾಗುತ್ತ ಬಂದಿವೆ. ಕನ್ನಡ ಸಂಸ್ಕೃತಿಯು ಶೇಕ್ಸ್‌ಪಿಯರ್‌ನನ್ನು ಒಳಗೊಂಡ ಬಗೆಗಳನ್ನು ಕುರಿತು ಚಿಂತಿಸುವಾಗ - ಬೆರಗು, ಭ್ರಮೆ, ಇಂಥ ಪ್ರತಿಮಾವಿಮರ್ಶಾಜಗತ್ತು ನಮ್ಮಲ್ಲಿ ಉಂಟು. ಅದೇ ಹೊತ್ತಿಗೆ ರಂಗನಿರ್ಮಾಣ, ರಂಗಭಾಷೆ, ನಟನಾಲೋಕದಂಥ ರಂಗವಿಮರ್ಶಾ ಜಗತ್ತೂ ಉಂಟು. ಹಲವು ಬಾರಿ ಇವು ಒಂದೇ ನಡೆಯಲ್ಲಿ ನಡೆದೂ ಬೇರೆಬೇರೆಯಾಗಿದ್ದುದೂ ಉಂಟು. ಇಂಥ ಹಲವು ಅಧ್ಯಯನಗಳ ನಡುವೆ ಪ್ರೊ. ಜಿ.ಕೆ. ಗೋವಿಂದರಾವ್ ಅವರು ಶೇಕ್ಸ್‌ಪಿಯರ್‌ನನ್ನು ಈ ಎರಡೂ ಬಗೆಗಳನ್ನು ಅಂತರಂಗಿಸಿಕೊಂಡು ಕೃತಿನಿಷ್ಠ ಓದಿನ ಮೂಲಕ ಶೇಕ್ಸ್‌ಪಿಯರ್‌ನನ್ನು ತಮ್ಮವನನ್ನಾಗಿಸಿಕೊಂಡಿದ್ದಾರೆ.

ಪ್ರೊ. ಜಿ.ಕೆ. ಗೋವಿಂದರಾವ್ ಅವರು ಒಂದು ಕಡೆ ರಂಗಪ್ರಯೋಗದಲ್ಲಿ ಸದಾ ಕ್ರಿಯಾಶೀಲರಾಗಿ, ಮತ್ತೊಂದು ಕಡೆ ಸಾಮಾಜಿಕ-ಸಾಂಸ್ಕೃತಿಕ ನೆಲೆಯಲ್ಲಿ ಯಾವತ್ತೂ ವೈಚಾರಿಕರಾಗಿ, ಮಗುದೊಂದುಕಡೆ ಸಾಹಿತ್ಯಾಧ್ಯಯನದ ಅನುಸಂಧಾನಕಾರರಾಗಿ ಶೇಕ್ಸ್‌ಪಿಯರ್‌ನನ್ನು ಸಮೀಪಿಸಿದ್ದಾರೆ. ಇದು ಶೇಕ್ಸ್‌ಪಿಯರ್‌ನ ಆತ್ಮದ ಜತೆ ಅವರು ನಡೆಸಿದ ಧ್ಯಾನದ ಕ್ರಮಗಳೇ ಆಗಿವೆಯೆಂಬ ತಿಳಿವಳಿಕೆ ನನ್ನದು. ಈ ಧ್ಯಾನಲೋಕದಲ್ಲಿ ಶೇಕ್ಸ್‌ಪಿಯರ್ ಕನ್ನಡ ಸಂಸ್ಕೃತಿ ಲೋಕಕ್ಕೆ ನಿಚ್ಚಳವಾಗಿ ಕಾಣಿಸಿಕೊಂಡಿದ್ದಾನೆ. ಜೂಲಿಯಸ್ ಸೀಸರ್ ಹಾಗೂ ಒಥೆಲೋ ನಾಟಕಗಳೆರಡರ ಅಧ್ಯಯನವು ಹೊಸ ಅಧ್ಯಯನದ ಕ್ರಮಗಳಿಗೆ ದಾರಿಮಾಡಿ ಕೊಟ್ಟಿವೆ. ಹೊಸ ಹಾದಿಗಳನ್ನು ಹುಟ್ಟುಹಾಕುವ ಸೂಕ್ಷ್ಮ ನೇಯ್ಗೆಗೆ ನಮ್ಮನ್ನು ಸಾಗಿಸಿದೆ. ಕನ್ನಡವು ಈವರೆಗೂ ಈ ಬಗೆಯ ಅಧ್ಯಯನವನ್ನು ಕಂಡಿರಲಿಲ್ಲ. ಇಂಥ ಹೊಸಬಗೆಯ ಅಧ್ಯಯನದ ಅನುಸಂಧಾನಕ್ಕೆ ನಮ್ಮನ್ನು ಕರೆದುಕೊಂಡು ಹೋದ ಪ್ರೊ. ಜಿ.ಕೆ. ಗೋವಿಂದರಾವ್ ಅವರಿಗೆ ಶೇಕ್ಸ್‌ಪಿಯರ್‌ನ ಅಭಿಮಾನಿಗಳ ಪರವಾಗಿ, ಕನ್ನಡ ಜನತೆಯ ಪರವಾಗಿ ಅಭಿನಂದನೆಗಳನ್ನು ತಿಳಿಸಬೇಕು.

ಈ ಪುಸ್ತಕವು ಪ್ರಾಧಿಕಾರದ ಮೂಲಕ ಪ್ರಕಟಗೊಳ್ಳಲು ವಿಶ್ವಾಸಪೂರ್ವಕವಾಗಿ ಒಪ್ಪಿಗೆ ನೀಡಿ ಪ್ರೊ. ಜಿ.ಕೆ. ಗೋವಿಂದರಾವ್ ಅವರು ನಮ್ಮೊಡನೆ ಸಹಕರಿಸಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯಮಿತ್ರರು ಪ್ರಕಟಣೆಯ ಒಪ್ಪಿಗೆ ಸೂಚಿಸಿದ್ದಾರೆ. ಇವರೆಲ್ಲರಿಗೂ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕನ್ನಡದ ಜನ ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕೃತಜ್ಞತೆಗಳು

ಹೇಳಬೇಕಾಗಿದ್ದನ್ನೆಲ್ಲ ಈ ಎರಡು ಪ್ರಬಂಧಗಳಲ್ಲಿ ಹೇಳಿಬಿಟ್ಟಿದ್ದೇನೆ ಎಂದು ತಿಳಿದಿರುವುದರಿಂದ ಮುನ್ನುಡಿಯಲ್ಲಿ ಮತ್ತೆ ಏನನ್ನು ಹೇಳುವುದೂ ಅನವಶ್ಯಕ ಎನಿಸುತ್ತದೆ. ಅತ್ಯಂತ ಸಾಹಸದ ಕೆಲಸವನ್ನು ಅತ್ಯಂತ ವಿನಯದಿಂದ ಮಾಡಹೊರಟಿದ್ದೇನೆ ಎಂದು ಮಾತ್ರ ಹೇಳಲು ಇಚ್ಛಿಸುತ್ತೇನೆ. ಮಿಕ್ಕಿದ್ದೆಲ್ಲ ಓದುಗರಿಗೆ ಬಿಟ್ಟಿದ್ದು. ಶೇಕ್ಸ್‌ಪಿಯರ್ ವಿದ್ಯಾರ್ಥಿಗಳ, ಅಭಿಮಾನಿಗಳ, ರಂಗಕರ್ಮಿಗಳ, ಪಂಡಿತರ ಗಮನಕ್ಕೆ ಯೋಗ್ಯವಾದದ್ದೇನಾದರೂ ಹೇಳಿದ್ದೇನೆಯೋ ಗೊತ್ತಿಲ್ಲ.

ಆ ಅನುಮಾನ ಸಂಕೋಚಗಳಲ್ಲಿಯೇ ನನ್ನ ಹಲವು ಗೆಳೆಯರಿಗೆ ಹಸ್ತಪ್ರತಿಯನ್ನು ತೋರಿಸಿದೆ. ಅವರುಗಳಲ್ಲಿ ಡಾ. ಜಿ. ರಾಮಕೃಷ್ಣ, ಪ್ರೊ. ವಿ.ಎಸ್. ಶ್ರೀಧರ, ಪ್ರೊ. ಕೆ. ಸುಂದರರಾಜ್ ಹಾಗೂ ಪ್ರೊ. ಮನು ಚಕ್ರವರ್ತಿ ಮುಖ್ಯರು. ಎಲ್ಲರೂ ಉತ್ತೇಜಿಸಿ ಧೈರ್ಯ ತುಂಬಿದರು. ಅದಕ್ಕಾಗಿ ಅವರನ್ನು ಇಲ್ಲಿ ನೆನೆಯುತ್ತೇನೆ.

ಪ್ರಧಾನವಾಗಿ ಗೆಳೆಯ ಡಾ. ರಾಜೇಂದ್ರ ಚೆನ್ನಿಯವರ ಹೆಸರನ್ನು ನಾನು ಹೇಳಬೇಕು. ಎರಡೂ ನಾಟಕಗಳ ಕುರಿತಾದ ಈ ಪ್ರಬಂಧಗಳನ್ನು ಓದಿದ್ದಷ್ಟೇ ಅಲ್ಲ, ತಮ್ಮ ಅನಿಸಿಕೆಗಳನ್ನು ಪತ್ರದ ಮೂಲಕವೂ ವಿಶದವಾಗಿ ತಿಳಿಸಿ ತುಂಬ ಉಪಕಾರ ಮಾಡಿದರು. ಈ ಪ್ರಬಂಧಗಳ ಕುರಿತಾಗಿ ಅವರು ತೋರಿಸಿದ ಆಸ್ತೆ ಮತ್ತು ಉತ್ಸಾಹಗಳಿಂದ ಸ್ಫೂರ್ತಿಗೊಂಡು ಅವರೇ ಪುಸ್ತಕಕ್ಕೆ ಒಂದು ಪ್ರಸ್ತಾವನೆಯನ್ನು ಬರೆದುಕೊಡಬೇಕೆಂದು ಕೇಳಿಕೊಂಡೆ. ಒಪ್ಪಿಕೊಂಡು ಒಂದು ಮನೋಜ್ಞವಾದ ಪ್ರಸ್ತಾವನೆ ಬರೆದುಕೊಟ್ಟಿದ್ದಾರೆ. ಶೇಕ್ಸ್‌ಪಿಯರ್ ಜಗತ್ತಿನ ಕುರಿತಾದ ಅವರ ಪ್ರಸ್ತಾವನೆಯ ಮೊದಲ ಮೂರು ಪುಟಗಳಂತೂ ನನ್ನ ಪ್ರಕಾರ ಅತಿ ಸೂಕ್ಷ್ಮ ಮನಸ್ಸೊಂದು ಶೇಕ್ಸ್‌ಪಿಯರನ ಕಲಾತ್ಮಕಸೃಷ್ಟಿಯನ್ನು ಸಮರ್ಥವಾಗಿ ಗ್ರಹಿಸಿದ ರೀತಿಯ ಸೂಚಕ. ನನ್ನ ಈ ಬರಹದ ವಿಷಯದಲ್ಲಿ ಇಷ್ಟು ಪ್ರೀತಿಯಿಂದ ವಿವರವಾದ ಪ್ರಸ್ತಾವನೆಯನ್ನು ಬರೆದುಕೊಟ್ಟಿದ್ದಕ್ಕಾಗಿ ನಾನು ಅವರನ್ನು ಪ್ರೀತಿ ಗೌರವಗಳಿಂದ ನೆನೆಯುತ್ತೇನೆ.

ಈ ಲೇಖನಗಳ ಪ್ರಕಟಣೆಯ ಜವಾಬ್ದಾರಿ ಹೊರುತ್ತಿರಾ ಎಂದು ನಾನು ಕೇಳಿದ ಗಳಿಗೆಯಿಂದ ಇಲ್ಲಿಯವರೆವಿಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ನನ್ನ ಗೆಳೆಯರೂ ಆದ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ತೋರಿದ ಆಸಕ್ತಿ, ಇಡೀ ಪ್ರಕಟಣಕ್ರಿಯೆ ತಮ್ಮದೇ ಕೆಲಸವೆನ್ನುವಷ್ಟು ಮಟ್ಟಿಗೆ ತಮ್ಮನ್ನು ತಾವು ಹೃತ್ಪೂರ್ವಕವಾಗಿ ತೊಡಗಿಸಿಕೊಂಡ

ರೀತಿ ನನ್ನನ್ನು ನಮ್ರಗೊಳಿಸಿದೆ. ಅವರಿಗೆ ವೈಯಕ್ತಿಕವಾಗಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನಾನು ನನ್ನ ಗೌರವದ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇನೆ.

ಎರಡನೆಯ ಪರಿಷ್ಕೃತ ಮುದ್ರಣ

ಇದು ಸಾಧ್ಯವಾಗುವುದಕ್ಕೆ ಬಹು ಮುಖ್ಯವಾಗಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಗೆಳೆಯ ಪ್ರೊ. ಎಸ್. ಜಿ. ಸಿದ್ದರಾಮಯ್ಯ ಅವರು ಕಾರಣ. ಅವರಿಗೆ ನನ್ನ ಮೊದಲ ಮತ್ತು ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ವಂದನೆಗಳು.

ಬಹು ಅಲ್ಪ ಕಾಲದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಗೆಳೆಯ ಬಾಕಿನ ಮತ್ತು ಲಿಪಿ ಮುದ್ರಣಾಲಯದ ಎಲ್ಲ ಸಿಬ್ಬಂದಿ ವರ್ಗಕ್ಕೆ ನನ್ನ ಕೃತಜ್ಞತೆಗಳು.

ಕೃತಿಯ ಕುರಿತಾಗಿ ಮೆಚ್ಚುಗೆಯ ಮತ್ತು ಕ್ರಿಯಾತ್ಮಕ ವಿಮರ್ಶೆಗಳನ್ನು ಮಾಡಿದ ನನ್ನ ಗೆಳೆಯರೆಲ್ಲರಿಗೂ ನನ್ನ ಕೃತಜ್ಞತೆಗಳು.

೨೨.೨.೨೦೦೮

– ಜಿ.ಕೆ. ಗೋವಿಂದರಾವ್
೧೬೧, ೩೬ 'ಎ' ಅಡ್ಡರಸ್ತೆ
೭ನೇ ಬಡಾವಣೆ, ಜಯನಗರ
ಬೆಂಗಳೂರು - ೫೬೦ ೦೮೨.

ಪ್ರಸ್ತಾವನೆ

ಶೇಕ್ಸ್‌ಪಿಯರ್ ಲೋಕಗಳು

ಶೇಕ್ಸ್‌ಪಿಯರ್ ತನ್ನ ನಾಟಕದಲ್ಲಿ ಸೃಷ್ಟಿಸಿದ ಲೋಕಗಳಿಗೆ ಎಲ್ಲರಿಗೂ ರಹದಾರಿಯಿದೆ. ಅವುಗಳಿಗೆ ಒಂದೇ ದ್ವಾರ, ಒಂದೇ ಬಾಗಿಲು ಎಂದಿಲ್ಲ. ಎಲ್ಲಿಂದ, ಹೇಗೆ ಪ್ರವೇಶ ಮಾಡಿದರೂ ಈ ಲೋಕಗಳು ಸಮಗ್ರವಾಗಿಯೇ ಕಾಣುತ್ತವೆ. ಅಷ್ಟು ಮಾತ್ರವಲ್ಲ. ಅವನ ಒಂದೇ ನಾಟಕದಲ್ಲಿ ಇಂಥ ಹಲವಾರು ಸ್ವಯಂಪೂರ್ಣ ಲೋಕಗಳು ಸಹಬಾಳ್ವೆ ಮಾಡುತ್ತವೆ. ಇವುಗಳಲ್ಲಿ ಮೇಲು ಕೀಳಿನ ಶ್ರೇಣಿಗಳಿಲ್ಲ. ಇದು ಸಾಧ್ಯವಾಗುವುದಕ್ಕೆ ಕಾರಣವೆಂದರೆ ಶೇಕ್ಸ್‌ಪಿಯರಿಗೆ 'ವ್ಯಕ್ತಿತ್ವ' ಎನ್ನುವುದು ಇಲ್ಲ. ವ್ಯಾಸ, ವಾಲ್ಮೀಕಿ, ಹೋಮರ್ ಮತ್ತು ಅನಾಮಿಕ ಜಾನಪದ ಕವಿಗಳಿಗೆ ಕೂಡ ವ್ಯಕ್ತಿತ್ವವಿಲ್ಲ. ಹೀಗಾಗಿ ಅವರು ಕೇವಲ ಮಾಧ್ಯಮ ಅಥವಾ ಕ್ಷೇತ್ರಗಳಾಗಿ ಅವರ ಮೂಲಕ ಅವರ ಕಾಲದ ದೊಡ್ಡ ಬಿಕ್ಕಟ್ಟುಗಳು, ಜನರ ಮನಸಿನ ಆಳದೊಳಗಿನ ಅಲ್ಲೋಲ ಕಲ್ಲೋಲಗಳು, ಅವರ ಭಾಷಾಸಮುದಾಯದ ವಿಶಿಷ್ಟ ಕಾಲ್ಪನಿಕ ಸೃಷ್ಟಿಗಳು, ಲೋಕಗ್ರಹಿಕೆ ಮತ್ತು ಅದಕ್ಕೆ ಅಭಿನ್ನವಾಗಿ ಹೊಂದಿಕೊಂಡ ಅಭಿವ್ಯಕ್ತಿಕ್ರಮಗಳು – ಇವೆಲ್ಲವೂ ಕಲೆಯ ಮೂಲಕ ರೂಪವನ್ನು ಪಡೆಯುತ್ತವೆ. ಕುಂಬಾರನ ಕೈಯಲ್ಲಿ ಮಣ್ಣು ನಿಶ್ಚಿತವಾದ ರೂಪವನ್ನು ಪಡೆಯುವ ರೀತಿಯಲ್ಲಲ್ಲ. ಗರ್ಭದಲ್ಲಿ ತನ್ನ ಸರ್ವಸ್ವತಂತ್ರ ಮತ್ತು ನಮಗೆ ಅನೂಹ್ಯವಾಗಿ ಕಾಣುವ ರೀತಿಯಲ್ಲಿ ಶಿಶು ರೂಪ ಪಡೆದುಕೊಂಡು ಹೊರಬರುವ ರೀತಿಯಲ್ಲಿ. ಒಂದು ಹಿರಿದಾದ ಅರ್ಥದಲ್ಲಿ ಶೇಕ್ಸ್‌ಪಿಯರನಂಥ ಬರಹಗಾರರಿಗೆ ತಮ್ಮದೇ ಆದ ಮೌಲ್ಯಕಲ್ಪನೆಗಳಿದ್ದರೂ ಅವು ಕೃತಿಯೊಳಗೆ ಮೂಡಿಬರುವ ಲೋಕಗಳನ್ನು ನಿಯಂತ್ರಿಸುವುದಿಲ್ಲ ; ಊನಗೊಳಿಸುವುದಿಲ್ಲ. ಅವನ ಪ್ರತಿಭೆಯ ಮೂಲಗುಣವೆಂದರೆ ಅಗಾಧವಾದ ತಾಳ್ಮೆ ಹಾಗೂ ತಾದಾತ್ಮ್ಯದಿಂದ ಈ ಲೋಕಗಳು ತಮ್ಮ ಪೂರ್ಣ ಶರೀರದೊಂದಿಗೆ ಹುಟ್ಟಲು ಅನುವು ಮಾಡಿಕೊಡುವುದಾಗಿದೆ.

ಹೀಗೆಂದ ಮಾತ್ರಕ್ಕೆ ಶೇಕ್ಸ್‌ಪಿಯರನನ್ನು ಅಚಾರಿತ್ರಕವೂ, ಸಾರ್ವಕಾಲಿಕವೂ ಆಗಿರುತ್ತದೆಯೆನ್ನಲಾಗುವ 'ಮನುಷ್ಯ ಸ್ವಭಾವ'ದ ಚಿತ್ರಕಾರನೆಂದು ನೋಡುವುದು ಸರಿಯೆಂದಲ್ಲ. ಬೇಂದ್ರೆ ಏನನ್ನು ಬರೆದರೂ ಅದಕ್ಕೆ ಧಾರವಾಡದ ವಾಸನೆಯಿರುತ್ತಿದ್ದ ಹಾಗೆ ಶೇಕ್ಸ್‌ಪಿಯರ್ ಏನನ್ನೇ ಬರೆದರೂ ಅದಕ್ಕೆ ರೆನೆಸಾನ್ಸ್ ಯುಗದ ಇಂಗ್ಲೆಂಡಿನ ವಾಸನೆಯಿರುತ್ತದೆ. ಅವನ ನಾಟಕಗಳ ರೋಮನ್ ಜನರು ಎಲಿಜಬೆತ್‌ರಾಣಿಯ ಕಾಲದ ಲಂಡನ್ನಿಗರೆ, ಶೇಕ್ಸ್‌ಪಿಯರನ ಪ್ರೇಕ್ಷಕ ಪ್ರಭುಗಳನ್ನು ಹೋಲುವಂಥವರೆ. ಅವನ ನಾಟಕಗಳ ರಕ್ತ ಮಾಂಸ ಎಲ್ಲವೂ ದೇಶೀಯ ಹಾಗೂ ಸ್ಥಳೀಯ. ಆದರೆ ಅದರೊಳಗೆ ಸುಳಿದಾಡುವ 'ಆತ್ಮ' ಮಾತ್ರ ಶುದ್ಧ

ಜಂಗಮ ಸ್ವರೂಪದ್ದು. ಹೀಗಾಗಿ ತಮ್ಮ ಕಾಲಕ್ಕಾಗಿ ಮಾತ್ರವಲ್ಲ, ತನ್ನ ನಾಟಕಗಳು ಪ್ರದರ್ಶನವಾಗುವ ದಿನಕ್ಕಾಗಿ ಎಂದು ಶೇಕ್ಸ್‌ಪಿಯರ್ ಬರೆದ ನಾಟಕಗಳು ಯೂರೋಪು, ಇಂಗ್ಲಿಷ್, ಪಶ್ಚಿಮದ ನಾಗರಿಕತೆ ಇವುಗಳ ಸೋಂಕು ಎಂದೂ ತಗಲದ ಸಂಸ್ಕೃತಿಗಳಲ್ಲಿ ಕೂಡ ಮರುಹುಟ್ಟು ಪಡೆಯುತ್ತಿರುತ್ತವೆ. ಶೇಕ್ಸ್‌ಪಿಯರ್ ನಾಟಕಗಳ ನಿರಂತರವಾದ ಈ ಸಾಂಸ್ಕೃತಿಕ ಪರ್ಯಟನದ (Cultural perigrination) ಕತೆ ಸಾಹಿತ್ಯಲೋಕದ ಅತ್ಯಂತ ರೋಚಕವಾದ ಕತೆಯಾಗಿದೆ. ಅದರಲ್ಲೂ ಈ ವಿಭಿನ್ನ ಸಂಸ್ಕೃತಿಗಳು ಶೇಕ್ಸ್‌ಪಿಯರ್‌ನ ನಾಟಕಗಳನ್ನು ಯಾವುದೇ ಸಂಕೋಚವಿಲ್ಲದಂತೆ ನಿರ್ಭಿಡೆಯಾಗಿ ತಮ್ಮ ಅವಶ್ಯಕತೆಗಳಿಗೆ ತಕ್ಕ ಹಾಗೆ ಬಳಸಿಕೊಂಡಿದ್ದರ ಕತೆ ಇನ್ನೂ ರೋಮಾಂಚಕವಾಗಿದೆ.

ಇದೆಲ್ಲವೂ ಸಾಧ್ಯವಾಗುವುದಕ್ಕೆ ಇರಬಹುದಾದ ಹಲವಾರು ಕಾರಣಗಳಲ್ಲಿ ನನಗೆ ಮುಖ್ಯವೆಂದು ಕಾಣುವ ಎರಡು ಕಾರಣಗಳು : ಶೇಕ್ಸ್‌ಪಿಯರ್ ಬದುಕಿ ಬರೆದ ಕಾಲ ಯೂರೋಪಿನ ನಾಗರಿಕತೆಯ ಚರಿತ್ರೆಯಲ್ಲಿಯೇ ಅತ್ಯಂತ ತೀವ್ರ ಸ್ವರೂಪದ ಬದಲಾವಣೆಗಳ ಕಾಲವಾಗಿತ್ತು. ಬಹು ದೊಡ್ಡ ವೈಚಾರಿಕ ವಿಪ್ಲವಗಳು ಜನ ಸಾಮಾನ್ಯರ ಕಲ್ಪನೆಯ ಜಗತ್ತನ್ನು ಪ್ರವೇಶಮಾಡಿದ ಕಾಲವಾಗಿತ್ತು. ಮನುಷ್ಯನನ್ನು ವಿಶ್ವದ ಕೇಂದ್ರವನ್ನಾಗಿ ನೋಡುವ ಮತ್ತು ಆ ಕಾರಣಕ್ಕಾಗಿ ಅವನ ಮನಸ್ಸು, ನಡವಳಿಕೆ, ಆಸೆ ಆಮಿಷಗಳು, ಆತಂಕ ಭಯಗಳು ಇವುಗಳ ಬಗ್ಗೆ ತೀವ್ರವಾದ ಲೌಕಿಕ ಕುತೂಹಲವನ್ನು ಹುಟ್ಟಿಸಿದ ಮನುಷ್ಯ ಕೇಂದ್ರಿತ ಸಿದ್ಧಾಂತಗಳ ಕಾಲವೂ ಆಗಿತ್ತು. ಹಾಗಂತ ಯಾರೂ ಸಾರ್ವಜನಿಕವಾಗಿ ಹೇಳದಿದ್ದರೂ ದೇವರು ನೇಪಥ್ಯಕ್ಕೆ ಸರಿದು ಮನುಷ್ಯನ ಪ್ರಜ್ಞೆಯ ಎಲ್ಲ ವ್ಯಾಪಾರಗಳ ರಂಗಭೂಮಿಯೇ ಕೇಂದ್ರವಾಗಿಬಿಟ್ಟಿತು. ಶೇಕ್ಸ್‌ಪಿಯರ್‌ನ ರಂಗಭೂಮಿ ಇದು.

ಇನ್ನೊಂದು ಕಾರಣವೆಂದರೆ ಶೇಕ್ಸ್‌ಪಿಯರ್‌ನಿಗೆ ಸದ್ಯದ ಮೂರ್ತವಾಸ್ತವಗಳಲ್ಲಿರುವ ಆಸಕ್ತಿ ಅವುಗಳ ಅಂತಿಮ ಪರಿಣಾಮಗಳಲ್ಲಿಲ್ಲ. Telelogical ಎಂದು ಕರೆಯಲಾಗುವ ಅಂಶಗಳ ಬಗ್ಗೆ ಆತನಿಗೆ ಹೆಚ್ಚಿನ ಕುತೂಹಲವಿಲ್ಲ. ಹೀಗಾಗಿಯೇ ಅವನೊಬ್ಬ ಲೌಕಿಕನೂ ಹೌದು ಭೌತವಾದಿಯೂ ಹೌದು. ಪ್ರಾಪಂಚಿಕವಾದ ಅವನ ಪ್ರತಿಭೆ ಮನುಷ್ಯಲೋಕದ ಎಲ್ಲ ಸತ್ಯಗಳನ್ನು ಬಹುಮುಖಿಯೆಂದೇ ಗ್ರಹಿಸುತ್ತದೆ. ಮ್ಯಾಕನೀಸ್ ಪದ್ಯದ ಸಾಲುಗಳನ್ನು ಬಳಸಿಕೊಂಡು ಹೇಳುವುದಾದರೆ ಶೇಕ್ಸ್‌ಪಿಯರನಿಗೆ "The world is incorrigibly plural". ಯಾರೂ ತಿದ್ದಲಾರದಂತೆ ಬಹುಮುಖಿಯಾದ ಜಗತ್ತಿನ ಬಗ್ಗೆ ನಾಟಕಗಳನ್ನು ಬರೆಯಬಹುದೇ ಹೊರತು ವ್ಯಾಖ್ಯಾನಗಳನ್ನಲ್ಲ. Tempest ನಾಟಕದಲ್ಲಿ ನಾಯಕನಾದ ಪ್ರಾಸ್ಪೆರೋ ತನ್ನ ಸ್ವಾರ್ಥಿ ತಮ್ಮನನ್ನು, ಇತರರನ್ನು ಕ್ಷಮಿಸಿ ಕ್ರಿಶ್ಚಿಯನ್ ಮೌಲ್ಯವಾದ ಕ್ಷಮಾಗುಣವನ್ನು ಮೆರೆಯುತ್ತಾನೆ ಎಂದು ಹೇಳಬಹುದು. ಆತ ಪಶ್ಚಿಮ ನಾಗರಿಕತೆಯ ಸಾಮ್ರಾಜ್ಯಶಾಹಿಯ ಪ್ರತಿನಿಧಿಯಾಗಿ ಬಂದು ದ್ವೀಪದ ಮೂಲನಿವಾಸಿಯಾದ ಕ್ಯಾಲಿಬನ್‌ನನ್ನು ತನ್ನ ಗುಲಾಮನನ್ನಾಗಿಸಿ ಅವನಿಗೆ ''ನಾಗರಿಕತೆ''ಯನ್ನು ಹೇಳಿಕೊಡುತ್ತಾನೆಯಾದ್ದರಿಂದ ಈ ನಾಟಕವನ್ನು ವಸಾಹತುಶಾಹಿಯ ಪ್ರಧಾನ ಸಾಂಸ್ಕೃತಿಕ ಪಠ್ಯವನ್ನಾಗಿ ನೋಡಬಹುದು. ಇವುಗಳ ಮಧ್ಯ ಇದಾವುದರ

ಪರಿವೆಯಿಲ್ಲದಂತೆ ಪ್ರೀತಿ, ಲೈಂಗಿಕತೆಗಳ ಸುಂದರ ಹೊಸ ಜಗತ್ತನ್ನು ಕಂಡುಕೊಳ್ಳುವ ಮಿರಾಂಡಾ-ಫರ್ಡಿನಂಡರ ಪ್ರೇಮಕತೆಯೂ ನಾಟಕದಲ್ಲಿದೆ. ರೋಮಿಯೋ-ಜೂಲಿಯೆಟ್ ನಾಟಕದಲ್ಲಿ ಹದಿನಾಲ್ಕು ವಯಸ್ಸಿನ ಜೂಲಿಯೆಟ್ ಕಂಡುಕೊಳ್ಳುವ ಮುಗ್ಧ, ಆದರ್ಶಮಯ ಪ್ರೀತಿಯ ಜೊತೆಗೆ ಅವಳ ದಾದಿಯ (nurse) ಲೈಂಗಿಕ ಹಾಸ್ಯದಲ್ಲಿ ವ್ಯಾಖ್ಯಾನಗೊಳ್ಳುವ ಲೈಂಗಿಕ ಪ್ರೀತಿಯೂ ಇದೆ. ಹ್ಯಾಮ್ಲೆಟ್‌ನ ಸೂಕ್ಷ್ಮ ಅಂತರ್ಮುಖತೆ ಕೇವಲ ಪುರುಷ ಅಹಂಕಾರದ ದ್ಯೋತಕವಿರಬಹುದು ಎಂದು ಸಂಶಯ ಹುಟ್ಟಿಸುವಂತೆ ನಾಟಕದಲ್ಲಿ ಗರ್ಟ್ರೂಡ್ ಮತ್ತು ಒಫಿಲಿಯಾರ ನೋವಿನ ಮೌನ ಲೋಕಗಳಿವೆ. ಅಥೆಲೋ-ಡೆಸ್ಡಿಮೋನಾಳ ಉತ್ಕಟ ಪವಿತ್ರ ಪ್ರೀತಿಯನ್ನು ಗಂಡು ಹೆಣ್ಣು ಸೇರಿ 'ನಾಲ್ಕು ಕಾಲಿನ ಪ್ರಾಣಿಯಾಗುವ' ಸಂಭೋಗಕ್ಕೆ ಇಳಿಸಿ ನಗುವ ಇಯಾಗೋನ ಕ್ಷುದ್ರ ತಿಳುವಳಿಕೆಯೂ ನಾಟಕದಲ್ಲಿದೆ. ವಿಶೇಷವೆಂದರೆ ಶೇಕ್ಸ್‌ಪಿಯರ್‌ನ ಈ ಲೋಕಗಳು ಒಂದನ್ನೊಂದು ಕಬಳಿಸುವುದಿಲ್ಲ. ಈ ಎಲ್ಲ ಲೋಕಗಳಿಗೂ ಸಂಪೂರ್ಣ ಸ್ವಾಯತ್ತತೆ ನೀಡುವ ಶ್ರೇಷ್ಠ ಅರಾಜಕ ಪ್ರತಿಭೆ ಶೇಕ್ಸ್‌ಪಿಯರ್‌ನದಾಗಿದೆ.

ಇಂಥ ಶೇಕ್ಸ್‌ಪಿಯರನೊಂದಿಗೆ ಕನ್ನಡ ಸಾಹಿತ್ಯ ನಿರಂತರವಾದ ಅನುಸಂಧಾನದಲ್ಲಿ ತೊಡಗಿದೆ. ಅವನ ನಾಟಕಗಳ ಅನುವಾದ ಹಾಗೂ ರೂಪಾಂತರಗಳ ಮೂಲಕ ಈ ಅನುಸಂಧಾನ ಆರಂಭವಾಯಿತು. ರಾಮಚಂದ್ರದೇವ ಅವರ ಗ್ರಂಥ ಹಾಗೂ ತಾರಕೇಶ್ವರ ಅವರ ಅಪ್ರಕಟಿತ ಪಿಎಚ್‌ಡಿ ಪ್ರಬಂಧದ ಒಳನೋಟಗಳನ್ನು ಹಿಂಬಾಲಿಸಿಕೊಂಡು ಹೊರಟರೆ ಆಧುನಿಕ ಕನ್ನಡ ಸಾಹಿತ್ಯದ ಮೊದಲ ಹಂತದ ಬಗ್ಗೆ ನಮ್ಮ ವಸಾಹತುಶಾಲಿ ಅನುಭವದ ಬಗ್ಗೆ ಎರಡು ಸಂಸ್ಕೃತಿಗಳ ವ್ಯವಹಾರಗಳ ಬಗ್ಗೆ ಉಪಯುಕ್ತವಾದ ತಿಳುವಳಿಕೆಯನ್ನು ಪಡೆಯಬಹುದಾಗಿದೆ. ಇನ್ನೊಂದು ಬಗೆಯ ಅನುಸಂಧಾನವೆಂದರೆ ಒಟ್ಟಾರೆ ಶೇಕ್ಸ್‌ಪಿಯರನ ನಾಟಕಗಳ ಬಗ್ಗೆ ಪ್ರತಿಸ್ಪಂದನೆಗಳನ್ನು ದಾಖಲಿಸಿರುವ ಕೃತಿಗಳು (ಬಾಲೂರಾವ್ ಅವರ 'ಶೇಕ್ಸ್‌ಪಿಯರನಿಗೆ ನಮಸ್ಕಾರ' ಮತ್ತು ಮೂರ್ತಿರಾಯರ ಬರಹಗಳು ಈ ಬಗೆಯವು). ಹಿಂದೆ ವಸಾಹತುಗಳಾಗಿದ್ದ, ಅದರಲ್ಲೂ ಕಪ್ಪು ಕಾಮನ್ವೆಲ್ತ್ ರಾಷ್ಟ್ರಗಳೆಂದು ಕರೆಯಲ್ಪಡುತ್ತಿದ್ದ ಆಫ್ರಿಕಾ ಹಾಗೂ ವೆಸ್ಟ್‌ಇಂಡಿಯನ್ ಸಾಹಿತ್ಯ ಸಂಪ್ರದಾಯಗಳು ಶೇಕ್ಸ್‌ಪಿಯರನ ಬಗ್ಗೆ ನಡೆಸಿದ ವಸಾಹತೋತ್ತರ ಚಿಂತನೆ ನಮ್ಮಲ್ಲಿ ಈವರೆಗೆ ಬಂದಿರದೇ ಇರುವ ಪ್ರಸ್ಥಾನಗಳಲ್ಲಿ ಒಂದಾಗಿದೆ. ಈ ಸಂಪ್ರದಾಯಗಳು 'ಕ್ಯಾಲಿಬನ್ ಕಾಂಪ್ಲೆಕ್ಸ್' ಇವೇ ಮುಂತಾದ ವಸಾಹತೋತ್ತರ ಪರಿಕಲ್ಪನೆಗಳ ಮೂಲಕ ಶೇಕ್ಸ್‌ಪಿಯರನನ್ನು ಬಳಸಿಕೊಂಡು ತಮ್ಮ ರಾಜಕೀಯ ಹಾಗೂ ಸಾಂಸ್ಕೃತಿಕ ಗುರುತನ್ನು ಅರ್ಥಮಾಡಿಕೊಳ್ಳಲು ಮಾಡಿದ ಪ್ರಯತ್ನ ನಮ್ಮ ಕಾಲದ ಬಹುಮುಖ್ಯ ಪ್ರಸ್ಥಾನಗಳಲ್ಲಿ ಒಂದಾಗಿದೆ. ಆಶ್ಚರ್ಯವೆಂದರೆ ಈ ಪ್ರಸ್ಥಾನ ಇಲ್ಲಿಯವರೆಗೆ ಕನ್ನಡದಲ್ಲಿ ಬರದೇ ಇದ್ದದ್ದು ಶೇಕ್ಸ್‌ಪಿಯರನೊಂದಿಗೆ ನಿರಂತರ ಅನುಸಂಧಾನ ನಿಂತುಹೋಯಿತೆ ಎನ್ನುವ ಅನುಮಾನ ಬರುತ್ತದೆ. ಬ್ರಿಟಿಷ್ ಹಾಗೂ ಅಮೆರಿಕನ್ ವಿಮರ್ಶಾ ಸಂಪ್ರದಾಯಗಳು ಇಂದು ಪ್ರಮುಖವಾಗಿ ನವಚಾರಿತ್ರಿಕವಾದ ಹಾಗೂ ಸಾಂಸ್ಕೃತಿಕ ಭೌತವಾದ ಮತ್ತು ಸ್ತ್ರೀವಾದಗಳ ಮೂಲಕ ಶೇಕ್ಸ್‌ಪಿಯರನೊಂದಿಗೆ ತಮ್ಮದೇ ಆದ ಅನುಸಂಧಾನಗಳನ್ನು ಮುಂದುವರೆಸಿವೆ. ಈ

ಪ್ರಸ್ಥಾನಗಳಲ್ಲಿ ಶೇಕ್ಸ್‌ಪಿಯರ್ ಅತ್ಯಂತ ಆಧುನಿಕ ಮತ್ತು ಸಮಕಾಲೀನವಾದ ಚರ್ಚೆಗಳಿಗೆ ಬಳಕೆಯಾಗುತ್ತಿದ್ದಾನೆ ಎನ್ನುವುದನ್ನು ಮರೆಯಬಾರದು.

ಪ್ರೊ. ಜಿ.ಕೆ. ಗೋವಿಂದರಾವ್ ಅವರ ಪ್ರಸ್ತುತ ಕೃತಿ ಕನ್ನಡದ ಮಟ್ಟಿಗೆ ತೀರಾ ಭಿನ್ನವಾದ ಹಾಗೂ ಹೊಸದಾದ ಶೇಕ್ಸ್‌ಪಿಯರ್ ವಿಮರ್ಶೆಯ ಕ್ರಮವನ್ನು ಸೇರಿಸುತ್ತದೆ. ಈ ಕೃತಿಯಲ್ಲಿ ಜೂಲಿಯಸ್ ಸೀಸರ್ ಮತ್ತು ಅಥೆಲೋ ನಾಟಕಗಳ ದೀರ್ಘವಾದ, ಸೂಕ್ಷ್ಮವಾದ ಕೃತಿನಿಷ್ಠ ವಿಮರ್ಶೆಯಿದೆ. ನಾಟಕಗಳ ಸಾರಸಂಗ್ರಹ ಕೊಡುತ್ತಾ ಅವುಗಳ ಬಗ್ಗೆ ಟಿಪ್ಪಣಿಗಳನ್ನು ಮಾಡುವ ಕೃತಿ ಇದಲ್ಲ. ನವ್ಯ ವಿಮರ್ಶೆ ಚಾಲ್ತಿಗೆ ತಂದ ಪ್ರಾಯೋಗಿಕ ವಿಮರ್ಶೆಯೂ ಇದಲ್ಲ. ರಸಿಕ ಸಂಪ್ರದಾಯದ ವ್ಯಾಖ್ಯಾನವೂ ಅಲ್ಲ. ನಾಟಕಗಳನ್ನು ನೆಪವಾಗಿ ಬಳಸಿಕೊಂಡು ಶೇಕ್ಸ್‌ಪಿಯರ್ ನಾಟಕಗಳ ಬಗ್ಗೆ ಸಮಗ್ರ ವಿಮರ್ಶೆ ಮಾಡಲು ಯತ್ನಿಸುವ ಬಗೆಯ ವಿಮರ್ಶೆಯೂ ಅಲ್ಲ. ಶೇಕ್ಸ್‌ಪಿಯರ್ ನಾಟಕದ ಕೃತಿಗಳನ್ನು ಎದುರಿಗಿಟ್ಟುಕೊಂಡು ಯಾವುದೇ ಸ್ವೀಕೃತ ಸಿದ್ಧಾಂತಗಳ ಒತ್ತಡವಿಲ್ಲದ ಸೂಕ್ಷ್ಮವೂ ಪ್ರಬುದ್ಧವೂ ಆದ ಮನಸ್ಸೊಂದು ಆ ಕೃತಿಗಳನ್ನೇ ಧ್ಯಾನಿಸುತ್ತ, ಆ ವಿವರಣೆಗಳನ್ನು ಸಾಹಿತ್ಯ ವಿಮರ್ಶೆಯ ನುಡಿಗಟ್ಟಿನ ಭಾರವಿಲ್ಲದೆ ಬರೆದಿಟ್ಟಂತೆ ಗೋವಿಂದರಾಯರ ಈ ಕೃತಿಯಿದೆ. ಹೀಗಾಗಿ ವಿಮರ್ಶೆಗೆ ಇರವ ತಾರ್ಕಿಕ ಅಥವಾ ಸೈದ್ಧಾಂತಿಕ ಸನ್ನಾಹಗಳು ಅವರಿಗಿಲ್ಲ. ವ್ಯಾಖ್ಯಾನವೇ ಸ್ವಪ್ರದರ್ಶನವಾಗಿ ಬಿಡುವ ಪಾಂಡಿತ್ಯದ ತೆವಲುಗಳು ಇಲ್ಲ. ವಿವರಣೆ ಕೊಡಲೆಂದೇ ಕಾಲ್ಪನಿಕ ಓದುಗನೊಬ್ಬನನ್ನು ಸೃಷ್ಟಿಸಿಕೊಂಡು ಅವನಿಗಾಗಿ ''ಮಾಸ್ತರಿಕೆ'' ಮಾಡವ ವ್ಯಾಮೋಹವೂ ಇಲ್ಲ. ಈ ಕೃತಿ ಒಂದರ್ಥದಲ್ಲಿ ಶೇಕ್ಸ್‌ಪಿಯರ್ ಕೃತಿಗಳೊಂದಿಗೆ ಖಾಸಗಿ ಅನುಸಂಧಾನದ ರೀತಿಯದು. ಆದರೆ ಶೇಕ್ಸ್‌ಪಿಯರನ ಕೃತಿಗಳು ಒಳಗೊಳ್ಳುವ ಅನುಭವ, ಅದು ವ್ಯಕ್ತವಾಗುವ ಭಾಷೆ ಹಾಗೂ ರಂಗಮಾಧ್ಯಮ ಮತ್ತು ಮುಖ್ಯವಾಗಿ ಕೃತಿ ವಿವರಣೆಯ ಯಾವುದೇ ನುಡಿಗಟ್ಟು-ಇವೆಲ್ಲವುಗಳೂ ಸಾಮಾಜಿಕವಾಗಿರುವುದರಿಂದ, ಖಾಸಗಿಯಾದ ಸಂವಾದ ಸಾಮಾಜಿಕವೂ ಆಗುತ್ತದೆ.

ಗೋವಿಂದರಾಯರ ಬರಹದ ರೀತಿಯನ್ನು ಕೃತಿನಿಷ್ಠ ವ್ಯಾಖ್ಯಾನ ಅಥವಾ ಅರ್ಥ ವಿವರಣೆ (exegesis) ಎಂದು ಕರೆಯಬಹುದಾದರೂ ಅದು ಈ ಪದಗಳ ವ್ಯಾಪ್ತಿಯನ್ನು ಮೀರಿರುವ ಬಗೆಯದಾಗಿದೆ. ಮುಖ್ಯವಾಗಿ ಇಲ್ಲಿ ಅರ್ಥ ವಿವರಣೆ ಎಲ್ಲಿಯೂ ಭಾವಾನುವಾದವಾಗುವುದಿಲ್ಲ. ಶಾಬ್ದಿಕ ವಿವರಣೆಯಾಗುವುದಿಲ್ಲ. ಅವರ ಗಮನವಿರುವುದು ಶೇಕ್ಸ್‌ಪಿಯರ್ ನಾಟಕದ ರೂಪಕಗಳು ಹಾಗೂ ಮಾತಿನ ಧ್ವನ್ಯರ್ಥಗಳು ಸೃಷ್ಟಿಸುವ ಸಂಕೀರ್ಣ ಅರ್ಥವಿನ್ಯಾಸದ ಮೇಲೆ. ಇನ್ನೂ ಖಚಿತವಾಗಿ ಹೇಳುವುದಾದರೆ ಮಾತುಗಳು ಕೂಡ ಕೇವಲ ಸೂಚಕಗಳು ಮಾತ್ರ. ಗೋವಿಂದರಾಯರ ಆಸಕ್ತಿ ಇರುವುದು ಈ ಸೂಚಕಗಳ ಹಿಂದೆ ಸೂಚ್ಯದ ಹಾಗಿರುವ (Signified ಎನ್ನುವ ಅರ್ಥದಲ್ಲಿ) ಮನುಷ್ಯ ವ್ಯಕ್ತಿಗಳಲ್ಲಿ ; ಅವರ ನಡವಳಿಕೆಗಳ ಅನಿರೀಕ್ಷಿತ ತಿರುವುಗಳಲ್ಲಿ. ಈಗಾಗಲೇ ಸಾಕಷ್ಟು ಅನುವಾದ / ವಿವರಣೆಗಳಿಗೆ ಈಡಾಗಿರುವ ಶೇಕ್ಸ್‌ಪಿಯರ್ ನಾಟಕಗಳಿಗೆ ಜಡವಾದ, ಸ್ಥಿರಗೊಂಡಿರುವ ಅರ್ಥಗಳನ್ನು ಕೊಟ್ಟುಬಿಡಲಾಗಿದೆ ಎಂಬುದೇ ಗೋವಿಂದರಾಯರ ಕಾಳಜಿಯಾಗಿದೆ. ಇದರಿಂದಾಗಿ ಶೇಕ್ಸ್‌ಪಿಯರ್ ಸೂಚಿಸುತ್ತಿರುವ (ಅಥವಾ

ಒಟ್ಟಾರೆ ಕೃತಿ ಸೂಚಿಸುತ್ತಿರುವ ಎನ್ನುವುದು ಸೂಕ್ತ) ಅರ್ಥ ಸೂಕ್ಷ್ಮಗಳನ್ನು ನಾವು ಕಳೆದುಕೊಂಡು ಬಿಟ್ಟಿದ್ದೇವೆ. ಆದ್ದರಿಂದಲೇ ಅವರು ಶೇಕ್ಸ್‌ಪಿಯರನನ್ನು ಮತ್ತೆ ಓದುತ್ತಾರೆ. ಅವರ ಕೃತಿ ನಾನು ಹೇಳಿದ ಹಾಗೆ ಒಂದು ಸುದೀರ್ಘವಾದ ಓದು. ಡೆರಿಡಾನ ಪರಿಭಾಷೆಯಲ್ಲಿ ಇದು ವ್ಯವಧಾನದ, ನಿಧಾನ ಓದು (Slow reading). ಸದ್ಯದ ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಯಾರಿಗೂ ಬೇಡವಾಗಿರುವ ರೀತಿಯ ಓದು ಇದಾಗಿದೆ. ನವ್ಯ ಮಾರ್ಗದ ಕೃತಿನಿಷ್ಠ ಓದಿನ ಕೆಲವು ಅತಿಗಳನ್ನು ಅಪಹಾಸ್ಯಕ್ಕೀಡುಮಾಡಿದ್ದು ಕ್ರಮೇಣ ಕೃತಿಗಳನ್ನು ನಿಧಾನವಾಗಿ ಓದುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ನೆಪವಾಯಿತು. ಕೃತಿನಿಷ್ಠ ಓದು ಎಂದ ಕೂಡಲೆ ಅದು 'ಅಕಡೆಮಿಕ್' ಎಂದು, ಅರಾಜಕೀಯವೆಂದು ಸುಲಭವಾಗಿ ಹೇಳುವುದು ರೂಢಿಗೆ ಬಂದಿತು. ಎಲ್ಲರೂ ಮರೆತುಬಿಟ್ಟ ವಿಷಯವೆಂದರೆ ರಾಜಕೀಯ ಹೋರಾಟಗಳಿಗೆ ಸೈದ್ಧಾಂತಿಕ ಬೆಂಬಲ ನೀಡುವ ಸ್ತ್ರೀವಾದಿ ವಿಮರ್ಶೆಯಾಗಲಿ, ನವ ಮಾರ್ಕ್ಸ್‌ವಾದಿ ವಿಮರ್ಶೆಯಾಗಲಿ ಕೃತಿಗಳ ಹೆಚ್ಚು ಸೂಕ್ಷ್ಮವಾದ ಓದನ್ನು ಅಪೇಕ್ಷಿಸುತ್ತವೆ. ನಮ್ಮಲ್ಲಿ ಮಾತ್ರ ಕೃತಿನಿಷ್ಠ ಓದಿನಿಂದ ನಮ್ಮ ರಾಜಕೀಯ ಧೋರಣೆಗಳಿಗೆ, ಪ್ರಗತಿಪರತೆಗೆ ಕುಂದು ಬರುತ್ತದೆಯೆನ್ನುವ ವಿಚಿತ್ರ ನಂಬಿಕೆ ಬೆಳೆದುಬಂದಿದೆ.

ಇಂಥ ಸಂದರ್ಭದಲ್ಲಿ ಗೋವಿಂದರಾವ್ ಅವರು ಶೇಕ್ಸ್‌ಪಿಯರ್ ನಾಟಕಗಳನ್ನು ಸೂಕ್ಷ್ಮವಾಗಿ, ವಿವರವಾಗಿ ಓದಿದ್ದಾರೆ. ಅವರ ಬರಹದ ಕ್ರಮದಿಂದಾಗಿ ಈ ಕೃತಿಯನ್ನು ಓದುವವರು ಶೇಕ್ಸ್‌ಪಿಯರ್ ನಾಟಕಗಳನ್ನು ಎದುರಿಗಿಟ್ಟುಕೊಳ್ಳಲೇಬೇಕಾಗುತ್ತದೆ. ಓದುವ ಕೆಲಸದಲ್ಲಿ ಈ ಮೊದಲು ಓದಿದ್ದನ್ನು ಮರೆಯಬೇಕಾಗುತ್ತದೆ. ಇನ್ನೊಬ್ಬರು ಓದಿ ಹೇಳಿದ್ದನ್ನು, ಬರೆದಿದ್ದನ್ನು ಮರೆಯಬೇಕಾಗುತ್ತದೆ. ನಮ್ಮದೇ ಆದ ಹಳೆಯ ಓದುಗಳ ಜಾಡನ್ನು ಮರೆಯ ಬೇಕಾಗುತ್ತದೆ. ಈ ಕೆಲಸದಲ್ಲಿ ಕೃತಿನಿಷ್ಠೆಯೊಂದೇ ಪ್ರಮಾಣವಾಗುತ್ತದೆ. ಗೋವಿಂದರಾವ್ ಅವರ ಓದು ಖಂಡಿತವಾಗಿ ಈ ಬಗೆಯದಾಗಿದೆ. ಕತೆಯನ್ನು ಸಶರೀರವಾಗಿ ಸಾಕ್ಷಾತ್ಕಾರ ಮಾಡಿಸಿಕೊಳ್ಳುವ ಈ ಓದಿನಿಂದ ಅವಸರದ ತೀರ್ಮಾನಗಳಿಗೆ ಆಸ್ಪದವಿಲ್ಲದಂತಾಗಿದೆ.

ಹಾಗೆಂದರೆ ನಾಟಕಕೃತಿಯನ್ನು ತುಂಡುತುಂಡಾಗಿ, ''ಸ್ಥಳೀಯವಾಗಿ'' ಓದುತ್ತ ಹೋಗಬಹುದೆ ? ಕೃತಿಯ ಒಟ್ಟು ಧ್ವನ್ಯರ್ಥದ ಕಲ್ಪನೆಯೇ ಇಲ್ಲದ ಓದಿನಿಂದ ಪ್ರಯೋಜನವಿದೆಯೇ ? ಗೋವಿಂದರಾವ್ ಅವರ ಕ್ರಮವೆಂದರೆ ಸಾಲಿನಿಂದ ಸಾಲಿಗೆ ನಿಧಾನವಾಗಿ ಓದುತ್ತಲೇ ಕೃತಿಯ ಧ್ವನ್ಯರ್ಥಗಳನ್ನು ಕಂಡುಕೊಳ್ಳುವುದಾಗಿದೆ. ಉದಾಹರಣೆಗೆ ಜೂಲಿಯಸ್ ಸೀಸರ್ ನಾಟಕದ ವಿಮರ್ಶೆಯ ಮೊದಲ ಪುಟಗಳಲ್ಲಿಯೇ ಅವರು ನಾಟಕದ ಬಗ್ಗೆ ಕೇಳಬಹುದಾದ ಪ್ರಶ್ನೆಗಳ ಪಟ್ಟಿಯನ್ನು ಎದುರಿಗಿಡುತ್ತಾರೆ. ಅದರಲ್ಲಿ ಮುಖ್ಯವಾದುದು ಸೀಸರನ ವ್ಯಕ್ತಿತ್ವ ಸರ್ವಾಧಿಕಾರಿ ಸ್ವಭಾವದ ವ್ಯಕ್ತಿತ್ವವೆ ಎನ್ನುವುದಾಗಿದೆ. ಈ ಪ್ರಶ್ನೆಯನ್ನು ಉತ್ತರಿಸುವುದಕ್ಕಾಗಿ ಅವರು ಬ್ರೂಟಸ್, ಆ್ಯಂಟನಿ ಮತ್ತು ಉಳಿದ ಪಿತೂರಿಗಾರರ ವ್ಯಕ್ತಿತ್ವಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಅಷ್ಟು ಮಾತ್ರವಲ್ಲ, ಗಣರಾಜ್ಯದ ಆಧಾರವಾಗಿರಬಲ್ಲ ಸ್ವಭಾವ ಲಕ್ಷಣಗಳೇನು ಎಂದು ಕೂಡ ಚರ್ಚಿಸಬೇಕಾಗುತ್ತದೆ. ಗೋವಿಂದರಾವ್ ಅವರ ವಿವರಣೆಯ ಪ್ರಕಾರ ಸೀಸರ್ (ಮತ್ತು ಬ್ರೂಟಸ್ ಕೂಡ) 'ಶ್ರೀಮಂತ' ವ್ಯಕ್ತಿತ್ವದವನು. ಸರ್ವಾಧಿಕಾರಿ ವ್ಯಕ್ತಿತ್ವಕ್ಕೆ

ವ್ಯತಿರಿಕ್ತವಾದ ಸ್ವಭಾವದವನು. ಈ ಮಾತುಗಳು ಕೂಡ ಸುಲಭ ತೀರ್ಮಾನಗಳಾಗಿ ಕೃತಿಯಲ್ಲಿ ಬರುವುದಿಲ್ಲ. ಕ್ಷಣ ಕ್ಷಣಕ್ಕೆ ಹೊಸ ಸತ್ಯಗಳ ದರ್ಶನವನ್ನು ಮಾಡಿಸುವ ಶೇಕ್ಸ್‌ಪಿಯರ್‌ನ ಬರಹದ ಸಂಕೀರ್ಣತೆಯನ್ನು ಗ್ರಹಿಸುತ್ತಲೇ ಈ ತೀರ್ಮಾನಗಳಿಗೆ ಬರುತ್ತಾರೆ.

ಅದೇ ರೀತಿ ಈ ನಾಟಕದ ಬಗ್ಗೆ ಅವರು ಎತ್ತುವ ಇನ್ನೊಂದು ಪ್ರಶ್ನೆಯೆಂದರೆ ಬ್ರೂಟಸ್ ಕ್ರಾಂತಿಯೆಂದು ಭ್ರಮಿಸಿರುವುದು ನಿಜವಾಗಿ ಪಿತೂರಿಯಲ್ಲವೆ ? ಮೂರ್ತ ಮತ್ತು ಅಮೂರ್ತಗಳ ಮಧ್ಯೆ ತುಯ್ದಾಡುವ ಬ್ರೂಟಸ್ ವ್ಯಕ್ತಿಯಾದ ಸೀಸರನನ್ನು ಪ್ರೀತಿಸುವುದು ಮತ್ತು ಸರ್ವಾಧಿಕಾರಿಯಾಗಬಹುದಾಗಿದ್ದ ಸೀಸರನನ್ನು ಕೊಲೆಮಾಡುವುದು ಎರಡೂ ಸಾಧ್ಯವೆಂದು ನಂಬಿದ್ದಾನೆ. ಆದರೆ ಅವನ ಆದರ್ಶ, ದೃಢತೆ ಏನೇ ಇರಲಿ ಮೊದಲಿನಿಂದಲೂ ಪಿತೂರಿಯ ಸಂದಿಗ್ಧತೆಯಿಂದ ಅವನು ಮುಕ್ತನಾಗುವಂತಿಲ್ಲ. ಇದನ್ನು ವಿಶ್ಲೇಷಿಸುವಾಗ ಗೋವಿಂದರಾಯರು ರಾಜಕೀಯ ವ್ಯವಸ್ಥೆಗಳ ಬಗ್ಗೆಯೂ ಗಹನವಾಗಿ ಚಿಂತಿಸುತ್ತಾರೆ. ಎಲ್ಲಿಯೂ ನಮ್ಮ ಕಾಲದ ಬಿಕ್ಕಟ್ಟುಗಳನ್ನು ನೇರವಾಗಿ ಪ್ರಸ್ತಾಪ ಮಾಡದೇ ಇದ್ದರೂ ವ್ಯವಸ್ಥೆಯ ಆರೋಗ್ಯದ ಬಗೆಗಿನ ಅವರ ಕಾಳಜಿಗಳು ನಾಟಕದ ವ್ಯಾಖ್ಯಾನವನ್ನೂ ಮೀರಿ ತಟ್ಟುತ್ತವೆ. ಸೀಸರನ ಕೊಲೆಯ ಸೈದ್ಧಾಂತಿಕ ಸಮರ್ಥನೆ ಏನೇ ಇರಲಿ, ಅದು ಮನುಷ್ಯಜೀವಿಯ ಕೊಲೆಯಾದ್ದರಿಂದ ಪ್ರಕೃತಿಯ ಮೇಲೆ ಅತ್ಯಾಚಾರದ ಹಾಗೆ. ಆದರಿಂದಾಗಿ 'mischief' ಹುಟ್ಟಬಹುದೇ ಹೊರತು ಕ್ರಾಂತಿಯಲ್ಲ ಎನ್ನುವ ಗೋವಿಂದರಾವ್ ಅವರ ವಾದವನ್ನು ಹಿಂಸೆಯ ನಿತ್ಯದ ಪರಿಪಾಠವಾಗಿರುವ ನಮ್ಮ ನತದೃಷ್ಟ ಕಾಲದಲ್ಲಿ ಆಳವಾಗಿ ಚಿಂತಿಸಬಹುದಾಗಿದೆ.

ರಾಜಕಾರಣದ ಸಾರ್ವಜನಿಕಜಗತ್ತಿನಲ್ಲಿ ವ್ಯವಹರಿಸುವ ಈ ನಾಟಕಕ್ಕಿಂತ ತೀರಾ ಭಿನ್ನವಾದ ಗಂಡು-ಹೆಣ್ಣಿನ ಆತ್ಮೀಯ ಸಂಬಂಧಗಳ ಬಗೆಗಿನ ನಾಟಕ ಅಥೆಲೋ. ಹೊಸದಾಗಿ ಮದುವೆಯಾದ ದಂಪತಿಗಳು, ಅವರ ಸುತ್ತಲಿನ ಕೆಲವು ವ್ಯಕ್ತಿಗಳು ಹೇಗೆ ಚಿಕ್ಕದಾದ ವರ್ತುಲವೊಂದರಲ್ಲಿ ನಡೆಯುವ ಭಯಾನಕ ದುರಂತವೊಂದರ ಬಗೆಗಿನ ಈ ನಾಟಕದ ಸಾಂದ್ರವಾದ ರಚನೆ ಮತ್ತು ಅಪರಿಹಾರ್ಯವಾಗಿ ದುರಂತದ ಕಡೆಗೆ ಎಳೆಯುವ ಘಟನೆಗಳ ರಭಸ ಇವುಗಳಿಂದಾಗಿ ಅಸಹನೀಯ ಎನ್ನುವಷ್ಟರ ಮಟ್ಟಿಗಿನ ದುರಂತ ಶಕ್ತಿ ಈ ನಾಟಕಕ್ಕಿದೆ. ಗೋವಿಂದರಾವ್ ಅವರು ಸರಿಯಾಗಿ ಗುರುತಿಸಿರುವಂತೆ ಅತ್ಯಂತ ಕೋಮಲ, ಪವಿತ್ರ, ಹಾಗೂ ಸುಂದರವಾದ ಪ್ರೇಮ ಸಂಬಂಧವೊಂದು ಅತ್ಯಂತ ಕರಾಳವಾದ ದುರಂತದಲ್ಲಿ ಅವಸಾನ ಗೊಳ್ಳುವುದೇ ಈ ನಾಟಕದ ವಸ್ತುವಾಗಿದೆ. ಸ್ವರ್ಗದ ಹಣ್ಣಿನಲ್ಲೂ ಹುಳುವಿರುವಂತೆ ಉತ್ಕಟವಾದ ಪ್ರೇಮದ ಒಡಲಿನಲ್ಲಿಯೂ ಅವನತಿಯ ಸಾಧ್ಯತೆಗಳಿರುವುದನ್ನು ಶೇಕ್ಸ್‌ಪಿಯರ್ ಗ್ರಹಿಸಿ, ಅದಕ್ಕೆ ನಾಟಕದ ರೂಪವನ್ನು ಕೊಟ್ಟಿರುವ ರೀತಿ ಅಪೂರ್ವವಾಗಿದೆ. ತನ್ನ ಬಾಲ್ಯದಿಂದಲೇ ಯುದ್ಧಭೂಮಿಯ ಸಾರ್ವಜನಿಕ ರಂಗದಲ್ಲಿಯೇ ಬದುಕಿದ ಅಥೆಲೋ ನಾಟಕದ ಶುರುವಾತಿಗೆ ಧೀರ ಯೋಧನಾಗಿ, ವೆನಿಸಿನ ರಕ್ಷಕನಾಗಿ ಒಬ್ಬ ಗೌರವಾನ್ವಿತ ವ್ಯಕ್ತಿಯಾಗಿದ್ದಾನೆ. ಅವನಿಗೆ ಸ್ವಂತದ ಖಾಸಗಿ ಅನುಭವ ಜಗತ್ತು ಇತ್ತೇ ಎನ್ನುವುದು ಅನುಮಾನಾಸ್ಪದ. ಇಂಥ ವ್ಯಕ್ತಿ ಇಯಾಗೋನ ವಿವರಣೆಯೇ ಇಲ್ಲದ ಕೆಡುಕಿನಿಂದಾಗಿ ತನ್ನ ಭಾವನೆಗಳ ಖಾಸಗಿ ನರಕದಲ್ಲಿ ನರಳ ತೊಡಗುತ್ತಾನೆ.

ನಾಟಕದ ಶಕ್ತಿ ಇರುವುದು ಅದು ನಮ್ಮನ್ನು ಈ ಉಸಿರು ಕಟ್ಟಿಸುವ ಖಾಸಗಿ ನರಕದಲ್ಲಿ ಹಿಡಿದಿಡುವ ಸಾಮರ್ಥ್ಯದಲ್ಲಿ. ಮನುಷ್ಯ ಸ್ವಭಾವದ ಶಿಖರಗಳಿಂದ ಹಿಡಿದು ಅದರ ಕಗ್ಗತ್ತಲಿನ ಪ್ರಪಾತಗಳವರೆಗೆ ಎಲ್ಲಾ ಸಾಧ್ಯತೆಗಳನ್ನೂ ಈ ನಾಟಕದಲ್ಲಿ ತೋರಿಸುತ್ತದೆ. ನಾಟಕದ ಸ್ಥಾಯೀಭಾವ ವೇದನೆಯಾಗಿದೆ.

ಗೋವಿಂದರಾವ್ ಅವರ ಸುದೀರ್ಘವಾದ ಕೃತಿನಿಷ್ಠ ವ್ಯಾಖ್ಯಾನ ಅಥೆಲೋ ನಾಟಕದ ಈ ಅಂಶಗಳನ್ನು ಹಿಂಜಿ ಹಿಂಜಿ ನಮ್ಮೆದುರಿಗಿರಿಸುತ್ತದೆ. ಈ ನಾಟಕದ ಒಂದೆರಡು ಚಿಕ್ಕ ಪಾತ್ರಗಳನ್ನು ಬಿಟ್ಟರೆ ಇನ್ನೆಲ್ಲ ಪಾತ್ರಗಳ ನಡವಳಿಕೆ ಅತ್ಯಂತ ಸಂಕೀರ್ಣ. ಅವರು ಅನುಭವಿಸುವ ಭಾವನೆಗಳ ಏರಿಳಿತಗಳು, ತಿರುವು ಹೊರಳುಗಳು ನಮ್ಮ ಕಲ್ಪನಾಶಕ್ತಿಯನ್ನು ಮೀರುವಂಥವು. ಆದ್ದರಿಂದ ಈ ನಾಟಕದ ಓದು ಅತ್ಯಂತ ಎಚ್ಚರದ್ದು ಮತ್ತು ಸೂಕ್ಷ್ಮವೂ ಆಗಿರಬೇಕಾಗುತ್ತದೆ. ಗೋವಿಂದರಾವ್ ಅವರು ಇದನ್ನು ಸಮರ್ಥವಾಗಿ ಮಾಡಿದ್ದಾರೆ. ನಾಟಕದ ಒಂದೇ ಒಂದು ಎಳೆಯನ್ನೂ ಬಿಟ್ಟುಕೊಡಬಾರದೆಂಬ ನಿಷ್ಠೆಯಿಂದ ಸುದೀರ್ಘವಾದ ಅರ್ಥವಿವರಣೆಯನ್ನು ಕೊಟ್ಟಿದ್ದಾರೆ. ಇದು ಬಹಳ ಕಷ್ಟದ ಕೆಲಸ. ಸಮುದ್ರದ ಏರಿಳಿತವನ್ನು ಕೇಳುತ್ತ ಅದರ ಎಲ್ಲ ಅಲೆಗಳ ಉಲಿಯನ್ನೂ ಹಿಡಿದಿಡಬೇಕೆನ್ನುವ ಸಾಹಸದಂತೆ. ಈ ಕೆಲಸದಲ್ಲಿ ಗೋವಿಂದರಾವ್ ಮಾಡಿದ ಸಾಧನೆ ಮೆಚ್ಚುವಂತಿದೆ. ಮುಖ್ಯವಾಗಿ ನಾಟಕದ ಸ್ಥಾಯೀಭಾವನೆಯಾದ ವೇದನೆಯನ್ನು ಆವಾಹಿಸಿಕೊಂಡಂತೆ ಅದರ ಆಳ, ವಿಸ್ತಾರಗಳನ್ನು ಶೋಧಿಸುತ್ತ ಬರೆದಿದ್ದಾರೆ. ಇದರಿಂದಾಗಿ ಓದುಗರಿಗೆ ವಿಮರ್ಶೆಯಲ್ಲಿ ಸಾಮಾನ್ಯವಾಗಿ ದಕ್ಕದ ತೀವ್ರತೆ ಹಾಗೂ Passionಗಳು ಅನುಭವವಾಗುತ್ತವೆ.

ಶೇಕ್ಸ್‌ಪಿಯರನ ಇತರ ದುರಂತ ನಾಟಕಗಳ ಬಗ್ಗೆ ಗೋವಿಂದರಾವ್ ಅವರ ಬರಹವನ್ನು ನಾನು ಕುತೂಹಲದಿಂದ ನಿರೀಕ್ಷಿಸುತ್ತಿದ್ದೇನೆ. ಆದರೆ ನಾಟಕಗಳ ವಿವರವಾದ ಓದಿನೊಂದಿಗೆ ಅದು ಮುಗಿಯದಿರಲಿ. ಶೇಕ್ಸ್‌ಪಿಯರನೊಂದಿಗೆ ಕನ್ನಡದ ಅನುಸಂಧಾನವು ಅರ್ಥಪೂರ್ಣವಾಗಿ ಮುಂದುವರೆಯಬೇಕಾದರೆ ಕೃತಿನಿಷ್ಠ ವಿಮರ್ಶೆಯ ಜೊತೆಗೆ ಒಂದು ಬಗೆಯ Meta Critisism ಕೂಡ ಅವಶ್ಯಕ. ವಸಾಹತೋತ್ತರ ನೆಲೆಗಳ ಮೂಲಕ ಶೇಕ್ಸ್‌ಪಿಯರ್ ನಾಟಕಗಳನ್ನು ಚರ್ಚಿಸುವುದರ ಜೊತೆಗೆ ಆ ನಾಟಕಗಳ ಮೂಲಕವೇ ನಮ್ಮನ್ನು ಬಾಧಿಸುವ ಹಲವಾರು ವಿಷಯಗಳ ಪುನರ್ ವಿಮರ್ಶೆಯನ್ನೂ ಮಾಡಬೇಕಾಗಿದೆ. ವಿಮರ್ಶೆಯ ಈ ಕೆಲಸದಲ್ಲೂ ಗೋವಿಂದರಾವ್ ಭಾಗಿಯಾಗುತ್ತಾರೆಂದು ನಿರೀಕ್ಷಿಸುತ್ತೇನೆ.

-ರಾಜೇಂದ್ರ ಚೆನ್ನಿ

ಶಿವಮೊಗ್ಗ
ಮೇ, 2003

ಜೂಲಿಯಸ್ ಸೀಸರ್

ಜೂಲಿಯಸ್ ಸೀಸರ್

'ಜೂಲಿಯಸ್ ಸೀಸರ್' ಸುಮಾರು ೧೫೯೯ರಲ್ಲಿ ರಚನೆಯಾದ ನಾಟಕ ಎಂದು ಹೇಳಲಾಗಿದೆ. ಅಷ್ಟರೊಳಗಾಗಿಯೇ ಶೇಕ್ಸ್‌ಪಿಯರ್ ಎಂಟು ಐತಿಹಾಸಿಕ ನಾಟಕಗಳನ್ನು ರಚಿಸಿ ಆಗಿದ್ದಿತು. ಈ ಇಷ್ಟೂ ನಾಟಕಗಳು ಇಂಗ್ಲೆಂಡನ್ನು ಕುರಿತಾಗಿಯೇ ಇದ್ದವು. ಮೊದಲ ಬಾರಿಗೆ ಇತಿಹಾಸದ ವಸ್ತುವೊಂದನ್ನು ಇಂಗ್ಲೆಂಡಿನ ಹೊರಗಿನಿಂದ ಆರಿಸಿಕೊಂಡು ಒಂದು ನಾಟಕ ರಚಿಸಿದ.

ರೋಮ್ ಒಂದು ಗಣರಾಜ್ಯ. ರಾಜಕೀಯ ವಿನ್ಯಾಸ ಇಂಗ್ಲೆಂಡಿಗಿಂತ ಬಹು ಭಿನ್ನವಾದದ್ದು. ಪ್ರಜಾರಾಜ್ಯವಾದದ್ದರಿಂದ ಇಲ್ಲಿ ರಾಜ ಮಹಾರಾಜರುಗಳಿಗೆ, ಚಕ್ರವರ್ತಿಗಳಿಗೆ ಅವಕಾಶವಿಲ್ಲ. ನಿರಂಕುಶ ಸಾರ್ವಭೌಮತ್ವದ ಮಾತೇ ಇಲ್ಲಿ ಸಲ್ಲ.

ಹೀಗಾಗಿಯೇ ಮೊದಲ ಬಾರಿಗೆ, ಬಹುಶಃ ಶೇಕ್ಸ್‌ಪಿಯರ್ ಅತ್ಯಂತ ಸಂಕೀರ್ಣತರದ ರಾಜಕೀಯ ನಾಟಕವನ್ನು ರಚಿಸುವುದಕ್ಕೆ ಯತ್ನಿಸಿದ್ದು ಅನ್ನಬಹುದು. ಇಂಗ್ಲಿಷ್ ಇತಿಹಾಸಿಕ ನಾಟಕಗಳಲ್ಲಿ ಮಸಕುಮಸಕಾಗಿ ಕಾಣಿಸಿಕೊಳ್ಳುತ್ತಿದ್ದ ದೇಶದ ಪ್ರಜೆಗಳು, ಸಾಮಾನ್ಯ ನಾಗರಿಕರು 'ಜೂಲಿಯಸ್ ಸೀಸರ್' ನಾಟಕದಲ್ಲಿ ಬಹು ಪ್ರಧಾನವಾಗಿ ಕಾಣಿಸಿಕೊಳ್ಳುತ್ತಾರೆ. ಮೊದಲ ಬಾರಿಗೆ ಶೇಕ್ಸ್‌ಪಿಯರ್ - ರಾಜಕಾರಣಿಗಳು ಮತ್ತು ಜನಸಾಮಾನ್ಯರು ಇವರುಗಳ ಮಧ್ಯದ ಸಂಬಂಧಗಳ ಕುರಿತಾಗಿ ಬಹು ಗಂಭೀರವಾಗಿ ಚಿಂತಿಸುವುದಕ್ಕೆ ಆರಂಭಿಸಿದ ಎನ್ನಲೂಬಹುದು. ಇದೇ ರೀತಿಯ ಸಂಬಂಧಗಳ ಮತ್ತು ಕ್ಲಿಷ್ಟಕರ ಸ್ವರೂಪಗಳನ್ನು ಸುಮಾರು ಹತ್ತುವರ್ಷಗಳ ನಂತರ ರಚಿಸಿದ 'ಕೊರಿಯಲೇನಸ್' ನಾಟಕದಲ್ಲಿ ಮತ್ತೂ ನಾಟಕೀಯವಾಗಿ ಅವಲೋಕಿಸಿದ್ದಾನೆ.

ಆದ್ದರಿಂದಲೇ ೧೯೫೫ರ ಹಿಂದಕ್ಕೆ ಬರೆದ ಇಂಗ್ಲಿಷ್ ಇತಿಹಾಸದ ಕುರಿತಾದ ನಾಟಕಗಳನ್ನು 'ಐತಿಹಾಸಿಕ ನಾಟಕಗಳು' ಎಂದು ವಿವರಿಸಿ, 'ಜೂಲಿಯಸ್ ಸೀಸರ್' ನಾಟಕವನ್ನು ಶೇಕ್ಸ್‌ಪಿಯರ್ ರಚಿಸಿದ ಪ್ರಪ್ರಥಮ ರಾಜಕೀಯ ನಾಟಕ ಎನ್ನಬಹುದು.

ಇದು ಕೇವಲ ರಾಜಕೀಯ ನಾಟಕವಷ್ಟೇ ಅಲ್ಲ, ಆ ವಿವರಣೆಗೆ ಸಲ್ಲಬಹುದಾದ ನಾಟಕಗಳಲ್ಲೇ ಅತ್ಯಂತ ಅಗ್ರಗಣ್ಯ ನಾಟಕವೂ ಹೌದು. ಈ ಇಡೀ ಪ್ರಬಂಧ ಈ ಮಾತನ್ನು ಸಾಬೀತುಗೊಳಿಸುವ ಯತ್ನ ಆಗಿದೆ ಎಂದು ಕೂಡ ನಾನು ಅಂದುಕೊಂಡಿದ್ದೇನೆ.

'ಜೂಲಿಯಸ್ ಸೀಸರ್' ನಾಟಕವು ಹಲವು ಮುಖ್ಯ ಪ್ರಶ್ನೆಗಳನ್ನು ನಮ್ಮ ಮುಂದೆ ಒಡ್ಡುತ್ತದೆ. ಕೆಲವನ್ನು ಮಾತ್ರ ಪಟ್ಟಿಮಾಡಬಹುದಾದರೆ - ಸೀಸರನು ನಿಜವಾಗಿ ಸರ್ವಾಧಿಕಾರಿ ಮನೋಭಾವ ಉಳ್ಳವನೇ ? ಬ್ರೂಟಸ್‌ನು ಕ್ರಾಂತಿಕಾರಿಯೋ, ಪಿತೂರಿಗಾರನೋ ? ಆಂಟನಿ ರೋಮ್‌ದೇಶವನ್ನು ಅರಾಜಕತೆಯಿಂದ ಉಳಿಸುವ ದೇಶಭಕ್ತನೇ ? ಹಾಗೂ ಅತ್ಯಂತ ಮಹತ್ವದ ಪ್ರಶ್ನೆ : ಈ ಗಣರಾಜ್ಯವಾದ ರೋಮ್‌ದೇಶದಲ್ಲಿ ಸಾಮಾನ್ಯನಾಗರಿಕರು ಸ್ವತಂತ್ರಪ್ರಜೆಗಳೇ ಅಥವಾ ರಾಜಕೀಯ ನಾಟಕದಲ್ಲಿಯ ಕೇವಲ ಬಲಿಪಶುಗಳೇ ?

ಈ ಪ್ರಶ್ನೆಯ ಜೊತೆಗೆ ಇನ್ನೂ ಹಲವು ಪ್ರಶ್ನೆಗಳೂ ಇವೆ. ಉದಾಹರಣೆಗೆ ಗಂಡ-ಹೆಂಡಿರ ಸಂಬಂಧಗಳ ಪ್ರಶ್ನೆ, ವೈಯಕ್ತಿಕ ನಿಷ್ಠೆ ಹಾಗೂ ಒಂದು ರಾಷ್ಟ್ರದ ಬಗೆಗಿನ ನಿಷ್ಠೆ ಇತ್ಯಾದಿ. ಈ ಯಾವ ಪ್ರಶ್ನೆಗಳೂ ಗೌಣವಾಗುವುದಿಲ್ಲ. ಬಹುಶಃ ಈ ಪ್ರಶ್ನೆಗಳನ್ನು ಒಂದೊಂದಾಗಿ ಅರ್ಥಮಾಡಿಕೊಳ್ಳುವುದೂ ನಾಟಕವನ್ನು ವಿಶ್ಲೇಷಿಸುವ ಒಂದು ಬಗೆಯಾಗಬಹುದು. ಸಾಮಾನ್ಯ ನಾಗರಿಕರ ದೃಶ್ಯದಿಂದ ಆರಂಭವಾಗುವ ನಾಟಕದ ಮೊದಲ ದೃಶ್ಯವನ್ನು ನೋಡೋಣ-

ಜೂಲಿಯಸ್‌ಸೀಸರ್ ಸರ್ವಾಧಿಕಾರಿ ಲಕ್ಷಣಗಳುಳ್ಳ ವ್ಯಕ್ತಿಯೆ ? ಗಣರಾಜ್ಯವಾದ ರೋಮ್‌ಗೆ ಇಂಥ ವ್ಯಕ್ತಿಯ ನಾಯಕತ್ವ ಗಂಡಾಂತರಕಾರಿಯೆ ? 'ಹೌದು' ಎನ್ನುತ್ತಾನೆ ಕ್ಯಾಷಿಯಸ್ ; ಕೊನೆಯವರೆವಿಗೂ ನೇರ, ಸ್ಪಷ್ಟ ಉತ್ತರ ಸಿಗದೆ ತೊಳಲಾಡುತ್ತಾನೆ ಬ್ರೂಟಸ್. ಇವರುಗಳದ್ದು ಹೇಗೇ ಇರಲಿ ; ನಮಗೆ, ನಾಟಕ ಓದುವವರಿಗೆ, ನೋಡುವವರಿಗೆ ಏನನ್ನಿಸುತ್ತದೆ ? ಸೀಸರ್ ನಮ್ಮ ಕಣ್ಣಿಗೆ ತನ್ನ ನಡೆ, ನುಡಿಗಳಿಂದ ಹೇಗೆ ಕಾಣುತ್ತಾನೆ ?

ನಾಟಕದ ಮೊದಲ ದೃಶ್ಯದಲ್ಲಿ ಸೀಸರ್‌ನ ಅದ್ಭುತ ವಿಜಯಗಳನ್ನು ಹಬ್ಬವಾಗಿ ಆಚರಿಸಲು, ಆತನನ್ನು ಸಂಭ್ರಮದಿಂದ ಸ್ವಾಗತಿಸಲು ರೋಮಿನ ಬೀದಿಬೀದಿಗಳಲ್ಲಿ ಕೂಗಾಡುತ್ತ ಹಾರಾಡುತ್ತ ಓಡಾಡುತ್ತಿದ್ದಾರೆ. ಈ ಹಬ್ಬದ ವಾತಾವರಣವನ್ನು, ಈ ಸ್ವಾಗತಕ್ಕೆ ಹಾತೊರೆಯುತ್ತಿರುವ ಜನಗಳ ಉತ್ಸಾಹವನ್ನು ತಿರಸ್ಕಾರದಿಂದ, ಅಸೂಯೆಯಿಂದ ಹತ್ತಿಕ್ಕಿ ಅವರನ್ನು ಬೀದಿಗಳಿಂದ ಚೆದರಿಸುತ್ತಿದ್ದಾರೆ ಜನಪ್ರತಿನಿಧಿಗಳಾದ ಮಾರುಲಸ್ ಮತ್ತು ಫ್ಲೇವಿಯಸ್. ಹೆಚ್ಚಿನ ವಿವರಗಳನ್ನು ಮುಂದೆ ನೋಡಬಹುದಾದರೂ ಸದ್ಯಕ್ಕೆ ಸ್ಪಷ್ಟವಾಗಿ ಗೋಚರವಾಗುವ ವಿಷಯವೆಂದರೆ, ಇಲ್ಲಿ ಈ ನಗರದಲ್ಲಿ ಎಲ್ಲವೂ ಸಮರ್ಪಕವಾಗಿಲ್ಲ, ಸಮಾಧಾನಕರವಾಗಿಲ್ಲ ಎಂಬುದು. ಜನಗಳ ಉಲ್ಲಾಸಕರ ನಡವಳಿಕೆ ಹಾಗೂ ಜನಪ್ರತಿನಿಧಿಗಳ ಕೊಂಕು, ಸೀಸರನ ಕುರಿತಾದ ಅವಹೇಳನ ಇವುಗಳನ್ನು ಗಮನಿಸಿದ ಪ್ರೇಕ್ಷಕರು ಸಹಜವಾಗಿ ಸೀಸರನನ್ನು ಕಾಣುವ ತವಕದಲ್ಲಿ ಇರುತ್ತಾರೆ. ರೋಮ್‌ನಗರದಲ್ಲಿ ಈಗಾಗಲೇ ಬೀಜಾಂಕುರವಾಗಿರುವ ರಾಜಕೀಯ ಅಸಹನೆಯ ಕುರಿತಾಗಿ ನಮಗೆ ಪರಿಚಯ ಮಾಡಿಕೊಡುವುದರ ಜೊತೆಗೆ ಶೇಕ್ಸ್‌ಪಿಯರ್ ಸೀಸರನ ಕುರಿತಾಗಿ ಕುತೂಹಲವನ್ನೂ ಹುಟ್ಟಿಸಿರುತ್ತಾನೆ.

ಮೊದಲ ಅಂಕದ ಎರಡನೇ ದೃಶ್ಯದಲ್ಲಿ ಸೀಸರ್ ತನ್ನ ಪರಿವಾರದೊಂದಿಗೆ ರಂಗಪ್ರವೇಶ ಮಾಡುತ್ತಾನೆ. ಐದು ನಿಮಿಷ ಮಾತ್ರ ಇರುತ್ತಾನೆ. ಕೇವಲ ಇಪ್ಪತ್ತೈದು ಸಾಲುಗಳಲ್ಲಿ ಅವರನ್ನು ನಮಗೆ ಪರಿಚಯಿಸಿ ಮತ್ತೆ ನೂರ ಅರವತ್ತು ಸಾಲುಗಳಷ್ಟು ಹೊರಗೆ ಉಳಿಸುತ್ತಾನೆ.

ಆದರೆ ಪರಿಚಯ ಮಾಡಿಸುವ ಈ ಇಪ್ಪತ್ತೈದು ಸಾಲುಗಳಲ್ಲೇ ಶೇಕ್ಸ್‌ಪಿಯರ್ ಏನನ್ನು ಸಾಧಿಸುತ್ತಾನೆ ನೋಡೋಣ. ಸೀಸರನ ಬಗ್ಗೆ ನಮ್ಮ ಮನಸ್ಸುಗಳಲ್ಲಿ ಏನು ಪರಿಣಾಮ ಮೂಡಿಸುತ್ತಾನೆ ? ಈ ಇಪ್ಪತ್ತೈದು ಸಾಲುಗಳಲ್ಲಿ ಪ್ರತಿ ಸಾಲೂ ಮುಖ್ಯ. ಸಾಲುಗಳನ್ನು ನುಡಿಯುವ ಪ್ರತ್ಯೇಕ ಪಾತ್ರಗಳನ್ನೂ ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕು.

ಆಡುವ ಮೊದಲ ಮಾತೇ ಹೆಂಡತಿ ಕಾಲಿಪೂರ್ನಿಯಾಗೆ ಮಾಡಿದ ಅಣತಿ. ''ಲುಪೆರ್ಕಲ್ ಉತ್ಸವದ ಆಚರಣೆಯ ಸಂಬಂಧವಾಗಿ ಏರ್ಪಡಿಸುವ ಓಟದ ಸ್ಪರ್ಧೆಯಲ್ಲಿ ಆಂಟನಿ ಓಡುವ ದಾರಿಯಲ್ಲಿ ನೀನಿದ್ದು, ಅವನ ಕೈಯ ಚಾಟಿಯ ಕೊನೆಯಿಂದ ತಾಗಿಸಿಕೋ. ಹಾಗೆ ಆದರೆ, ನಮ್ಮ ಪೂರ್ವಿಕರ ನಂಬಿಕೆಯಂತೆ ನೀನು ತಾಯಾಗುವ ಸೌಭಾಗ್ಯ ಪಡೆಯುತ್ತೀಯೆ'' ಹಾಗೆಯೇ ಆಂಟನಿಗೂ ತಾಕೀತು ಮಾಡುತ್ತಾನೆ : 'ಓಡುವ ರಭಸದಲ್ಲಿ ಕಾಲಿಪೂರ್ನಿಯಾಳನ್ನು ಮುಟ್ಟುವುದನ್ನು ಮರೆಯಬೇಡ'. ಗೌರವದಿಂದ, ವಿಧೇಯನಾಗಿ ಆಂಟನಿ 'ಸೀಸರನು ಹೇಳಿದ ಮೇಲೆ ಆಯಿತು, ಅದು ಆಜ್ಞೆ', ಎನ್ನುತ್ತಾನೆ.

ಇಲ್ಲಿ ಪೂರ್ವಿಕರ ನಂಬಿಕೆಯ ಕುರಿತಾದ ಚರ್ಚೆಯಿಲ್ಲ. ನಂಬಬೇಕೆ ಬಿಡಬೇಕೆ ಎಂಬ ಅನುಮಾನವಿಲ್ಲ. ಸೀಸರನಾದ ತಾನು ಈ ಕಂದಾಚಾರದ ಬಗ್ಗೆ ವಿಶ್ವಾಸವಿಟ್ಟಿರುವುದರ ಕುರಿತಾಗಿ ಯಾರು ಏನು ಅಂದುಕೊಳ್ಳಬಹುದು ಎಂಬ ಅಳುಕುಗಳಿಲ್ಲ. ಮಾತುಗಳು ದೃಢವಾಗಿ, ಬಿಲ್ಲಿನಿಂದ ಹೊರಟ ಬಾಣದ ಹಾಗೆ ಗುರಿ ತಲುಪುತ್ತವೆ. ಈ ಕಂದಾಚಾರದ ಬಗ್ಗೆ ಜನ ನಂಬುತ್ತಾರೆ. ''ನನ್ನ ಹೆಂಡತಿ ನಂಬುತ್ತಾಳೆ. ಅವಳು ತಾಯಾಗುವುದಾದರೆ ಎಲ್ಲರಿಗೂ ಸಂತೋಷದ ವಿಷಯ. ವಿಶೇಷವಾಗಿ ಅವಳಿಗೆ. ಆಗಲಿ'' ಅಷ್ಟೆ. ''ಉತ್ಸವದ ಯಾವ ವಿವರಕ್ಕೂ ಕೊರತೆ ಮಾಡಬೇಡಿ, ನಡೆಯಿರಿ'' ಎಂದು ಹೇಳಿ ಹೊರಟ ಸೀಸರನಿಗೆ ತನ್ನ ಹೆಸರನ್ನು ಜನಜಂಗುಳಿಯ ಮಧ್ಯದಿಂದ ಯಾರೋ ಕೂಗಿದ್ದು ಕೇಳಿಸುತ್ತದೆ. 'ಯಾರದು' ಎಂದು ಕೇಳಿದವನ ಮುಂದೆ ಆ ವ್ಯಕ್ತಿಯನ್ನು ತಂದು ನಿಲ್ಲಿಸಿದಾಗ ಅಷ್ಟೇ ದೃಢವಾಗಿ 'ಸೀಸರನು ಕೇಳುತ್ತಿದ್ದಾನೆ, ಏನು ಹೇಳು' ಅನ್ನುತ್ತಾನೆ. ಎದುರಿಗೆ ಬಂದು ನಿಂತ ವ್ಯಕ್ತಿ ಭವಿಷ್ಯವಾಣಿ ನುಡಿಯುವ 'ಸೂತ್‌ಸೇಯರ್'. ಅವನು ಹೇಳುವ ಮಾತೇನು ? 'ಐಡ್ಸ್ ಆಫ್ ಮಾರ್ಚ್ ಬಗ್ಗೆ ಎಚ್ಚರಿಕೆಯಿಂದಿರು' ಎಂದು. ಐಡ್ಸ್ ಆಫ್ ಮಾರ್ಚ್ ಎಂದರೆ ಹದಿನೈದು ಮಾರ್ಚ್. ಅಂದು ಎಚ್ಚರದಿಂದಿರು ಎಂದು ಹೇಳುತ್ತಿದ್ದಾನೆ ಈ ಭವಿಷ್ಯವಾದಿ. ಸೀಸರನಿಗೆ ಧ್ವನಿ ಕೇಳಿಸಿದರೂ ಮುಖ ಕಾಣಿಸುವುದಿಲ್ಲ. 'ಅವನನ್ನು ಕರೆದು ತನ್ನಿ; ಅವನ ಮುಖ ನೋಡೋಣ' ಎನ್ನುತ್ತಾನೆ.

ಎದುರು ಬಂದು ನಿಂತ ಆ ವೃದ್ಧನನ್ನು ಕೇಳುತ್ತಾನೆ ''ಏನು ಹೇಳುತ್ತಿದ್ದೀ ನೀನು ? ಮತ್ತೆ ಹೇಳು'' ಎಂದು. ಭವಿಷ್ಯವಾದಿ ಮತ್ತದೇ ಎಚ್ಚರಿಕೆಯ ಮಾತನ್ನಾಡುತ್ತಾನೆ. ಸೀಸರ್ ಒಂದು ಕ್ಷಣವೂ ಚಿಂತಿಸದೆ, ಧೃತಿಗೆಡದೆ, ಅಷ್ಟೇ ರಾಜದರ್ಪದಲ್ಲಿ ''ಅವನೊಬ್ಬ ಕನಸುಗಾರ, ನಡೆಯಿರಿ ಹೋಗೋಣ'' ಎಂದು ನಡೆದು ಬಿಡುತ್ತಾನೆ.

ಭವಿಷ್ಯವಾದಿಯ ನುಡಿಗಳೆಂದರೆ ಬಹು ಭಯಭಕ್ತಿಗಳಿಂದ ಕಾಣುವ ಸಂಸ್ಕೃತಿಯ ಅಂಗ ಅವನೂ ಕೂಡ. ಮಾರ್ಚ್ ಹದಿನೈದರಂದು ಎಚ್ಚರಿಕೆಯಿಂದಿರಿ ಎಂದು ನೇರವಾಗಿ ಹೇಳುತ್ತಿದ್ದಾನೆ ಅವನು. ಅವನ ಮಾತುಗಳನ್ನು ನಂಬುವುದೂ ಕೂಡ ಹಿಂದಿನಿಂದ ನಡೆದು ಬಂದುದು. ಆದರೆ ತಾನು ಮಾತ್ರ ಈ ಎಚ್ಚರಿಕೆಯನ್ನು ತಿರಸ್ಕರಿಸುತ್ತಿದ್ದಾನೆ. ಇದು ತನ್ನ ಅಳಿವು-ಉಳಿವಿನ ಪ್ರಶ್ನೆ. ಅಲ್ಲದೆ ತಾನು ಈ ನಾಡಿನ ಪ್ರಮುಖ. ಅಧಿಕಾರವಿದೆ. ಹಾಗಿದ್ದ ಮೇಲೆ ತನ್ನ ಅಳಿವು-ಉಳಿವಿನ ಪ್ರಶ್ನೆ ತನ್ನನ್ನು ಗಾಢವಾಗಿ ಕಾಡಬೇಕು. ಈ ಎಚ್ಚರಿಕೆ ಕಲಕಿಬಿಡಬೇಕು. ಕಲಕುವುದಿಲ್ಲ, ಬದಲಿಗೆ ಎಚ್ಚರಿಕೆ ನೀಡಿದವನೇ ಕನಸುಗಾರನಾಗಿ ಕಾಣುತ್ತಾನೆ. ಹೀಗೆ ಹಗಲುಗನಸು ಕಾಣುವವರು ಒಂದು ಅರ್ಥದಲ್ಲಿ ಹುಚ್ಚರೂ ಹೌದು. ತನ್ನ ಮಟ್ಟಿಗೆ ಅವನು ಹುಚ್ಚು ಕನಸುಗಾರ. ಈ ಮಾತುಗಳೊಂದಿಗೆ ಸೀಸರ್ ನಿಷ್ಕ್ರಮಿಸುತ್ತಾನೆ. ಮೊದಲೇ ಹೇಳಿದ ಹಾಗೆ ಕೇವಲ ಇಪ್ಪತ್ತೈದು ಸಾಲುಗಳ ದೃಶ್ಯ.

ಸೀಸರನು ಸರ್ವಾಧಿಕಾರಿಯಿರಬಹುದೆ ? ಸರ್ವಾಧಿಕಾರಿಯೊಬ್ಬನ ಮೊದಲ ಲಕ್ಷಣವೆಂದರೆ ಜೀವಭಯ. ಇದೇ ಮಾತನ್ನು ಬೇರೆ ರೀತಿ ಹೇಳಬಹುದಾದರೆ, ಜೀವಭಯ ಭಯಂಕರವಾಗಿ ಕಾಡುವುದರಿಂದಲೇ ಸರ್ವಾಧಿಕಾರದ ಬಲೆಗೆ ಬೀಳುವುದು. ಸೀಸರನ ಪ್ರತಿಕ್ರಿಯೆಯಿಂದ ಒಂದು ಮಾತಂತೂ ತತ್‌ಕ್ಷಣದಲ್ಲಿ ಸ್ಪಷ್ಟವಾಗುವುದೆಂದರೆ - ಅವನು ಸರ್ವಾಧಿಕಾರಿಯಾಗಲು ಸಾಧ್ಯವಿಲ್ಲ ಎಂದು ; ಮತ್ತೂ ಒಂದು - ಈಗಾಗಲೇ ವಿವರಿಸಲಾದ ಅಂಶವನ್ನು ಪುನಃ ನೋಡೋಣ. ಹೆಂಡತಿಯ ಸಂತೋಷಕ್ಕೆ ಒಂದು ಕಂದಾಚಾರದಲ್ಲಿ ನಂಬಿಕೆ ವ್ಯಕ್ತಪಡಿಸುವ ಸೀಸರ್, ತನ್ನದೇ ಸೌಖ್ಯ, ಕ್ಷೇಮಗಳಿಗೆ ಸಂಬಂಧಿಸಿದಂತೆ ಪರಂಪರಾನು ಗತವಾಗಿ ಬಂದ ಅಂಥದೇ ಮತ್ತೊಂದು ನಂಬಿಕೆಯನ್ನು ತೀರ ನಿರ್ಲಕ್ಷ್ಯದಿಂದ ಕಾಣುತ್ತಾನೆ.

ಈ ಸಂದರ್ಭದಲ್ಲೇ ಅವನ ಬಗ್ಗೆ ಯೋಚಿಸುವಾಗ 'ಶ್ರೀಮಂತ' ಎಂಬ ಶಬ್ದ ಹೊಳೆಯುವುದು. ವ್ಯಕ್ತಿತ್ವದಲ್ಲಿ ಅಗಾಧ ಶ್ರೀಮಂತ ಸೀಸರ್. ಹೃದಯ, ಮನಸ್ಸುಗಳಲ್ಲಿ ಶ್ರೀಮಂತ, ತನ್ನ ಕಂದಾಚಾರದ ನಂಬಿಕೆಗೆ ಚರ್ಚೆ ಹೇಗೆ ಅನಾವಶ್ಯಕವೋ ಅಷ್ಟೇ ಅನಾವಶ್ಯಕ ಈ ಎಚ್ಚರಿಕೆ ಮಾತುಗಳ ಕುರಿತಾದ ವ್ಯಾಖ್ಯಾನ. ಶ್ರೀಮಂತಿಕೆಯ ಮತ್ತೂ ಒಂದು ಲಕ್ಷಣವೆಂದರೆ ಆಡುವ ಮಾತುಗಳಲ್ಲಿ ಬೇಡದ ಅಲಂಕಾರವಿರುವುದಿಲ್ಲ; ಪ್ರದರ್ಶನ ಬುದ್ಧಿ ಇರುವುದಿಲ್ಲ, ಯಾರನ್ನೂ ಸೆಳೆದುಕೊಳ್ಳಬೇಕಾದ, ಯಾರ ಮೇಲೂ ಪರಿಣಾಮ ಬೀರಬೇಕೆಂಬುವ

ಸನ್ನಾಹವಿರುವುದಿಲ್ಲ. ಈ ಇಪ್ಪತ್ತೈದು ಸಾಲುಗಳ ಈ ದೃಶ್ಯದಲ್ಲಿ ಅವನಾಡುವುದು ಹತ್ತು ಸಾಲುಗಳು ಮಾತ್ರ. ಪ್ರತಿ ಸಾಲೂ ಸ್ಪಷ್ಟ, ಸರಳ.

ಈ ಇಪ್ಪತ್ತೈದು ಸಾಲುಗಳಲ್ಲಿ ಮಿಕ್ಕ ಹದಿನೈದು ಸಾಲುಗಳನ್ನು ಮಾತನಾಡುವ ಇತರ ಪಾತ್ರಗಳ ಕುರಿತಾಗಿಯೂ ನಾವು ಗಮನಹರಿಸಬೇಕು. ಕಾಲಿಫೂರ್ನಿಯಾ, ಕಾಸ್ಕಾ, ಆಂಟನಿ, ಕ್ಯಾಷಿಯಸ್. ಈ ಪಾತ್ರಗಳು ಆಡುವುದು ಬಿಡಿಮಾತುಗಳು. ಆದರೂ ಈ ಬಿಡಿ ಸಾಲುಗಳೇ ಅವರ ವ್ಯಕ್ತಿತ್ವಗಳನ್ನು ಪ್ರಕಟಪಡಿಸುತ್ತವೆ. ಈ ಕುರಿತಾಗಿ ಆ ಪಾತ್ರಗಳ ವಿಶ್ಲೇಷಣೆ ಮಾಡುವಾಗ ಅಥವಾ ಸಂದರ್ಭಗಳನ್ನು ವಿವರಿಸುವಾಗ ವಿಶದವಾಗಿ ಮಾತನಾಡಬಹುದು. ಮತ್ತೆ ನೂರ ಅರುವತ್ತೈದು ಸಾಲುಗಳ ನಂತರವೇ ಸೀಸರ್ ನಮಗೆ ಕಾಣುವುದು.

ಆದರೆ ಈ ಅಂತರದಲ್ಲಿ ಏನೆಲ್ಲ ನಡೆದಿದೆ ! ಸೀಸರ್ ಬೆನ್ನು ತಿರುಗಿಸಿ ನೇಪಥ್ಯಕ್ಕೆ ಸರಿದ ಕೂಡಲೆ ಆರಂಭವಾಗುತ್ತದೆ ಅವನ ವಿರುದ್ಧದ ಪಿತೂರಿ ದೃಶ್ಯ. ಮತ್ತು ಈ ದೃಶ್ಯ ಇಬ್ಬರು ಪ್ರತಿಷ್ಠಿತ ಸೆನೆಟರುಗಳ ಮಧ್ಯೆ ನಡೆಯುವುದು. ಈ ಇಬ್ಬರೂ ವೀರಾಗ್ರಣಿಗಳು. ರಾಷ್ಟ್ರ ರಾಜಕಾರಣದಲ್ಲಿ ಗೌರವಾನ್ವಿತ ಹಿರಿಯರು ಹಾಗೂ ಬಂಧುಗಳು. ಪರಸ್ಪರ ಗೌರವವಿರುವ ವ್ಯಕ್ತಿಗಳು. ಆದರೆ ಅವರುಗಳ ವ್ಯಕ್ತಿತ್ವಗಳಲ್ಲಿ ಎಷ್ಟೊಂದು ಅಂತರ ? ಸದ್ಯದ ಅವರ ದೀರ್ಘ ಮಾತುಕತೆಯ ವಸ್ತು ಸೀಸರ್ - ಸೀಸರ್ ವ್ಯಕ್ತಿಯಾಗಿ ಹಾಗೂ ಸೀಸರ್ ರಾಷ್ಟ್ರನಾಯಕನಾಗಿ ; ರಂಗದ ಮೇಲೆ ಮಿಂಚು ಹೊಡೆದ ಹಾಗೆ ಹತ್ತು ನಿಮಿಷ ಬಂದು ಹೋಗಿದ್ದಾನೆ ಸೀಸರ್. ಅಹಂಕಾರವಾಗಿಯೇ ಕಂಡುಬಿಡಬಹುದಾದಂತೆ ಉಗ್ರಆತ್ಮವಿಶ್ವಾಸದಲ್ಲಿ ಮಾತನಾಡಿದ್ದಾನೆ. ಬ್ರೂಟಸ್ ಮತ್ತು ಕ್ಯಾಷಿಯಸ್ ಅವರುಗಳ ಮಾತುಕತೆ ಮುಂದುವರೆದಂತೆ ನಮಗೆ ಗೋಚರವಾಗುತ್ತ ಹೋಗುತ್ತದೆ, ಸೀಸರನ ಈ ಅಹಂಕಾರವಾಗಿ ಕಂಡುಬಿಡುವ ಉಗ್ರ ಆತ್ಮವಿಶ್ವಾಸವೇ ಅವರ ದೀರ್ಘಚರ್ಚೆಯ ವಸ್ತು ಎಂದು. ನಮಗೆ ಜ್ಞಾಪಕವಿದೆಯಲ್ಲ - ಮೊದಲ ದೃಶ್ಯದಲ್ಲಿ - ಜನಸಾಮಾನ್ಯರನ್ನು ರಸ್ತೆಗಳಿಂದ ಚೆದರಿಸಿ ಓಡಿಸಿದ ಮೇಲೆ ಫ್ಲೇವಿಯಸ್ ಮಾರುಲಸ್‌ಗೆ ಹೇಳುವ ಮಾತುಗಳು-

These growing feathers plucked from Caeser's wing
Will make him fly an ordinary pitch
Who else would soar above the view of men
And keep us all in servile fearfulness (i) 72-75

ಈ ಬಲಿಷ್ಠಗೊಳ್ಳುತ್ತಿರುವ ಪುಕ್ಕಗಳದೇ ಭೀತಿ ; ಮಿಕ್ಕೆಲ್ಲ ಹಕ್ಕಿಗಳಂತೆ 'Ordinary Pitch' ಹಾರುವಂತಿದ್ದರೆ ಎಲ್ಲರಿಗೂ ಸಮಾಧಾನ. ಹಾಗಲ್ಲದಿದ್ದರೆ ಸಾಮಾನ್ಯರ ಕಣ್ಣಿಗೆ ಕಾಣದಷ್ಟು ಎತ್ತರ ಹಾರಿ ಎಲ್ಲರನ್ನೂ ಆತಂಕದಲ್ಲಿ, ಭಯದಲ್ಲಿ ಇರಿಸಿಬಿಡುತ್ತಾನೆ - ಈ ಸೀಸರ್.

ಇದೇ ಕ್ಯಾಷಿಯಸ್‌ನ ಚಿಂತೆ ಕೂಡ. ಈ ಚಿಂತೆ, ಭಯಗಳನ್ನು ಬ್ರೂಟಸ್‌ನೊಡನೆ ಹಂಚಿಕೊಳ್ಳಬೇಕಾಗಿದೆ ; ಅವನನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಬೇಕಾಗಿದೆ ; ಅವನ ಸಹಕಾರ ಬೇಕಾಗಿದೆ ; ಅದಕ್ಕೂ ಹೆಚ್ಚಾಗಿ ಅವನ ನಾಯಕತ್ವದ ಅವಶ್ಯಕತೆಯಿದೆ.

ಇಪ್ಪತ್ತೈದು ಸಾಲುಗಳ ಸೀಸರನ ದೃಶ್ಯದೊಡನೆ ಈ ೧೬೫ ಸಾಲುಗಳ ಕ್ಯಾಷಿಯಸ್, ಬ್ರೂಟಸ್ ದೃಶ್ಯವನ್ನು ಹೋಲಿಸಿ ನೋಡಿದಾಗ ಪರಸ್ಪರ ಎಷ್ಟು ಭಿನ್ನ ಈ ಎರಡು ದೃಶ್ಯಗಳು ಎಂದು ತಿಳಿಯುತ್ತ ಹೋಗುತ್ತದೆ.

ಈ ಇಡೀ ದೃಶ್ಯ ಒಂದು ಬಗೆಯ ಹಾವು-ಏಣಿ ಆಟ. ಅದು ಹೇಗೆ ಎಂದು ನೋಡೋಣ. ಉತ್ಸವದಲ್ಲಿ ಪಾಲ್ಗೊಳ್ಳಲು, ಕ್ರೀಡೆ, ವಿನೋದಗಳಲ್ಲಿ ಭಾಗವಹಿಸಲು ಈಗ ತಾನೆ ರಂಗದಿಂದ ನಿಷ್ಕ್ರಮಿಸಿದ ಸೀಸರ್ ಮತ್ತು ಅವನ ಪರಿವಾರವನ್ನು ಅನುಸರಿಸಿ ಹೋಗುವುದಿಲ್ಲವೆ ನೀನು ಎಂದು ಕ್ಯಾಷಿಯಸ್ ಬ್ರೂಟಸ್‌ನನ್ನು ಕೇಳುತ್ತಾನೆ. "ಇಲ್ಲ, ಹೋಗುವುದಿಲ್ಲ ; ಆಂಟನಿ ರೀತಿಯ ಉತ್ಸಾಹಗಳು ನನಗೆ ಇಲ್ಲ" ಹಾಗೆಂದು ಕ್ಯಾಷಿಯಸ್ ಹೋಗಬೇಕೆಂದಿದ್ದರೆ ತಾನು ತಡೆಯುವುದಿಲ್ಲ. ಹೋಗಬೇಕೆಂದಿದ್ದರೆ ಹೋಗಬಹುದು ಎಂದು ನಿರ್ಭಾವುಕವಾಗಿ ನುಡಿಯುತ್ತಾನೆ. ಈ ನಿರ್ಭಾವುಕತೆಯೇ ಕ್ಯಾಷಿಯಸ್‌ನಿಗೆ ತನ್ನ ಯೋಜಿತ ಆಟದ ಮೊದಲ ದಾಳವನ್ನು ಪಗಡೆಹಾಸಿನ ಮೇಲೆ ಒಗೆಯಲು ಸ್ವಾಗತ ನೀಡಿದ ಹಾಗೆ ಆಗುತ್ತದೆ. 'ಮೊದಲಿನಂತಿಲ್ಲ ನೀನು. ನಿನ್ನ ಪ್ರೀತಿಸುವ ಸ್ನೇಹಿತರ ಬಗ್ಗೆ ನೀನು ಕಟುವಾಗಿದ್ದೀಯೆ, ವಿಚಿತ್ರವಾಗಿ ನಡೆದುಕೊಳ್ಳುತ್ತೀಯೆ. ನಿನ್ನ ಮೊದಲಿನ ಆ ಮಮತೆಯೇನಾಯಿತು ?' ಎಂದು ಪ್ರಶ್ನೆ ಕೇಳುವಂತೆಯೇ ಅವನ ಮನಸ್ಸನ್ನೂ ತಿಳಿಯಲು ಯತ್ನಿಸುತ್ತಾನೆ. ಈ ದೃಶ್ಯದಲ್ಲಿ ಸಿಲುಕಿ ಹಾಕಿಕೊಳ್ಳುವುದಕ್ಕೆ ಬ್ರೂಟಸನೇ ತನ್ನ ಉತ್ತರದಿಂದ ಸಂಪೂರ್ಣ ದಾರಿಮಾಡಿಕೊಳ್ಳುತ್ತಾನೆ. ಹಾರಿಕೆಯ ಉತ್ತರ ಕೊಡದೆ, ಸುಳ್ಳು ಹೇಳದೆ ತನ್ನ ಮನಸ್ಸನ್ನು ಒಂದಷ್ಟು ಅಸ್ಥಿರಗೊಳಿಸಿರುವ ಅಸ್ಪಷ್ಟವಿಷಯಗಳ ಬಗ್ಗೆ ಮಾತನಾಡುತ್ತಾನೆ :

Cassius,
Be not deceived : if I have veiled my look,
I turn the trouble of my countenance
Merely upon Myself. Vexed I am
Of late with passions of some difference,
Conceptions only proper to myself
Which give some soil, perhaps to my behaviours ;
....
That poor Brutus, with himself at war,
Forgets the shows of love to other men
I ii 35-45

''ನನ್ನ ಮುಖದ ಮೇಲಿನ ಚಿಂತೆಯ ಗೆರೆಗಳು ನನ್ನ ಮನಸ್ಸಿಗೆ ಹಿಡಿದ ಕನ್ನಡಿಗಳು ಅಷ್ಟೆ. ವಿರುದ್ಧ ರೀತಿಯ ಆಲೋಚನೆಗಳು, ನನಗೆ ಮಾತ್ರ ಸಂಬಂಧಿಸಿದವು, ನನ್ನನ್ನು ಈ ರೀತಿ ವಿಚಿತ್ರವಾಗಿ ಕಾಣುವ ಹಾಗೆ ಮಾಡಿದೆ. ನನಗಿರುವುದು ನನ್ನೊಡನೆಯೇ ನಾನು ಸೆಣಸುತ್ತಿರುವ ಯುದ್ಧದ ಚಿಂತೆ'' ಕ್ಯಾಷಿಯಸ್ ಕಾದಿದ್ದುದು ಇಂಥ 'ತೆರದ ಮನಸ್ಸಿನ' ಸ್ವಾಗತಕ್ಕೆ. ಹೌದೆ ? ನಿನ್ನ ಈ ಮನಃಸ್ಥಿತಿಯನ್ನು ನಾನು ತಪ್ಪಾಗಿ ಗ್ರಹಿಸಿದ್ದೆ. ಹಾಗಾಗಿಯೇ ....this breast of mine hath buried / Thoughts of great value, worthy cogitations, ನಿನ್ನೊಡನೆ ಹಂಚಿಕೊಳ್ಳಬೇಕಾದ ನೂರು ಮಾತುಗಳಿವೆ. 'ಹೇಳು ನಿನ್ನ ಮುಖ ನಿನಗೆ ಕಾಣುತ್ತದೆಯೆ ?' ಈ ಕ್ಷಣದಲ್ಲೇ ನಮಗೆ ಎದುರಾಗುವ ಪ್ರಶ್ನೆ : ಕ್ಯಾಷಿಯಸ್ ಏಕೆ ನೇರವಾಗಿ, ಸರಳವಾಗಿ ತನ್ನ ವಿಚಾರಗಳನ್ನು ಕುರಿತು ಮಾತನಾಡಿಬಿಡುವುದಿಲ್ಲ ? ಸೀಸರನ ಕುರಿತಾಗಿ ತಮ್ಮ ಮುಂದಿನ ಕ್ರಮಗಳ ಬಗ್ಗೆ ಸ್ಪಷ್ಟವಾಗಿ ಹೇಳಿಬಿಡುವುದಿಲ್ಲ ? ತಾನು - ಬ್ರೂಟಸ್ ಸ್ನೇಹಿತರು, ಆಪ್ತರು, ಹಾಗಿರುವಾಗ ಯಾಕೆ ಸುತ್ತುಬಳಸುಮಾತು ?

ಇಷ್ಟೊಂದು ಬಗೆಯಲ್ಲಿ ಇಷ್ಟೊಂದು ತಂತ್ರಗಳನ್ನು ಅಳವಡಿಸಿ ತನ್ನ ದಾಳಗಳನ್ನು ಬಳಸಬೇಕಿತ್ತೆ ? ಉತ್ತರಕ್ಕೆ ಇನ್ನಷ್ಟು ಕಾಯಬೇಕು.

'ನಿನ್ನ ಮುಖ ನಿನಗೇ ಕಾಣದಿರುವುದರಿಂದ ನಿನ್ನ ಯೋಗ್ಯತೆ, ನಿನ್ನ ಅರ್ಹತೆ ಬೇರೆಯವರ ಕಣ್ಣುಗಳಲ್ಲಿ ಪ್ರತಿಬಿಂಬಿತವಾಗಿವೆ, ಅದನ್ನು ನೀನು ಕಾಣುವಂತಾದರೆ !' ಮುಂದೆ ಅವನು ಆಡುವ ಮಾತುಗಳು ತನ್ನ ಆತ್ಮಸ್ಥೈರ್ಯವನ್ನೆಲ್ಲ ಒಟ್ಟುಗೂಡಿಸಿ ಕತ್ತಲಲ್ಲಿ ಮಾವಿನ ಮರಕ್ಕೆ ಬೀಸಿದ ಕಲ್ಲಿನಂತೆ - ಬಿದ್ದರೆ ಹಣ್ಣು, ಇಲ್ಲವಾದರೆ ಒಂದು ಕಲ್ಲು ನಷ್ಟವಷ್ಟೆ. ಮತ್ತು ತನ್ನ ಆಟದ ಮಹತ್ವದ ಘಟ್ಟ ಕೂಡ ಇದು :

> I have heard where many of the best respect in Rome
> (except immortal Caesar), speaking of Brutus,
> And groaning underneath this age's yoke,
> Have wished that noble Brutus had his eyes,
> I ii 57-61

ಹಾವು ಏಣಿ ಆಟದಲ್ಲಿ ಒಂದು ಮೆಟ್ಟಿಲು ಹತ್ತಿದ ಭಾವ ಮೂಡಿಸುವ ಮಾತುಗಳು. ಎಷ್ಟು ಜಾಣತನ, ಮಾತುಗಳ ಬಳಕೆಯಲ್ಲಿ ಎಂಥ ಚಮತ್ಕಾರಿಕೆ. ರೋಮಿನ ಗೌರವಾನ್ವಿತರನೇಕರು - ಸೀಸರನನ್ನೊಬ್ಬನನ್ನು ಬಿಟ್ಟು - ಬ್ರೂಟಸ್‌ನ ಕುರಿತು ಮಾತನಾಡುವಾಗ, ಅವನಿಗೆ ಕಣ್ಣುಗಳು ಇದ್ದಿದ್ದರೆ, ನೋಡುವಂತಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಹಲುಬುತ್ತಿದ್ದಾರೆ. ಏನನ್ನು ನೋಡಬೇಕು ? ಸದ್ಯದ ಪರಿಸ್ಥಿತಿಯಲ್ಲಿ ಕತ್ತಿನ ಮೇಲೆ ಹೊರಿಸಿದ ನೊಗದ ಭಾರದಲ್ಲಿ ನರಳುತ್ತಿರುವ ಜನಗಳನ್ನು, ಎಲ್ಲಕ್ಕಿಂತ ಪ್ರಭಾವಶಾಲಿ ಪ್ರಯೋಗ 'except immortal

Caesar' ಎಂಬ ಮಾತುಗಳು, ಶೇಕ್ಸ್‌ಪಿಯರ್ ಈ ಮಾತುಗಳನ್ನು ಕಂಸದೊಳಕ್ಕೆ ಹಾಕುತ್ತಾನೆ. ಕ್ಯಾಷಿಯಸ್ ಮಾತನಾಡುವಾಗ ಈ 'except immortal Caesar' ಎಂಬ ತಗ್ಗಿದ ದನಿಯ ಮಾತುಗಳು ಬ್ರೂಟಸ್‌ನ ಅಂತಃಪ್ರಜ್ಞೆಯನ್ನು ಏಕಾಏಕಿ ತಾಗಿಬಿಡಬೇಕು, ಅಷ್ಟು ಪರಿಣಾಮಕಾರಿಯಾಗಿದೆ. ಇದು ಈ ಕಾಲದ ಬಗ್ಗೆ, ಇದರ ಜೊತೆಗೇ ಬಂದ ಸಂಕಟಗಳ ಬಗ್ಗೆ, ಬ್ರೂಟಸ್ ಇವುಗಳ ಕುರಿತಾಗಿ ಶ್ರದ್ಧೆ ತೋರಿಸುತ್ತಿಲ್ಲವೆಂಬ ವಿಷಾದದ ಬಗ್ಗೆ- ಎಲ್ಲವನ್ನೂ ಒಟ್ಟಿಗೆ ಸೇರಿಸಿ ಹೇಳುತ್ತಲೇ ಈ ಯುಗಕ್ಕೆ ಕೊನೆಯೇ ಇಲ್ಲವೇನೋ ಎಂಬಂತೆ 'Immortal' ಸೀಸರ್‌ನು ಭಯಂಕರವಾಗಿ ಬೆಳೆದು ನಿಂತಿರುವ ಬಗ್ಗೆ ಎಲ್ಲವನ್ನೂ ಕ್ಲುಪ್ತವಾಗಿ ಹೇಳುತ್ತಾನೆ, ಪ್ರಭಾವಶಾಲಿಯಾಗಿ ಹೇಳುತ್ತಾನೆ - ಎಂದೇ ಎಚ್ಚರಗೊಂಡ ಬ್ರೂಟಸ್ 'ನನ್ನಲ್ಲಿಲ್ಲದ ಗುಣಗಳಿಗಾಗಿ ಅರಸುವಂತೆ ಮಾಡುವ ಯಾವ ಅಪಾಯಗಳಿಗೆ ನನ್ನನ್ನು ಸಿಲುಕಿಸಲು ಯತ್ನಿಸುತ್ತಿದ್ದಿ ?' ಎಂದು ಕೇಳುತ್ತಾನೆ. ಬ್ರೂಟಸ್‌ನ ಈ ಮಾತುಗಳು ತನ್ನ ಕಿವಿಗೆ ತಾಗಲಿಲ್ಲವೇನೋ ಎಂಬಂತೆ ಕ್ಯಾಷಿಯಸ್ ತನ್ನ ಹಿಂದಿನ ಮಾತುಗಳ ಗುಂಗಿನಲ್ಲಿಯೇ 'Therefore, good Brutus, be prepared to hear' ಎಂದು ಮುಂದುವರೆಸುತ್ತಾನೆ.

ಬ್ರೂಟಸ್ ಅಸಾಮಾನ್ಯ ವ್ಯಕ್ತಿ ಆದ್ದರಿಂದಲೇ ಅವನನ್ನು ಮಣಿಸಲು ಅಸಾಮಾನ್ಯ ತಂತ್ರಗಳ ಅವಶ್ಯಕತೆ ಇದೆ. ಪಿತೂರಿಯ ಒಂದು ಮುಖ್ಯ ಲಕ್ಷಣವೇ ಇದು. ಕ್ಷಣ ಕ್ಷಣಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ತಂತ್ರಗಳನ್ನೂ ಬದಲಿಸುತ್ತ ಹೋಗುತ್ತಿರಬೇಕು. ''ಈ ಮಾತುಗಳನ್ನೆಲ್ಲ ಆಡಿ ನಾನು ನಿನ್ನ ಭಟ್ಟಂಗಿಯಂತೆ ವರ್ತಿಸುತ್ತಿಲ್ಲ, ನಾನು ಅಂಥವನಲ್ಲ ಎಂದು ನೀನು ಬಲ್ಲೆ. ಕ್ಷುದ್ರ, ಕ್ಷುಲ್ಲಕ ನಾನಲ್ಲ. ನಿನಗೆ ಹಾಗನ್ನಿಸಿದರೆ ನಾನು ಅಪಾಯಕಾರಿ ವ್ಯಕ್ತಿ ಎಂದು ತಿಳಿದುಕೊ'' ಎಂದು ಮಾತು ಮುಗಿಸುತ್ತಿದ್ದಂತೆಯೇ ಹಿಂದಿನಿಂದ ಲುಪೆರ್ಕಲ್ ಉತ್ಸವದಲ್ಲಿ ಭಾಗವಹಿಸಿದ ಜನಗಳ ಹರ್ಷೋದ್ಗಾರಗಳು ಕೇಳಿಸುತ್ತದೆ. ''ಏನೀ ಅಬ್ಬರದ ಉದ್ಗಾರಗಳು ? ಸೀಸರನನ್ನು ರಾಜನನ್ನಾಗಿ ಜನ ಆರಿಸಿಕೊಂಡು ಬಿಡುತ್ತಿದ್ದಾರೆಯೆ ಎಂಬ ಅಂಜಿಕೆ ನನಗೆ'' ಅನ್ನುತ್ತಾನೆ ಬ್ರೂಟಸ್. ಶೇಕ್ಸ್‌ಪಿಯರ್‌ನ ನಾಟಕರಚನಾಕೌಶಲಕ್ಕೆ ಈ ಸಂದರ್ಭ ಒಂದು ಉತ್ಕೃಷ್ಟ ಉದಾಹರಣೆ. ಇಂಥ ಗಳಿಗೆಗಳನ್ನೇ ನಾಟಕೀಯ ಗಳಿಗೆಗಳು ಅನ್ನುವುದು. ಕ್ಯಾಷಿಯಸ್ ಯತ್ನಿಸುತ್ತಿರುವ ಬ್ರೂಟಸ್‌ನ ಮನಃಪರಿವರ್ತನೆಗೆ, ತನ್ನ ಎಣಿಕೆಗೂ ಮೀರಿದಂತೆ ವಿಧಿಯೇ ಸಹಾಯಹಸ್ತವನ್ನು ಮುಕ್ತವಾಗಿ ಚಾಚಿದಂತೆ ಕಾಣುತ್ತದೆ. ಮತ್ತೆ ಅತಿಸಹಜವಾಗಿ ಆಡುವ ಬ್ರೂಟಸ್‌ನ ಮಾತುಗಳನ್ನು ಗಬಕ್ಕನೆ ಹಿಡಿದು ಹೇಗೆ ಅದಕ್ಕೆ ಆಯಾಮಗಳನ್ನು ನೀಡಿ ತನ್ನ ಉದ್ದೇಶಕ್ಕೆ ಅದನ್ನು ಹೊಂದಿಸುತ್ತ ಹೋಗುತ್ತಾನೆ ಎಂದು ನಾವು ನೋಡಬೇಕು. ಬ್ರೂಟಸ್ ಅನ್ನುವುದೇನು ? 'I do fear the people choose Caesar for their king' ಆ ವಾಕ್ಯದಲ್ಲಿ 'fear' ಎಂಬ ಶಬ್ದಕ್ಕೆ ಹೆಚ್ಚಿನ ಅರ್ಥಕಲ್ಪನೆ ಮಾಡಹೋಗುವುದು ಅಷ್ಟು ಸರಿಯೆನಿಸುವುದಿಲ್ಲ. ಇಂಗ್ಲಿಷ್ ಭಾಷೆಯಲ್ಲಿ 'fear' ಎಂಬ ಶಬ್ದಕ್ಕೆ ಹಲವು ಅರ್ಥಗಳಿವೆ.

'I fear it might rain today' 'I fear the train may be late' ಇತ್ಯಾದಿ ವಾಕ್ಯಗಳಲ್ಲಿ 'fear' ಎಂಬುದಕ್ಕೆ ಅನುಮಾನ, ಭಾವನೆ, ಸಂದೇಹ ಎಂಬುದಕ್ಕಿಂತ ಹೆಚ್ಚಿನ ಅರ್ಥ ಕಲ್ಪಿಸುವುದು ತಪ್ಪಾಗುತ್ತದೆ.

ಬ್ರೂಟಸ್‌ನ 'I do fear !...'ಗೆ ಹೆಚ್ಚೆಂದರೆ 'ನನ್ನ ನಿಜವಾದ ಅನುಮಾನವೆಂದರೆ....' ಆಗಬಹುದೇ ಹೊರತು, ಅದಕ್ಕೆ ಮೀರಿ 'ಭಯ, ಆತಂಕ' ಎಂಬ ಪದಗಳನ್ನು ಆರೋಪಿಸುವುದು ತಪ್ಪಾಗುತ್ತದೆ. ಆದರೆ ಕ್ಯಾಷಿಯಸ್‌ನಿಗೆ ಮಾತುಗಳನ್ನು ತನ್ನ ಅನುಕೂಲಕ್ಕೆ ಬಗ್ಗಿಸಿಕೊಳ್ಳಬೇಕಾದ ತುರ್ತಿದೆ, ಎಂದೇ ಹದ್ದಿನ ಹಾಗೆ ಈ ಪಾಪದ ಶಬ್ದದ ಮೇಲೆ ಎರಗಿ ಬಿದ್ದು ಹಾರಿಸಿಕೊಂಡು ಹೋಗುತ್ತಾನೆ. ''ಭಯವಲ್ಲವೆ ನಿನಗೆ ? ಹಾಗಾದರೆ ಇದು ಆಗಕೂಡದು ಎಂದು ನೀನೂ ನಂಬಿದಂತೆ ಎಂದು ನನಗೆ ಅನಿಸುತ್ತದೆ'' ಎಂದು ಏಣಿಯ ಹತ್ತು ಮೆಟ್ಟಿಲು ಒಮ್ಮೆಗೇ ಜಿಗಿದ ಉತ್ಸಾಹದಲ್ಲಿ ಅನ್ನುತ್ತಾನೆ.

ಈ ದೃಶ್ಯದ - ಅಂದರೆ ಈ ಪಿತೂರಿ ದೃಶ್ಯದ - ಅತ್ಯಂತ ಪ್ರಮುಖ ಘಟ್ಟವಿರುವುದು ಇಲ್ಲಿಯೇ. ನಾಟಕದ ಒಂದು ಮುಖ್ಯ ಸಂಘರ್ಷದ ಸೂಚನೆಯೂ ನಮಗೆ ಸಿಕ್ಕುವುದು ಇಲ್ಲಿಯೇ. ನಾಟಕದಲ್ಲಿಯಷ್ಟೇ ಅಲ್ಲ ಬ್ರೂಟಸ್‌ನ ವ್ಯಕ್ತಿತ್ವದೊಳಗೆ ನಡೆಯುತ್ತಿರುವ ಸಂಘರ್ಷದ ಒಂದು ಇಣುಕುನೋಟ ದೊರಕುವುದೂ ಇಲ್ಲಿಯೇ. ಕ್ಯಾಷಿಯಸ್‌ನ ಅತ್ಯುತ್ಸಾಹದ ಉದ್ಗಾರಕ್ಕೆ ಬ್ರೂಟಸ್ ತಣ್ಣಗೆ ಹೇಳುತ್ತಾನೆ ''ಹೌದು ಕ್ಯಾಷಿಯಸ್ ; ಅವನು ರಾಜನಾಗುವುದನ್ನು ನಾನು ವಿರೋಧಿಸುತ್ತೇನೆ ; ಆದರೂ ನಾನು ಅವನನ್ನು ತುಂಬ ಪ್ರೀತಿಸುತ್ತೇನೆ '' ಅದಕ್ಕಿಂತ ಹೆಚ್ಚಿಗೆ ಈಗ ಬ್ರೂಟಸ್‌ನಿಗೆ ಬೇಕಾದ ಉತ್ತರವೆಂದರೆ

> 'But wherefore do you hold me here so long ?
> what is it that you would impart to me ?
> If it be aught toward the general good,
> Set honour in one eye, and death in the other
> And I look on both indifferently;
> For let the gods so speed as I love
> The name of honour more than I fear death'
> I ii 81-87

ಬ್ರೂಟಸ್ ಆಡುವ ಪ್ರತಿ ಶಬ್ದವೂ ಸ್ಪಷ್ಟವಾಗಿದೆ. ಸರಳವಾಗಿದೆ. ಇದ್ದಕ್ಕಿದ್ದಂತೆ ನಮಗೆ ಸೀಸರ್‌ನ ಸರಳತೆ, ಸ್ಪಷ್ಟತೆಗಳ ನೆನಪಾಗಿಬಿಡುತ್ತದೆ. ಸೀಸರ್‌ನು ರಾಜನಾಗುವುದನ್ನು ನಾನು ಬಯಸುವುದಿಲ್ಲ, ಆದರೆ ಅವನನ್ನು ವೈಯಕ್ತಿಕವಾಗಿ ಪ್ರೀತಿಸುತ್ತೇನೆ. ಗೌರವಿಸುತ್ತೇನೆ. ದೇಶಕ್ಕೆ, ಈ ಗಣರಾಜ್ಯಕ್ಕೆ ರಾಜನ ಆಯ್ಕೆಯನ್ನು ವಿರೋಧಿಸುತ್ತೇನೆ. ಆದರೆ ಇದರಲ್ಲಿ ಸೀಸರ್‌ನ

ಕುರಿತಾದ ವೈಯಕ್ತಿಕ ಅಸಹನೆ, ದ್ವೇಷಗಳಿಲ್ಲ, ರಾಷ್ಟ್ರದ ಕುರಿತಾದ ನಿಷ್ಠೆ ಮತ್ತು ವೈಯಕ್ತಿಕ ಸಂಬಂಧಗಳ ಕುರಿತಾದ ಕಳಕಳಿ ಇದೆ. ಈ ಮಾತುಗಳು ಆಡುತ್ತಿದ್ದಂತೆಯೆ ಬ್ರೂಟಸ್‌ನಿಗೆ ತೀವ್ರ ಅನುಮಾನಗಳು ಆರಂಭವಾಗಿ ತನಗೆ ತಾನು ಎಚ್ಚರದ ಮಾತುಗಳನ್ನು ಹೇಳಿಕೊಂಡಂತೆ ಹೇಳುತ್ತಾನೆ. ಈ ಮಾತುಗಳು ಕ್ಯಾಷಿಯಸನಿಗೆ ಉದ್ದೇಶಿಸಿದ್ದಾದರೂ ಬಹುಮಟ್ಟಿಗೆ ತನ್ನನ್ನೇ ಕುರಿತು ಹೇಳಿಕೊಂಡ ಮಾತುಗಳು. 'ಹೀಗ್ಯಾಕೆ ನನ್ನನ್ನು ಹಿಡಿದು ನಿಲ್ಲಿಸಿದ್ದೀಯೆ ? ನನ್ನಿಂದ, ಏನಾಗಬೇಕು ನಿನಗೆ ?' ಎಂದು ಕೇಳಿದವನೇ, ಕ್ಯಾಷಿಯಸ್‌ನಿಗೂ, ದೃಢವಾಗಿ ತನ್ನ ಜೀವನಧರ್ಮದ ಬಗ್ಗೆ ಸ್ಪಷ್ಟಪಡಿಸುತ್ತಾನೆ. ''ಸಾರ್ವಜನಿಕ ಹಿತಾಸಕ್ತಿಯನ್ನು ಕುರಿತದ್ದಾದರೆ ನಾನು ಸಾವಿಗೆ ಹೆದರುವುದಕ್ಕಿಂತ ಘನತೆ, ಗೌರವಗಳಿಗೆ ಹೆಚ್ಚು ಮಹತ್ವ ನೀಡುತ್ತೇನೆ. ದೇವರೇ ಈ ನನ್ನ ನಿಲುವಿಗೆ ಶುಭ ಹಾರೈಸಬೇಕು'' ಘನತೆ, ಗೌರವ ಸಾರ್ವಜನಿಕ ಹಿತಾಸಕ್ತಿಗಳು ಇವು ಅಮೂರ್ತಗಳು. ಬದುಕಿನಲ್ಲಿ ಮೂರ್ತವಾಗಿ ಗಳಿಸಬಹುದಾದ ಅಧಿಕಾರ, ಕೀರ್ತಿ, ಸಂಪತ್ತು ಇವುಗಳನ್ನು ಉಳಿಸಿಕೊಳ್ಳಲು ಸಾವಿಗೆ ಹೆದರುತ್ತ ಬದುಕಬಹುದು. ಅಥವಾ ಅಧಿಕಾರ ಕೀರ್ತಿ ಇವು ಯಾವುವು ಇಲ್ಲದೆಯೂ ಹೇಗಾದರೂ ಬದುಕಿದ್ದರೆ ಸಾಕು ಎಂಬ ಬಯಕೆಯಲ್ಲಿ ಸಾವಿಗೆ ಹೆದರುತ್ತ ಬದುಕಬಹುದು. ಈ ಎರಡೂ ಸಂದರ್ಭಗಳಲ್ಲಿ ಗೌರವ, ಘನತೆಗಳೆಂಬ ಪ್ರಶ್ನೆಗಳೇ ಏಳುವುದಿಲ್ಲ.

ಈ ಏಳೆಂಟು ಸಾಲುಗಳಲ್ಲಿ ಬ್ರೂಟಸ್ ಮೂರು ವಿಷಯಗಳನ್ನು ಕುರಿತು ಮಾತನಾಡಿದ್ದಾನೆ. ಸೀಸರ್‌ನ ಕುರಿತಾದ ಪ್ರೀತಿ, ದೇಶದ ಬಗೆಗಿನ ಕಳಕಳಿ ಹಾಗೂ ಘನತೆಗೌರವಗಳು ಸಾವಿನ ಭಯಕ್ಕಿಂತ ಮಿಗಿಲಾದವು ಎಂಬುವು.

ಪಿತೂರಿಗೆ ಅಮೂರ್ತಗಳಲ್ಲಿ ನಂಬಿಕೆಯಿಲ್ಲ. ಇಂದ್ರಿಯಗಳಿಗೆ ಗೋಚರವಾಗದವು, ಅಳೆಯಲು, ತೂಕಮಾಡಲು ಸಿಗದ ವಸ್ತುಗಳು, ಪಿತೂರಿಯ ಮನಃಸ್ಥಿತಿಗೆ ಆಕರ್ಷಕ ವಸ್ತುಗಳಲ್ಲ. ದೇಶವನ್ನೂ ಪ್ರೀತಿಸುವ, ಸೀಸರ್‌ನನ್ನೂ ಗೌರವಿಸುವ ಬ್ರೂಟಸ್, ಕ್ಯಾಷಿಯಸ್‌ನ ಹುನ್ನಾರಗಳಿಗೆ ಒಗ್ಗಿಕೊಳ್ಳುವುದು ಬಹು ಕಷ್ಟಸಾಧ್ಯ. ಅಮೂರ್ತ ದೇಶವನ್ನೂ, ಮೂರ್ತ ಸೀಸರ್‌ನನ್ನೂ ಏಕಕಾಲದಲ್ಲಿ ಒಪ್ಪಿಕೊಳ್ಳುವ ಬ್ರೂಟಸ್, ಕ್ಯಾಷಿಯಸ್‌ನಿಗೆ ಕಬ್ಬಿಣದ ಕಡಲೆಯಾಗಿ ಕಾಣುತ್ತಾನೆ. ಬ್ರೂಟಸ್‌ನ ಸಮಚಿತ್ತದ ಈ ಮಾತುಗಳನ್ನು ಕೇಳಿದ ಮೇಲೆ ಏಣಿಯ ಏಳೆಂಟು ಮೆಟ್ಟಿಲು ಜಿಗಿದ ಉತ್ಸಾಹವು ಒಮ್ಮೆಗೇ ಹಾವಿನ ಬಾಯಿಗೆ ಸಿಕ್ಕು ತಳಕ್ಕೆ ಬಿದ್ದಂತೆ ಅನ್ನಿಸುತ್ತದೆ. ಆದರೂ ತನ್ನ ಭಾವನೆಗಳನ್ನು ತೋರಿಸಿಕೊಳ್ಳುವುದಿಲ್ಲ ಕ್ಯಾಷಿಯಸ್ ; ಪಿತೂರಿಗಾರನ ತಂತ್ರವೇ ಅದು - ಪ್ರಯತ್ನ ಮಾತ್ರ ಕೈ ಬಿಡಬೇಡ. ಮರಳಿ ಯತ್ನವ ಮಾಡು ; ಈಗಲ್ಲ, ಮರುಕ್ಷಣ, ಇಂದಲ್ಲ, ನಾಳೆ ಗೆದ್ದೇ ಗೆಲ್ಲುತ್ತೇನೆ, ಗೆಲ್ಲಲೇಬೇಕು ಎಂಬ ಹಟ ಪ್ರತಿ ಪಿತೂರಿಗಾರನಿಗೂ ಇರುತ್ತದೆ. ಮತ್ತು ಕ್ಯಾಷಿಯಸ್‌ನೊಬ್ಬ ನಯವಿನಯಗಳಿಲ್ಲದ, ಕೀಳು ಮಟ್ಟದ ಅಸಂಸ್ಕೃತನಲ್ಲ. ಮಹಾಸಾತ್ವಿಕತೆಯ ಚಾಣಾಕ್ಷ. ಎಂದೇ ಕ್ಷಣದಲ್ಲಿ ತನ್ನ ತಂತ್ರಗಾರಿಕೆ

ಬದಲಿಸುತ್ತಾನೆ. 'ನಿನ್ನಲ್ಲಿ ಇಂಥ ಗುಣವಿರುವುದನ್ನು ನಾನು ಬಲ್ಲೆ', ಹಾಗೂ ನೀನು ಕಾಣುವುದು ಕೂಡ ಹಾಗೆಯೆ 'well, honour is the subject of my story' 'ನಾನು ಹೇಳಬೇಕೆಂದಿದ್ದುದೂ ಅದೇ - ಘನತೆ ಗೌರವಗಳೇ ನನ್ನ ಕಥೆಯ ವಸ್ತು'' ಆದರೆ, ಒಂದೇ ವಾಕ್ಯವಷ್ಟೆ. 'ಘನತೆ, ಗೌರವಗಳೆಂಬುದು ಶಬ್ದಗಳಷ್ಟೆ, ಘನತೆ, ಗೌರವಗಳನ್ನು ಗೌರವಿಸುತ್ತೇನೆಯೇ ವಿನಾ ಸಾವಿಗೆ ಬೆದರುವುದಿಲ್ಲ ಎಂದ ಬ್ರೂಟಸ್‌ನ ಮಾತುಗಳೆಲ್ಲಿ? ಈಗ ಇಪೇ ಸಾವನ್ನು ಕುರಿತು ಮಾತನಾಡುವ ಕ್ಯಾಷಿಯಸ್‌ನ ಮಾತುಗಳೆಲ್ಲಿ? '....but for my single self / I had as lief not be as live to be / In awe of such a thing as I myself' *(I ii 93-95)*

ಮೂರ್ತದೊಡನೆ ಮೂರ್ತದ ಹೋಲಿಕೆ. ಹೀಗೆ ಮೂರ್ತದೊಡನೆ ಮೂರ್ತದ ಹೋಲಿಕೆ ಆರಂಭವಾದ ಕೂಡಲೆ ಮನಸ್ಸಿನಲ್ಲಿ ಹುಳಿ ಮೂಡುತ್ತ ಹೋಗುತ್ತದೆ. ಸ್ಪರ್ಧಾಮನೋಭಾವ ಬೆಳೆಯುತ್ತದೆ. ಮೇಲುಕೀಳುಗಳ ಭಾವನೆಗಳು ಹುಟ್ಟುತ್ತದೆ. ಸೋಲುಗೆಲವುಗಳ ಅಂಶ ನಮ್ಮ ಆಕರ್ಷಣೆಗಳಾಗುತ್ತವೆ. ಬ್ರೂಟಸ್‌ನ ಮಾತುಗಳನ್ನು ಒಪ್ಪುತ್ತಲೇ ಬ್ರೂಟಸ್ 'ಪ್ರೀತಿಸುತ್ತೇನೆ' ಎಂದು ಹೇಳುವ ಸೀಸರ್‌ನನ್ನು ಒಬ್ಬ ಸಾಧಾರಣ, ದುರ್ಬಲ, ಜೀವಭಯದಲ್ಲಿ ನರಳುವ ಕ್ರಿಮಿ ಎಂದು ತೋರಿಸಬೇಕಾಗಿದೆ. ಸೀಸರನೇನೂ ಆಕಾಶದಿಂದ ಇಳಿದುಬಂದ ದೈವಾಂಶ ಪುರುಷನಲ್ಲ ಎಂದು ವಾದಿಸಬೇಕಾಗಿದೆ. ಬ್ರೂಟಸ್‌ನಾಗಲಿ, ಕ್ಯಾಷಿಯಸ್‌ನಾಗಲಿ ಸೀಸರನಿಗಿಂತ ಯಾವ ಅರ್ಥದಲ್ಲಿಯೂ, ಯಾವ ದೃಷ್ಟಿಯಲ್ಲಿಯೂ ಕೀಳಲ್ಲ ಎಂದು ಸಾಧಿಸಬೇಕಾಗಿದೆ. ಅಷ್ಟೇ ಯಾಕೆ, ಸೀಸರ್‌ನೇ ತಮಗಿಂತ ಎಷ್ಟು ಕುಬ್ಜ, ಎಷ್ಟು ದುರ್ಬಲ ಎಂದೂ ಉದಾಹರಣೆಗಳ ಮೂಲಕ, ಸಾಬೀತುಗೊಳಿಸಿ ಬಿಡುತ್ತಾನೆ. ಈಜು ಸ್ಪರ್ಧೆಯಲ್ಲೊಮ್ಮೆ, ಜ್ವರ ಬಂದು ನರಳುತ್ತಿದ್ದಾಗ ಹೇಗೆ ಅಸಹಾಯಕನಾಗಿ, ಅವನು ಹೆಣ್ಣಿನಂತೆ ಕಿರಲಿದ್ದನ್ನು ಜ್ಞಾಪಕ ಮಾಡಿಕೊಂಡು ಹೇಳುತ್ತಾನೆ. ಮನಸ್ಸಿನೊಳಗೆ ಕಾಡುತ್ತಿರುವ ಸೀಸರ್‌ನ ಕುರಿತಾದ ಹುಳಿ ಎಷ್ಟು ತೀವ್ರವಾಗಿ ಅವನ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರಿದೆ ಎಂಬುದನ್ನು ಕಾಣಬೇಕಾದರೆ ಅವನು ಸೀಸರ್‌ನ ಕುರಿತಾದ ತೀರ ಕೀಳು ದರ್ಜೆಯ ಕ್ಷುಲಕ ಮಾತುಗಳನ್ನಾಡಿದಾಗ ತಿಳಿಯುತ್ತದೆ. ಸೀಸರ್‌ನಿಗೆ ಮೂರ್ಛೆರೋಗವಿದ್ದಿತೆಂದು ಇತಿಹಾಸದಲ್ಲಿಯೂ ದಾಖಲಾಗಿದೆ. ಇಂಥ ರೋಗಗಳು ಅಂಗವೈಕಲ್ಯದಂತೆ ನಮ್ಮ ಸಹಾನುಭೂತಿಗೆ ಯೋಗ್ಯವೇ ಹೊರತು ಖಂಡಿತ ಅವಹೇಳನಕ್ಕಲ್ಲ. ಆದರೆ ಆ ಕ್ಷಣದಲ್ಲಿ ಕ್ಯಾಷಿಯಸ್‌ನಿಗೆ ಎಲ್ಲವೂ ತಕ್ಕವೇ. ಏನು ಹೇಳಿದರೂ ಸರಿಯೆ ಮತ್ತು ಅವನಿಗೆ ಗೊತ್ತು - ಬ್ರೂಟಸ್‌ನನ್ನು ಗೆಲ್ಲಬೇಕಾದರೆ ಈ ತೀವ್ರತೆಯ ಅವಶ್ಯಕತೆ ಇದೆ ಎಂದು 'I did hear him groan Alas, it cried, give me some drink, Titinius like a sick girl' ಇಂಥ ಮನುಷ್ಯ, ಇಂಥ ದುರ್ಬಲ. 'Of such a feeble temper should so get the start of the majestic world and bear the palm alone' ಅವನ ಮಾತುಗಳಿಗೆ ಒತ್ತುಕೊಡುವಂತೆ ಮತ್ತೆ ನೇಪಥ್ಯದಿಂದ ಜನಗಳ ಅಬ್ಬರದ ಹರ್ಷೋದ್ಗಾರ. ಶೇಕ್ಸ್‌ಪಿಯರ್‌ನ

ನಾಟಕೀಯ ಪ್ರತಿಭೆ ಎಂಥ ಮಟ್ಟದ್ದು ಎಂಬುದಕ್ಕೆ ಇದಕ್ಕಿಂತ ಒಳ್ಳೆಯ ನಿದರ್ಶನ ಸಿಗಲಾರದು. ಸೀಸರ್‌ನ ವಿರುದ್ಧದ ಪಿತೂರಿಯ ದೃಶ್ಯದೊಡನೆ ಹಿನ್ನೆಲೆಯಲ್ಲಿ ಸೀಸರ್‌ನ ಕುರಿತಾದ ಭಕ್ತಿ ಗೌರವಗಳ ಪ್ರದರ್ಶನದ - ನಮ್ಮ ಕಣ್ಣಿಗೆ ಕಟ್ಟುವ ದೃಶ್ಯ. ಬ್ರೂಟಸ್‌ನ ಮನಸ್ಸಿನ ಹೊಯ್ದಾಟಕ್ಕೆ ಎಲ್ಲ ದಿಕ್ಕಿನಿಂದ ಕುಮ್ಮಕ್ಕು. ಈ ಬಾರಿ ಬ್ರೂಟಸ್‌ನ ಅನುಮಾನಕ್ಕೆ ಕ್ಯಾಷಿಯಸ್ ಕಿವಿಯೇ ಕೊಡದವನಂತೆ ತನ್ನದೇ ಗುಂಗಿನಲ್ಲಿ ಹಿಂದಿನ ತನ್ನ ಮಾತುಗಳನ್ನು ಮುಂದುವರೆಸುವಂತೆ ಮಾತನಾಡುತ್ತಾನೆ. 'ಕಲಾಸಸನ ಹಾಗೆ ಬೆಳೆದು ನಿಂತ ಈ ದೈತ್ಯನ ಕಾಲಡಿಯಲ್ಲಿ ಹುಳುಗಳ ಹಾಗೆ ತೆವಳಾಡಿ ಹೇಳ ಹೆಸರಿಲ್ಲದ ಗೋರಿಗಳಲ್ಲಿ ಮಣ್ಣಾಗುವದಷ್ಟೆ ನಮ್ಮ ಕರ್ಮ' ಎಂಬ ಉದಾತ್ತ ಆತ್ಮಮರುಕದಲ್ಲಿ ತೊಳಲುತ್ತಾನೆ. ಕ್ಷಣದ ನಂತರ ದಾರ್ಶನಿಕನ ಹಾಗೆ ಮಾತನಾಡುತ್ತಾನೆ. 'Men at sometime are masters of their fates/The fault, dear Brutus, is not in our stars / But in ourselves that we are underlings.' ನಮ್ಮ ಕರ್ಮವಲ್ಲ, ನಮ್ಮ ಮೇಲೆ ನಾವೇ ತಂದುಕೊಂಡ ಕುತ್ತು ಇದು, ಅಷ್ಟೆ. ಕ್ಯಾಷಿಯಸ್‌ನ ಬತ್ತಳಿಕೆಯಲ್ಲಿ ನೂರು ತಂತ್ರಗಳಿವೆ - ಪ್ರಚೋದಿಸಬಲ್ಲ, ಪುಸಲಾಯಿಸಬಲ್ಲ ; ಈಗ ಬಹುಸೂಕ್ಷ್ಮವಾಗಿ ಮುಖಸ್ತುತಿ ಮಾಡಬಲ್ಲ, ಮರುಕ್ಷಣ ಭಯಂಕರ ಆಕ್ರಮಣಶೀಲತೆಯ ಮಾತುಗಳನ್ನಾಡಬಲ್ಲ. ನಯ, ನಾಜೂಕು, ವ್ಯಂಗ್ಯ, ಚೂಪು ಎಲ್ಲವೂ ಬಲ್ಲ ಮಾತುಗಾರಿಕೆ ಇದು. ಪಿತೂರಿಗಾರನೊಬ್ಬನಿಗೆ ಅನಿವಾರ್ಯವಾಗಿ ಇರಲೇಬೇಕಾದ ಪ್ರತಿಭೆಯಿತು. ಸೀಸರ್‌ನ ಬಗ್ಗೆ ಮಾತನಾಡಿದಾಗ ಹಾಗೂ ಬ್ರೂಟಸ್‌ನ ಬಗ್ಗೆ ಮಾತನಾಡುವಾಗ ಪದೇ ಪದೇ ನಾವು ಗಮನಿಸಬೇಕಾದ ಅಂಶ - ಸರಳತೆ ಮತ್ತು ಸ್ಪಷ್ಟತೆ. ಅಂಕು ಡೊಂಕುಗಳಿಲ್ಲದ ಮಾತಿನ ರೀತಿ. ಸೀಸರನಿಗಂತೂ ಏನನ್ನೂ ಸಾಧಿಸಬೇಕಾದ ಅವಶ್ಯಕತೆಯಿಲ್ಲ, ಮುಂದೆಯೂ ಬ್ರೂಟಸ್‌ನ ಕುರಿತು ಮಾತನಾಡುವುದಕ್ಕೆ ಬಹಳಷ್ಟು ಇದೆ. 'ಸೀಸರ್ ಮತ್ತು ಬ್ರೂಟಸ್' ಏನು ವ್ಯತ್ಯಾಸ ? ಏನು ಬ್ರೂಟಸ್‌ನ ಹೆಚ್ಚುಗಾರಿಕೆ ?' ಹೀಗೆ ಹೇಳುತ್ತ, ಬ್ರೂಟಸ್‌ನ ಆತ್ಮಗೌರವ ಹಾಗೂ ಒಂದು ವಿಚಿತ್ರ ರೀತಿಯಲ್ಲಿ ಅವನ ಅಹಮಿಕೆಯನ್ನು ತಿವಿದೆಬ್ಬಿಸುತ್ತ ಕೊನೆಗೆ, ಬ್ರೂಟಸ್ 'ಎಂಥ ವಂಶಕ್ಕೆ ಸೇರಿದವನು - ಎಂಥ ಧೀರೋದಾತ್ತ ಪೂರ್ವಜರು ! ಅಂಥ ವಂಶಕ್ಕೆ ಸೇರಿದ ನೀನು ಹೀಗೆ ಮಂಕಾಗಿ ಕೂಡುವುದು ಸರಿಯೆ' ಎಂಬ ರೀತಿಯಲ್ಲಿ ಉಗ್ರವಾಗಿ ಕೆಣಕುತ್ತಾನೆ.

ಬ್ರೂಟಸ್‌ನಲ್ಲದೆ ಬೇರೆ ಯಾರು ಅವನ ಸ್ಥಾನದಲ್ಲಿದ್ದರೂ, ಈ ಬುದ್ಧಿ, ಮನಸ್ಸುಗಳ ಮೇಲೆ ನಡೆಯುತ್ತಿರುವ ಹಲ್ಲೆಗೆ ಹಣ್ಣಾಗಿ ಬಿಡಬೇಕು. ಆದರೆ ಬ್ರೂಟಸ್‌ನದು ಇವೆಲ್ಲವನ್ನೂ ಸಶಕ್ತವಾಗಿ ಎದುರಿಸಬಲ್ಲ ಗಟ್ಟಿ ಮನಸ್ಸು ; ಇಷ್ಟೂ ಮಾತುಗಳನ್ನು ಕೇಳಿಯೂ, ಒಂದಷ್ಟು ಭೀತಿಯೇ ಎನ್ನಬಹುದಾದ ಭಾವ ಹುಟ್ಟಿಸಿದ ನೇಪಥ್ಯದ ಅಬ್ಬರದ ಮಧ್ಯೆಯೂ ತನ್ನ ಸಮಚಿತ್ತತೆಯನ್ನು ಉಳಿಸಿಕೊಂಡು ಶಾಂತನಾಗಿ, ಅನುದ್ವಿಗ್ನಸ್ಥಿತಿಯಲ್ಲಿ ಮಾತನಾಡುತ್ತಾನೆ. ಈ ಇಡೀ ಹದಿನಾಲ್ಕು ಸಾಲುಗಳ ಅವನ ಮಾತುಗಳು ಬ್ರೂಟಸ್ ಎಷ್ಟು ದೊಡ್ಡಮನುಷ್ಯ ಎಂಬುದನ್ನೂ ಸ್ಥಿರವಾಗಿ ಸ್ಥಾಪಿಸುತ್ತದೆ. ಸೀಸರ್‌ನ ಬಗ್ಗೆ ಬಳಸಿದ ಶಬ್ದವನ್ನೇ ಬ್ರೂಟಸ್‌ನ

ಬಗ್ಗೆಯೂ ಬಳಸಬಹುದು - 'ಶ್ರೀಮಂತ ಮನಸ್ಸು', 'ಶ್ರೀಮಂತ ಹೃದಯ' ಚಮತ್ಕಾರಿಕೆಗಳೇ ಇಲ್ಲದ ಮಾತುಗಳು.

"That you do love me, I am nothing jealous ;
What you would work me to, I have some aim :
How I have thought of this, and of these times
I shall recount hereafter. For the present,
I would not (So with love I might entreat you)
Be any further moved
........'

ನೀನು ಹೇಳಿರುವುದನ್ನು ಕೇಳಿದ್ದೇನೆ. ನೀನು ಮುಂದೆ ಹೇಳಬೇಕೆಂದಿರುವುದನ್ನು ಕೇಳುತ್ತೇನೆ. ಹಾಗೆ ಕೇಳುವುದಕ್ಕೆ ಮತ್ತು ನಾನು ಪ್ರತಿಕ್ರಿಯಿಸುವುದಕ್ಕೆ ಸೂಕ್ತ ಸಮಯ ಎದುರು ನೋಡೋಣ.

Till then, my noble friend, chew upon this:
Brutus had rather be a villager
Than to repute himself a son of Rome
Under these hard conditions as this time
Is like to lay upon us"

ಬಹು ಸೂಚ್ಯವಾಗಿ ತಾನು ಕೂಡ ಈ ಸದ್ಯದ ರಾಷ್ಟ್ರದ ರಾಜಕೀಯ ಸ್ಥಿತಿಯಲ್ಲಿ ತಟಸ್ಥವಾಗಿ ಇರಲು ಸಾಧ್ಯವಿಲ್ಲ ಎಂದು ಹಿಂದಿನ ಮಾತುಗಳಷ್ಟೇ ಗಂಭೀರವಾಗಿ ಹೇಳುತ್ತಾನೆ. ನಿರೀಕ್ಷಿಸಿದ ಮಟ್ಟದಲ್ಲಿ ತನಗೆ ಯಶಸ್ಸು ಸಿಗಲಿಲ್ಲವೆಂಬ ನಿರಾಸೆ ಧ್ವನಿಯಲ್ಲಿ ಕಂಡರೂ ಕ್ಯಾಷಿಯಸ್ ದೂರದಲ್ಲಿ ಮಿಣುಕುಬೆಳಕು ಕಂಡಂತೆ ಹೇಳುತ್ತಾನೆ.

I am glad
That my weak words have struck but thus much show of fire
from Brutus.

ನಾಟಕದಲ್ಲಿ ಮೊದಲ ಬಾರಿಗೆ ಸೀಸರ್‌ನನ್ನು ಪರಿಚಯ ಮಾಡಿಸಿದ ಬಗೆಗೆ ಈಗಾಗಲೇ ಒಂದೆರಡು ಮಾತು ಹೇಳಿ ಆಗಿದೆ. ಈಗ ಅದೇ ದೃಶ್ಯದಲ್ಲಿ ಎರಡನೇ ಬಾರಿಗೆ - ಅಂದರೆ ಲುಪೆರ್ಕಲ್ ಉತ್ಸವದಲ್ಲಿ ಭಾಗವಹಿಸಿದ ನಂತರ ಹಿಂತಿರುಗುವಾಗ ಕಾಣಿಸಿಕೊಳ್ಳುತ್ತಿದ್ದಾನೆ. ಅವನ ಹಿಂದೆ ಅವನ ಪರಿವಾರವಿದೆ. ಇಲ್ಲಿ ಒಂದು ಅತ್ಯಂತ ಮಹತ್ವದ - ಜಾಗರೂಕರಾಗಿಲ್ಲದಿದ್ದರೆ - ನಮ್ಮ ಕಣ್ತಪ್ಪಿಸಿ ಬಿಡಬಹುದಾದ ಒಂದು ಸಂಗತಿಯಿದೆ.

ಸೀಸರ್‌ನು ಮರಳುತ್ತಿದ್ದಾನೆ ಎಂದು ಹೇಳಿದ ಬ್ರೂಟಸ್‌ನಿಗೆ, ಕ್ಯಾಷಿಯಸ್ ಬಹು ಸಹಜವಾಗಿ ಒಂದು ಸೂಚನೆ ನೀಡುತ್ತಾನೆ. "Pluck Casca by the sleeve / And he will (after his sour fashion) tell you what hath proceeded worthy note today" ಇದು ಗಮನಾರ್ಹವಾದ, ಮಹತ್ವದ ಸಂಗತಿ ಏಕಾಗುತ್ತದೆಂದರೆ, ಒಂದು : ತಾನಾಗಿಯೇ ಕಾಸ್ಕಾನನ್ನು ಹಿಡಿದು ನಿಲ್ಲಿಸಬಹುದಾದದ್ದನ್ನು ಬ್ರೂಟಸ್‌ನಿಗೆ ಹೇಳಿ ಮಾಡಿಸುತ್ತಿರುವುದು ; ಎರಡು : 'ಕಾಸ್ಕಾನನ್ನು ಒಂದು ಕ್ಷಣ ಇಲ್ಲಿಗೆ ಕರೆ, ಅವನೊಡನೆ ಒಂದು ಕ್ಷಣ ಮಾತನಾಡೋಣ' ಎಂಬ ಮಾತುಗಳನ್ನು ಅವನು ಆಡುವುದು. ಅವನು ಬಳಸುವ ಶಬ್ದಗಳು 'pluck Casca by the sleeve', ಯಾರಿಗೂ ಗೊತ್ತಾಗದಂತೆ, ಬೆನ್ನು ತಿರುಗಿಸಿ ಅತ್ತ ನಡೆದು ಹೋಗುತ್ತಿರುವ ಮತ್ತೆ ಯಾರಿಗೂ ತಿಳಿಯದ ಹಾಗೆ ಪರಿವಾರದಿಂದ ಬೇರ್ಪಡಿಸಲು "pluck Casca by the sleeve." ಇದು ಒಂದು ಪಿತೂರಿಯ ಜಾಲ ಹೇಗೆ ಹರಡುತ್ತಿದೆ ಎಂಬುದಕ್ಕೆ ಸೂಚನೆ; ಮತ್ತು ಬಹು ಮುಖ್ಯವಾಗಿ ಮೂರನೇ ಕಾರಣ : ಈ ಕ್ಯಾಷಿಯಸ್‌ನ 'ಬಹು ಸಹಜ'ವಾಗಿ ಕಾಣುವ ಸಲಹೆಗೆ ಅಷ್ಟೇ ಸುಲಭವಾಗಿ, ಕ್ಷಣವೂ ಚಿಂತಿಸದೆ "I will do so" ಎಂಬ ಬ್ರೂಟಸ್‌ನ ಒಪ್ಪಿಗೆ. ಕ್ಯಾಷಿಯಸ್ ತಾನು ಬೀಸಿದ ಬಲೆಯಲ್ಲಿ ತುತ್ತ ತುದಿಯ ಅಂಚೇ ಆಗಿರಬಹುದು - ಬ್ರೂಟಸ್‌ನನ್ನು ಸೆಳೆದುಕೊಂಡಂತಾಯಿತೆ ಹಾಗಾದರೆ ? ಸೀಸರ್ ಕೊಂಚ ವ್ಯಗ್ರವಾಗಿ ಕಾಣುತ್ತಿದ್ದಾನೆ. ಮತ್ತೆಲ್ಲರೂ ಛೀಮಾರಿ ಹಾಕಿಸಿಕೊಂಡ ಮಕ್ಕಳ ಹಾಗೆ ಕಾಣುತ್ತಿದ್ದಾರೆ. ಕಾಸ್ಕಾ ಇವಕ್ಕೆಲ್ಲ ನಂತರ ವಿವರಣೆಗಳು ನೀಡುತ್ತಾನೆ.

ಸೀಸರ್ ರಂಗಪ್ರವೇಶ ಮಾಡಿದ ಕೂಡಲೆ ಅವನ ಕಣ್ಣಿಗೆ ಬೀಳುವುದು ಕ್ಯಾಷಿಯಸ್ ಮತ್ತು ಬ್ರೂಟಸ್ ಒಟ್ಟಿಗೆ ನಿಂತಿರುವುದು - ದೂರದಲ್ಲಿ - ಇಬ್ಬರೇ. ಸೀಸರ್ ಆಡುವ ಮೊದಲ ಮಾತುಗಳು ಕೂಡ ಕ್ಯಾಷಿಯಸ್‌ನನ್ನು ಕುರಿತೇ. ಬ್ರೂಟಸ್‌ನಿಗೆ ಕಂಡ, ಹುಬ್ಬುಗಂಟಿಕ್ಕಿದ ಮುಖದಿಂದ ಹೊರಡುವಂಥ ಮಾತುಗಳಲ್ಲ.

> 'Let me have men about me that are fat'
>
> ......
>
> Yond Casis has a lean and hungry look:
> He thinks too much : such men are dangerous'

ಕೇವಲ ಸಮಯ ಕಳೆಯಲಾಡಿದ ಮಾತುಗಳಿರಲಿಕ್ಕಿಲ್ಲ ಇವು. ಆಂಟನಿಯ ಎದುರು ಒಂದಷ್ಟು ತನ್ನ ವ್ಯಕ್ತಿತ್ವಮಾಪನ ಪ್ರತಿಭೆಯನ್ನು ಪ್ರದರ್ಶಿಸುವುದಕ್ಕಾಗಷ್ಟೇ ಅಲ್ಲ. 'He thinks too much : such men are dangerous' ಎಂಬುವಾಗ ಕ್ಯಾಷಿಯಸನ ಅಪಾಯಕ್ಕಿಂತ ಹೆಚ್ಚಿಗೆ ಬ್ರೂಟಸನಂಥ ವ್ಯಕ್ತಿ ಅವನೊಡನೆ ಇಷ್ಟು ಗೋಪ್ಯವಾಗಿ ನಿಂತಿರುವುದು - ಲುಪೆರ್ಕಲ್ ಉತ್ಸವಕ್ಕೂ ಹಾಜರಾಗದ್ದನ್ನು ಸೀಸರ್ ಗಮನಿಸಿದ್ದಿರಬಹುದು - ಹೆಚ್ಚು ಆತಂಕ ಹುಟ್ಟಿಸಿದೆಯೆ

ಎಂದು ನಮಗೆ ಅನ್ನಿಸಿದರೆ ತಪ್ಪೇನು ? ಆಂಟನಿ ಈ ಮಾತುಗಳಿಗೆ ಉತ್ತರವಾಗಿ "....he is not a dangerous / He is a noble Roman, and well given', ಆದ್ದರಿಂದ 'fear him not' ಅಂದ ಕೂಡಲೆ ಸೀಸರ್ ಸಹಜಸ್ಥಿತಿಯಿಂದ ಒಂದು ಕ್ಷಣ ಸರಿದಂತೆ ಕಂಡವನು ಮರುಕ್ಷಣ ಸಾವರಿಸಿಕೊಂಡು 'would he were fatter....' ಎಂದು ಮುಂದುವರೆಯುತ್ತ ಪ್ರಾಮಾಣಿಕವಾಗಿ ಒಂದು ಮಾತು ಸೇರಿಸುತ್ತಾನೆ : "But I fear him not / Yet if my name were liable to fear / I do not know the man I should avoid / so soon as that spare Cassius" ಅವನ ವ್ಯಕ್ತಿತ್ವದಲ್ಲಿಯೇ ಅಪಾಯಕಾರಿ ಎನಿಸುವಂಥ ಲಕ್ಷಣಗಳಿವೆ. ಆದರೆ 'I rather tell thee what is to be feared / Than what I fear; for I am always Caesar' ಎಂದು ಆಂಟನಿಗೂ ಮತ್ತು ತನಗೂ ಹೇಳಿಕೊಂಡಂತೆ ಆತ್ಮ ವಿಶ್ವಾಸದ ಅಭಿಮಾನದ ಮಾತು ಆಡುತ್ತಾನೆ. ಹಲವು ಬಾರಿ - ಉದಾಹರಣೆಗೆ ಈ ಸಂದರ್ಭದಲ್ಲಿ ಕೂಡ ಸೀಸರ್ ಸ್ವಾಭಿಮಾನದ ವ್ಯಕ್ತಿಯೋ ಅಥವಾ ಭಯಂಕರ ದುರಹಂಕಾರದ ಮನುಷ್ಯನೋ ಎಂಬ ಅನುಮಾನ ಹುಟ್ಟಿಬಿಡುವಂತೆ ನಡೆದುಕೊಳ್ಳುತ್ತಾನೆ. 'I am always Caesar' ಎಂಬ ಮಾತು ಯಾವ ಲೆಕ್ಕದಲ್ಲಿಯೂ ವಿನಯದ ಮಾತಲ್ಲ. ಆದರೆ ಇದು ಉಗ್ರ ಅಹಮಿಕೆಯ ಲಕ್ಷಣವೋ ಅಥವಾ ಇಷ್ಟರವರೆವಿಗೆ ಅವನ ಬಗ್ಗೆ ಹೇಳಿಕೊಂಡು ಬರುತ್ತಿರುವ ಶ್ರೀಮಂತ ವ್ಯಕ್ತಿತ್ವದ ಅಭಿವ್ಯಕ್ತಿಯೊ ? ಈ ಅನುಮಾನ ತೀವ್ರವಾಗಿ ಕಾಡುವುದಕ್ಕೆ ಎಡೆಯೇ ಮಾಡಿಕೊಡದ ರೀತಿಯಲ್ಲಿ ಶೇಕ್ಸ್‌ಪಿಯರನೇ ಪರಿಹರಿಸಿ ಬಿಡುತ್ತಾನೆ. ಕ್ಯಾಷಿಯಸ್‌ನ ಬಗ್ಗೆ ಆಡಿದ ಮಾತುಗಳು ಮತ್ತು ತನ್ನ ಆತ್ಮವಿಶ್ವಾಸದ ಘೋಷಣೆಗಳ ನಂತರ, ಆಂಟನಿಯೊಂದಿಗೆ ರಂಗದಿಂದ ನಿಷ್ಕ್ರಮಿಸುತ್ತ ಅವನು ಆಡುವ ಮಾತುಗಳು ಸೀಸರನೊಬ್ಬ ಶ್ರೀಮಂತಮನಸ್ಕನಷ್ಟೇ ಅಲ್ಲ ತೀರ ಸರಳ, ಮುಗ್ಧಪ್ರಾಣಿ ಎಂದೂ ಸಾರಿಬಿಡುತ್ತದೆ. "Come on my right hand, for this ear is deaf / And tell me truly what you thinks't of him." ತನ್ನ ದೈಹಿಕ ಊನಗಳ ಬಗ್ಗೆ ಯಾವ ಅಧಿಕಾರಸ್ಥ ಮನುಷ್ಯನೂ ಒಪ್ಪಿಕೊಳ್ಳುವುದಿಲ್ಲ. ಸರ್ವಾಧಿಕಾರಿಯಾದವನಂತೂ ತಾನು ಸರ್ವಾಂಗ ಸಂಪೂರ್ಣನೆಂದೇ ನಂಬುವುದಷ್ಟೇ ಅಲ್ಲ, ಇಡೀ ಜಗತ್ತು, ಹಾಗೆಯೇ ನಂಬಬೇಕೆಂದು ಬಯಸುತ್ತಾನೆ. ಹೀಗಿರುವಾಗ '....for this ear is deaf' ಎಂದು ಸ್ಪಷ್ಟವಾಗಿ, ಮುಜುಗರಗಳೇ ಇಲ್ಲದೆ ತನಗಿಂತ ಬಹಳಷ್ಟು ಕಿರಿಯ, ಆರೋಗ್ಯವಂತ, ಲಕ್ಷಣವಂತ ಹಾಗೂ ಕ್ರೀಡಾಪಟು ಆಂಟನಿಯ ಎದುರು ಹೇಳಿಕೊಳ್ಳುವ ಸೀಸರ್ ಒಮ್ಮೆಗೇ ನಮಗೆ ಬಹು ಹತ್ತಿರವಾಗಿಬಿಡುತ್ತಾನೆ. ಆಪ್ತನಾಗಿ ಬಿಡುತ್ತಾನೆ. ಪ್ರಿಯನೂ ಆಗಿ ಬಿಡುತ್ತಾನೆ. ಶೇಕ್ಸ್‌ಪಿಯರ್ ಎಷ್ಟು ಸೂಕ್ಷ್ಮ ನಿದರ್ಶನಗಳನ್ನು ಕೊಡುತ್ತ ಸೀಸರ್‌ನ ವ್ಯಕ್ತಿತ್ವವನ್ನು ನಮಗೆ ನೀಡುತ್ತ ಹೋಗುತ್ತಾನೆ ಎಂಬುದನ್ನು ನಾವು ಗಮನಿಸಬೇಕು. ಇಲ್ಲಿಯೂ ಅಷ್ಟೆ - ನಾವು ತೀರ ಜಾಗರೂಕರಾಗಿಲ್ಲದಿದ್ದರೆ ಈ ಮಾತು ನಮ್ಮನ್ನು ಸೆಳೆಯದೆ ಜಾರಿ ಮರೆಯಾಗಿ ಬಿಡುತ್ತದೆ.

ಮುಂದಿನ ಭಾಗ ಬ್ರೂಟಸ್ - ಕ್ಯಾಷಿಯಸ್ ಮತ್ತು ಕಾಸ್ಕಾ ಇವರುಗಳನ್ನು ಒಳಗೊಂಡದ್ದು. ಕಾಸ್ಕಾನೊಂದಿಗೆ ಹೆಚ್ಚಿಗೆ ಮಾತನಾಡುವುದು ಬ್ರೂಟಸನೆ ; ಹೀಗೆ ಬ್ರೂಟಸನನ್ನೇ ಮುಂದೆ ಬಿಟ್ಟು ತಾನು ಹಿನ್ನೆಲೆಯಲ್ಲಿ ನಿಂತು, ಆಗೊಮ್ಮೆ ಈಗೊಮ್ಮೆ ಸಂದರ್ಭಕ್ಕೆ ಮತ್ತಷ್ಟು ಒತ್ತು ಕೊಡಲೋ ಎಂಬಂತೆ ಒಂದೆರಡು ಮಾತುಗಳು ಮಾತ್ರ ಆಡುವ ಕ್ಯಾಷಿಯಸನ ಈ ವರ್ತನೆಯೂ ಕೂಡ ಅವನ ಪೂರ್ವಯೋಜಿತ ಲೆಕ್ಕಾಚಾರದ ಚದುರಂಗದಾಟವೆ ಇರಬಹುದೆ ? ಲುಪೆರ್ಕಲ್ ಉತ್ಸವದಲ್ಲಿ ಪ್ರತ್ಯಕ್ಷದರ್ಶಿಯಾಗಿ ಭಾಗವಹಿಸಿದ್ದವನು ಕಾಸ್ಕಾ. ಬಾರಿಬಾರಿಗೆ ಜನಗಳ ಹರ್ಷೋದ್ಗಾರಗಳನ್ನು ಕೇಳಿ "I do fear the people / Choose Caesar for their king' ಎಂದು ಉದ್ಗರಿಸಿದ್ದ ಬ್ರೂಟಸನಿಗೆ ಏನು ನಡೆಯಿತು ಎಂದು ತಿಳಿದುಕೊಳ್ಳುವ ಕುತೂಹಲ, ಬಹುಶಃ ಆತುರವೂ ಕೂಡ. ಕಾಸ್ಕಾನ ಉತ್ತರಗಳ ಶೈಲಿಯಲ್ಲಿಯೆ ಸೀಸರನ ಕುರಿತಾದ ಅಸಮಾಧಾನ, ಅಸಹನೆಗಳು ಮತ್ತು ಜನಸಾಮಾನ್ಯರ ಬಗ್ಗೆ ತಿರಸ್ಕಾರ ಸ್ಪಷ್ಟವಾಗುತ್ತ ಹೋಗುತ್ತದೆ. ಅವನ ಧ್ವನಿ, ಶೈಲಿಗಳೂ ಕೂಡ ಬ್ರೂಟಸನ ಮನಃಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವುದರಲ್ಲಿ ಯಶಸ್ವಿಯಾಗುತ್ತದೆ. 'ಹೌದು ಮೊದಲ ಬಾರಿ, ಎರಡನೆ ಬಾರಿ, ಮೂರು ಬಾರಿ ನೀವು ಕೇಳಿದ ಜನಗಳ ಹರ್ಷೋದ್ಗಾರವು ಸೀಸರನು ತನಗೆ ತೊಡಿಸಲು ಬಂದ ಕಿರೀಟವನ್ನು ನಿರಾಕರಿಸಿದ್ದಕ್ಕಾಗಿ ''ಮೂರು ಬಾರಿ?'' ''ಹೌದು'' ತೊಡಿಸಲು ಹೊರಟವರು ಯಾರು ? ''ಆಂಟನಿ''. ಬ್ರೂಟಸನಿಗೆ ಇನ್ನೂ ಸಮಾಧಾನವಿಲ್ಲ. 'ವಿವರವಾಗಿ ಹೇಳು' ಎಂದು ಕೇಳುತ್ತಾನೆ. ಕಾಸ್ಕಾ ಬಾಯಲ್ಲಿ ಈಗ ಹೊರಡುವುದು ಗದ್ಯಸ್ವರೂಪದ ಕಹಿ ಹುಳಿಗಳೆಲ್ಲ ಧಾರಾಳವಾಗಿ ಬೆರೆತ ಮಾತುಗಳು. 'ಪ್ರತಿಬಾರಿ ಸೀಸರ್‌ನು ಕಿರೀಟವನ್ನು 'ಒಲ್ಲೆ' ಎಂದಾಗಲೂ ಕಿರೀಟದಿಂದ ತನ್ನ ಕೈಗಳನ್ನು ಮಾತ್ರ ಬಿಡಲಾರದವನಂತೆ' ಕಂಡ. ಅಸಹ್ಯದ ದೃಶ್ಯ. ಸುತ್ತಲ ಜನಗಳಂತೂ ಹೇಸಿಗೆ. ಈ ಜನ ಹರ್ಷೋದ್ಗಾರ ಮಾಡಿದಾಗಲೆಲ್ಲಾ, ಗಮಟು ಟೋಪಿಗಳನ್ನು ಎತ್ತಿ ಹಾರಿಬಿಟ್ಟಾಗಲೆಲ್ಲ ಹೊಮ್ಮುತ್ತಿದ್ದ ದರಿದ್ರ ನಾತಕ್ಕೆ ಉಸಿರುಕಟ್ಟಿ ಸೀಸರ್ ಮೂರ್ಛೆಹೋದ. ''ಹೌದು, ಸಾಧ್ಯವಿದೆ ; he hath falling sickness" ಎಂದು ಸಹಾನುಭೂತಿ ವ್ಯಕ್ತಪಡಿಸಿದ ಬ್ರೂಟಸನಿಗೆ ಉತ್ತರವಾಗಿ ಕ್ಯಾಷಿಯಸ್ ಮಾರ್ಮಿಕವಾಗಿ, ವ್ಯಂಗ್ಯಪೂರ್ಣವಾಗಿ ಹೇಳುತ್ತಾನೆ. "No Caesar hath it not ; but you, and I / And honest Casca, we have the falling sickness." 'ಪತನದ ರೋಗ ಅಂಟಿಕೊಂಡಿರುವುದು ನಮಗೆ, ಅವನಿಗಲ್ಲ.' ಕಾಸ್ಕಾನಿಗೆ ಈ ಮಾತುಗಳು ಅರ್ಥವೂ ಆಗುವುದಿಲ್ಲ, ಅರ್ಥಮಾಡಿಕೊಳ್ಳಬೇಕೆಂಬ ಇಚ್ಛೆಯೂ ಇಲ್ಲ. ಅವನಿಗೆ ತನ್ನ ಸಿನಿಕತನದ ವಿವರಣೆಯಷ್ಟೆ ಮುಖ್ಯ. ''ದೊಂಬಿ, ಕಂಪುಗಳ ಮಧ್ಯದಲ್ಲಿ ಸೀಸರ್ ಮೂರ್ಛೆಯಿಂದ ಎಚ್ಚೆತ್ತ ನಂತರ ಒಂದು ಅದ್ಭುತ ಭಾವಾವೇಶದ ನಾಟಕವಾಡಿದ. ತನ್ನ ಕವಚವನ್ನು, ವಸ್ತ್ರವನ್ನು ಕಳಚಿ ಎದೆಯನ್ನು ಜನಗಳಿಗೆ ತೋರುತ್ತ ''ನಾನು ಏನಾದರೂ ಆಡಬಾರದ್ದು ಆಡಿದ್ದರೆ ಅಥವಾ ಮಾಡಿದ್ದರೆ ತನ್ನನ್ನು ಯಾರು ಬೇಕಾದರೂ ಇರಿದು ಕೊಲ್ಲಬಹುದು'' ಎಂದು ಸಾರಿದ ; ಅವನ

ಮಾತನ್ನು ಗಂಭೀರವಾಗಿ ತೆಗೆದುಕೊಂಡು ತಾನೇ ಈ ಕೆಲಸ ಮಾಡಿಬಿಡಬೇಕಿತ್ತು ಎಂದು ಕೂಡ ತನ್ನ ಮನಸ್ಸನ್ನು ಹಾದು ಹೋಯಿತು ಎಂದೂ ಹೇಳಿದ. ಮಾತು ಮುಗಿಸುವುದಕ್ಕೆ ಮುಂಚೆ ''ಸೀಸರನ ಪ್ರತಿಮೆಗಳ ಮೇಲಿನ ಗೌರವವಸ್ತ್ರಗಳನ್ನು ಕಿತ್ತುಬಿಸುಟಿದ್ದಕ್ಕಾಗಿ ಮರುಲಸ್ ಮತ್ತು ಫ್ಲೇವಿಯಸ್ ಅವರುಗಳನ್ನು ಮುಗಿಸಲಾಗಿದೆ'' ಎಂಬ ವರ್ತಮಾನ ತಿಳಿಸಿದ. ಈ ಮಾತು ಓದಿದ ಕೂಡಲೆ ಹಾಗಾದರೆ ಸೀಸರನು ಸರ್ವಾಧಿಕಾರಿಯೇ ಇರಬೇಕು ಎಂಬ ತೀರ್ಮಾನಕ್ಕೆ ಕಾಸ್ಕಾ, ಕ್ಯಾಷಿಯಸ್ ಬರುವ ಹಾಗೆ, ಹೌದೆ, ಇರಬಹುದೆ ಎಂದು ಸಂಶಯಪಡುವ ಬ್ರೂಟಸನ ಹಾಗೆ, ನಾವು ಕೂಡ ತೀವ್ರವಾಗಿ ಅಚ್ಚರಿ, ಅನುಮಾನಗಳನ್ನು ಪಡುವುದು ಸಹಜ. ಶೇಕ್ಸ್‌ಪಿಯರ್ ಈ ಇಡೀ ಪ್ರಕರಣವನ್ನು ಒಂದು ವಾಕ್ಯದಲ್ಲಿ ಕಾಸ್ಕಾನ ಬಾಯಿಯಲ್ಲಿ ಆಡಿಸಿ ಅಲ್ಲಿಯೇ ಬಿಟ್ಟು ಬಿಡುತ್ತಾನೆ. ಹಾಗೆಂದು ನಾವು ಕೂಡ ಅಷ್ಟೇ ಅವಸರದಲ್ಲಿ ಈ ಸಂಗತಿಗಳನ್ನು ಬಿಟ್ಟು ಮುಂದೆ ಹೋಗಿಬಿಡುವುದು ಸರಿಯಾಗುವುದಿಲ್ಲ. ಕಾಸ್ಕಾ ಆಡಿದ್ದು ಒಂದು ಬಿಟ್ಟರೆ, ಇದಕ್ಕೆ ಬೇರೆ ಪುರಾವೆಗಳು ಇಲ್ಲ ಎಂಬುದು ಒಂದು ವಿಷಯವಾದರೆ, ಮತ್ತೊಂದು, ಹಾಗೊಮ್ಮೆ ಅವರನ್ನು ಮುಗಿಸಿಬಿಟ್ಟಿರುವುದು ನಿಜವಾದರೂ ಈ ಕ್ರಮಕ್ಕೆ ಸೀಸರನು ಎಷ್ಟರ ಮಟ್ಟಿಗೆ ಹೊಣೆಗಾರನಾಗುತ್ತಾನೆ ಎಂಬುದೂ ನಮಗೆ ತಿಳಿಯುವುದಿಲ್ಲ. ನಾಡ ಪ್ರಮುಖರ ಗಮನಕ್ಕೆ ಬಾರದೆಯೇ, ಅವನ ಉತ್ಸಾಹೀ ಬೆಂಬಲಿಗರು ಅವನ ಬೆನ್ನು ಹಿಂದೆಯೇ ಕೆಲವು ಅಕೃತ್ಯಗಳನ್ನು ಮಾಡಿರಬಹುದಾದ ಸಾಧ್ಯತೆಗಳು ಇವೆ. ಸೀಸರನ ಪರವಾಗಿ ಕಾಣುವ ವಾದಕ್ಕೆ ಮುಂದಿನ ದೃಶ್ಯಗಳಲ್ಲಿ ಅವನು ನಡೆದುಕೊಳ್ಳುವ ರೀತಿಯೇ ಮತ್ತಷ್ಟು ಸಾಕ್ಷ್ಯ ಒದಗಿಸುತ್ತದೆ.

ಈ ದೃಶ್ಯದ ಕುರಿತಾದ ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಒಂದೆರಡು ಅಂಶಗಳನ್ನು ಗಮನಿಸಬಹುದು.

ಈ ದೃಶ್ಯದ ಅಂದರೆ ಮೊದಲ ಅಂಕದ ಎರಡನೇ ದೃಶ್ಯದ ಆರಂಭದಲ್ಲಿ, ಸೀಸರನ ಇಪ್ಪತ್ತೈದು ಸಾಲುಗಳ ದೃಶ್ಯದಲ್ಲಿ ಅವನ ಹಿಂದೆ ಅತಿವಿನೀತ ಅಭಿಮಾನಿಗಳ ಹಾಗೆ ನಡೆದುಕೊಳ್ಳುವುದು ಕ್ಯಾಷಿಯಸ್ ಮತ್ತು ಕಾಸ್ಕಾ. ಬ್ರೂಟಸನಲ್ಲ; ಆಶ್ಚರ್ಯವೆಂದರೆ ಆಂಟನಿ ಕೂಡ ಅಲ್ಲ. ಅತಿ ದೈನ್ಯದ ದಾಸಾನುದಾಸರಾಗಿ ವರ್ತಿಸುವ ಇವರಿಬ್ಬರೇ ಇಡೀ ದೃಶ್ಯದ ಮಿಕ್ಕ ಭಾಗದಲ್ಲಿ ಸೀಸರನ ವಿರುದ್ಧ ವಿಷಕಾರುವುದು. ಮತ್ತೊಂದು ಅಂಶವೆಂದರೆ - ಕೊಂಚ ವಿಷಾದಕರವೇ ಅನ್ನಿಸಬಹುದಾದ - ದೃಶ್ಯದ ಅಂತ್ಯಭಾಗದಲ್ಲಿಯ ಬ್ರೂಟಸನ ನಡವಳಿಕೆ. ಕಾಸ್ಕಾನಂಥ ಒಬ್ಬ ಸಾಧಾರಣ, ಒಗರು ಕಹಿಗಳ ಸಿನಿಕನೊಡನೆ ಸಮಾನನ ಹಾಗೆ ನಡೆದುಕೊಳ್ಳುವ ಅನಿವಾರ್ಯವನ್ನು ತಂದುಕೊಂಡುದು. ಇಡೀ ನಾಟಕದಲ್ಲಿ - ಪ್ರತಿ ಘಟ್ಟದಲ್ಲಿಯೂ - ಬ್ರೂಟಸ್ ಒಬ್ಬನೇ ಸೀಸರನೊಡನೆ ಹೋಲಿಕೆಗೆ ಅರ್ಹನಾದ ಶ್ರೀಮಂತಮನಸ್ಸಿನ ವ್ಯಕ್ತಿ ಎಂದು ನಾವು ಕಂಡುಕೊಳ್ಳುವುದು ನಿಜವಾದರೂ ಕಾಸ್ಕಾನೊಡನೆ ನಡೆಯುವ ದೃಶ್ಯ ಕೊಂಚ ನಿರಾಸೆಗೊಳಿಸುವುದಂತೂ ನಿಜ. ಕ್ಯಾಷಿಯಸ್ ಹೇಳುವ 'Falling

sickness'ನ ಇನ್ನೂ ಒಂದು ಅರ್ಥ ಇಲ್ಲಿ ಕಾಣಬಹುದು. ಕ್ಯಾಷಿಯಸ್ ಆಡುತ್ತಿರುವ ಹಾವು-ಏಣಿ ಆಟದಲ್ಲಿ ಕೊನೆಗೂ ಏಣಿಯ ಮೆಟ್ಟಿಲುಗಳು ಏರಿದ್ದು ಕ್ಯಾಷಿಯಸ್ ಹಾಗೂ ಹಾವಿನ ಬಾಯಿಗೆ ಸಿಕ್ಕಿ ಕೆಳಗೆ ಉರುಳಿದ್ದು ಬ್ರೂಟಸನೇ ಎಂಬ ಅನುಮಾನ ಕಾಡುವುದೂ ನಿಜ. ಈ ನಮ್ಮ ಅನುಮಾನಕ್ಕೆ ಪೂರಕವಾಗಿ ಬ್ರೂಟಸನ ನಿಷ್ಕ್ರಮಣದ ನಂತರ ಕ್ಯಾಷಿಯಸ್ ಆಡುವ ಸ್ವಗತದ ನುಡಿಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ.... '....For who so firm that cannot be seduced?' 'noble' ಮತ್ತು 'honourable' ಆದ ಬ್ರೂಟಸನು ಬೇರೆ ಅಂಥದೇ ಮನಸ್ಸಿನವರೊಡನೆ ಬೆರೆಯಬೇಕು. ಕ್ಯಾಷಿಯಸ್‌ನ ನಿಘಂಟುವಿನಲ್ಲಿ 'noble' ಮತ್ತು 'honourable' ಶಬ್ದಗಳಿಗೆ ಅರ್ಥಗಳೇನು ? 'noble' ಮತ್ತು 'honourable' ಕ್ರಿಯೆಗಳು ಎಂಥವು ? ಬ್ರೂಟಸನ ಮನೆಯ ಕಿಟಕಿಗಳಿಂದ ಅನಾಮಧೇಯ ಪತ್ರಗಳನ್ನು ಹಲವು ಕೈ ಬರಹಗಳಲ್ಲಿ ತಯಾರಿಸಿ ತೂರಿ ಬಿಡಬೇಕು. ರೋಮ್‌ನ ಜನತೆ ಬ್ರೂಟಸನನ್ನು ಎಷ್ಟು ಗೌರವಿಸುತ್ತಾರೆ ಎಂದು ಹೇಳುವ ಉಸಿರಲ್ಲೇ ಸೀಸರನ ಮಹತ್ವಾಕಾಂಕ್ಷೆಗಳ ಕುರಿತಾಗಿಯೂ ಸೂಚಿಸಬೇಕು. ನಂತರ ನೋಡೋಣ, ಸೀಸರ್ ಎಷ್ಟು ಗಟ್ಟಿಯಾಗಿರಲು ಸಾಧ್ಯವೆಂದು. 'For we will shake him, or worse days endure'. ಇವೇ ಕ್ಯಾಷಿಯಸ್‌ನ 'noble' ಮತ್ತು 'honourable' ಶಬ್ದಗಳಿಗೆ ಅರ್ಥ.

ಮೊದಲ ಅಂಕದ ಮೂರನೆಯ ಹಾಗೂ ಕೊನೆಯ ದೃಶ್ಯದಲ್ಲಿ ರೋಮ್‌ನಲ್ಲಿ ಪ್ರಕೃತಿಯ ಅತಿಮಾನುಷ ಸ್ವರೂಪದ ದರ್ಶನದ ವಿವರಗಳಿವೆ. ಶೇಕ್ಸಪಿಯರನ ಕುರಿತಾದ ಎಲ್ಲ ಚರ್ಚೆಗಳಲ್ಲಿ - ವಿಶೇಷವಾಗಿ ಬಹು ವೈಜ್ಞಾನಿಕ ಯುಗವೆಂದು ಕರೆದುಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ - ಅವನ ನಾಟಕಗಳಲ್ಲಿ ಪದೇ ಪದೇ, ವಿವಿಧ ರೂಪದಲ್ಲಿ ಚಿತ್ರಿಸಲಾಗಿರುವ ಈ ಅತಿಮಾನುಷತೆಯು ಬಹು ಪ್ರಮುಖ ಅಂಶವಾಗಿರುತ್ತದೆ. ಶೇಕ್ಸ್‌ಪಿಯರ್ ವೈಯಕ್ತಿಕವಾಗಿ ಈ ಅತಿಮಾನುಷತೆಯನ್ನು ನಂಬಿದ್ದನೆ ? ವೈಚಾರಿಕ ಮನಸ್ಸಿಗೆ ಈ ಬಗ್ಗೆ ಹೇಗೆ ನಂಬಿಕೆ ಬರಲು ಸಾಧ್ಯ ಹಾಗೂ ನಂಬಿಕೆ ಬಾರದೆ ಹೋದ ಮೇಲೆ ನಾಟಕವು ಒಟ್ಟು ಪರಿಣಾಮ ಬೀರುವುದರಲ್ಲಿ ಸೋತಂತೆ ಆಗಲಿಲ್ಲವೆ ? ಇತ್ಯಾದಿ.

ಈ ಕುರಿತಾಗಿ ಇಲ್ಲಿ ಸುದೀರ್ಘ ಚರ್ಚೆ ಮಾಡದೆಯೆ, ಅತಿಮಾನುಷತೆಯ ಈ ಘಟನೆಗಳು ನಾಟಕದ ವಿವಿಧ ಪಾತ್ರಗಳ ಮೇಲೆ ಏನು ಪರಿಣಾಮ ಬೀರುತ್ತವೆ ಮತ್ತು ಹೇಗೆ ಈ ಪರಿಣಾಮದ ರೀತಿಯೇ ಅವರ ವ್ಯಕ್ತಿತ್ವಗಳನ್ನು ಪ್ರಕಟಿಸುತ್ತದೆ ಎಂದು ಮಾತ್ರ ನೋಡುವ ಯತ್ನ ಮಾಡಿದ್ದೇನೆ. ಶೇಕ್ಸ್‌ಪಿಯರನ ನಾಟಕಗಳ ಅತಿಮಾನುಷತೆಯ ಪಾತ್ರದ ಕುರಿತಾಗಿಯೇ - ಮುಂದೆ ಹ್ಯಾಮ್ಲೆಟ್, ಮೆಕ್‌ಬೇತ್, ದಿ ಟೆಂಪೆಸ್ಟ್ ಈ ನಾಟಕಗಳ ವಿಶ್ಲೇಷಣೆ ಮಾಡುವಾಗ - ವಿಶದವಾಗಿ ಅವಲೋಕಿಸುವುದು ಒಳ್ಳೆಯದು ಎನಿಸುತ್ತದೆ.

ಸದ್ಯದಲ್ಲಿ ರೋಮ್‌ನಗರ ಭೀಕರ ಚಂಡಮಾರುತ, ಗುಡುಗು, ಸಿಡಿಲುಗಳು, ಅತ್ಯಂತ ಭಯಂಕರ ಅತಾರ್ಕಿಕ, ಅಸಹಜ ಘಟನೆಗಳಿಂದ ಇಡೀ ಜನಸಮುದಾಯವನ್ನು ತಲ್ಲಣ ಗೊಳಿಸಿದೆ. ಇಂಥ ಸಾಮಾನ್ಯರ ಪ್ರತಿಕ್ರಿಯೆಗಳ ಧ್ವನಿಯಾಗಿ ನಮಗೆ ಕಾಸ್ಕಾ ಕಾಣುತ್ತಾನೆ. ಭಯಗ್ರಸ್ತನಾಗಿದ್ದಾನೆ. ಈ ಎಲ್ಲ ಅಸಹಜ ಸಂಗತಿಗಳು ಏನನ್ನು ಮುನ್ಸೂಚಿಸಲು ಸಂಭವಿಸುತ್ತಿವೆ ಎಂಬ ಆತಂಕದಲ್ಲಿ ನಡುಗುತ್ತಿದ್ದಾನೆ. ಅವನ ಪ್ರಕಾರ '....They are portentous things / Unto the climate that they point upon'. ಅತಿ ಬುದ್ಧಿವಂತಿಕೆಯಿಂದ ಇಂಥವುಗಳನ್ನು ತಳ್ಳಿಹಾಕಿಬಿಡುವುದು ನಮ್ಮ ಅಹಂಕಾರಗಳಾಗುತ್ತವಷ್ಟೆ ಎಂದು ವಾದಿಸುತ್ತಾನೆ.

ಇಲ್ಲಿ ಎರಡು ಅಂಶಗಳನ್ನು ನಾವು ಗಮನಿಸಬೇಕು. ಒಂದು- ವಿವರಿಸಲಾದ ಅತಿಮಾನುಷ ಘಟನೆಗಳು. ಎರಡನೆಯದು ಮತ್ತು ಮತ್ತೂ ಮುಖ್ಯವಾಗಿ ಕಾಸ್ಕಾನ ಪ್ರತಿಕ್ರಿಯೆಗಳು. ಹಿಂದಿನ ದೃಷ್ಯದಲ್ಲಿಯಷ್ಟೆ ಸೊಕ್ಕಿನಿಂದ, ತಿರಸ್ಕಾರದಿಂದ, ಸಿನಿಕತನದಿಂದ ಅಹಮಿಕೆಯ ಪರಾಕಾಷ್ಠೆಯ ಪ್ರತೀಕವಾಗಿ ಮಾತನಾಡಿದ್ದಾನೆ. ಕ್ಯಾಷಿಯಸ್ ತನ್ನೊಡನೆ ಭೋಜನಕ್ಕೆ ಆಹ್ವಾನಿಸಿದಾಗ ಕಾಸ್ಕಾನ ಅಸಡ್ಡೆಯ ರೀತಿಯ ಉತ್ತರಗಳು ಕಿವಿಯಲ್ಲಿ ಇನ್ನೂ ಗುಯ್‌ಗುಡುತ್ತಿವೆ. ''ಬರುತ್ತೇನೆ If I be alive, and your mind hold, and your dinner worth the eating'' ಎಂಬಷ್ಟು ಕ್ಷುಲ್ಲಕವಾಗಿ ಮಾತನಾಡಿದ್ದಾನೆ. ಇದೇ ಕಾಸ್ಕಾ ಮಿಂಚು ಗುಡುಗಿಗೆ, ಕಂಡ ಒಂದಷ್ಟು ಅಸಹಜ ದೃಶ್ಯಗಳಿಗೆ ಕುಸಿದುಬಿಟ್ಟಿದ್ದಾನೆ. ಶೇಕ್ಸ್‌ಪಿಯರ್ ಈ ದೃಶ್ಯದಲ್ಲಿ ಮತ್ಯಾರನ್ನೋ ಈ ಮಾತುಗಳನ್ನು ಆಡಲು, ಈ ಪ್ರತಿಕ್ರಿಯೆಗಳನ್ನು ತೋರಲು ರಂಗದ ಮೇಲೆ ತರದೆ ಕಾಸ್ಕಾನನ್ನೇ ಕರೆತಂದದ್ದು ಉದ್ದೇಶಪೂರ್ವಕವಾಗಿ ಎಂದು ನಾವು ಗಮನಿಸಬೇಕು. ಅವನ ಜೊತೆಗೆ ಮೊದಲು ಕಾಣಿಸಿಕೊಳ್ಳುವುದು ಸೀಸೆರೋ. ಒಬ್ಬ ಬುದ್ಧಿಜೀವಿ, ಗೌರವಾನ್ವಿತ ಪ್ರಮುಖ. ಕಾಸ್ಕಾನ ಈ ತಲ್ಲಣ ತವಕಗಳಿಗೆ ಬಹು ಮೆದುವಾಗಿ, ಸಮಾಧಾನದಿಂದ ಉತ್ತರ ಕೊಡುತ್ತಾನೆ. ಈ ಅತಿಮಾನುಷ ರಾತ್ರಿ '....is a strange - disposed time / But men may construe things, after their fashion, Clean from the purpose of the things themselves" ಇಲ್ಲದ್ದನ್ನೆಲ್ಲ ಕಲ್ಪಿಸಿಕೊಂಡು ತೊಳಲಬೇಡ,ಇಂಥ ರಾತ್ರಿಗಳಲ್ಲಿ ಏಕಾಕಿ ಓಡಾಡುವುದೂ ಒಳ್ಳೆಯದಲ್ಲ'' ಎಂದು ಬುದ್ಧಿವಾದ ಹೇಳುತ್ತಾನೆ. ಈಗಾಗಲೇ ಈ ಅಸಹಜ ರಾತ್ರಿಗೆ ಎರಡು ರೀತಿಯ ಪ್ರತಿಕ್ರಿಯೆಗಳು, ಎರಡು ರೀತಿಯ ವಿವರಣೆಗಳು ದೊರಕಿಯಾಯಿತು.

ಈಗ ಮೂರನೆಯದೊಂದನ್ನು ಶೇಕ್ಸ್‌ಪಿಯರ್ ಸೇರಿಸುತ್ತಾನೆ - ಕ್ಯಾಷಿಯಸನದು. ಈ ರಾತ್ರಿಯೇನು ಅಂಥ ಭಯಂಕರವಲ್ಲ, ಈ ಭೂಮಿಯ ಮೇಲೆ ಆಗುತ್ತಿರುವ ನೂರು ನ್ಯೂನತೆ, ದೋಷಗಳೆದುರು ಈ ರಾತ್ರಿಯೇನು ಅದ್ಭುತವಲ್ಲ. ''ಮಿಂಚು ಆಕಾಶವನ್ನೇ ಸೀಳುವಂತೆ ಸುಯ್ದು ಹೋದರೂ ನಾನು ಮಾತ್ರ ಬೆಚ್ಚದೆ, ಬೆದರದೆ ನನ್ನ ಎದೆ ತೆರೆದೇ ಈ ಭಯಂಕರಗಳನ್ನು

ಎದುರಿಸುತ್ತಿದ್ದೇನೆ'' ಎಂದು ಥರಗುಟ್ಟುತ್ತಿರುವ ಕಾಸ್ಕಾನನ್ನು ಸುತ್ತಿಬಳಸಿ ಹೀಯಾಳಿಸುತ್ತಾನೆ. ''ತಪ್ಪಲ್ಲವೆ ಇದು ? ಭಯಭೀತರನ್ನಾಗಿ ಮಾಡಲೆಂದೇ ಕಳಿಸಿದ ಈ ಭಯಾನಕ ದೃಶ್ಯಗಳಿಗೆ, ತಲೆಬಾಗುವುದಲ್ಲವೆ ಮನುಷ್ಯನ ಕರ್ತವ್ಯ'' ಎಂದು ತನ್ನ ಅನುಮಾನ ವ್ಯಕ್ತಪಡಿಸುತ್ತಾನೆ ಕಾಸ್ಕಾ. ಮೊದಲ ಅಂಕದ ಎರಡನೆ ದೃಶ್ಯದಲ್ಲಿ ಕಾಸ್ಕಾನ ಎಲ್ಲ ವೈಪರೀತ್ಯಗಳನ್ನು ತಾಳಿಕೊಂಡಂತೆ ಕಂಡ ಕ್ಯಾಷಿಯಸ್ ಈ ದೃಶ್ಯದಲ್ಲಿ ಅವನ ಬಗೆಗಿನ ತನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಅವನ ಮುಖಕ್ಕೆ ರಾಚುವಂತೆ ಹೇಳುತ್ತಾನೆ. "You are dull Casca, and those sparks of life / That should be in a Roman you do want / or else you use not" ಮಂಕಾಗಿದ್ದೀಯೆ ನೀನು, ಬೆಚ್ಚಿದ್ದೀಯೆ, ಆದರೆ ಯೋಚನೆ ಮಾಡು, ಹೀಗೇಕಾಯಿತು ? ಪಕ್ಷಿ ಪ್ರಾಣಿಗಳೂ ಅಲ್ಲದೆ ಮಕ್ಕಳು, ಮುದುಕರು ಎಲ್ಲರೂ ಈ ರೀತಿ ವಿಚಿತ್ರವಾಗಿ, ಎದೆ ನಡುಗಿಸುವ ರೀತಿ ವರ್ತಿಸುತ್ತಾರೆ ಏಕೆ ? ಏಕೆ ಗೊತ್ತೆ ? '...You shall find / That heaven hath infused them with these spirits / To make them instruments of fear and warning / Unto some monstrous state" ಈ ಭಯಂಕರ ರಾತ್ರಿಗಿಂತ ಭಯಂಕರವಾಗಿ, ಗುಡುಗು ಸಿಡಿಲುಗಳ ಆರ್ಭಟವನ್ನೂ ಮೀರಿಸುವಂತೆ ಅಬ್ಬರಿಸಿ, ಗೋರಿಗಳೂ ಬಾಯ್ಬಿರಿಯುವಂತೆ, ನೀನು ಕಂಡ ಸಿಂಹದ ಗರ್ಜನೆಯನ್ನೂ ಮೀರಿಸುವ ಆರ್ಭಟಿಸುವವನೊಬ್ಬನ ಹೆಸರು ಹೇಳಬಲ್ಲೆ ನಿನಗೆ. 'a man no mightier than thyself or me, / In personal action, yet prodigious grown / And fearful, as these strange eruptions are" ''ಸೀಸರ್‌ನ ಕುರಿತಲ್ಲವೆ ನೀನು ಹೇಳುತ್ತಿರುವುದು'' ಎಂದ ಕಾಸ್ಕಾನಿಗೆ 'ಸೀಸರನಿರಲಿ, ಯಾರೇ ಇರಲಿ... ವಿಷಯವಿರುವುದು ರೋಮನರದು. ಪೌರುಷ, ಸಾಹಸ, ದೇಶಪ್ರೇಮಗಳನ್ನು ಕಳೆದುಕೊಂಡು ಹೊರಿಸಿದ ನೊಗದ ಕೆಳಗೆ ಬುದ್ಧಿ, ಮನಸ್ಸುಗಳನ್ನು ಕಳೆದುಕೊಂಡು ಕ್ರಿಮಿಗಳ ಹಾಗೆ ಬದುಕುತ್ತಿರುವ ನಮ್ಮದು' ನಾಳೆ ಅವನನ್ನು ಈ ಇಟಲಿಯೊಂದನ್ನು ಬಿಟ್ಟು ಮಿಕ್ಕೆಲ್ಲ ಗೆದ್ದ ಪ್ರದೇಶಗಳಿಗೆ ರಾಜನನ್ನಾಗಿ ಘೋಷಿಸಿದರೆ ''ನನ್ನ ಈ ಕತ್ತಿಯನ್ನು ನಾನೆಲ್ಲಿ ತೊಡಬೇಕೆಂದು ಬಲ್ಲೆ'' ಎಂದು ಘೋಷಿಸಿ 'ಸರ್ವಾಧಿಕಾರತ್ವ, ದುರಾಡಳಿತಗಳಾಗಲಿ, ಕಗ್ಗತ್ತಲಲ್ಲಿ ಉಸಿರುಕಟ್ಟಿಸುವ ಸೆರೆಮನೆಗಳಾಗಲಿ ಆತ್ಮಶಕ್ತಿಯೆದುರು ಎಷ್ಟಿನವು ಮಹಾ ? ಇದು ಗೊತ್ತಿದ್ದ ಮೇಲೆ ಸ್ವತಂತ್ರವಾಗಿ ಬದುಕಬಲ್ಲೆ, ಸರ್ವಾಧಿಕಾರದ ಬೆದರಿಕೆಯನ್ನು ನನ್ನ ಮನಬಂದಾಗ ನಿವಾರಿಸಿಕೊಳ್ಳಬಲ್ಲೆ'' ಎಂದು ಮತ್ತಷ್ಟು ಕಿಚಾಯಿಸುತ್ತಾನೆ. ಈ ಕಾಸ್ಕಾ-ಕ್ಯಾಷಿಯಸ್‌ನ ಸಂಭಾಷಣೆಯನ್ನು ಓದುತ್ತಿರುವಂತೆ ನಾವು ಕ್ಯಾಷಿಯಸ್-ಬ್ರೂಟಸ್ ದೃಶ್ಯವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಬ್ರೂಟಸನೊಡನೆ ಮಾತನಾಡುವಾಗ ಕ್ಯಾಷಿಯಸ್ ಬಳಸಿದ ಭಾಷೆ, ಶೈಲಿ ಮತ್ತು ಈಗ ಕಾಸ್ಕಾನೆದುರಿಗೆ ಬಳಸುತ್ತಿರುವ ತಂತ್ರಗಾರಿಕೆ ಇವುಗಳನ್ನು ಹೋಲಿಸಿ ನೋಡಬೇಕು. ಕಾಸ್ಕಾನೆದುರು ಒಂದೇ ತಂತ್ರ-ನೇರ ಹಾಗೂ ಪ್ರಬಲ ದಾಳಿ. ಸೂಕ್ಷ್ಮಗಳನ್ನೆಲ್ಲ ಬದಿಗೊತ್ತಿದ ಪ್ರಚೋದನೆ.

ನಯನಾಜೂಕುಗಳೇ ಇಲ್ಲದ ಕಾಸ್ಕಾನಿಗೆ ಒರಟು ಭಾಷೆಯೇ ತಟ್ಟಲು ಸಾಧ್ಯ. ಈ ಭಯಂಕಾರ ರಾತ್ರಿಯನ್ನು ಸಹಿಸಿಕೊಳ್ಳುವುದಕ್ಕಿಂತ ಹೆಚ್ಚು ಕಷ್ಟವಾಗುತ್ತಿರುವ ತನ್ನ ಅಹಮಿಕೆಯ ಮೇಲಿನ ಈ ನಿಲ್ಲದ ಆಕ್ರಮಣಕ್ಕೆ ಕಾಸ್ಕಾ "ನಾನು ಕೂಡ ನಿನ್ನಂತೆಯೇ ನಿರಂಕುಶಾಧಿಕಾರವನ್ನು ಎದುರಿಸಬಲ್ಲೆ, 'so every bondman in his own hand bears / the power to cancel his captivity" ಮತ್ತೇನು ? ಸೀಸರ್ ಸರ್ವಾಧಿಕಾರಿಯಾಗಲು ಹೇಗೆ ಸಾಧ್ಯ ? ಸರ್ವಾಧಿಕಾರತ್ವದ ಗುಟ್ಟು ಇರುವುದು ಸರ್ವಾಧಿಕಾರಿಯ ಶಕ್ತಿಯಲ್ಲಲ್ಲ, ಆದರೆ ಜನಸಾಮಾನ್ಯರು ಕುರಿಗಳಾಗಿರಲು ನಿರ್ಧರಿಸಿರುವುದರಲ್ಲಿ ; ಅವನು ಸಿಂಹನಾಗಿರುವುದು, ಸಾಮಾನ್ಯಜನ ಹೆದರಿದ ಹುಲ್ಲೆಗಳಾಗಿರುವುದರಿಂದ, ವಿನಾಶಕಾರಿ ದಳ್ಳುರಿ ಕೂಡ ಬಿಡಿ ಪುರಲೆಗಳಿಂದಲೇ ಆರಂಭವಾಗಬೇಕು. 'What trash is Rome / What rubbish, and what offal, when it serves / For the base matter to illuminate / so vile a thing as Caesar? ಎಂದು ಭಾವಾವೇಶದಲ್ಲಿ ನುಡಿದ ಮರುಕ್ಷಣ 'ಯಾರೊಡನೆ ಮಾತನಾಡುತ್ತಿದ್ದೇನೆ ತಾನು ? ಬಹುಶಃ ಮನಃಪೂರ್ವಕ ಗುಲಾಮನಾಗಿರಲು ನಿಶ್ಚಯಿಸಿದವನ ಮುಂದೆಯೆ ?' ಪರವಾಗಿಲ್ಲ, ಅಪಾಯಗಳಿಗೆ ಎಳ್ಳಷ್ಟೂ ನಾನು ಕುಗ್ಗುವವನಲ್ಲ' ಎಂದು ಮತ್ತಷ್ಟು ಕಾಸ್ಕಾನನ್ನು ಪ್ರಚೋದಿಸುವುದಕ್ಕಾಗಿಯೇ ಹೀಯಾಳಿಕೆಯ ಮಾತನಾಡುತ್ತಾನೆ. 'You speak to Casca...Hold my hand. Be factions for redress of all these griefs / And I will set this foot of mine as far / As who goes farthest ಎಂಬ ಕಾಸ್ಕಾನ ನುಡಿಗಳಿಂದ ತೃಪ್ತನಾದ ಕ್ಯಾಷಿಯಸ್ ತನ್ನ ಮುಂದಿನ ಕ್ರಮಗಳ ಬಗ್ಗೆ ವಿವರಿಸುತ್ತಾನೆ. ಎಷ್ಟು ಜನ 'noblest-minded Romans' ತಮ್ಮೊಡನಿದ್ದಾರೆ ಎಂದು ಹೇಳುತ್ತಾನೆ. ತಾವು ಕೈಗೊಂಡಿರುವ ಕಾರ್ಯ '...an enterprise / of honourable - dangerous consequence' ಎಂದು ತನ್ನ ಇಡೀ ಯೋಜನೆಗೆ ಉದಾತ್ತತೆಯ ಪ್ರಭಾವಳಿಯನ್ನು ನೀಡುತ್ತಾನೆ. ಮತ್ತು 'ನಾವು ಮರೆಯದಿರೋಣ, ಈ ರೀತಿಯ ಭಯಾನಕತೆಯ ರಾತ್ರಿಯಂತೆಯೇ ನಮ್ಮ ಮುಂದಿರುವ ಜವಾಬ್ದಾರಿ most bloody, fiery and most terrible'. ಮುಂದೆ ತಮ್ಮನ್ನು ಕೂಡಿಕೊಂಡ ಸಿನ್ನಾ ಎಂಬ ಮತ್ತೊಬ್ಬ ಸಂಗಾತಿ, ಇವರುಗಳೊಡನೆ ಚರ್ಚಿಸುವುದೆಲ್ಲ ತಮ್ಮ ಉದ್ದೇಶಸಾಧನೆಗೆ ತಾವು ಕೈಗೊಳ್ಳಬೇಕಾದ ಪತ್ರಗಳ ಕುರಿತು, ತಮ್ಮನ್ನು ಸೇರಬೇಕಾಗಿರುವ ಮತ್ತೂ ಅಷ್ಟು ಪಿತೂರಿಗಾರರ ಬಗ್ಗೆ. ಇಷ್ಟೆಲ್ಲ ಪೂರೈಸಿದ ಮೇಲೆ 'ನಾವು ಬ್ರೂಟಸ್‌ನನ್ನು ಕಾಣಲು ಹೋಗೋಣ. Three parts of him / Is ours already, and the man entire / Upon the next encounter yields him ours". ಎಲ್ಲರಿಗೂ ಈಗ ಅವಶ್ಯಕತೆ ಇರುವುದು ಬ್ರೂಟಸ್‌ನ ಹೆಸರು. ವಿಶ್ವಾಸಾರ್ಹತೆ ಇರುವುದು ಅವನಿಗೆ ಮಾತ್ರ. ಇದು ಕಾಸ್ಕಾನಿಗೂ ಗೊತ್ತು. 'O, he sits high in all the people's hearts / And that which would appear affence in us / His countenance, like richest alchemy, / Will change to virtue and worthiness."

ಮೊದಲ ಅಂಕದ ಮುಕ್ತಾಯದೊಂದಿಗೆ ಪ್ರತಿಪಾದನಾ ಅಥವಾ ನಿರೂಪಣಾ ಭಾಗ ಮುಕ್ತಾಯವಾದಂತೆ ಆಯಿತು. ಮೊದಲ ಅಂಕದ ಮೊದಲ ದೃಶ್ಯದಲ್ಲಿಯೇ, ಮೂರನೇ ದೃಶ್ಯದ ಅಂತ್ಯಭಾಗಕ್ಕೆ ಒಂದು ರೂಪು ಪಡೆದುಕೊಂಡಂತೆ ಕಾಣುವ ಪಿತೂರಿಯ ಸುಳುಹುಗಳು ಕಾಣುತ್ತವೆ. ಈಗಾಗಲೇ ಕದಡಿದ ವಾತಾವರಣದ ಸೂಚನೆಗಳಿವೆ. ಅಂಕದ ಅಂತ್ಯಭಾಗದಲ್ಲಿ ಈ ಸೂಚನೆಗಳು ಸ್ಪಷ್ಟವಾಗಿ ಮೈದಾಳಿ ಎದುರಾಗುತ್ತವೆ. ಕ್ಯಾಷಿಯಸನ '...For we will shake him, or worse days endure' ಎಂಬ ಅನುಮಾನದ, ಸಂದೇಹ ಗಳೇ ಇಲ್ಲದ ನಿರ್ಧಾರಕ್ಕೆ, ಈ ಮತ್ತೂ ಅಷ್ಟು ಜನರ ಬೆಂಬಲವಿದೆ ಎಂಬುವಷ್ಟರ ಮಟ್ಟಿಗೆ ಕ್ಯಾಷಿಯಸ್ ಇನ್ನೂ ಹೆಚ್ಚು ಆತ್ಮವಿಶ್ವಾಸ ಪಡೆದುಕೊಂಡಿದ್ದಾನೆಂಬುದೂ ತಿಳಿಯುತ್ತದೆ. ಈಗ ಮುಂದಿರುವುದು ಬ್ರೂಟಸನ ಪ್ರತಿಕ್ರಿಯೆ ಮತ್ತು ಅವನು ವಹಿಸುವ ಪಾತ್ರ - ಈ ಪ್ರಶ್ನೆಗಳು.

ಎರಡನೆಯ ಅಂಕದ ಮೊದಲಲ್ಲೇ ಬ್ರೂಟಸನ ಸ್ವಗತವೊಂದಿದೆ. ರಾತ್ರಿಯೆಲ್ಲ ನಿದ್ರೆಯಿಲ್ಲದೆ ಕಳೆದಿದ್ದಾನೆ. ಸುಖನಿದ್ರೆ ಅನುಭವಿಸುವ ತನ್ನ ಸೇವಕ ನಿಶ್ಚಿಂತೆಯಾಗಿ ಮಲಗಿರುವುದನ್ನು ನೋಡಿ 'I would it were my fault to sleep so soundly' ಎಂದು ಮತ್ಸರಪಡುತ್ತಾನೆ. ಅವನನ್ನು ಎಬ್ಬಿಸಿ 'ಓದುವ ಕೋಣೆಯಲ್ಲಿ ದೀಪವಿಡು' ಎಂದು ಹೇಳಿ ಈಗ ಒಬ್ಬನೇ ಇದ್ದಾನೆ. ಇಡೀ ನಾಟಕದಲ್ಲಿನ ಬ್ರೂಟಸನ ಮೊದಲ ಸ್ವಗತ ಇದು. ತೀರ ಆಸಕ್ತಿಯನ್ನು ಕೆರಳಿಸಿರುವ ಅವನ ಮನಃಸ್ಥಿತಿಯ ಅಭಿವ್ಯಕ್ತಿಯಾಗಿ ಈ ಸ್ವಗತ ಹೊಮ್ಮುತ್ತದೆ. ಬ್ರೂಟಸ್ ಮತ್ತು ಕ್ಯಾಷಿಯಸ್‌ನ ಮೊದಲ ಅಂಕದ ಎರಡನೇ ದೃಶ್ಯವನ್ನು ಹಾವು-ಏಣಿ ಆಟವೆಂದು ಕರೆಯಬಹುದಾದರೆ ೨೯ ಸಾಲಿನ ಈ ಸ್ವಗತವನ್ನು ಏನೆಂದು ಕರೆಯ ಬಹುದೆಂದು ನೋಡೋಣ.

It must be by his death : and for my part,
I know no personal cause to spurn at him,
But for the general.

ಸ್ವಗತದ ಮೊದಲ ಮೂರು ಸಾಲುಗಳು ಇವು. ಮೊದಲನೇ ವಾಕ್ಯವೇ 'It must be by his death' ಎಂಬ ನಿರ್ಧಾರದೊಂದಿಗೆ ಆರಂಭವಾಗುತ್ತದೆ. ಈಗಾಗಲೇ ಮನಸ್ಸು ಮಾಡಿ ಆಗಿ ಹೋಗಿದೆ. 'Must be by his death' - ಬೇರೆ ಮಾರ್ಗವೇ ಇಲ್ಲ. ಹೀಗೆ ಅಂದ ಕೂಡಲೆ ತನ್ನ ಮತ್ತು ಸೀಸರನ ವೈಯಕ್ತಿಕ ಬಾಂಧವ್ಯದ ಬಗ್ಗೆ ತನಗೇ ವಿವರಣೆ ಕೊಟ್ಟುಕೊಳ್ಳುತ್ತಾನೆ - "I know no personal cause to spurn at him. ನನಗೆ ವೈಯಕ್ತಿಕವಾಗಿ ಅವನ ವಿರುದ್ಧವೇನೂ ಇಲ್ಲ. ನನಗೆ ವೈಯಕ್ತಿಕ ಲಾಭಗಳೂ ಇಲ್ಲ. ಆದರೆ ನಾನು ಮಾಡುತ್ತಿರುವುದು 'For the general cause'. ಇಡೀ ಸ್ವಗತದಲ್ಲಿ ಈ ವೈಯಕ್ತಿಕ ಬಾಂಧವ್ಯ ಹಾಗೂ ಸಾರ್ವಜನಿಕ ಹಿತಾಸಕ್ತಿ ಇವುಗಳ ಮಧ್ಯದ ಹೊಯ್ದಾಟ ಕಾಣುತ್ತ ಹೋಗುತ್ತದೆ. ಮೂರ್ತ

ಹಾಗೂ ಅಮೂರ್ತಗಳ ಮಧ್ಯದ ತಿಕ್ಕಾಟ. 'It must be by his death' ಎಂಬ ಮಾತಿನ ಹಿಂದಿನ ದೃಢತೆಯನ್ನು ಕಠೋರತೆಯನ್ನು ಮೆದುಗೊಳಿಸಲೋ ಎಂಬಂತೆ ತನ್ನ ಮನಸ್ಸಿಗೆ ಸಮಾಧಾನ ಹೇಳಿಕೊಂಡಂತೆ ಆಡುವ ಮಾತುಗಳು ಮುಂದಿನ ಎರಡು ಸಾಲು. ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದರೆ-

> ....He would be corwn'd :
> How that might change his nature, there's the question
> It is the bright day that brings forth the adder,
> And taht craves wary walking. Crown him ?...that
> And then, I grant, we put a sting in him,
> That at his will he may do danger with
> Th' abuse of greatness is when it disjoins
> Remorse from power....

ಇದು, ಬ್ರೂಟಸನ ಮಿದುಳು ಕೆಲಸ ಮಾಡುತ್ತಿರುವುದರ ಸೂಚನೆ. ಬಳಸುತ್ತಿರುವುದು ತರ್ಕ. ಮೆಟ್ಟಿಲು ಮೆಟ್ಟಿಲಾಗಿ ಒಂದು ನಿರ್ಧಾರಕ್ಕೆ ವಿವರಣೆಗಳು ಹುಡುಕುವ ಯತ್ನ. ಕಿರೀಟ ಧಾರಣೆಯಾಯಿತೆಂದರೆ ಮನುಷ್ಯ ಹೇಗೆ ಬದಲಾಗಬಹುದು - ಅದು ಇಲ್ಲಿರುವ ಪ್ರಶ್ನೆ. ಅಧಿಕಾರವೆಂದರೆ ಕತ್ತಲಲ್ಲಿ ಅಡಗಿದ್ದ ಸರ್ಪವನ್ನು ಬೆಳಕಿಗೆ ತಂದಂತೆ - ಎಂದೇ ಎಚ್ಚರದಿಂದ ನಡೆಯಬೇಕು. ಬ್ರೂಟಸ್ ತನ್ನನ್ನೇ ತಾನು ಪ್ರಚೋದಿಸಿಕೊಳ್ಳುತ್ತಿರುವ ಕ್ರಮವನ್ನು ನಾವು ಕಾಣಬೇಕು..... 'Crown him?' ಮತ್ತೆ ಕೇಳಿಕೊಳ್ಳುತ್ತಾನೆ. ಈ ಹಾವಿನ ಹಲ್ಲಿಗೆ ವಿಷದ ಕುಟುಕು ಸೇರಿಸಿದ ಹಾಗೆ. ಮನಸ್ಸು ಬಂದ ಹಾಗೆ ಹಾನಿ ಉಂಟುಮಾಡುತ್ತ ಹೋಗಬಹುದು. ಮತ್ತು ಇಡೀ ಪ್ರಶ್ನೆಯನ್ನು ಅತ್ಯಂತ ಸಾರ್ವಕಾಲಿಕ ಸತ್ಯದ ಹೇಳಿಕೆಯೊಂದಿಗೆ ಸಮಾಪ್ತಿಗೊಳಿಸಿದ ಹಾಗೆ 'The abuse of greatness is when it disjoins / Remorse from power' ಎಂದು ಸೇರಿಸುತ್ತಾನೆ. ಅಧಿಕಾರವೆಂದರೆ ಮಮತೆ, ಕನಿಕರ, ದಯೆಗಳು ಇಲ್ಲದ ಸ್ಥಿತಿಯೆಂದೇ ಅರ್ಥ. ಅಧಿಕಾರದ ದುರುಪಯೋಗವೆಂದರೆ ಇದೆಯೇ. ಆದರೆ ಬ್ರೂಟಸನ ಮನಸ್ಸಿಗೆ ಗೊತ್ತು: ಸೀಸರನ ಬಗ್ಗೆ ಹೇಳಬೇಕೆಂದರೆ 'I have not known when his affections swayed / More than his reason' ಎಂಬ ಮಾತು ನಿಜ. 'ಸೀಸರನು ಎಂದೂ ತನ್ನ ಭಾವನೆಗಳಿಗೆ ಶರಣಾಗಿಲ್ಲ. ಅವನು ಎಂದೂ ವಿಚಾರಕ್ಕೆ, ಮನಸ್ಸಿಗೆ ಹೆಚ್ಚು ಒತ್ತುಕೊಟ್ಟಿದ್ದಾನೆ.' ಮೊದಲೇ ಹೇಳಿದ ಹಾಗೆ ಬ್ರೂಟಸನು ತರ್ಕವನ್ನು ಬಳಸಿ ಮಾತನಾಡುತ್ತಿದ್ದಾನೆ. ಅಂಥ ಗಳಿಗೆಯಲ್ಲಿಯೂ ವಿಚಾರದ ಮಹತ್ವವನ್ನು ಮರೆಯುವುದಿಲ್ಲ. ಬ್ರೂಟಸನ ಮನಸ್ಸಿನಲ್ಲಿ ಈಗ ನಡೆಯುತ್ತಿರುವ ಸಂಘರ್ಷವೇ ಇದು - ತರ್ಕ ವಿಚಾರಗಳ ಮಧ್ಯದ ಸಂಘರ್ಷ. ಕಣ್ಣಿಗೆ ಕಾಣುವ ಸೀಸರ್ ಮತ್ತು ತನ್ನ ಮನಸ್ಸಿನಲ್ಲಿ ತಾನೇ

ಆರೋಪಿಸಿಕೊಂಡ ಸಂದರ್ಭಗಳು ಹಾಗೂ ತನ್ನ ಸಂಗಾತಿಗಳು ತುಂಬಿದ ನೂರು ಗೊಂದಲಗಳಿಂದ ಸೃಷ್ಟಿಗೊಂಡ ರಾಷ್ಟ್ರದ ಹಿತದ ಕುರಿತಾದ ಕಳಕಳಿ - ಇವುಗಳ ಮಧ್ಯದ ಸಂಘರ್ಷ.

ಇಲ್ಲಿಯವರೆವಿಗೆ ಹೌದು, ಸೀಸರ್ ಪ್ರಶ್ನಾತೀತನಾಗಿ ಉಳಿದಿದ್ದಾನೆ.

But it is common proof
That lowliness is young ambition's ladder,
Whereto the climber - upward turns his face;
But when he once attains the utmost round,
He then unto the ladder turns his back,
Looks in the clouds, scorning the base degrees
By which he did ascend. So Ceasor may;
Then lest he may, prevent.

ಮಿದುಳು ಒಪ್ಪುವ ಮಾತು. ಅಪವಾದಗಳಿರಬಹುದು ಎಂಬ ಅನುಮಾನಗಳೇ ಇಲ್ಲದೆ ಆಡುವ ಮಾತುಗಳು. ಸಾರ್ವಕಾಲಿಕ ನಿಯಮ ಇದು. ಏಣಿ ಹತ್ತುವವರ ಕಣ್ಣು ಆಕಾಶದತ್ತ, ಹತ್ತಿ ಬಂದ ಕೆಳಗಿನ ಮೆಟ್ಟಿಲುಗಳ ಮೇಲಲ್ಲ. ಮಹತ್ವಾಕಾಂಕ್ಷೆಯಲ್ಲಿ ಇಡುವ ಹೆಜ್ಜೆಗಳೇ ಹೀಗೆ. ಸೀಸರನೂ ಹಾಗೆ. ಆದದ್ದರಿಂದ ಹಾಗಾಗದಿರಲೆಂದೇ, ಅದನ್ನು ತಪ್ಪಿಸಲೆಂದೇ ವಿರೋಧ ಒಡ್ಡಬೇಕು. ಬ್ರೂಟಸನಿಗೆ ಅರ್ಥವಾಗದೆ ಹೋದ ಸಂಗತಿ ಎಂದರೆ ತರ್ಕವೂ ಮಹತ್ವಾಕಾಂಕ್ಷೆಯ ರೀತಿ - ಒಂದೇ ಮುಖವಾಗಿ ಎಲ್ಲ ದಿಕ್ಕು ಆಯಾಮಗಳನ್ನು ಮರೆತು ಮನಸ್ಸು ವ್ಯಕ್ತಿತ್ವಗಳನ್ನು ನುಂಗಿಹಾಕಿಬಿಡಬಹುದು ಎಂದು. ಮೂರ್ತವನ್ನು ಹಿಗ್ಗಿಸುತ್ತ ಇಡೀ ಬ್ರಹ್ಮಾಂಡವನ್ನೇ ಆವರಿಸಿಕೊಂಡು ಬಿಡಬಹುದಾದ ಭೂತ - ಈ ತರ್ಕ. ಅದರ ತೆಕ್ಕೆಗೆ ಬೀಳುವುದೂ ಅಧಿಕಾರದ ವ್ಯಾಮೋಹಗಳಿಗೆ ಬಲಿಯಾಗುವುದೂ ಎರಡೂ ಒಂದೆಯೆ ಎಂದು ಗೋಚರಿಸುವುದಿಲ್ಲ. ಇಷ್ಟಿದ್ದೂ....

Since the quarrel
Will bear no colour for the thing he is,
Fashion it thus : That what he is, augmented,
Would run to these and these extremities ;
And therefore think him as a serpant's egg,
Which hatched, would as his kind, grow mischievous,
And kill him in the shell.

ಕಗ್ಗಂಟಿನ ಗಣಿತಶಾಸ್ತ್ರದ ಸೂತ್ರವನ್ನು ಸಮರ್ಪಕವಾಗಿ ಬಿಡಿಸಿದ ಸಮಾಧಾನ ಕಂಡಿರಬೇಕು ಬ್ರೂಟಸ್‌ಗೆ. ಕ್ಯಾಷಿಯಸ್ ಬಳಸಿದ ತಂತ್ರಗಳಾದ - ಪುಸಲಾವಣೆ, ಪ್ರಚೋದನೆ, ಭಾವಾವೇಶ ಇತ್ಯಾದಿಗಳನ್ನು ಈಗ ಬ್ರೂಟಸ್ ತನ್ನ ಮೇಲೆ ತಾನೇ ಪ್ರಯೋಗಿಸಿಕೊಳ್ಳುತ್ತಿದ್ದಾನೆ. ಸೀಸರನ ಕುರಿತಾಗಿ ಆಡಿದ ಮಾತು ಬ್ರೂಟಸನಿಗೂ ಅನ್ವಯವಾಗುತ್ತದೆ - ಅವನೂ ಒಬ್ಬ ಶ್ರೀಮಂತ ಮನಸ್ಕ ಎಂದು ಭಾವಿಸಿದ್ದ ನಮಗೆ ಈಗ ಕೇವಲ ತನ್ನ ಚತುರವಾದಗಳಿಂದ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾನೆಯೆ ಎಂಬ ಅನುಮಾನ ತೀವ್ರವಾಗಿ ಕಾಡಿಬಿಡುತ್ತದೆ. ಕಾಸ್ಕಾನೊಡನೆ ಅವನ ಸಂಭಾಷಣೆಗಳನ್ನು ಗಮನಿಸಿದಾಗಲೇ ಕಾಡಿದ್ದ ಸಂದೇಹಗಳು ಮತ್ತೆ ತಲೆ ಎತ್ತುತ್ತವೆ. 'Falling sickness' ಇರುವುದು ಸೀಸರನಿಗಲ್ಲ, ನಮ್ಮೆಲ್ಲರಿಗೆ ಎಂದು ಹೇಳಿದ ಕ್ಯಾಷಿಯಸನ ಮಾತು ತಟ್ಟನೆ ನೆನಪಿಗೆ ಬಂದುಬಿಡುತ್ತದೆ. ಕ್ಯಾಷಿಯಸ್-ಬ್ರೂಟಸ್ ದೃಶ್ಯವನ್ನು ಹಾವು ಏಣಿ ಆಟವೆಂದು ಹೇಳುವುದಾದರೆ ಬಹುಶಃ ಈ ಸ್ವಗತವನ್ನು ಬ್ರೂಟಸ್ ಒಬ್ಬನೇ ಆಡುವ ಏತದ ಆಟವೆನ್ನಬಹುದೇನೋ ? ಎರಡೂ ಕಡೆ ತಾನೊಬ್ಬನೆ ಕ್ಷಣದಿಂದ ಕ್ಷಣಕ್ಕೆ ಸ್ಥಳ ಬದಲಿಸುತ್ತ ನೆಲಮುಟ್ಟುತ್ತ, ಆಕಾಶಕ್ಕೆ ಏರುತ್ತ ಆಡುತ್ತಿರುವ ಆಟವಾಗಿ ಕಂಡುಬಿಡುತ್ತದೆ. 'It must be by his death' ಎಂಬ ನಿರ್ಧಾರದಿಂದ ಆರಂಭಿಸಿ ಮಿಕ್ಕ ಅಷ್ಟೂ ಮಾತುಗಳು ಈ ನಿರ್ಧಾರಕ್ಕೆ ಪುಷ್ಟಿ ನೀಡುವ ವಾದಗಳನ್ನು ಸೃಷ್ಟಿ ಮಾಡುವುದರಲ್ಲಿ ಆಡಿದವು. ಶ್ರೀಮಂತಮನಸ್ಸಿನ ಒಂದು ಲಕ್ಷಣವೆಂದರೆ ಇಡೀ ಬದುಕು ತಾರ್ಕಿಕ ವಿವರಣೆಗಳ ಮೂಲಕ ತೇಲಿಸಿಕೊಂಡು ಹೋಗಿಬಿಡುವುದಲ್ಲ ಎಂಬ ಸತ್ಯವನ್ನೂ ಮನಗಾಣುವುದರಲ್ಲಿ ಇರುತ್ತದೆ.

ಬದುಕು ಎಂದರೆ ಕ್ರಿಯೆ, ಕ್ರಿಯೆಯೇ ವಿವರಣೆ. ಇದು ಬ್ರೂಟಸನಿಗೆ ತಿಳಿದಿಲ್ಲವೆಂದಲ್ಲ, ಇದೇ ದೃಶ್ಯದಲ್ಲಿ ಮುಂದೆ ಬ್ರೂಟಸ್ ತನ್ನ ಸಂಗಾತಿಗಳೊಂದಿಗೆ ವ್ಯವಹರಿಸುವ ರೀತಿಯಲ್ಲಿ ನಮಗೆ ಹಲವು ಹತ್ತು ವಿಷಯಗಳು ಅನುಭವಕ್ಕೆ ಬರುತ್ತ ಹೋಗುತ್ತವೆ. ಬ್ರೂಟಸನ ಬೇರೆಯದೇ ಮುಖ, ವ್ಯಕ್ತಿತ್ವದ ಪರಿಚಯವಾಗುತ್ತ ಹೋಗುತ್ತದೆ. ಆದರೆ ಈ ಕ್ಷಣದಲ್ಲಿ ನಮ್ಮ ಮನಸ್ಸು ಒಂದಷ್ಟು ಆತಂಕಗೊಂಡಿದ್ದರೆ ಆಶ್ಚರ್ಯವಿಲ್ಲ.

ದೀಪ ಹಚ್ಚಿಟ್ಟು ಬರಲು ಹೋಗಿದ್ದ ಲೂಷಿಯಸ್ ಕೋಣೆಯೊಳಗೆ ಬಿದ್ದಿದ್ದ ಕಾಗದಗಳನ್ನು ತಂದು ಕೊಡುತ್ತಾನೆ. ನಾವು ಊಹಿಸಬಹುದಾದಂತೆ ಈ ಕಾಗದಗಳು ಕ್ಯಾಷಿಯಸ್‌ನ ಕೈವಾಡದಿಂದ ಬಂದು ಬಿದ್ದವು. ಬ್ರೂಟಸನಿಗೇನು ಈ ಬಗೆಯ ಕಾಗದಗಳು ಮೊದಲ ಬಾರಿ ಬಂದಿವೆಯೆಂದಲ್ಲ, "Brutus thou sleepest ; awake and see thyself / shall Rome etc speak, strike, redress" ಈ ಮಾತುಗಳನ್ನು ಹೀಗೆ ನಾನು ಅರ್ಥೈಸಬೇಕು. ''ಒಬ್ಬ ಮನುಷ್ಯನ ಸರ್ವಾಧಿಕಾರದಡಿಯಲ್ಲಿ ರೋಮ್ ನಲುಗಬೇಕೇ''. ಈ ಮಾತುಗಳು ಕೇವಲ ಬ್ರೂಟಸ್‌ನದಲ್ಲ, ಮೊದಲಂಕದ ಎರಡನೇ ದೃಶ್ಯದಲ್ಲಿಯೇ ಕ್ಯಾಷಿಯಸ್ ಆಡಿದ ಮಾತುಗಳು ಎಷ್ಟು ಆಳವಾಗಿ ಬ್ರೂಟಸ್‌ನನ್ನು ನಾಟಿದೆ ಎಂದರೆ ಈಗ ಅವು ಹಾಗೆ

ಹಾಗೆಯೇ ಅವನ ಬಾಯಿಂದ ಹೊರಬರುತ್ತಿವೆ. "What, Rome ? / My ancestors did from the streets of Rome / the Taraquin drive, when he was called king" ಅಂಥ ಮನೆತನಕ್ಕೆ ಹುಟ್ಟಿದ ತನಗೂ ಈಗ ಅಷ್ಟೇ ಜವಾಬ್ದಾರಿ ಇದೆ. 'Speak, strike, Redress'. ಬೇರೆ ಮಾರ್ಗವೇ ಇಲ್ಲ. 'O, Rome, I make thee promise' 'ಪರಿಹಾರ ದೊರಕುವುದಾದರೆ ನನ್ನ ಸಂಪೂರ್ಣ ಸಹಕಾರದ ವಚನ ನೀಡುತ್ತೇನೆ' ದೃಶ್ಯದ ಮೊದಲಲ್ಲಿ ಕಂಡ ಸ್ವಗತದ ಶೈಲಿಯಲ್ಲಿಯೇ ಇದೆ ಈ ಮಾತುಗಳು ಕೂಡ. ಮನಸ್ಸನ್ನು ಗಟ್ಟಿಮಾಡಿಯಾಗಿದೆ. ಮನಸ್ಸನ್ನು ನಂಬಿಸಿಕೊಂಡೂ ಆಗಿದೆ. ಈ ಕ್ಷಣದಲ್ಲಿಯಂತೂ ಹಾಗೆ ನಮಗೆ ಅನ್ನಿಸಿದರೆ ತಪ್ಪೇನು ಇಲ್ಲ.

'ಮಾರ್ಚ್ ತಿಂಗಳ ಹದಿನೈದು ದಿವಸ ಈಗಾಗಲೇ ವ್ಯರ್ಥವಾಗಿದೆ' ಎಂದು ಲೂಷಿಯಸ್ ಇವತ್ತಿನ ದಿನವಾವುದು ಎಂದು ಕೇಳಿದ್ದ ಬ್ರೂಟಸನಿಗೆ ಉತ್ತರ ತಂದಿದ್ದಾನೆ. ಇಂದೇ Ides of March. ಲೂಷಿಯಸ್‌ನನ್ನು ಕಳಿಸಿದ ಕ್ಷಣದಲ್ಲಿ ಬ್ರೂಟಸ್‌ನ ಮನಸ್ಸು - ಆಳದಲ್ಲಿ - ಯಾವ ಸ್ಥಿತಿಯಲ್ಲಿದೆ ಎಂಬುದರ ಸೂಚನೆಯಾಗಿ ಈ ದೃಶ್ಯದ ಮೂರನೆಯ ಸ್ವಗತ ಕಾಣಿಸಿಕೊಳ್ಳುತ್ತದೆ. ಬಹುಶಃ ಈ ನಾಟಕದಲ್ಲಿಯೇ ಅತ್ಯಂತ ಮಹತ್ವದ ಸಾಲುಗಳಲ್ಲಿ ಇದೂ ಒಂದು.

> Since Cassius first did whet me against Caesar,
> I have not slept,
> Between the acting of a dreadful thing
> And the first motion, all the interim is
> Like a phantasma, or a hideous dream;
> The genius and the mortal instruments
> Are then in council, and the state of man,
> Like to the little Kingdom, suffers then
> The nature of an insurrection

ದೃಶ್ಯದ ಮೊದಲ ಸ್ವಗತ, ಸಂಘರ್ಷವನ್ನು ಕಣ್ಣೆಟ್ಟು ನೋಡಿ ಎದುರಿಸಲು ನಿರಾಕರಿಸುವ ಯತ್ನ. ಎಂದೇ ತರ್ಕಮಯವಾಗಿದೆ ಮಾತುಗಳು. ಸಂಘರ್ಷವನ್ನು ಒಪ್ಪಿಕೊಂಡ ಕೂಡಲೆ ಮಾತು ಮನಸ್ಸಿನ ಆಳದಿಂದ ಹೊಮ್ಮುತ್ತದೆ. ಮಿದುಳು ಹಿಂದೆ ಸರಿಯುತ್ತದೆ, ನಿರ್ಧರಿಸಿದುದನ್ನು ಸಾಧಿಸುವ ಮಾರ್ಗದಲ್ಲಿ ತುಂಬಿರುವ ಮೊದಲ ಹೆಜ್ಜೆಗೂ ನಿರ್ಧಾರಕ್ಕೂ ಮಧ್ಯೆ ಎಲ್ಲ ಭಯಂಕರ ಘೋರ ಸ್ವಪ್ನಗಳು, ಸ್ವಪ್ನ ಪಿಶಾಚಿಗಳು. ಮನುಷ್ಯನ ಅಂತರಾತ್ಮವೂ ಅವನ ನಶ್ವರ ದೈಹಿಕ ಶಕ್ತಿಗಳೂ ಮುಖಾಮುಖಿಯಾಗುತ್ತವೆ. ಮನುಷ್ಯನ ಸ್ಥಿತಿ ಅರಾಜಕತೆ ಮತ್ತು ಬಂಡಾಯಗಳನ್ನು ಎದುರಿಸುತ್ತಿರುವ ರಾಷ್ಟ್ರದ ಹಾಗೆ ನರಳಿಕೆಗೆ ತುತ್ತಾಗುತ್ತದೆ.

ಈ ಭಾಗ ಹೇಗೆ ಮಹತ್ವದ್ದಾಗುತ್ತದೆ ? ಹಿಂದಿನ ಸ್ವಗತಕ್ಕೂ ಇದಕ್ಕೂ ಏನು ವ್ಯತ್ಯಾಸ ? ಹೇಗೆ ಈ ಸ್ವಗತ ಹೆಚ್ಚು ಪ್ರಾಮಾಣಿಕವಾಗಿ ಬ್ರೂಟಸನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ ? ಮೂರ್ತ- ಅಮೂರ್ತಗಳ ಮಧ್ಯದ ನಿರಂತರ ಸಂಘರ್ಷವನ್ನು ಈ ಭಾಗ ಸೂಚಿಸುತ್ತದೆ. ಹಾಗೂ ಈ ಸಂಘರ್ಷವನ್ನು ಬ್ರೂಟಸನು ಒಪ್ಪಿಕೊಂಡಿರುವುದೂ ಸ್ಪಷ್ಟವಾಗುತ್ತದೆ.

ಮನುಷ್ಯನ ಅಂತರಾತ್ಮ, ಜೀವಚೈತನ್ಯ ಶಾಶ್ವತವಾದುದು. ಸಾವಿನ ನಂತರವೂ ಉಳಿಯುವಂತಹುದು. ದೈಹಿಕಶಕ್ತಿ, ಸಾಧ್ಯತೆಗಳು ನಶ್ವರವಾದವು. ಸಾವಿನೊಡನೆ ಮಣ್ಣಾಗುವುದು. ಶಾಶ್ವತವಾದುದು ಅಳೆದು, ಬೆಲೆ ಕಟ್ಟಲಾಗದ ವಸ್ತು. ದೈಹಿಕ ಶಕ್ತಿ ಸಾಮರ್ಥ್ಯಗಳು ಬೆಲೆ ಕಟ್ಟಬಲ್ಲಂಥವು. ಬ್ರೂಟಸ್ ಈಗ ಇಟ್ಟ ಹೆಜ್ಜೆ ಅವನನ್ನು ಇಂಥದೊಂದು ಸಂದಿಗ್ಧದಲ್ಲಿ ಸಿಲುಕಿಸಿದೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ? ಆ ಆಯ್ಕೆಯ ಪ್ರಶ್ನೆಯೇ ತನಗೆ ನಿದ್ದೆಗೆಡಿಸಿರುವುದು. ಯಾವುದನ್ನು ತಾನು ಆಯ್ಕೆ ಮಾಡಿಕೊಳ್ಳುತ್ತೇನೆ ಎಂಬುದರ ಮೇಲೆ ತನ್ನ ವ್ಯಕ್ತಿತ್ವದ ಲಕ್ಷಣಗಳೂ ಸ್ಪಷ್ಟವಾಗುವುದು. ಅಣು, ಬ್ರಹ್ಮಾಂಡ ಇವೆರಡರ ಮಧ್ಯೆ ತಾನು ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಮನಸ್ಸಿನಲ್ಲಿ ಎದ್ದ ಬಂಡಾಯದ ಬಿರುಗಾಳಿ ಈ ಆಯ್ಕೆಯಲ್ಲಿ ತಾನೆಂಥ ಏಕಾಕಿ ಎಂಬುದನ್ನೂ ಸೂಚಿಸುವಂತಿದೆ. ಆದರೆ ಮೊದಲೇ ಹೇಳಿದ ಹಾಗೆ ಈ ಮಾತುಗಳ ಹಿಂದಿನ ಬ್ರೂಟಸ್ ಪ್ರಾಮಾಣಿಕನೋ ಅಥವಾ ತರ್ಕಬದ್ಧವಾಗಿ 'It must be by his death' ಎಂದು ನಿರ್ಧರಿಸಿದ್ದ ಬ್ರೂಟಸ್ ಪ್ರಾಮಾಣಿಕನೋ ? ಈ ಪ್ರಶ್ನೆಯ ಉತ್ತರಕ್ಕಾಗಿ ನಾವು ಬಹಳ ಕಾಯಬೇಕಾಗಿಲ್ಲ, ಒಂದಾದ ಮೇಲೆ ಒಂದರಂತೆ ನಮ್ಮ ಕಣ್ಣ ಮುಂದೆ ನಡೆಯುವ ಸಂಗತಿಗಳೇ ನಮಗೆ ಸ್ಪಷ್ಟಪಡಿಸುತ್ತವೆ.

ಲೂಷಿಯಸ್ ಪ್ರವೇಶಿಸಿ ಬ್ರೂಟಸನನ್ನು ಕಾಣಲು ಕ್ಯಾಷಿಯಸನೂ ಅವನೊಡನೆ ಮತ್ತೆ ಹಲವರೂ ಬಂದಿದ್ದಾರೆ, ಆದರೆ ಮಿಕ್ಕವರು ಯಾರು ಎಂದು ಹೇಳಲಾಗದಷ್ಟು ಅವರುಗಳು ಮುಖ ಮುಚ್ಚಿಕೊಂಡಿದ್ದಾರೆ ಎಂದೆನ್ನುತ್ತಾನೆ. ಈ ಒಂದು ಸಂಗತಿಯೇ ಸಾಕು ಬ್ರೂಟಸನನ್ನು ಮತ್ತೆ ಬಿರುಗಾಳಿಗೆ ಸಿಲುಕಿ ತತ್ತರಿಸುವಂತೆ ಮಾಡಲು, 'O Rome, I make thee promise...' ಎಂದು ವಚನ ನೀಡಿರುವುದು ದೇಶ ಉಳಿಸಲು. ಶಾಶ್ವತ ಮೌಲ್ಯಗಳನ್ನು ಉಳಿಸಲು, ಅಂದರೆ ಇದೊಂದು ಕ್ರಾಂತಿ, ಮುಚ್ಚುಮರೆಗಳಿರಬಾರದ, ಭಯ ಆತಂಕಗಳಿರಬಾರದಂಥ ಸಂದರ್ಭ. ಆದರೆ ಈ ಕಪ್ಪು ಕತ್ತಲೆಯಲ್ಲಿಯೂ ಮುಖ ಮುಚ್ಚಿಕೊಂಡು ಬಂದಿದ್ದಾರೆ ತನ್ನ ಸಂಗಾತಿಗಳು. ಬ್ರೂಟಸ್ ಬಳಸುವ ಶಬ್ದಗಳೇ ತನ್ನ ಕನಸಿನ ಕ್ರಾಂತಿಯಲ್ಲ ಇದು ಎಂದು ಸ್ಪಷ್ಟಪಡಿಸಿಬಿಡುತ್ತದೆ. 'They are the faction'. Faction ಎಂದರೆ ಒಳಗುಂಪು, ಒಳಗುಂಪು ಸಾಧ್ಯವಾಗುವುದೇ ಒಡಕು, ವೈಷಮ್ಯಗಳ ಫಲವಾಗಿ ಮತ್ತೆ ಮುಂದಿನ ಶಬ್ದ ನೋಡಿ - 'O Conspiracy' ಹಾಗಾದರೆ ತಾವುಗಳು ಯೋಜಿಸಿರುವುದು ಪಿತೂರಿಯನ್ನು, ಕ್ರಾಂತಿಯನ್ನಲ್ಲ; ಎಂಥ ನಾಚಿಕೆಗೇಡು ಇದು – ಇಂಥ ಭಯಂಕರ ಕಪ್ಪು

ರಾತ್ರಿಯಲ್ಲೂ ಮುಖ ತೋರಿಸಲು ಆಗದ ಈ ಪಿತೂರಿ, ಹಾಡುಹಗಲಲ್ಲಿ ಮತ್ತಿನ್ನೆಂಥ ವಿಕೃತ ಮುಖವಾಡದಲ್ಲಿ ಮುಖ ಹುದುಗಿಸಿಕೊಳ್ಳಬೇಕು ? ಪಿತೂರಿಯೆಂದಾದ ಮೇಲೆ ನಯವಿನಯಗಳ ಸೋಗಿನಲ್ಲಿ ಎಂದಿಗೂ ಗೆಲುವಾಗಿ ಕಾಣುತ್ತಿರಬೇಕು. ಇದೇ ವ್ಯಂಗ್ಯದ ದನಿಯಲ್ಲಿ ಮುಂದುವರೆಯುತ್ತಾ "ನಿನ್ನ ನಿಜರೂಪದಲ್ಲಿ ಕಾಣಿಸಿಕೊಂಡರೆ ನಿನ್ನನ್ನು ಸತ್ತವರು ಹೋಗುವ ಲೋಕಕ್ಕೆ ಇರುವ ದಟ್ಟ ಕತ್ತಲ ಮಾರ್ಗವೂ ರಕ್ಷಿಸಲಾರದು." ಬ್ರೂಟಸನ ಮನಸ್ಸು ಗುಪ್ತವಾಗಿ ಒಳಗೇ ಮುದುಡಿ ಸುಕ್ಕುಗಟ್ಟಿಬಿಟ್ಟಿತೆ ಈ ಹೊಳಹಿನಿಂದ. ಏಕೆ ಈ ಅನುಮಾನ ವ್ಯಕ್ತಪಡಿಸುತ್ತಿದ್ದೇನೆಂದರೆ ಮುಂದೆ ಎರಡು ಮೂರು ಸಂದರ್ಭಗಳಲ್ಲಿ ಬ್ರೂಟಸ್‌ನು ಕ್ಯಾಷಿಯಸ್ ಮತ್ತಿತರರ ಸಲಹೆ ಸೂಚನೆಗಳಿಗೆ ಪ್ರತಿಕ್ರಿಯಿಸುವ ರೀತಿಯಲ್ಲಿ ತೀವ್ರತೆ ಕಾಣುತ್ತದೆ. ಒಂದೊಂದಾಗಿ ಈ ಸಂದರ್ಭಗಳನ್ನು ನೋಡೋಣ.

ಕ್ಯಾಷಿಯಸ್ ಪ್ರತಿ ಸಂಗಾತಿಯೂ ಪ್ರಮಾಣವಚನ ಸ್ವೀಕರಿಸಬೇಕೆಂದು ಸೂಚಿಸುತ್ತಾನೆ. ಅವನ ದೃಷ್ಟಿಯಲ್ಲಿ ಅದು ಮೆದು ಸೂಚನೆಯಷ್ಟೇ ಅಲ್ಲ, ಆಣತಿ. ಆದರೆ ಬ್ರೂಟಸ್‌ನ ಕಟ್ಟಪ್ಪಣೆಯ ರೀತಿಯ ದೃಢ ಹಾಗೂ ಅಂತಿಮ ತೀರ್ಮಾನ ಇಡೀ ಚರ್ಚೆಗೆ ತೆರೆ ಎಳೆದು ಬಿಡುತ್ತದೆ. ಕ್ಯಾಷಿಯಸ್ ಆಡುವುದು ಒಂದು ಮಾತು : "And let us swear our resolution" ಉತ್ತರವಾಗಿ ಬ್ರೂಟಸ್‌ನದು ಇಪ್ಪತ್ತೇಳು ಸಾಲುಗಳ ಗುಡುಗು-ಸಿಡಿಲುಗಳ ಉತ್ತರ. 'No, not an oath' – ಸರ್ವಾಧಿಕಾರದ ಈ ಯುಗದಲ್ಲಿ ನಾವು ಪಡುತ್ತಿರುವ ಪಾಡು, ತಾಳಿಕೊಳ್ಳುತ್ತಿರುವ ಹಿಂಸೆ ಇಷ್ಟೇ ಸಾಕೆನಿಸದಿದ್ದರೆ ನಾವುಗಳು ಇಲ್ಲಿಂದ ಚೆದರಿ ಹೋಗಿ ಬೆಚ್ಚಗೆ ಮಲಗೋಣ. ದಬ್ಬಾಳಿಕೆ ಮೆರೆದಾಡಲಿ, ಮನಸ್ವೀ ತನ್ನ ಬಲಿಪಶುಗಳನ್ನು ಆರಿಸಿಕೊಂಡು ನೆತ್ತರು ಚೆಲ್ಲಾಡಲಿ. ಆದರೆ ಈ ಸದ್ಯದ ಸ್ಥಿತಿಯ ದಾರುಣ ಅನುಭವ ವೇದ್ಯವಾಗಿದ್ದರೆ ಅಷ್ಟೇ ಸಾಲದೆ ಹೇಡಿಗಳನ್ನೂ ರೊಚ್ಚಿಗೆಬ್ಬಿಸಲು, ಕರಗುವ ಹೃದಯದ ಹೆಣ್ಣು ನರಗಳನ್ನು ಉಕ್ಕಾಗಿಸಲು ? ಇಷ್ಟು ಸಾಲದೆ ಈ ಎಲ್ಲದರಿಂದ ಮುಕ್ತಿ ಪಡೆಯಲು ? ನಾವು ರೋಮನರು, ಆಡಿದ ಮಾತು ಮುರಿಯುವವರಲ್ಲ ಎಂಬ ನಂಬಿಕೆ ಸಾಲದೆ ? 'And what other oath / Than honesty to honesty engaged. / That this shall be, or we will fall for it ?' ನಾವು ಕೈಗೊಂಡಿರುವ ಈ ಮಹತ್ತರಕಾರ್ಯವನ್ನು ಆಣೆ ಭಾಷೆಗಳ ಮಾತುಗಳಾಡಿ ಕಲುಷಿತಗೊಳಿಸಬೇಡಿ. ಇಷ್ಟು ಸಾಕು... ಈ ಉದ್ದೇಶಸಾಧನೆಗೆ ಹೆಜ್ಜೆ ಮುಂದಿಟ್ಟ ಯಾವನಾದರೂ ಎಡವಿದರೆ ಅವನೊಬ್ಬ ರೋಮನ್ ರಕ್ತಕ್ಕೆ ಹುಟ್ಟದ ಜಾರನೆಂಬ ಅಪನಿಂದೆಗೆ ಗುರಿಯಾಗದಿರನೆ ? ಬ್ರೂಟಸನ ಈ ಮಾತುಗಳಲ್ಲಿನ ರಭಸ ಅವು ಧ್ವನಿಸುವ ಆದಮ್ಯ ಆತ್ಮವಿಶ್ವಾಸ ಹಾಗೂ ಓಘವನ್ನು ಗಮನಿಸಬೇಕು. ಅಂಕದ ಮೊದಲಿನ ತರ್ಕಬದ್ಧತೆಗೆ ವಿದಾಯ ನೀಡಿ ಇಡೀ ವ್ಯಕ್ತಿತ್ವವನ್ನು ತೊಡಗಿಸಿಕೊಂಡು ಆಡಿದ ಮಾತುಗಳು. 'It must be by his death' ರೀತಿಯ ವಾದಸರಣಿಯ ಗುಂಗಿನಲ್ಲೇ ಇದ್ದಿದ್ದರೆ ಕ್ಯಾಷಿಯಸ್‌ನ ಭಾಷೆ, ಆಣೆಗಳ ಮಾತೂ ಕೂಡ ಒಪ್ಪಬಹುದಿತ್ತು. ಈ ಎರಡೂ ಕೂಡ ಮೂರ್ತ ಜಗತ್ತಿಗೆ ಸಲ್ಲುವ

ಮಾತುಗಳು. ಪಿತೂರಿಯ ಅಂಗಗಳು. ಬ್ರೂಟಸನಿಗೆ ಈ ಇಡೀ ಪ್ರಕರಣವನ್ನು ಕ್ರಾಂತಿಯನ್ನಾಗಿಯೇ ಉಳಿಸಬೇಕೆಂದು ಮತ್ತು ರಾಷ್ಟ್ರಕ್ಕಾಗಿ ತಾನು ಅನಿವಾರ್ಯವಾಗಿ ಮುಂದಾಳತ್ವ ವಹಿಸಬೇಕಾದ ಒಂದು ದುರದೃಷ್ಟಕರ ಪ್ರಸಂಗವಷ್ಟೇ ಎಂಬ ವಿಷಯವನ್ನು ಮನದಟ್ಟು ಮಾಡಬೇಕಾಗಿದೆ. ಮುಖ ಮರೆಸಿಕೊಂಡು ಬಂದ ತನ್ನ ಸಹಚರರು ಈಗಾಗಲೇ ಸಾಕಷ್ಟು ತನ್ನ ಮನಸ್ಸನ್ನು ಕೆಡಿಸಿದ್ದಾರೆ. ಎಂದೇ ತನ್ನ ವಿರೋಧವನ್ನು ಕಟುವಾದ ಭಾಷೆಯಲ್ಲಿಯೇ ವ್ಯಕ್ತಪಡಿಸಬೇಕಾಗಿದೆ. ಕ್ಯಾಷಿಯಸನಿಗೆ ಮತ್ತೊಂದು ಶಬ್ದ ಆಡಲು ಸಾಧ್ಯವಾಗದಷ್ಟು ಖಂಡಿತವಾಗಿ ಮಾತನಾಡಿದ್ದಾನೆ. ಮತ್ತು ಇಡೀ ಗುಂಪಿನಲ್ಲಿ ಒಂದಷ್ಟು ವ್ಯಕ್ತಿತ್ವವಿರುವುದು ಕ್ಯಾಷಿಯಸನಿಗೆ ಮಾತ್ರ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ.

ಸಂಗಾತಿಗಳನ್ನು ಪ್ರತಿ ಘಟ್ಟದಲ್ಲಿಯೂ ಬ್ರೂಟಸ್ ವಿರೋಧಿಸಬೇಕಾದ ಅನಿವಾರ್ಯ ಕಾಣುತ್ತದೆ. ಮತ್ತು ಅವನು ವಿರೋಧಿಸಿದಾಗಲೆಲ್ಲ ಮರುಮಾತಿಲ್ಲದೆ ಒಪ್ಪಿಕೊಳ್ಳದೆ ಮಾರ್ಗವೇ ಇಲ್ಲವಾಗುತ್ತದೆ ಬೇರೆಯವರಿಗೆ. ಸಿಸಿರೋನನ್ನು ಸೇರಿಸಿಕೊಳ್ಳುವುದು ಒಂದು ಉದಾಹರಣೆ.

ಬಹುಶಃ ಈ ಇಡೀ ಕಾರ್ಯವಿಧಾನವಿವರಗಳ ಚರ್ಚೆಯಲ್ಲಿ ಅತ್ಯಂತ ಗಹನವಾದ ಭಾಗ ಡೀಶಿಯಸ್ ಬ್ರೂಟಸ್‌ನ 'Shall no man else be touched but only Caesar? ಪ್ರಶ್ನೆಯಿಂದ ಪ್ರಚೋದಿತವಾಗುತ್ತದೆ. ಕ್ಯಾಷಿಯಸ್‌ನ ಉತ್ತರ ಸಿದ್ಧವಾಗಿದೆ. '' 'ಆಂಟನಿ' ; ಸೀಸರನೊಡನೆ ಆಂಟನಿ ಕೂಡ ಹೋಗಬೇಕು. ಅವನು ಚತುರ, ಮತ್ತವನು ಮುಂದೆ ನಮಗೆ ಪೀಡೆಯಾಗುವುದರಲ್ಲಿ ಸಂದೇಹವಿಲ್ಲ, ಆದ್ದರಿಂದ ಅವನು ಕೂಡ ನಮ್ಮ ಪಟ್ಟಿಗೆ ಸೇರಬೇಕು'' ರಾಜಕಾರಣದ ಮಾತು. ಪಿತೂರಿಯ ವಿನ್ಯಾಸಕ್ಕೆ ಹೊಂದಿಕೊಳ್ಳುವ ಆಲೋಚನೆ, ಪಿತೂರಿಯೆಂದರೆ ಎಲ್ಲರನ್ನೂ ಅಪನಂಬಿಕೆಯಿಂದ ನೋಡು ಎಂದು.

ಈ ನಾಟಕದ ಸಂಧಿಕಾಲ ಇದು. ಬ್ರೂಟಸ್ 'ಹೌದು' ಎಂದಿದ್ದರೆ ನಾಟಕವೇನಾಗುತ್ತಿತ್ತು ಎಂದು ಊಹಿಸಬಹುದು. ಅವನು 'ಹೌದು, ಹಾಗೇ ಆಗಲಿ' ಅಂದಿದ್ದರೆ ಇದು 'ಜೂಲಿಯಸ್ ಸೀಸರ್' ಎಂಬ ಹೆಸರಿನ ಒಂದು ಉತ್ಕೃಷ್ಟ ನಾಟಕವಾಗುತ್ತಿತ್ತೆ ಎಂಬ ಪ್ರಶ್ನೆಯೂ ಏಳುತ್ತದೆ. ಕನಿಷ್ಠ ಇದು ನಾಟಕವೂ ಆಗುತ್ತಿರಲಿಲ್ಲ ಮತ್ತು ಬ್ರೂಟಸ್ ಶೇಕ್ಸ್‌ಪಿಯರ್ ಸೃಷ್ಟಿಸಿದ ಅದ್ಭುತ ಪಾತ್ರಗಳಲ್ಲಿ ಒಂದೂ ಆಗುತ್ತಿರಲಿಲ್ಲ. ಅಷ್ಟೇ ಯಾಕೆ, ಈ ಮಾತನ್ನು ಮುಂದುವರೆಸಿ ಹೇಳಬಹುದಾದರೆ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಭವಿಷ್ಯದ ಕನಸುಗಳು, ಆಸೆಗಳು ಇವು ಯಾವುವೂ ಮನುಷ್ಯನಿಗೆ ಸಾಧ್ಯವಿದೆ ಎನಿಸುತ್ತಿರಲಿಲ್ಲ. ಈ ಮಾತುಗಳನ್ನು ಮತ್ತೆ ಮತ್ತೆ ಬೇರೆ ಬೇರೆ ಸಂದರ್ಭಗಳಲ್ಲಿ ನಾವು ಆಡುತ್ತಿರಲೇ ಬೇಕಾಗುತ್ತದೆ. ಪಿತೂರಿಯಲ್ಲಿ ರಕ್ತಪಾತವಿರುತ್ತದೆ. ಕ್ರಾಂತಿಯಲ್ಲಲ್ಲ, ಕ್ರಾಂತಿಗೆ ನೆತ್ತರ ದಾಹವಿಲ್ಲ.

'ನಾವು ರಕ್ತಪಿಪಾಸುಗಳಾಗಿ ಕಾಣುತ್ತೇವೆಯಷ್ಟೆ ಕ್ಯಾಷಿಯಸ್. ತಲೆಯನ್ನೇ ಛೇದಿಸಿದ ಮೇಲೆ ಕೈ ಕಾಲುಗಳನ್ನು ಕತ್ತರಿಸಬೇಕು ಏಕೆ ? ಆಂಟನಿ ಸೀಸರನ ದೇಹದ ಒಂದು ಅಂಗವಷ್ಟೆ 'Let's be sacrificers, but not butchers Cassius" ಯಜ್ಞಕ್ಕೆ ಆಹುತಿ ಅರ್ಪಿಸಹೊರಟವರೇ ಹೊರತು ನಾವು ಕಟುಕರಾಗುವುದು ಬೇಡ. ಮುಂದೆ ಅವನು ಆಡುವ ಮಾತುಗಳನ್ನು ನೋಡೋಣ :

> 'We all stand up against the spirit of Caesar
> And in the spirit of men there is no blood
> O' that we then could come by Caesar's spirit,
> And not dismember Caesar !

'Spirit of Caesar' ಮತ್ತು 'blood of Caesar' ಅಥವಾ ಸೀಸರನ ದೇಹ ; ಸೀಸರನ ಚೇತನ ಮತ್ತು ಸೀಸರನ ದೇಹ. ಅಮೂರ್ತ ಮತ್ತು ಮೂರ್ತ. ಈ ಅಮೂರ್ತ, ಮೂರ್ತಗಳು ಸೇರಿಯೇ ವ್ಯಕ್ತಿ ಎನಿಸಿಕೊಳ್ಳುವುದು. ಸೀಸರನ ಸರ್ವಾಧಿಕಾರೀ ಚೇತನವನ್ನು ನಾಶಗೊಳಿಸುವುದೆಂದರೆ ಸೀಸರನ ದೇಹವನ್ನು ನಾಶಗೊಳಿಸುವುದು ಎಂದರ್ಥ. ಇದು ಇಡೀ ಸಂದರ್ಭದ ವಿಚಿತ್ರ ಮತ್ತು ಭಯಂಕರ ವಿಷಾದದ ಸಂಗತಿ. ಮನುಷ್ಯ ಚೇತನರಲ್ಲಿ ನೆತ್ತರು ಇಲ್ಲ. ಸೀಸರನ ಚೇತನವನ್ನು ಮಾತ್ರ ನಾಶಗೊಳಿಸಿ ದೇಹ ಉಳಿಸಬಹುದಾಗಿದ್ದರೆ ! ಈ ಮಾತುಗಳಲ್ಲಿ ಎಷ್ಟು ವಿಷಾದ ಅಂತರ್ಗತವಾಗಿದೆಯೋ ಅಷ್ಟೇ ಮಟ್ಟಿಗೆ ವಿರೋಧಾಭಾಸಗಳೂ ಇವೆ. ಆ ವಿರೋಧಾಭಾಸಗಳು ಹೊಳೆಯುವುದು ಮೆದುಳಿಗೆ ಮಾತ್ರ. ಆದರೆ ಬ್ರೂಟಸ್ ಮೆದುಳಿನ ಮಟ್ಟದಲ್ಲಿ ಆಡುತ್ತಿರುವ ಮಾತುಗಳಲ್ಲ ಇದು. ಸೀಸರನ ಕುರಿತಾದ ಪ್ರೀತಿಯನ್ನು ಉಳಿಸಿಕೊಂಡು ಸೀಸರನ ಸರ್ವಾಧಿಕಾರೀ ಗುಣಗಳನ್ನು ತೊಡೆದು ಹಾಕಲು ಸಾಧ್ಯವಿದ್ದಿದ್ದರೆ ಎಂಬ ಮುಗ್ಧ ಆಸೆ. 'ಪಾಪವನ್ನು ಖಂಡಿಸು, ಪಾಪವೆಸಗಿದವನನ್ನಲ್ಲ' ಎಂಬ ಮೂಲಭೂತ ಧಾರ್ಮಿಕ ನಂಬಿಕೆ ಇದು. ಪಾಪವನ್ನು ಖಂಡಿಸುವುದೆಂದರೆ, ಪಾಪವಿಲ್ಲದ ಜಗತ್ತು ಸೃಷ್ಟಿ ಮಾಡುವುದೆಂದರೆ ಕ್ರಾಂತಿ ಮಾಡಿದಂತೆ. ಸೀಸರನ ಚೇತನದಲ್ಲಿ ಈ ಪಾಪದ ಅಂಶವಿದೆ. ಹುಳಿಯಿಲ್ಲದೆ, ಕಹಿಯಿಲ್ಲದೆ, ವಿಷವಿಲ್ಲದೆ ಒರೆಸಿ ತೆಗೆಯ ಬೇಕಾಗಿದೆ. ''ದುರದೃಷ್ಟವಶಾತ್ Caesar must bleed for it'' ''ಆದದ್ದರಿಂದ ದಯಾಪರ ಸ್ನೇಹಿತರೆ, ಧೈರ್ಯವಾಗಿ ಅವನನ್ನು ಕೊಲ್ಲೋಣ. ಆದರೆ ದ್ವೇಷದಿಂದಲ್ಲ, ದೇವರಿಗೆ ಅರ್ಪಿಸುವ ಆಹುತಿಯಾಗಿ ಅವನನ್ನು ರೂಪಿಸೋಣ. ನರಿ ನಾಯಿಗಳಿಗೆ ಹಾಕುವ ಹೆಣದ ಚೂರುಗಳನ್ನಾಗಿಯಲ್ಲ, ಒಂದು ಕ್ಷಣ, ಒಂದು ಕ್ಷಣವಷ್ಟೆ. ಮುಂದಿನ ಕ್ಷಣದಲ್ಲಿ ನಾವೇ ಮಾಡಿದ ಕೃತ್ಯದ ಬಗೆಗ ನಮಗೇ ಅಸಮಾಧಾನವಿರುವಂತೆ ನಡೆದುಕೊಳ್ಳೋಣ. ನಮ್ಮ ಕೃತ್ಯ ಅನಿವಾರ್ಯವಾಗಿ ಕಾಣಬೇಕೆ ವಿನಾ ಕೊಲೆಗಡುಕರ ಕೃತ್ಯವಾಗಿ ಕಾಣಬಾರದು. ಸೀಸರನ ಕುರಿತು ಯಾವ ವಿಧವಾದ ಅಸೂಯೆಯೂ ನಮಗಿಲ್ಲ. ಆಂಟನಿ ಬಗ್ಗೆ ಚಿಂತಿಸುವುದು

ಬೇಡ. ತಲೆಯೇ ಹೋದ ಮೇಲೆ ಕೈ ಕಾಲುಗಳು ಏನು ಮಾಡಿಯಾವೋ ಅದಕ್ಕಿಂತ ಹೆಚ್ಚಿಗೆ ಏನು ಮಾಡಬಲ್ಲ ಅವನು ?''

ಇದು ನಾವು ಮೊದಲ ಅಂಕದಲ್ಲಿ ಕಂಡ ಬ್ರೂಟಸ್ - ಘನತೆಯ, ಎತ್ತರದ ವ್ಯಕ್ತಿ. ಎಂದೇ ಸೀಸರನಿಗೆ ಬಳಸಿದ ಮಾತನ್ನು ಅವನಿಗೂ ಬಳಸಿದುದು – ಶ್ರೀಮಂತ ಎಂದು. ಈ ಮಾತುಗಳನ್ನಾಡುತ್ತಿರುವಾಗಲೇ ರಾಜಕೀಯವಾಗಿ, ವೈಯಕ್ತಿಕವಾಗಿ ಸಂಪೂರ್ಣ ತಾನು ನಾಶವಾಗುವ ಮಾತನಾಡುತ್ತಿದ್ದೇನೆ ಎಂದು ಅವನಿಗೆ ಅನ್ನಿಸದಿದ್ದರೂ, ಖಂಡಿತವಾಗಿ ಕ್ಯಾಷಿಯಸನಿಗೆ ಮತ್ತು ನಮಗೆ ಬೇರೆ ಬೇರೆ ಅರ್ಥಗಳಲ್ಲಿ ಮನದಟ್ಟಾಗುತ್ತದೆ. ಈ ಬದುಕಿನಲ್ಲಿ, ಅದರಲ್ಲಿಯೂ ಸಾರ್ವಜನಿಕ ಬದುಕಿನಲ್ಲಿ ಆಯ್ಕೆ ಮಾಡಿಕೊಂಡ ಮೇಲಂತೂ ಒಂದೇ ದಾರಿಯನ್ನು ಆಯ್ಕೆ ಮಾಡಿಕೊಳ್ಳಬೇಕು – ಯಶಸ್ವಿಯಾಗಬೇಕಾದರೆ, ಎರಡೂ ದಾರಿಗಳನ್ನು ಆಯ್ಕೆ ಮಾಡಿಕೊಂಡರಾಗುವುದಿಲ್ಲ, ಮತ್ತು ಆಯ್ಕೆ ಮಾಡಿಕೊಂಡಾದ ಮೇಲೆ ಗುರಿಮುಟ್ಟುವವರೆಗೆ ಹಟದಿಂದ ಮುನ್ನುಗ್ಗಬೇಕು – ಅರೆಮನಸ್ಸು ಸಾಧ್ಯವಿಲ್ಲ. ಇವೆಲ್ಲ ಲೋಕಾರೂಢಿಯ 'ವಿವೇಕ'ದ ಮಾತುಗಳು. ಇವು ಯಾವುವೂ ಬ್ರೂಟಸ್‌ನಿಗೆ ಒಪ್ಪಿತವಲ್ಲ. ಎಂದೇ ಅವನು ಯಶಸ್ವಿಯಾಗಲಾರ. ಬದುಕೊಂದು ಕ್ರಾಂತಿ ಎಂದು ತಿಳಿದು ಬದುಕುವವನಿಗೆ ವೈಯಕ್ತಿಕ ಯಶಸ್ಸು ಪ್ರಮುಖ ಆಕರ್ಷಣೆಯಲ್ಲ. ಅಂದರೆ ಮೂರ್ತಗಳಲ್ಲಿ ಆಸಕ್ತಿಯಿಲ್ಲ.

ಕ್ಯಾಷಿಯಸನಿಗೆ ಯಶಸ್ಸು ಮುಖ್ಯ. ಎಂದೇ ಮೊದಲ ಬಾರಿಗೆ ಬ್ರೂಟಸನ ಮಾತಿಗೆ ಅಸಮ್ಮತಿ ಸೂಚಿಸುತ್ತಾನೆ. ಆಂಟನಿ ಬಗ್ಗೆ – ಅವನು ಸೀಸರನ ಬಗ್ಗೆ ನಿಷ್ಠೆ ಪ್ರೀತಿಗಳು ಉಳ್ಳವನಾದದ್ದರಿಂದ – ಜಾಗರೂಕರಾಗಿರಬೇಕು ನಾವು ಎಂದು ಹೇಳುತ್ತಾನೆ. ಬ್ರೂಟಸ್ ಎಷ್ಟು ದೊಡ್ಡ ಮೇಧಾವಿಯೋ ಅಷ್ಟೇ ಮಟ್ಟದ 'ಮುಗ್ಧ ಮೂರ್ಖ'ನೂ ಹೌದು. ಬಹುಶಃ ಈ ಮಾತು ಜಗತ್ತಿನ ಎಲ್ಲ ಮೇಧಾವಿಗಳಿಗೂ ಅನ್ವಯಿಸಿ ಹೇಳಬಹುದು – ತತ್‌ಕ್ಷಣದಲ್ಲಿ ಸೀಸರನಿಗೂ. ಕ್ಯಾಷಿಯಸನ ಆಕ್ಷೇಪಕ್ಕೆ ಬ್ರೂಟಸನ ಉತ್ತರ ಈ ಮಾತಿಗೆ ಪುಷ್ಟಿ ನೀಡುತ್ತದೆ – ''ಆಂಟನಿ ಸೀಸರನ ಬಗ್ಗೆ ಅಷ್ಟೊಂದು ಪ್ರೀತಿಯಿದ್ದವನಾದರೆ ತನಗೆ ತಾನೇ ಅಪಾಯಮಾಡಿ ಕೊಳ್ಳಬಹುದೇ ಹೊರತು ಮತ್ತೇನು ಮಾಡಬಲ್ಲ ? ವಿಪರೀತಗಳಿಗೆ, ಉದ್ರೇಕಗಳಿಗೆ, ಭಾವಾವೇಶಕ್ಕೆ ಒಳಗಾಗಿ ತನಗಷ್ಟೇ ಹಾನಿ ತಂದುಕೊಳ್ಳಬಹುದು ಅಷ್ಟೆ'' ಎಂದು ನಿಕೃಷ್ಟವಾಗಿ ಮಾತನಾಡಿ ಆಂಟನಿ ವಿಷಯವನ್ನೇ ಪಕ್ಕಕ್ಕೆ ತಳ್ಳಿಬಿಡುತ್ತಾನೆ. ಅವನ ಮಾತಿಗೆ ಮಿಕ್ಕವರೂ ವಿಧೇಯರಾಗಿ ತಲೆದೂಗಿಬಿಡುತ್ತಾರೆ. ತಲೆತೂಗುವುದಷ್ಟೇ ಅಲ್ಲ, ಆಂಟನಿ ಎಂಥವನೆಂದರೆ ''ನಡೆದುದೆಲ್ಲವನ್ನು ನೆನೆಸಿಕೊಂಡು ನಕ್ಕು ಮರೆತು ಬಿಡುವವರಂಥವನು. ಅವನಿಂದ ಏನೂ ಭಯವಿಲ್ಲ, ಬದುಕಿಕೊಂಡು ಹೋಗಲಿ'' ಎಂದೂ ತೀರ್ಮಾನವನ್ನೂ ಕೊಟ್ಟುಬಿಡುತ್ತಾರೆ.

ಮುಂದಕ್ಕೆ ಈ ಸಂಗಾತಿಗಳ ನಿಷ್ಕ್ರಮಣದವರೆಗ ನಡೆಯುವುದೆಲ್ಲ ಬೆಳಗಾದ ನಂತರ ಅನುಸರಿಸಬೇಕಾದ ವಿವರಗಳ ಚರ್ಚೆ. ಮುಖ್ಯವಾದದ್ದೊಂದೇ ಸಂಗತಿ. ಕ್ಯಾಷಿಯಸನಿಗೆ ತೀವ್ರ

ಆತಂಕ ಮೂಡಿಸಿರುವುದೂ ಅದೆಯೆ. ''ಇತ್ತೀಚೆಗೆ ಸೀಸರ್ ಮೂಢನಂಬಿಕೆಗಳಿಗೆ ಒಲಿಯುತ್ತಿದ್ದಾನೆ. ಈ ಭಯಾನಕ ರಾತ್ರಿ, ಭವಿಷ್ಯಕಾರನ ವಾಣಿ ಇವುಗಳೆಲ್ಲ ಅವನನ್ನು ಸೆನೆಟಿನಿಂದ ದೂರವೇ ಇರಿಸಿಬಿಡಬಹುದು'' ಎನ್ನುತ್ತಾನೆ. ಇದಕ್ಕೇ ಡೇಶಿಯಸ್ ಬ್ರೂಟಸ್‌ನಲ್ಲಿ ಉತ್ತರವಿದೆ. ಪಿತೂರಿಗಾರರ ಲಕ್ಷಣವೇ ಇದು, ವ್ಯೂಹರಚನೆಗಳಲ್ಲಿ ನಿಷ್ಣಾತರಾಗಿರುವುದು. ಸೀಸರನ ಶ್ರೀಮಂತ ವ್ಯಕ್ತಿತ್ವದ ಅರಿವು ಇರಲು ಸಾಧ್ಯವಿಲ್ಲದಿದ್ದರೂ ಸೀಸರ್‌ನಲ್ಲಿರುವ ದೌರ್ಬಲ್ಯಗಳ ಪರಿಚಯವಿದೆ. ಪಿತೂರಿಯೆಂದರೆ ದೌರ್ಬಲ್ಯಗಳ ದುರ್ಲಾಭ ಪಡೆದುಕೊಳ್ಳುವುದು. ಸೀಸರ್‌ನನ್ನು ಮನೆಯಿಂದ ಹೊರಡಿಸುವ ವಿಧಾನ ತನಗೆ ಗೊತ್ತು. ''ನಾನು ಕಂಡವರಲ್ಲೆಲ್ಲ ಹೊಗಳಿಕೆಗೆ ಬಾಯ್ಬಿಡದ ವ್ಯಕ್ತಿ ಎಂದರೆ ನೀನೇ, ನಿನಗೆ ಭಟ್ಟಂಗಿಗಳನ್ನು ಕಂಡಲೆ ದ್ವೇಷ ಎಂದು ಅವನಿಗೆ ಹೇಳಿದರೆ ''ಹೌದು, ಹೌದು'' ಎಂದು ಆ ಕ್ಷಣದಲ್ಲಿ ಪ್ರಶಂಸೆಯ ಮಾತಿಗೆ ಉಬ್ಬುತ್ತಾನೆ'' ಎಂದು ನುಡಿದು ಸೀಸರನನ್ನು ಸೆನೆಟಿಗೆ ಕರೆತರುವ ಜವಾಬ್ದಾರಿ ತನಗಿರಲಿ ಎಂದು ಹೇಳುತ್ತಾನೆ. ಈ ಗುಂಪಿಗೆ ಮತ್ತೊಬ್ಬ – ಲಿಗೇರಿಯಸ್‌ನನ್ನೂ ಸೇರಿಸಿಕೊಳ್ಳಬೇಕು. ಅವನಿಗೆ ಸೀಸರನ ಮೇಲೆ ಕ್ರೋಧವಿದೆ ಎಂದಾಗ ಬ್ರೂಟಸ್ 'ಅವನನ್ನು ನನ್ನಲ್ಲಿಗೆ ಕಳಿಸು, ನನ್ನ ಬಗ್ಗೆ ಅವನಿಗೆ ಆದರವಿದೆ; ಅವನ ವಿಷಯ ನಾನು ನೋಡಿಕೊಳ್ಳುತ್ತೇನೆ' ಎನ್ನುತ್ತಾನೆ. ಬೆಳಗಾಗುತ್ತಿದೆ. ಇನ್ನು ಮತ್ತೆ ಬೆಳಗ್ಗೆಯೇ ಭೇಟಿ, ಅಲ್ಲಿಯವರೆಗೆ ''ನೀವು ಆಡಿರುವ ಮಾತುಗಳ ನೆನಪಿರಲಿ; ನೈಜ ರೋಮನರ ಹಾಗೆ ನೀವು ಕಾಣಿಸಿಕೊಳ್ಳಿ'' ಎಂದು ಕ್ಯಾಷಿಯಸ್ ಎಚ್ಚರಿಕೆಯ ಮಾತನ್ನಾಡುತ್ತಾನೆ. ಬ್ರೂಟಸ್ ದನಿಗೂಡಿಸಿ ''ಲವಲವಿಕೆಯಿಂದಿರಿ, ಗೆಲುವಿನಿಂದಿರಿ; ನಮ್ಮ ಮನಸ್ಸಿನೊಳಗಿನ ಉದ್ದೇಶಗಳು ನಮ್ಮ ಮುಖದ ಮೇಲೆ ಕಾಣದಿರಲಿ. ಸದ್ಯಕ್ಕೆ ನಾವೆಲ್ಲ ರೋಮನ್ ನಟರ ಹಾಗೆ – ಗಂಭೀರವಾಗಿ, ಶಕ್ತರಾಗಿ ಕಾಣೋಣ.''

ಎಲ್ಲರೂ ತೆರಳಿದ ಮೇಲೆ ತಿರುಗಿ ನೋಡಿದರೆ ತನ್ನ ಬಾಲಸೇವಕ ಸುಖನಿದ್ರೆಯಲ್ಲಿದ್ದಾನೆ. ಬ್ರೂಟಸ್‌ನಿಗೆ ನಿದ್ರೆಯ ಆವಶ್ಯಕತೆ ಎಷ್ಟಿದೆ ಎಂಬುದು, ಮತ್ತು ಎಂಥ ನಿದ್ರೆಯ ಆವಶ್ಯಕತೆಯಿದೆ ಎಂಬುದು ಅವನು ಲೂಷಿಯಸನ ನಿದ್ರೆಯನ್ನು ವರ್ಣಿಸುವಾಗ ಸ್ಪಷ್ಟವಾಗುತ್ತದೆ. "Enjoy the honey-heavy dew of slumber" ದೀರ್ಘನಿದ್ರೆ, ಮಧುರನಿದ್ರೆ ಹಾಗೂ ಮರುದಿನವೆಲ್ಲ ಉಲ್ಲಾಸದಿಂದ ಇರುವುದಕ್ಕೆ ಅನುವು ಮಾಡುವ ನಿದ್ರೆ. ಮನಸ್ಸಿನಾಳದ ಬಯಕೆ ಎಂಥ ಅದ್ಭುತ ಕಾವ್ಯವಾಗಿ ಹೊಮ್ಮುತ್ತದೆಂದು ನಾವು ನೋಡಬೇಕು. ಲೂಷಿಯಸ್ ಬ್ರೂಟಸನ ಸ್ಥಿತಿಯಲ್ಲಿಲ್ಲವಲ್ಲ! "Thou hast no figures nor no fantasies / Which busy care draws in the brains of men / Therefore thou sleepst so sound" ಮತ್ಸರಕ್ಕಿಂತ ಹೆಚ್ಚು ಲೂಷಿಯಸನ ಸ್ಥಿತಿಯನ್ನು ಮೆಚ್ಚಿ ಆಡಿದ ಮಾತುಗಳೂ ಹೌದು.

ಈ ದೃಶ್ಯದ ಮುಂದಿನ ಭಾಗ ಬ್ರೂಟಸ್ ಮತ್ತು ಪೋರ್ಷಿಯಾ ನಡುವಿನಲ್ಲಿ ನಡೆಯುವುದು. ಗಂಡ-ಹೆಂಡಿರ ದೃಶ್ಯ. ಈ ದೃಶ್ಯವಿಲ್ಲದಿದ್ದರೆ ಅಥವಾ ನಾಟಕದ ರಂಗಪ್ರಯೋಗದಲ್ಲಿ ಈ ದೃಶ್ಯವನ್ನು ಕೈಬಿಟ್ಟರೆ ಬಹುಶಃ ಇಡೀ ನಾಟಕಕ್ಕೇ ಅನ್ಯಾಯ

ವೆಸಗಿದಂತೆ. ರಾಜಕೀಯ ನಾಟಕವೂ ಕೂಡ ಒಂದು ವಿಶಿಷ್ಟ ಸಂದರ್ಭದಲ್ಲಿ ಜರುಗುವುದೇ ಹೊರತು ಶೂನ್ಯದಲ್ಲಿ ಅಲ್ಲ. ಆದದ್ದರಿಂದಲೇ ಬದುಕು ಸಂಕೀರ್ಣವಾಗುತ್ತ ಹೋಗುವುದು ; ಹೀಗಾಗಿ ಬ್ರೂಟಸ್ ಮತ್ತು ಪೋರ್ಷಿಯಾ ದೃಶ್ಯ ನಮ್ಮನ್ನು ತೀವ್ರವಾಗಿ ಆಕರ್ಷಿಸುವ ದೃಶ್ಯ.

ಗಂಡ ದೊಡ್ಡ ಮನುಷ್ಯ ಹೌದು ; ಗೌರವಾನ್ವಿತ ನಾಯಕ ಹೌದು ; ಸಕ್ರಿಯ ರಾಜಕಾರಣಿ ಹೌದು. ಇಷ್ಟಿದ್ದೂ ಅವನು ತನ್ನ ಗಂಡನೂ ಹೌದು. ತಾನು ಅವನ ಹೆಂಡತಿಯೂ ಹೌದು. ಆದದ್ದರಿಂದಲೇ ಹೆಂಡತಿಗೆ ಕೆಲವು ಹಕ್ಕುಗಳಿವೆ, ಬಾಧ್ಯತೆಗಳಿವೆ. ಗಂಡ-ಹೆಂಡಿರ ಬದುಕೆಂದರೆ ಪರಸ್ಪರ ಹಂಚಿಕೊಳ್ಳುವುದು – ಸುಖ, ದುಃಖಗಳು, ನೋವು, ನಲಿವುಗಳು ಎಲ್ಲವನ್ನೂ. ಪೋರ್ಷಿಯಾ ಹೇಳುವ ಹಾಗೆ ಕೇವಲ ಊಟವನ್ನಷ್ಟೇ ಅಲ್ಲ, ಹಾಸಿಗೆಯನ್ನಷ್ಟೇ ಅಲ್ಲ ; ಹೆಂಡತಿಯಿರುವುದು ಯಾವಾಗಲಾದರೊಮ್ಮೆ ಗಂಡ ಬಯಸಿದಾಗ ಒಂದಷ್ಟು ಮಾತಾಡಿ ಸುಮ್ಮನಾಗುವುದಕ್ಕಲ್ಲ. ಅಷ್ಟೆ ಆದರೆ ಪೋರ್ಷಿಯಾ ಬ್ರೂಟಸ್‌ನ ವೇಶ್ಯೆ ಮಾತ್ರ, ಹೆಂಡತಿಯಲ್ಲ. ಹೆಂಡತಿಯೆಂದಾದ ಮೇಲೆ, ಮದುವೆಯ ಎಲ್ಲ ನೀತಿ-ನಿಯಮಗಳನ್ನೂ ಇಬ್ಬರೂ ಪಾಲಿಸಬೇಕು. ''ಇಂಥ ರಾತ್ರಿಯಲ್ಲಿ ಬೆಚ್ಚಗಿನ ಹಾಸಿಗೆಯನ್ನು ಬಿಟ್ಟೆದ್ದು ಒಬ್ಬನೇ ಹೀಗೆ ತಿರುಗುವನೆ ಬ್ರೂಟಸ್ ? ಅವನು ಹೇಳಿಕೊಳ್ಳುವಂತೆ ನಿಜವಾಗಿ ಅವನ ಆರೋಗ್ಯ ಚೆನ್ನಾಗಿಲ್ಲದಿದ್ದರೆ ? ''ಇತ್ತೀಚೆಗೆ ನೀನು ಊಟ ಮಾಡುತ್ತಿಲ್ಲ ; ಮಾತನಾಡುವುದಿಲ್ಲ ; ಮಾತನಾಡಿಸಿದರೆ ಹುಬ್ಬುಗಂಟಿಕ್ಕಿ ಕಾಲು ನೆಲಕ್ಕಪ್ಪಳಿಸಿ ನಡೆದುಬಿಡುತ್ತೀಯೆ. ನಿನ್ನ ಮನಃಸ್ಥಿತಿಯನ್ನೂ ಮತ್ತೂ ಅಷ್ಟು ಕೆಡಿಸಬಾರದೆಂದು ದೂರವುಳಿದೆ. ಆದರೆ ಈಗ ನೀನು ಹೇಳಲೇಬೇಕು .....unfold to me, your self, your half / Why you are heavy, and what men to night / Have had resort to you ; for here have been / Some six or seven, who did hide their faces / Even from darkness" ಎಂದು ಅವನ ಮುಂದೆ ಮಂಡಿಯೂರಿ ಬೇಡುತ್ತಾಳೆ. "Kneel not, gentle portia" ಎಂದು ಮೃದುವಾಗಿ ಕೇಳಿಕೊಳ್ಳುತ್ತಾನೆ ಬ್ರೂಟಸ್. ಪೋರ್ಷಿಯಾ ಅಷ್ಟೇ ಮೃದುವಾಗಿ ಹೇಳುತ್ತಾಳೆ. "I should not, if you were gentle Brutus". ನಾನು ಹೆಣ್ಣಿರಬಹದು, ಆದರೂ ಪೋರ್ಷಿಯಾ, ಬ್ರೂಟಸನ ಹೆಂಡತಿ ; ನಾನು ಹೆಣ್ಣಿರಬಹುದು, ಆದರೂ ನಾನು ಕ್ಯಾಟೋನಂಥ ಒಬ್ಬ ಮಹಾನ್ ವ್ಯಕ್ತಿಯ ಮಗಳು. ಇಂಥವನ ಹೆಂಡತಿ, ಇಂಥವನ ಮಗಳಾಗಿ ನಾನು ಬೇರೆಲ್ಲ ಹೆಣ್ಣುಮಕ್ಕಳಿಗಿಂತ ಹೆಚ್ಚಿಗೇನೂ ಇಲ್ಲ ಎಂದು ಭಾವಿಸಿದ್ದೀಯ ? ನನ್ನ ತೊಡೆಯಲ್ಲೊಂದು ಆಳದ ಗಾಯಮಾಡಿಕೊಂಡು ನನ್ನ ಸ್ಥಿರತೆ ಮತ್ತು ದಾರ್ಢ್ಯಗಳನ್ನು ನಾನು ಸ್ಥಾಪಿಸಿಕೊಂಡಿದ್ದೇನೆ. ಹೇಳು, ಏನು ನಿನ್ನ ಮನಸ್ಸಿನ ಸಂಕಟಗಳು ?'' ಗಂಡ ಕೈತಪ್ಪಿ ಹೋಗುತ್ತಿದ್ದಾನೆಂಬುದಷ್ಟೆ ಅಲ್ಲ ಇಲ್ಲಿ ಕಾಣುವುದು. ಸ್ವಾರ್ಥದಿಂದ ಪ್ರೇರೇಪಿತ ವಾದುದಲ್ಲ, ಪ್ರೀತಿ ಮತ್ತು ಕಳಕಳಿಗಳು ಪ್ರತಿ ಶಬ್ದದಲ್ಲಿ ಧ್ವನಿಸುತ್ತವೆ. ಎಂದೇ ಬ್ರೂಟಸನ ಮಾತು ಅತ್ಯಂತ ಸಹಜವಾಗಿ, ಹೃತ್ಪೂರ್ವಕವಾಗಿ ಆಡಿದ್ದೆಂದು ನಮಗೆ ಸ್ಪಷ್ಟವಾಗುತ್ತದೆ :

"O ye gods, / Render me worthy of this noble wife". ತನ್ನ ರಾಜಕಾರಣದ ಗೊಂದಲಗಳ ಮಧ್ಯೆ ಅನವಶ್ಯಕ ಪೀಡೆಯಾಗಿ ಕಾಣುವುದಿಲ್ಲ ಹೆಂಡತಿ. ತನ್ನ ರಾಷ್ಟ್ರದ ಕುರಿತಾದ ಚಿಂತೆಗಳಲ್ಲಿ ತನ್ನ ಮನೆಯ ಒಡತಿ ತನ್ನ ಬೆನ್ನಿಗೆ ಹೊರಿಸಿದ ಹೊರೆಯಾಗಿ ಕಾಣುವುದಿಲ್ಲ. ಬದಲಿಗೆ ಇಂಥ 'noble wife'ಗೆ ತಾನು 'worthy' ಗಂಡನಾಗಿಲ್ಲವೆಂಬ ಅರಿವು ದಟ್ಟವಾಗಿ ಕಾಡುತ್ತದೆ. ಎಂದೇ ಅವನು ದೇವರಿಗೆ ಮಾಡಿಕೊಂಡ ಪ್ರಾರ್ಥನೆ 'O ye gods / Render me worthy....' ಇಷ್ಟರೊಳಗೆ ಹೊರಗೆ ಬಾಗಿಲ ಬಡಿತವಾಗಿ ಹೆಂಡತಿಗೆ ಒಳಗೆ ಹೋಗಲು ಹೇಳುತ್ತಾನೆ, ತನ್ನ ಹೃದಯದಲ್ಲಿರುವ ಗುಟ್ಟುಗಳನ್ನೆಲ್ಲ ಅವಳಿಗೆ ಖಂಡಿತ ಬಿಚ್ಚಿಡುವುದಾಗಿ ಹಾಗೂ ತನ್ನ ಎಲ್ಲ ವರ್ತನೆಗಳಿಗೂ ವಿವರಣೆಗಳನ್ನು ಕೊಡುವುದಾಗಿ ಆಶ್ವಾಸನೆ ನೀಡಿ ಕಳಿಸಿಕೊಡುತ್ತಾನೆ. ದೃಶ್ಯದ ಕೊನೆಯ ಭಾಗ ಕಾಯಸ್ ಲಿಗೇರಿಯಸ್‌ನೊಡನೆ ನಡೆಯುವುದು. ತನ್ನ ಸಂಗಾತಿಗಳು ಸೂಚಿಸಿದ್ದ ಮತ್ತು ತಾನು ಹೇಳಿಕಳಿಸಿದ್ದ ವ್ಯಕ್ತಿ ಲಿಗೇರಿಯಸ್ ಬಂದಿದ್ದಾನೆ. ಅನಾರೋಗ್ಯದಲ್ಲಿದ್ದಾನೆ. ಈ 'ಅನಾರೋಗ್ಯ' ಎಂಬ ಶಬ್ದದ ಸುತ್ತಲೇ ಇಬ್ಬರೂ ಆಟವಾಡುತ್ತಾರೆ. ಸೀಸರನ ಹೆಸರು ಹೇಳದೆಯೆ ತಮ್ಮ ಮುಂದಿರುವ ಕಾರ್ಯದ ವಿವರ ನೀಡುತ್ತಾನೆ ಬ್ರೂಟಸ್. 'What's to do' ಎಂದು ಲಿಗೇರಿಯಸ್ ಕೇಳಿದ ಪ್ರಶ್ನೆಗೆ ಬ್ರೂಟಸ್ 'A piece of work that will make sick men whole" ಅನ್ನುತ್ತಾನೆ. ಆದಕ್ಕೆ ಲಿಗೇರಿಯಸ್ "But are not some whole that we must make sick" ಎಂದು ಸೂಚ್ಯವಾಗಿ ಕೇಳುತ್ತಾನೆ. "ನೀನು ಮುಂದೆ ಹೊರಡು ; ಹೊಸ ಹುರುಪಿನಲ್ಲಿ ನಿನ್ನ ಹಿಂದೆ ನಡೆಯುತ್ತೇನೆ. ಏತಕ್ಕಾಗಿ ಎಂದು ಕೇಳುವುದಿಲ್ಲ. ಇಷ್ಟು ಸಾಕು - ಬ್ರೂಟಸ್ ನನ್ನ ನಾಯಕತ್ವ ವಹಿಸಿದ್ದಾನೆ ಎಂಬುದು."

ಎರಡನೆಯ ಅಂಕದ ಎರಡನೆಯ ದೃಶ್ಯ ಸೀಸರನ ಮನೆಯಲ್ಲಿ ನಡೆಯುವುದು. ಬೆಳಗಾಗಿದೆ. ಸೀಸರ್ ಎದ್ದವನೇ ಕೊಂಚ ಗೊಂದಲಗೊಂಡವನಂತೆ ಕಾಣುತ್ತಿದ್ದಾನೆ. ಇಡೀ ರಾತ್ರಿ ಆಕಾಶ ಭೂಮಿಗಳೆರಡೂ ಕ್ಷೋಭೆಗೊಂಡಂತೆ ಇದ್ದವು. ಕ್ಯಾಲಿಪೂರ್ನಿಯ, ತನ್ನ ಹೆಂಡತಿ, ಕನಸಿನಲ್ಲಿ 'ರಕ್ಷಿಸಿ, ಸೀಸರನನ್ನು ಕೊಲೆ ಮಾಡುತ್ತಿದ್ದಾರೆ" ಎಂದು ಕಿರುಚಿದ್ದಳು. ಎಂದೇ ಸೇವಕನನ್ನು ಕಳುಹಿಸಿ ಅರ್ಚಕರಿಗೆ ಬಲಿಯನ್ನು ಅರ್ಪಿಸಲು ಹೇಳಿ ಅವರ ಅಭಿಪ್ರಾಯ ತಿಳಿದುಕೊಳ್ಳಲು ನಿಶ್ಚಯಿಸುತ್ತಾನೆ. ಹಿಂದಿನ ದೃಶ್ಯದಲ್ಲಿ ಬ್ರೂಟಸ್ ಮತ್ತು ಅವನ ಸಂಗಾತಿಗಳು ಮಾತನಾಡಿರಕೊಳ್ಳುತ್ತಿದ್ದಂತೆ ಸೀಸರನಿಗೆ ಮೂಢನಂಬಿಕೆಗಳಲ್ಲಿ ವಿಶ್ವಾಸ ಹೆಚ್ಚಾಗಿದೆಯೆ ಎಂಬ ಪ್ರಶ್ನೆಗೆ ಉತ್ತರವನ್ನು ಅರ್ಚಕರಿಂದ ವಿವರಣೆಗಳು ಬರುವವರೆಗೆ ತಡೆಹಿಡಿಯೋಣ.

ಹಿಂದಿನ ದೃಶ್ಯದಲ್ಲಿ ಬ್ರೂಟಸ್-ಪೋರ್ಶಿಯಾ ನಡುವಿನ ಸನ್ನಿವೇಶವನ್ನು ನೋಡಿದ ಮೇಲೆ ಈಗ ಈ ನಾಟಕದಲ್ಲಿನ ಮತ್ತೊಂದು ಗಂಡ-ಹೆಂಡಿರ ಜೋಡಿ - ಸೀಸರ್ ಮತ್ತು ಕ್ಯಾಲಿಪೂರ್ನಿಯಾ – ಮಧ್ಯದಲ್ಲಿ ಏರ್ಪಡುವ ಸನ್ನಿವೇಶವನ್ನು ನೋಡುತ್ತೇವೆ. ಈಗಾಗಲೇ ಸೀಸರ್ ಹೇಳಿರುವಂತೆ ಕ್ಯಾಲಿಪೂರ್ನಿಯಾ ಕನಸಿನಲ್ಲಿ ಬೆಚ್ಚಿದ್ದಾಳೆ, ಕನವರಿಸಿದ್ದಾಳೆ. ಬೆಳಗಾದ

ಕೂಡಲೆ ಗಂಡನನ್ನು 'ಏನು, ನೆನ್ನೆಯ ರಾತ್ರಿಯಂಥ ಘೋರವನ್ನು ನೋಡಿದ ಮೇಲೂ ನಿನಗೆ ಮನೆ ಬಿಟ್ಟು ಹೊರಗೆ ಹೊರಡುವ ಇರಾದೆಯೆ' ಎಂದು ಕೇಳುತ್ತಾಳೆ. ಸೀಸರನಿಗೆ ಹೆಂಡತಿಯ ಭಯ ಆತಂಕಗಳನ್ನು ನಿವಾರಿಸಲು ಕಾಣುವ ಒಂದೇ ಮಾರ್ಗವೆಂದರೆ, ಇಡೀ ಪ್ರಕರಣವನ್ನು ಅತ್ಯಂತ ಅಸಡ್ಡೆಯಿಂದ ಕಂಡು ತಿರಸ್ಕರಿಸಿಬಿಡುವುದು. ''ಹೌದು, ಸೀಸರ್ ಹೊರಡುತ್ತಿದ್ದಾನೆ. ಬೆದರಿಸುವುದೆಲ್ಲ ನನ್ನ ಬೆನ್ನ ಹಿಂದೆ ನಿಂತು ಬೆದರಿಸುತ್ತವೆ. ಒಮ್ಮೆ ಸೀಸರನ ಮುಖ ಕಂಡಿತೆಂದರೆ ಮುಖ ಮರೆಸಿ ಮಾಯವಾಗುತ್ತವೆ'' ಅನ್ನುತ್ತಾನೆ. ಕ್ಯಾಲಿಫೂರ್ನಿಯಾ ಇಂದು ಅಷ್ಟು ಸುಲಭವಾಗಿ ಸುಮ್ಮನಾಗುವವಳಲ್ಲ. ತಾನು ಕಂಡದ್ದಷ್ಟೇ ಅಲ್ಲ, ಸುತ್ತಲೂ ನಾಲ್ಕೂ ಕಡೆ ನೋಡಿದವರು ತನಗೆ ವರದಿಗಳನ್ನು ಒಪ್ಪಿಸಿದ್ದಾರೆ. ಘೋರ ರಾತ್ರಿ ಅದು. ಸಿಂಹಗಳು ಬೀದಿ ಬೀದಿಗಳಲ್ಲೇ ಮರಿಗಳನ್ನು ಹೆತ್ತಿವೆ. ಗೋರಿಗಳು ಬಾಯ್ಬಿಟ್ಟಿವೆ. ಶವಗಳು ಹೊರ ನಡೆದಿವೆ. ಮೋಡಗಳಲ್ಲಿ ಯುದ್ಧವೇ ನಡೆಯುತ್ತಿರುವಂತೆ ರಕ್ತದ ಮಳೆ ಸುರಿದಿದೆ. ಕುದುರೆಗಳು ಕೆನೆದಿವೆ, ಸತ್ತವರೆಲ್ಲ ನರಳುತ್ತಿದ್ದಂತೆ ಕೇಳಿಸಿವೆ. ಪ್ರೇತಗಳು ಅರಚುತ್ತ, ಚೀರುತ್ತ ಬೀದಿಗಳಲ್ಲಿ ನಡೆದಾಡಿವೆ. ''ಸೀಸರ್, ನಾನು ಶಕುನ, ನಿಮಿತ್ತಗಳಿಗೆ ಎಂದೂ ಬೆಲೆಕೊಟ್ಟವಳಲ್ಲ. ಆದರೆ ನೆನ್ನೆಯಂಥ ರಾತ್ರಿ ಅಸಾಧಾರಣವಾದದ್ದು ; ಕಂಡು ಕೇಳರಿಯದಂಥದು. ನಾನು ಭಯಗೊಂಡಿದ್ದೇನೆ'' ಎಂದು ಆರ್ತಳಾಗಿ ಹೇಳುತ್ತಾಳೆ. ಸೀಸರನಿಗೆ ಅವಳು ಹೇಳಿದ್ದು ಪರಿಣಾಮ ಬೀರಿರಬಹುದಾದರೂ ಅದಕ್ಕೆ ಬೇರೆಯ ರೀತಿಯೇ ಉತ್ತರ ಹೇಳುತ್ತಾನೆ. ''ಇದರಲ್ಲೆಲ್ಲ ನನಗೇನು ವಿಶೇಷ ? ಎಲ್ಲರಿಗೂ ಆದದ್ದು ನನಗೂ ತಾನೆ ? ಅದೂ ಅಲ್ಲದೆ ದೈವಸಂಕಲ್ಪವೇನಿದೆಯೋ ಅದು ನಡೆದೇ ನಡೆಯುತ್ತದೆ. ಆದದ್ದರಿಂದ Ceaser shall to gorth" ಹಾಗಲ್ಲ, ''ತಿರುಕನ ಸಾವನ್ನು ಧೂಮಕೇತುಗಳು ಸೂಚಿಸುವುದಿಲ್ಲ. ರಾಜಪುತ್ರರ ಸಾವನ್ನು ದೇವಲೋಕವೂ ಸಾರಿಹೇಳುತ್ತದೆ'' ಸೀಸರ್ ರಾಷ್ಟ್ರನಾಯಕ. ಈ ಘೋರರಾತ್ರಿ ಸೀಸರನನ್ನು ಉದ್ದೇಶಿಸಿಯೇ ಬಂದ ಸಂದೇಶ. ಆದದ್ದರಿಂದ ಎಚ್ಚರದಿಂದಿರಬೇಕು.

ಸೀಸರನು ಮುಂದೆ ಆಡುವ ಆರು ಸಾಲುಗಳು ಬಹುಶಃ ಶೇಕ್ಸ್‌ಪಿಯರ್ ಬರೆದ ಮಹಾ ಅದ್ಭುತ ಸಾಲುಗಳಲ್ಲಿ ಕೆಲವು.

'Cowards die many times before their deaths ;
The valiant never taste of death but once.
Of all the wonders that I have yet heard,
It seems to me most strange that men should fear,
Seeing that death a necessary end,
Will come when it will come.'

ಮೊದಲ ಎರಡು ಸಾಲುಗಳು ಈಗಾಗಲೇ ನಮಗೆ ಬಳಕೆಯಾದ ಸೀಸರನ ವಾಕ್ಸರಣಿಯ ಶೈಲಿಯಲ್ಲಿದೆ ಎನ್ನಿಸಿದರೆ ಆಶ್ಚರ್ಯವಿಲ್ಲ. ಒಂದು ಬಗೆಯಲ್ಲಿ ಈ ಎರಡು ಸಾಲುಗಳು

".....The things that threatened are / never looked but on my back : when they shall see / the face of Caesar, they are vanished" ಸಾಲುಗಳಂತೆಯೇ ಕೇಳುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಆಲಂಕಾರಿಕವಾಗಿ ಕಾಣುವ ಮಾತುಗಳಲ್ಲಿ ಬಹು ಮುಖ್ಯವಾದ ಒಂದು ಅಂಶ ಅಡಕವಾಗಿದೆ. 'Coward's ಮತ್ತು 'The Valiant', ''ಹೇಡಿಗಳು ತಮ್ಮ ಸಾವಿಗಿಂತ ಮೊದಲೇ ಹಲವು ಬಾರಿ ಸಾಯುತ್ತಾರೆ. ಆದರೆ ಧೀರರು ಸಾವಿನ ರುಚಿ ಕಾಣುವುದು ಒಂದೇ ಬಾರಿ'' ಸಾವಿನ ಭಯವೂ ಹೇಡಿತನವೇ. ಎಂದೇ ಪ್ರತಿಕ್ಷಣವೂ ಸಾವಿನ ಭಯದಲ್ಲಿ ಹೇಡಿ ನೂರು ಬಾರಿ ಸಾಯುತ್ತಾನೆ. ಧೀರನಿಗೆ ಸಾವು ಭಯದ ವಸ್ತುವಲ್ಲ. ಎಂದೇ ದೇಹಕ್ಕೆ ಸಾವು ಬಂದಾಗ ಸಾಯುತ್ತಾನೆಯೆ ವಿನಾ ಮನಸ್ಸಿನಲ್ಲಿ ಕ್ಷಣಕ್ಷಣವೂ ಸಾವಿನ ಆತಂಕದಲ್ಲಿ ಸಾಯುತ್ತಿರುವುದಿಲ್ಲ. ಮುಂದಿನ ನಾಲ್ಕು ಸಾಲುಗಳು ಸೀಸರನ ಅಂತರಾಳದಿಂದ ಹೊಮ್ಮಿದ ಗಹನ ಹಾಗೂ ಭವ್ಯ ಸಾಲುಗಳು. ಈ ನಾಲ್ಕು ಸಾಲುಗಳಲ್ಲಿ ಒಂದು ಕಾವ್ಯಪ್ರತಿಮೆಯಿಲ್ಲ, ಉಪಮೆಯಿಲ್ಲ, ರೂಪಕವಿಲ್ಲ. ಅಷ್ಟೇ ಯಾಕೆ ಒಂದೂ ಕ್ಲಿಷ್ಟಶಬ್ದವಿಲ್ಲ. ಅತ್ಯಂತ ಸರಳ ಶಬ್ದಗಳ ಸಾಲುಗಳು. ಅಂದರೆ ಮನಸ್ಸಿಗೆ ಹೊಳೆದ ಸತ್ಯ ಅಂತರಾಳದಿಂದ ನೇರ ನುಡಿಕಟ್ಟಿಗೆ ದೊರಕಿದೆ ಎಂದು ಅರ್ಥ ; ಮಿದುಳಿನಿಂದ ಹೊರಟ ಮಾತುಗಳಲ್ಲ ಇವು. ಈಗಾಗಲೇ ನೂರು ಬಾರಿ ಕೇಳಿರುವ ಮಾತುಗಳು ನೆನಪಿನ ಕೋಶಗಳಲ್ಲಿ ಅಡಗಿ ಕುಳಿತು ಸಂದರ್ಭಕ್ಕನುಸಾರ ಬಾಯಿಂದ ಹೊರಬಂದ ರೀತಿಯದಲ್ಲ ಈ ಮಾತುಗಳು. ಅನುಭವದಿಂದ ಆಡಿದ ಮಾತು. ಇಡೀ ವ್ಯಕ್ತಿತ್ವವನ್ನು ತೊಡಗಿಸಿಕೊಂಡು ಆಡಿದ ಮಾತುಗಳು. ಇಂಥ ಅನುಭವದ್ರವ್ಯವಿರುವುದರಿಂದಲೇ ಭವಿಷ್ಯವಾಣಿ ನುಡಿಯುವವ "Beware the ides of March" ಎಂದು ಎಚ್ಚರಿಸಿದರೆ "He is a dreamer, let's leave him. Pass" ಎಂದು ತಾತ್ಸಾರದಲ್ಲಿ ಮುಂದೆ ನಡೆದುಬಿಡುವುದು. ''ನಾನು ಕೇಳಿರುವ ಅಚ್ಚರಿಗಳಲ್ಲೆಲ್ಲ ಅತ್ಯಂತ ಅಚ್ಚರಿಯ ವಿಷಯ ಇದು. ಸಾವು ಒಂದು ಅವಶ್ಯಕ ಅಂತ್ಯ ಎಂದು ಗೊತ್ತಿದ್ದೂ, ಬಂದಾಗ ಬರುತ್ತದೆ ಎಂದು ತಿಳಿದಿದ್ದೂ ಕೂಡ ಮನುಷ್ಯ ಸಾವಿಗಾಗಿ ಹೆದರುತ್ತಾನೆ ಎಂಬುದು ನನಗೆ ಅಚ್ಚರಿಯ ವಿಷಯ''. 'ಇಲ್ಲಿ ಅವನು ಬಳಸುವ ಶಬ್ದಗಳನ್ನು ನೋಡಿ. 'Seeing that death, a necessary end' 'necessary', 'ಅವಶ್ಯಕ' ಎಂಬ ಶಬ್ದ ಬಳಸುತ್ತಾನೆ. ಅನಿವಾರ್ಯ ಎಂಬ ಶಬ್ದವನ್ನಲ್ಲ. ಅನಿವಾರ್ಯವಷ್ಟೇ ಅಲ್ಲ ಅವಶ್ಯಕವೂ ಹೌದು. 'ಅವಶ್ಯಕವೇ' ಹೆಚ್ಚು ಮಹತ್ವದ ಶಬ್ದ ಇಲ್ಲಿ. ಅನಿವಾರ್ಯವಾದದ್ದರ ಬಗ್ಗೆ ನಾನೇನೂ ಮಾಡಲಾಗುವುದಿಲ್ಲ. ಆದದ್ದರಿಂದ ತಾಳಿಕೊಳ್ಳೋಣ ಎಂಬ ವೈರಾಗ್ಯಭಾವ ಸಾಧ್ಯ. ಆದರೆ 'ಅವಶ್ಯಕ'ವೆಂದಾಗ ಯಾವುದಕ್ಕೆ ಅವಶ್ಯಕ ? ಪ್ರಕೃತಿಯ ಉದ್ದೇಶಸಾಧನೆಗೆ, ಭವಿಷ್ಯದ ಜೀವ ಜಗತ್ತಿನ ಉಳಿತಿಗಾಗಿ. ಆದದ್ದರಿಂದ ಭಯ ಅನಾವಶ್ಯಕ. ಆದರೆ ಭಯಪಡುತ್ತಾನೆ ಎಂಬುದು ಅಚ್ಚರಿಯ ವಿಷಯ. ಮತ್ತು 'ಅವಶ್ಯಕತೆ' ಎಂದಾದರೂ ಭಾವಿಸೋಣ. 'ಅನಿವಾರ್ಯ' ವೆಂದಾದರೂ ಭಾವಿಸೋಣ. ಸಾವು ಮಾತ್ರ "will come when it will come" ಹಾಗಿದ್ದೂ

ಭಯವೇಕೆ ? ಈ ಆರು ಸಾಲುಗಳು, ಸೀಸರ್ ಆಡುವ ಮಿಕ್ಕ ಯಾವ ಸಾಲುಗಳಿಗಿಂತಲೂ ಹೆಚ್ಚು ಗಟ್ಟಿಯಾಗಿ, ಗಾಢವಾಗಿ ಸೀಸರನೊಬ್ಬ ಶ್ರೀಮಂತವ್ಯಕ್ತಿತ್ವದ ಮನುಷ್ಯ ಎಂದು ಸಾದರಪಡಿಸುತ್ತವೆ. ಇಷ್ಟರೊಳಗೆ ಅರ್ಚಕರ ಬಳಿ ಹೋಗಿದ್ದ ಸೇವಕ ಹಿಂತಿರುಗಿದ್ದಾನೆ. ಸೀಸರನು ಮನೆ ಬಿಟ್ಟು ಹೋಗಬಾರದೆಂದು ಅರ್ಚಕರು ಹೇಳಿದ್ದಾರೆ. ಬಲಿ ಅರ್ಪಿಸಿದ ಪ್ರಾಣಿಯ ಮೈಯೊಳಗೆ ಹೃದಯವೇ ಕಾಣದಾಗಿತ್ತು, ಎಂದೇ ಈ ಸಂದೇಶ ಕಳಿಸಿದ್ದಾರೆ. ಸೀಸರ್ ಇದೇ ಸಂದರ್ಭವನ್ನು ಅರ್ಥೈಸುವ ರೀತಿ ನೋಡೋಣ. ''ಬಲಿಯಾದ ಪ್ರಾಣಿಯ ದೇಹದೊಳಗೆ ಹೃದಯವಿರಲಿಲ್ಲ, ಮನುಷ್ಯನ ಹೇಡಿತನಕ್ಕೆ ನಾಚಿಕೆಪಟ್ಟುಕೊಂಡ ದೇವತೆಗಳು ಹೀಗೆ ಮಾಡಿದ್ದಾರೆ. ಹೃದಯವಿಲ್ಲದ ಪ್ರಾಣಿಯಂತೆ ಸೀಸರನೂ ಕೂಡ, ಮನೆಬಿಟ್ಟು ಕದಲದೆ ಹೆದರಿ ಕೂತರೆ – ಇದು ಅರ್ಥ. ಸೀಸರ್ ಹೆದರುವುದಿಲ್ಲ, ಅಪಾಯವೂ ಸೀಸರನೂ ಅವಳಿ ಜವಳಿಗಳು – ಸೀಸರನೇ ಮೊದಲು ಹುಟ್ಟಿದವ. ಆದದ್ದರಿಂದ ಮತ್ತೂ ಭೀಕರ. ಸೀಸರ್ ಹೋಗಿಯೇ ಹೋಗುತ್ತಾನೆ'' ಎಂದು ಅಂತಿಮವಾಗಿ ತೀರ್ಮಾನಿಸಿಬಿಡುತ್ತಾನೆ. ಕ್ಯಾಲಿಫೂರ್ನಿಯಾ ತನ್ನ ಪ್ರಯತ್ನವನ್ನು ಕೈ ಬಿಡುವುದಿಲ್ಲ. 'ನಿನ್ನ ಆತ್ಮವಿಶ್ವಾಸ ನಿನ್ನ ವಿವೇಕಕ್ಕೆ ತೆರೆ ಎಳೆದುಬಿಟ್ಟಿದೆ. ದಯವಿಟ್ಟು ಹೋಗಬೇಡ. ನನ್ನ ಭಯ ಎಂದು ತಿಳಿ, ನಿನ್ನದಲ್ಲ, ನನ್ನ ಮಂಡಿಯೂರಿ ಪ್ರಾರ್ಥಿಸುತ್ತೇನೆ. ಆರೋಗ್ಯ ಚೆನ್ನಾಗಿಲ್ಲ ಎಂದು ತಿಳಿಸಿ ಮನೆಯಲ್ಲಿ ಉಳಿದುಬಿಡು' ಎಂದು ಅಂಗಲಾಚುತ್ತಾಳೆ. ಹೆಂಡತಿಯ ಈ ಪ್ರಾರ್ಥನೆಗೆ ಮನಸೋತು ಅಷ್ಟೇ ಸಹಜವಾಗಿ 'ತಾನು ಸೆನೆಟಿಗೆ ಬರುವುದಿಲ್ಲವೆಂದು ಹೇಳಿಕಳುಹಿಸುತ್ತೇನೆ. ನಿನ್ನ ಮನಸ್ಸಿನ ತೃಪ್ತಿಗಾಗಿ ನಾನು ಮನೆಯಲ್ಲಿರುತ್ತೇನೆ' ಎಂದು ನಿರ್ಧರಿಸುತ್ತಾನೆ.

ಮುಂದೆ ನಡೆಯುವುದೆಲ್ಲ ಶೀಘ್ರಗತಿಯಲ್ಲಿ ಸಾಗುತ್ತದೆ. ಡೇಶಿಯಸ್ ಬ್ರೂಟಸನ ಪ್ರವೇಶವಾಗಿ ಅವನು ಸೀಸರನ ತೀರ್ಮಾನ ಕೇಳಿ ಅಚ್ಚರಿ, ಕನಿಕರಗಳನ್ನು ಸೂಚಿಸುವಂತೆ ಮಾತನಾಡಿ ''ಇಂದು ನಿನಗೆ ಕಿರೀಟಧಾರಣೆ ಮಾಡಹೊರಟಿರುವ ನಾಯಕರುಗಳು ನೀನು ಬರುವುದಿಲ್ಲವೆಂದು ತಿಳಿದು ಮನಸ್ಸು ಬದಲುಮಾಡಬಹುದು....ಅದೂ ಅಲ್ಲದೆ ಅದಕ್ಕಿಂತ ಹೆಚ್ಚಿನದಾಗಿ ಸೆನೆಟರ್‌ಗಳು 'ಸೀಸರನ ಹೆಂಡತಿಗೆ ಒಳ್ಳೆಯ ಕನಸುಗಳು ಬೀಳುವವರೆಗೆ ಸೆನೆಟ್ ಸೇರುವುದು ಬೇಡ' ಎಂದುಬಿಟ್ಟರೆ 'ನೋಡು ಮತ್ತೆ, ಸೀಸರನೂ ಹೆದರಿಬಿಟ್ಟಿದ್ದಾನೆ' ಎಂದುಬಿಡುವುದಿಲ್ಲವೆ ?'' ಎಂದೆಲ್ಲ ಉಬ್ಬಿಸಿ, ಬಹು ಜಾಣತನದಿಂದ ಕಿಚಾಯಿಸಿ, ತಿಳಿದೂ ತಿಳಿಯದ ಹಾಗೆ ಹಂಗಿಸಿ ಸೀಸರನನ್ನು ಬಡಿದೆಬ್ಬಿಸಿಬಿಟ್ಟಿದ್ದಾನೆ. ಇಲ್ಲಿ ಒಂದು ಮಾತು ಮಾತ್ರ ಗಮನಿಸಬೇಕಾದ್ದು ಇದೆ ಅನಿಸುತ್ತದೆ – 'ಇಂದು ನಿನಗೆ ಕಿರೀಟಧಾರಣೆ ಮಾಡಲು ನಿರ್ಧರಿಸಿರುವ ಸೆನೆಟರು.....' ಇತ್ಯಾದಿ ಮಾತು ಸೀಸರನನ್ನು ಆಕರ್ಷಿಸಿತೆ ಎಂಬುದು. ಅಂದರೆ ಸೀಸರನಿಗೆ ಕಿರೀಟದ ವ್ಯಾಮೋಹವಿದೆ. ತಾನು ಇಂದು ಸೆನೆಟಿಗೆ ಹೋಗಲು ನಿರ್ಧರಿಸಿರುವುದೇ ಕಿರೀಟಧಾರಣಕ್ಕಾಗಿ ಎಂದು ಅರ್ಥ ಮಾಡಿಕೊಳ್ಳಬೇಕೆ ? ಇದು

ನಿಜವಾದರೆ ಸರ್ವಾಧಿಕಾರದ ಲಕ್ಷಣಗಳು ಅವನಲ್ಲಿ ಇದೆ ಎಂದಾಯಿತು. ಗಣರಾಜ್ಯದ ತತ್ವಕ್ಕೆ ವಿರೋಧವಾದುದು. ಬ್ರೂಟಸ್ ಮತ್ತು ಅವನ ಸಂಗಾತಿಗಳ ಆತಂಕ ಸಕಾರಣವಾದದ್ದು ಎಂದಾಯಿತು.

ಹೀಗೆ ತೀರ್ಮಾನಿಸಿಬಿಡುವುದು ಕೊಂಚ ಅವಸರದ್ದಾಯಿತು ಎನಿಸುತ್ತದೆ. ಡೇಶಿಯಸ್ ಬ್ರೂಟಸನು ಪಟ್ಟುಮಾಡುವ ಕಾರಣಗಳಲ್ಲಿ ಮೊದಲನೆಯದಾಗಿ ಹೇಳುವುದು 'ಕಿರೀಟ ಧಾರಣ'ದ ವಿಷಯ, ಮತ್ತು ಡೇಶಿಯಸ್ ಬ್ರೂಟಸ್ ಜಾಣನಾದದ್ದರಿಂದಲೇ ಕಿರೀಟದ ವಿಷಯ ಮೊದಲೇ ಹೇಳುವುದು. ಸೀಸರನನ್ನು ಯಾವುದು ಹೆಚ್ಚಿಗೆ ಚುಚ್ಚುತ್ತದೆ ಎಂದು ಅವನು ಬಲ್ಲ. ಹೀಗಾಗಿಯೇ ಇಡೀ ಭಾಗದಲ್ಲಿ ಹೆಚ್ಚು ಒತ್ತು ಕೊಡುವುದು 'ಕ್ಯಾಲಿಪೂರ್ನಿಯಾ ಕನಸು', 'ಸೆನೆಟರುಗಳ ಪ್ರತಿಕ್ರಿಯೆ', 'ಸೀಸರನ ಭಯದ ಕುರಿತಾದ ಮಾತು' ಇವುಗಳು. ಅಥವಾ ಬೇರೆ ಮಾತುಗಳಲ್ಲಿ ಹೇಳಬಹುದಾದರೆ ಸೀಸರನ ಅಹಮಿಕೆಗೆ ಪೆಟ್ಟು ಬೀಳುವುದು ಈ ಮಾತುಗಳಿಂದ. ತಾನು ನಗೆಪಾಟಲಾಗಿಬಿಡುತ್ತೇನೆಂಬ ಭಯದಿಂದ. ಎಂದೇ ''ನಾನು ಸೆನೆಟಿಗೆ ಬರುವುದಿಲ್ಲ, ಬರುವುದಿಲ್ಲ ಎಂಬುದು ನನ್ನ ಮನಸ್ಸಿನ ಇಚ್ಛೆ ಅಷ್ಟೆ ಕಾರಣಗಳೇನು ಕೊಡಬೇಕಾದದ್ದಿಲ್ಲ'' ಎಂದು ಹೇಳಿದ ದೃಢತೆಯಲ್ಲಿಯೆ ''ನಿನ್ನ ಹೆದರಿಕೆಗಳು ಎಷ್ಟು ಮೂರ್ಖತನದ್ದಾಗಿ ಕಾಣುತ್ತದೆ ನೋಡು ಕ್ಯಾಲಿಪೂರ್ನಿಯಾ, ಇವಕ್ಕೆ ನಾನು ಸಗ್ಗಿಬಿಟ್ಟಿದ್ದೆನಲ್ಲ ಎಂದು ನಾಚಿಕೆಯಾಗುತ್ತಿದೆ. ನನ್ನ ರಾಜವಸ್ತ್ರ ಕೊಡು, ನಾನು ಹೊರಟೆ'' ಎಂದು ನಿರ್ಧಾರ ಬದಲಿಸಿಬಿಡುತ್ತಾನೆ.

ಇಷ್ಟರಲ್ಲಿ ಮಿಕ್ಕೆಲ್ಲರೂ ಬಂದಿದ್ದಾರೆ. ಸೀಸರ್ ಮತ್ತು ಬ್ರೂಟಸ್ ಇಡೀ ನಾಟಕದಲ್ಲಿ ಆಡುವುದೂ ಮೂರೇ ಮಾತುಗಳು. ಈ ದೃಶ್ಯದಲ್ಲಿ ಮೊದಲ ಬಾರಿ 'What is it a clock ?' ಎಂದು ಸಮಯದ ಬಗ್ಗೆ ವಿಚಾರಿಸಿದ ಬ್ರೂಟಸ್ "Caesar, it is strucken eight" ಎನ್ನುತ್ತಾನೆ.

ಆಂಟನಿಯೂ ಬಂದ ಮೇಲೆ ಎಲ್ಲರೂ ಸೆನೆಟಿಗೆ ಹೊರಡುತ್ತಾರೆ. ಹೊರಡುವುದಕ್ಕೆ ಮುಂಚೆ ಬಂದ ಅತಿಥಿಗಳನ್ನೆಲ್ಲ ಒಳಗೆ ಕರೆದು ಒಂದಷ್ಟು ಪಾನೀಯ ಸೇವಿಸೋಣವೆಂದು ಸೀಸರ್ ಕರೆದೊಯ್ಯುತ್ತಾನೆ. ಜೀಸಸ್ ಕ್ರೈಸ್ತನ last supper ನೆನಪಿಗೆ ಬರುತ್ತದೆ ಈ ಅಂತಿಮ ಪಾನಗೋಷ್ಠಿ. ಇಲ್ಲಿಯ ಸಂದರ್ಭ ಇನ್ನೂ ಹೆಚ್ಚು ಕ್ರೂರ, ಕಠೋರ – ತನ್ನೊಡನೆ ಪಾನೀಯ ಸೇವಿಸುತ್ತಿರುವವರು ತನ್ನನ್ನು ಹತ್ಯೆ ಮಾಡುವವರು, ನಗುತ್ತ ಮಾತನಾಡುತ್ತ ತನ್ನ ಆತಿಥ್ಯವನ್ನು ಸ್ವೀಕರಿಸುತ್ತಿರುವ ಪಾತಕಿಗಳು. ಇದು ಮನಸ್ಸು ಮುಟ್ಟಿ ಮನ ಕಲಕುವುದು ಬ್ರೂಟಸ್‌ನಿಗೆ ಮಾತ್ರ. ಎಂದೇ ಸೀಸರನನ್ನು ಅನುಸರಿಸಿ ಹೊರಡುವುದಕ್ಕೆ ಮುಂಚೆ ಎರಡು ಸಾಲುಗಳ ಒಂದು ಸ್ವಗತ ನುಡಿಯುತ್ತಾನೆ :

That every like is not the same, O Caesar !
The heart of Brutus earns to think upon'

''ಈ ನಗು ನಲಿವುಗಳು ಈಟಿ ಚೂರಿಗಳನ್ನು ಹುದುಗಿಸಿಕೊಂಡಿವೆ ಎಂಬುದು ನಿನಗೆ ಕಾಣದಲ್ಲ ಎಂದು ನನ್ನ ಹೃದಯ ಮರುಗುತ್ತದೆ'' ಮನಸ್ಸಿನಲ್ಲಿ ಇನ್ನೂ ಕೂಡ ಬಗೆಹರಿಸಲಾಗದ ದ್ವಂದ್ವದಲ್ಲಿ ನರಳುತ್ತಿದ್ದಾನೆ ಬ್ರೂಟಸ್ ಎಂಬುದು ಸ್ಪಷ್ಟವಾಗುತ್ತದೆ.

ಸೀಸರನಿಗೆ ಮತ್ತೂ ಒಂದು ಎಚ್ಚರಿಕೆಯ ರೂಪದಲ್ಲಿ ಆರ್ಟಿಮೆಡೋರಸ್ ಒಂದು ಮನವಿಯನ್ನು ಸಿದ್ಧಪಡಿಸಿಕೊಂಡು ಸೀಸರ್ ಸೆನೆಟಿಗೆ ಹೋಗುವ ಮಾರ್ಗದಲ್ಲಿ ಕಾಯುತ್ತ ನಿಂತಿದ್ದಾನೆ. ಭವಿಷ್ಯವಾಣಿ ಆಯಿತು ; ಭಯಂಕರರಾತ್ರಿಯ ಗುಡುಗು ಸಿಡಿಲುಗಳಾದವು ; ಕ್ಯಾಲಿಫೂರ್ನಿಯ ಕಂಡ ಕೆಟ್ಟ ಕನಸುಗಳಾದವು ; ಅರ್ಚಕರು ಕಳಿಸಿದ ದೈವಸಂದೇಶವಾಯಿತು. ಈಗ ಮತ್ತೂ ಒಂದು. ''ನಿನ್ನ ಸುತ್ತಲ ಯಾರೂ ನಂಬಿಕೆಗೆ ಅರ್ಹರಲ್ಲ; ಎಲ್ಲರದೂ ಒಂದೇ ಗುರಿ. ಸೀಸರನನ್ನು ಮುಗಿಸುವುದು ಎಂಬುದು. ಸೀಸರ್, ನೀನು ಅಜರಾಮರ ಎಂದು ಭ್ರಮೆಗಳು ಇಲ್ಲದಿದ್ದರೆ ಎಚ್ಚರಿಕೆಯಿಂದಿರು. ಮಾನಸಿಕ ಸುಭದ್ರಸ್ಥಿತಿ ಪಿತೂರಿಗಳಿಗೆ ಎಡೆಮಾಡಿಕೊಡುತ್ತದೆ. ದೇವರು ನಿನ್ನನ್ನು ಕಾಪಾಡಲಿ - ನಿನ್ನ ಅಭಿಮಾನಿ'' ಎಂದು ರುಜು ಹಾಕಿ ಮನವಿ ತಯಾರಿಸಿ ಕಾದಿದ್ದಾನೆ ಆರ್ಟಿಮೆಡೋರಸ್. ಅಸೂಯೆ, ಅಸಹನೆಗಳ ಎದುರು ಸಾತ್ವಿಕತೆ, ಸಚ್ಚಾರಿತ್ರ್ಯಗಳಿಗೆ ಉಳಿಗಾಲವಿಲ್ಲ ಎಂದು ಮರುಗುತ್ತಾನೆ. ಸರಿಯಾದ ವೇಳೆಗೆ ಇದನ್ನು ನೀನು ಓದಿದರೆ ನೀನು ಬದುಕುತ್ತೀಯ, ಇಲ್ಲವಾದರೆ ವಿಧಿಯೂ ಕೂಡ ಪಿತೂರಿಗಾರರ ಜೊತೆ ಕೈ ಜೋಡಿಸಿದೆ ಎಂದು ಅರ್ಥ.

ಅಂಕದ ಕೊನೆಯ ದೃಶ್ಯ. ಬ್ರೂಟಸನ ಮನೆಯಲ್ಲಿ ಪೋರ್ಶಿಯಾ ತನ್ನ ಗಂಡ ಮನೆಬಿಟ್ಟು ಹೊರಟಾಗಿನಿಂದ ಅವಳು ಪಡುತ್ತಿರುವ ಪಾಡಿನ ಚಿತ್ರಣವನ್ನು ಸಮರ್ಥವಾಗಿ ನೀಡುತ್ತದೆ. ಅಸಹಾಯಕ ಸ್ಥಿತಿಯಲ್ಲಿ ನರಳುತ್ತಿದ್ದಾಳೆ. ಗಂಡ ಹೊರಟಾಗ ಮಾನಸಿಕವಾಗಿ ಅಸ್ವಸ್ಥನಾಗಿದ್ದನೆಂಬುದು ಸ್ಪಷ್ಟವಾಗಿ ಕಾಣುತ್ತಿದ್ದಿತು. ಲೂಷಿಯಸನನ್ನು ಸೆನೆಟಿಗೆ ಕಳುಹಿಸಿ 'ಏನು ನಡೆಯುತ್ತಿದೆ, ನನ್ನ ಗಂಡ ಹೇಗೆ ಕಾಣುತ್ತಾನೆ, ಸೀಸರನ ಸುತ್ತ ಮುತ್ತ ಯಾರು ಸುಳಿದಾಡುತ್ತಿದ್ದಾರೆ ತಿಳಿದು ಬಾ' ಎಂದು ಅಟ್ಟುತ್ತಾಳೆ. ತನ್ನ ಮನೆಯ ಮುಂದೆ ಹಾದು ಹೋಗುತ್ತಿರುವ ಭವಿಷ್ಯವಾದಿಯನ್ನು ಕರೆದು 'ಏನು ನಡೆಯುತ್ತಿದೆ, ಸೀಸರನಿಗೆ ಏನಾದರೂ ಅಪಾಯವಿದೆಯೇ' ಎಂದು ಕೇಳುತ್ತಾಳೆ. 'ಏನೂ ಅಪಾಯವಿಲ್ಲವೆನಿಸುತ್ತದೆ - ಆದರೆ ಬಹಳಷ್ಟು ಆಗಿಬಿಡಬಹುದೆಂಬ ಭಯವೂ ನನ್ನನ್ನು ಕಾಡುತ್ತಿದೆ' ಎಂದು ಹೇಳಿ ತಾನು ಸೀಸರನನ್ನು ಕಾಣುವುದಕ್ಕೆ ತಕ್ಕ ಜಾಗ ಹುಡುಕುವುದಕ್ಕಾಗಿ ತೆರಳಿಬಿಡುತ್ತಾನೆ. ಪೋರ್ಶಿಯಾ ಕಳಕಳಿಯಲ್ಲಿ 'ಬ್ರೂಟಸ್ ನಿನ್ನ ಮನಸ್ಸಿನ ಅಭೀಷ್ಟಗಳು ಪೂರೈಸಲಿ' ಎಂದು

ಹಾರ್ರ್ಯಸಿ ತತ್‌ಕ್ಷಣ ತಾನಂದದ್ದು ಈ ಹುಡುಗ - ಲೂಷಿಯಸನಿಗೆ ಕೇಳಿಸಿಬಿಟ್ಟಿತೆ ಎಂದು ಹೆದರುತ್ತಾಳೆ. 'ಹೋಗು ಲೂಷಿಯಸ್, ಹೋಗು ; ನನ್ನ ಗಂಡನಿಗೆ ನಾನು ಉಲ್ಲಾಸದಲ್ಲಿದ್ದೇನೆ ಎಂದು ಹೇಳು. ಅವನು ಏನು ಹೇಳುತ್ತಾನೆ ಕೇಳಿ ತಿಳಿದು ಬಾ' ಎಂದು ಅವಸರಿಸುತ್ತಾಳೆ. ಬ್ರೂಟಸನ ಮಾನಸಿಕ ಚಡಪಡಿಕೆಯ ಇನ್ನೊಂದು ರೂಪ ಪೋರ್ಷಿಯಾಳ ಈ ಸ್ಥಿತಿ. ಈ ನಾಟಕದ ಇಬ್ಬರು ಸ್ತ್ರೀ ಪಾತ್ರಗಳಿಗೂ ides of March ಭಯಂಕರ ದಿನ. ಈ ಅಂಕದ ನಂತರ ಇಬ್ಬರೂ ಎಲ್ಲ ಅರ್ಥಗಳಲ್ಲಿಯೂ ನಾಟಕದಿಂದ ನಿರ್ಗಮಿಸಿ ಬಿಡುತ್ತಾರೆ. ಮನೆ, ಗಂಡಹೆಂಡತಿ, ಪ್ರೀತಿವಿಶ್ವಾಸ ಎಲ್ಲ ಇನ್ನು ಮುಂದೆ ರೋಮಿನಲ್ಲಿ ಮುಗಿದ ಮಾತುಗಳು, ಅರ್ಥ ಕಳೆದುಕೊಂಡ ಶಬ್ದಗಳು.

ಮೂರನೆಯ ಅಂಕದಲ್ಲಿ ನಾಟಕ ಪರಾಕಾಷ್ಠೆಯನ್ನು ಮುಟ್ಟುತ್ತದೆ. ಸೆನೆಟಿನಲ್ಲಿ ಸೀಸರನ ಹತ್ಯೆಯ ಅಂಕ.

ಸೆನೆಟಿಗೆ ಹೋಗುವ ಮಾರ್ಗದಲ್ಲಿ ಸೀಸರನ ಕಣ್ಣಿಗೆ ಬೀಳುವ ಮೊದಲ ವ್ಯಕ್ತಿ ಭವಿಷ್ಯವಾದಿ. ಅವನನ್ನು ಕುರಿತು ಸೀಸರ್ ಆಡುವ ಮಾತು : "The ides of March are come" ಅದಕ್ಕೆ ಉತ್ತರ : 'Ay Caesar, but not gone' ಎಂಬ ಪುಟ್ಟ ಸಂಭಾಷಣೆ. ಸೀಸರನ ಅದಮ್ಯ ಆತ್ಮವಿಶ್ವಾಸದೆದುರು ಭವಿಷ್ಯವಾದಿಯ ಮರುಕ ತುಂಬಿದ ಎಚ್ಚರಿಕೆಯ ಮಾತು. ಒಮ್ಮೊಮ್ಮೆ – ನಾವುಗಳು ಸಾಮಾನ್ಯರಾದದ್ದರಿಂದ – ಸೀಸರನ ಈ ರೀತಿಯ ಆತ್ಮವಿಶ್ವಾಸ ಠೇಂಕಾರದ ಹಾಗೆ ಕಂಡುಬಿಡುತ್ತದೆ. ಅಹಂಕಾರದ, ದುರಭಿಮಾನದ ಮಾತಾಗಿ ಕೇಳಿಬಿಡುತ್ತದೆ. ಇದು ಸಹಜ ಕೂಡ. ಆದರೆ ಇಲ್ಲಿ ಆಳದಲ್ಲಿ ಅಡಗಿರುವುದು, ಸೀಸರನು ಮಾತನಾಡುತ್ತಿರುವುದು ತನ್ನ ಕ್ಷೇಮವನ್ನು ಕುರಿತೇ ಎಂದು ನಾವು ಮರೆಯಬಾರದು. ಮತ್ತೂ ಮುಂದೆ ಹೋದರೆ ಸೀಸರನನ್ನು ತಡೆಯಲು ಯತ್ನಿಸುವುದು ಆರ್ಟಿಮೆಡೋರಸ್. ಮನವಿ ಪತ್ರವನ್ನೂ ಕೈಯಲ್ಲಿ ಹಿಡಿದು ಕಾದಿದ್ದಾನೆ, ''ದಯವಿಟ್ಟು ಇದನ್ನು ನೋಡು....ಮೊದಲು ನೋಡು....ನನ್ನ ಮನವಿ ಸೀಸರನನ್ನು ಕುರಿತದ್ದೇ, ಮೊದಲು ನೋಡು'' ಎಂದು ಬೇಡುತ್ತಾನೆ. ಸೀಸರನ ಪ್ರತಿಕ್ರಿಯೆ ಏನು ? "What touches us ourself shall be last served" ನನ್ನ ಬಗ್ಗೆಯಲ್ಲ ನನ್ನ ಮೊದಲ ಕಳಕಳಿ ಎಂದು ಮುಂದುವರೆದವನನ್ನು ಮತ್ತೆ ಅಂಗಲಾಚುತ್ತಾನೆ ಆರ್ಟಿಮೆಡೋರಸ್ - ''ತಡಮಾಡಬೇಡ, ತತ್‌ಕ್ಷಣ ಓದು'' ಎಂದು. ಸೀಸರನ ಸಹನೆಯೆಲ್ಲ ಕಳೆದು 'ಏನು, ಹುಚ್ಚನಿದ್ದಾನೆ ಈ ಮನುಷ್ಯ' ಎಂದು ನಡೆದುಬಿಡುತ್ತಾನೆ. ಮೊದಲ ಅಂಕದ ಎರಡನೇ ದೃಶ್ಯದಲ್ಲಿ ಭವಿಷ್ಯವಾದಿಗೆ ಹೇಳಿದ ಮಾತಿನ ಇನ್ನೊಂದು ರೂಪ ಇದು : 'He is a dreamer, Let us leave him, pass' ತನ್ನ ಅಂತ್ಯದತ್ತ ರಾಜಠೀವಿಯಲ್ಲಿ ನಡೆಯುತ್ತಾನೆ. ಅಹಂಕಾರವೆನಿಸಿದರೂ ಮೆಚ್ಚದಿರಲು ಸಾಧ್ಯವಿಲ್ಲದಷ್ಟು ಎತ್ತರದ ವ್ಯಕ್ತಿತ್ವ ಸೀಸರನದು ಎಂದು ಯಾರಿಗೂ ಅನ್ನಿಸಬೇಕು.

ಸೆನೆಟಿಗೆ ಪ್ರವೇಶ ಮಾಡಿದ ಮೇಲೆ ಮೊದಲ ಹತ್ತೊಂಬತ್ತು ಸಾಲುಗಳು ಪಿತೂರಿಗಾರರ ಮಧ್ಯೆ ನಡೆಯುವ ಗುಸುಗುಸುಗಳು - ಎಲ್ಲ ಆತಂಕದಲ್ಲಿದ್ದಾರೆ. ಎಲ್ಲರೂ ಮತ್ತೆಲ್ಲರನ್ನೂ ಗಮನಿಸುತ್ತಿದ್ದಾರೆ. ಒಂದೊಂದು ಮಾತೂ ತನ್ನ ಸಹಜ ಅರ್ಥ ಕಳೆದುಕೊಂಡು ಬೇರೆ ಏನೇನೋ ಅರ್ಥಗಳನ್ನು ಹೊರಡಿಸುತ್ತಿದೆ. ಉದಾಹರಣೆಗೆ ಪೊಪಿಲೆಯಸ್ ಲೇನಾ ಕ್ಯಾಷಿಯಸ್‌ನ ಬಳಿ ಬಂದು 'ನಿಮ್ಮ ಯತ್ನಗಳೆಲ್ಲ ಸಫಲವಾಗಲಿ' ಎಂದು ಹೇಳಿದ ಮಾತು ಕ್ಯಾಷಿಯಸ್‌ನ ಹೃದಯದ ಬಡಿತದಲ್ಲಿ ಏರುಪೇರು ಉಂಟುಮಾಡುತ್ತದೆ. 'ಏನು ಯತ್ನಗಳು...' ಎಂದು ತೊದಲಿದ ತನ್ನ ಪ್ರಶ್ನೆಗೆ ಉತ್ತರಿಸದೆ ಪೊಪಿಲೆಯಸ್ ಸೀಸರನ ಬಳಿ ನಡೆದು ಬಿಡುತ್ತಾನೆ ಮತ್ತೂ ಅಷ್ಟು ಗಾಬರಿ ಉಂಟುಮಾಡುವ ರೀತಿಯಲ್ಲಿ, ತಮ್ಮ ಗುಟ್ಟೆಲ್ಲ ರಟ್ಟಾಗಿಬಿಟ್ಟಿದೆ. ಹಾಗೊಮ್ಮೆ ಆದರೆ ಸೀಸರನೋ ಅಥವಾ ತಾನೋ ಇಬ್ಬರಲ್ಲಿ ಒಬ್ಬರು ಉಳಿಯುತ್ತೇವೆ ಎಂದು ನುಡಿಯುವ ಕ್ಯಾಷಿಯಸನಿಗೆ ಬ್ರೂಟಸ್ ಸಮಾಧಾನ ಮಾಡುತ್ತಾನೆ – ''ಪೊಪಿಲೆಯಸ್ ಸೀಸರನ ಬಳಿ ನಕ್ಕು ಮಾತನಾಡುತ್ತಿದ್ದಾನೆ, ಬೆದರಬೇಡ'' ಎಂದು. ಆಂಟನಿಯನ್ನು ಸರಿಯಾದ ಸಮಯಕ್ಕೆ ಟ್ರಿಬೊನಿಯಸ್ ಸೆನೆಟಿನಿಂದ ಹೊರಗೆ ಕರೆದೊಯ್ಯುತ್ತಿದ್ದಾನೆ. ಸೀಸರನ ಬಳಿ ಅಹವಾಲು ಹೇಳಿಕೊಳ್ಳಬೇಕಾದ ಸಿಂಬರ್‌ನಿಗೆ ಸಿದ್ಧವಾಗಿರಲು ಹೇಳಬೇಕು.

ಅವನು ಸೀಸರನ ಬಳಿ ಹೋಗಿ ಆಯಿತು. ಎಲ್ಲರೂ ಜೊತೆಗೂಡಬೇಕು. ಮತ್ತು ಕೊನೆಯದಾಗಿ ಕಾಸ್ಕಾನಿಗೆ ಅವನ ಜವಾಬ್ದಾರಿಯ ನೆನಪು ಮಾಡಿಕೊಡುತ್ತಾರೆ – 'Casca, you are the first that rears your hand', ಎಲ್ಲ ಸಜ್ಜಾಯಿತು. ಇನ್ನು ಕಾರ್ಯ ಆರಂಭಿಸುವುದಷ್ಟೆ. ಶೇಕ್ಸ್‌ಪಿಯರನ ನಾಟಕೀಯ ಪ್ರಜ್ಞೆ ಎಷ್ಟು ಆಳದ್ದು ಎಂದು ನೋಡಬೇಕಾದರೆ ಈ ಸಂದರ್ಭದಲ್ಲಿ ಸೀಸರನೇ ಆಡುವ ಮಾತಿನಲ್ಲಿ ಕಾಣಬೇಕು. "Are we all ready ?" ಎಲ್ಲರೂ ಸಿದ್ಧ ತಾನೆ ? ನಾಟಕೀಯ ವ್ಯಂಗ್ಯವೆಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಾಗಿಲ್ಲ. 'Are we all ready ? What is now amiss that Caesar and his senate must redress ?" ಪಿತೂರಿಗಾರರ ಪ್ರಕಾರ 'Caesar is amiss' ಎಂದೇ ಪರಿಹಾರವಾಗಿ ಅವನನ್ನೇ ಹತ್ಯೆ ಮಾಡಬೇಕಾಗಿದೆ.

ಮೆಟಲಿಸ್ ಸಿಂಬರನ ಸೋದರನನ್ನು ದೇಶಭ್ರಷ್ಟಗೊಳಿಸಲಾಗಿದೆ. ಈಗ ಸಿಂಬರ್ ಅವನಿಗಾಗಿ ಸೀಸರ್‌ನಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದಾನೆ. ಮಂಡಿಯೂರಿ ಬೇಡುತ್ತಿದ್ದಾನೆ. ಇಲ್ಲಿಂದ ಸೀಸರನ ಹತ್ಯೆಯವರೆವಿಗೆ ಸೀಸರನ ನಡವಳಿಕೆಯನ್ನು, ಆಡುವ ಮಾತುಗಳನ್ನು, ಬಳಸುವ ಶೈಲಿಯನ್ನು ಕುರಿತು ನಾಲ್ಕು ಮಾತುಗಳಲ್ಲಿ ಹೇಳಬಹುದು ಎನಿಸುತ್ತದೆ. ಬೇಡುವುದು, ಮಂಡಿಯೂರುವುದು, ಕಾನೂನನ್ನು ಮುರಿದು ವೈಯಕ್ತಿಕ ಉಪಕಾರಗಳನ್ನು ಬಯಸುವುದು ಸೀಸರನಿಗೆ ಅಸಹ್ಯದ ವಿಷಯಗಳು. ಮನುಷ್ಯ ತನ್ನ ಆತ್ಮಗೌರವವನ್ನು ಕಡೆಗಣಿಸಿ, ಕ್ಷುಲ್ಲಕ ಕ್ರಿಮಿಯಂತೆ ಕೈಯೊಡ್ಡಿ ಬೇಡುವುದು ಸೀಸರನ ದೃಷ್ಟಿಯಲ್ಲಿ ಅತ್ಯಂತ ಕೀಳು

ವರ್ತನೆ, ಎಂದೇ ಇಂಥವುಗಳು ಕಾಲಿನಲ್ಲಿ ಹೊಸಕಿಹಾಕಿಬಿಡುವಂಥವು. ''ಸೀಸರ್ ತಪ್ಪು ಮಾಡುವುದಿಲ್ಲ; ಮತ್ತು ಕಾರಣಗಳು ಇಲ್ಲದೆ ಆಡಿದ ಮಾತನ್ನು ಹಿಂತೆಗೆಯುವುದಿಲ್ಲ'' ಮತ್ತು ಬ್ರೂಟಸನ ಜೊತೆಯ ಎರಡನೇ ಸಂಭಾಷಣೆ ಇಲ್ಲಿದೆ. ಬ್ರೂಟಸ್ ಮುಂದೆ ಬಂದು ಸಿಂಬರನ ಪರವಾಗಿ ಮಾತನಾಡುತ್ತಾನೆ ; ''ನಾನು ಭಟ್ಟಂಗಿತನ ಮಾಡುವುದಿಲ್ಲ, ಆದರೆ ಸಿಂಬರನ ಸೋದರನನ್ನು ತತ್‌ಕ್ಷಣವೇ ಶಿಕ್ಷೆಯಿಂದ ಮುಕ್ತಗೊಳಿಸು'' ಎಂದು. ಸೀಸರನ ಒಂದೇ ಮಾತಿನ ಉತ್ತರ – ಆ ಮಾತಿನಲ್ಲಿ ಆಶ್ಚರ್ಯ, ಬ್ರೂಟಸನೂ ಹೀಗಾದನೆ ಎಂಬ ವಿಷಾದ ಎಲ್ಲವೂ ಕೂಡಿದೆ– "What, Brutus ?" ಅಷ್ಟೆ. ಈ ಬ್ರೂಟಸನಿಗೂ 'What, Brutus'ನಲ್ಲಿ ಅಡಕವಾಗಿರುವ ಎಲ್ಲ ಅರ್ಥಗಳೂ ವೇದ್ಯವಾಗಿರಬೇಕು – ಎಂದೇ ಮುಂದೆ ಮಾತನಾಡದೆ ಸುಮ್ಮನಾಗಿಬಿಡುತ್ತಾನೆ. ಬಹುಶಃ ಸೀಸರನನ್ನು ಬಹು ಪ್ರಬಲವಾಗಿ ಕೆರಳಿಸುವುದು ಕ್ಯಾಷಿಯಸನ ಮನವಿ. ಒಂದೇ ಕ್ಷಣದಲ್ಲಿ ಆತನ ಬಗೆಗೆ ತನ್ನಲ್ಲಿ ಎಂದಿನಿಂದಲೂ ಮನೆಮಾಡಿರುವ ಸಂಶಯ, ತಿರಸ್ಕಾರಗಳು ಒಮ್ಮೆಗೇ ಸ್ಫೋಟಿಸುವಂತೆ ಉತ್ತರಿಸುತ್ತಾನೆ – 'I could be well moved, if I were as you ; / If I could pray to move, prayers would move me' ಎಂದು ಗುಡುಗಿ, ತನ್ನ ಬದುಕಿನ, ತನ್ನ ವ್ಯಕ್ತಿತ್ವದ ಕುರಿತಾಗಿ ನಿರರ್ಗಳ ವಾಗ್ವೈಖರಿಯಲ್ಲಿ ಮಾತನಾಡುತ್ತಾನೆ. ಬಹುಶಃ ಇದೇ ತನ್ನ ಬದುಕಿನ ಹಂಸಗೀತೆ ಯಾಗಬಹುದೆಂದು ಕನಸಿನಲ್ಲಿಯೂ ಎಣಿಸಿರಲಾರ. 'ಆಕಾಶದ ತುಂಬ ನಕ್ಷತ್ರಗಳು ತುಂಬಿವೆ. ಎಲ್ಲವೂ ಉರಿವ ಬೆಂಕಿಉಂಡೆಗಳೆ. ಪ್ರತಿಯೊಂದೂ ಪ್ರಜ್ವಲಿಸುತ್ತದೆ. ಆದರೆ ಅವುಗಳಲ್ಲಿ ಒಂದು ಮಾತ್ರ ತನ್ನ ಸ್ಥಾನದಲ್ಲಿ ಭದ್ರವಾಗಿ ಉಳಿಯುತ್ತದೆ. ಹಾಗೆಯೇ ಈ ಲೋಕದಲ್ಲಿ ಕೂಡ ಲೆಕ್ಕವಿಲ್ಲದಷ್ಟು ಜನರಿದ್ದಾರೆ. ಮನುಷ್ಯರು ರಕ್ತ ಮಾಂಸ ಮತ್ತು ಬುದ್ಧಿಯಿಂದ ಕೂಡಿರುತ್ತಾರೆ ನಿಜ. ಆದರೆ ಅವರಲ್ಲೊಬ್ಬ ಮಾತ್ರ ಅಜೇಯನಾಗಿ ತನ್ನ ಅಗ್ರಸ್ಥಾನ ಉಳಿಸಿಕೊಳ್ಳುತ್ತಾನೆ. ಆ ಅಂಥವನು ನಾನು ; ಸಿಂಬರ್‌ನು ದೇಶಭ್ರಷ್ಟನಾಗಬೇಕೆಂದು ಅಚಲ ನಿರ್ಧಾರ ಮಾಡಿದ್ದೇನೆ. ದೇಶಭ್ರಷ್ಟನಾಗಿ ಉಳಿಯುತ್ತಾನೆ ಎಂಬ ನಿಶ್ಚಯಕ್ಕೆ ಬದ್ಧನಾಗಿದ್ದೇನೆ''. ಮತ್ತೆ ಬೇಡುವ ಸಿನ್ನಾನಿಗೆ 'ದೂರ ಸರಿ, ಒಲಿಂಪಸ್ಸನ್ನೇ ಅಲ್ಲಾಡಿಸುವ ಸಾಹಸವೆ ?' ''ಬ್ರೂಟಸನಂಥ ಬ್ರೂಟಸನೇ ವ್ಯರ್ಥವಾಗಿ ಮಂಡಿಯೂರಲಿಲ್ಲವೇ ?'' ಎಂದು ಅಬ್ಬರಿಸಿದ ಸೀಸರನಿಗೆ ಮಾತುಗಳಲ್ಲ, ಕೈಯ ಶಕ್ತಿಯೇ ಇನ್ನು ಉತ್ತರ ; ಸೀಸರನ ಮೇಲೆ ಹತ್ತೂ ಕಡೆಗಳಿಂದ ಅಸ್ತ್ರ ಪ್ರಯೋಗವಾಗುತ್ತದೆ. ನಮ್ಮ ಕಣ್ಣ ಮುಂದೆ ನಾವು ಚಿತ್ರಿಸಿಕೊಳ್ಳಬಹುದಾದ ಈ ದೃಶ್ಯ ಮನಸ್ಸಿನಲ್ಲಿ ಕೆತ್ತಿದಂತಾಗಿ ಬಹುಕಾಲ ಉಳಿದುಬಿಡುತ್ತದೆ. ಸುತ್ತಲೂ ಚಾಕು ಚೂರಿಗಳಿಂದ ಇರಿಯಲ್ಪಡುತ್ತಿದ್ದರೂ ಬಹುಶಃ ಸೀಸರನಿಗೆ ಬ್ರೂಟಸನು ಕತ್ತಿ ಎತ್ತುವತನಕ ತನಗೆ ಅಪಾಯವಿದೆ ಎಂದು ಭಾವಿಸಿದ್ದಿರಲಿಕ್ಕಿಲ್ಲ ಎಂಬ ರೀತಿಯಲ್ಲಿ, ಒಮ್ಮೆ ಬ್ರೂಟಸನು ತಿವಿದ ಕೂಡಲೇ "Et tu Brute ? ....Then fall Caesar" ಎಂದು ಉದ್ಗರಿಸಿ ಕುಸಿಯುತ್ತಾನೆ. ಈ ಮಾತಿನ ಹಿಂದಿನ ಭಾವನೆಗಳನ್ನೂ ನೋಡೋಣ. 'ನೀನು ಕೂಡ, ಬ್ರೂಟಿ ?' ಎಂದ

ಮೇಲೆ ಸೀಸರ್ ತನ್ನ ಅಂತ್ಯ ಒಪ್ಪಿಕೊಂಡಂತೆಯೆ. ಇದು ಬ್ರೂಟಸನಿಗೆ ಆಡುವ ಮೂರನೆಯ ಮತ್ತು ಕೊನೆಯ ಮಾತು. ಇಡೀ ನಾಟಕದಲ್ಲಿ ಮತ್ತೆಲ್ಲಿಯೂ ಅವರಿಬ್ಬರ ಮಧ್ಯೆ ಮಾತುಕತೆಯಿಲ್ಲ. ಎರಡು ಶ್ರೀಮಂತ ಮನಸ್ಸುಗಳ ಮಧ್ಯೆ ಮಾತಿನ ಅವಶ್ಯಕತೆ ಇಲ್ಲ. ಪರಸ್ಪರರ ಅಸ್ತಿತ್ವದ ಅರಿವಷ್ಟೆ ಸಾಕು. ಸೀಸರ್ ಎಷ್ಟೇ ಶ್ರೀಮಂತ ರೀತಿಯ ವ್ಯಕ್ತಿಯಿರಬಹುದಾದರೂ, ಎಷ್ಟೇ 'Constant as the northern star' ಎಂಬ ನಂಬಿಕೆಯಿದ್ದರೂ, 'Caesar doth not wrong' ಎಂಬ ಅಭಿಮಾನವಿದ್ದರೂ ಅವನೂ ಕೂಡ ಒಬ್ಬ ಮನುಷ್ಯನೇ. ಸ್ನೇಹ, ವಿಶ್ವಾಸ, ನಂಬಿಕೆಗಳನ್ನು ಬಯಸುವ ಮಿಕ್ಕೆಲ್ಲರಂತೆ ಅವನೂ ಕೂಡ. ಬ್ರೂಟಸ್‌ನಂಥ ವ್ಯಕ್ತಿ ಇರುವವರೆಗೆ ತನಗೊಂದು ದಿವ್ಯ ಆಸರೆ ಇದ್ದ ಹಾಗೆ. ಬ್ರೂಟಸನು ಸಿಂಬರನ ಪರವಾಗಿ ವಾದಿಸುವುದಕ್ಕೆ ಬಂದಾಗಲೂ ಆಡುವುದು ಇದೇ ರೀತಿಯ ಮಾತು. 'What, Brutus?' ಕೊನೆಗೆ ಬ್ರೂಟಸ್‌ನಿಗೇ 'ಇಲ್ಲವೆಂದು ಹೇಳಿದ ತಾನು (Doth not Brutus bootless kneel ?') ಬೇರೆಯವರಿಗೆ ಸೊಪ್ಪು ಹಾಕುವುದು ಹೇಗೆ ಸಾಧ್ಯ ?' ಎಂದೇ ಈಗ ಕೂಡ ತನ್ನ ವಿರುದ್ಧ ಬ್ರೂಟಸನೇ ಕೈ ಎತ್ತಿದ ಮೇಲೆ ಇನ್ನು ಉಳಿದು ಪ್ರಯೋಜನವೇನು ? 'Then fall Caesar' ಈ ಮಾತಿನಲ್ಲಿ 'Then'ಗೆ ಇರುವ ಮಹತ್ವ ಇದು.

ಹತ್ಯೆಯ ನಂತರ ಊಹಿಸಬಹುದಾದಂತೆ ಇಡೀ ಸೆನೆಟ್‌ಭವನ ಅಲ್ಲೋಲ ಕಲ್ಲೋಲದಲ್ಲಿ ಮುಳುಗಿಬಿಡುತ್ತದೆ. ದಿಗ್ಭ್ರಾಂತಿಗೊಂಡ ಸೆನೆಟರುಗಳು ದಿಕ್ಕಾಪಾಲಾಗಿ ಓಡುತ್ತಿದ್ದಾರೆ. 'Liberty, Freedom, Tyranny is dead" ಎಂದು ಸಿನ್ನಾ ಸಂಭ್ರಮದಲ್ಲಿ ಅರಚಾಡುತ್ತಿದ್ದಾನೆ.

'ಹೋಗಿ ಬೀದಿಬೀದಿಗಳಲ್ಲಿ ಪ್ರಚುರಪಡಿಸಿ' ಎಂದು ಕೂಗುತ್ತಿದ್ದಾನೆ. ಕ್ಯಾಷಿಯಸ್‌ನೂ ದನಿಗೂಡಿಸುತ್ತಾನೆ. ತಮ್ಮ ಸಫಲ ಕಾರ್ಯಾಚರಣೆಯ ಬಗ್ಗೆ ತೃಪ್ತಭಾವನೆಯ ಉದ್ಘೋಷಗಳ ಮಧ್ಯೆಯೂ ತನ್ನ ಸ್ಥಿಮಿತವನ್ನು ಕಳೆದುಕೊಳ್ಳದೆ ಇರುವುದು ಬ್ರೂಟಸನೊಬ್ಬನೆ. ತಮ್ಮ ವಿಜಯದ ಸಂಭ್ರಮ ಆಚರಿಸುವುದಕ್ಕೆ ಮುಂಚೆ ಗೊಂದಲದಲ್ಲಿ ಮುಳುಗಿರುವ ಸೆನೆಟ್ ಭವನವನ್ನು, ಸೆನೆಟರನ್ನು ಯಥಾಸ್ಥಿತಿಗೆ ತರಬೇಕಾಗಿದೆ. ಆತಂಕಗೊಂಡ ಸೆನೆಟರುಗಳಿಗೆ ಧೈರ್ಯ ನೀಡಬೇಕಾಗಿದೆ. ಬಹುಶಃ ಈ ಯತ್ನದಲ್ಲಿ ಅವರ ಸಹಕಾರ, ಸಹಾನುಭೂತಿಗಳನ್ನೂ ಸಾಧ್ಯವಾದರೆ, ಗಳಿಸಬೇಕಾಗಿದೆ. "People and senators, be not affrighted / Fly not, stand still ; ambition's debt is paid" ಎಂದು ಕೂಗಿ ಹೇಳುತ್ತಾನೆ. ಪಿತೂರಿಗಾರರಲ್ಲಿಯೂ ಸಂಶಯ, ಭಯಗಳಿವೆ. ಸೀಸರನ ಅಭಿಮಾನಿ ಯಾರಾದರೂ ಸುತ್ತಮುತ್ತಲಿದ್ದರೆ ? 'ಅವನೆಲ್ಲಿ, ಇವನೆಲ್ಲಿ' ಎಂದು ಪರಸ್ಪರರನ್ನೂ ಕೇಳಿಕೊಳ್ಳುತ್ತಾರೆ. ಬ್ರೂಟಸ್ ಅಲ್ಲಿಯೇ ಹತ್ತಿರ ನಿಂತಿದ್ದ ವಯೋವೃದ್ಧ ಸೆನೆಟರ್ ಪುಬ್ಲಿಯಸ್‌ನನ್ನು ಕುರಿತು 'ಯಾವ ಭಯವೂ ಪಡಬೇಕಾಗಿಲ್ಲ, ಮತ್ತೆ ಯಾರಿಗೂ ಹಾನಿ ಉಂಟಾಗುವುದಿಲ್ಲ.

ಗೆಲುವಾಗಿರು' ಎಂದು ಆಶ್ವಾಸನೆ ನೀಡುತ್ತಾನೆ. 'ನಾವು, ಈ ಕೃತ್ಯವೆಸಗಿದ ನಾವು ಮಾತ್ರ ಹೊಣೆಗಾರರು, ಮತ್ತೆ ಯಾರೂ ಚಿಂತಿಸಬೇಕಾಲ್ಲ' ಎಂದು ಹೇಳಿ ಪುಬ್ಲಿಯಸ್ ಅಲ್ಲಿರುವುದಕ್ಕಿಂತ ಸೆನೆಟ್ ಭವನ ಬಿಟ್ಟು ತೆರಳುವುದು ಉಚಿತವೆಂದು ಸಲಹೆ ನೀಡುತ್ತಾನೆ.

ಮುಂದೆ, ಅಂದರೆ ಆಂಟನಿಯ ಸೇವಕನ ಪ್ರವೇಶದವರೆವಿಗೆ, ಸುಮಾರು ಇಪ್ಪತ್ತೈದು ಸಾಲಿನಷ್ಟು, ಈ ಪಿತೂರಿಗಾರರ ಮಧ್ಯೆ ನಡೆಯುವ ದೃಶ್ಯ ಕುತೂಹಲಕರವಾದದ್ದು. ಏನು ಮಾಡುತ್ತಿದ್ದಾರೆ ಈ ಪಿತೂರಿಗಾರರು – ವಿಶೇಷವಾಗಿ ಬ್ರೂಟಸ್ ಮತ್ತು ಕ್ಯಾಷಿಯಸ್ ? ತಾವಾಡುವ ವಿಚಿತ್ರ ಮಾತುಗಳಿಂದ ಒಂದು ಬಗೆಯ ವಿಲಕ್ಷಣ ಸಮಾಧಾನ ಪಡೆಯಲು ಯತ್ನಿಸುತ್ತಿದ್ದಾರೆಯೆ ? ಅಪ್ರಜ್ಞಾಪೂರ್ವಕವಾಗಿ ತಮ್ಮ ಕೃತ್ಯದ ಸಮರ್ಥನೆಯೇ ಇದು ? ಸೀಸರನನ್ನು ಹತ್ಯೆ ಮಾಡಿ ಅವನನ್ನು ಸಾವಿನ ಭಯದಿಂದ ಮುಕ್ತಗೊಳಿಸಿದ ತಾವು ಸೀಸರನಿಗೆ ಉಪಕಾರ ಮಾಡಿದಂತೆಯೇ ಅಲ್ಲವೆ ? ಈ ಎಲ್ಲಕ್ಕೆ ನಾಂದಿಯಾಗಿ ಬ್ರೂಟಸನು ಮೊದಲ ಎರಡು ಮಾತುಗಳು ಆಡಿರುತ್ತಾನೆ. ಆಂಟನಿ ಭಯಗ್ರಸ್ತನಾಗಿ, ಸ್ತಂಭೀಭೂತನಾಗಿ ಮನೆಗೆ ಧಾವಿಸಿಬಿಟ್ಟಿದ್ದಾನೆ ಎಂದಾಗ ಬ್ರೂಟಸ್ ಈ ಇಡೀ ಪ್ರಶ್ನೆ, ಸಾವು ಬದುಕಿನ ಪ್ರಶ್ನೆ, ಎಷ್ಟು ವಿಚಿತ್ರ ಎಂಬ ಹಠಾತ್ ಅರಿವಿನಲ್ಲಿ ಬಹು ಸೂಕ್ಷ್ಮವಾದ ಒಂದು ಮಾತನಾಡುತ್ತಾನೆ. 'Fates, we will know your pleasures, / That we shall die, we know, Its but the time and drawing days out, that men stand upon" ಒಳನೋಟವುಳ್ಳ ಮಾತು. ಇದನ್ನು ಮೆಲುಕು ಹಾಕುವುದಕ್ಕೂ ಬಿಡದ ಹಾಗೆ ಬ್ರೂಟಸನ ಇಡೀ ಮಾತನ್ನು ತೀರ ಮಾಮೂಲಿ, ನಿತ್ಯಗಟ್ಟಲೆ ಮಾತಿನ ಮಟ್ಟಕ್ಕೆ ತಂದುಬಿಡುತ್ತಾನೆ ಕ್ಯಾಷಿಯಸ್. ''ಇಪ್ಪತ್ತು ವರ್ಷಗಳಷ್ಟು ಬದುಕನ್ನು ಮೊಟಕುಗೊಳಿಸಿದರೆ ಇಪ್ಪತ್ತುವರ್ಷಗಳಷ್ಟು ಸಾವಿನ ಭಯದಿಂದ ಮುಕ್ತಿ ನೀಡಿದಂತಲ್ಲವೆ ?'' ಎಂದು ಒಂದು ಬಗೆಯ ವಿಚಿತ್ರ ಸಮಾಧಾನ ವ್ಯಕ್ತಪಡಿಸುತ್ತಿದ್ದಂತೆ; ತೀರ ಅಚ್ಚರಿಯುಂಟುಮಾಡುವಂತೆ ಬ್ರೂಟಸ್ ಈ ಮಾತುಗಳಿಗೆ ದನಿಗೂಡಿಸುವುದಷ್ಟೆ ಅಲ್ಲ ಮಾತನ್ನು ಮತ್ತೂ ಅಷ್ಟು ಚಿಲ್ಲರೆಗೊಳಿಸುತ್ತಾನೆ. 'ಅದು ಹೌದಾದರೆ ನಾವು ಸೀಸರನ ಸ್ನೇಹಿತರು ಎಂದಾಯಿತು. ಸಾವೊಂದು ಉಪಕಾರವೇ ಎಂದಾಯಿತು.' ಬ್ರೂಟಸನ ಮನಃಸ್ಥಿತಿ ಏನಿರಬಹುದು ಈ ಕ್ಷಣದಲ್ಲಿ ? ಗುಪ್ತವಾಗಿ ತನಗೆ ತಾನು ಕೊಲೆಗಾರನಲ್ಲ ಎಂದು ಹೇಳಿಕೊಳ್ಳಬೇಕಿದೆಯೆ ? ಸೀಸರನಿಗೆ ತಾನು ದ್ರೋಹ ಬಗೆದಿಲ್ಲ ಎಂದು ಹೇಳಿಕೊಳ್ಳಬೇಕಿದೆಯೆ ? ತಾನಾಡುತ್ತಿರುವ ಮಾತುಗಳು ತನ್ನ ಕಿವಿಗಾದರೂ ಬೀಳುತ್ತಿದೆಯೆ ? ಇದೇ ಗುಂಗಿನಲ್ಲಿ ಅಥವಾ ಒಂದಿಷ್ಟು ದಿಕ್ಕು ಬದಲಿಸಿ ಸೀಸರನ ದೇಹವನ್ನು ನೋಡುತ್ತ ತನ್ನ ಸಹಚರರಿಗೆ ಹೇಳುತ್ತಾನೆ ''ಸೀಸರನ ರಕ್ತದಲ್ಲಿ ನಮ್ಮ ಕೈಗಳನ್ನು ಪವಿತ್ರವಾಗಿ ತೋಯಿಸಿಕೊಳ್ಳೋಣ. ನಮ್ಮ ಕಠಾರಿಗಳನ್ನು ಈ ನೆತ್ತರಲ್ಲಿ ಅದ್ದೋಣ. ಮತ್ತೆ ಅವುಗಳನ್ನು ಎತ್ತಿ ಹಿಡಿದು ''ಶಾಂತಿ, ಸ್ವಾತಂತ್ರ್ಯ ಮತ್ತು ವಿಮೋಚನೆ'' ಎಂದು ಸಾರೋಣ. ಈ ಸಾಲುಗಳನ್ನು 'ಜೂಲಿಯಸ್ ಸೀಸರ್' ನಾಟಕವನ್ನು ಸಿದ್ಧಗೊಳಿಸಿದ ಕೆಲವು ಸಂಪಾದಕರು

ಕಾಸ್ಕಾನ ಬಾಯಿಯಲ್ಲಿ ಆಡಿಸಿದ್ದಾರೆ. ಬ್ರೂಟಸನ ವ್ಯಕ್ತಿತ್ವಕ್ಕೆ ತಕ್ಕುದಲ್ಲದ ಮಾತುಗಳು ಇವು ಎಂದು ಒಬ್ಬ ಸಂಪಾದಕ ಪೋಪ್ ಹೇಳುತ್ತಾನೆ. ಇವನ್ನು ಕಾಸ್ಕಾನಿಗೆ ನೀಡುತ್ತಾನೆ. ಆದರೆ ಈ ಮಾತುಗಳನ್ನು ಜಾಗರೂಕತೆಯಿಂದ ಗಮನಿಸಿದರೆ ನಮಗೆ ಸ್ಪಷ್ಟವಾಗುತ್ತದೆ - ಸದ್ಯದಲ್ಲಿ ಬ್ರೂಟಸನಿಗೆ ಬಹು ಮುಖ್ಯವಾಗಿ ಕಾಣುವ ಕೆಲಸವೆಂದರೆ ಈ ಕೃತ್ಯದ ಸಂಪೂರ್ಣ ಹೊಣೆಗಾರಿಕೆಯನ್ನು ತಾನು ಮತ್ತು ತನ್ನ ಸಂಗಾತಿಗಳು ಒಪ್ಪಿಕೊಳ್ಳುವುದು. ಇದನ್ನು ಈ ಹಿಂದೆಯೇ ನಾವು ನೋಡಿರುವ ಹಾಗೆ ಅವನು ಒಮ್ಮೆ ಹೇಳಿ ಆಗಿದೆ. ಆದರೆ ಈಗ ಇನ್ನೂ ಹೆಚ್ಚಿಗೆ ಸ್ಪಷ್ಟವಾಗಿ, ದೃಢವಾಗಿ, ದಿಟ್ಟವಾಗಿ ಜಗತ್ತಿಗೆ ಬಹಿರಂಗಪಡಿಸುತ್ತಿದ್ದಾನೆ. ಇದು ಒಂದಾದರೆ ಮತ್ತೂ ಒಂದು ಅಂಶವೆಂದರೆ, ಈಗಾಗಲೇ ಗಮನಿಸಿದ ಹಾಗೆ, ಇಡೀ ಸಂದರ್ಭವನ್ನು ಚತುರೋಕ್ತಿಗಳಲ್ಲಿ ಮುಳುಗಿಸಿ ಹಗುರಗೊಳಿಸಿಬಿಡಬಾರದೆಂಬ ಅರಿವೂ ಆಗಿದ್ದಿರಬೇಕು. ಆದರೆ ಕ್ಯಾಷಿಯಸ್ ಇನ್ನೂ ಅದೇ ಲಹರಿಯಲ್ಲಿದ್ದಾನೆ. ತನ್ನ ಹಿಂದಿನ ಮಾತುಗಳ ಜಾಡಿನಲ್ಲೇ ಬ್ರೂಟಸನ ಮಾತುಗಳನ್ನು ಅರ್ಥೈಸಿ ಘೋಷಿಸುತ್ತಾನೆ: ''ಯುಗಗಳು ಕ್ರಮಿಸಿದರೂ ಈ ಇಂದಿನ ದೃಶ್ಯ ಪುನಃ ಪುನಃ ಪುನರಾವರ್ತನೆಯಾಗುತ್ತಲೇ ಇರುತ್ತದೆ - ಇನ್ನೂ ಹುಟ್ಟಿರದ ನಾಡುಗಳಲ್ಲಿ, ನುಡಿಗಳಲ್ಲಿ ಈ ಅಸದೃಶ ಘಟನೆ ನಾಟಕವಾಗಿ ಪ್ರದರ್ಶಿಸಲ್ಪಡುತ್ತದೆ!'' ಬ್ರೂಟಸ್ ಮುಂದುವರೆದು ''ಮತ್ತೆಷ್ಟು ಬಾರಿ ಸೀಸರ್ ರಂಗದ ಮೇಲೆ ಹೀಗೆ, ಪಾಂಪೆ ಪ್ರತಿಮೆಯಡಿ ಧೂಳಿಗೂ ಕಡೆಯಾಗಿ ಮುರಿದುಬಿದ್ದುಕೊಂಡು ನೆತ್ತರು ಹರಿಸಬೇಕೋ'' ಎಂದು ಅಚ್ಚರಿ ಪಡುತ್ತಾನೆ. ಇಡೀ ಈ ಜಾಡಿನ ಸಂವಾದಕ್ಕೆ ಕೊನೆಯ ಮಾತೆಂಬಂತೆ ಕ್ಯಾಷಿಯಸ್ ನಿರ್ಣಯ ನೀಡಿಬಿಡುತ್ತಾನೆ – 'ಎಷ್ಟೆಷ್ಟು ಬಾರಿ ಇದು ನಾಟಕವಾದರೂ ಅಷ್ಟಷ್ಟು ಸಲವೂ ನಮ್ಮ ತಂಡವನ್ನು ನಾಡಿಗೆ ಸ್ವಾತಂತ್ರ್ಯ ತಂದ ಜನ' ಎಂದು ಹೇಳುತ್ತಾರೆ. 'ನಡೆಯಿರಿ ಹಾಗಾದರೆ, ಬ್ರೂಟಸನ ನಾಯಕತ್ವದಲ್ಲಿ ಅತ್ಯುನ್ನತ ಶೌರ್ಯ ಮತ್ತು ಹೃದಯಸಂಪನ್ನತೆಯಲ್ಲಿ' ಎಂದು ನಿಶ್ಚಯಿಸಿ ಹೊರಡುವ ವೇಳೆಗೆ ಆಂಟನಿಯ ಸೇವಕ ಅಲ್ಲಿಗೆ ಪ್ರವೇಶಿಸುತ್ತಾನೆ.

ಒಂದೇ ಒಂದು ಗಂಟೆಯ ಅಂತರದಲ್ಲಿ ರೋಮ್ ನಗರ ಸಂಪೂರ್ಣ ಒಂದು ಹತ್ಯೆಯಿಂದ ಬದಲಾಗಿಬಿಟ್ಟಿದೆ. ರೋಮ್ ಇನ್ನೆಂದೂ ಹಿಂದಿನಂತೆ ಇರಲು ಸಾಧ್ಯವಿಲ್ಲ. ಸೀಸರನ ಹೃದಯಸಂಪತ್ತು ಇನ್ನು ಕಾಣುವುದಿಲ್ಲ. ಸ್ವಚ್ಛಂದತೆ ಇರುವುದಿಲ್ಲ. ಮುಂದೆ ನೋಡುವಂತೆ ಈ ಕ್ಷಣದಲ್ಲಿ ಬದಲಾದ ಈ ವಾತಾವರಣಕ್ಕೆ ಬ್ರೂಟಸನೂ ಬಲಿಯಾಗುತ್ತಾನೆ. ಆಂಟನಿಗೆ ಸೆನೆಟಿಗೆ ಬರುವ ಇಚ್ಛೆಯಿದೆ. ಆದರೆ ನೇರ, ಧೈರ್ಯವಾಗಿ ಬರುವುದಿಲ್ಲ. ಸುತ್ತಲೂ ಚೂರಿಯ ಅಲಗುಗಳೇ ಕಾಣುವ ಈ ಜಾಗಕ್ಕೆ ನೇರ ನಡೆದು ಬಂದುಬಿಡುವ ಮಾತೇ ಈಗ ಸಾಧ್ಯವಿಲ್ಲ. ಆಂಟನಿ ತನ್ನ ಸೇವಕನನ್ನು ಮೊದಲಿಗೆ ಕಳಿಸುತ್ತಾನೆ. ಅವನು ಬ್ರೂಟಸ್ ಮತ್ತು ಸಂಗಾತಿಗಳ ಎದುರು ಆಡಬೇಕಾದ ಪ್ರತಿಮಾತನ್ನೂ, ಪ್ರತಿ ಆಂಗಿಕ ಚಲನೆಗಳನ್ನೂ

ಪೂರ್ವಾಭ್ಯಾಸ ಮಾಡಿಸಿ ಕಳಿಸಿದ್ದಾನೆ. ಶುದ್ಧ, ಸಾಂಪ್ರದಾಯಿಕ, ಕರಾರುವಾಕ್ಕಾದ ಹಾಗೂ ಗೌರವಯುತ ಮಾತುಗಳನ್ನು, ನಡವಳಿಕೆಗಳನ್ನು ಕಲಿಸಿದ್ದಾನೆ. ಮಂಡಿಯೂರಿ ಬ್ರೂಟಸನನ್ನು ಕುರಿತು ಈ ಮಾತುಗಳನ್ನು ಹೇಳಲು ಕಳಿಸಿದ್ದಾನೆ ಆಂಟನಿ. ''ಬ್ರೂಟಸನ ಬಗ್ಗೆ ಗೌರವವಿದೆ, ಸೀಸರನನ್ನು ನಾನು ಭಯಭಕ್ತಿಗಳಿಂದ ಪ್ರೀತಿಸಿದೆ. ಆದರಿಸಿದ್ದೆ. ಆಂಟನಿ ಈಗ ಬ್ರೂಟಸನ ಬಳಿ ಏನೂ ಅಪಾಯದ ಹೆದರಿಕೆ ಇಲ್ಲದೆ ಬರಬಹುದೆಂದು ಹೇಳಿದರೆ ಬರುತ್ತಾನೆ. ಸೀಸರನಿಗೆ ಹತ್ಯೆಯಂಥ ಈ ಘೋರವನ್ನು ಯಾವ ಕಾರಣಕ್ಕಾಗಿ ವಿಧಿಸಲಾಯಿತು. ಸೀಸರನ ಪಾತಕಗಳಾದರೂ ಏನು ಎಂದು ಬ್ರೂಟಸ್ ವಿವರಿಸಿ ಹೇಳಿದರೆ ಆಂಟನಿ ಸತ್ತ ಸೀಸರ ಬಗೆಗಿನ ಪ್ರೀತಿ ಮರೆತು ಜೀವಂತವಿರುವ ಬ್ರೂಟಸನನ್ನು ಗೌರವಿಸುತ್ತಾನೆ. ಹಾಗೂ ಅವರೊಡನೆ ಕೈಜೋಡಿಸಿ, ಕಷ್ಟನಷ್ಟಗಳಲ್ಲಿ ಭಾಗಿಯಾಗಿ ಮಸುಕಾಗಿರುವ ಈ ರಾಷ್ಟ್ರದ ಭವಿಷ್ಯ ರೂಪಿಸುವುದರಲ್ಲಿ ಒಂದಾಗಿರುತ್ತಾನೆ'' ಆಂಟನಿ ಹೇಳಿಕಳಿಸಿರುವ ಮಾತುಗಳು ಇವು. ಇನ್ನು ಮುಂದೆ ಈ ನಾಡಿನಲ್ಲಿ ಎಲ್ಲವನ್ನೂ ಲೆಕ್ಕಾಚಾರ ಹಾಕಿ, ಅಳೆದು ಸುರಿದು ಮಾಡಬೇಕು. ರಾಜಕಾರಣತಂತ್ರಗಳು, ವಿಧಾನಗಳು ಈಗ ಹೆಬ್ಬಾಗಿಲಿನಿಂದಲೇ ಪ್ರವೇಶಿಸಿ ರೋಮ್ ನಗರವನ್ನೂ ಕ್ರಮೇಣ ತುಂಬುತ್ತಿದೆ.

ಬ್ರೂಟಸ್ ತನ್ನ ಮಾತುಗಳಿಗೆ ಪೂರ್ವಸಿದ್ಧತೆ ಮಾಡಿಕೊಂಡಿಲ್ಲ. ನೇರವಾಗಿ, ಸಹಜವಾಗಿ, ಗೌರವದಿಂದ ಉತ್ತರ ನೀಡುತ್ತಾನೆ. ''ಆಂಟನಿ ವಿವೇಕಿ, ಧೈರ್ಯಶಾಲಿ ಎಂದು ಮೊದಲಿನಿಂದಲೂ ಬಲ್ಲೆ. ಇಲ್ಲಿ ಅವನಿಗೆ ಹಾರ್ದಿಕ ಸ್ವಾಗತವಿದೆ. ಅವನ ಮನಸ್ಸಿನಲ್ಲಿರುವ ಅನುಮಾನಗಳು ಪರಿಹಾರವಾಗುತ್ತದೆಂದು ಬಲ್ಲೆ. ಏನೂ ಹಾನಿಯಾಗದೆ ಅವನು ಇಲ್ಲಿಂದ ತೆರಳಬಹುದು''.

ಸೇವಕ ನಿಷ್ಕ್ರಮಿಸಿದ ಮೇಲೆ ಕ್ಯಾಷಿಯಸ್ ಆಂಟನಿ ಬಗೆಗಿನ ತನ್ನ ಅನುಮಾನಗಳನ್ನು ವ್ಯಕ್ತಪಡಿಸುತ್ತಾನೆ. ಅವನು ಜಾಗರೂಕ. ಪಿತೂರಿಯ ಮತ್ತು ಒಂದು ವಿಸ್ತರಿಸಿದ ಅರ್ಥದಲ್ಲಿ ರಾಜಕಾರಣದ ಗುಣವೇ ಇದು – ನಿರಂತರ ಜಾಗರೂಕ ಸ್ಥಿತಿ. ಬ್ರೂಟಸನಿಗೆ ಇದು ಇನ್ನೂ ಸಾಧಿಸಿಲ್ಲ, ಆಂಟನಿ ತನ್ನೊಡನೆ ಸೇರಬಹುದೆಂದು ಪ್ರಾಮಾಣಿಕವಾಗಿ ನಂಬಿದ್ದಾನೆ.

ಆಂಟನಿ ಪ್ರವೇಶಿಸಿದ ಕೂಡಲೆ ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ ಅವನು ಭಾವಪರವಶನಾಗಿದ್ದಾನೆ. ಕ್ಷೋಭೆಗೊಂಡಿದ್ದಾನೆ ಹಾಗೂ ಸಂದಿಗ್ಧದಲ್ಲಿದ್ದಾನೆ ಎಂದು. ಬಂದವನೇ ನೇರ ಸೀಸರನ ಮುದುರಿಬಿದ್ದ ದೇಹದ ಬಳಿ ಹೋಗುತ್ತಾನೆ. ''ಇಷ್ಟು ನಿಕೃಷ್ಟವಾಯಿತೆ ನಿನ್ನ ಸ್ಥಿತಿ. ನಿನ್ನ ಎಲ್ಲ ಪರಾಕ್ರಮಗಳೂ, ಕೀರ್ತಿಯೂ, ವಿಜಯೋತ್ಸವಗಳೂ, ಈಗ ಈ ಮೂಲೆಯಲ್ಲಿ ಕುಸಿಯುವಷ್ಟು ಅಲ್ಪವಾಯಿತೆ ? ನಿನಗೆ ವಿದಾಯ'' ಇಷ್ಟು ಹೇಳಿ ಬ್ರೂಟಸ್ ಮತ್ತು ಅವನ ಗುಂಪಿನತ್ತ ತಿರುಗುತ್ತಾನೆ. ''ಮತ್ತೆ ಯಾರ ಯಾರ ನೆತ್ತರ ಹರಿಸಬೇಕೋ ನನಗೆ ತಿಳಿಯದು. ನಿಮ್ಮ ಮನಸ್ಸಿನಲ್ಲಿ ಏನಿದೆ ಎಂದು ನಾನು ತಿಳಿಯೆ. ಯಾರು

ನಿಮ್ಮ ದೃಷ್ಟಿಯಲ್ಲಿ ಸಂದೇಹಾಸ್ಪದರೋ ನನಗೆ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ಸತ್ಯ. ಆ ಪಟ್ಟಿಯಲ್ಲಿ ನಾನೂ ಸೇರಿದ್ದರೆ ಈ ಕ್ಷಣದಲ್ಲಿ, ಸೀಸರ್‌ನೊಡನೆಯೇ ಸಾಯುವುದಕ್ಕೂ, ಸೀಸರ್‌ನನ್ನು ಹತ್ಯೆ ಮಾಡಿದ ಅಸ್ತ್ರಗಳಿಂದಲೇ ಹತನಾಗುವುದಕ್ಕೂ ನಾನು ಸಿದ್ಧನಿದ್ದೇನೆ. ಇದಕ್ಕಿಂತ ಒಳ್ಳೆಯ ವೇಳೆ ಹೇಗೆ ಸಿಗಲು ಸಾಧ್ಯ ? ಸಾವಿರ ವರ್ಷ ನಾನು ಬದುಕಿದ್ದರೂ ಇಂಥ ಗಳಿಗೆಗಿಂತ ಉತ್ಕೃಷ್ಟವಾದ ಗಳಿಗೆಯು ನನಗೆ ದೊರಕುವುದಿಲ್ಲ. ಸೀಸರನನ್ನು ಹತ್ಯೆ ಮಾಡಿದ ನಿಮ್ಮಂಥ ಈ ಯುಗದ ಮಹಾನ್ ಹಾಗೂ ವಿಶಿಷ್ಟ ಚೇತನಗಳಿಂದಲೇ ಹತನಾಗುವುದೂ ಭಾಗ್ಯವೇ'' ಈ ಮಾತುಗಳಿಗೆ ಉತ್ತರವಾಗಿ ಆಡುವ ಬ್ರೂಟಸನ ಮಾತುಗಳನ್ನು ಬಹು ಗಂಭೀರವಾಗಿ ಅವಲೋಕಿಸಬೇಕು. ಆ ಒಂಬತ್ತು ಸಾಲುಗಳನ್ನು ಪೂರ್ತಿಯಾಗಿ ನೋಡೋಣ :

O Antony, beg not your death of us.
Though now we must appear bloody and cruel,
As by our hands and this our present act
You see we do, yet see you but our hands
And this the bleeding business they have done,
Our hearts you see not ; they are pitiful ;
And pity to the general wrong of Rome-
As fire drives out fire, so pity pity-
Hath done this deed on Caesar.

ಈ ಭಾಗದ ಕೆಲವು ಶಬ್ದಗಳನ್ನು ಗಮನಿಸೋಣ – bloody, hands, bleeding business, ಇದಕ್ಕೆ ವಿರುದ್ಧವಾಗಿ hearts, pitiful, general wrong of Rome ಮತ್ತು pity. ಈ ಮೊದಲ ಗುಂಪಿನ ಶಬ್ದಗಳೆಲ್ಲ ಮೂರ್ತಸ್ವರೂಪದವು. ಅಂದರೆ ಕಣ್ಣಿಗೆ ಕಾಣುವಂಥವು – ರಕ್ತಸಿಕ್ತ ಕೈಗಳು, ಕ್ರೂರಹತ್ಯೆಯ ಸಂಗತಿ. ಆದರೆ ಕಣ್ಣಿಗೆ ಕಾಣದ ಕೆಲವು ವಿಷಯಗಳಿವೆ – ಹೃದಯ, ನಾಡಿನ ಬಗೆಗಿನ ಕನಿಕರ ಇವು ಮನಸ್ಸಿನೊಳಗಿನ ಸಂಗತಿಗಳು. ಆಂಟನಿ ಕೇವಲ ಕಣ್ಣಿಗೆ ಕಾಣುವ ದೃಶ್ಯದಿಂದಲೇ ಎಲ್ಲವನ್ನೂ ನಿರ್ಧರಿಸಿಬಿಡಬಾರದು. ರಾಷ್ಟ್ರದ ಕುರಿತಾದ ಕಳಕಳಿ ತಮ್ಮಿಂದ ಈ ಕೃತ್ಯ ಮಾಡಿಸಿದೆ. ಸೀಸರನ ಕುರಿತಾದ ಕನಿಕರ ರಾಷ್ಟ್ರದ ಕುರಿತಾದ ಕನಿಕರಕ್ಕಿಂತ ದೊಡ್ಡದಲ್ಲ. ಒಂದು ಕನಿಕರಭಾವ ಮತ್ತೊಂದನ್ನು – ಬೆಂಕಿ ಬೆಂಕಿಯನ್ನು ಒರೆಸಿಹಾಕುವಂತೆ – ತೊಡೆದುಹಾಕಿದೆ. ಈ ಇಡೀ ವಾದ ಸಂಕೀರ್ಣವೂ ಒಂದಷ್ಟು ಮಟ್ಟಿಗೆ ಪರಸ್ಪರ ವಿರೋಧಾಭಾಸದಿಂದ ಕೂಡಿದ್ದೂ ಆಗಿದೆ.

ಬ್ರೂಟಸನಿಗೆ ಇದು ಅರ್ಥವಾಗಿರಲಿಕ್ಕಿಲ್ಲವೆ ? ಬಹುಶಃ ಯಾರಿಗಾದರೂ ಅರ್ಥವಾಗುವಂತಿದ್ದರೆ ಅದು ಬ್ರೂಟಸನಿಗೆ ಮಾತ್ರ. ಹೆಚ್ಚೆಂದರೆ ಕ್ಯಾಷಿಯಸನಿಗೆ ಮತ್ತು ಆಂಟನಿಗೆ. ಆದರೆ

ಇಂದ್ರಿಯಗಳ ಮಟ್ಟದಲ್ಲಿ ಮಾತ್ರ ಭಾವಿಸುವ ಮತ್ತು ಬದುಕುವ ಇವರುಗಳಿಗೆ ಈ ಸಂಕೀರ್ಣ ವಿಚಾರಗಳ ಕುರಿತಾಗಿ ಗೊಂದಲ ಉಂಟುಮಾಡಿಕೊಳ್ಳುವ ಅವಶ್ಯಕತೆ ಕಾಣುವುದಿಲ್ಲ. ಮತ್ತು ರಾಜಕಾರಣ ಇಂದ್ರಿಯಗಳ ಮಟ್ಟಮೀರಿ ಹೋಗುವುದೂ ಇಲ್ಲ.

ಆದರೆ ಬ್ರೂಟಸನಿಗೆ ಅರ್ಥವಾಗದೆ ಅಥವಾ ಅವನು ಒಂದು ಕ್ಷಣದ ಮಟ್ಟಿಗೆ ಅರ್ಥಮಾಡಿಕೊಳ್ಳುವ ಯತ್ನವನ್ನು ಪ್ರಜ್ಞಾಪೂರ್ವಕವಾಗಿಯೇ ಕೈಬಿಡುವ ವಿಷಯವೆಂದರೆ ಅಮೂರ್ತವೆಂಬುದು ಮೂರ್ತಗಳ ಬಲಿದಾನಗಳ ಮೂಲಕ ಸಿದ್ಧಿಸುವುದಲ್ಲ ಎಂಬುದು. 'ಒಂದು ಕ್ಷಣದ ಮಟ್ಟಿಗೆ' ಎಂದು ಏತಕ್ಕೆ ಹೇಳಿದೆ ? ರೋಮ್‌ನಗರದ ಒಳಿತನ್ನು ಸಾಧಿಸಲು ಒಂದು ಜೀವ ಮಾತ್ರ ಬಲಿದಾನವಾಗಬೇಕು. ಒಂದೇ ಒಂದು ಅಷ್ಟೆ. ಎರಡನೇ ಅಂಕದಲ್ಲಿ ಅವನು ಹೇಳಿಲ್ಲವೆ – 'Let us be sacrificers but not butchers. Casius" ಎಂದು ? ಸೀಸರನ ಹೊರತಾಗಿ ಮತ್ತೊಂದು ಜೀವದ ಹಾನಿ ತಾವು ಮಾಡುವುದಿಲ್ಲ. ಇಂಥ ದೊಡ್ಡ ರಾಷ್ಟ್ರಕ್ಕೆ, ಅದರ ಹಿತಕ್ಕಾಗಿ ನಾವು ಅರ್ಪಿಸುತ್ತಿರುವುದು ಒಂದೇ ಜೀವ. 'Let's carve him as dish fit for the Gods / And not hew him as a caracass fit for the hounds.' ಹಿಂದೆಯೇ ಗಮನಿಸಿದಂತೆ, ಯಾಗಕ್ಕೆ ಅರ್ಪಿಸಿದ ಬಲಿ. ಆ ಒಂದು ಕ್ಷಣವನ್ನು ತಾತ್ಕಾಲಿಕವಾಗಿ ರದ್ದುಮಾಡಿಬಿಡುವುದಕ್ಕಾದರೆ, ಮುಂದಕ್ಕೆ, ಮಿಕ್ಕೆಲ್ಲರಿಗೂ - ಆಂಟನಿಗೂ ಸೇರಿದ ಹಾಗೆ – 'our swords have leaden points' ಮುಂದಿನ ಎರಡು ಸಾಲುಗಳನ್ನು ನೋಡಿ 'our arms in strength of malice, and our hearts / Of brother's temper do receive you in / Wish all kind love, good thoughts, and reverence ಈ ಕ್ಷಣದಲ್ಲಿ ಕಣ್ಣಿಗೆ ಕಾಣುವ ನಮ್ಮ ತೋಳ್ಬಲಗಳು ಹಗೆತನವನ್ನು ಸೂಚಿಸಿದರೂ ಕಣ್ಣಿಗೆ ಕಾಣದ ನಮ್ಮ ಹೃದಯಗಳು ನಿನ್ನನ್ನು ಪ್ರೀತಿಯಿಂದ, ಸದ್ಭಾವನೆಗಳಿಂದ, ಗೌರವದಿಂದ ಸ್ವಾಗತಿಸುತ್ತದೆ.

ಕ್ಯಾಷಿಯಸನಿಗೆ ಕಾರ್ಯಸಾಧ್ಯವಾದ ರಾಜಕಾರಣದಲ್ಲಿ ಮಾತ್ರ ನಂಬಿಕೆ. ಬ್ರೂಟಸನ ಕಲ್ಪನಾಲೋಕದಲ್ಲಿ ವಿಹರಿಸುವುದಕ್ಕೆ ಸಮಯವಿಲ್ಲದ ವ್ಯಾವಹಾರಿಕ ರಾಜಕಾರಣಿ, ಆಂಟನಿಯೊಂದಿಗೆ ಅವನು ಮಾತನಾಡುವಾಗ ಅಧಿಕಾರದ, ಲಾಭದ, ಪ್ರಭಾವದ ಮಾತುಗಳನ್ನಾಡುತ್ತಾನೆ. 'ನಿನ್ನ ಧ್ವನಿ ಮತ್ತೆಲ್ಲರದಷ್ಟೇ ಮಹತ್ವದ್ದಾಗಿರುತ್ತದೆ' ಎಂದು ಆಶ್ವಾಸನೆ ನೀಡಿ ಆಕರ್ಷಿಸುತ್ತಾನೆ. ಮುಂದುವರೆದು ಬ್ರೂಟಸ್ ಮಾತನಾಡುತ್ತ 'ಕಂಗೆಟ್ಟಿರುವ ಜನಗಳನ್ನು ಶಾಂತಗೊಳಿಸುವವರೆಗೆ ಸಮಾಧಾನದಿಂದಿರು ; ನಂತರ ನಿನ್ನ ಬಳಿ ಸೀಸರನನ್ನು ಅಷ್ಟೊಂದು ಪ್ರೀತ್ಯಾದರಗಳಿಂದ ಕಂಡ ನಾನು ಹೀಗೇಕೆ ಅವನ ವಿರುದ್ಧ ಕೈಯತ್ತಿದೆ ಎಂದು ವಿವರವಾಗಿ ತಿಳಿಸುತ್ತೇನೆ' ಎಂದು ಮಾತುಕೊಡುತ್ತಾನೆ.

ಆಂಟನಿಯ ಮುಂದಿನ ಮಾತುಗಳು ಬ್ರೂಟಸನ ನಾಯಕತ್ವದಲ್ಲಿಲ್ಲದೆ ಬೇರೆಯವರ ನಾಯಕತ್ವದಲ್ಲಿ ಇದ್ದಿದ್ದರೆ ಅವರ ಎದುರು ಮಾತನಾಡಲು ಸಾಧ್ಯವೇ ಆಗದಷ್ಟು ಎದೆಗಾರಿಕೆಯ ಮಾತುಗಳು. ಬ್ರೂಟಸ್ ಅಲ್ಲಿರುವುದರಿಂದಲೇ ಆಂಟನಿ ತನ್ನ ಮನಸ್ಸಿನಲ್ಲಿರುವುದನ್ನು ಧೈರ್ಯವಾಗಿ ಹೇಳಬಲ್ಲ. ಬ್ರೂಟಸನ ಮಾತುಗಳನ್ನು ಆಲಿಸಿದ ಆಂಟನಿ 'ನಿಮ್ಮ ವಿವೇಕ ವಿವೇಚನೆಗಳ ಬಗ್ಗೆ ನನಗೆ ಸಂಪೂರ್ಣ ನಂಬಿಕೆಯಿದೆ' ಎಂದು ಹೇಳಿದ ಮೇಲೆ 'Let each man render me his bloody hand' ಎಂದು ಪ್ರತಿಯೊಬ್ಬರ ಕೈಗಳನ್ನು ಕುಲುಕುತ್ತಾನೆ. ಇಲ್ಲಿಯೇ ನಾನು ಸೂಚಿಸಿದ ಎದೆಗಾರಿಕೆಯಿರುವುದು. 'bloody' ಎಂಬ ಶಬ್ದಕ್ಕೆ ಎರಡು ಅರ್ಥಗಳಿವೆ. ಒಂದು 'ರಕ್ತಸಿಕ್ತವಾದ' ಇನ್ನೊಂದು 'ಹೊಲಸು, ನೀಚ' ಎಂದು. 'ನಿಮ್ಮ ರಕ್ತಸಿಕ್ತ ಕೈಗಳನ್ನು ನೀಡಿ' ಎಂಬುದು ಒಂದು ಅರ್ಥವಾದರೆ 'ನಿಮ್ಮ ಹೊಲಸು ಕೈಗಳನ್ನು ನೀಡಿ' ಎಂದು ಇನ್ನೊಂದು ಅರ್ಥ. ಬ್ರೂಟಸನಿಂದ ಹಿಡಿದು ಎಲ್ಲರ ಕೈಗಳನ್ನೂ ಕುಲುಕುತ್ತ ಕಾಸ್ಕಾನ ಬಳಿ ಬಂದಾಗ 'and, my valiant Casca, yours' ಎನ್ನುತ್ತಾನೆ. ಕ್ರೂರ ವ್ಯಂಗ್ಯ ಮಿಶ್ರಿತ ಮಾತು ಇದು. ಬೆನ್ನ ಹಿಂದೆ ಚೂರಿ ಹಾಕುವ ಶೂರ ಕಾಸ್ಕಾ – ಅಂದರೆ ತಾನು ಸೆನೆಟ್ ಬಿಟ್ಟು ಹೋದ ಮೇಲೆ ಸೀಸರನ ಹತ್ಯೆ ನಡೆಯುವವರೆಗೂ ಆದದ್ದೆಲ್ಲ ವಿವರವಾಗಿ ತಿಳಿದೇ ಬಂದಿದ್ದಾನೆ ಎಂದಾಯಿತು. ನಂತರ ಸೆನೆಟಿನಿಂದ ಉಪಾಯವಾಗಿ ತನ್ನನ್ನು ಹೊರಗೆ ಕೊಂಡೊಯ್ದು ಟ್ರೆಬೊನಿಯಸನ ಬಳಿ ಬಂದು "Though last, not least in love, yours, good Trebonius" ಎಂದು ಅವನ ಕೈಕುಲುಕುತ್ತಾನೆ. ಸಿಟ್ಟು, ವ್ಯಂಗ್ಯ ಮತ್ತು ಸೀಸರನನ್ನು ಕಳೆದುಕೊಂಡ ದುಃಖ ಎಲ್ಲವೂ ಸೇರಿಕೊಂಡು ಮಾತನಾಡುತ್ತಿದ್ದಾನೆ. ಆಂಟನಿ ಈ ಸಂದರ್ಭದಲ್ಲಿ ಮತ್ತು ಮುಂದೆ ಮಾತನಾಡುವುದೆಲ್ಲ ಬೇರೆಯವರ ಮೇಲೆ - ಅಂದರೆ ಇಲ್ಲಿ ಈ ಪಿತೂರಿಗಾರರ ಮೇಲೆ - ಪರಿಣಾಮ ಬೀರುವುದಷ್ಟೆ ಎಂದು ತೀರ್ಮಾನಿಸಿ ಬಿಡುವುದು ಕೊಂಚ ಅವಸರದ್ದಾಗುತ್ತದೆ. ಕ್ರೋಧವಿರುವುದು ಎಷ್ಟು ಸತ್ಯವೋ ಅಷ್ಟೇ ಮಟ್ಟಿಗೆ ಪ್ರಾಮಾಣಿಕವಾಗಿ ಕೂಡ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಾನೆ ಎಂದೂ ನಾವು ಗಮನಿಸಬೇಕು. ತನ್ನ ಈ ವಿಚಿತ್ರಸ್ಥಿತಿಯನ್ನು ನೋಡಿಕೊಂಡು ದಿಕ್ಕು ತೋಚದಾಗಿದ್ದಾನೆ. ''ನನ್ನ ಬಗ್ಗೆ ನೀವುಗಳು ಒಂದೋ ನಾನೊಬ್ಬ ಹೇಡಿ ಇಲ್ಲವೋ ನಾನೊಬ್ಬ ಹೊಗಳು ಭಟ್ಟ ಎಂದುಕೊಳ್ಳಬೇಕು. ಅಂಥ ಜಾರಿಕೆಯ ಸ್ಥಿತಿಯಲ್ಲಿ ನಾನಿದ್ದೇನೆ. ಸೀಸರ್, ನಿನ್ನನ್ನು ನಾನು ಪ್ರೀತಿಸಿದ್ದೆ ಎಂಬುದು ಸತ್ಯ. ಹಾಗಾದಲ್ಲಿ ಈ ಕ್ಷಣದಲ್ಲಿ ನಿನ್ನ ಆತ್ಮವು ಹೀಗೆ ನಾನು ನಿನ್ನ ಕೊಲೆಗಡುಕರ ಹೊಲಸುಕೈಗಳನ್ನು ಕುಲುಕುವುದನ್ನು ನೋಡಿ, ನಿನಗೆ ನಿನ್ನ ಸಾವಿಗಿಂತ ಮಿಗಿಲಾದ ದುಃಖಪಡುವಂತೆ ಆಗದೆ ?'' ಮುಂದೆ ಭಾವಪರವಶನಾಗಿ, ಸೀಸರನ ದೇಹ ನೋಡುತ್ತ "O world, thou wast the forest to this hart ; / And this indeed, O world, the heart of thee / How like a deer, stricken by many princes, / Doet thou here lie" ಎಂದು ವಿಲಪಿಸುತ್ತಾನೆ. ಕ್ಯಾಷಿಯಸನಿಗೆ ಬ್ರೂಟಸನ ಅಮೂರ್ತಗಳ ಬಗ್ಗೆ ಎಷ್ಟು ಅಸಹನೆಯೋ ಅಷ್ಟೇ ಅಸಹನೆ ಆಂಟನಿಯ ಈ ಭಾವಪರವಶತೆಗಳ ಬಗ್ಗೆ ಕೂಡ.

ಆಂಟನಿಯ ಭಾವನೆಗಳು ಅರ್ಥವಾಗುತ್ತದೆ. ಆದರೆ ಸದ್ಯಕ್ಕೆ ಅವನ ಕುತೂಹಲ. "What compact mean you to have with us ? Will you be pricked in number of our friends, / Or shall we on and not depend on you ?" ಅದು ಮುಖ್ಯ.

''ನಿಮ್ಮೊಡನೆಲ್ಲ ಸ್ನೇಹಿತನೆಂದು ಗುರುತಿಸಿಕೊಳ್ಳುವುದಕ್ಕಾಗಿಯೇ ನಿಮ್ಮ ಕೈಗಳನ್ನು ಕುಲುಕಿದ್ದು. ನಿಮ್ಮ ಸ್ನೇಹಿತನೂ ಹೌದು, ನಿಮ್ಮನ್ನೆಲ್ಲ ಪ್ರೀತಿಸುತ್ತೇನೆಂಬುದೂ ನಿಜ. ಸೀಸರನು ಈ ರೀತಿಯ ಹತ್ಯೆಗೆ ಹೇಗೆ ತಾನೇ ಜವಾಬ್ದಾರನಾದ, ಹೇಗೆ ಅವನು ಅಪಾಯಕಾರಿಯಾಗಿದ್ದ ಎಂದು ನೀವುಗಳು ನನಗೆ ತಿಳಿಯ ಹೇಳುತ್ತೀರಿ ಎಂಬ ನಂಬಿಕೆಯಿರುವುದರಿಂದಲೇ ಹೀಗೆ ನಿಮಗೆ ಹತ್ತಿರವಾಗಿದ್ದೇನೆ'' ಬಹು ವಿನಯದಿಂದ ಮಾಡಿಕೊಂಡ ಬಿನ್ನಹ. ಬ್ರೂಟಸನು ಇದಕ್ಕೆ ಸಿದ್ಧವಾಗಿಯೂ ಇದ್ದಾನೆ – ''ಹೀಗೆ ನಿನಗೆ ಇದನ್ನು ತಿಳಿಯ ಹೇಳದಿದ್ದರೆ ಇದೊಂದು ಭಯಂಕರ ಕೃತ್ಯವಾಗುತ್ತದೆ. ನಮ್ಮ ವಿವರಣೆಗಳು ನಿನಗೆ ಎಷ್ಟು ಮನವೊಪ್ಪುವಂತೆ ಕಾಣುತ್ತದೆಂದರೆ ನೀನು ಸೀಸರನ ಮಗನಾಗಿದ್ದರೂ ನಮ್ಮ ಕೃತ್ಯಕ್ಕೆ ವಿರೋಧ ವ್ಯಕ್ತಪಡಿಸುವುದಿಲ್ಲ.''

ಆಂಟನಿಯು ಮುಂದಿನ ಕೋರಿಕೆಯನ್ನು ಅಷ್ಟೇ ಮೆಲುದನಿಯಲ್ಲಿ, ಸಹಜವಾಗಿ, ಹೆಚ್ಚೇನನ್ನೂ ಕೇಳುತ್ತಿಲ್ಲದವನಂತೆ ಬ್ರೂಟಸನ ಮುಂದಿಡುತ್ತಾನೆ. ಆಂಟನಿ ಸೀಸರನ ವಿಷಯದಲ್ಲಿ ತನ್ನ ಭಾವನೆಗಳನ್ನು ಪ್ರಾಮಾಣಿಕವಾಗಿ ವ್ಯಕ್ತಪಡಿಸುತ್ತಿದ್ದಾನೆ ಎಂಬುದು ನಿಜ. ಆದರೆ ಅಷ್ಟೇ ನಿಜ ತಾನು ಎದುರಿಸುತ್ತಿರುವುದು ಒಂದು ಬೃಹತ್ ರಾಜಕೀಯ ಸವಾಲನ್ನು ಎಂಬುದು ಕೂಡ. ಸವಾಲಿಗೆ ಕ್ಯಾಷಿಯಸನಷ್ಟೇ ತಾನೂ ಸಮರ್ಥನಾಗಿ ಕಾಣದಿದ್ದರೆ ಸೋಲು ತನಗೆ ಕಟ್ಟಿಟ್ಟಿದ್ದು. ಮತ್ತು ಅವನಿಗೆ ಇದೂ ಗೊತ್ತು – ತನ್ನ ರಾಜಕೀಯದ ದಾಳ ಬೀಸಬೇಕಾದದ್ದು ಬ್ರೂಟಸನೆದುರು, ಕ್ಯಾಷಿಯಸನೆದುರಲ್ಲ ಎಂದು. ಬ್ರೂಟಸನ ಮೂಲಭೂತಗುಣವಾದ ಶಿಷ್ಟತೆಯ ಬಗ್ಗೆ ಸಂಪೂರ್ಣ ನಂಬಿಕೆಯಿದೆ ಅವನಿಗೆ. ರಾಜಕಾರಣದಲ್ಲಿ ಈ ಗುಣ ಒಂದು ದೌರ್ಬಲ್ಯ ಮತ್ತು ರಾಜಕಾರಣಿಯ ಗುಣವೆಂದರೆ ದೌರ್ಬಲ್ಯಗಳ ದುರ್ಲಾಭ ಪಡೆದುಕೊಳ್ಳುವುದು. ಈ ಅಂಶವನ್ನು ನಾವು ಕ್ಯಾಷಿಯಸ್-ಬ್ರೂಟಸ್, ಕ್ಯಾಷಿಯಸ್-ಕಾಸ್ಕಾ ಹಾಗೂ ಡೀಶಿಯಸ್ ಬ್ರೂಟಸ್-ಸೀಸರ್ ಈ ಸನ್ನಿವೇಶಗಳಲ್ಲಿಯೂ ಗಮನಿಸಿದ್ದೇವೆ. ಆಂಟನಿಗೆ ಈ ದಾಳಬೀಸಿ ತನ್ನ ಕಾಯಿ ನಡೆಸುವುದರಲ್ಲಿ 'ಮಾಡು - ಇಲ್ಲವೆ ಮಡಿ' ಸವಾಲಿದೆ. ತನ್ನ ಸಂಪೂರ್ಣ ಭವಿಷ್ಯವನ್ನು ಮನಸ್ಸಿನಲ್ಲಿಯೇ ಪಣವಾಗಿಟ್ಟುಕೊಂಡು ತನ್ನ ಎರಡನೆಯ ಕೋರಿಕೆಯನ್ನು ಮುಂದಿಟ್ಟು ಬಿಡುತ್ತಾನೆ.

"That's all I seek;
And I am moreover suitor that I may
Produce his body to the market place,
And in the pulpit, as becomes a friend,
Speak in the ordeal of his funeral"

ಒಂದು ಕ್ಷಣವೂ ಯೋಚಿಸದೆ, ಅಕ್ಕಪಕ್ಕದ ಸಂಗಾತಿಗಳ ಕಡೆ ತಿರುಗದೆ ಬ್ರೂಟಸ್ ಸರಳವಾಗಿ ಉತ್ತರಿಸಿಬಿಡುತ್ತಾನೆ. "You, shall, Mark Antony" ಶ್ರೀಮಂತ ಮನಸ್ಸು ಅಥವಾ ಮುತ್ಸದ್ದಿತನವೆಂದರೆ ಬೇರೆಯವರು ಆಡಿದ ಮಾತುಗಳ ಅರ್ಥವನ್ನೂ ಸರಳವಾಗಿ ಗ್ರಹಿಸುವುದು ಎಂದು. ಆ ಮಾತುಗಳ ಹಿಂದಿನ ಮನಸ್ಸು, ಉದ್ದೇಶ, ಆ ಮಾತುಗಳಿಗೆ ಇರಬಹುದಾದ ಹತ್ತು ಧ್ವನಿಗಳು ಇವುಗಳನ್ನು ಕುರಿತು ಚಿಂತಿಸುತ್ತ, ಅನುಮಾನಪಡುತ್ತ ಕೂಡುವುದರಲ್ಲಿ ಅಲ್ಲ. ತಾನು ಕಾಯಿ ನಡೆಸಿ ಆಂಟನಿ ವಿಜಯ ಸಾಧಿಸಿದ್ದಾನೆ. ಬ್ರೂಟಸ್ ತನ್ನ "You shall, Mark Antony" ಎಂಬ ಮಾತಿನಿಂದ ಸೋತನೆ ಅಥವಾ ಗೆದ್ದನೆ ಎಂದು ತೀರ್ಮಾನಿಸುವುದು ಬಹು ಕಷ್ಟದ ಕೆಲಸ; ತತ್‌ಕ್ಷಣದಲ್ಲಿಯಂತೂ ಸಾಧ್ಯವೇ ಇಲ್ಲ.

ಸೋತಿದ್ದಾನೆ ಎಂದು ನಿರ್ಧರಿಸಿದ್ದಾನೆ ಕ್ಯಾಷಿಯಸ್. ತೀರ ಗಲಿಬಿಲಿಗೊಂಡು ಬ್ರೂಟಸನನ್ನು ಪಕ್ಕಕ್ಕೆ ಕರೆದು 'ನೀನು ಏನು ಮಾಡುತ್ತಿದ್ದಿ ಎಂದು ನಿನಗೆ ಗೊತ್ತಿಲ್ಲ. ಆಂಟನಿಗೆ ಈ ಅವಕಾಶ ಕೊಡಬೇಡ. ಜನ ಹೇಗೆ ಅವನು ಆಡುವ ಮಾತುಗಳಿಂದ ಪ್ರಭಾವಿತರಾಗ ಬಹುದೆಂದು ನಿನಗೆ ತಿಳಿಯದೆ ?' ಎಂದು ತನ್ನ ಅಸಮ್ಮತಿ ಸೂಚಿಸುತ್ತಾನೆ. ಬ್ರೂಟಸನಿಗೆ ರಾಜಕಾರಣದ ಪಾಠಗಳು ಕಲಿಯಬೇಕಾದ ಅನಿವಾರ್ಯಗಳು ಒದಗುತ್ತಿವೆ. ಮನುಷ್ಯ ಸಂಬಂಧಗಳು ಅರ್ಥಪೂರ್ಣವಾಗಬೇಕಾದರೆ ಅತ್ಯಾವಶ್ಯಕವಾದ ನಂಬಿಕೆಯೆಂಬುದು ರಾಜಕಾರಣದಲ್ಲಿ ಒಂದು ಹೊರೆ, ಬೆನ್ನ ಹುರಿ ಮುರಿದುಬಿಡಬಹುದಾದ ಮಣಭಾರ ಎಂಬುದನ್ನು ಅರಿತುಕೊಳ್ಳಬೇಕು. ಎಂದೇ ಇದರಿಂದ ಮುಕ್ತನಾಗಬೇಕು. ಕ್ಯಾಷಿಯಸ್ ನೀಡುತ್ತಿರುವ ಎಚ್ಚರಿಕೆಯಿಂದ ಬ್ರೂಟಸ್ ತನ್ನ ನಿರ್ಧಾರ ತಪ್ಪು ಎಂದು ಮನಗಂಡು ತನ್ನ ನಿಲುವಿಗೆ ಕೊಂಚ ತಿದ್ದುಪಡಿ ತಂದುಕೊಂಡನೆ ಅಥವಾ ಸಂದರ್ಭದ ಬಲವಂತಗಳು ಅವನ ಮೇಲೆ ಒತ್ತಡ ಹೇರುತ್ತಿದ್ದು ಹಾಗೇ ಮಾಡುತ್ತಾನೆಯೆ ? ಇದಕ್ಕೆ ಏನೇ ಉತ್ತರವಿರಲಿ ಬ್ರೂಟಸನ ಸದ್ಯಸ್ಥಿತಿಗೆ ನಮ್ಮ ಪ್ರಬುದ್ಧ ರೀತಿಯ ಮರುಕವಂತೂ ಖಂಡಿತವಾದ ಪ್ರತಿಕ್ರಿಯೆ. ಕ್ಯಾಷಿಯಸನ ಆಕ್ಷೇಪಕ್ಕೆ ಬ್ರೂಟಸ್ ತತ್‌ಕ್ಷಣ ಸಮಾಧಾನ ಹೇಳುತ್ತಾನೆ – ''ನಾನು ಮೊದಲು ಜನಗಳನ್ನು ಉದ್ದೇಶಿಸಿ ಮಾತನಾಡುತ್ತೇನೆ. ಸೀಸರನ ಹತ್ಯೆಗೆ ಕಾರಣ ಗಳನ್ನು ನೀಡುತ್ತೇನೆ. ಆಂಟನಿ ಮಾತನಾಡುವುದು ನಮ್ಮ ಒಪ್ಪಿಗೆಯ ಮೇರೆಗೆ ಎಂದು ಹೇಳುತ್ತೇನೆ. ಸೀಸರನಿಗೆ ಸೂಕ್ತ ಹಾಗೂ ಗೌರವಯುತ ಕ್ರಿಯೆಗಳೆಲ್ಲವೂ ನಡೆದರೆ ಅವು ನಮ್ಮ ಪರವಾಗಿಯೇ ಕೆಲಸ ಮಾಡುತ್ತವೆ. ಹಾನಿ ಏನೂ ಅಲ್ಲ'' ಎಂದು ಸಮಾಧಾನ ಮಾಡಿದರೂ ಕ್ಯಾಷಿಯಸ್‌ಗೆ ನಂಬಿಕೆಯಾಗುವುದಿಲ್ಲ. 'ಇದರಿಂದೆಲ್ಲ ಏನೇನು ಆಗುವುದಿದೆಯೋ ನಾ ಅರಿಯೆ.' ತನಗಂತೂ ಇದು ಹಿಡಿಸದು ಎಂದು ಅಸಮ್ಮತಿ ಸೂಚಿಸುತ್ತಾನೆ. ಬ್ರೂಟಸ್ ಆಂಟನಿಯ ಬಳಿ ಬಂದು ಅವನು ಜನಗಳೆದುರು ನಡೆದುಕೊಳ್ಳಬೇಕಾದ ರೀತಿ, ಆಡ ಬಹುದಾದ ಮತ್ತು ಆಡಬಾರದ ಮಾತುಗಳು ಇವುಗಳ ಕುರಿತು ಸ್ಪಷ್ಟತೆಗಳನ್ನು ನೀಡುತ್ತಾನೆ.

'ಸೀಸರನ ದೇಹವನ್ನು ಕೊಂಡೊಯ್ಯಿ. ನಿನ್ನ ಸಂತಾಪಸೂಚಕಭಾಷಣದಲ್ಲಿ ನಮ್ಮನ್ನು ದೂಷಿಸಬಾರದು. ಸೀಸರನ ಕುರಿತು ಏನೆಲ್ಲ ಒಳ್ಳೆಯದು ಹೇಳಬೇಕೆನಿಸುತ್ತದೋ ಎಲ್ಲವನ್ನೂ ಹೇಳು. ಮತ್ತು ಇಷ್ಟನ್ನೂ ನಮ್ಮ ಒಪ್ಪಿಗೆಯ ಮೇರೆಗೆ ನೀನು ಮಾಡುತ್ತಿದ್ದೀ ಎಂದು ಸೇರಿಸು. ಇದಕ್ಕೆ ಒಪ್ಪಿಗೆ ಇಲ್ಲವಾದರೆ ನಿನಗೂ ಸೀಸರನ ಶವಸಂಸ್ಕಾರಕ್ಕೂ ಏನೂ ಸಂಬಂಧವಿರುವುದಿಲ್ಲ, ಮತ್ತು ನಾನು ಯಾವ ವೇದಿಕೆಯಿಂದ ಮಾತನಾಡುತ್ತಿದ್ದೇನೋ ನೀನೂ ಕೂಡ ಅಲ್ಲಿಂದಲೇ ಮಾತನಾಡಬೇಕು. ನಾನು ಮಾತಾಡಿ ಮುಗಿಸಿದ ಮೇಲೆ' ಪ್ರತಿ ಮಾತೂ ಅಳೆದು, ತೂಕ ಮಾಡಿ ಆಡಿದ ಮಾತು. ರಾಜಕೀಯ ಲಾಭ-ನಷ್ಟಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಆಡಿದ ಮಾತುಗಳು.

ಆಂಟನಿಗೆ ಅಷ್ಟು ಸಾಕು ''ಇದಕ್ಕಿಂತ ನಾ ಏನೂ ಹೆಚ್ಚಿಗೆ ಬಯಸುವುದಿಲ್ಲ'' ಎಂದು ಹೇಳುತ್ತಾನೆ. 'ಸರಿ, ಹಾಗಾದರೆ ದೇಹವನ್ನು ಸಜ್ಜುಗೊಳಿಸು, ನಮ್ಮ ಹಿಂದೆ ಬಾ' ಎಂದಂದು ತನ್ನ ಸಂಗಾತಿಗಳೊಂದಿಗೆ ಬ್ರೂಟಸ್ ನಿಷ್ಕ್ರಮಿಸುತ್ತಾನೆ. ಆಗ ಆಂಟನಿ ಒಬ್ಬನೇ ಇದ್ದಾನೆ – ಸೀಸರನ ಶವದೊಂದಿಗೆ. ಇಲ್ಲಿ ಆಂಟನಿಯದೊಂದು ದೊಡ್ಡ ಸ್ವಗತವಿದೆ. ಮೊದಲನೆಯ ಭಾಗ ಸೀಸರನ ಕ್ಷಮೆ ಕೇಳುವ ಮಾತುಗಳು. 'ನಿನ್ನನ್ನು ಹತ್ಯೆ ಮಾಡಿದ ಈ ಕೊಲೆಗಡುಕರೊಡನೆ ಇಷ್ಟು ಸೌಮ್ಯ ಹಾಗೂ ವಿನೀತಭಾವದಲ್ಲಿ ನಡೆದುಕೊಳ್ಳುತ್ತಿರುವುದಕ್ಕೆ ನನ್ನನ್ನು ಕ್ಷಮಿಸು. ಈ ಯುಗದಲ್ಲಿ ಬದುಕಿನ ಮಹಾನ್ ವ್ಯಕ್ತಿಯ ಅವಶೇಷ ನೀನು. ನಿನ್ನ ನೆತ್ತರು ಸುರಿಸಿದ ಕೈಗಳಿಗೆ ಕೇಡು ಬರಲಿ.' ಹೀಗೆ ಆರಂಭಿಸಿ ಮುಂದಿನ ಭಾಗದಲ್ಲಿ ಸಂಪೂರ್ಣವಾಗಿ 'ಈ ನಾಡು ಎಂಥ ಭೀಕರ ದಿನಗಳನ್ನು ಎದುರುನೋಡಲಿದೆ' ಎಂದು ವರ್ಣಿಸುತ್ತಾನೆ. ರಾಷ್ಟ್ರದ ಉದ್ದಗಲಕ್ಕೆ ಪ್ರಚಂಡ ವಿಷಮತೆ ಹುಟ್ಟುತ್ತದೆ. ಅಂತರ್ಯುದ್ಧದಿಂದ ನಾಡು ತತ್ತರಿಸಿಬಿಡುತ್ತದೆ. ಎಂಥ ಭಯಂಕರಗಳು ಎದುರಾಗುತ್ತವೆಂದರೆ ತಾಯಂದಿರು ತಮ್ಮ ಕಣ್ಣೆದುರಿನಲ್ಲಿಯೇ ಮಕ್ಕಳನ್ನು ಕೊಚ್ಚಿ ಹಾಕಿದರೂ ಮುಗುಳ್ನಗುತ್ತಾರೆಯೆ ವಿನಾ ಮತ್ತೊಂದು ಭಾವ ವ್ಯಕ್ತ ಪಡಿಸುವುದಿಲ್ಲ. ಕರುಣೆ ಕನಿಕರಗಳೆಲ್ಲ ಉಸಿರುಗಟ್ಟಿ ಹೋಗುತ್ತವೆ. ಸೀಸರನ ಚೇತನ ಪ್ರತೀಕಾರಕ್ಕಾಗಿ ಎಲ್ಲೆಲ್ಲೂ ಅಲೆದಾಡುತ್ತ, ವಿನಾಶಕ್ಕಾಗಿ ಅಬ್ಬರಿಸುತ್ತ ಯುದ್ಧದ ಹಸಿನಾಲಗೆ ಯನ್ನು ಎಲ್ಲೆಲ್ಲಿಯೂ ಚಾಚುತ್ತ ತನ್ನ ಕೊಲೆ ಎಂಥ ಹೇಯಕೃತ್ಯವೆಂದು ಸಾರುತ್ತ ಹೋಗುತ್ತದೆ. ಎಲ್ಲೆಲ್ಲಿಯೂ ಮಣ್ಣುಮಾಡದ ದೇಹಗಳು ತಮ್ಮ ಸಂಸ್ಕಾರಕ್ಕಾಗಿ ನರಳುತ್ತಿರುತ್ತವೆ.

ಎರಡನೆಯ ಅಂಕದ ಮೊದಲ ದೃಶ್ಯದ ಬ್ರೂಟಸನ ಸ್ವಗತಕ್ಕೂ ಈ ಸ್ವಗತಕ್ಕೂ ಇರುವ ವ್ಯತ್ಯಾಸಗಳನ್ನು ನಾವು ಗಮನಿಸಬೇಕು. ಬ್ರೂಟಸನ ಸ್ವಗತದಲ್ಲಿ ಮೊದಲೇ ಹೇಳಿದ ಹಾಗೆ ಒಂದು ಏತದ ಆಟವಿದೆ. ಪ್ರಯತ್ನಪೂರ್ವಕವಾಗಿ ಹಟದ ಮೇಲೆ ಒಂದು ವಾದವನ್ನು ತನ್ನ ಮನಸ್ಸಿಗೆ ನಾಟುವಂತೆ ಮಾಡಿಕೊಳ್ಳಬೇಕೆಂಬ ಲಕ್ಷಣಗಳಿವೆ. ತನ್ನ ನಿರ್ಧಾರಗಳನ್ನು ತರ್ಕಗಳ ಮೂಲಕ ಗಟ್ಟಿಮಾಡಿಕೊಳ್ಳುವ ಯತ್ನವಿದೆ.

ಆದರೆ ಇಲ್ಲಿ ಆಂಟನಿಯದು ಅದಮ್ಯ ವಿಶ್ವಾಸ ಹಾಗೂ ದೃಢತೆಗಳಿಂದ ಕೂಡಿದ ಮಾತುಗಳು. ತನಗೆ ತಾನೇ ಕೊಟ್ಟುಕೊಳ್ಳುತ್ತಿರುವ ವಚನ; ಸೀಸರನಿಗೆ ಕೊಡುತ್ತಿರುವ ವಚನ; ಹಾಗೂ ಎಲ್ಲಕ್ಕೂ ಹೆಚ್ಚಿಗೆ ಇಡೀ ನಾಡಿಗೆ ಕೊಡುತ್ತಿರುವ ವಚನ. ಈ ಎರಡು ಪಾತ್ರಗಳು, ಈ ಎರಡು ಸಂದಿಗ್ಧ ಪರಿಸ್ಥಿತಿಯಲ್ಲಿ ಆಡುವ ಮಾತುಗಳು ಅವರ ಇಡೀ ವ್ಯಕ್ತಿತ್ವಗಳಿಗೆ ಹಿಡಿದ ಕನ್ನಡಿ.

ಆಕ್ಟೇವಿಯಸ್ ಸೀಸರನ ಸೇವಕ ಪ್ರವೇಶಿಸಿ ತನ್ನ ಯಜಮಾನ ರೋಮಿಗೆ ಬಹು ಹತ್ತಿರವಿದ್ದಾನೆ ಎಂದು ಹೇಳಿದ ಕೂಡಲೆ ''ಹೋಗು, ಇಲ್ಲಿ ನಡೆದಿದ್ದನ್ನು ಅವನಿಗೆ ಹೇಳು. ಇದು ಶೋಕಗ್ರಸ್ತ ರೋಮ್, ಅಪಾಯಕಾರಿ ರೋಮ್, ಹೋಗಿ ಹೇಳು. ಅವನು ಸದ್ಯಕ್ಕೆ ಬರುವುದು ಬೇಡ' ಎಂದು ಹೇಳುತ್ತಿದ್ದವನು ತತ್‌ಕ್ಷಣ ತನ್ನ ನಿಲುವು ಬದಲಿಸಿ 'ಇಲ್ಲ, ಕೊಂಚ ಇರು. ನಾನು ಜನಗಳನ್ನು ಉದ್ದೇಶಿಸಿ ಮಾತನಾಡಿದ ಮೇಲೆ ಜನ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಅವಲಂಬಿಸಿ ಆಕ್ಟೇವಿಯಸ್ ಬರುವುದು ಅಥವಾ ಸ್ವಲ್ಪ ತಡೆದು ಬರುವುದು ಅದನ್ನು ನಿರ್ಧರಿಸೋಣ' ಎನ್ನುತ್ತಾನೆ.

ಮೊದಲ ಅಂಕದ ಮೊದಲ ದೃಶ್ಯದಲ್ಲಿ ಪ್ರಕಟವಾಗಿ ಕಾಣಿಸಿದ ರೋಮ್ ನಾಗರಿಕರು ಪುನಃ ನಮಗೆ ಕಾಣಿಸಿಕೊಳ್ಳುವುದು ಮೂರನೇ ಅಂಕದ ಎರಡನೇ ದೃಶ್ಯದಲ್ಲಿಯೇ. ಮಧ್ಯದಲ್ಲಿ ಮೊದಲ ಅಂಕದ ಎರಡನೇ ದೃಶ್ಯದಲ್ಲಿ ಲುಪೆರ್ಕಲ್ ಉತ್ಸವದಲ್ಲಿ ಅವರ ಹರ್ಷೋದ್ಗಾರಗಳು, ಅವರ ಜಯಘೋಷಗಳು ಮಾತ್ರ ಕೇಳಿಸುತ್ತವೆ. ಆದರೆ ಅವರು ಕಾಣಿಸಿಕೊಳ್ಳುವುದಿಲ್ಲ.

ಈಗ ಪ್ರಕ್ಷುಬ್ಧಗೊಂಡ ರೋಮನರು ಬೀದಿಬೀದಿಗಳಲ್ಲಿ ಭಯಗ್ರಸ್ತರಾಗಿ, ಕೋಪ ಮತ್ತು ದುಃಖಗಳನ್ನು ಕೂಡ ಪ್ರಕಟಿಸುತ್ತ ದಿಕ್ಕುಗಾಣದೆ ಓಡಾಡುತ್ತಿದ್ದಾರೆ. ಸೀಸರನ ಹತ್ಯೆಯ ಸುದ್ದಿ ಕಿವಿ ಮುಟ್ಟಿದೆ. ಸೀಸರನನ್ನು ಆರಾಧ್ಯದೇವತೆಯ ರೀತಿ ಕಂಡಿದ್ದಾರೆ. ರೋಮಿನ ಹೀರೋ ಅವನು. ಈಗ ಒಂದು ರೀತಿ ಅನಾಥಪ್ರಜ್ಞೆ ಕೂಡ ಜನಗಳನ್ನು ಕಾಡುತ್ತಿದ್ದರೆ ಆಶ್ಚರ್ಯವಿಲ್ಲ. ಇಂಥ ಜನಗಳನ್ನು ಎದುರಿಸಬೇಕಾಗಿದೆ ಬ್ರೂಟಸ್, ಇಂಥ ಜನಗಳ ಬೆಂಬಲ ಗಳಿಸಬೇಕಾಗಿದೆ. ತನ್ನ ಕೃತ್ಯಕ್ಕೆ ಸಮರ್ಥನೆ ನೀಡಿ ನಂಬಿಸಬೇಕಾಗಿದೆ.

ದಿಢೀರ್ ಕಾರ್ಯಾಚರಣೆ ನಡೆಸಿ ಸರಕಾರವನ್ನು ಉರುಳಿಸಿದ ಯಾವನೇ ನಾಯಕ ಮೊಟ್ಟ ಮೊದಲಿಗೆ ದೂರವಿಡುವುದು ಸಾಮಾನ್ಯಪ್ರಜೆಗಳನ್ನು. ಪಿತೂರಿಯ ಬಹು ಮುಖ್ಯ ಲಕ್ಷಣವೇ ಅದು : ಗುಟ್ಟುಗಳಲ್ಲಿ, ಪಿಸುಮಾತುಗಳಲ್ಲಿ, ಮಬ್ಬು ಬೆಳಕಿನಲ್ಲಿ ಮಾತ್ರ ತನ್ನ ಅಸ್ತಿತ್ವ ಕಂಡುಕೊಳ್ಳಬಲ್ಲುದು. ಇಂಥ ವಾತಾವರಣದಲ್ಲಿ ಮಾತ್ರ ಸುಭದ್ರವಾಗಿರಬಲ್ಲುದು.

ರೋಮ್‌ನಗರ ಗಣರಾಜ್ಯ ಹೌದು. ಮತ್ತು ತಾನು ನಡೆಸಿರುವುದು ಒಂದು ಕ್ಷಿಪ್ರ ಕ್ರಾಂತಿ ಎಂದು ಬ್ರೂಟಸನಿಗೆ ತಿಳಿಯದೆಂದಲ್ಲ. ಆದರೆ ಇದು ಕ್ರಾಂತಿಯೇ ಹೊರತು ಪಿತೂರಿಯಲ್ಲ

ಎಂದು ನೂರಕ್ಕೆ ನೂರರಷ್ಟು ನಂಬಿರುವವನು ಅವನು. ಹಿಂದಿನ ದೃಶ್ಯದಲ್ಲಿ ಆಂಟನಿಯ ವಿಷಯದಲ್ಲಿ ನಡೆದುಕೊಂಡ ರೀತಿಗೆ ಕಾರಣವೆಂದರೆ ತಾನು ಭಾಗವಹಿಸಿದ್ದು, ನಾಯಕತ್ವ ವಹಿಸಿದ್ದು ಒಂದು ಕ್ರಾಂತಿಯಲ್ಲಿ ಎಂಬ ನಂಬಿಕೆಯಿಂದ ಈಗ ಜನಗಳನ್ನು ಉದ್ದೇಶಿಸಿ ಮಾತನಾಡಲು ಬಂದಿದ್ದಾನೆ. ಕೊಂಚವೂ ಧೃತಿಗೆಡದೆ, ಅಂಜದೆ, ಅಳುಕದೆ ಅವರೆದುರು ನಿಂತಿದ್ದಾನೆ. ಅವನನ್ನು ಕಂಡೊಡನೆ ಜನ ಚೀರಿದ್ದಾರೆ. "We will be satisfied, let us be safisfied" ಎಂದು.

ಬ್ರೂಟಸ್ ತನ್ನ ಮಾತುಗಳನ್ನು, ನೀಡುವ ವಿವರಣೆಗಳನ್ನು ಕೇಳಲು ಅವರನ್ನು ಆಹ್ವಾನಿಸುತ್ತಾನೆ. ''ನನ್ನ ಮಾತು ಕೇಳುವವರು ನನ್ನೊಡನೆ ಬನ್ನಿ, ಕ್ಯಾಷಿಯಸನ ಮಾತು ಕೇಳುವವರು ಅವನೊಡನೆ ಹೋಗಿ. ಸೀಸರನ ಸಾವಿಗೆ ಸಾರ್ವಜನಿಕವಾಗಿ ನಾವು ಸಮಾಧಾನಗಳನ್ನು ನೀಡುತ್ತೇವೆ'' ಎಂದ ಮಾತಿಗೆ ಜನರು ಎರಡು ಭಾಗವಾಗಿ, ಒಂದು ಭಾಗ ಕ್ಯಾಷಿಯಸ್‌ನೊಡನೆ ಹೋಗುತ್ತದೆ. ಮತ್ತೊಂದು ಬ್ರೂಟಸನ ಮಾತು ಕೇಳಲು ಅಲ್ಲಿಯೇ ಉಳಿಯುತ್ತದೆ. ಬ್ರೂಟಸ್ ವೇದಿಕೆ ಹತ್ತಿ ನಿಂತ ಕೂಡಲೆ ಜನ ನಿಶ್ಶಬ್ದರಾಗುತ್ತಾರೆ. ಒಂದು ಮಾತಂತೂ ಸತ್ಯ. ಬ್ರೂಟಸ್ ಬಗ್ಗೆ ಜನಸಾಮಾನ್ಯರಲ್ಲಿ ಗೌರವವಿದೆ, ಎಂದೇ ಅವನು ವೇದಿಕೆ ಹತ್ತಿದ ಕೂಡಲೆ "The noble Brutus is ascended : Silence" ಬ್ರೂಟಸ್ 'noble' ಎಂಬುದರ ಬಗ್ಗೆ ಸಂದೇಹವೇ ಇಲ್ಲ.

ನಿಶ್ಶಬ್ದ ಆವರಿಸಿದ ಕೂಡಲೆ ಬ್ರೂಟಸ್ ತನ್ನ ಮಾತುಗಳನ್ನು ಆರಂಭಿಸುತ್ತಾನೆ.

ಶೇಕ್ಸ್‌ಪಿಯರ್ ಅವನ ಇಡೀ ಭಾಷಣವನ್ನು ಸರಳಗದ್ಯದಲ್ಲಿ ರಚಿಸಿದ್ದಾನೆ. ಮಾತುಗಳು ಸ್ಪಷ್ಟವಾಗಿವೆ. ಪುಟ್ಟ ಪುಟ್ಟ ವಾಕ್ಯಗಳ ಮಾತು. ವೈಯಕ್ತಿಕವಾಗಿ ಮಾತನಾಡುತ್ತಿರುವ ರೀತಿಯ ಶೈಲಿ. ಅವನ ಭಾಷಣ ಮುಂದುವರೆಯುತ್ತ ಹೋದಂತೆ ಕಾಣುವ ಮತ್ತೊಂದು ಅಂಶ – ಬ್ರೂಟಸ್ ಜನಗಳ ಬಗ್ಗೆ ತೋರಿಸುವ ಗೌರವ ಮತ್ತು ನಂಬಿಕೆ.

ಅವನು ಆಡುವ ಮಾತುಗಳಲ್ಲಿ ಕಾಣುವ ಕೆಲವು ಪ್ರಧಾನಶಬ್ದಗಳನ್ನು ಗಮನಿಸೋಣ 'Believe me for my cause' 'Believe me for mine honour and have respect to mine honour...'wisdom' 'awake your senses that you may the better judge"... ಹೀಗೆ 'Cause', 'Believe' 'honour' 'respect' 'senses' 'judge'.... 'believe' and 'respect' ಎಂಬ ಶಬ್ದಗಳನ್ನು 'Faith' ಎಂಬ ಅರ್ಥದಲ್ಲಿ ಬಳಸುತ್ತಿದ್ದಾನೆ. ಅಂದರೆ ಪ್ರಪ್ರಥಮವಾಗಿ ಅವನು ಅರಿಕೆಮಾಡಿಕೊಳ್ಳುತ್ತಿರುವುದು ಪರಸ್ಪರ ವಿಶ್ವಾಸಕ್ಕಾಗಿ, ಸಂಪೂರ್ಣ ನಂಬಿಕೆಗಾಗಿ, 'awake your senses' ಅಂದರೆ ಇಲ್ಲಿ 'ನಿಮ್ಮ ವಿಚಾರಗಳನ್ನು ಜಾಗ್ರತಗೊಳಿಸಿಕೊಳ್ಳಿ' ಎಂದು. ಗಣರಾಜ್ಯದ ಅಸ್ತಿವಾರವೇ ಈ ಗುಣಗಳು – ನಂಬಿಕೆ, ವಿಶ್ವಾಸ, ವಿಚಾರಪರತೆ, ವಿವೇಕ. ಈ ಗುಣಗಳು ಸಾಮಾನ್ಯರಲ್ಲಿ, ಸಾಮಾನ್ಯರಾದ ಈ ರೋಮನ್‌ರಲ್ಲಿ ಇದೆ ಎಂದು ನಂಬಿದ್ದಾನೆ ಬ್ರೂಟಸ್.

ಹೀಗೆ ಪ್ರಾರಂಭಿಸಿದವನು - ಸೀಸರ್ ಮತ್ತು ರೋಮನ ಜನ, ಸೀಸರ್ ಮತ್ತು ರೋಮ್ ಹಾಗೂ ಸೀಸರ್ ಮತ್ತು ತಾನು – ಈ ಸಂಬಂಧಗಳ ಕುರಿತು ಮಾತನಾಡುತ್ತಾನೆ. ಅತ್ಯಂತ ಕ್ಲಿಷ್ಟ ಭಾಗ ಇದು. ಜನಗಳಿಗೆ ಹೇಳುತ್ತಿರುವುದಕ್ಕಿಂತ ಹೆಚ್ಚಿಗೆ ತನಗೆ ತಾನೇ ಬ್ರೂಟಸ್ ಮಾತನಾಡಿಕೊಳ್ಳುತ್ತಿದ್ದಾನೆಯೆ ಎಂಬ ಒಂದು ಎಳೆ ಅನುಮಾನವೂ ಕಾಡುವುದಕ್ಕೆ ಆರಂಭಿಸುವಷ್ಟು ಸಂಕೀರ್ಣವಾಗಿದೆ ಈ ಭಾಗ. ಈ ಸಂಕೀರ್ಣತೆ ಮೇಲ್ನೋಟಕ್ಕೆ ಕಾಣುವುದಿಲ್ಲ. ಅಮೂರ್ತ ಶಬ್ದಗಳನ್ನು ಬಳಸಿ ನಾವು ಮಾತನಾಡಿದಾಗಲೆಲ್ಲ ಒಂದು ಬಗೆಯಲ್ಲಿ "ಹೌದು, ಇವೆಲ್ಲ ಈ ಸಂದರ್ಭಕ್ಕೆ ಸ್ವಾಭಾವಿಕವಾದವು" ಎನ್ನಿಸಿಬಿಡುವುದರಿಂದ ಕೊಂಚ ನಿಂತು ಆಳಕ್ಕೆ ನೋಡುವ ಸಹನೆ ತೋರುವುದಿಲ್ಲ. ಆದರೆ ಇಲ್ಲಿ ಬ್ರೂಟಸ್ ಅಪ್ರಾಮಾಣಿಕವಾಗಿ ಮಾತನಾಡುತ್ತಿದ್ದಾನೆ ಎಂದು ನಾನು ಖಂಡಿತ ಹೇಳುತ್ತಿಲ್ಲ. ಆದರೆ ಅವನ ಮಾತುಗಳು ಆತನ ಅತ್ಯಂತ ಗೊಂದಲದ ಮನಃಸ್ಥಿತಿಯನ್ನು ತೋರುತ್ತಿವೆ ಎಂದು ಹೇಳುತ್ತಿದ್ದೇನೆ. 'If there be, any in the assembly, any dear friend of Caeser's, to him I say that Brutus love to Caesar was no less than his. If then that friend demand why Brutus rose against Caesar, this is my answer : Not that I loved Caesar less, but that I loved Rome more". ಇಲ್ಲಿಯೂ ಸರಳತೆ ಇದೆ ನಿಜ. ಆಕರ್ಷಣೆಯೂ ಇದೆ. ಇಲ್ಲಿರುವ ಶಬ್ದಗಳೂ ಕೂಡ ಎಲ್ಲ ಅಮೂರ್ತಗಳೇ – Love, friendship, Rome ; ತನ್ನ ಮನಸ್ಸಿನಲ್ಲಿಯೇ ಬಿಡಿಸಲಾಗದಿದ್ದ ಒಗಟೊಂದನ್ನು ಇಲ್ಲಿ ಮತ್ತೂ ಒಮ್ಮೆ ಬಿಡಿಸಲು ಹೊರಟಿದ್ದಾನೆಯೇ ? "We shall stand up against the spirit of Caesar / And in the spirit of men there in no blood; / O that we could come by Caesar's spirit / And not dismember Caesar" ಎರಡನೇ ಅಂಕದ ಬ್ರೂಟಸನ ಈ ಮಾತುಗಳು ನಮ್ಮ ಕಿವಿಯಲ್ಲಿ ಇನ್ನೂ ಗುಂಯ್‌ಗುಡುತ್ತಿವೆ. 'Spirit of Caesar' and 'Caesar' ಇಲ್ಲಿ ಜನಗಳೆದುರು ಮಾತನಾಡುವಾಗ ಇದೇ ಮನಸ್ಸಿನೊಳಗಿನ ಈ ದ್ವಂದ್ವ ಬೇರೆ ರೂಪುತಾಳುತ್ತದೆ. – 'Love of Rome' and 'love of Caesar'. ನಾನು ಸೀಸರನನ್ನು ಗೌರವ ಪ್ರೀತಿಗಳಿಂದ ಕಂಡಿದ್ದು ನಿಜ - ಆದರೆ ನಾನು ರೋಮ್‌ನಗರವನ್ನು ಹೆಚ್ಚಿಗೆ ಪ್ರೀತಿಸುತ್ತೇನೆ" ಆದದ್ದರಿಂದ ಹೆಚ್ಚಿನ ಪ್ರೀತಿ ಬೇಡುವುದು ಕಡಿಮೆ ಪ್ರೀತಿ ಬೇಡುವುದನ್ನು ಬಿಟ್ಟುಕೊಡಬೇಕಾಯಿತು. ಬ್ರೂಟಸನಿಗೆ ಗೊಂದಲವಿರುವುದು ಮತ್ತು ಈ ಮಾತುಗಳನ್ನು ಓದುತ್ತಿದ್ದ ನಮಗೂ ಗೋಚರವಾಗುವ ಗೊಂದಲ ಇದು. Caesar ಎಂಬುವವನು ಒಬ್ಬ ವ್ಯಕ್ತಿ-ಮೂರ್ತ. ರೋಮ್ ಎಂಬುದು ಒಂದು ದೇಶ - ಅಮೂರ್ತ. ಮೂರ್ತ ಅಮೂರ್ತಗಳನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದೇ ತಪ್ಪು. ಈ ಮೂರ್ತ ಅಮೂರ್ತಗಳ ಕುರಿತಾದ ನಮ್ಮ ಪ್ರೀತಿಗಳನ್ನು ಹೋಲಿಸಲು ಸಾಧ್ಯವಿಲ್ಲ. ಈ ವಾದವನ್ನು ಮುಂದುವರೆಸಿಕೊಂಡು ಹೋದರೆ ಭಯಂಕರವಾದ ಸ್ಟಾಲಿನ್ ಮತ್ತು ಹಿಟ್ಲರರ ವಾದವನ್ನು ಒಪ್ಪಿಬಿಡಬೇಕಾಗುತ್ತದೆ. ಹೀಗೆ ಹೇಳಿದ ಕೂಡಲೆ ತತ್‌ಕ್ಷಣ ನೆನಪಿಗೆ ಬರುವ ಮಾತೆಂದರೆ,

ಈಗಾಗಲೇ ಒಮ್ಮೆ ಹೇಳಿರುವ ಮಾತು : ಬ್ರೂಟಸ್ ತನ್ನ ಮಾತುಗಳಲ್ಲಿ ಈ ಅರ್ಥವನ್ನು ಹುದುಗಿಸಿಕೊಂಡಿರಬಹುದೆಂಬ ಕಿಂಚತ್ ಅನುಮಾನವೂ ಇಲ್ಲದೆ ಮಾತನಾಡುತ್ತಿದ್ದಾನೆ. ತನ್ನ ಕಾರಣಗಳನ್ನು 'ಅತ್ಯಂತ ಪ್ರಾಮಾಣಿಕವಾಗಿ ನೀಡುತ್ತಿದ್ದೇನೆ' ಎಂಬ ನಂಬಿಕೆಯಲ್ಲಿಯೇ ಮಾತನಾಡುತ್ತಿದ್ದಾನೆ. 'not that I loved Caesar less, but that I loved Rome more' ಎಂಬ ಬಹು ಆಕರ್ಷಕವಾಗಿ ಕಾಣುವ ಮಾತಿನ ಬಗ್ಗೆ ನಾವು ಅತ್ಯಂತ ಜಾಗರೂಕರಾಗಿರಬೇಕು. ಕ್ರಾಂತಿ ಮತ್ತು ರಕ್ತಪಾತಗಳು ಒಟ್ಟಿಗೆ ಹೋಗುವುದಿಲ್ಲ. ಪ್ರಜಾತಂತ್ರದ ಬುನಾದಿಯ ಮೇಲೆ ರೂಪಿಸಲಾದ ಕ್ರಾಂತಿಗೂ ಹಿಂಸೆಗೂ ಸಂಬಂಧವೇ ಇಲ್ಲ. ಪಿತೂರಿಯಾಗಲೇಬಾರದು ಎಂದು ಕ್ಷಣಕ್ಷಣವೂ ಎಚ್ಚರ ವಹಿಸುತ್ತಿರುವ ಬ್ರೂಟಸ್, ತಾನು ಕೈಗೊಂಡದ್ದು ಕ್ರಾಂತಿಯೇ ಎಂದು ಸಂಪೂರ್ಣ ನಂಬಿರುವ ಬ್ರೂಟಸ್ ಬಹು ಆಳದಲ್ಲಿ ಈ ದ್ವಂದ್ವಕ್ಕೆ, ಸಂಘರ್ಷಕ್ಕೆ ಸಿಲುಕಿಕೊಂಡಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಮೂರ್ತಗಳನ್ನು ಅಮೂರ್ತಗಳ ಹೆಸರಿನಲ್ಲಿ ಬಲಿ ಅರ್ಪಿಸಬಹುದೆ ? ಎಂಬ ಸಂದಿಗ್ಧ, ಸಂಘರ್ಷ ಇದು.

ಈ ಸಂದಿಗ್ಧತೆ ಅವನ ಮಾತುಗಳು ಮುಂದುವರೆದಂತೆ ಮತ್ತೂ ಅಷ್ಟು ಸ್ಪಷ್ಟವಾಗುತ್ತ ಹೋಗುತ್ತದೆ. ."Had you rather Caesar were living and die all slaves, than that Caesar were dead, to live all free men" ಗಣರಾಜ್ಯದಲ್ಲಿ ಸಾಮಾನ್ಯಜನರ ಬೆಂಬಲ ಹಾಗೂ ವಿಶ್ವಾಸ ಅತ್ಯಾವಶ್ಯಕ ನಿಜ. ಆದರೆ ಇವುಗಳನ್ನು ಗಳಿಸುವ ನಮ್ಮ ಉತ್ಸಾಹದಲ್ಲಿ ನಮ್ಮ ವಿಚಾರಶಕ್ತಿಗೆ, ವಿವೇಚನೆಗೆ ಅತ್ಯಾವಶ್ಯಕವಾಗಿ ಬೇಕಾದ ಚೂಪುಗಳನ್ನು, ಆಯಾಮಗಳನ್ನು ಕಳೆದುಕೊಳ್ಳುತ್ತ ಹೋಗುತ್ತೇವೆ ಎಂಬ ಅನುಮಾನ ನನ್ನದು. ವಿಶೇಷವಾಗಿ ಬ್ರೂಟಸ್ ಸದ್ಯಕ್ಕೆ ಇರುವ ಸಂದರ್ಭದಲ್ಲಿಯಂತೂ ಇನ್ನೂ ಹೆಚ್ಚಿಗೆ ಈ ಅಂಶ ವೇದ್ಯವಾಗುತ್ತ ಹೋಗುತ್ತದೆ. ಆಂಟನಿಯಂತಾಗಲೀ ಕ್ಯಾಷಿಯಸ್‌ನಂತಾಗಲೀ ಬ್ರೂಟಸ್ ಒಬ್ಬ ಜಾಣ ರಾಜಕಾರಣಿಯಾಗಿದ್ದಿದ್ದರೆ ಇಷ್ಟು ಮಾತನಾಡುವ ಪ್ರಮೇಯವೇ ಇರುತ್ತಿರಲಿಲ್ಲ. ಆದರೆ ಬ್ರೂಟಸ್ ಒಬ್ಬ ಮೇಧಾವಿ, ಮುತ್ಸದ್ದಿ. ಸೀಸರನನ್ನಾಗಲೀ, ರೋಮ್‌ನಗರವನ್ನಾಗಲೀ ಪ್ರಾಮಾಣಿಕವಾಗಿ ಪ್ರೀತಿಸಿದವನು. ಎಂದೇ ನಾವು ಅವನ ಮನಃಸ್ಥಿತಿಯನ್ನು ತಿಳಿಯುವ ಯತ್ನ ಮಾಡುವ ನಿಟ್ಟಿನಲ್ಲಿಯೇ ಅವನಾಡುವ ಮಾತುಗಳಲ್ಲಿ ಸಾರ್ವಕಾಲಿಕ ಮೌಲ್ಯಗಳೇನು ಗೋಚರವಾಗುತ್ತವೆ ಎಂದು ಕೂಡ ನೋಡಬೇಕು.

ಮುಂದುವರೆಯುತ್ತ ಬ್ರೂಟಸ್ ತನ್ನ ಮಾತುಗಳ ಮೋಹಕ ಬಲೆಯೊಳಗೆ ತಾನೇ ಸಿಲುಕಿಕೊಳ್ಳುತ್ತ ಹೋಗುತ್ತಾನೆ. "As Caesar loved me, I weep for him, as he was Fortunate I rejoice at it ; as he was Valiant, I honour him ; but as he was ambitions, I slew him" ಎರಡನೇ ಅಂಕದ ಮೊದಲ ದೃಶ್ಯದ ಬ್ರೂಟಸನ ಸ್ವಗತದ ನೆನಪು ಇರುವವರಿಗೆ ಅದೇ 'It must be by his death' ರೀತಿಯ ತರ್ಕಬದ್ಧ ಶೈಲಿಯ

ಪುನರಾವರ್ತನೆ ಇಲ್ಲಿ ಬಹು ಸ್ಪಷ್ಟವಾಗಿ ಕಾಣುತ್ತದೆ. ತನ್ನ ಅರಿವಿಲ್ಲದೆಯೆ ಈ ರೀತಿಯ ಮಾತುಗಳಿಂದ ತನ್ನ ಮೇಲೆಯೇ ಆಗಬಹುದಾದ ಪರಿಣಾಮದ ಬಗ್ಗೆ ಕೊಂಚವೂ ಚಿಂತಿಸದೆ 'ನಾನು, ನನ್ನ'ಗಳ ಮಾತುಗಳಲ್ಲಿ ಮುಳುಗಿಬಿಡುತ್ತಾನೆ. 'ಸೀಸರನು ನನ್ನನ್ನು ಪ್ರೀತಿಸಿದ್ದ ಆದ್ದರಿಂದಾಗಿ ಈ ಹತ್ಯೆಗಾಗಿ ನಾನು ಕಣ್ಣೀರಿಡುತ್ತೇನೆ ; ಭಾಗ್ಯವಂತನಾಗಿದ್ದ. ಆದ್ದರಿಂದ ನಾನು ಹರ್ಷಿಸುತ್ತೇನೆ. ಸಾಹಸಿಯಾಗಿದ್ದನಾದ್ದರಿಂದ ನಾನು ಗೌರವಿಸುತ್ತೇನೆ – ಆದರೆ ಅವನು ಮಹತ್ವಾಕಾಂಕ್ಷಿಯಾಗಿದ್ದನಾದ್ದರಿಂದ ಅವನ ಹತ್ಯೆ ಮಾಡಿದ್ದೇನೆ' ಒಂದು ಕ್ಷಣ ಬ್ರೂಟಸನೇ ಈ ಮಾತುಗಳನ್ನು ಕುರಿತು ಯೋಚಿಸಿದ್ದಿದ್ದರೆ ಅರ್ಥವಾಗುತ್ತಿತ್ತು – 'ತನ್ನ ಮಾತುಗಳ ಹಿಂದಿನ ಅಹಂಕಾರ ಮತ್ತು ಮೌಢ್ಯ - ಎರಡೂ. 'ಸೀಸರನು ಮಹತ್ವಾಕಾಂಕ್ಷಿಯಾದ್ದರಿಂದ ಅವನನ್ನು ಕೊಂದೆ' ಅನ್ನುವಾಗ ಕೊಲ್ಲುವುದಕ್ಕೆ 'ನಾನ್ಯಾರು' ಎಂದು ತಾನೇ ಕೇಳಿಕೊಳ್ಳುವಷ್ಟು ವಿನಯವಿದ್ದಿದ್ದರೆ ತನ್ನ ಅಹಂಕಾರವೂ ಆ ಅಹಂಕಾರದ ಹಿಂದೆ ಅಡಕವಾಗಿರುವ ಮೌಢ್ಯವೂ ತನಗೇ ಸ್ಪಷ್ಟವಾಗುತ್ತಿತ್ತು. ಬ್ರೂಟಸ್‌ನ ಬಗ್ಗೆ ಸಹಾನುಭೂತಿ ಹಾಗೂ ಕನಿಕರ ಹುಟ್ಟುವುದು ಇಲ್ಲಿಯೇ. ರಕ್ತಪಾತದ ಅಡಿಪಾಯದ ಮೇಲೆ ತಾನು ಕಟ್ಟ ಹೊರಟ ಪ್ರಜಾತಂತ್ರದ ಸೌಧ ಎಂದಿಗೂ ಗಟ್ಟಿ ನಿಲ್ಲಲಾರದು ಎಂದು ತನಗೆ ಗೊತ್ತಾಗಲಾರದಷ್ಟು ದಡ್ಡ ಖಂಡಿತ ಅಲ್ಲ ಬ್ರೂಟಸ್. ಅವನ ಇಡೀ ಭಾಷಣ ಒಂದು ಉದಾತ್ತ ಆತ್ಮವಂಚನೆಯ ದರ್ಶನ. "There is tears, for his love ; joy, for his fortune, honour for his valour ; and death, for his ambition" ಮುಂದೆ ವಾದವೇ ಸಾಧ್ಯವಿಲ್ಲವೆನ್ನುವಂತೆ ಕೊನೆಯ ಮಾತೂ ಕೊನೆಯ ತೀರ್ಪೂ ನೀಡಿಬಿಟ್ಟಿದ್ದಾನೆ.

ಮುಂದಿನ ಕೆಲವು ಮಾತುಗಳು – ಸೀಸರನ ಹತ್ಯೆಯ ಪ್ರಕರಣವನ್ನು ಒಂದು ಕ್ಷಣ ಪಕ್ಕಕ್ಕಿಟ್ಟು ಅವಲೋಕಿಸಿದಾಗ – ಬಹು ಮಹತ್ವದ, ಬಹು ಮುಖ್ಯವಾದ ಪ್ರಶ್ನೆಗಳು ಎಂದು ಕಾಣುವುದರಲ್ಲಿ ಅಚ್ಚರಿಯಿಲ್ಲ. ಒಂದು ನಾಡಿನ ನಾಯಕ ಜನಗಳನ್ನು ಈ ರೀತಿ ಸ್ವಾತಂತ್ರ್ಯಕ್ಕಾಗಿ, ದೇಶಪ್ರೇಮಕ್ಕಾಗಿ, ಭವಿಷ್ಯದ ಕಾಳಜಿಗಾಗಿ ಹುರಿದುಂಬಿಸುವುದು ಅತ್ಯಂತ ಶ್ಲಾಘನೀಯವಾದ ಕ್ರಿಯೆ. 'Who is here so base, that would be bondman ? If any speak, for him I have offended. Who is here so rude, that would not be a Roman ? If any, speak ; for him I have offended. Who is here so vile that would not love his country ? If any speak, for him I have offended, I pause for a reply' 'bondmen'ಗಳಾಗಿರಲು ಬಯಸುವವರ ಕಣ್ಣಲ್ಲಿ ನಾನು ಅಪರಾಧಿ. ರೋಮನ್ ಎಂದು ಹೆಮ್ಮೆ ಪಡದ, ದೇಶವನ್ನು ಪ್ರೀತಿಸದ ವ್ಯಕ್ತಿಯ ಕಣ್ಣಿನಲ್ಲಿ ನಾನು ಅಪರಾಧಿ. ಗುಲಾಮಗಿರಿಯಿಂದ ಮುಕ್ತಗೊಳಿಸಿದ, ದೇಶಪ್ರೇಮವನ್ನು ಸ್ಫುರಿಸಿದ ನಾನು ಹೇಗೆ ತಪ್ಪಿತಸ್ಥನಾಗಲು ಸಾಧ್ಯ ? ಅಂಥವರು ಯಾರಾದರೂ ಇದ್ದರೆ ತಿಳಿಸಿ – ನಾನು ಉತ್ತರಕ್ಕಾಗಿ ಕಾಯುತ್ತೇನೆ' ಎಂದು ಕೊಂಚ ಕಾಲ ಭಾಷಣ ನಿಲ್ಲಿಸುತ್ತಾನೆ.

ಈ ಇಡೀ ಭಾಷಣವನ್ನು ನಾವು ಬ್ರೂಟಸನ ವ್ಯಕ್ತಿತ್ವದ ದೃಷ್ಟಿಯಿಂದ ನೋಡುವುದು ಎಷ್ಟು ಆವಶ್ಯಕವೋ, ಒಟ್ಟು ಪ್ರಜಾತಂತ್ರ ಮತ್ತು ವ್ಯಕ್ತಿಯ ಹೊಣೆಗಾರಿಕೆ ಎಂಬ ವಿಶಾಲ ದೃಷ್ಟಿಯಲ್ಲಿ ಅರ್ಥೈಸುವುದು ಎಷ್ಟು ಆವಶ್ಯಕವೋ ಅಷ್ಟೇ ಆವಶ್ಯಕವಾದದ್ದು - ಜನ ಸಾಮಾನ್ಯರು, ಈ ತತ್‌ಕ್ಷಣದ ಸಂದರ್ಭದಲ್ಲಿ ಇದನ್ನು ಹೇಗೆ ಗ್ರಹಿಸಿದರು ಎಂದು ನೋಡುವುದು ಕೂಡ.

ಮೊದಲನೇ ಅಂಕದ ಮೊದಲ ದೃಶ್ಯದಲ್ಲಿ ಫ್ಲೇವಿಯಸ್ ಮತ್ತು ಮಾರುಲಸ್ ಜನ ಸಾಮಾನ್ಯರನ್ನು ಹೇಗೆ ನಡೆಸಿಕೊಂಡರು ಎಂದು ನೋಡಿದ್ದೇವೆ. ಅಸಹನೆ ಮತ್ತು ತಿರಸ್ಕಾರ ಇವುಗಳೇ ಅವರ ವರ್ತನೆಯ ಪ್ರಧಾನಗುಣಗಳು ಎಂಬುದನ್ನು ನಾವು ಕಂಡಿದ್ದೇವೆ.

ಈಗ ಈ ದೃಶ್ಯದಲ್ಲಿ ತಮ್ಮನ್ನು ಬ್ರೂಟಸ್ ನಡೆಸಿಕೊಳ್ಳುತ್ತಿರುವ ರೀತಿಯನ್ನು ಜನ ಸಾಮಾನ್ಯರು ಗಮನಿಸುತ್ತಿದ್ದಾರೆ.

ಬ್ರೂಟಸನ ಬಗ್ಗೆ ಜನರಿಗೆ ಅಪಾರ ಗೌರವವಿದೆ. ನಾಡ ಹಿರಿಯ ನಾಯಕ ಅವನು. ವೀರಾಗ್ರಣಿ. ಸಂಭಾವಿತ. ಈಗ ತಮ್ಮನ್ನು ಉದ್ದೇಶಿಸಿ ಮಾತನಾಡುತ್ತಿದ್ದಾನೆ. ತಮ್ಮನ್ನು ಸಮಾನರಂತೆ ಕಾಣುತ್ತಿದ್ದಾನೆ. ತಮ್ಮೊಡನೆ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದಾನೆ. ಅವನು ಆಡುತ್ತಿರುವ ಮಾತುಗಳೆಲ್ಲ ಅವರುಗಳಿಗೆ ಅರ್ಥವಾಗುತ್ತಿದೆಯೇ ? ಅನುಭವಕ್ಕೆ ಬರುತ್ತಿದೆಯೇ ? ನಾಡು, ಸ್ವಾತಂತ್ರ್ಯ, ದೇಶಪ್ರೇಮ, ಪ್ರೀತಿ, ಗೌರವ, ನಂಬಿಕೆ ಈ ಎಲ್ಲ ಶಬ್ದಗಳೂ ಅಗಾಧವಾದವು. ಕಲ್ಪನೆಗೆ ಮಾತ್ರ ಸಿಲುಕುವಂಥವು. ಅಲ್ಲಿ ನೆರೆದಿರುವ ಆ ಜನಸ್ತೋಮದಲ್ಲಿ ಎಷ್ಟು ಜನಕ್ಕೆ ಇದು ಮುಟ್ಟಿರಬಹುದು ? ಮುಟ್ಟಿರಲಿಕ್ಕಿಲ್ಲವೆಂದರೆ ತೊಂದರೆಯಿದೆಯೆ ? ಮುಟ್ಟಲಿಲ್ಲ ಎಂಬ ಅಸಮಾಧಾನವಿದೆಯೆ ? ಅಥವಾ ಇಂಥ ಮಟ್ಟದ ಜನಗಳನ್ನು ಮುಟ್ಟಲೇ ಸಾಧ್ಯವಿಲ್ಲವೆಂದು ತೀರ್ಮಾನಿಸಿಬಿಡುವುದಾದರೂ ಸರಿಯೆ ?

ಇವೆಲ್ಲ ಹೇಗೇ ಇರಲಿ. ಜನಸಾಮಾನ್ಯರ ದೃಷ್ಟಿಯಲ್ಲಿ 'ಈ ಇಷ್ಟನ್ನೂ ಬ್ರೂಟಸ್ ಆಡುತ್ತಿದ್ದಾನೆ' ಎಂಬುದಷ್ಟೆ ಸಾಕು. ತಮ್ಮಲ್ಲಿ ನಂಬಿಕೆಯಿಟ್ಟು, ತಮ್ಮ ಅಭಿಪ್ರಾಯಗಳಿಗೆ ಗೌರವ ನೀಡಿ ಮಾತನಾಡುತ್ತಿದ್ದಾನೆ. ಈ ಭಾವನೆಯಲ್ಲಿ ಅವರುಗಳು ಒಂದಂಗುಲ ಎತ್ತರಕ್ಕೆ ಬೆಳೆದ ಭಾವನೆ ಉಂಟಾಗಿದ್ದರೆ ಆಶ್ಚರ್ಯವಿಲ್ಲ. ಬ್ರೂಟಸ್ ತಪ್ಪು ಮಾಡುವವನಲ್ಲ. 'ನಾವು ಗುಲಾಮರಾಗುವುದು, ಸ್ವಾತಂತ್ರ್ಯ ಕಳೆದುಕೊಳ್ಳುವುದು' ಇವುಗಳಿಂದ ನಮ್ಮನ್ನು ರಕ್ಷಿಸಿದ್ದಾನೆ. ಎಂದೇ ಅವರ ಒಕ್ಕೊರಲ ಉತ್ತರ "none Brutus, none"

ಬ್ರೂಟಸನಿಗೆ ಈ ಉತ್ತರದಿಂದ ಸಂಪೂರ್ಣ ಸಮಾಧಾನವಾಗಿರಬೇಕು. (ತನ್ನ ಒಳದನಿಯ ಉತ್ತರದಂತೆಯೇ ಕೇಳಿಸಿತೆ ಅವನಿಗೆ ?) 'Then none have I offended' ಹೀಗೆಂದು ಮುಂದುವರೆಸಿ ''ಇಂತಹ ಸಂದರ್ಭಗಳಲ್ಲಿ ನೀವುಗಳು ಬ್ರೂಟಸನಿಗೆ ಎಸಗಬಹುದಾದಷ್ಟನ್ನೇ ನಾನೀಗ ಸೀಸರನಿಗೆ ಎಸಗಿದ್ದೇನೆ''. ಅಂದರೆ ಯಾರೂ ಸ್ವಾತಂತ್ರ್ಯ,

ಸಮಾನತೆಗಳನ್ನು ಹತ್ತಿಕ್ಕಿ ಮಹತ್ವಾಕಾಂಕ್ಷಿಗಳಾಗುವುದಕ್ಕೆ ಇಲ್ಲಿ ಆಸ್ಪದವಿಲ್ಲ. 'ನಾಳೆ ನಾನು ಈ ಲಕ್ಷಣಗಳನ್ನು ತೋರಿದರೂ ನನಗೂ ಇದೇ ಶಿಕ್ಷೆಯೇ'' ಎಂದು ಘೋಷಿಸುತ್ತಾನೆ.

ಬ್ರೂಟಸನ ಮಿಕ್ಕ ಮಾತುಗಳೆಲ್ಲ ವ್ಯವಹಾರದ ಮಾತುಗಳು – ''ಅವನ ಸಾವಿನ ಕುರಿತಾಗಿ ನಮ್ಮ ಇತಿಹಾಸದ ಕಡತಗಳಲ್ಲಿ ದಾಖಲಾಗಿದೆ. ಅವನ ಹಿರಿಮೆಗಳಾವುವೂ ಕಡೆಗಣಿಸಲಾಗಿಲ್ಲ – ಅದಕ್ಕೆ ಅವನಿಗೆ ಅರ್ಹತೆ ಇದ್ದವು. ಆದರೆ ಅವನು ಈ ಸಾವನ್ನು ಅನುಭವಿಸಬೇಕಾಗಿ ಬಂದ ಅವನ ದೋಷಗಳನ್ನು ಉತ್ಪ್ರೇಕ್ಷೆಗೊಳಿಸಲಾಗಿಲ್ಲ'' ಎಂಬುವ ಹೊತ್ತಿಗೆ ಆಂಟನಿ ಸೀಸರನ ದೇಹ ಹೊತ್ತು ನಡೆದು ಬರುತ್ತಿರುವುದು ಕಾಣಿಸುತ್ತದೆ. ಒಂದಷ್ಟೂ ಧ್ವನಿ ಬದಲಿಸದೆ ಬ್ರೂಟಸ್ ಹೇಳುತ್ತಾನೆ. ''ಶೋಕ ವ್ಯಕ್ತಪಡಿಸುತ್ತಿರುವ ಆಂಟನಿ ದೇಹವನ್ನು ತರುತ್ತಿದ್ದಾನೆ. ಆಂಟನಿಗೂ ಈ ಸಾವಿಗೂ ಏನೂ ಸಂಬಂಧವಿಲ್ಲ. ಆದರೂ ಈ ಘಟನೆಯ ಲಾಭಗಳಲ್ಲಿ ಅವನೂ ಪಾಲುದಾರನಾಗಿರುತ್ತಾನೆ, ನಿಮ್ಮೆಲ್ಲರ ಹಾಗೆ. ಅಷ್ಟೆ. ಈ ಮಾತುಗಳೊಂದಿಗೆ ನಾನು ತೆರಳುತ್ತೇನೆ. ನನ್ನ ಅತ್ಯಂತ ಪ್ರೀತಿಪಾತ್ರನಾದ ಸೀಸರನನ್ನು ಈ ದೇಶದ ಹಿತದೃಷ್ಟಿಯಿಂದ ಹತ್ಯೆ ಮಾಡಿದೆ. ಹಾಗೆಯೇ ನನ್ನ ದೇಶ ಎಂದು ಬಯಸುತ್ತದೆಯೋ ಅಂದು ಇದೇ ಕಠಾರಿಗಾಗಿ ಬ್ರೂಟಸನೂ ಸಿದ್ಧನಾಗಿರುತ್ತಾನೆ'' ಈ ಮಾತುಗಳಿಗೆ ಜನ ಹರ್ಷೋದ್ಗಾರಗಳಿಂದ, ಜೈಕಾರಗಳಿಂದ ಸುತ್ತಲ ವಾತಾವರಣವನ್ನು ತುಂಬಿಬಿಡುತ್ತಾರೆ. ಇಡೀ ಜನಸ್ತೋಮ "Live Brutus, Live, Live" ಎಂದು ತನ್ನ ಗೌರವವನ್ನು ಸೂಚಿಸಿದರೆ, ಪ್ರಜೆಗಳು ಬಿಡಿಬಿಡಿಯಾಗಿ ಮಾತನಾಡಿ ಬ್ರೂಟಸನನ್ನು ಹಾರೈಸುತ್ತಾರೆ. "Bring him with triumph home unto his house" "Give him a statue with his ancestors".

ಮಾತಿನಿಂದ ಮಾತಿಗೆ ಜನಗಳ ಉತ್ಸಾಹ, ಪ್ರಶಂಸೆಗಳು ಮುಗಿಲು ಮುಟ್ಟುತ್ತವೆ. "Let him be Caesar" "Caesar's better part / shall be crowned in Brutus" ಏನೆಲ್ಲ ಸ್ವಾತಂತ್ರ್ಯ, ಗಣತಂತ್ರ, ದೇಶಪ್ರೇಮದ ಮಾತನಾಡಿದರೂ ಕೊನೆಗೆ ಜನ ಬಯಸುವುದು ಒಬ್ಬ ಸೀಸರನನ್ನು, ವಿಭೂತಿಪೂಜೆ ಮಾಡಲೊಬ್ಬ ದೈವಾಂಶಸಂಭೂತನನ್ನು. ವ್ಯಕ್ತಿಗಳು ಬದಲಾಗುತ್ತಾರೆ – ಆರಾಧನೆ ಮುಂದುವರೆದು ಹೋಗುತ್ತದೆ. ಬ್ರೂಟಸನ ಅಷ್ಟೂ ಉದ್ದೇಶಗಳು ಒಂದೇ ಪೆಟ್ಟಿಗೆ ನುಚ್ಚುನೂರಾಗುವಂತೆ ಮಾಡುವ ಜನಗಳ ಸುಪ್ತ ಆಶಯ ಇದು. ಸೀಸರನ ಹತ್ಯೆಯ ನಂತರ ಅನಾಥರಂತೆ ಕಂಗೆಟ್ಟಿದ್ದ ಜನಗಳಿಗೆ ಈಗ ಆ ಸ್ಥಾನ ತುಂಬಲು ಬ್ರೂಟಸ್ ದೊರಕಿದ್ದಾನೆ. ಅವರಿಗೆ ಅಷ್ಟು ಸಾಕು. ಆದರೆ ಬ್ರೂಟಸನಿಗೆ ಅಷ್ಟೇ ಸಾಲದು. ಈ ನಾಡು ಪ್ರಜಾತಂತ್ರವಾಗಿ ಉಳಿಯಬೇಕು. ಸೀಸರನ ಹತ್ಯೆ ಮಾಡಿರುವುದು ನಿಜ, ಆದರೆ ಅವನಿಗೆ ಕೊಡಬೇಕಾದ ಗೌರವ ಜನ ಕೊಡಲೇಬೇಕು. ತಾನು ಕೂಡ. ಕನಿಷ್ಠವೆಂದರೆ ಸದ್ಯಕ್ಕೆ ಅವನ ಕುರಿತು ಒಂದು ನಾಲ್ಕು ಒಳ್ಳೆಯ ಮಾತು ಆಡಲು ಬಂದಿರುವ ಆಂಟನಿಗೆ ಅವರು ಅವಕಾಶ ಮಾಡಿಕೊಡಬೇಕು. ಇಷ್ಟುರವರೆವಿಗೆ ಜನಗಳನ್ನು ಉದ್ದೇಶಿಸಿ ಅವನು

ಮಾತನಾಡಿದಾಗ ಅವನ ಮನಸ್ಸಿನಲ್ಲಿ ಏನೇ ಗೊಂದಲಗಳಿರಲಿ, ಏನೇ ವಿರೋಧಾಭಾಸಗಳು ಕಾಣಲಿ ಅವು ಮಹಾನ್ ಚೇತನದ ಗೊಂದಲಗಳು ಹಾಗೂ ವಿರೋಧಾಭಾಸಗಳು. ಮೂಲಭೂತವಾಗಿ ಬ್ರೂಟಸ್ ಎಷ್ಟು ದೊಡ್ಡ ಮನುಷ್ಯ ಎಂದು ತಿಳಿಯುವುದಕ್ಕೆ ಈ ಸಂದರ್ಭವನ್ನು ಗಮನವಿಟ್ಟು ಅವಲೋಕಿಸಬೇಕು. ಜನ ಸಂಪೂರ್ಣ ತನ್ನ ಪರವಾಗಿದ್ದಾರೆ. ಸೀಸರನ ದೇಹವನ್ನು ತರುತ್ತಿರುವ ಆಂಟನಿಯನ್ನು ಕಂಡೂ ಬ್ರೂಟಸನ ಹಿಂದೆ ಜೈಕಾರ ಮಾಡುತ್ತ ಹೊರಟಿದ್ದಾರೆ. ಸೀಸರನ ದೇಹವನ್ನು ನೋಡುವಷ್ಟು ಕುತೂಹಲವನ್ನೂ ತೋರುತ್ತಿಲ್ಲ. ಜನಗಳು ತಾವಾಗಿಯೇ ಬ್ರೂಟಸನ ಹಿಂದೆ ಹೊರಟಿದ್ದಾರೆ. ಅವನೇನೂ ಬಲವಂತವೂ ಪಡಿಸುತ್ತಿಲ್ಲ. ಪ್ರಜಾತಂತ್ರದಲ್ಲಿ ರಾಜಕಾರಣಿಯೊಬ್ಬನಿಗೆ ಇದಕ್ಕಿಂತ ಹೆಚ್ಚಿಗೆ ಏನು ಬೇಕು ? ರಾಜಕಾರಣಿ ಎಂದರೆಯೇ ಈ ಕ್ಷಣದಲ್ಲಿ ಸಲ್ಲುವವನು ಎಂದು ಅರ್ಥ. ಈ ಕ್ಷಣ ಮೀರಿ ನಾಳೆ ಎಂಬುದು ಇಲ್ಲ. ಇದ್ದರೂ ಅದು ತನಗೆ ಸಂಬಂಧಪಡದ ವಿಷಯ ಎಂದೇ ಭಾವಿಸಿರುತ್ತಾನೆ. ರಾಜಕಾರಣವೆಂದರೆ ಸ್ವಲಾಭ ಮತ್ತು ಸ್ವಾರ್ಥ. ಬ್ರೂಟಸ್ ಈ ಬಗೆಯ ಒಬ್ಬ ರಾಜಕಾರಣಿಯಾಗಿದ್ದರೆ ''ಜನಗಳ ಇಚ್ಛೆಯಂತೆ ನಡೆದುಕೊಳ್ಳಲಿ ; ಅವರಿಗೆ ಆಯ್ಕೆಯ ಸ್ವಾತಂತ್ರ್ಯವಿದೆ ; ನನ್ನೊಡನೆ ಬರಬೇಕೆಂದಿದ್ದರೆ ಅದು ಅವರ ಇಷ್ಟ'' ಎಂದು ಜನಗಳನ್ನು ತನ್ನೊಡನೆ ಕೊಂಡೊಯ್ದು ಹೋಗಿಬಿಡಬಹುದಾಗಿತ್ತು. ಆಂಟನಿ ಸೀಸರನ ದೇಹವನ್ನು ಹೊತ್ತು ಏಕಾಕಿಯಾಗಿ ರಂಗದ ಮೇಲೆ ಹತಾಶನಾಗಿ ನಿಲ್ಲಬೇಕಿತ್ತು. ಆದರೆ ಬ್ರೂಟಸ್ ಒಬ್ಬ ಮುತ್ಸದ್ದಿ. ಈಗಾಗಲೇ ಹತ್ತು ಬಾರಿ ಹೇಳಿರುವಂತೆ ಒಬ್ಬ ಶ್ರೀಮಂತ ಮನಸ್ಸಿನ ವ್ಯಕ್ತಿ. ತಾನು ಜನಗಳನ್ನು ನಂಬಿಸಿ ಆಗಿದೆ. ಸೀಸರನ ಸಾವಿನ ಕಾರಣಗಳನ್ನು ಕುರಿತು ಜನಗಳಿಗೆ ನಂಬಿಕೆಯಾಗಿದೆ. ಈಗ ಸೀಸರನ ಬಗ್ಗೆ ಗೌರವ ತೋರಿದರೆ ಅದು ಒಬ್ಬ ನಾಯಕನಿಗೆ ಪ್ರಜೆಗಳು ತೋರಬೇಕಾದ ಗೌರವ. ಅದೂ ಅಲ್ಲದೆ, ಆಂಟನಿಗೆ ಮಾತು ಕೊಟ್ಟು ಆಗಿದೆ. ಜನಗಳ ವಿವೇಚನೆಯ ಬಗ್ಗೆ ವಿಶ್ವಾಸ ಮತ್ತು ಆಂಟನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ವಚನನಿಷ್ಠೆ. ಈ ನಿರ್ಧಾರ ಅವನ ಹಿಂದಿನ ಹಲವು ನಿರ್ಧಾರಗಳಂತೆ ಸ್ವಂತಕ್ಕಷ್ಟೇ ಅಲ್ಲ, ಅವನ ಇಡೀ ತಂಡಕ್ಕೆ ಮಾರಕವಾಗುತ್ತದೆಂದು ಸದ್ಯಕ್ಕಂತೂ ಅವನು ಭಾವಿಸಿಲ್ಲ. ಶ್ರೀಮಂತ ವ್ಯಕ್ತಿತ್ವದ ಮತ್ತೊಂದು ಲಕ್ಷಣವೆಂದರೆ ಸ್ವಚ್ಛಂದತೆ. ಮುಂದೆ 'ನನ್ನ ಮಾತಿನ ಪರಿಣಾಮ' ಏನು ಎಂದು ಸ್ವಾರ್ಥದ ದೃಷ್ಟಿಯಿಂದ ಯೋಚಿಸದೆಯೇ ಮನಸ್ಸಿಗೆ ಅನ್ನಿಸಿದ್ದನ್ನು ಮಾತನಾಡುವುದು. ಅಂತೆಯೇ ನಡೆದುಕೊಳ್ಳುವುದು. ಈ ದೃಶ್ಯ ನೋಡುತ್ತಿರುವ ನಮಗೆ ಗೊತ್ತಾಗುತ್ತದೆ ಬ್ರೂಟಸನ ಈ ಕ್ರಮ ಅವನ ಪತನಕ್ಕೆ ಅವನೇ ಹಾಕಿಕೊಳ್ಳುತ್ತಿರುವ ಅಡಿಪಾಯ ಎಂದು. ಅವನ ಬಗ್ಗೆ ಮರುಕವೆಷ್ಟು ಹುಟ್ಟುತ್ತದೋ ಅಷ್ಟೇ ಮಟ್ಟಿಗೆ ಅಪಾರಗೌರವವೂ ಮೂಡುತ್ತದೆ.

'Good country men, let me depart alone,
And, for my sake, stay here with Antony.
Do grace to Caesar's corpse, and grace his speech

Tending to Caesar's glories, which mark Antony,
By our permission, is allowed to make
I do entreat you, not a man depart,
Save I alone, till Antony have spoke.

ಈ ಮಾತುಗಳನ್ನು ಆಡಿ ನಿಷ್ಕ್ರಮಿಸುತ್ತಾನೆ – ಮತ್ತೆಂದೂ ರೋಮಿನ ನೆಲದ ಮೇಲೆ ಕಾಲಿಡಲಿಕ್ಕಾಗದಂತೆ.

ಬ್ರೂಟಸನ ಮಾತುಗಳಿಗೆ ಗೌರವ ಕೊಡಲು ಜನ ಉಳಿದುಕೊಳ್ಳುತ್ತಾರೆ. ಸೀಸರ್ ಒಬ್ಬ ಸರ್ವಾಧಿಕಾರಿಯಾಗಿದ್ದನೆಂಬುದು ಈಗ ಖಾತ್ರಿಯಾಗಿದೆ. – 'This Ceaser was a tyrant' ಎಂದು ತೀರ್ಮಾನಿಸಿಬಿಟ್ಟಿದ್ದಾರೆ. ಆಂಟನಿಯ ಮಾತುಗಳು ಕೇಳಬೇಕೆಂದು ಬ್ರೂಟಸ್ ಇಚ್ಛೆಪಟ್ಟಿದ್ದಾನೆ. ಅವನು ಈಗ ನಮ್ಮ ನಾಯಕ. ಅವನು ಹೇಳಿದಂತೆ ಈಗ ನಡೆದುಕೊಳ್ಳಬೇಕು. 'Stay ho, and let us hear mark Antony' ಹೋಗು ಆಂಟನಿ, ವೇದಿಕೆ ಹತ್ತಿ ನಿಲ್ಲು' ಎಂದು ಹೇಳುತ್ತಿದ್ದಂತೆ ಆಂಟನಿ 'For Brutus' sake, I am beholding to you' ಎಂದು ಮೆಲ್ಲನೆ ಉಸಿರಿದ್ದು ಕೇಳಿ ಜನ ಮೈಯೆಲ್ಲ ಕಿವಿಯಾಗಿ ಬಿಡುತ್ತಾರೆ. 'What does he say of Brutus ?' 'It were best he speak no harm of Brutus here'.

ಅಷ್ಟು ಪ್ರತಿಕೂಲ ವಾತಾವರಣವಿದೆ ಆಂಟನಿಗೆ. ಜನಗಳ ಅಸಹನೆ ಕೂಡ ಆಂಟನಿಗೆ ಸ್ಪಷ್ಟವಾಗಿ ಕಾಣುತ್ತಿದೆ. ಅವನ ಕಿವಿಗೆ ಕೇಳುವಂತೆಯೇ ಸೀಸರನ ಬಗ್ಗೆ ಜನ "ಅವನು ಸರ್ವಾಧಿಕಾರಿಯಾಗಿದ್ದನೆಂಬುದರಲ್ಲಿ ಅನುಮಾನವೇ ಇಲ್ಲ, ರೋಮ್ ಅವನಿಂದ ಬಿಡುಗಡೆ ಹೊಂದಿದ್ದು ಒಳ್ಳೆಯದಾಯಿತು" ಎಂದು ಮಾತನಾಡುತ್ತಿದ್ದಾರೆ. ಇಂಥ ಜನಗಳೆದುರು ನಿಂತು ಸೀಸರನ ಕುರಿತು ಒಳ್ಳೆಯ ಮಾತನಾಡಬೇಕಾಗಿದೆ. ಅಷ್ಟೇ ಆದರೆ ಸಾಲದು, ಈಗಾಗಲೇ ತನಗೆ ತಾನು ವಚನ ಕೊಟ್ಟುಕೊಂಡಂತೆ ಇಡೀ ನಾಡನ್ನು ಯುದ್ಧ ಭೂಮಿಯಾಗಿ ಪರಿವರ್ತಿಸಿ ಬ್ರೂಟಸ್ ಮತ್ತು ಅವನ ಸಂಗಾತಿಗಳನ್ನು ಸಂಪೂರ್ಣ ನಾಶಮಾಡಬೇಕಾಗಿದೆ. ಸೀಸರನ ಆತ್ಮಕ್ಕೆ ತನ್ನ ನಿಷ್ಠೆಯನ್ನು ಸ್ಥಾಪಿಸಬೇಕಾಗಿದೆ.

ಈ ಬಹು ದೊಡ್ಡ ಸವಾಲನ್ನು ಆಂಟನಿ ಹೇಗೆ ನಿಭಾಯಿಸಿ ಕೊನೆಗೆ ಜಯ ತನ್ನದಾಗಿಸಿಕೊಳ್ಳುತ್ತಾನೆ ನೋಡೋಣ.

ಒಂದು ಕುತೂಹಲಕರ ಅಂಶವನ್ನು ನಾವೆಲ್ಲ ಗಮನಿಸಿದ್ದೇವೆ. ಶಾಲೆಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವಾಚನಸ್ಪರ್ಧೆಗಳನ್ನು ಏರ್ಪಡಿಸಿದಾಗ ಆಂಟನಿಯ ಈ ಭಾಷಣವನ್ನು ಗೊತ್ತು ಪಡಿಸುತ್ತಾರೆಯೇ ವಿನಾ ಬ್ರೂಟಸನದಲ್ಲ. ಯಾಕೆ ಹೀಗಿರಬಹುದು ? ಬಹುಶಃ ಬ್ರೂಟಸನ ಭಾಷಣದಲ್ಲಿ ನಟನ ಕೌಶಲ್ಯಕ್ಕೆ ಅವಕಾಶಗಳು ಕಡಿಮೆ. ಧ್ವನಿಯಲ್ಲಿ ಏರಿಳಿತ,

ಅಂಕು, ಡೊಂಕು, ಇವುಗಳನ್ನು ಹೆಚ್ಚಿಗೆ ಬೇಡುವುದಿಲ್ಲ. ಮತ್ತು ಅವನ ಮಾತುಗಳೆಲ್ಲ ಮನಸ್ಸನ್ನು ಮುಟ್ಟುವಂಥವು ; ನಮ್ಮ ಕಲ್ಪನೆಗೆ ಉದ್ದೇಶಿಸಿ ಮಾತನಾಡಿದವು. ಆದರೆ ಆಂಟನಿಯದು ಇದಕ್ಕೆ ವಿರುದ್ಧವಾದದ್ದು. ಬಹು ಸೌಮ್ಯವಾಗಿ ಆರಂಭವಾಗುವ ಭಾಷಣ, ಅತ್ಯಂತ ವಿನಯದಿಂದ ಮೊದಲು ಮಾಡಿದ ಭಾಷಣ ಕ್ಷಣಕ್ಷಣಕ್ಕೆ ತನ್ನ ಗತಿಯನ್ನು, ಶೈಲಿಯನ್ನು ಬದಲಿಸಿಕೊಳ್ಳುತ್ತ ಹೋಗುತ್ತದೆ. ಆಂಟನಿ ಒಟ್ಟು ನೂರಾಮೂವತ್ತೈದು ಸಾಲುಗಳು ಮಾತನಾಡುತ್ತಾನೆ. ಈ ಜನಗಳ ಮನಸ್ಸುಗಳಲ್ಲ ಅವನ ಗುರಿ - ಅವರ ಭಾವರಾಗಗಳು, ಮನೋವಿಕಾರಗಳು ; ಎಂದೇ ಅವರನ್ನು ಪ್ರಚೋದಿಸಬೇಕು. ಉದ್ರೇಕಗೊಳಿಸಬೇಕು. ಭಾವಪರವಶರನ್ನಾಗಿ ಮಾಡಿ ಹತೋಟಿ ತಪ್ಪುವಂತೆ ಮಾಡಬೇಕು. ಮನಸ್ಸುಮುಟ್ಟಿ ಮಾತನಾಡುವವರು ಸಂಕ್ಷಿಪ್ತವಾಗಿ ಮಾತನಾಡುತ್ತಾರೆ. ಅಲಂಕಾರಗಳನ್ನೆಲ್ಲ ದೂರವಿಟ್ಟು, ಶಬ್ದಾಡಂಬರಗಳನ್ನು ಇಚ್ಛಿಸದೆ ಸರಳವಾಗಿ ಮಾತನಾಡುತ್ತಾರೆ. ಆದರೆ ಜನಗಳನ್ನು ಉದ್ರೇಕಗೊಳಿಸಬೇಕಾದರೆ ತಂತ್ರಗಳನ್ನು ಬಳಸಬೇಕು. ಆಂಟನಿ ಈ ಬಗೆಯ ತಂತ್ರಗಳನ್ನು ಬಳಸುವುದರಲ್ಲಿ ನಿಷ್ಣಾತ. ರಾಜಕಾರಣಿಯ ಮತ್ತೊಂದು ಮುಖ್ಯಲಕ್ಷಣವೆಂದರೆ ನಿಜಜೀವನದಲ್ಲಿ, ವಿಶೇಷವಾಗಿ ಸಾರ್ವಜನಿಕ ಜೀವನದಲ್ಲಿ ಹತ್ತು ವೇಷಗಳನ್ನು ತೊಡುವ, ವಿವಿಧ ಭಂಗಿಗಳನ್ನು ಪ್ರದರ್ಶಿಸುವ ಸಾಮರ್ಥ್ಯವುಳ್ಳ ಒಳ್ಳೆಯ ನಟನಾಗಿರಬೇಕು ಎಂಬುದು.

ಬ್ರೂಟಸನ ಭಾಷಣವನ್ನು ನಾವು ಬಿಡಿಬಿಡಿಯಾಗಿ ವಿಶ್ಲೇಷಿಸುವ ಅವಶ್ಯಕತೆಯಿತ್ತು. ಅವನು ಆ ಗಳಿಗೆಯಲ್ಲಿ ಅನುಭವಿಸುತ್ತಿದ್ದ ಸಂದಿಗ್ಧಗಳು, ದ್ವಂದ್ವಗಳು, ವಿರೋಧಾಭಾಸಗಳು, ಸಂಘರ್ಷಗಳು ಎಲ್ಲವೂ ಮಾತುಗಳಲ್ಲಿ ಧ್ವನಿಸುತ್ತಿದ್ದವು.

ಆದರೆ ಆಂಟನಿಯ ನೂರಾಮೂವತ್ತೈದು ಸಾಲುಗಳ ಭಾಷಣದಲ್ಲಿ ಗಂಭೀರ ವಿಶ್ಲೇಷಣೆಗೆ ಅರ್ಹವಾದ ಸಾಲುಗಳೇ ಇಲ್ಲ. ಆಯಾಮಗಳೇ ಇಲ್ಲದ ಭಾಷಣಕ್ಕೆ ಚರ್ಚೆಯ ಅವಶ್ಯಕತೆ ಏನಿದೆ ? ಪ್ರತಿ ಮಾತೂ, ಪ್ರತಿ ಆಂಗಿಕ ಚಲನಗಳೂ ಸರಿಯಾಗಿ ತೂಕಮಾಡಿ, ಅಳೆದು ಸುರಿದು ಬಳಸಿದಂಥವು. ಆರಂಭದಲ್ಲಿಯೇ ತನ್ನ ಉದ್ದೇಶ ಏನೆಂಬುದನ್ನು ಹೇಳುತ್ತಾನೆ. ಅವನ ಭಾಷಣದ ಕೊನೆಗೆ ನಮಗೆ ಅರಿವಾಗುತ್ತದೆ – ಅವನು ವ್ಯಕ್ತಪಡಿಸಿದ ಉದ್ದೇಶವೂ ಸಾಧಿಸಿದ ಉದ್ದೇಶವೂ ತದ್ವಿರುದ್ಧವಾದುವು ಎಂದು.

> 'I come to bury Caesar, not to praise him'
> The evil that men do lives after them
> The good is oft interred with their bones /
> So let it be with Caesar.

ಬ್ರೂಟಸನು ಹೇಳಿದ ಮಾತುಗಳನ್ನು ಮರೆತಿಲ್ಲ ಎಂದು ಮಾತುಮಾತಿನಲ್ಲಿ

ಪ್ರದರ್ಶಿಸುತ್ತ ಹೋಗುತ್ತಾನೆ. ಆದರೆ ಬ್ರೂಟಸನು ಹೇಳಿದ್ದುದು 'ಸೀಸರನ ಬಗ್ಗೆ ಎಷ್ಟು ಬೇಕಾದರೂ ಪ್ರಶಂಸೆಗಳ ಮಾತನಾಡು ; ಆದರೆ ನಮ್ಮನ್ನು ದೂಷಿಸಬಾರದು ಮಾತ್ರ' ಎಂದು. ಆಂಟನಿ ಅತ್ಯಂತ ವ್ಯಂಗ್ಯಪೂರಿತ ಧ್ವನಿಯಲ್ಲಿ ಬ್ರೂಟಸನ ಈ ಆದೇಶವನ್ನು ತಿರುಚಿ ಜನಗಳ ಮುಂದಿಡುತ್ತಾನೆ. 'I come to bury Caesar, not to praise him' ಎಂದು.

ಬ್ರೂಟಸ್ ತಮ್ಮ ಬಗ್ಗೆ ದೂಷಿಸಬಾರದೆಂದನಲ್ಲವೆ ? ಎರಡೆರಡು, ಮೂರು ಮೂರು ಸಾಲಿಗೆ 'ಬ್ರೂಟಸ್ ಒಬ್ಬ ಗೌರವಾನ್ವಿತ ವ್ಯಕ್ತಿ, ಅವರೆಲ್ಲ ಎಲ್ಲರೂ ಗೌರವಾನ್ವಿತರು' ಎಂದು ಪಲ್ಲವಿಯಂತೆ ಸೇರಿಸುತ್ತಲೇ ಹೋಗುತ್ತಾನೆ. ಅವನ ಜಾಣತನ, ಚಾಣಾಕ್ಷತನ ಎಲ್ಲಿದೆ ಎಂದರೆ, ಪ್ರತಿಬಾರಿ ಸೀಸರನನ್ನು ಕುರಿತಾದ ಒಂದು ಒಳ್ಳೆಯ ಮಾತು ಆಡಿದಾಗಲೂ ತತ್‌ಕ್ಷಣ ಬ್ರೂಟಸ್‌ನ ಬಗ್ಗೆ ಈ ಪಲ್ಲವಿ ಹಾಡುವುದರಲ್ಲಿದೆ ಎಂದು ನಾವು ಗಮನಿಸುತ್ತೇವೆ. ಸೀಸರನು ಮಹತ್ವಾಕಾಂಕ್ಷಿಯಾಗಿದ್ದನೆಂದು ಬ್ರೂಟಸ್ ಹೇಳಿದ್ದಾನೆ. ಹಾಗಿದ್ದರೆ ಅದು ಘೋರ ಅಪರಾಧ, ಅದಕ್ಕೆ ಘೋರವಾದ ಬೆಲೆ ತೆತ್ತಿದ್ದಾನೆ. ಆಂಟನಿ ತನ್ನ ಜಾಣತನದ ಬಗೆಗೆ ಎಷ್ಟು ಆತ್ಮವಿಶ್ವಾಸ ಹೊಂದಿದ್ದಾನೆಂದರೆ, ತಾನು ಮಾತನಾಡುತ್ತಿರುವುದು ಸಾಧಾರಣ ತರ್ಕದ ಮಟ್ಟಿಗೂ ಒಪ್ಪಲು ಸಾಧ್ಯವಿಲ್ಲದ ಮಾತುಗಳು ಎಂದು ಗೊತ್ತಿದ್ದೂ ಆಡುತ್ತಾ ಹೋಗುತ್ತಾನೆ. "He was my friend, faithful and just to me / But Brutus says he was ambitious" ಈ ಮಾತಿಗೆ ಏನಾದರೂ ಅರ್ಥವಿದೆಯೆ ಎಂದು ಯೋಚಿಸುವಷ್ಟು ವ್ಯವಧಾನ ಅವನಿಗೂ ಇಲ್ಲ, ಜನ ಯೋಚಿಸಬಹುದು ಎಂದು ಅವನಿಗೆ ನಂಬಿಕೆಯೂ ಇಲ್ಲ. ಅವನಿಗೆ ನಿಷ್ಠ ಹಾಗೂ ಪ್ರಾಮಾಣಿಕ ಸ್ನೇಹಿತನಾಗಿದ್ದ ಮಾತ್ರಕ್ಕೆ ಸೀಸರ್ ಮಹತ್ವಾಕಾಂಕ್ಷಿಯಾಗಿರಬಾರದೆ ?

ಸೀಸರನು ಎಷ್ಟೊಂದು ರಾಷ್ಟ್ರಗಳನ್ನು ಗೆದ್ದು, ಎಷ್ಟು ಸಂಪತ್ತು ತಂದು ಖಜಾನೆ ತುಂಬಿಸಿದ್ದಾನೆ. ಬಡವರು ಅತ್ತಾಗ ಸೀಸರ್ ಕಣ್ಣೀರು ಹಾಕಿದ್ದಾನೆ. ಮಹತ್ವಾಕಾಂಕ್ಷಿಯಾದವನು ಇಂಥ ದಯಾರ್ದ್ರನಾಗಿರಲು ಸಾಧ್ಯವೇ ? ಲುಪೆರ್ಕಲ್ ಉತ್ಸವದಲ್ಲಿ ಮೂರು ಬಾರಿ ಕಿರೀಟ ಧರಿಸಲು ಕೇಳಿಕೊಂಡೆ. ಮೂರು ಬಾರಿಯೂ ಅವನು ನಿರಾಕರಿಸಿದ. ಇಷ್ಟಿದ್ದೂ ಬ್ರೂಟಸ್ ಸೀಸರನನ್ನು ಮಹತ್ವಾಕಾಂಕ್ಷಿ ಎನ್ನುತ್ತಾನೆ. ನಾನಿಲ್ಲಿ ಬ್ರೂಟಸನನ್ನು ಅಲ್ಲಗಳೆಯುವುದಕ್ಕೆ ಬಂದಿಲ್ಲ. ನನಗೆ ಗೊತ್ತಿದ್ದಷ್ಟನ್ನು ಮಾತ್ರ ನಾನು ಹೇಳುತ್ತಾ ಹೋಗುತ್ತೇನೆ.

ಒಮ್ಮೆ ಸೀಸರನನ್ನು ನೀವೆಲ್ಲ ಪ್ರೀತಿಸಿದ್ದಿರಿ. ಈಗ ಅವನಿಗಾಗಿ ಶೋಕ ವ್ಯಕ್ತಪಡಿಸಲು ಏನು ಅಡ್ಡಿಯಾಗಿದೆ ? – 'O judgement, thou art fled to brutish beasts / And men have lost their reason' ಈ ಮಾತುಗಳನ್ನು ಓದುತ್ತಿದ್ದಂತೆ ಮೊದಲ ಅಂಕದ ಮೊದಲ ದೃಶ್ಯದ ಮಾರುಲಸ್ ಮತ್ತು ಫ್ಲೇವಿಯಸ್ ಅವರುಗಳು ಜನಗಳು ಪಾಂಪೆಯ ಬಗ್ಗೆ ತೋರುತ್ತಿರುವ ಕೃತಘ್ನತೆಯ ಕುರಿತು ಆಡಿದ ಮಾತುಗಳು ನೆನಪಾಗುತ್ತದೆ.

''ದಯವಿಟ್ಟು ಕ್ಷಮಿಸಿ, ನನ್ನ ಹೃದಯವು ಸೀಸರನ ಶವಪೆಟ್ಟಿಗೆಯೊಳಗೆ ಸೇರಿ ಹೋಗಿದೆ. ಮತ್ತೆ ಮರಳಿ ಬರುವವರೆಗೆ ನಾನು ಕಾಯಬೇಕು'' ಎಂದು ತಲೆ ತಗ್ಗಿಸಿ, ಕಣ್ಣು ಮುಚ್ಚಿ ಸೀಸರನ ದೇಹದ ಬಳಿ ಮಂಡಿಯೂರಿ ಕೂಡುತ್ತಾನೆ – ಆದರೆ ಕಿವಿ ಮಾತ್ರ ಚುರುಕಾಗಿಟ್ಟುಕೊಳ್ಳುವುದನ್ನು ಮರೆಯದೆ. ಇದೊಂದು ನಾಟಕೀಯ ತಾತ್ಕಾಲಿಕ ತಡೆ.

ಜನಗಳು ನಿಜವಾಗಿ ಗೊಂದಲಗೊಂಡಿದ್ದಾರೆ. ನಿಧಾನವಾಗಿ, ಒಬ್ಬೊಬ್ಬರಾಗಿ ತಮ್ಮ ತಬ್ಬಿಬ್ಬನ್ನು ವ್ಯಕ್ತಪಡಿಸುತ್ತ ಹೋಗುತ್ತಾರೆ. 'Me thinks there is much reason in his sayings' ''ಹೌದಲ್ಲ, ಸೀಸರನಿಗೆ ದೊಡ್ಡ ಅನ್ಯಾಯವೇ ಆಗಿದೆ. ಅವನ ಜಾಗದಲ್ಲಿ ಅವನಿಗಿಂತ ಕೀಳಾದವನೇ ಬರಬಹುದು' 'ಸೀಸರನು ಕಿರೀಟವನ್ನು ಒಲ್ಲೆ ಅಂದ. ಆ ಮಾತು ನೆನಪಿನಲ್ಲಿಡೋಣ' 'ಆಂಟನಿ, ಪಾಪ, ಅತ್ತು ಕಣ್ಣುಗಳು ಕೆಂಪಾಗಿವೆ' ..... ಮತ್ತೆ ಇದಕ್ಕೆಲ್ಲ ಕಲಶಪ್ರಾಯವಾಗಿ ಮತ್ತು ಆಂಟನಿಯ ಕಿವಿಗೆ ಅಮೃತವಾಗಿ ಕೇಳಿದ ಮಾತುಗಳು ''ಇಡೀ ರೋಮಿನಲ್ಲಿ ಆಂಟನಿಗಿಂತ ಮತ್ತೊಬ್ಬ ಗೌರವಾನ್ವಿತ ವ್ಯಕ್ತಿಯಿಲ್ಲ....ನೋಡಿ, ನೋಡಿ ಆಂಟನಿ ಮಾತನಾಡಲು ಸಿದ್ಧವಾಗುತ್ತಿದ್ದಾನೆ'' ನೂರಕ್ಕೆ ತೊಂಬತ್ತು ಭಾಗ ಜನ ತನ್ನ ಕಡೆಯಾಯಿತು. ಇನ್ನಷ್ಟು ಒತ್ತಿ ತೀಡಿ ಬಡಿದು ಹೇಳಿದರೆ ಆಯಿತು. ಪ್ರಜೆಗಳಲ್ಲಿ ಅಳಿಸಲಾಗದಂತೆ ತನ್ನ ಪ್ರಭಾವ ಉಳಿದುಬಿಡುತ್ತದೆ. ಆಂಟನಿ ಬಳಸಿದ ಭಾಷೆ ಯಾವುದು ? – ಸೀಸರನ ಪರಾಕ್ರಮಗಳು, ದೇಶದ ಬೊಕ್ಕಸ ತುಂಬಿದ ಅವನ ವಿಜಯಗಳು, ಬಡವರ ಕಣ್ಣೀರಿಗೆ ಮಿಡಿದದ್ದು, ಕಿರೀಟವನ್ನು ಒಲ್ಲೆ ಎಂದದ್ದು. ಬ್ರೂಟಸ್ ಬಳಸಿದ ದೇಶ, ಪ್ರಜಾತಂತ್ರ, ಸ್ವಾತಂತ್ರ್ಯ, ಭವಿಷ್ಯ ಇವು ಯಾವುವು ಅಲ್ಲ. ಮೂರ್ತಗಳನ್ನು, ಇಂದ್ರಿಯಗಳಿಗೆ ತತ್‌ಕ್ಷಣ ತಾಗುವುದನ್ನು ಬಳಸಿ ಮಾತನಾಡುತ್ತಿದ್ದಾನೆ. ಬ್ರೂಟಸನಂತೆ ಅಮೂರ್ತಗಳಲ್ಲ. ಮುಂದುವರೆದು ಈ ಮೂರ್ತಜಗತ್ತಿನಲ್ಲಿ ಜನಗಳಿಗೆ ಬಹುಶಃ ಅತ್ಯಂತ ಆಳವಾಗಿ ಪರಿಣಾಮ ಬೀರುವ ''ಸ್ವಂತದ ಲಾಭಗಳು'' ಕುರಿತು ಮತ್ತೆ ಮಾತನಾಡುತ್ತಾನೆ. ಈಗ ಸೀಸರನ ಉಯಿಲು. ತನ್ನ ಅಂಗಿಯ ಒಳಗಿಂದ ಉಯಿಲನ್ನು ಎತ್ತಿಹಿಡಿದು.

"Which, parden me, I do not mean to read,
And they (the commons) would go and
kiss dead Caesar's wounds,
And dip their napkins in his sacred blood,
Yea, beg a hair of him for memory,
And dying, mention within their wills,
Bequeathing it as a rich legacy
Unto their issue"

ಮುಂದೆ ಜರುಗಬಹುದಾದ ದೃಶ್ಯಗಳ ಸರಮಾಲೆಯನ್ನು ಕಣ್ಣಿಗೆ ಕಟ್ಟುವಂತೆ ಮಾಡುವ

ನಿರೂಪಣೆ. ಯಾರಿಗಾದರೂ ಮೈ ಝುಂ ಎನ್ನಬೇಕು. ರೋಮ್‌ನ ಸಾಮಾನ್ಯ ಜನರಿಗೆ ಆವೇಶ ಬಂದಂತಾಗಿದ್ದರೆ ಅಚ್ಚರಿಯೇನು ? "we'll hear the will : we will hear Ceasar's will !" ಎಂದು ಒಬ್ಬನ ದನಿಗೆ ಇಡೀ ಜನಸಮೂಹ ದನಿಗೂಡಿಸುತ್ತದೆ. "The will, the will ! we will hear Caesar's will"

ಅವರನ್ನು ಉದ್ರೇಕಗೊಳಿಸುವುದು ಸಾಕೆನಿಸಿತು ಆಂಟನಿಗೆ. ಮತ್ತೂ ಅಷ್ಟು ಪ್ರಚೋದಿಸಬೇಕಾಗಿದೆ. ಅಲಕ್ಷ್ಯದಲ್ಲಿಯಾದರೂ ಸರಿ, ಅಕಸ್ಮಾತ್ ಒಂದು ಕಡ್ಡಿ ತಾಗಿದರೂ ಸಾಕು, ಇಡೀ ರೋಮ್ ಬೂದಿಯಾಗಿ ಬಿಡಬೇಕು. ಆ ಮಟ್ಟಕ್ಕೆ ಕೆರಳಿಸಬೇಕು ಇವರನ್ನು.

''ಬೇಡ ಬೇಡ. ಸೀಸರ್ ನಿಮ್ಮನ್ನು ಎಷ್ಟು ಪ್ರೀತಿಸಿದ್ದನೆಂದು ನೀವು ತಿಳಿಯುವುದು ಒಳ್ಳೆಯದಲ್ಲ.

"You are not wood, you are not stones, but men ;
And being men hearing the will of Caesar,
It will inflame you, it will make you mad."

ಅಷ್ಟಕ್ಕೆ ನಿಲ್ಲಿಸದೆಯೆ ಮತ್ತೂ ಒಂದು ಮಾತು ಸೇರಿಸುತ್ತಾನೆ ''ನೀವುಗಳು ಅವನ ಆಸ್ತಿಗೆ ವಾರಸುದಾರರು ಎಂದು ನೀವು ತಿಳಿಯದಿರುವುದು ಒಳ್ಳೆಯದು.'' ಹಾಗೊಮ್ಮೆ ತಿಳಿದರೆ ಏನೇನೆಲ್ಲ ಆಗಿಬಿಡಬಹುದು !

"Read the will ! We'll hear it, Antony !
You shall read us the will, Caesar's will"

ಇನ್ನೊಂದು ಎಳೆ ಅನುಮಾನವಿದೆ. ಅಷ್ಟೆ - ಅದನ್ನೂ ಪರಿಹರಿಸಿಕೊಂಡುಬಿಟ್ಟರೆ ಈ ಜನ ತನ್ನ ಅಂಗೈ ತುತ್ತನ್ನು ತಾನು ತಿನ್ನಿಸಿದಂತೆ ತಿನ್ನುತ್ತಾರೆ.

'ದಯವಿಟ್ಟು ಸಹನೆಯಿಂದ ಇರುವಿರಾ ? ಒಂದಷ್ಟು ತಾಳ್ಮೆ ವಹಿಸುವಿರಾ ?
ಈ ಇಷ್ಟನ್ನು ಹೇಳಿಯೇ ನನ್ನ ಮಿತಿ ಮೀರಿಬಿಟ್ಟಿದ್ದೇನೆ ನಾನು.
ಆ ಗೌರವಾನ್ವಿತ ವ್ಯಕ್ತಿಗಳಿಗೆಲ್ಲ ನಾನು ದ್ರೋಹ ಬಗೆಯುತ್ತಿದ್ದೇನೆಂದು ನನ್ನ ಅಂಜಿಕೆ'

ರೊಚ್ಚಿಗೆದ್ದ ಜನ ಆಂಟನಿ ಬಯಸಿದ ಪ್ರತಿಕ್ರಿಯೆಯನ್ನು ನೀಡಿ ಅವನ ಮುಂದಿನ ಹಾದಿಯನ್ನು ಸುಗಮಗೊಳಿಸುತ್ತಾರೆ. "They were traitors, Honourable men" "They were villians, murderers, the will, read the will".

ಆಂಟನಿ ಅಲ್ಲಿಗೂ ಉಯಿಲನ್ನು ಓದುವುದಿಲ್ಲ. 'ಈ ಉಯಿಲನ್ನು ಬಿಟ್ಟುಹೋದ

ವ್ಯಕ್ತಿಯನ್ನು ಮೊದಲು ನೋಡಿ' ಎಂದು ವೇದಿಕೆಯಿಂದ ಕೆಳಗೆ ಬಂದು ಸೀಸರನ ದೇಹಕ್ಕೆ ಮುಚ್ಚಿದ್ದ ವಸ್ತ್ರವನ್ನು ಎತ್ತಿ ಹಿಡಿದು ''ಎಷ್ಟೊಂದು ಕಠಾರಿ ಪೆಟ್ಟುಗಳು ಬಿದ್ದು ಚಿಂದಿಯಾಗಿವೆ ನೋಡಿ. ಕಣ್ಣುಗಳಲ್ಲಿ ನೀರಿದ್ದರೆ ಸುರಿಸುವುದಕ್ಕೆ ಸಿದ್ಧರಾಗಿ'' ಎಂದು ಸೀಸರನ ಹತ್ಯೆಯನ್ನು ತಾನೆ ಕಣ್ಣಾರೆ ನೋಡಿದವನ ಹಾಗೆ, ಪ್ರತಿ ಪೆಟ್ಟು ಯಾರ ಕಠಾರಿಯಿಂದ ಬಿದ್ದದ್ದು ಎಂಬ ಸೂಕ್ಷ್ಮ ವಿವರಗಳನ್ನು ನೀಡುತ್ತಾನೆ. ಕೊನೆಗೊಂದು ಸೀಳನ್ನು ತೋರಿಸಿ ''ಇದು, ಈ ಪೆಟ್ಟು ನೀಡಿದ್ದು ಸೀಸರನ ಅತಿ ಪ್ರಿಯ ಬ್ರೂಟಸ್. ನೋಡಿ - ಮೈ ಬಗೆದು ಕಠಾರಿ ಹೊರಗೆ ಬರುತ್ತಿದ್ದಂತೆ ಸೀಸರನ ನೆತ್ತರಿಗೂ ಇದು ಬ್ರೂಟಸನ ಕೃತ್ಯವಿರಲಾರದು ಎಂಬ ಅಪನಂಬಿಕೆಯಲ್ಲಿ, 'ಹೌದೋ ಅಲ್ಲವೋ' ಖಚಿತ ಮಾಡಿಕೊಳ್ಳಲು ಅವನ ಮೈಯಿಂದ ಹೇಗೆ ನೆತ್ತರು ಉಕ್ಕಿ ಬಂತು ನೋಡಿ. ಬ್ರೂಟಸ್ ಸೀಸರನಿಗೆ ದೇವತಾಸಮಾನನಾಗಿದ್ದ. This was the most unkindest cut of all. ಬ್ರೂಟಸನ ಕೃತಘ್ನ ಕಠಾರಿಪೆಟ್ಟು ಮಿಕ್ಕೆಲ್ಲ ದ್ರೋಹಿಗಳ ಪೆಟ್ಟಿಗಿಂದ ಆಘಾತಕಾರಿಯಾಗಿದ್ದು, ಸೀಸರನನ್ನು ಸಂಪೂರ್ಣ ದಮನ ಮಾಡಿತು.... O, what a fall was there, my country-men ! / Then I and you, and all of us fell down / Whilst bloody treason flourished over us".... ತನ್ನ ಕೊಲೆಯಾದ ಸಂದರ್ಭದಲ್ಲಿ ಸೀಸರ್ ನುಡಿದಿದ್ದ ಮಾತು 'Then fall Caesar' ಈ ಕ್ಷಣದಲ್ಲಿ ಕಿವಿಯಲ್ಲಿ ಝೇಂಕರಿಸುತ್ತದೆ. ಆಂಟನಿ ಹೇಳುತ್ತಿದ್ದಾನೆ. 'What a fall there was my countrymen' ಆಗ ಎಲ್ಲರೂ ಉರುಳಿದೆವು – ಸೀಸರ್ ಮಾತ್ರವಲ್ಲ ! ಎಂದು. ಅವನ ವಸ್ತ್ರವನ್ನು ನೋಡಿಯೇ ಇಷ್ಟು ಕಣ್ಣೀರು ಹರಿಸುವ ನೀವು ಅವನನ್ನೇ ನೋಡಿ. ಇಲ್ಲಿದ್ದಾನೆ ನೋಡಿ - ದ್ರೋಹಿಗಳಿಗೆ ಬಲಿಯಾಗಿ ಬಿದ್ದುಕೊಂಡಿದ್ದಾನೆ.''

ಮೈಯೆಲ್ಲ ಗಾಯಗಳಿಂದ ತುಂಬಿಬಿಟ್ಟಿದೆ. ಪ್ರತಿಯೊಂದು ಗಾಯದಿಂದಲೂ ನೆತ್ತರು ಹರಿಯುತ್ತಿದೆ. ಈ ದೃಶ್ಯವನ್ನು ನೋಡಿ ಸಹಿಸಲಾಗದ ಜನ ತಮ್ಮ ಎಲ್ಲ ದುಃಖ, ಆವೇಶಗಳನ್ನು ಪಿತೂರಿಗಾರರ ವಿರುದ್ಧ ತಿರುಗಿಸುತ್ತಾರೆ. 'O traitors ! Villians !' "O most bloody sight" "We will be revenged" 'ಪ್ರತೀಕಾರ' ಹೊರಡಿ, ಹಿಡಿಯಿರಿ, ಕೊಲ್ಲಿ, ಬೆಂಕಿಹಚ್ಚಿ, ಕತ್ತರಿಸಿ, ಒಬ್ಬ ದೇಶದ್ರೋಹಿಯನ್ನೂ ಉಳಿಸಬೇಡಿ' ಎಂದು ಕೂಗುತ್ತ ಹೊರಡುವುದರಲ್ಲಿದ್ದ ಅವರನ್ನು ನಿಲ್ಲಿಸಿ ಆಂಟನಿ ಸಮಾಧಾನ'ವನ್ನು ಬೋಧಿಸುತ್ತಾನೆ. 'ಯಾರು ಈ ಕೃತ್ಯ ಮಾಡಿದ್ದಾರೋ ಅವರು ಸಕಾರಣವಾಗಿ ಮಾಡಿರುತ್ತಾರೆ. ಏನು ಅವರ ಖಾಸಗಿ ದುಃಖಗಳೋ ನನಗೆ ಗೊತ್ತಿಲ್ಲ. ನಿಮ್ಮ ಹೃದಯಗಳನ್ನು ಅಪಹರಿಸಿಕೊಂಡು ಹೋಗಲು ನಾನು ಬಂದಿಲ್ಲ.... ನಾನು ಬ್ರೂಟಸನಾಗಿದ್ದು ಬ್ರೂಟಸನೇ ಆಂಟನಿ ಆಗಿದ್ದಿದ್ದರೆ ನಿಮ್ಮಲ್ಲಿ, ಪ್ರತಿಯೊಬ್ಬರಲ್ಲಿ ಕಿಚ್ಚು ಹೊತ್ತಿಸಿ ಸೀಸರನ ಪ್ರತಿಗಾಯವೂ ಬಾಯ್ತೆರೆದು ಮಾತಾಡುವಂತೆ ಮಾಡಿ, ರೋಮಿನ ಪ್ರತಿ ಕಲ್ಲೂ ಕೂಡ ಸಿಡಿದೆದ್ದು ಬಂಡಾಯ ಏಳುವಂತೆ ಮಾಡುತ್ತಿದ್ದ' ಸಾಮಾನ್ಯರ ಪಾಶವೀ

ಪ್ರವೃತ್ತಿಯನ್ನು ಎಷ್ಟು ಕೆಣಕಿದರೂ ಸಮಾಧಾನವಿಲ್ಲ ಆಂಟನಿಗೆ. ಅವನು ಆಡಿದ ಮಾತುಗಳು ತಮ್ಮ ಸ್ವಾಭಿಮಾನಕ್ಕೇ ಪೆಟ್ಟುಬಿದ್ದಂತೆ ಎನಿಸಿ 'ಬಂಡಾಯ ಏಳುತ್ತೇವೆ' 'ಬ್ರೂಟಸನ ಮನೆ ಸುಡುತ್ತೇವೆ' 'ಬನ್ನಿ, ಪಿತೂರಿಗಾರರ ಮನೆಗಳತ್ತ ನುಗ್ಗಿರಿ' ಎಂದು ಕೂಗುತ್ತ ಚೆದರುವವರಿದ್ದಾರೆ. ಆಂಟನಿ ಮತ್ತೆ ಅವರನ್ನು ತಡೆ ಹಿಡಿದು ನಿಲ್ಲಿಸಿ 'ಸೀಸರನು ನಿಮ್ಮ ಪ್ರೀತಿಗೆ ಹೇಗೆ ಇಷ್ಟೊಂದು ಅರ್ಹನೆಂದು ತಿಳಿಯದೆ ಹೊರಟಿದ್ದೀರಿ. ನಾನು ಸೂಚಿಸಿದ ಉಯಿಲನ್ನು ಮರೆತುಬಿಟ್ಟಿದ್ದೀರಿ' ಎಂದು ಜನಗಳ ಕುತೂಹಲವನ್ನು ಮತ್ತಷ್ಟು ಕೆದಕಿ ಉಯಿಲಿನಲ್ಲಿರುವುದನ್ನು ಹೇಳುತ್ತಾನೆ. 'ಸೀಸರ್ ತನ್ನ ಎಲ್ಲ ಲತಾಗೃಹಗಳು, ಹಣ್ಣಿನ ತೋಟಗಳು, ವಿಹಾರಭೂಮಿಗಳನ್ನು ನಿಮ್ಮಗಳಿಗೆ ಬಿಟ್ಟು ಹೋಗಿದ್ದಾನೆ. ಪ್ರತಿಯೊಬ್ಬ ರೋಮನನಿಗೂ ಎಪ್ಪತ್ತೈದು ಡ್ರಾಚಮಾನಷ್ಟು ಆಸ್ತಿ ಬಿಟ್ಟುಹೋಗಿದ್ದಾನೆ. ಈ ಎಲ್ಲವನ್ನೂ ನಿಮ್ಮ ಸಂತೋಷಕ್ಕೆ, ಸ್ವತಂತ್ರ ಬಳಕೆಗೆ ಬಿಟ್ಟು ಹೋಗಿದ್ದಾನೆ. 'Here was a Caesar ! When comes such another ?' ಎಂದು ಅತ್ಯಂತ ವಿಷಾದದಲ್ಲಿ, ಆವೇಶದಲ್ಲಿ ಕೇಳುತ್ತಾನೆ.

Never never, come, away, away
we'll burn his body in the holy place
And with the brands fire the traitors' houses,
Take up the body....

'ಕೈಗೆ ಸಿಕ್ಕದ್ದನ್ನು ಒಡೆದು ತನ್ನಿ, ಕಿಟಕಿಗಳನ್ನು ಮುರಿಯಿರಿ, ಬೆಂಕಿ ತನ್ನಿ'... ಎಂದು ಜನ ಹುಚ್ಚೆದ್ದು ಕೂಗುತ್ತ ಪಿತೂರಿಗಾರರನ್ನು ಹುಡುಕಲು ದಿಕ್ಕಾಪಾಲಾಗಿ ಓಡುತ್ತಾರೆ. ಎಲ್ಲರೂ ನಿಷ್ಕ್ರಮಿಸಿದ ಮೇಲೆ ರಂಗಭೂಮಿ ನಿರ್ಜನವಾಗಿದೆ – ಆಂಟನಿಯೊಬ್ಬನನ್ನು ಬಿಟ್ಟು. ತನ್ನ ಶ್ರಮಕ್ಕೆ ತನ್ನನ್ನೇ ತಾನು ಅಭಿನಂದಿಸಿಕೊಳ್ಳುತ್ತಾನೆ. ಅವನ ದನಿಯಲ್ಲಿ ತೃಪ್ತಭಾವ ಎದ್ದು ಕಾಣುತ್ತದೆ. ಈ ತನ್ನ ತೃಪ್ತಭಾವವನ್ನು, ವಿಜಯದ ಗಳಿಗೆಯನ್ನು ಎರಡು ಸಾಲುಗಳಲ್ಲಿ ವ್ಯಕ್ತಪಡಿಸುತ್ತಾನೆ. ಈ ಸಾಲುಗಳು ಕೇವಲ ಆಂಟನಿಯ ವಿಜಯದ ಅಭಿವ್ಯಕ್ತಿಯಲ್ಲ. ಈ ಜಗತ್ತಿನ ಪ್ರತಿಯೊಬ್ಬ ರಾಜಕಾರಣಿಯ ಜಯಘೋಷ. ಬಹುಶಃ ಯಶಸ್ವಿಯಾಗಲು ಹವಣಿಸುವ ರಾಜಕಾರಣಿಯೊಬ್ಬನು ಅವಶ್ಯವಾಗಿ ಮನನ ಮಾಡಬೇಕಾದ ಮೂಲಮಂತ್ರ.

"Now let it work. Mischief thou art afoot,
Take thou what course thou wilt....

ಸಹಜವಾಗಿ ಬ್ರೂಟಸನ ಮುತ್ಸದ್ದಿತನ ಸೋಲಲೇಬೇಕು. 'Mischief' ಈಗ ಸರ್ವ ಸ್ವತಂತ್ರವಾಗಿ ಬೀದಿಬೀದಿಗಳಲ್ಲಿ ಸುಳಿದಾಡುತ್ತದೆ. ಏನು ಬೇಕಾದರೂ ಆಗಲಿ. ಏನು ಮಾರ್ಗವಾದರೂ ಹಿಡಿಯಲಿ. ಬ್ರೂಟಸನ ಪಿತೂರಿ ದೇಶದ ಹಿತಚಿಂತನೆಯಲ್ಲಿ, ವ್ಯಕ್ತಿಯ ವಿರುದ್ಧ ಉದ್ದೇಶಿಸಿದುದು. ಆದರೆ ಬ್ರೂಟಸನಿಗೆ ಅರ್ಥವಾಗದೆ ಹೋಗುವುದು ದೇಶದ

ಹಿತಚಿಂತನೆಯಲ್ಲಿ ಕೂಡ ವ್ಯಕ್ತಿಯ ಬಲಿದಾನ ಮಾಡಹೊರಟಿರುವುದು ಪ್ರಕೃತಿ ವಿರುದ್ಧದ ಪಿತೂರಿ ಎಂದು. ಇದು ಬಹುಶಃ ಮಸಕುಮಸಕಾಗಿ ಅವನಿಗೆ ಹೊಳೆಯುವುದು ನಾಟಕದ ಅಂತ್ಯಭಾಗಕ್ಕೆ, ಉದಾತ್ತಧ್ಯೇಯಕ್ಕಾಗಿ ತಾನು ಮಾಡುತ್ತಿರುವ ದೇವತಾಸಮರ್ಪಣೆ ಎಂದೇ ಭಾವಿಸಿದ್ದಾನೆ. ಆದರೆ ಪಿತೂರಿಯೇ ಆಗಿಬಿಡುತ್ತಿದೆ ಎಂದು ತಾನು ಕೂಡ ಮೊದಲಲ್ಲಿಯೇ ಗುರುತಿಸಿದ್ದಾನೆ.

ಆದರೆ ಆಂಟನಿಯ ಪಿತೂರಿ – ಎಲ್ಲ ರಾಜಕಾರಣಿಗಳ ಪಿತೂರಿಯ ರೀತಿ - ಜನಗಳ ಮನಸ್ಸುಗಳ ವಿರುದ್ಧ ಉದ್ದೇಶಿಸಿದುದು. ಆಂಟನಿಯ ಪಿತೂರಿಯ ಗುರಿ : ಸಾಮಾನ್ಯಜನರ ಅಂತರ್ಗತ ಸುಸಂಸ್ಕೃತ ಸ್ವಭಾವ. ಈ ಸ್ವಭಾವವನ್ನು ಹಿಂಸೆಯತ್ತ ವಿನಾಶಕಾರೀ ಪ್ರವೃತ್ತಿಗಳತ್ತ ತಿರುಗಿಸುವುದೇ ರಾಜಕಾರಣದ ಸಂಕಲ್ಪ. ಸೀಸರನ ಕೊಲೆ ಒಬ್ಬ ವ್ಯಕ್ತಿಯ ಕೊಲೆ ; ಇಡೀ ರಾಷ್ಟ್ರದ ಜನತೆಯ ಸಮಚಿತ್ತತೆಯ ಕೊಲೆ ಮಾಡುವುದು ಇಡೀ ರಾಷ್ಟ್ರವನ್ನು ಬಲಿ ತೆಗೆದುಕೊಂಡ ಹಾಗೆ ; ನಾಳೆಗಳು ಕಾಣದ ರಾಜಕಾರಣಿಯ ಕಣ್ಣುಗಳಿಗೆ ರಾಷ್ಟ್ರದ ಕಲ್ಪನೆಯಿರುತ್ತದೆಂದು ಬಯಸುವುದೇ ನಮ್ಮ ಮೂರ್ಖತನ.

ಆಕ್ಟೇವಿಯಸನು ರೋಮ್ ತಲುಪಿಯಾಗಿದೆ. ಬ್ರೂಟಸ್ ಮತ್ತು ಕ್ಯಾಷಿಯಸ್ ಈಗಾಗಲೇ ದಿಕ್ಕೆಟ್ಟು ರೋಮಿನಿಂದ ಪಲಾಯನ ಮಾಡಿದ್ದಾರೆಂದು ಸುದ್ದಿ ತಂದಿದ್ದಾನೆ. ಆಂಟನಿ ಈಗ ಆಕ್ಟೇವಿಯಸ್‌ನನ್ನು ನೋಡಲು ಹೊರಡುತ್ತಾನೆ.

ಮೂರನೇ ಅಂಕದ ಮೂರನೇ ದೃಶ್ಯ ಒಂದು ಪುಟ್ಟ ದೃಶ್ಯ. ಆದರೆ ಬಹು ಮುಖ್ಯವಾದ ದೃಶ್ಯ. ಆಂಟನಿ ಹೇಳಿದ 'mischief thou art afoot' ಮಾತನ್ನು ರಂಗದ ಮೇಲೆ ಸಾಕಾರವಾಗಿ ಬಿತ್ತರಿಸಿ ಆ 'mischief'ನ ಬಗೆಯನ್ನು ಬಣ್ಣಿಸುತ್ತಾನೆ ಶೇಕ್ಸ್‌ಪಿಯರ್. ಕಾನೂನನ್ನು ಸಂಪೂರ್ಣ ತಮ್ಮ ಕೈಗೆ ತೆಗೆದುಕೊಂಡು ಬೀದಿಬೀದಿಗಳಲ್ಲಿ ಸರ್ವ ಸ್ವತಂತ್ರರಾಗಿ ಅಲೆಯುತ್ತಿರುವ ಜನಗಳ ಕಣ್ಣಿಗೆ ನತದೃಷ್ಟ ಸಿನ್ನಾ ಬೀಳುತ್ತಾನೆ. ಸಿನ್ನಾನಿಗೆ ಭವಿಷ್ಯಸೂಚಕದಂತೆ ಕನಸೊಂದು ಬಿದ್ದಿದೆ.

''ಸೀಸರನೊಂದಿಗೆ ಭೋಜನ ಮಾಡಿದಂತೆ ಕನಸು ಕಂಡೆ.
ವಿಲಕ್ಷಣ ಸಂಗತಿಗಳು ನನ್ನ ಕಲ್ಪನೆಗಳನ್ನು ಆವರಿಸಿಬಿಟ್ಟಿದೆ.
ಹೀಗೆ ಬೀದಿಯಲ್ಲಿ ಅಡ್ಡಾಡುವ ಮನಸ್ಸಿಲ್ಲ
ಆದರೂ ಏಕೋ ಏನೋ ಯಾವುದೋ ಏನೋ ನನ್ನನ್ನು ಬೀದಿಗೆ
ಕೊಂಡೊಯ್ಯುತ್ತಿದೆ.''

ಅವನಿಗೆ ಅನ್ನಿಸಿದ್ದಕ್ಕೆ ಸರಿಯಾಗಿ ಜನಗಳ ಗುಂಪು ಎದುರಾಗುತ್ತದೆ. ತಲೆಗೊಂದರಂತೆ ಪ್ರಶ್ನೆಗಳನ್ನು ಅವನಿಗೆ ಒಗೆಯುತ್ತಾರೆ. ಅಸಹನೆ, ಆತುರ, ಅನುಮಾನ, ಮೇಲೆರಗುವುದಕ್ಕೆ

ಕಾತರ ಎಲ್ಲವೂ ಸ್ಪಷ್ಟವಾಗಿ ಗೋಚರವಾಗುವ ವರ್ತನೆ ಅವರದು. ಸಿನ್ನಾ ಅಧೀರಗೊಳ್ಳದೆ ಅವರ ಪ್ರಶ್ನೆಗಳಿಗೆಲ್ಲ ಒಂದು ಉತ್ತರದಲ್ಲಿ ಸಮಾಧಾನ ನೀಡಬಹುದೆಂದು ಹೇಳುತ್ತಾನೆ.... ''ನಾನೊಬ್ಬ ಬ್ರಹ್ಮಚಾರಿ'' 'ಅಂದರೆ ಮದುವೆಯಾದವರೆಲ್ಲ ದಡ್ಡರು ಎಂದು ನಿನ್ನ ಅರ್ಥ. ಅದಕ್ಕಾಗಿ ಒಂದು ಒದೆ ತಿನ್ನುತ್ತಿ'... ಸಿನ್ನಾ ಮುಂದುವರೆದು ''ಸೀಸರನ ಅಂತ್ಯಕ್ರಿಯೆಗಳಿಗೆ ಹೋಗುತ್ತಿದ್ದೇನೆ'' ಅನ್ನುತ್ತಾನೆ. ''ಸ್ನೇಹಿತನಾಗಿಯೋ ? ಶತ್ರುವಾಗಿಯೋ ?' 'ಸ್ನೇಹಿತನಾಗಿ' 'ಎಲ್ಲಿ ವಾಸ ?' 'ಇಲ್ಲಿಯೇ ಕ್ಯಾಪಿಟಲನ ಬಳಿ' 'ಹೆಸರು ?' 'ಹೆಸರು ಸಿನ್ನಾ' 'ಚಿಂದಿ ಮಾಡು ಅವನನ್ನ, ಪಿತೂರಿಗಾರ ಅವನು...' ಎಂದು ಮೇಲೆ ಬಿದ್ದ ಜನಗಳಿಗೆ ಸಿನ್ನಾ ಅರಿಕೆ ಮಾಡಿಕೊಳ್ಳುತ್ತಾನೆ. ''ನಾನು ಪಿತೂರಿಗಾರ ಸಿನ್ನಾ ಅಲ್ಲ.... ನಾನು ಕವಿ ಸಿನ್ನಾ.... ನಾನು ಕವಿ'' ''ಹಾಗಾದರೆ ಅವನ ಕೆಟ್ಟ ಕಾವ್ಯಕ್ಕಾಗಿ ಚಿಂದಿಮಾಡಿ....'' ಮತ್ತೆ ತಾನು ಪಿತೂರಿಗಾರನಲ್ಲವೆಂದು ಗೋಗರೆದರೂ ಕಿವಿಯ ಮೇಲೆ ಹಾಕಿಕೊಳ್ಳದೆ ಜನಗಳು 'ಅಲ್ಲದಿದ್ದರೇನು ? ಹೆಸರು ಸಿನ್ನಾ ತಾನೆ ? ಅವನ ಮೈಯಿಂದ ಅವನ ಹೆಸರು ಕಿತ್ತು ಅವನನ್ನು ಬಿಟ್ಟುಬಿಡಿ' ಎಂದು ತೀರ್ಪು ನೀಡಿ ಆಯಿತು. ಇದಕ್ಕೆ ಕಾದಿದ್ದ ಜನ ಅವನ ಮೇಲೆ ಬಿದ್ದು ಹರಿಹಾಯ್ದು ನಂತರ ಉಳಿದ ಪಿತೂರಿಗಾರರನ್ನು ಅರಸಿಕೊಂಡು ಅರಚುತ್ತ, ಆರ್ಭಟಿಸುತ್ತ ಹೊರಡುತ್ತಾರೆ.

ಹಿಂಸೆಗೆ ವಿಚಾರ, ವಿವೇಚನೆಗಳು ಇಲ್ಲವೆಂಬುದಕ್ಕೆ ಈ ದೃಶ್ಯ ಸಾಕ್ಷಿ. ಹಿಂಸೆ ಮುಖ್ಯ. ಕಾರಣ ಗೌಣ. ಆಂಟನಿ ವಿವರಿಸಿದ 'mischief'ನ ಪ್ರಧಾನ ಲಕ್ಷಣವೇ ಇದು.

ಮೊದಲ ಅಂಕದ ಮೊದಲ ದೃಶ್ಯದ ರೋಮ್ ಜನಗಳ ರೀತಿ ನೀತಿಗಳೆಲ್ಲಿ, ಈಗ ನಾವು ನೋಡುತ್ತಿರುವ ಅದೇ ಜನಗಳ ರೀತಿ ನೀತಿಗಳೆಲ್ಲಿ ? ವಿನೋದಪ್ರಿಯರೂ ಉಲ್ಲಾಸ ಭರಿತರೂ, ಹರ್ಷಚಿತ್ತರೂ ಆಗಿದ್ದವರು ಮೊದಲ ದೃಶ್ಯದಲ್ಲಿ ಶಬ್ದಗಳೊಡನೆ ಸ್ವಚ್ಛಂದವಾಗಿ ಆಟವಾಡಿ ಅಧಿಕಾರಸ್ಥ ಜನಪ್ರತಿನಿಧಿಗಳನ್ನು ಕೀಟಲೆ ಮಾಡುವ ಪ್ರವೃತ್ತಿಯವರಾಗಿದ್ದವರು ಈಗ ತದ್ವಿರುದ್ಧ. ಜೀವಪ್ರೇಮಿ ಜನಗಳನ್ನು ಜೀವದ್ವೇಷಿ ಮೃಗಗಳಾಗಿಸಿರುವುದೂ ಈ ಪಿತೂರಿಯ ಫಲ.

ನಾಲ್ಕನೇ ಅಂಕದ ಮೊದಲ ದೃಶ್ಯದ ಆಂಟನಿಯ ಮೊದಲ ಮಾತು ನೋಡಿ : 'These many then shall die....' ಎರಡನೇ ಅಂಕದ ಮೊದಲ ದೃಶ್ಯದಲ್ಲಿ ಬ್ರೂಟಸ್‌ನ ಸ್ವಗತದ ಮೊದಲ ಮಾತು 'It must be by his death' ಸಾವಿನಿಂದ ಉದ್ಘಾಟನೆಯಾದ 'ಕ್ರಾಂತಿ' ಈಗ ಸಾವುಗಳಿಂದ ಮುಂದುವರೆಯುತ್ತದೆ. ಸಾವು ಸಾವನ್ನು ಮಾತ್ರ ಬಿತ್ತಬಲ್ಲುದೆ ಹೊರತು ಕ್ರಾಂತಿಯನ್ನಲ್ಲ, ಚಳವಳಿಗಳನ್ನಲ್ಲ. ಮನುಷ್ಯ ಮನುಷ್ಯನ ಸಾವಿಗೆ ಕಾರಣನಾದನೆಂದರೆ ಅದು ಪ್ರಕೃತಿಯ ವಿರುದ್ಧದ ಪಿತೂರಿ. ಒಂದೇ ಸಾವಾಗಲಿ, ಸಾವಿರ ಸಾವಾಗಲಿ. ನಾವು ಒಂದು ತೊಟ್ಟು ರಕ್ತ ಹರಿಸಿದರೂ ಅದು ವಿನಾಶಕ್ಕೆ ಹಾಕಿದ ಬುನಾದಿಯೇ ಹೊರತು ಕ್ರಾಂತಿಗಲ್ಲ. ಬ್ರೂಟಸ್ ಮತ್ತು ಸಂಗಾತಿಗಳು ಆರಂಭಿಸಿದ ಸೀಸರನ ವಿರುದ್ಧದ ಪಿತೂರಿ ಅವರ ದೃಷ್ಟಿಯಲ್ಲಿ

ರೋಮಿನ ಪರವಾದ ಕ್ರಾಂತಿಯಾಗಿದ್ದಿತು. ಈಗ ಆಂಟನಿ ಹರಿಸುವ ಅಷ್ಟೊಂದು ಜನಗಳ ರಕ್ತ ಅವನ ಮತ್ತು ಅವನ ಇಬ್ಬರು ಸಹಚರರಾದ ಆಕ್ಟೇವಿಯಸ್ ಮತ್ತು ಲಿಪಿಡಿಯಸ್ ದೃಷ್ಟಿಯಲ್ಲಿ ರೋಮಿನ ಪರವಾಗಿಯೇ ಹರಿಸುತ್ತಿರುವ ರಕ್ತ. ಬ್ರೂಟಸನದು ವ್ಯಕ್ತಿವಿರುದ್ಧದ ಪಿತೂರಿ. ಆಂಟನಿಯದು ವ್ಯವಸ್ಥೆಯೇ, ಆಡಳಿತವೇ ನಿರ್ದೇಶಿಸುವ ಪ್ರಜೆಗಳ ವಿರುದ್ಧದ ಪಿತೂರಿ. ರಾಜಕಾರಣದಲ್ಲಿ ಬದುಕಿ ಉಳಿದು ಯಶಸ್ವಿಯಾಗುವುದೇ ಮೂಲೋದ್ದೇಶವಾದ್ದರಿಂದ ಅದಕ್ಕಾಗಿ ಬಳಸುವ ತಂತ್ರಗಳಲ್ಲಿ ಹಿಂಸೆ, ಸಾವುಗಳೂ ಸೇರಿದ್ದರೆ ಅಚ್ಚರಿಯಿಲ್ಲ.

ಜನಗಳೆದುರು ವಿನಯದಿಂದ ಹಾಗೂ ತೋರಿಕೆಯ ಸಂಕೋಚಗಳಿಂದ ಕೂಡಿದ ಭಾಷಣ ಮಾಡಿದ ಆಂಟನಿ ಈಗ ರಾಜ್ಯಾಡಳಿತ ಸೂತ್ರಗಳನ್ನು ಹಿಡಿದು ನಾಯಕನಾಗಿದ್ದಾನೆ. ಅವನ ಮಾತಿನಲ್ಲಿ ದೃಢತೆಯಿದೆ. ಸ್ಪಷ್ಟತೆ ಇದೆ. ಮುಟ್ಟಿದರೆ ಕೈಕೊರೆಯುವಂಥ ತಣುವು ಅವನ ಮಾತುಗಳಲ್ಲಿ, ಅವನ ನಡವಳಿಕೆಯಲ್ಲಿ ಕಾಣುತ್ತದೆ.

ಯಾರು ಯಾರನ್ನು ಪಿತೂರಿಗಾರರೆಂದು ಪಟ್ಟಿಮಾಡಿದ್ದಾರೆಯೋ ಅವರೆಲ್ಲ ಸಾಯಬೇಕು. ಲಿಪಿಡಿಯಸ್ ಸೋದರನಾಗಲಿ, ಆಂಟನಿಯ ತಂಗಿಯ ಮಗನಾಗಲಿ, ಹೆಸರಿನ ಮುಂದೆ ಒಂದು ಕಾಟು ಹಾಕಿದರೆ ಮುಗಿಯಿತು, ಅಷ್ಟೆ.

ಮುಂದಿನ ಮುಖ್ಯ ಕೆಲಸ – ಸೀಸರನ ಮನೆಯಿಂದ ಅವನ ಉಯಿಲನ್ನು ತಂದು ಸೂಕ್ತ ಬದಲಾವಣೆಗಳು ಹೇಗೆ ಮಾಡುವುದೆಂದು ನೋಡುವುದು. ಜನಗಳೆದುರು ಮಾತನಾಡುವಾಗ, ಅವರ ರಕ್ತ ಕುದಿಸುವುದಕ್ಕೆ ಸೀಸರನ ಉಯಿಲು ಆವಶ್ಯವಾಗಿತ್ತು, ಆದರೆ ಈಗ ಉಯಿಲಿನ ಕೆಲವು ಭಾಗಗಳನ್ನು ತಮಗೆ ಬೇಕಾದಂತೆ ಬದಲು ಮಾಡಬೇಕಾಗಿದೆ. ಮೂರನೇ ಅಂಕದ ಕೊನೆಯ ದೃಶ್ಯದಲ್ಲಿ ಆಂಟನಿ ಛೂಬಿಟ್ಟ 'mischief' ಬ್ರೂಟಸನ ಮತ್ತು ಅವನ ಸಂಗಾತಿಗಳ ವಿರುದ್ಧವಾಗಿತ್ತು. ಈಗ ಇನ್ನೊಂದು ಬಗೆಯ 'mischief'ಗೆ ಚಾಲನೆ ನೀಡುತ್ತಿದ್ದಾನೆ. ಜನಗಳ ವಿರುದ್ಧದ mischief ರಾಷ್ಟ್ರದ ವಿರುದ್ಧದ 'mischief'.

ಎರಡನೆಯ ಅಂಕದ ಕೊನೆಯ ದೃಶ್ಯದ ಬಗ್ಗೆ ಮಾತನಾಡುತ್ತ ಒಂದು ಅಂಶವನ್ನು ನಾವು ಗಮನಿಸಿದ್ದೆವು – ''ಈ ಅಂಕದ ನಂತರ ಈ ಪಾತ್ರಗಳು (ಕ್ಯಾಲಿಪೂರ್ನಿಯ ಮತ್ತು ಪೋರ್ಶಿಯಾ) ಎಲ್ಲ ಅರ್ಥಗಳಲ್ಲಿಯೂ ನಿರ್ಗಮಿಸಿಬಿಡುತ್ತಾರೆ. ಮನೆ, ಗಂಡ ಹೆಂಡತಿ, ಪ್ರೀತಿ, ವಿಶ್ವಾಸ – ಎಲ್ಲವೂ ಇನ್ನು ಮುಂದೆ ರೋಮಿನಲ್ಲಿ ಮುಗಿದ ಮಾತುಗಳು ; ಅರ್ಥ ಕಳೆದುಕೊಂಡ ಶಬ್ದಗಳು.'' ಈಗ, ಮೂರನೆಯ ಅಂಕದ ಮುಕ್ತಾಯಕ್ಕೆ ರೋಮಿನ ಜನತೆಯನ್ನು ಅಂತ್ಯಗೊಳಿಸಲಾಗುತ್ತದೆ, ಸಂಪೂರ್ಣ ರದ್ದು ಮಾಡಲಾಗುತ್ತದೆ. ಇನ್ನು ಮುಂದೆ ಇಲ್ಲಿ ಜನಗಳ ದನಿ ಕೇಳುವುದಿಲ್ಲ. ಜನ ಕಾಣುವುದೂ ಇಲ್ಲ. ಇಲ್ಲಿ ಇನ್ನು ಮುಂದೆ ಕೇವಲ ರಾಜಕಾರಣ ಮಾತ್ರ.

ಸೀಸರನ ಮನೆಗೆ ಹೋಗಿ ಅವನ ಉಯಿಲನ್ನು ತರಲು ಆಂಟನಿ ಲಿಪಿಡಿಯಸ್‌ಗೆ ಹೇಳಿ ಅವನನ್ನು ಕಳಿಸಿಕೊಡುತ್ತಾನೆ. ಅವನು ಇನ್ನೂ ಬಾಗಿಲು ದಾಟಿ ಹೋಗಿಲ್ಲ, ಆಕ್ಟೇವಿಯಸ್‌ನ ಎದುರು ಲಿಪಿಡಿಯಸ್‌ನನ್ನು '....a slight unmeritable man / Meet to be sent on errands' ಎಂದು ಹಳಿಯುತ್ತಾನೆ. ಇಂಥ ಮನುಷ್ಯನನ್ನು ಈ ನಮ್ಮ ರಾಷ್ಟ್ರದ ಅಧಿಕಾರದಲ್ಲಿ ಮೂರನೇ ಒಂದು ಪಾಲಿಗೆ ಅರ್ಹನೆಂದು ಹೇಳಬಹುದೆ ? ಆಕ್ಟೇವಿಯಸನೇನೂ ಕಡಿಮೆಯಿಲ್ಲ, "ನೀನು ತಾನೆ ಅವನ ಪರವಾಗಿ ಮಾತನಾಡಿ ಅವನ ಗಲ್ಲು ತಪ್ಪಿಸಿದ್ದು ?" ಎಂದು ಆಂಟನಿಯನ್ನೇ ಮೂದಲಿಸುತ್ತಾನೆ. ನಂತರದ ಆಂಟನಿಯ ಮಾತುಗಳು ವೈಯಕ್ತಿಕವಾಗಿ ಅವನ ಕಪಟ ಹಾಗೂ ಚಮತ್ಕಾರಗಳನ್ನು ಪ್ರದರ್ಶಿಸುವುದಕ್ಕಿಂತ ಹೆಚ್ಚಿಗೆ ರಾಜಕಾರಣದಲ್ಲಿ ಯಶಸ್ವಿಯಾಗುವುದಕ್ಕೆ ಅನುಸರಿಸಬೇಕಾದ ಸಾರ್ವಕಾಲಿಕ ತಂತ್ರಗಳ ಬಗ್ಗೆ ಒಂದು ಪಾಠವಿದ್ದಂತೆ ಇದೆ – "ನಾವು ಮಾಡಬೇಕಾದ ಕೆಲವು ನೀಚ ಕೆಲಸಗಳನ್ನು ಅವನ ಕೈಲಿ ಮಾಡಿಸುವುದಕ್ಕೆ ಅವನನ್ನು ಬಳಸಬೇಕು. ಕತ್ತೆಗಳ ಮೇಲೆ ಹೊರಿಸುವ ಬಂಗಾರದಂತೆ – ಎಲ್ಲಿಯವರೆಗೆ ಹೊರಿಸಬೇಕೋ ಅಲ್ಲಿಯವರೆಗೆ ಹೊರಿಸಿ ನಂತರ ಹೊರೆ ಇಳಿಸಿ ಕತ್ತೆಯನ್ನು ಅಟ್ಟಿಬಿಡಬೇಕು...." ಆಕ್ಟೇವಿಯಸ್ ಹೇಳುವುದು ನಿಜ- ಲಿಪಿಡಿಯಸ್ ಒಬ್ಬ ಧೈರ್ಯಶಾಲಿ ಯೋಧ – ಆದರೆ ಆಂಟನಿಯ ಕುದುರೆಯೂ ಅಷ್ಟೇ ಧೈರ್ಯಶಾಲಿ – ಕುದುರೆಗಳಿಗೆ ತರಬೇತಿ ನೀಡಿದಂತೆ ಇವನಿಗೂ ನೀಡಬೇಕು.... ಅವನೊಬ್ಬ 'Barren spirited fellow' – ಮಿಕ್ಕವರೆಲ್ಲ ಕೈಬಿಟ್ಟು, ತಿರಸ್ಕರಿಸಿದ್ದನ್ನು ಇವನು ಶ್ರೇಷ್ಠವೆಂದು ತಿಳಿದು ಆರಾಧಿಸುತ್ತಾನೆ. ಆ ಕ್ಷಣಕ್ಕೆ ಬಳಸಬಹುದಾದ, ಮರುಕ್ಷಣ ತಿರಸ್ಕರಿಸಿ ಬಿಸುಡಬಹುದಾದ ವಸ್ತುವಿಗಿಂತ ಹೆಚ್ಚು ಬೆಲೆ ಅವನಿಗೆ ನೀಡಬಾರದು.

ಆದರೆ ಇದಕ್ಕಿಂತ ಹೆಚ್ಚಿನ ವಿಷಯಗಳು ಇವೆ. ಬ್ರೂಟಸ್ ಮತ್ತು ಕ್ಯಾಷಿಯಸ್ ತಮ್ಮ ಸೈನ್ಯಗಳನ್ನು ಜಮಾಯಿಸುತ್ತಿದ್ದಾರೆ. ನಾವು ಮುಂದುವರೆಯಬೇಕು. ನಮ್ಮ ಮೈತ್ರಿಕೂಟವನ್ನು ಬಲಪಡಿಸೋಣ. ಆದಷ್ಟೂ ಬೇಗ ಸಭೆ ಸೇರೋಣ "how covert matters may be best disclosed / And open perils surest answered." "ಹೌದು ನಾವೀಗ ಕಂಬಕ್ಕೆ ಕಟ್ಟಿ ಹಾಕಿಸಿಕೊಂಡವರಂತೆ ಇದ್ದೇವೆ. ಸುತ್ತ ಶತ್ರುಗಳು ಊಳಿಡುತ್ತಿದ್ದಾರೆ. And some that smile have in their hearts, I fear, / Millions of mischiefs" ಈ ಎರಡು ಸಾಲುಗಳು ಓದಿದ ತತ್‌ಕ್ಷಣ ನಮಗೆ ಎರಡನೇ ಅಂಕದ ಎರಡನೇ ದೃಶ್ಯದ ಬ್ರೂಟಸನ ಕೊನೆಯ ಸಾಲುಗಳು ಜ್ಞಾಪಕಕ್ಕೆ ಬರದಿರಲು ಸಾಧ್ಯವೇ ಇಲ್ಲ,

> 'That every like is not the same, O Caesar
> The heart of Brutus earns to think upon'

ಆದರೆ ಈ ಎರಡು ಸಂದರ್ಭಗಳಲ್ಲಿ ಎಷ್ಟೊಂದು ವ್ಯತ್ಯಾಸ ? ಆಡುತ್ತಿರುವ ಇಬ್ಬರು

ವ್ಯಕ್ತಿಗಳ ವ್ಯಕ್ತಿತ್ವಗಳಲ್ಲಿ ಎಷ್ಟೊಂದು ಅಂತರ ? ಶೇಕ್ಸ್‌ಪಿಯರ್ ಆಕ್ಟೇವಿಯಸನ ಸಾಲುಗಳಲ್ಲಿ 'Millions of mischiefs' ಆಕಸ್ಮಾತ್ತಾಗಿ ಸೇರಿಸಿದ ಮಾತಲ್ಲ ಎಂಬುದೂ ಸ್ಪಷ್ಟವಾಗಿ ವೇದ್ಯವಾಗುತ್ತದೆ.

ನನ್ನ ದೃಷ್ಟಿಯಲ್ಲಿ ಇಡೀ ನಾಟಕದ ಅತಿ ಶ್ರೇಷ್ಠದೃಶ್ಯಗಳೆಂದರೆ ನಾಲ್ಕನೇ ಅಂಕದ ಎರಡು ಮತ್ತು ಮೂರನೇ ದೃಶ್ಯಗಳು. ಬ್ರೂಟಸ್ ಮತ್ತು ಕ್ಯಾಷಿಯಸ್ ತಮ್ಮ ಸೈನ್ಯಗಳನ್ನು ಕೂಡಿಸುತ್ತಿದ್ದಾರೆ. ಬ್ರೂಟಸ್ ಕ್ಯಾಷಿಯಸನಿಗಾಗಿ ಹೇಳಿಕಳುಹಿಸಿದ್ದಾನೆ. ಅವನನ್ನು ಕರೆತರಲು ಹೋದ ಲೂಸಿಲಿಯಸ್ ಕ್ಯಾಷಿಯಸ್‌ನ ಆಪ್ತ ಪಿಂಡಾರಸ್ ಜೊತೆ ಬಂದಿದ್ದಾನೆ. ಕ್ಯಾಷಿಯಸ್ ಇಷ್ಟರಲ್ಲೇ ಇಲ್ಲಿಗೆ ತಲುಪುವುದರಲ್ಲಿದ್ದಾನೆ ಎಂದು ಹೇಳುತ್ತಾನೆ. ಬ್ರೂಟಸ್ ಪಿಂಡಾರಸನಿಗೆ ''ನಿಮ್ಮ ನಾಯಕ ತನ್ನ ಕೃತ್ಯಗಳಿಂದ ನನ್ನ ಮನಸ್ಸಿಗಷ್ಟು ತೊಂದರೆ ಮಾಡಿದ್ದಾನೆ. ಆಗಬಾರದ್ದು ಆಗಿದೆ ಅನಿಸುತ್ತಿದೆ. ಅವನೇ ಬರಲಿ, ನನ್ನ ಅನುಮಾನಗಳನ್ನು ಪರಿಹರಿಸಿಕೊಳ್ಳುತ್ತೇನೆ'' ಪಿಡಾರಸನು ತನ್ನ ನಾಯಕನ ಬಗ್ಗೆ ಭರವಸೆಗಳನ್ನು ಕೊಟ್ಟ ಮೇಲೆ ಬ್ರೂಟಸ್ ಲೂಸಿಲಿಯಸ್‌ನನ್ನು ''ಹೇಳು, ಕ್ಯಾಷಿಯಸ್ ನಿನ್ನನ್ನು ಹೇಗೆ ಸ್ವಾಗತಿಸಿದ ?'' ಎಂದು ಕೇಳುತ್ತಾನೆ. ಲೂಸಿಲಿಯಸ್‌ನ ಉತ್ತರ ಅತ್ಯಂತ ನಿರಾಶಾದಾಯಕವಾಗಿವೆ. ''ಮೊದಲಿನಂತೆ ಸಹಜವಾಗಿರಲಿಲ್ಲ. ಸ್ನೇಹಪರವಾಗಿ ಕಾಣಲಿಲ್ಲ'' ಎಂದ ಮಾತಿಗೆ ಬ್ರೂಟಸ್ ''ಬೆಚ್ಚಗೆ ಹೃದಯದ ಸ್ನೇಹಿತ ಉದಾಸೀನನಾಗಿರುವುದನ್ನು ಬಣ್ಣಿಸುತ್ತಿದ್ದೀಯೆ. ಸರಳ ಸಹಜ ನಂಬಿಕೆಗಳಲ್ಲಿ ತೋರಿಕೆಗಳು ಇರುವುದಿಲ್ಲ. ಆದರೆ ಟೊಳ್ಳು ಮನಸ್ಕರು ಬಹು ಉತ್ಸಾಹ ತೋರುವ ಕುದುರೆಗಳಂತೆ ಕಂಡರೂ ಕೊನೆಯ ಪರೀಕ್ಷೆಯ ಸಮಯದಲ್ಲಿ ದ್ರೋಹ ಬಗೆದುಬಿಡುತ್ತಾರೆ.'' ಈ ಮಾತು ಮುಗಿಯುವ ವೇಳೆಗೆ ಕ್ಯಾಷಿಯಸನ ಪ್ರವೇಶವಾಗುತ್ತದೆ.

ಇಲ್ಲಿಂದ ಮುಂದಕ್ಕೆ ನಾಲ್ಕನೇ ಅಂಕದ ಮೂರನೇ ದೃಶ್ಯದ ಕೊನೆಯವರೆವಿಗೆ ಅತ್ಯಂತ ಸೂಕ್ಷ್ಮವಾಗಿ ನಾವು ಗಮನಿಸಬೇಕು. ಬಹುಕಾಲದ ಸಹೋದ್ಯೋಗಿಗಳು, ಆಪ್ತರು, ಬಂಧುಗಳು ಹಾಗೂ ವೀರಾಗ್ರಣಿಗಳು ಈಗ ಈ ನಾಟಕೀಯ ಪರ್ವಕಾಲದಲ್ಲಿ ಹೇಗಾಗಿದ್ದಾರೆ ನೋಡಬೇಕು. ಮೊದಲ ಅಂಕದ ಎರಡನೇ ದೃಶ್ಯದ ಇವರಿಬ್ಬರ ಮಧ್ಯದ ದೃಶ್ಯವನ್ನು 'ಪಿತೂರಿ ದೃಶ್ಯ' ಎಂದು ಹೆಸರಿಸುತ್ತಾರೆ. ಈಗ ಈ ಎರಡು ಮೂರನೆಯದನ್ನು 'ವ್ಯಾಜ್ಯದ ದೃಶ್ಯ' ಎಂದು ಹೇಳುತ್ತಾರೆ. ವ್ಯಾಜ್ಯಗಳು ಕ್ರಿಯಾಶೀಲವೂ ಆಗಬಹುದು. ಕೇವಲ ಮೂರನೇ ದರ್ಜೆಯ ಪರಸ್ಪರ ಅಹಮಿಕೆಯ ತಿಕ್ಕಾಟದ ಪ್ರದರ್ಶನವೂ ಆಗಬಹುದು. ವಿಶಾಲ ಅರ್ಥದಲ್ಲಿ ಸದ್ಯಕ್ಕೆ ಹೇಳಬಹುದಾದ ಮಾತೆಂದರೆ : 'ಕ್ರಾಂತಿಗಳು ಎಂದಿಗೂ ಕ್ರಿಯಾಶೀಲ ವ್ಯಾಜ್ಯಗಳಿಗೆ ಕಾರಣವಾದರೆ, ಪಿತೂರಿಗಳು ಪರಸ್ಪರ ಅಹಂಕಾರಗಳ ಹಣಾಹಣಿ ಮಾತ್ರವಾಗುತ್ತದೆ.' ಹಾಗಾದರೆ ಈ ವ್ಯಾಜ್ಯ ಈ ಎರಡು ಲಕ್ಷಣಗಳಲ್ಲಿ ಒಂದನ್ನು ಹೊಂದಿದೆ ಎನ್ನುವುದಾದರೆ 'ಅತಿ ಶ್ರೇಷ್ಠ ದೃಶ್ಯ'ವಾಗುವುದು ಹೇಗೆ ? ಆಕರ್ಷಕವೆನಿಸಬಹುದು ; ಕುತೂಹಲ ಕೆರಳಿಸುವಂತೆ

ಇರಬಹುದು. ಆದರೆ 'ಅತಿ ಶ್ರೇಷ್ಠ'ವೂ ಹೇಗಾಗುತ್ತದೆ ಎಂದು ನೋಡುವುದು ಮುಂದಿನ ಭಾಗದ ವಸ್ತು ಎನ್ನಬಹುದು.

ಕ್ಯಾಷಿಯಸ್ ಪ್ರವೇಶಿಸುವಾಗಲೇ ಅತ್ಯಂತ ವ್ಯಗ್ರಸ್ಥಿತಿಯಲ್ಲಿ ಇದ್ದಾನೆ. 'Most noble brother, you have done me wrong' ಎಂಬ ಮಾತಿನಿಂದಲೇ ಆರಂಭಿಸುತ್ತಾನೆ. ನನ್ನ ಶತ್ರುಗಳಿಗೂ ದ್ರೋಹ ಬಗೆಯದ ತಾನು ಸ್ನೇಹಿತರಿಗೆ ಹೇಗೆ ದ್ರೋಹ ಬಗೆಯುವುದು ಸಾಧ್ಯ ಎಂಬ ಬ್ರೂಟಸನ ಸಮಾಧಾನದ ಮಾತಿಗೆ ತೃಪ್ತನಾಗದೆ 'ನಿನ್ನ ಸಂಯಮದ ಗಂಭೀರ ನಡವಳಿಕೆ ನಿನ್ನ ತಪ್ಪುಗಳನ್ನು ಮುಚ್ಚಿ ಹಾಕುತ್ತಿವೆ. ಮತ್ತೆ ನೀನು ಇವನ್ನು ಎಸಗುವಾಗ....' ಎಂದು ಉದ್ವಿಗ್ನ ಸ್ಥಿತಿಯಲ್ಲೇ ಮುಂದುವರೆಸಿದುದನ್ನು ಬ್ರೂಟಸ್ ತಡೆಯುತ್ತಾನೆ. ''ಮೆಲ್ಲಗೆ ಮಾತನಾಡು... ನಮ್ಮ ಇಬ್ಬರ ಸೈನ್ಯಗಳು ನಮ್ಮನ್ನು ಸ್ನೇಹಿತರು ಎಂದು ಮಾತ್ರ ಭಾವಿಸಬೇಕು. ಅವರನ್ನು ದೂರ ಕಳಿಸು. ನನ್ನ ಬಿಡಾರಕ್ಕೆ ಬಾ, ಅಲ್ಲಿ ನಿನ್ನ ದುಃಖಗಳನ್ನು ಹೇಳಿಕೋ. ನಾನು ಕೇಳುತ್ತೇನೆ.''

ಈ ಮಾತುಗಳು ಬ್ರೂಟಸನ ವಿವೇಕವನ್ನಷ್ಟೇ ತೋರುವುದಿಲ್ಲ, ಜೊತೆಗೆ ಕ್ಯಾಷಿಯಸ್ ಹೇಳುವ ಯಾವ ಮಾತಿಗೂ ಯಾವ ದೂರಿಗೂ ತಾನು ಅಂಜುವ, ಅಳುಕುವ ಅವಶ್ಯಕತೆಯಿಲ್ಲ ಎಂದೂ ಸ್ಪಷ್ಟಪಡಿಸುತ್ತದೆ. ಎಂದೇ ಅವನು ಅಬ್ಬರಿಸಿದರೂ ತನ್ನನ್ನು ನೇರ ದೂಷಿಸಿದರೂ ತನ್ನ 'ಅಹಂ'ಗೆ ಎಳ್ಳಷ್ಟೂ ಪೆಟ್ಟಾಗಿಲ್ಲವೆಂದು ಸಂಪೂರ್ಣ ಸಮಚಿತ್ತದಲ್ಲಿ ಮಾತನಾಡುತ್ತಾನೆ. ಆತ್ಮವಿಶ್ವಾಸದ ಒಳಗೆ ಪ್ರಜ್ಞೆಯಾಳದಲ್ಲಿ ನೆರಿಗೆಗಳು ಮೂಡಿ ಸುಕ್ಕಾಗಿರದ ವ್ಯಕ್ತಿತ್ವದ ಲಕ್ಷಣ ಇದು. ಇಬ್ಬರೂ ತಮ್ಮ ಸೈನ್ಯಗಳನ್ನು ದೂರ ಕಳುಹಿಸಿ ಬಿಡಾರದೊಳಕ್ಕೆ ಪ್ರವೇಶಿಸುತ್ತಾರೆ.

ಬಿಡಾರವನ್ನು ಪ್ರವೇಶಿದ್ದೇ ತಡ ಕ್ಯಾಷಿಯಸ್ ತನ್ನ ವಾಕ್‌ಪ್ರವಾಹವನ್ನು ಹರಿಯ ಬಿಡುತ್ತಾನೆ. ''ನನ್ನ ಸಹಚರ ಲೂಶಿಯಸ್ ಪೆಲ್ಲಾ ಭ್ರಷ್ಟತನದಲ್ಲಿ ತೊಡಗಿದ ಎಂದು ಆಪಾದಿಸಿ ಅವನಿಗೆ ನೀನು ಛೀಮಾರಿ ಹಾಕಿದಿ. ಅವನ ಪರವಾಗಿ ನಾನು ವಾದ ಮಾಡಿ ಬರೆದ ಪತ್ರಗಳನ್ನು ತಿರಸ್ಕರಿಸಿದಿ. ನಿನ್ನ ಈ ವರ್ತನೆಯಿಂದ ನನಗೆ ಅನ್ಯಾಯವಾಗಿದೆ'' ಎನ್ನುತ್ತಾನೆ ಕ್ಯಾಷಿಯಸ್.

ಈ ಮಾತುಗಳೂ ಈ ದೃಶ್ಯದ ಮೊದಲ ಹತ್ತು ಸಾಲುಗಳೂ ನಮಗೆ ತತ್‌ಕ್ಷಣ ಮೂರನೇ ಅಂಕದ ಮೊದಲ ದೃಶ್ಯದ ನೆನಪು ತರುತ್ತದೆ. ಮೆಟಲಿಯಸ್ ಸಿಂಬರನು ತನ್ನ ಸೋದರನ ಪರವಾಗಿ ಸೀಸರನ ಮುಂದೆ ದೈನ್ಯದಿಂದ ಕ್ಷಮೆ ಬೇಡಿದ ದೃಶ್ಯ ಅದು. ಸೀಸರ್ ಆಗ ಆಡಿದ ಮಾತುಗಳು ನಮ್ಮ ನೆನಪಿಗೆ ಬರುತ್ತವೆ ; ''ಸಣ್ಣ ಮನುಷ್ಯರನ್ನು ಪ್ರಭಾವಗೊಳಿಸುವಂಥ ತಂತ್ರಗಳು ಇವು - ನಿನ್ನ ಅಂಗಲಾಚಿಕೆ, ನಿನ್ನ ಪ್ರಾರ್ಥನೆ ಇವುಗಳೆಲ್ಲ...'' ಇತ್ಯಾದಿ. ಈಗ ಹೆಚ್ಚೂ ಕಡಿಮೆ ಅದೇ ಮಾತುಗಳನ್ನು ಬ್ರೂಟಸ್ ಕ್ಯಾಷಿಯಸನಿಗೆ ಆಡುತ್ತಾನೆ. ''ಅಂಥವನ ವಿಷಯದಲ್ಲಿ ಅವನ ಪರವಹಿಸಿ ನೀನು ವಾದಿಸಿ ನಿನಗೆ ನೀನು ಅನ್ಯಾಯ ಮಾಡಿಕೊಂಡಿದ್ದಿ'' ಸೀಸರನಿಗೂ ಬ್ರೂಟಸನಿಗೂ ಸಾಮಾನ್ಯವಾದ ಅಂಶವೆಂದರೆ ಇಬ್ಬರೂ ಮೌಲ್ಯಗಳಿಗೆ

ನೀಡುವ ಮಹತ್ವ. ನಮ್ಮೆಲ್ಲರಿಗೂ ಮೀರಿದ ಉದಾತ್ತಚಾರಿತ್ರ್ಯದ ಮೌಲ್ಯಗಳು. ಆದರೆ ಕ್ಯಾಷಿಯಸನಿಗೆ ಈ ಮೌಲ್ಯಗಳಿಗಿಂತ ಈಗ ಸದ್ಯಕ್ಕೆ ಇಲ್ಲಿ ಈ ಸಂದರ್ಭದಲ್ಲಿ ಯಶಸ್ವಿಯಾಗುವುದು – ಅದು ಮುಖ್ಯ. ಮೌಲ್ಯಗಳನ್ನು, ಅವುಗಳಿಗೆ ಗೌರವಿಸುವುದನ್ನು ನಾಳೆಗೆ ಮುಂದಕ್ಕೆ ಹಾಕಬಹುದು. ಅವನು ಮಾತನಾಡುವುದರಲ್ಲಿ ಇದು ಸ್ಪಷ್ಟವಾಗಿ ಗೋಚರವಾಗುತ್ತದೆ ; 'ಇಂಥ ಸಂದರ್ಭದಲ್ಲಿ, ಸಣ್ಣಪುಟ್ಟ ಜುಜುಬಿ ವಿಷಯಗಳನ್ನೂ ತಲೆಗೆ ಹಚ್ಚಿಕೊಳ್ಳುವುದು ತರವಲ್ಲ' ಈ ಮಾತು ರಾಜಕಾರಣಿ ಆಡುವ ಪ್ರತಿನಿಧಿರೂಪದ ಮಾತು. ರಾಜಕಾರಣಿಗೆ ಫಲಿತಾಂಶ ಮುಖ್ಯ, ಗುರಿ ಮುಟ್ಟುವುದು ಮುಖ್ಯ-ಮಾರ್ಗವಲ್ಲ. 'ಇಂಥ ಸಂದರ್ಭಗಳಲ್ಲಿ....' ಎಂದರೆ ಅರ್ಥವೇನು ? ಇನ್ನೆಂಥ ಸಂದರ್ಭಗಳಲ್ಲಿ ಹಾಗಾದರೆ ಚಿಕ್ಕಪುಟ್ಟ ವಿಷಯಗಳಿಗೂ ಗಮನ ಕೊಡಬಹುದು ? ಬ್ರೂಟಸ್ ಈ ಪ್ರಶ್ನೆಯನ್ನು ಕೇಳುವುದಕ್ಕೂ ಸಹನೆಯಿಲ್ಲದೆ ಕ್ಯಾಷಿಯಸನನ್ನು ನೇರವಾಗಿ ದೂಷಿಸುತ್ತಾನೆ. "ನೀನು ಕೂಡ ಭ್ರಷ್ಟತನದಿಂದ ದೂರವಿಲ್ಲ ಎಂದು ನಾನು ಕೇಳಿದ್ದೇನೆ. ನಿನ್ನ ಅಧಿಕಾರವನ್ನು ಚಿಲ್ಲರೆ ಜನಕ್ಕೆ ಒಂದಷ್ಟು ಬಂಗಾರಕ್ಕೆ ಮಾರಿಕೊಂಡಿದ್ದಿ ನೀನು" ರಾಜಕಾರಣದಲ್ಲಿ ಪರಸ್ಪರರ ದೌರ್ಬಲ್ಯಗಳನ್ನು ಮುಚ್ಚಿಹಾಕಿಕೊಳ್ಳುತ್ತ ಹೋಗಬೇಕು. ಅದನ್ನು ಎತ್ತಿ ಆಡುತ್ತಿರುವುದು ವಿವೇಕವಲ್ಲ. ಆದರೆ ಬ್ರೂಟಸ್ ಇನ್ನೂ ಕೂಡ ತಾನು ಕ್ರಾಂತಿಯೊಂದನ್ನು ನಿರ್ದೇಶಿಸುತ್ತಿದ್ದೇನೆ ಎಂದೇ ಭಾವಿಸಿದ್ದಾನೆ. ಭಾವನೆಯಷ್ಟೆ ಅಲ್ಲ, ನಂಬಿಕೆ ಕೂಡ. ಅದಕ್ಕಾಗಿ ಪ್ರತಿಬಾರಿ ಕ್ಯಾಷಿಯಸ್ ವಾಗ್ವಾದವನ್ನು ವೈಯಕ್ತಿಕ ಅಹಮಿಕೆಯ ಮಟ್ಟಕ್ಕೆ ಕುಗ್ಗಿಸಿದಾಗಲೂ ಬ್ರೂಟಸ್ ಮತ್ತೆ ಅದನ್ನು ಎತ್ತರಕ್ಕೆ ಕೊಂಡೊಯ್ಯುವ ಯತ್ನ ಮಾಡುತ್ತಾನೆ.

ತನ್ನನ್ನೇ ಭ್ರಷ್ಟನೆಂದು ಆಪಾದಿಸಿದ ಬ್ರೂಟಸನ ಮಾತು ಕೇಳಿ ಭಯಂಕರವಾಗಿ ಕೆರಳಿ 'ನೀನು ಬ್ರೂಟಸ್ ಆದದ್ದರಿಂದ ಈ ಮಾತು ಆಡಿಯೂ ಉಳಿದುಕೊಳ್ಳುತ್ತಿದ್ದಿ, ಇಲ್ಲದಿದ್ದರೆ ಇದೇ ನಿನ್ನ ಕಟ್ಟಕಡೆಯ ಮಾತಾಗುತ್ತಿತ್ತು' ಎಂದು ಅಬ್ಬರಿಸುತ್ತಾನೆ. ಬ್ರೂಟಸ್ ಕೊಂಚವೂ ತಾಳ್ಮೆಗೆಡದೆ 'ಈ ಭ್ರಷ್ಟತನದ ಹಿಂದೆ ಕ್ಯಾಷಿಯಸನ ಹೆಸರು ಇದ್ದು ಉಳಿದುಕೊಂಡಿದೆ. ಹಾಗಾಗಿಯೆ ದಂಡನೆಯಿಂದಲೂ ತಪ್ಪಿಸಿಕೊಂಡಿದೆ' ಎಂದು ಅನ್ನುತ್ತಾನೆ. ತನ್ನ ಕಿವಿಯನ್ನು ತಾನೇ ನಂಬಲಾರದೆ ಕ್ಯಾಷಿಯಸ್ 'ದಂಡನೆ ?' ಎಂದರಚುತ್ತಾನೆ.

ಬ್ರೂಟಸನ ಮುಂದಿನ ಮಾತುಗಳು ನಿರ್ವಿವಾದವಾಗಿ, ನಿಶ್ಚಯವಾಗಿ, ತನ್ನ ಮನಸ್ಸಿನಲ್ಲಿ ಯಾವುದಕ್ಕೆ ಆದ್ಯತೆ ನೀಡಿದ್ದಾನೆ ಎಂಬುದನ್ನು ಗಟ್ಟಿಯಾಗಿ ಸ್ಥಾಪಿಸುತ್ತದೆ.

"Remember March, the ides of March remember
Did not great Caesar bleed for justice's sake ?
What villan touched his body, that did stab,
And not for justice ? what, shall one of us,

That struck the foremost men of all this world
But for supporting robbers, shall we now
Contaminate our fingers with base bribes,
And sell the mighty space of our large honours
For so much trash as may be grasped thus ?
I had rather be a dog, and bay the moon
Than such a Roman.

ಈ ಹನ್ನೊಂದು ಸಾಲುಗಳನ್ನು ಇಲ್ಲಿ ಪೂರ್ಣವಾಗಿ ಉಲ್ಲೇಖಿಸಿದ ಉದ್ದೇಶ ಸ್ಪಷ್ಟವಾಗಿದೆ ಎಂದು ಭಾವಿಸಿದ್ದೇನೆ. ಹದಿನೈದರ ಮಾರ್ಚ್ ಎಂದರೆ ಅದೊಂದು ಸಾಂಕೇತಿಕ ದಿನ. ಕ್ರಾಂತಿಯ ಉದ್ಘಾಟನೆಯಾದ ದಿನ. ಈ ಕ್ರಾಂತಿಯ ಉದ್ದೇಶವೇನಿತ್ತು ? 'Justice' – ನ್ಯಾಯಕ್ಕಾಗಿ, ಈ ನ್ಯಾಯವನ್ನು ಗಳಿಸಲು ನಾವು ಬಲಿ ತೆಗೆದುಕೊಂಡ ವ್ಯಕ್ತಿಯಾರು ? 'great Caesar' 'foremost man of the world ! ಅವನ ದೋಷವೇನಿದ್ದಿತು ? 'Supporting robbers' 'ಇಂಥ ಮಹಾನ್ ವ್ಯಕ್ತಿಯೂ ನ್ಯಾಯಕ್ಕಾಗಿ ನೆತ್ತರು ಹರಿಸಬೇಕಾಯಿತು. ಹಾಗಿಲ್ಲದೆ ಮತ್ತ್ಯಾವುದೇ ಕಾರಣಕ್ಕೂ ಸೀಸರನ ವಿರುದ್ಧ ಕೈ ಎತ್ತಿದ್ದರೆ ಅಂಥವನು ಕೇವಲ 'Villian' ಅಷ್ಟೆ. ಒಂದು ಮಹಾನ್ ಉದ್ದೇಶಸಾಧನೆಗಾಗಿ ಒಬ್ಬ ಮಹಾನ್‌ವ್ಯಕ್ತಿಯ ಬಲಿಯಾಗಿದೆ. ಹಾಗಿರುವಾಗ ಈಗ 'ನಮಗೆ ದೊರಕಿರುವ ಈ mighty space of our large honours'ಗಳನ್ನು ಕೈ ಚಾಚಿ ಬಾಚಿಕೊಳ್ಳಬಹುದಾದ ಚೂರುಪಾರುಗಳಿಗಾಗಿ ಹೊಲಸು ಗೊಳಿಸಬೇಕೆ ? ಹೀಗೆ ಮಾಡುವುದಕ್ಕಿಂತ ಚಂದ್ರನನ್ನು ನೋಡಿ ಊಳಿಡುವ ನಾಯಿ ಯಾಗಿರಲು ಬಯಸುತ್ತೇನೆ ; ರೋಮನ್ ಎಂದು ಕರೆಸಿಕೊಳ್ಳುವ ಯೋಗ್ಯತೆಗೆ ಅನರ್ಹ ವಾಗಿ' ಎಂದು ನೈತಿಕ ಸಿಟ್ಟಿನಲ್ಲಿ ಮತ್ತೆ ಅಷ್ಟೇ ವಿಷಾದದಲ್ಲಿ ನುಡಿಯುತ್ತಾನೆ. ಬ್ರೂಟಸ್ ತನ್ನ ಸದ್ಯದ ಸ್ಥಿತಿಯೊಂದಿಗೆ ಕ್ಯಾಷಿಯಸನಷ್ಟು ಸುಲಭವಾಗಿ ರಾಜಿ ಮಾಡಿಕೊಳ್ಳಲು ತಯಾರಿಲ್ಲ.

ಈ ದೃಶ್ಯದ ಸಂಘರ್ಷ ಕಾವ್ಯದ ಮಟ್ಟ ಮುಟ್ಟಿಬಿಡುವುದು ಇದಕ್ಕಾಗಿಯೇ. ಎತ್ತರದ ಹಿಮಾಲಯದ ಮೇಲೆ ನಿಂತು ನೀತಿ, ಬದ್ಧತೆ, ಹೊಣೆಗಾರಿಕೆ ಇವುಗಳ ಬಗ್ಗೆ ಮಾತನಾಡುತ್ತಿರುವ ಬ್ರೂಟಸ್ ಒಂದು ಕಡೆ ; ಈ ಹಿಮಾಲಯದ ತಪ್ಪಲಲ್ಲಿ ಕುಬ್ಜವಾಗಿ, ತನ್ನ ಅಹಂಕಾರವನ್ನೇ ಆಳೆತ್ತರ ಮುಗಿಲೆತ್ತರ ಬೆಳೆಸಿ ನಿಂತ ಕ್ಯಾಷಿಯಸ್ ತಲೆಯೆತ್ತಿ ಮೇಲೆ ನಿಂತಿರುವ ಬ್ರೂಟಸನನ್ನು ನೋಡಿ ಚೀರುತ್ತಿರುವುದು ಇನ್ನೊಂದು ಕಡೆ. ಅಮೂರ್ತಗಳ ಸೆಳೆತದಿಂದ ಬಿಡುಗಡೆಯಾಗಲು ಬಯಸದ ಬ್ರೂಟಸ್ ಒಂದು ಕಡೆ. ಮೂರ್ತಗಳು ಕಲ್ಪಿಸುವ ಜಗತ್ತನ್ನು ಮೀರಿ ಚಿಂತಿಸಲಾರದ ಕ್ಯಾಷಿಯಸ್ ಇನ್ನೊಂದು ಕಡೆ. ಈ ಮಾತಿಗೆ ಸಾಕ್ಷಿಯಾಗಿ ಕ್ಯಾಷಿಯಸನ ಮುಂದಿನ ಸಾಲುಗಳೇ ಸಾಕು. ಬ್ರೂಟಸನ ಅಂಥ ಅದ್ಭುತ ಮಾತುಗಳನ್ನು ಕೇಳಿಯೂ ಕ್ಯಾಷಿಯಸ್ ಪ್ರತಿಕ್ರಿಯಿಸುವುದು ಸಾಧ್ಯವಾಗುವುದು ತನ್ನ ತೀರ ಸಂಕುಚಿತ ಅಹಂಭಾವದ

ಮಟ್ಟದಲ್ಲಿ ಮಾತ್ರ : ''ನನ್ನನ್ನು ಹೀಗೆ ಕಾಡಬೇಡ, ನನಗೆ ಸಹಿಸಲು ಸಾಧ್ಯವಿಲ್ಲ. ನನ್ನ ಸ್ವಾತಂತ್ರ್ಯಹರಣ ಮಾಡಲು ಹೊರಟು ನಿನ್ನನ್ನು ನೀನು ಮರೆಯುತ್ತಿದ್ದಿ. ನಾನೊಬ್ಬ ಸೈನಿಕ. ನಿನಗಿಂತ ಹಿರಿಯ. ನಿನಗಿಂತ ಹೆಚ್ಚು ಸಮರ್ಥ. ಹಾಗಾಗಿ ನಾನು ಷರತ್ತುಗಳನ್ನು ಹಾಕಬಲ್ಲೆ''. 'ನಾನು, ನನ್ನ, ನನ್ನಿಂದ'ಗಳಿಂದ ಕೂಡಿದ ಮಾತುಗಳು. ಮೇಲೆ ಉಲ್ಲೇಖಿಸಿದ ಹನ್ನೊಂದು ಸಾಲುಗಳ ಬ್ರೂಟಸನ ಮಾತುಗಳಲ್ಲಿ ಒಂದೂ 'ನಾನು' ಇಲ್ಲ. ಆಹಂಭಾವದ ಒಂದು ತೃಣವೂ ಇಲ್ಲ.

ಈ ಬಗೆಯ ಕ್ಯಾಷಿಯಸನ ಆತ್ಮರತಿಗೆ ಬ್ರೂಟಸನ ತಿರಸ್ಕಾರದ ''ಹೋಗು ಹೋಗು, ನೀನು ಕ್ಯಾಷಿಯಸ್ ಅಲ್ಲ'' ಎಂಬ ಪ್ರತಿಕ್ರಿಯೆಯೇ ಸೂಕ್ತವಾದದ್ದು. ಮಾತುಮಾತಿಗೆ ಮೈ ಬಿಸಿ ಏರುತ್ತಿರುವ ಕ್ಯಾಷಿಯಸ್ 'ನಾನು ಕ್ಯಾಷಿಯಸನೇ' ಎಂದು ಅಬ್ಬರಿಸುತ್ತಾನೆ. ''ನಾನು ಹೇಳುತ್ತೇನೆ. ನೀನು ಅಲ್ಲ ಎಂದು'' ''ಮತ್ತಷ್ಟು ಕೆಣಕಬೇಡ. ನನ್ನನ್ನು ನಾನು ಮರೆತು ಅನಾಹುತ ವಾಗಬಹುದು. ನಿನ್ನ ಸೌಖ್ಯದ ಕಡೆ ಗಮನವಿಡು. ಮತ್ತಷ್ಟು ನನ್ನನ್ನು ಉದ್ರೇಕಿಸಬೇಡ'' ಎಂದು ಬ್ರೂಟಸನಿಗೆ ಎಚ್ಚರಿಸುತ್ತಾನೆ. ''ಹೊರಡಿಲ್ಲಿಂದ, ಕ್ಷುದ್ರಮನುಷ್ಯ'' - ಬ್ರೂಟಸ್ ತಾತ್ಸಾರದಿಂದ ನುಡಿಯುತ್ತಾನೆ. ''ಇದು ಇಷ್ಟಕ್ಕೇ ಬಂತೆ ?'' ಕ್ಯಾಷಿಯಸನ ಆತ್ಮಮರುಕದ ಉದ್ಗಾರಕ್ಕೆ ಬ್ರೂಟಸ್ ಕೊಂಚ ತಾಳ್ಮೆ ತಂದುಕೊಂಡು ಮಾತನಾಡುತ್ತಾನೆ. ಈ ತಾಳ್ಮೆಯನ್ನು ಬ್ರೂಟಸ್‌ನ ಅತ್ಯಂತ ಪ್ರಯತ್ನಪೂರ್ವಕವಾಗಿ ತಂದುಕೊಂಡುದು ಕೂಡ. ''ಆಯಿತು, ನಿನ್ನ ಭಾಷೆಯಲ್ಲಿಯೇ ಮಾತನಾಡುತ್ತೇನೆ. ನಿನ್ನ ಮಟ್ಟದಲ್ಲಿಯೇ ನಿಂತು ಮಾತನಾಡುತ್ತೇನೆ'' ಎಂದು ತೀರ್ಮಾನಿಸಿ ಮಾತನಾಡುತ್ತಿರುವುದು ಸ್ಪಷ್ಟವಾಗುತ್ತದೆ. "Hear me, for I will speak" ನಿನ್ನ ಸಿಡುಕುಗಳಿಗೆಲ್ಲ ನಾನು ಸೊಪ್ಪು ಹಾಕಬೇಕೇನು ? ತಲೆಕೆಟ್ಟವನೊಬ್ಬನ ಕೆಂಗಣ್ಣಿಗೆ ಬೆದರಬೇಕೇನು ?'' ಕ್ಯಾಷಿಯಸನಿಗೆ ಅವಮಾನದಿಂದ ಕುದಿಯುವಂತೆ ಆಗುತ್ತದೆ. ''ಓ ದೇವರೆ, ದೇವರೆ, ಇದನ್ನೆಲ್ಲ ನಾನು ಸಹಿಸಬೇಕೇನು ?'' ಕ್ಯಾಷಿಯಸ್ ಗೋಳಾಡುತ್ತಾನೆ.

''ಇಷ್ಟನ್ನೆಯೇ ? ಮತ್ತೂ ಅಷ್ಟನ್ನು ; ನಿನ್ನ ಸೊಕ್ಕಿನ ಗುಂಡಿಗೆ ಒಡೆದುಹೋಗುವವರೆಗೆ ಉರಿದು ಬೀಳು. ನಿನ್ನ ಸೇವಕರೆದುರು ನಿನ್ನ ಸಿಟ್ಟು ಸೆಡವುಗಳನ್ನು ಪ್ರದರ್ಶಿಸು. ನಿನ್ನ ಗುಲಾಮರನ್ನು ನಡುಗಿಸು. ನಾನು ಅಲುಗಬೇಕೆ ? ನಾನು ಕಳವಳಿಸಬೇಕೆ ? ನಿನ್ನ ನಂಜಿನ ಈ ವರ್ತನೆಯೆದುರು ಮಂಡಿಯೂರಿ ಕೂಡಬೇಕೆ ? ನಿನ್ನ ವಿಷದ ಈ ಮುಂಗೋಪಗಳನ್ನು, ನಿನ್ನ ರೋಷಾವೇಶಗಳನ್ನು, ದೇವರಾಣೆ ಹೇಳುತ್ತೇನೆ. ನೀನೇ ಜೀರ್ಣಿಸಿಕೊಳ್ಳಬೇಕು. ಇನ್ನು ಮುಂದೆ ನೀನು ತಲೆಕೆಟ್ಟು ನಡೆದುಕೊಂಡಾಗಲೆಲ್ಲ ನಿನ್ನನ್ನು ನನ್ನ ಮನರಂಜನೆಗೆ ಬಳಸಿ ಕೊಳ್ಳುತ್ತೇನೆ, ಹೌದು, ನನ್ನ ವಿನೋದಕ್ಕೆ...ನನಗಿಂತ ಉತ್ತಮಯೋಧ ಅನ್ನುತ್ತೀಯಲ್ಲವೆ ? ಹಾಗೇ ಆಗಲಿ ನಿನ್ನ ಬಡಾಯಿಯನ್ನು ಸಾಧಿಸಿ ತೋರಿಸು. ನನಗೆ ಸಮಾಧಾನವೇ. ನಿನ್ನಂಥ ಉದಾತ್ತನಿಂದ ಕಲಿಯಲು ನನಗೆ ಸಂತೋಷವೆ' ಎಂದು ವ್ಯಂಗ್ಯಗಳಲ್ಲಿ ಚುಚ್ಚುತ್ತಾನೆ. 'ನಾನು

ಹಿರಿಯ ಯೋಧನೆಂದದ್ದು. ನಿನಗಿಂತ ಉತ್ತಮನೆಂದಲ್ಲ – ಉತ್ತಮ ಎಂದೆನೆ ? ''ನೀನು ಅಂದಿದ್ದರೂ ನಾನು ಲಕ್ಷಿಸುವುದಿಲ್ಲ.'' ಈ ಇಡೀ ದೃಶ್ಯವನ್ನು ಇಷ್ಟು ವಿವರವಾಗಿ ಗಮನಿಸುತ್ತಿರುವುದಕ್ಕೆ ಕಾರಣಗಳು ಸ್ಪಷ್ಟವಾಗಿವೆ. ಪ್ರತಿಘಟ್ಟದಲ್ಲಿಯೂ ಈ ಇಬ್ಬರೂ ನಾಯಕರುಗಳ ಮಧ್ಯದ ಅಂತರ ಢಾಳಾಗಿ ಕಾಣುತ್ತ ಹೋಗುತ್ತದೆ. ಮೂಲದಲ್ಲಿ ಬ್ರೂಟಸನ ಕಲ್ಪನೆಯ ಕ್ರಾಂತಿ ಯಶಸ್ವಿಯಾಗದಿರುವುದಕ್ಕೆ ಕಾರಣಗಳೆಲ್ಲಿವೆ ಎಂಬುದೂ ಹೊಳೆಯುತ್ತ ಹೋಗುತ್ತದೆ. ಮತ್ತೂ ಒಂದು ಅಂಶ ನಮಗೆ ಕಾಣುವುದೆಂದರೆ ಕ್ಯಾಷಿಯಸನನ್ನು ಇಷ್ಟು ತೀವ್ರವಾಗಿ, ಕಟುವಾಗಿ ಟೀಕಿಸುತ್ತಿದ್ದರೂ ಬ್ರೂಟಸನ ಮನಸ್ಸಿನಲ್ಲಿ ಹುಳಿ, ನಂಜುಗಳು ಕಾಣುವುದಿಲ್ಲ ಎಂಬುದು. ಆಳದಲ್ಲಿ ಸೋಲು ಒಪ್ಪಿಕೊಂಡದ್ದಾಗಿದೆ. ಆದರೆ ಆ ಸೋಲಿಗೆ ಕ್ಯಾಷಿಯಸನನ್ನು ಜವಾಬ್ದಾರನನ್ನಾಗಿ ಮಾಡುವುದಕ್ಕೂ ಬ್ರೂಟಸ್ ತಯಾರಿಲ್ಲ. ಬ್ರೂಟಸನ ಪ್ರತಿಯೊಂದು ಮಾತು ಕೂಡ - ಕ್ಯಾಷಿಯಸನನ್ನು ಉದ್ದೇಶಿಸಿದ್ದು ಎಷ್ಟು ಸತ್ಯವೋ ಅದಕ್ಕಿಂತ ಹೆಚ್ಚಿಗೆ ತನ್ನನ್ನೇ ಉದ್ದೇಶಿಸಿ ಆಡಿಕೊಂಡ ಸ್ವಗತಗಳಂತೆಯೂ ಇವೆ.

ಸೀಸರ್ ಬದುಕಿದ್ದಾಗ ಎಂದೂ ಹೀಗೆ ನನ್ನನ್ನು ಕೆರಳಿಸುತ್ತಿರಲಿಲ್ಲ ಎಂದು ಅಬ್ಬರಿಸಿದ ಕ್ಯಾಷಿಯಸನಿಗೆ ಬ್ರೂಟಸ್ ಅಷ್ಟೇ ತಣ್ಣಗೆ ಹೇಳುತ್ತಾನೆ. ''ಹೌದು ಹೌದು, ಅವನನ್ನು ನೀನು ಆ ಮಟ್ಟದವರೆವಿಗೆ ಪ್ರಚೋದಿಸಲೂ ಆಗುತ್ತಿರಲಿಲ್ಲ.... ಖಂಡಿತ ಇಲ್ಲ, ನಿನ್ನಾಣೆ, ನಿನ್ನ ಕೈಲಿ ಸಾಧ್ಯವಿರುತ್ತಿರಲಿಲ್ಲ.''

ಕ್ಯಾಷಿಯಸ್ ಕೊನೆಯ ಎಚ್ಚರಿಕೆ ಕೊಡುವಂತೆ, ತನ್ನ ಹತಾಶೆಯು ಸ್ಫೋಟಗೊಳ್ಳುವ ಸ್ಥಿತಿಯಲ್ಲಿರುವುದನ್ನು ಪ್ರದರ್ಶಿಸುತ್ತಾನೆ – ''ನಿನ್ನ ಬಗೆಗಿನ ನನ್ನ ಪ್ರೀತಿಯನ್ನು ತೀರ ನೆಚ್ಚಿ ಮುಂದುವರೆಯಬೇಡ – ಮುಂದೆ ಪಶ್ಚಾತ್ತಾಪಪಡಬಹುದಾದಂಥದ್ದೇನನ್ನಾದರೂ ಮಾಡಿ ಬಿಟ್ಟೇನು.''

ಬ್ರೂಟಸನ ಮುಂದಿನ ಹದಿನೆಂಟು ಸಾಲುಗಳು ಅವನ ಮನಸ್ಸಿನ ಆಳದಲ್ಲಿ ಮನೆ ಮಾಡಿರುವ ವಿಷಾದದ ಎಳೆಗಳನ್ನು ಸೂಕ್ಷ್ಮವಾಗಿ ಬಿಂಬಿಸುತ್ತವೆ.

''ನೀನಾಗಲೇ ಪಶ್ಚಾತ್ತಾಪ ಪಡುವಂಥದ್ದನ್ನು ಮಾಡಿ ಆಗಿದೆ.

ನಿನ್ನ ಬೆದರಿಕೆಗಳಲ್ಲಿ ಏನೂ ಭೀತಿ ಹುಟ್ಟಿಸುವಂಥದಿಲ್ಲ'' ಎಂದು ನುಡಿದು ಮುಂದಿನ ಮೂರು ಸಾಲುಗಳಲ್ಲಿ ತಾನು ಎಷ್ಟು ಎತ್ತರದಲ್ಲಿದ್ದೇನೆ ಎಂಬುದನ್ನು – ಅಹಂಕಾರವೇ ಎನ್ನಿಸಿಬಿಡಬಹುದಾದಷ್ಟು - ಸ್ಪಷ್ಟವಾಗಿ ಹೇಳುತ್ತಾನೆ.

'For I am armed so strong in honesty
That they pass by me as the idle wind
Which I respect not....'

ಈ ಸಾಲುಗಳ ಪ್ರಖರತೆ ನಮಗೆ ತತ್‌ಕ್ಷಣ ಮೂರನೇ ಅಂಕದ ಮೊದಲ ದೃಶ್ಯದ ಸೀಸರನನ್ನು ನೆನಪಿಗೆ ತಂದುಬಿಡುತ್ತದೆ.

> But I am constant as the northern star,
> Of whose true-fixed and resting quality
> There is no fellow in the firmament....

ಸುತ್ತಲೂ ಕ್ರಿಮಿಗಳೇ ತುಂಬಿರುವಾಗ ಮಧ್ಯದಲ್ಲಿ ಒಬ್ಬ ಮನುಷ್ಯನಾಗಿರ ಬಯಸುವವನು ತನ್ನ ಮನುಷ್ಯತ್ವ ಸ್ಥಾಪಿಸುವುದಕ್ಕೆ ಆಕಾಶದ ಧ್ರುವನಕ್ಷತ್ರದಂತೆ ಪ್ರಜ್ವಲಿಸುತ್ತ, ಸಿಂಹದಂತೆ ಘರ್ಜಿಸುತ್ತಿರಬೇಕಾಗುತ್ತದೋ ಏನೋ - ಸುತ್ತಲ ಕ್ರಿಮಿಗಳಿಗೆ ಅಹಂಕಾರದ ಪ್ರತೀಕಗಳಾಗಿ ಕಾಣಿಸಿಬಿಡುವಂತಿದ್ದರೂ. ''ಪಶ್ಚಾತ್ತಾಪ ಪಡುವಂಥದ್ದೇನು ನೀನು ಮಾಡಿದ್ದಿ ಹೇಳುತ್ತೇನೆ - ಕೇಳು. ನನ್ನ ಸೈನ್ಯಕ್ಕೆ ಪಾವತಿ ಮಾಡಲು ಒಂದಷ್ಟು ಹಣಕ್ಕಾಗಿ ನಾನು ನಿನಗೆ ಹೇಳಿಕಳುಹಿಸಿದೆ. ನಾನು ನೀಚಮಾರ್ಗಗಳಲ್ಲಿ ಹಣ ಮಾಡಲಾರೆ. ದೇವರಾಣೆ ನನ್ನ ರಕ್ತವನ್ನೇ ಬಸಿದು ನಾಣ್ಯಗಳು ಮಾಡಿಯೇನೇ ಹೊರತು ರೈತಾಪಿಜನಗಳ ಶ್ರಮದ ದುಡಿಮೆಯ ಹಣವನ್ನು ದೋಚಲಾರೆ. ಹೀಗೆ ನನಗೆ ಹಣ ನಿರಾಕರಿಸಿದ್ದು ಕ್ಯಾಷಿಯಸನಿಗೆ ಒಪ್ಪುವಂಥದೆ ? ಕ್ಯಾಷಿಯಸನಿಗೆ ನಾನು ಹೀಗೆ ಬದಲು ಹೇಳಿಕಳಿಸುತ್ತಿದ್ದೆನೆ ? ಪುಡಿಗಾಸನ್ನು ತನ್ನ ಸ್ನೇಹಿತರಿಗೆ ಕೊಡಲಾರದಷ್ಟು ಸ್ವಾರ್ಥಿ ಬ್ರೂಟಸ್ ಆದಂದು ದೇವರೆ, ನಿನ್ನ ಸಿಡಿಲನ್ನು ಅವನ ಮೇಲೆ ಅಬ್ಬರಿಸಿ ಚೂರು ಚೂರು ಮಾಡು.''

ಕ್ಯಾಷಿಯಸ್ ಇದನ್ನು ನಿರಾಕರಿಸುತ್ತಾನೆ. ಸ್ನೇಹಿತನ ತಪ್ಪುಗಳನ್ನು ಉದಾರಮನಸ್ಸಿನಿಂದ ನೋಡಬೇಕು. ಆದರೆ ಬ್ರೂಟಸ್ ಯಾವಾಗಲೂ ತನ್ನ ತಪ್ಪುಗಳನ್ನು ಉತ್ಪ್ರೇಕ್ಷಿಸುತ್ತಾನೆ. ಸ್ನೇಹಿತನ ಕಣ್ಣುಗಳು ಎಂದೂ ಸಂಗಾತಿಯ ತಪ್ಪುಗಳನ್ನು ಎಣಿಸುವುದಿಲ್ಲ – ಬೆಟ್ಟದೆತ್ತರದ ತಪ್ಪುಗಳನ್ನು ಕೂಡ''.

ಇದುವರೆಗಾಗಲೆ ನಮಗೆ ಮೊದಲ ಅಂಕದ ಎರಡನೇ ದೃಶ್ಯ, ಮೂರನೇ ದೃಶ್ಯ ಇವುಗಳಲ್ಲಿ ಕಂಡ ಕ್ಯಾಷಿಯಸನ ದರ್ಶನ ಮತ್ತೆ ಆಗುತ್ತದೆ. ಒಂದು ಕ್ಷಣ ಆತ್ಮವೈಭವೀಕರಣ, ಸಾಹಸಗಳ ವರ್ಣನಾತ್ಮಕ ನಿರೂಪಣೆ ಮತ್ತೊಂದು ಕ್ಷಣ ವೈಭವೋಪೇತ ಆತ್ಮಮರುಕ ಇಲ್ಲವೇ ಉತ್ಪೀಡನ ಭ್ರಾಂತಿ ಇವುಗಳಲ್ಲಿ ತೊಡಗುವುದರಲ್ಲಿ ಕ್ಯಾಷಿಯಸ್ ನುರಿತಿರುವವನು – ಬಹುಶಃ ಅವನೊಡನೆ ಸಮನಾಗಿ ನಿಲ್ಲಬಲ್ಲವನೆಂದರೆ ಆಂಟನಿಯೊಬ್ಬನೆ.

> Come, Antony, and young Octavius, come,
> Revenge yourselves alone on Cassius,
> For Cassius is aweary of the world.

ಈ ಬಗೆಯ ಮಿತಿ ಮೀರಿ ಊದಿದ ಶೈಲಿ ಒಂದು ಮಟ್ಟ ದಾಟಿದ ಕೂಡಲೆ ಅಸಹ್ಯವಾಗುತ್ತದೆ. ಸೀಸರನಾಗಲಿ, ಬ್ರೂಟಸನಾಗಲಿ ಮಾತನಾಡುವಾಗ ಈ ಮಾತುಗಳಲ್ಲಿ ಧ್ವನಿಸುವುದು ಘನತೆ, ಎತ್ತರಕ್ಕೆ ಏರಿಸುವ ಮಾತುಗಳು. ಕ್ಯಾಷಿಯಸನದು ಮುಜುಗರ ಪಡುವಂತೆ ಮಾಡುವ ಅತಿನಾಟಕೀಯ ಮಾತುಗಳು.

> ತಾನು ಪ್ರೀತಿಸಿದವನಿಂದಲೇ ದ್ವೇಷಕ್ಕೆ ಪಾತ್ರನಾಗುತ್ತ, ಸಹೋದರನಿಂದಲೇ ಮೂದಲಿಸಿಕೊಳ್ಳುತ್ತ ಗುಲಾಮನಂತೆ ನಿಯಂತ್ರಣಕ್ಕೆ ಒಳಪಡುತ್ತ, ತನ್ನ ತಪ್ಪುಗಳನ್ನು ಗಮನಿಸಿ ಪುಸ್ತಕಗಳಲ್ಲಿ ಬರೆದಿಟ್ಟು, ಕಲಿತು, ಬಾಯಿಪಾಠವಾಗಿ ತನ್ನ ಮುಖಕ್ಕೇ ಎರಚಿಕೊಳ್ಳುತ್ತ.... O I could weep
>
> My spirits from mine eyes.'
>
> ಇಷ್ಟಕ್ಕೆ ನಿಲ್ಲಿಸದೆಯೆ ಮತ್ತೂ ಭಾವಾವೇಶಗೊಂಡು 'ಇದೋ ನನ್ನ ಕಠಾರಿ
> ಇದೋ ನನ್ನ ತೆರೆದ ಎದೆ, ಕುಬೇರನ ಗಣಿಗಿಂತ ಪ್ರಶಸ್ತವಾದ ಹೃದಯವಿದೆ.
> ಬಂಗಾರಕ್ಕಿಂತ ಅಮೂಲ್ಯ ;
> ನೀನೊಬ್ಬ ರೋಮನನಾದರೆ, ಇದನ್ನು ತೆಗೆದುಕೋ
> ಬಂಗಾರ ನಿರಾಕರಿಸಿದ ನಾನು ನನ್ನ ಹೃದಯವನ್ನೇ ನೀಡುತ್ತೇನೆ.
> ಹೊಡಿ ಸೀಸರನನ್ನು ಹೊಡೆದ ಹಾಗೆ ; ನನಗೆ ಗೊತ್ತು
> ಅವನನ್ನು ನೀನು ಭಯಂಕರವಾಗಿ ದ್ವೇಷಿಸಿದಾಗಲೂ, ಕ್ಯಾಷಿಯಸನನ್ನು
> ಪ್ರೀತಿಸಿದ್ದಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದಿ.

ತಮ್ಮಿಬ್ಬರ ಮಧ್ಯದ ತರಂಗಮಾನದ ಅಂತರ ಎಂದೂ ಹತ್ತಿರವಾಗದಷ್ಟು ದೂರ ದೂರವಾದದ್ದು ಎಂದು ಬ್ರೂಟಸನ ಅಂತರಂಗಕ್ಕೆ ಹೊಳೆಯುತ್ತದೆ. ಈ ವ್ಯಾಜ್ಯವು ಕ್ಷುಲ್ಲಕ ಮಟ್ಟಕ್ಕೆ ಇಳಿಯುತ್ತಿದೆ ; ವೈಯಕ್ತಿಕವಾಗುತ್ತಿದೆ ; ಮೌಲ್ಯಗಳೆಲ್ಲ ನಶಿಸಿ ಅಲ್ಲಿ ಅಹಂಗಳೆರಡರ ಅಗ್ಗದ ಮುಖಾಮುಖಿಯಾಗುತ್ತಿದೆ. ಬ್ರೂಟಸನಿಗೆ ಮಾನಸಿಕವಾಗಿ ತೀರ ಆಯಾಸವಾಗಿದೆ. ಇದನ್ನು ಇಲ್ಲಿಗೆ ಸಾಕುಮಾಡಬೇಕು. ಒಡೆದು ವಿರುದ್ಧ ದಿಕ್ಕಿನಲ್ಲಿ ಹೊರಟುಹೋಗಿಬಿಡುವುದು ಸಾಧ್ಯವಿಲ್ಲದ ಮಾತು. ಇದನ್ನು ಒಪ್ಪಿಕೊಂಡ ಮೇಲೆ ವೃಥಾ ದಿಕ್ಕು ತಪ್ಪಿಸುತ್ತಿರುವ ಈ ವ್ಯಾಜ್ಯಕ್ಕೆ ಮಂಗಳ ಹಾಡಬೇಕು.

> 'ಕಠಾರಿಯನ್ನು ಒರೆಗೆ ಸೇರಿಸು.
> ತೋರಿದಾಗ ಸಿಟ್ಟು ಮಾಡಿಕೊ, ಸಿಟ್ಟು ಮನಬಂದಂತೆ ಸುಳಿದಾಡಲಿ
> ಇಷ್ಟಬಂದಂತೆ ಮಾಡು ; ನಿನ್ನ ಅಪಮಾನದ ಯತ್ನಗಳನ್ನೆಲ್ಲ
> ನಿನ್ನ ತಿಕ್ಕಲುತನವೆಂದು ತಿಳಿಯುತ್ತೇನೆ.

ಚಕಮಕ ಕಲ್ಲಿನಲ್ಲಿ ಅಡಗಿರುವ ಬೆಂಕಿಯಂತೆ ನನ್ನ ಸಿಟ್ಟು. ತಿಕ್ಕಿ ಉಜ್ಜಿದರೆ ಆಗೊಮ್ಮೆ ಈಗೊಮ್ಮೆ ಕಿಡಿ ಹಾರಿಸಿ ಮರುಕ್ಷಣ ತಣ್ಣಗಾಗುವಂತೆ – ಓ ಕ್ಯಾಷಿಯಸ್, ಕುರಿಮರಿಯಂಥವ ನೊಡನೆ ಸ್ನೇಹ ನಿನ್ನದು.' ಕ್ಯಾಷಿಯಸನು ಅದೇ ಆತ್ಮಮರುಕದ ಲಹರಿಯಲ್ಲಿದ್ದಾನೆ. ''ಕ್ಯಾಷಿಯಸನ ದುಃಖ ಸಂಕಟಗಳು ಅವನನ್ನು ಪೀಡಿಸುತ್ತಿರುವಾಗ್ಗೆ ಅವನು ಬ್ರೂಟಸನ ಕಣ್ಣಲ್ಲಿ ವಿನೋದದ ವಸ್ತುವಷ್ಟೇ ಆದನೆ ?''

''ಹಾಗೆ ನಾನು ಮಾತನಾಡಿದಾಗ ನನ್ನ ಮನಸ್ಸೂ ಕೆಟ್ಟಿತ್ತು ಬಿಡು'' ಎಂದು ಬ್ರೂಟಸನ ಮಾತಿಗೆ ಉತ್ತೇಜಿತನಾಗಿ ''ಹಾಗೆ ಒಪ್ಪಿಕೊಳ್ಳುವೆಯಾ ? ಹಾಗಾದರೆ ನಿನ್ನ ಕೈ ಕೊಡು'' ''ನನ್ನ ಹೃದಯವೂ ಕೂಡ'' ಎಂದು ಸೇರಿಸುತ್ತಾನೆ ಬ್ರೂಟಸ್.

''ನನ್ನ ತಾಯಿಯಿಂದ ಬಂದ ಬಳುವಳಿ – ಈ ನನ್ನ ದುಡುಕಿನ ಬುದ್ಧಿ. ಅಂಥ ಕ್ಷಣಗಳಲ್ಲಿ ನನ್ನನ್ನೇ ನಾನು ಮರೆಯುತ್ತೇನೆ. ಇಷ್ಟನ್ನೂ ನೀನು ಪ್ರೀತಿಯಿಂದ ಸಹಿಸಲಾರೆಯಾ ?'' ಬ್ರೂಟಸ್ ತಿಳಿಹಾಸ್ಯದಲ್ಲಿ ಹೇಳುತ್ತಾನೆ : ''ಆಯಿತು ಕ್ಯಾಷಿಯಸ್. ಇನ್ನು ಮುಂದೆ

ಬ್ರೂಟಸನೊಡನೆ ಅತಿವಿನಯ ಪ್ರದರ್ಶಿಸಿದಾಗಲೆಲ್ಲ
ನಿನ್ನ ತಾಯಿ ನಿನಗೆ ಛೀಮಾರಿ ಹಾಕಿ,
ನಿನ್ನಷ್ಟಕ್ಕೆ ಬಿಟ್ಟು ಬಿಡುತ್ತಾಳೆ ಅಂದುಕೊಳ್ಳುತ್ತೇನೆ.''

ಅನಿವಾರ್ಯಕಾರಣಗಳ ಒತ್ತಡದಲ್ಲಿ ಉಂಟಾದ ಶಾಂತಿ ಎಂದು ಕ್ಯಾಷಿಯಸನಿಗಲ್ಲ ದಿದ್ದರೂ ಬ್ರೂಟಸನಿಗೆ ಮನವರಿಕೆಯಾಗಿರಬೇಕು. ಹೀಗೆ ವಾತಾವರಣ ತಿಳಿಗೊಳ್ಳುತ್ತಿದ್ದಂತೆ ಬ್ರೂಟಸ್ ಮತ್ತು ಕ್ಯಾಷಿಯಸರ ಮಧ್ಯೆ ಮನಸ್ಸುಗಳು ಹುಳಿಯಾಗಿದೆಯೆಂದು ತಿಳಿದ ಕವಿಯೊಬ್ಬ ಬಾಗಿಲು ಕಾಯುತ್ತಿರುವ ಭಟರನ್ನು ನುಗ್ಗಿಕೊಂಡು ಬ್ರೂಟಸನ ಬಿಡಾರ ಪ್ರವೇಶಿಸುತ್ತಾನೆ. ಇಂಥ ಸಮಯದಲ್ಲಿ ಅವರಿಬ್ಬರನ್ನೇ ಬಿಡಬಾರದು. ''ಎಂಥ ನಾಚಿಕೆಗೇಡು – ಪ್ರೀತಿಸಿ ಸ್ನೇಹಿತರಾಗಿರಿ. ನಿಮಗಿಂತ ಹಿರಿಯ ನಾನು. ನನಗೆ ಗೊತ್ತು'' ಎಂದು ವಿವೇಕ ಹೇಳ ಬರುತ್ತಾನೆ. ಬ್ರೂಟಸನಿಗೆ 'ಈ ಕವಿಗಳಿಗೆ ಯುದ್ಧದ ಸಮಯದಲ್ಲೇನು ಕೆಲಸ ?' ಎಂದು ಅರ್ಥವಾಗುವುದಿಲ್ಲ. ಅವನನ್ನು ಇಬ್ಬರೂ ಸೇರಿ ಹೊರಹಾಕಿಸುತ್ತಾರೆ. ಹಾಗೆಯೇ ತಮ್ಮ ಸೇನಾಧಿಕಾರಿಗಳನ್ನು ಬರಹೇಳುವುದಕ್ಕೆ ಆಜ್ಞಾಪಿಸುತ್ತಾರೆ. ಮುಂದಿನ ಇಪ್ಪತ್ತು ಸಾಲುಗಳಲ್ಲಿ ಬ್ರೂಟಸನ ವ್ಯಕ್ತಿತ್ವದ ಮಟ್ಟ ಎಷ್ಟು ಎತ್ತರದ್ದು ಎಂಬ ಅರಿವು ನಮಗಾಗುತ್ತದೆ. ಹಾಗೆಯೇ ಈ ಹಿಂದಿನ ಕೆಲವು ಮಾತುಗಳಿಂದ ಪಠ್ಯದಲ್ಲಿ ಸ್ಪಷ್ಟ ಪುರಾವೆಗಳಿಲ್ಲದೆಯೂ ಬ್ರೂಟಸನ ಕುರಿತು ಹೇಳಿದ ಕೆಲವು ಮಾತುಗಳಿಗೆ ಸಮರ್ಥನೆ ದೊರಕುತ್ತದೆ. ಯಾವುದು ಈ ಮಾತುಗಳು – ಬ್ರೂಟಸ್ ತನ್ನ ಮಾತುಗಳಲ್ಲಿ ವಿಷಾದವನ್ನು ತುಂಬಿಸುತ್ತಾನೆ. ಬ್ರೂಟಸ್ ಈ ಸಂದರ್ಭದಲ್ಲಿ ಪ್ರಬುದ್ಧ ರೀತಿಯ ಸೆಣಸಾಟವನ್ನು ಕೈಬಿಟ್ಟು ಅನಿವಾರ್ಯಕ್ಕೆ ತಲೆಬಾಗಿಬಿಡುತ್ತಾನೆ ಮತ್ತು

ವಿಶೇಷವಾಗಿ ಅವನ ಶ್ರೀಮಂತವ್ಯಕ್ತಿತ್ವದ ಬಗ್ಗೆ ಪದೇ ಪದೇ ಸೂಚನೆಗಳನ್ನು ಕೂಡ ಗಮನಿಸಿದೆವು ಎಂಬುದು.

ಮುಂದಿನ ಇಪ್ಪತ್ತು ಸಾಲುಗಳಲ್ಲಿ ಅತ್ಯಂತ ಪರಿಣಾಮಕಾರಿ ಹಾಗೂ ತೀವ್ರವಾಗಿ ಮನಸ್ಸನ್ನು ಕಲಕುವ-ಭಾಗದ ವಿವರಣೆಯನ್ನು ಕಾಣುತ್ತೇವೆ.

ಮತ್ತೆ ಬ್ರೂಟಸ್ ಮತ್ತು ಕ್ಯಾಷಿಯಸ್ ಇಬ್ಬರೇ ಇದ್ದಾರೆ. ಬ್ರೂಟಸ್ ಲೂಸಿಯಸನಿಗೆ ಒಂದು ಪಾತ್ರೆ ವೈನ್ ತರಲಿಕ್ಕೆ ಹೇಳುತ್ತಾನೆ. ಕ್ಯಾಷಿಯಸ್ ಮಾತು ಶುರು ಮಾಡಿ ಬ್ರೂಟಸ್ ಇಷ್ಟು ಸಿಟ್ಟಾಗುವನೆಂದು ತಾನು ಭಾವಿಸಿರಲಿಲ್ಲ ಎಂದಾಗ ಬ್ರೂಟಸ್ ''ಕ್ಯಾಷಿಯಸ್, ತುಂಬ ದುಃಖಗಳ ಆಗರವಾಗಿದ್ದೇನೆ ನಾನು'' ಎಂದನ್ನುತ್ತಾನೆ. ಕ್ಯಾಷಿಯಸ್ ತಾತ್ವಿಕ ಸಮಾಧಾನ ನೀಡುವಂತೆ ''ಆಕಸ್ಮಾತ್ ಸಂಭವಿಸುವ ಕೇಡುಗಳಿಗೆ ಮನಸ್ಸು ಇಷ್ಟು ಕೆಡುವಂತಾದರೆ ನೀನು ನಿನ್ನ ತತ್ವಚಿಂತನೆಗಳಿಂದ ಏನೂ ಪಾಠ ಕಲಿತಿಲ್ಲ ಎಂದಾಯಿತು'' ಎಂದು ಉಪದೇಶದ ದನಿಯಲ್ಲಿ ಮಾತನಾಡುತ್ತಾನೆ. ಇದಕ್ಕೆ ಉತ್ತರವಾಗಿ ಬ್ರೂಟಸ್ ಆಡುವುದು ಎರಡು ಪುಟ್ಟ ವಾಕ್ಯಗಳು ''ಮತ್ಯಾವನೂ ತನ್ನ ದುಃಖಗಳನ್ನು ನನ್ನಷ್ಟು ಪ್ರಬುದ್ಧವಾಗಿ ಭರಿಸಲಾರ. ಪೋರ್ಶಿಯಾ ಇನ್ನಿಲ್ಲ'' ಅಷ್ಟೆ. ಕ್ಯಾಷಿಯಸನಂತೆ ನಾವು ಕೂಡ "Ha ? ಪೋರ್ಶಿಯಾ ?'' ಎಂದು ಅಚ್ಚರಿಯಲ್ಲಿ, ನಂಬಲಿಕ್ಕಾಗದ ಗೊಂದಲದ ಮನಃಸ್ಥಿತಿಯಲ್ಲಿ ಉದ್ಗರಿಸಬೇಕಷ್ಟೆ. ನಾಲ್ಕನೇ ಅಂಕದ ಎರಡು ಮತ್ತು ಮೂರನೇ ದೃಶ್ಯಗಳು ಹೆಚ್ಚು ಮಹತ್ವ ಪಡೆಯುವುದು ಇಲ್ಲಿ. ಕ್ಯಾಷಿಯಸನೊಡನೆ ಅಷ್ಟು ದೊಡ್ಡ ಕಲಹ ನಡೆದಿದೆ. ಮನಸ್ಸು ವ್ಯಗ್ರವಾಗಿದೆ. ಕ್ಯಾಷಿಯಸ್ ಸಾಕಷ್ಟು ಉದ್ರೇಕಗೊಳಿಸಿದ್ದಾನೆ. ತನ್ನ ಇಡೀ ಕನಸಿನ ಕ್ರಾಂತಿಯು ಛಿದ್ರಗೊಂಡಿದೆ. ಭವಿಷ್ಯ ಸಂಪೂರ್ಣ ಮಬ್ಬಾಗಿದೆ. ಮೌಲ್ಯಗಳನ್ನೆಲ್ಲ ಗಾಳಿಗೆ ತೂರಿ ಈಗ ತನ್ನ ನೆಚ್ಚಿನ, ಅಭಿಮಾನದ ಸಂಗಾತಿ ಕ್ಯಾಷಿಯಸ್ ಕೂಡ ದುರಾಸೆ, ಅಧಿಕಾರ ಲಾಲಸೆಗಳಲ್ಲಿ ಮುಳುಗಿದ್ದಾನೆ. ಇವೆಲ್ಲದರ ಮಧ್ಯದಲ್ಲಿ ಮನಸ್ಸನ್ನು ಹಿಂಡುವ ತನ್ನ ಮಡದಿಯ ಸಾವಿನ ಸುದ್ದಿ ದುಃಖ ಹಾಗೂ ಪಾಪಪ್ರಜ್ಞೆಗಳಲ್ಲಿ ಮುಳುಗಿಸಿಬಿಟ್ಟಿದೆ. ಬ್ರೂಟಸ್ ಒಬ್ಬ ಸಾಧಾರಣ ವ್ಯಕ್ತಿಯಾಗಿದ್ದರೆ, ಸ್ವವಿಚಾರಾಸಕ್ತನಾಗಿದ್ದಿದ್ದರೆ, ದುರಭಿಮಾನಿಯಾಗಿದ್ದಿದ್ದರೆ, ಈ ಇಡೀ ದೃಶ್ಯವನ್ನು ತನ್ನ ಸ್ವಂತ ನಷ್ಟ, ಸ್ವಂತ ದುಃಖ, ದುರಂತಗಳಿಂದ ತುಂಬಿದ ಒಂದು ಅದ್ಭುತ ಭಾವಾತಿರೇಕದ ಏಕಪಾತ್ರಾಭಿನಯವನ್ನು ಮಾಡಿಬಿಡುತ್ತಿದ್ದ. ಬಹುಶಃ ಇದಕ್ಕಾಗಿ ಯಾರೂ ಅವನನ್ನು ಈ ಸ್ಥಿತಿಯಲ್ಲಿ ದೂಷಿಸಲೂ ಸಾಧ್ಯವಾಗುತ್ತಿರಲಿಲ್ಲ. ಬ್ರೂಟಸನ ಸ್ಥಾನದಲ್ಲಿ ಕ್ಯಾಷಿಯಸನೇ ಇದ್ದಿದ್ದರೆ ಏನಾಗುತ್ತಿದ್ದಿತು ಎಂದು ನಾವು ಸುಲಭವಾಗಿ ಕಲ್ಪಿಸಿಕೊಳ್ಳಬಹುದು. ಆದರೆ ತನ್ನ ವೈಯಕ್ತಿಕ ದುಃಖವನ್ನು ಪಕ್ಕಕ್ಕೆ ಸರಿಸಿದ್ದಾನೆ. ಒಂದೇ ಒಂದು ಸೂಚನೆಯೂ ಕೊಡದ ಹಾಗೆ ತಡೆದುಕೊಂಡಿದ್ದಾನೆ. ತನಗಿಂತ ಮಿಗಿಲಾದ, ಶಾಶ್ವತವಾಗಿ ಉಳಿಯುವ ಮೌಲ್ಯಗಳ ಬಗ್ಗೆ ತನ್ನ

ಕಾಳಜಿ, ಕಳವಳಗಳನ್ನು ವ್ಯಕ್ತಪಡಿಸುತ್ತ ಹೋಗುತ್ತಾನೆ. ತಮ್ಮ ಕ್ರಾಂತಿಯ ಕಲ್ಪನೆಗಳನ್ನು ಕ್ಯಾಷಿಯಸನಿಗೆ ನೆನಪು ಮಾಡಿಕೊಡುತ್ತಾನೆ. ಸಾರ್ವಜನಿಕ ಜೀವನದಲ್ಲಿ ಹೊಣೆಗಾರಿಕೆಯ ಬಗ್ಗೆ ಮಾತನಾಡುತ್ತಾನೆ. ಬ್ರೂಟಸನ ಸಿಟ್ಟು ಕ್ರಿಯಾಶೀಲ ಸಿಟ್ಟು. ಅವನ ದುಃಖ ಇಡೀ ಒಂದು ವ್ಯವಸ್ಥೆಗೆ ಆಗುತ್ತಿರುವ ದುರ್ಗತಿಯ ಕುರಿತಾದ ವಿಷಾದ. ತಾನು ಮುಖ್ಯವಲ್ಲ. ತಮ್ಮೆಲ್ಲರ ಮಧ್ಯದ ಆದರ್ಶ, ಗುರಿ ಮುಖ್ಯ. ಇವುಗಳು ಮುತ್ಸದ್ದಿಯ ಲಕ್ಷಣ. ಇದು ಶ್ರೀಮಂತ ವ್ಯಕ್ತಿತ್ವದ ಅಭಿವ್ಯಕ್ತಿ. ಕ್ಯಾಷಿಯಸ್ ಯೋಧನಾಗಿ, ಸಂಗಾತಿಯಾಗಿ, ಕ್ರಾಂತಿಯಲ್ಲಿ ಒಬ್ಬ ಸಹೋದ್ಯೋಗಿಯಾಗಿ ಬಂದಾಗ ಅವನೊಡನೆ ವೈಯಕ್ತಿಕ ವಿಷಯವನ್ನು ಮಾತನಾಡುವುದಿಲ್ಲ. ಈಗ ವ್ಯಾಜ್ಯ ಮುಗಿದ ಮೇಲೆ, ಶಾಂತಿ ನೆಲಸಿದ ಮೇಲೆ ಕ್ಯಾಷಿಯಸ್ ತನ್ನ ಬಂಧು, ಸ್ನೇಹಿತ, ಈಗ ಅವನೊಡನೆ ತನ್ನ ವೈಯಕ್ತಿಕ ಸುಖದುಃಖಗಳನ್ನು ಹಂಚಿಕೊಳ್ಳಬಹುದು. ಹಂಚಿಕೊಳ್ಳುವ ರೀತಿಯಲ್ಲಿಯೂ ಅತಿ ನಾಟಕೀಯತೆಯನ್ನೂ, ಭಾವಾವೇಶದ ವರ್ತನೆಗಳನ್ನೂ ದೂರವಿಡಬೇಕು. 'No man bears sorrow better, Portia is dead' ಅಷ್ಟೆ. 'Ha ? Portia ?' ಎಂದು ನಂಬಲಾಗದೆ ತೊದಲಿದ ಕ್ಯಾಷಿಯಸನಿಗೆ 'She is dead' ಎಂದು ಮತ್ತೊಂದು ಸರಳ, ಸಂಕ್ಷಿಪ್ತ ವಾಕ್ಯ. ಕ್ಯಾಷಿಯಸನಿಗೆ ತತ್‌ಕ್ಷಣದಲ್ಲಿ ಕಳೆದ ಅರ್ಧಗಂಟೆಯಷ್ಟು ಹೊತ್ತು ತನ್ನೊಡನೆ ಮಾತನಾಡಿದ ಬ್ರೂಟಸ್, ತನ್ನಿಂದ ಸಾಕಷ್ಟು ತಾಳ್ಮೆ ಕಳೆದುಕೊಳ್ಳಬೇಕಾಗಿ ಬಂದ ಬ್ರೂಟಸ್, ತನಗೆ ಏನನ್ನೂ ಮಾಡದೆ ಸಹನೆಯಿಂದ ನಡೆದುಕೊಂಡುದರ ಬಗ್ಗೆ ಮೈ ನಡುಗಿಸುವ ರೀತಿಯಲ್ಲಿ ಅಚ್ಚರಿಯಾಗುತ್ತದೆ. "How escaped I killing, when I crossed you so?" ಬ್ರೂಟಸನನ್ನು ಹಿಮಾಲಯದ ಎತ್ತರಕ್ಕೆ ಕೊಂಡೊಯ್ದುದು, ಕ್ಯಾಷಿಯಸ್‌ನನ್ನು ಬೆಟ್ಟದ ತಪ್ಪಲಲ್ಲಿ ಏರಲಿಕ್ಕಾಗದ ಎತ್ತರದ ಬಗ್ಗೆ ಉದಾಸೀನ, ಸಿಟ್ಟುಗಳಲ್ಲಿ ಕಿರಲುತ್ತಿರುವಂತೆ ಕಾಣಿಸಿದುದು ಈ ಕಾರಣಕ್ಕಾಗಿಯೆ. ''ಹೇಗೆ ? ಯಾವ ರೋಗಕ್ಕೆ ತುತ್ತಾಗಿ ಸತ್ತಳು ?'' ಇದಕ್ಕೆ ಉತ್ತರ ಮತ್ತೂ ಅಷ್ಟು ನಮ್ಮನ್ನು ತಲ್ಲಣಗೊಳಿಸುವಂಥದು –

"Impatient of my absence
And grief that young Octavius with mark Antony
Have made themselves so strong ; for with her death
That tidings came. With this she fell distract,
And her attendants absent, swallowed fire.

ಒಂದೊಂದು ಸಾಲಿನಲ್ಲೂ ಈ ಇಡೀ ದುರಂತಕ್ಕೆ ತಾನೇ ಕಾರಣ ಎಂದು ಸ್ಪಷ್ಟವಾಗುತ್ತಿದೆ. ಅದನ್ನು ವಿವರಿಸುವ ರೀತಿಯಲ್ಲಿಯೂ ಪ್ರತಿಸಾಲೂ ತನ್ನನ್ನು ಚುಚ್ಚಬೇಕು - ಆ ರೀತಿಯಿದೆ. ''ನನ್ನ ಗೈರುಹಾಜರಿಯಿಂದ ಸಹನೆ ಕೆಳೆದುಕೊಂಡು ; ಆಕ್ಟೇವಿಯಸ್ ಮತ್ತು ಆಂಟನಿ ತನ್ನ ಗಂಡನ ವಿರುದ್ಧ ಶಕ್ತಸೈನ್ಯ ಕಟ್ಟುತ್ತಿದ್ದಾರೆಂದು ತಿಳಿದು-'' ಹಾಗೆ ನೋಡಹೋದರೆ ಈ ವಿಷಯ

ಬ್ರೂಟಸನಿಗೆ ತಿಳಿದದ್ದು ಹೆಂಡತಿಯ ಸಾವಿನ ಸುದ್ದಿಯ ಜೊತೆಗೇ. ಈ ಎರಡೂ ಅವಳ ಸ್ಥಿಮಿತವನ್ನು ಕೆಡಿಸಿ, ತನ್ನ ಚೇಟಿಯರು ಇಲ್ಲದಾಗ, ಬೆಂಕಿಯನ್ನೇ ನುಂಗಿ ಸತ್ತಳು. ಸಾವಿನ ರೀತಿ ಕೂಡ ಭಯಂಕರ. ಎರಡನೇ ಅಂಕದ ಮೊದಲ ದೃಶ್ಯದಲ್ಲಿ ಗಂಡನೊಡನೆ ತನ್ನ ಧೈರ್ಯ, ಸ್ಥೈರ್ಯಗಳ ಬಗ್ಗೆ ಮಾತನಾಡುತ್ತ ಅವಳು ಹೇಳಿದ್ದ ಮಾತು ನಮಗೆ ನೆನಪಾಗುತ್ತದೆ–'I have made strong proof of my constancy / Giving myself a voluntary wound / Here, in the thigh : ಅಷ್ಟೇ ದಿಟ್ಟ ರೀತಿಯಲ್ಲಿ ತನ್ನ ಸಾವನ್ನೂ ತಂದುಕೊಂಡಿದ್ದಾಳೆ – 'Swallowing fire'. ಬ್ರೂಟಸನಿಗೆ ಅಂದು ಕಾಡಿದ ಪ್ರಶ್ನೆ. ಇಂದು ಮತ್ತೂ ಗಾಢವಾಗಿ ಕಾಡುವ ಪ್ರಶ್ನೆ, ಬದುಕಿ ಉಳಿದಿರುವವರೆಗೆ ಕಾಡುತ್ತಲೇ ಹೋಗುವ ಪ್ರಶ್ನೆ – ಈ 'noble wife'ಗೆ ತಾನು 'worthy' ಆಗಿದ್ದೆನೆ? ದೇವರು ನನ್ನನ್ನು ಹರಸಿದನೆ? ಆದರೆ ತಾನು ಇಂದಿರುವ ಸ್ಥಿತಿಯಲ್ಲಿ ಉತ್ತರ ಹುಡುಕುವುದಕ್ಕೆ ಸಮಯವಿಲ್ಲ. ಎಂದೇ ಕ್ಯಾಷಿಯಸನಿಗೆ ಸ್ಪಷ್ಟವಾಗಿ ಹೇಳಿಬಿಡುತ್ತಾನೆ. 'Speak no more of her. Give me a bowl of wine / In this I bury all unkindness, Cassius'. ಯಾವ 'unkindness ?' ವಿಧಿಯದೋ ? ತನ್ನ ಹೆಂಡತಿಯ ಕುರಿತಾಗಿ ತಾನು ತೋರಿದ ನಿರ್ಲಕ್ಷ್ಯದ unkindness ಓ ? ಅಥವಾ ತನ್ನ ವಿಷಯದಲ್ಲಿಯೇ ತನ್ನ ಸುತ್ತಲವರ ನಿರ್ದಯವೋ ? 'unkindness'ಗೆ ಕ್ರೌರ್ಯವೆಂಬ ಅರ್ಥವೂ ಬರುತ್ತದೆ. ಈ ಒಂದು ಗುಟುಕಿನಲ್ಲಿ ಎಲ್ಲ ಕ್ರೌರ್ಯವನ್ನೂ ಮರೆಯಲು ಯತ್ನಿಸುತ್ತೇನೆ: ಬಿಡಿಸಲಾಗದ ಕಗ್ಗಂಟಿನ ಸಂದಿಗ್ಧದಲ್ಲಿ ತನ್ನ ವ್ಯಕ್ತಿತ್ವ ಸಿಲುಕಿರುವುದೂ ಒಂದು ರೀತಿಯ ನಿರ್ದಯತೆ, ಕ್ರೌರ್ಯ. ಆದರೆ ಈ ಕಗ್ಗಂಟಿನೊಡನೆ ಬದುಕುತ್ತ ಹೋಗ ಬೇಕಾದುದು ತನ್ನ ಮುಂದಿರುವ ಸವಾಲು. ಇದೇ ಮಾತುಗಳನ್ನು - ಅಂದರೆ ಹೆಂಡತಿಯ ಸಾವಿನ ಸುದ್ದಿಯನ್ನೂ - ಮೆಸೆಲಾ ಕೂಡ ತಂದಿದ್ದಾನೆ. ಸುದ್ದಿ ಬ್ರೂಟಸನ ಕಿವಿಗೆ ಇನ್ನೂ ಬಿದ್ದಿಲ್ಲವೆಂದು ಭಾವಿಸಿದ್ದಾನೆ. "ರೋಮನನ ಹಾಗೆ ನಾ ಹೇಳುವ ಸುದ್ದಿ ಕೇಳು. ವಿಚಿತ್ರ ರೀತಿಯಲ್ಲಿ ಅವಳು ಸತ್ತಳೆಂಬುದು ಖಂಡಿತ" ಎಂದನ್ನುತ್ತಾನೆ. ಬ್ರೂಟಸನ ಉತ್ತರ ನೋಡಿ :

> Why, farewell Portia, we must die, Messala
> With meditating that she must die once,
> I have the patience to endure it now'

ಇವು ಕೇವಲ ಪ್ರದರ್ಶನಕ್ಕೆ ಆಡಿದ ಮಾತುಗಳಲ್ಲ – ಪ್ರಬುದ್ಧವಾದ ಮಾತುಗಳು. ಮುಂದೆ ಏಳುವರ್ಷಗಳ ನಂತರ ರಚಿಸಿದ 'ಮ್ಯಾಕ್‌ಬೆತ್' ನಾಟಕದಲ್ಲಿ, ಮ್ಯಾಕ್‌ಬೆತ್ ತನ್ನ ಹೆಂಡತಿ ಸತ್ತ ಸುದ್ದಿ ಕೇಳಿದಾಗ ಆಡುವ ಮಾತುಗಳ ಧಾಟಿ, ಶೈಲಿಗಳ ಮುನ್ಸೂಚನೆಯಂತಿವೆ ಬ್ರೂಟಸನ ಈ ಮಾತುಗಳು. ಮ್ಯಾಕ್‌ಬೆತ್ ಆಡುವ ಮಾತುಗಳನ್ನು ಕುತೂಹಲಕ್ಕಾಗಿ ನೋಡೋಣ :

She should have died here after
There would have been a time for such a word....

ಬ್ರೂಟಸನ ಮಾತುಗಳಿಗಿಂತ ಹೆಚ್ಚು ಕ್ಲಿಷ್ಟ, ಸಂಕೀರ್ಣ. ಆದರೆ ಧ್ವನಿಯಲ್ಲಿ ಒಂದು ಸಾಮಾನ್ಯಾಂಶವಿರುವುದು ಅಷ್ಟೇ ಸ್ಪಷ್ಟ.

ಮುಂದೆ ಕೇವಲ ಯುದ್ಧದ ಮಾತುಗಳು. ಆಂಟನಿ ಮತ್ತು ಆಕ್ಟೇವಿಯಸ್ ನೂರು ಸೆನೆಟರುಗಳನ್ನು ಪಿತೂರಿಗಾರರೆಂದು ಗಲ್ಲಿಗೆ ಹಾಕಿದ್ದಾರೆ ಹಾಗೂ ಯುದ್ಧದ ತಯಾರಿಯಲ್ಲಿ ತೊಡಗಿದ್ದಾರೆ.

ಇಲ್ಲಿ ಈ ಸಭೆಯ ಮುಂದಿರುವ ಪ್ರಶ್ನೆಯೆಂದರೆ 'ಫಿಲಪಿಯತ್ತ ಸೈನ್ಯ ಕೊಂಡೊಯ್ಯು ವುದರ ಕುರಿತು. ನಾವಾಗಿ ಹೋಗುವುದೋ ಅಥವಾ ಶತ್ರುಸೈನ್ಯವೇ ಇಲ್ಲಿಯವರೆವಿಗೆ ನಡೆದು ಬರುವುದಕ್ಕೆ ಕಾಯುವುದೋ ?

ಕ್ಯಾಷಿಯಸನಿಗೆ ಫಿಲಿಪಿಗೆ ಹೋಗುವುದು ವಿವೇಕವಾಗಿ ಕಾಣುತ್ತಿಲ್ಲ. ನಾವು ಇಲ್ಲಿ ನಮ್ಮ ಬಿಡಾರಗಳಲ್ಲಿ ಸಜ್ಜಾಗಿ ಇರುವುದು ಲೇಸು. ನಮ್ಮ ಚೈತನ್ಯವನ್ನು ವ್ಯರ್ಥಗೊಳಿಸುವುದು ಬೇಡ. ಶತ್ರುವೇ ನಡೆದು ಬರಲಿ, ಆಯಾಸಗೊಳ್ಳಲಿ, ಅಷ್ಟು ಸಾಮರ್ಥ್ಯ ಕಳೆದುಕೊಳ್ಳಲಿ. ಬ್ರೂಟಸನ ವಾದ ಇದಕ್ಕೆ ವಿರುದ್ಧವಾದುದು. ಇಲ್ಲಿಂದ ಫಿಲಪಿಯವರೆಗಿನ ಮಧ್ಯದಲ್ಲಿರುವ ಜನಗಳೆಲ್ಲ ತಮ್ಮ ನಿಷ್ಠೆಯ ಬಗ್ಗೆ ಇನ್ನೂ ಗೊಂದಲದ ಸ್ಥಿತಿಯಲ್ಲಿದ್ದಾರೆ. ಶತ್ರುಗಳು ಇಲ್ಲಿಗೆ ನಡೆದು ಬರುವುದಕ್ಕೆ ಅವಕಾಶ ಮಾಡಿಕೊಟ್ಟರೆ ಮಾರ್ಗಮಧ್ಯದ ಎಲ್ಲರ ಬೆಂಬಲ, ನಿಷ್ಠೆಗಳನ್ನೂ ಅವರೇ ಗಳಿಸಿಕೊಳ್ಳುವುದಕ್ಕೆ ಆಸ್ಪದ ಮಾಡಿಕೊಟ್ಟಂತೆ. ಶತ್ರುಸೈನ್ಯ ದಿನೇ ದಿನೇ ವೃದ್ಧಿಗೊಳ್ಳುತ್ತದೆ.

There is a tide in the affairs of men,
Which taken at the flood, leads on to fortune ;
Omitted, all the voyage of their life
Is bound in shallows and in miseries
On such a full sea are we now afloat,
And we must take the current when it serves.

ಇಂಥ ಒಂದು ಸಂದರ್ಭ ಒದಗಿ ಬಂದಿದೆ ನಮಗೆ. ಈಗ ನಾವು ತಡಮಾಡಿದರೆ ಮುಂದೆ ಎಂದೂ ನಮ್ಮ ಉದ್ದೇಶಗಳು ಫಲಿಸುವುದಿಲ್ಲ. ಬ್ರೂಟಸ್ ಹೇಳಿದ ಮೇಲೆ ಆಯಿತು. ಅಂದೂ ಅಷ್ಟೆ, ಇಂದೂ ಅಷ್ಟೆ - ಅವನದೇ ಕೊನೆಯ ಮಾತು. ಎಲ್ಲರನ್ನೂ ಅವರವರ ಬಿಡಾರಕ್ಕೆ ಹೋಗಿ ಆದಷ್ಟು ವಿಶ್ರಾಂತಿ, ನಿದ್ರೆಗಳನ್ನು ಪಡೆದು ಮುಂಜಾನೆಗೆ ತಯಾರಾಗಿರುವಂತೆ ಆದೇಶಿಸಿ ಕಳಿಸಿ ಕೊಡುತ್ತಾನೆ. ''ಪ್ರತಿಕೂಲವಾಗಿ ಆರಂಭವಾದ ಸಂಜೆ ತೃಪ್ತಿಕರವಾಗಿ

ಮುಕ್ತಾಯವಾಯಿತು - ಮುಂದೆಂದೂ ಇಂಥದೊಂದು ದಿನ ಬರದಿರಲಿ'' ಎಂದು ಹಾರೈಸಿ ಕ್ಯಾಷಿಯಸನೂ ತೆರಳುತ್ತಾನೆ.

ಬ್ರೂಟಸನೂ ವಿಶ್ರಾಂತಿಗೆ ತೆರಳುವುದಕ್ಕೆ ಮುಂಚೆ ತನ್ನ ಸಹಚರರಾದ ವಾರೋ ಮತ್ತು ಕ್ಲಾಡಿಯಸರನ್ನು ಕರೆದು ತನ್ನ ಬಿಡಾರದ ಹತ್ತಿರವೇ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿ ಒಳಗೆ ಬರುತ್ತಾನೆ. ಬಿಡಾರದೊಳಗೆ ತನ್ನ ಆಪ್ತಸೇವಕ ಲೂಸಿಯಸನನ್ನು ತೀರ ತ್ರಾಸವಾಗದಿದ್ದರೆ ಅವನ ವಾದ್ಯದೊಡನೆ ಒಂದು ನುಡಿ ನುಡಿಸಲು ಕೇಳಿಕೊಳ್ಳುತ್ತಾನೆ. ಅವನ ಬದುಕಿನಲ್ಲಿ ಉಳಿದಿರುವ ಒಂದೇ ಬಹು ಆಪ್ತ ನಂಟು ಇದು. ಈ ಹುಡುಗನೊಬ್ಬನೊಡನೆ ತಾನು ಸಹಜವಾಗಿರ ಬಹುದು. 'If I do live / I will be good to thee' ಎಂದು ಹೇಳುವಷ್ಟು. ಅವನ ಮತ್ತು ತನ್ನ ಆಪ್ತತೆಯು ಬೆಲೆಯುಳ್ಳದ್ದೆಂದು ಪರಿಗಣಿಸಿದ್ದಾನೆ.

ವಾದ್ಯ ನುಡಿಸುತ್ತಲೇ ತೂಕಡಿಸಲು ಆರಂಭಿಸಿದ ಲೂಸಿಯಸನನ್ನು ನೋಡಿ ಅವನು ನಿರಾಳವಾಗಿ ನಿದ್ದೆ ಮಾಡಬಲ್ಲ ಸ್ಥಿತಿಯನ್ನು ಕೊಂಚ ಮತ್ಸರದಿಂದಲೇ ಅಭಿನಂದಿಸುತ್ತ ತನ್ನ ಪುಸ್ತಕವನ್ನು ಕೈಯಲ್ಲಿ ಹಿಡಿದು ಓದಲು ಆರಂಭಿಸುತ್ತಾನೆ.

ಉರಿಯುತ್ತಿರುವ ಪಂಜು ಸಾಕಷ್ಟು ಪ್ರಕಾಶಮಾನವಾಗಿಲ್ಲವೆಂದು ಅದನ್ನು ಸರಿಮಾಡ ಹೋದವನಿಗೆ ನೆರಳಲ್ಲಿ ಆಕೃತಿಯೊಂದು ಕಾಣುತ್ತದೆ. ಸೀಸರನ ಪ್ರೇತವೆಂದು ನಾಟಕಕಾರನೇ ಸೂಚಿಸಿಬಿಟ್ಟಿದ್ದಾನೆ. ಬ್ರೂಟಸನ ಬಾಯಲ್ಲಿ ಸೀಸರ್ ಎಂಬ ಮಾತು ಬರದಿದ್ದರೂ ತಾನು ಕಂಡದ್ದು ಅವನದೇ ಪ್ರೇತ ಎಂದು ಅವನ ಮುಂದಿನ ದೃಶ್ಯಗಳಲ್ಲಿ ಆಡುವ ಮಾತುಗಳಿಂದ ತಿಳಿಯುತ್ತದೆ.

> ''ಯಾರು ನೀನು ? ....ಇದೇನು ನನ್ನ ಕಣ್ಣಿನ ಮಂಪರೋ
>
> ಈ ಬಗೆಯ ಬೀಭತ್ಸ ಅತಿಮಾನುಷ ಆಕೃತಿಯನ್ನು ಸೃಷ್ಟಿಸುತ್ತಿರುವುದು ?
> ....ನನ್ನ ರಕ್ತ ತಣ್ಣಗಾಗಿಸಿ ನನ್ನ ಕೂದಲು ನಿಮಿರುವಂತೆ ಮಾಡುತ್ತಿರುವ
> ನೀನೇನು ದೇವರೋ, ದೈವಾಂಶರೂಪವೋ ಅಥವಾ ಭೂತ ಪ್ರೇತವೋ ?
> ಹೇಳು, ಯಾರು ನೀನು''

'ನಿನ್ನ ಅಶುಭಸೂಚಕ ಪ್ರೇತ :/

'ಇಲ್ಲಿಗೆ ಯಾಕೆ ಬಂದೆ' ಎಂದು ಕೇಳಿದ್ದಕ್ಕೆ ನಿನ್ನನ್ನು ಫಿಲಪಿಯಲ್ಲಿ ಸಂಧಿಸುತ್ತೇನೆ' ಎಂದು ಹೇಳಿ ಗಾಳಿಯಲ್ಲಿ ಕರಗಿಹೋಗುತ್ತದೆ.

ಬಹುಶಃ ಇಡೀ ನಾಟಕದಲ್ಲಿ ಬ್ರೂಟಸನನ್ನು ಅಸ್ಥಿರಗೊಳಿಸಿದ ಒಂದೇ ಸಂದರ್ಭ ಇದು ಎನ್ನಿಸುತ್ತದೆ. ಪ್ರೇತ ಮಾಯವಾದ ಗಳಿಗೆಯೇ ಲೂಸಿಯಸ್, ವಾರೋ, ಕ್ಲಾಡಿಯಸ್

ಎಲ್ಲರನ್ನೂ ಎಚ್ಚರಗೊಳಿಸಿ 'ಅವರಿಗೂ ಏನಾದರೂ ಕಂಡಿತೆ ?' ಎಂದು ಚಡಪಡಿಕೆಯಲ್ಲಿ ಕೇಳುತ್ತಾನೆ. ಈ ಆಕೃತಿ ಕಂಡದ್ದು ತನಗೆ ಮಾತ್ರ ಎಂದು ದೃಢಪಡುತ್ತದೆ. ಬಹುಶಃ ಬ್ರೂಟಸನಿಗೆ ಸೀಸರನ ಗುಂಗು ಹೋಗುವುದೇ ಇಲ್ಲ ಎಂಬುದಕ್ಕೆ ಈ ಸಣ್ಣ ದೃಶ್ಯ ಒಳ್ಳೆಯ ನಿದರ್ಶನವಾಗುತ್ತದೆ.

ಇಷ್ಟರೊಳಗಾಗಿ ರಾತ್ರಿ ಕಳೆದು ಮುಂಜಾವಿನ ಹೊತ್ತು ಆಗಿದೆ. ಕ್ಯಾಷಿಯಸನನ್ನು ಕರೆತರಲು ತನ್ನ ಸಹಚರರನ್ನು ಕಳಿಸಿ ಯುದ್ಧಕ್ಕೆ ಸನ್ನದ್ಧನಾಗುತ್ತಾನೆ.

ಐದನೆಯ ಅಂಕದ ಮೊದಲ ದೃಶ್ಯದ ಮೊದಲ ಭಾಗ ಆಕ್ಟೇವಿಯಸ್ ಮತ್ತು ಆಂಟನಿಯ ನಡುವಿನದು. ಆಂಟನಿ ಎಣಿಸಿದ್ದಂತೆ ಶತ್ರುಸೈನ್ಯವು ಬೆಟ್ಟವಿಳಿದು ಬರುವುದಿಲ್ಲ ಎಂದು ಭಾವಿಸಿದ್ದು ತಪ್ಪಾಯಿತು ಎಂದು ಆಕ್ಟೇವಿಯಸ್ ಹೇಳುತ್ತಾನೆ. ಆಂಟನಿ 'ಅವರು ಯಾಕೆ ಹಾಗೆ ಮಾಡಿದರೆಂದು ತನಗೆ ಗೊತ್ತು' ಎಂದು ಕಾರಣವನ್ನು ವಿವರಿಸುತ್ತಾನೆ. ಅಷ್ಟರಲ್ಲಿ ದೂತನೊಬ್ಬ ಬಂದು ಶತ್ರುಸೈನ್ಯ ಈಗಾಗಲೇ ಬಂದಿದ್ದು ತತ್‌ಕ್ಷಣವೇ ಏನನ್ನಾದರೂ ಮಾಡಲೇಬೇಕೆಂದು ಅವಸರಪಡಿಸುತ್ತಾನೆ. ಆಂಟನಿ ಆಕ್ಟೇವಿಯಸನಿಗೆ ಯುದ್ಧಮೈದಾನದ ಎಡಭಾಗದ ನಾಯಕತ್ವ ವನ್ನು ವಹಿಸಲು ಹೇಳಿದ್ದನ್ನು ಆಕ್ಟೇವಿಯಸ್ ಖಡಾಖಂಡಿತವಾಗಿ ಒಪ್ಪದೆ ನಿರಾಕರಿಸಿ, ತಾನು ಬಲಭಾಗದ ನಾಯಕತ್ವ ವಹಿಸುತ್ತೇನೆಂದು ಹೇಳುತ್ತಾನೆ. ಆಂಟನಿಯ ಪ್ರತಿಷ್ಠೆಗೆ ಪೆಟ್ಟು ಬಿದ್ದಿದೆ. 'ಇಂಥ ವಿಷಮಗಳಿಗೆಯಲ್ಲಿ ಹೀಗೇಕೆ ಎದುರುಮಾತನಾಡುತ್ತಿ ?' ಎಂದು ಕೇಳಿದ್ದಕ್ಕೆ ಆಕ್ಟೇವಿಯಸ್ 'ಎದುರುಮಾತನಾಡುವುದಿಲ್ಲ, ಆದರೆ ನಾನು ಮಾಡುವುದು ಹಾಗೆ' ಎಂದು ಅಷ್ಟೇ ಹಟದಲ್ಲಿ ಹೇಳುತ್ತಾನೆ. ಇಬ್ಬರ ಮಧ್ಯದ ಗುಟ್ಟಾದ ಅಸಹನೆ ಹಾಗೂ ಸ್ಪರ್ಧಾ ಮನೋಭಾವ ಸ್ಪಷ್ಟವಾಗಿ ಕಾಣುತ್ತದೆ ಇಲ್ಲಿ. ಯುದ್ಧ ರಣರಂಗದಲ್ಲಿಯಷ್ಟೇ ಅಲ್ಲ ರಾಜಕಾರಣದಲ್ಲಿ ಪ್ರತಿಯೊಬ್ಬರೂ ಪ್ರತಿಯೊಬ್ಬನ ವಿರುದ್ಧ ಒಂದು ಮಟ್ಟದಲ್ಲಿ ಯುದ್ಧವಾಡುತ್ತಲೇ ಇರುತ್ತಾರೆ.

ಈ ದೃಶ್ಯದ ಎರಡನೇ ಭಾಗದಲ್ಲಿ ಎರಡೂ ಸೈನ್ಯಗಳು ಮುಖಾಮುಖಿಯಾಗಿವೆ. ಬಾಣಗಳ ಸುರಿಮಳೆಯಾಗುವುದಕ್ಕೆ ಮುಂಚೆ ವಾಗ್ಬಾಣಗಳನ್ನು ಹರಿಸಬೇಕು. ಅಷ್ಟೇ ಚೂಪಿನ, ಮಾರಕ ಮಾತುಗಳು ; ದುರಭಿಮಾನದ ಮಾತುಗಳು ; ಪರಸ್ಪರರ ಅಹಂಗಳನ್ನು ಗುರಿಯಾಗಿಟ್ಟುಕೊಂಡು ಆಡಿದ ಮಾತುಗಳು. ಎದುರಾಳಿಗಳಿಗಿಂತ ಒಂದು ಪಟ್ಟು ಮೇಲುಗೈಯಾಗಿರುವ ಹವಣಿಕೆ. ನಮ್ಮದೇ ಕೊನೆಯ ಮಾತಾಗಬೇಕು ಎಂಬ ಹಟದಲ್ಲಿ ನಡೆಸಿದ ವಾಕ್ಚಾತುರ್ಯ ಸ್ಪರ್ಧೆ. ಆಂಟನಿ, ಆಕ್ಟೇವಿಯಸ್, ಕ್ಯಾಷಿಯಸ್ ಇವರುಗಳ ಜೊತೆ ಬ್ರೂಟಸನೂ ಸರಿಸಮನಾಗಿ, ಮಾತಿಗೆ ಮಾತು ಜೋಡಿಸುತ್ತ ವಿಚಿತ್ರಸುಖಪಡುತ್ತಾನೆ. ಅಷ್ಟೆಯೇ – ಕೊನೆಗೆ ತುದಿಘಟ್ಟಕ್ಕೆ ಬಂದಾಗ ಎಲ್ಲರೂ ಕೇವಲ ಎಲುಬು ಮಾಂಸದ

ಮನುಷ್ಯರಷ್ಟೇ. ಇವರುಗಳು ಆಡುವ ಈ ಚತುರೋಕ್ತಿಗಳು ಜಾಣತನದ್ದು ನಿಜ, ಒಂದಷ್ಟು ರಂಜನೆ ನೀಡುತ್ತದೆ ನಿಜ – ಆದರೆ ಕೊನೆಗೆ ಒಂದಷ್ಟು ಕಹಿಯನ್ನು ಉಳಿಸಿಹೋಗುವುದಂತೂ ಅಷ್ಟೇ ನಿಜ. ರೋಮ್, ಗಣತಂತ್ರ, ಸ್ವಾತಂತ್ರ್ಯ, ಕ್ರಾಂತಿ ಇಂಥವುಗಳು ಕಲ್ಪನೆಯಲ್ಲಿ ಮಾತ್ರ. ಸೀಸರನಂಥ ಒಬ್ಬ ವೈಭವೋಪೇತ ವ್ಯಕ್ತಿತ್ವದ ಪರಿಚಯದ ನಂತರ, ಉಳಿದದ್ದು ಇಷ್ಟೆ – ಈ ಪರಸ್ಪರ ನಿಂದನೆಗಳು, ಆರೋಪಗಳು, ಚಾಟೂಕ್ತಿಗಳು. ಈ ಭಾಗದ ಕುರಿತು ಮತ್ತಷ್ಟು ವಿವರಣೆ ಕೊಡಬೇಕಾದುದು ಅನಾವಶ್ಯಕ.

ಇನ್ನು ಯುದ್ಧ ಆರಂಭವಾಗಬೇಕಷ್ಟೆ.

ಕ್ಯಾಷಿಯಸ್ ಈಗ ತನ್ನ ಆಪ್ತನಾದ ಮೆಸೆಲಾನೊಡನೆ ಮಾತನಾಡುತ್ತಿದ್ದಾನೆ. ಮೊದಲ ಬಾರಿಗೆಂಬಂತೆ ಅವನ ಧ್ವನಿಯಲ್ಲಿ ದುಗುಡ ಕಾಣಿಸಿಕೊಂಡಿದೆ. ಆತಂಕ ಕಾಣುತ್ತಿದೆ. ಮನಸ್ಸು ಭಾರವಾಗಿರುವುದೂ ಗೊತ್ತಾಗುತ್ತದೆ.

> ಮೆಸೆಲಾ
> ಇಂದು ನಾನು ಹುಟ್ಟಿದ ದಿನ. ಈ ದಿನವೇ ಕ್ಯಾಷಿಯಸ್ ಜನ್ಮತಾಳಿದ್ದು.
> ನಿನ್ನ ಕೈ ಕೊಡು ಮೆಸೆಲಾ.
> ಪಾಂಪೆಯಂತೆ, ನಮ್ಮ ಸ್ವಾತಂತ್ರ್ಯಕ್ಕಾಗಿ, ನನ್ನ ಇಚ್ಛೆಗೆ ವಿರುದ್ಧವಾಗಿ
> ಈ ಒಂದು ಕಾಳಗವನ್ನು ಹೂಡಬೇಕಾಗಿದೆ.
> ಎಪಿಕ್ಯೂರನ ವಿಚಾರದಂತೆ ನಾನು ಕೂಡ ಎಂದೂ
> ಶಕುನಗಳಿಗೆ ಮಹತ್ವ ಕೊಟ್ಟವನಲ್ಲ.
> ಆದರೆ ಈಗ ನಾನು ಬದಲಾಗಿದ್ದೇನೆ.
> ಮುನ್ಸೂಚನೆಗಳಿಗೆ ಒಂದಷ್ಟು ಬೆಲೆ ಕೊಡುವಂತಾಗಿದ್ದೇನೆ.

ಹೀಗೆಂದು ತಾನು ಸಾರ್ಡಿಸ್‌ನಿಂದ ಹೊರಟಾಗ ''ಎರಡು ಬಲಿಷ್ಠ ಗರುಡಪಕ್ಷಿಗಳು ನಮ್ಮ ಧ್ವಜಕಂಭಗಳ ಮೇಲೆ ಬಂದು ಕೂತು ನಮ್ಮ ಸೈನಿಕರ ಕೈಗಳಿಂದ ಉಣಿಸು ತಿನ್ನುತ್ತಿದ್ದವು. ಇಲ್ಲಿ ಫಿಲಿಪಿಯವರೆವಿಗೆ ನಮ್ಮ ಜೊತೆಗೆ ಬಂದ ಈ ಪಕ್ಷಿಗಳು ಇಂದು ಬೆಳಗ್ಗೆ ಹಾರಿ ಹೊರಟು ಹೋದವು. ಈಗ ಆ ಗರುಡಪಕ್ಷಿಗಳ ಬದಲಾಗಿ ಕಾಗೆಗಳು, ಗಿಡುಗಗಳು, ಡೊಂಬಕಾಗೆಗಳು ನಮ್ಮ ತಲೆ ಮೇಲೆ ಹಾರುತ್ತಿವೆ. ಈ ಪಕ್ಷಿಗಳ ರೆಕ್ಕೆಗಳು ಹಾಸಿದ ಮೇಲ್ಹಾವಣಿ ಬಹು ವಿನಾಶಕಾರಿಯಾಗಿ ಕಾಣುತ್ತಿವೆ. ನಮ್ಮ ಸೈನ್ಯವು ಈ ಕಪ್ಪುನೆರಳಿನಲ್ಲಿ ಸಾಯುವುದಕ್ಕೆ ಸಿದ್ಧವಾಗಿ ಕಾಣುತ್ತಿವೆ'' ಎಂದು ವಿವರಿಸುತ್ತಾನೆ.

'ಹಾಗೆಲ್ಲ ಭಾವಿಸಬೇಡ' ಎಂದ ಗೆಳೆಯನಿಗೆ ''ಭಾಗಶಃ ಮಾತ್ರ ನಂಬುತ್ತೇನೆ. ಸದ್ಯದಲ್ಲಿ ನಾನು ಉತ್ಸುಕನಾಗಿದ್ದೇನೆ. ಎಲ್ಲ ಅಪಾಯಗಳನ್ನು ಗಟ್ಟಿ ಮನಸ್ಸಿನಿಂದ ಎದುರಿಸುತ್ತೇನೆ''

ಎಂದು ವಿಶ್ವಾಸದ ಮಾತನಾಡುತ್ತಾನೆ. ನಮ್ಮ ಪರಿಚಯದ ಕ್ಯಾಷಿಯಸ್‌ಗಿಂತ ಎಷ್ಟು ದೂರವಾಗಿದ್ದಾನೆ ಈ ಯುದ್ಧರಂಗದಲ್ಲಿ ಕಾಣುವ ಕ್ಯಾಷಿಯಸ್!

ಮುಂದೆ ನಡೆಯುವುದು ಒಂದು ಹೃದಯಸ್ಪರ್ಶಿ ದೃಶ್ಯ – ಕ್ಯಾಷಿಯಸ್ ಮತ್ತು ಬ್ರೂಟಸರ ಮಧ್ಯದ ಅಂತಿಮದೃಶ್ಯ. ಬಹುಶಃ ಇದೇ ಕೊನೆಯ ಭೇಟಿಯಾಗಬಹುದೆಂಬ ಅನುಮಾನ ಇಬ್ಬರನ್ನೂ ಕಾಡುತ್ತಿದೆ. ಆದ್ದರಿಂದ ಪರಸ್ಪರ ವಿದಾಯ ಹೇಳಿಕೊಳ್ಳಬೇಕು. ಅದಕ್ಕೂ ಮುಂಚೆ ಕ್ಯಾಷಿಯಸನ ಮನಸ್ಸಿನಲ್ಲಿರುವ ಒಂದು ಪ್ರಶ್ನೆಗೆ ಉತ್ತರ ಸಿಗಬೇಕು. 'ಆಕಸ್ಮಾತ್ ಈ ಕಾಳಗದಲ್ಲಿ ನಾವು ಸೋತರೆ ನಾವು ಇದೇ ಕೊನೆಯ ಬಾರಿ ಪರಸ್ಪರರನ್ನು ನೋಡುವುದು. ಹಾಗೊಮ್ಮೆ ಆದರೆ ನೀನು ಹೇಗೆ ಪ್ರತಿಕ್ರಿಯಿಸುತ್ತಿ ? ಏನು ಮಾಡುತ್ತೀ '' ಎಂದು ಕೇಳಿದ ಪ್ರಶ್ನೆಗೆ, ಬ್ರೂಟಸ್ 'ನಾನು ನಂಬುವ ವಿಚಾರಧಾರೆಯ ಪ್ರಕಾರ ಆತ್ಮಹತ್ಯೆಯನ್ನು ಮಾಡಿಕೊಳ್ಳಲು ನನ್ನ ಮನಸ್ಸು ಒಪ್ಪುವುದಿಲ್ಲ. ಮುಂದೆ ಆಗುವುದರ ಭಯದಲ್ಲಿ ನಮಗೆ ಕೊನೆ ತಂದುಕೊಳ್ಳುವುದು ಹೇಡಿತನವೆನಿಸುತ್ತದೆ. ನಮ್ಮನ್ನು ಕಾಯುವ ಅಲೌಕಿಕಶಕ್ತಿಗಳು ಏನನ್ನು ನಮಗಾಗಿ ಕಾದಿರಿಸಿದೆಯೋ ಅದನ್ನು ಎದುರುನೋಡುವ ಸಂಕಲ್ಪ ಮಾಡಿದ್ದೇನೆ' ಎನ್ನುತ್ತಾನೆ. ಕ್ಯಾಷಿಯಸನಿಗೆ ಇದು ವಿಚಿತ್ರವಾಗಿ ಕೇಳುತ್ತದೆ. ಅಂದರೆ ಸೋತು, ಆಂಟನಿಯ ಬಂದಿಯಾದರೆ ರೋಮಿನ ರಸ್ತೆಗಳಲ್ಲಿ ಪ್ರದರ್ಶನ ಮಾಡಿಸಿಕೊಳ್ಳಲು ಬ್ರೂಟಸ್ ಸಿದ್ಧನಾಗಿದ್ದಾನೆಯೆ ? ಇಲ್ಲ, ಖಂಡಿತ ಇಲ್ಲ. ರೋಮ್‌ನಗರಕ್ಕೆ ಬಂದಿಯಾಗಿ ಹಿಂತಿರುಗುತ್ತೇನೆಂದು ಭಾವಿಸಲೇಬೇಡ. ಬ್ರೂಟಸ್ ಅದಕ್ಕಿಂತ ಉದಾತ್ತಮನೋವೃತ್ತಿಯ ಮನುಷ್ಯ. ಆದರೆ ಇಷ್ಟು ನಿಜ .... This same day / Must end that work the Ides off March began" ಇಷ್ಟು ಮಾತ್ರ ಸತ್ಯ. ಇದೇ ಕೊನೆಯ ಭೇಟಿಯಾಗಬಹುದು. ಮತ್ತೆ ಭೇಟಿಯಾಗಲು ಸಾಧ್ಯವಾದರೆ ಸಂತೋಷ. ಆದರೆ ಇದೇ ಕೊನೆಯದಾದರೆ ಈ ವಿದಾಯ ತೃಪ್ತಿಕರವಾಯಿತು'' ಎಂದು ಬ್ರೂಟಸ್ ಸಮಾಧಾನ ಹೇಳುತ್ತಾನೆ.

ಈ ಎರಡು ರೀತಿಯ ಪ್ರತಿಕ್ರಿಯೆಗಳಲ್ಲಿ ವಿರೋಧಾಭಾಸ ಕಾಣುವ ಸಾಧ್ಯತೆ ಇದೆ. ಮೊದಲು ''ತಾನು ಆತ್ಮಹತ್ಯೆಯಲ್ಲಿ ನಂಬಿಕೆ ಉಳ್ಳವನಲ್ಲ...ಹಿರಿಯ ಶಕ್ತಿಗಳ ಇಂಗಿತಗಳಿಗೆ ತಲೆಬಾಗುತ್ತೇನೆ'' ಎಂದವನು ಮರುಕ್ಷಣದಲ್ಲಿ ಜೀವಂತವಾಗಿ ಉಳಿದರೆ ರೋಮಿಗೆ ಬಂದಿಯಾಗಂತೂ ಖಂಡಿತ ಹೋಗುವುದಿಲ್ಲ ಎನ್ನುತ್ತಾನೆ. ''ಇದು ರೋಮನ್ನರ ಲಕ್ಷಣವೇ ಅಲ್ಲ'' ಎಂಬುವಂತೆ ಮಾತನಾಡುತ್ತಾನೆ. ಮೇಲ್ನೋಟಕ್ಕೆ ಇದು ವಿರೋಧಾಭಾಸವಾಗಿ ಕಂಡರೂ ಬ್ರೂಟಸನ ಸಂಕೀರ್ಣ ವ್ಯಕ್ತಿತ್ವ ಮನಸ್ಸಿನಲ್ಲಿಟ್ಟುಕೊಂಡು ಯೋಚಿಸಿದಾಗ ಹಾಗೆ ಕಾಣುವುದಿಲ್ಲ. ಬ್ರೂಟಸ್ ವ್ಯಕ್ತಿಯೂ ಹೌದು, ರೋಮನ್ ಯೋಧನೂ ಹೌದು. ವ್ಯಕ್ತಿಯಾಗಿ, ಬದುಕು-ಸಾವುಗಳ ಕುರಿತು ಚಿಂತಿಸುವ ಒಬ್ಬ ಮನುಷ್ಯನಾಗಿ ಆತ್ಮಹತ್ಯೆಯ ಯೋಚನೆ ಪ್ರಕೃತಿವಿರೋಧ ಕ್ರಿಯೆಯಾಗಿ ಕಾಣುತ್ತದೆ. ಆದರೆ ರೋಮನ್‌ಯೋಧನಾಗಿ,

ನಾಯಕನಾಗಿ, ಆತ್ಮಗೌರವವನ್ನು ರಕ್ಷಿಸಿಕೊಳ್ಳುವ ಆದರ್ಶಪ್ರಾಯ ಕ್ರಾಂತಿಕಾರಿಯಾಗಿ ಸೋಲನ್ನು ಅನುಭವಿಸಿದ ಮೇಲೆ ರೋಮಿಗೆ ಗುಲಾಮನ ಹಾಗೆ ಹೋಗುವುದಕ್ಕೆ ಸರ್ವಥಾ ಒಪ್ಪುವುದಿಲ್ಲ. ಇಡೀ ನಾಟಕದಲ್ಲಿ ಅವನ ವ್ಯಕ್ತಿತ್ವದಲ್ಲಿ ಪ್ರಕೃತಿನಿಷ್ಠೆ, ರೋಮ್ ದೇಶಕ್ಕೆ ನಿಷ್ಠೆ ಇವುಗಳ ಕುರಿತಾದ ಸಂಘರ್ಷ ನಡೆದೇ ಇದೆ. ಆದ್ದರಿಂದಲೇ ಕೊನೆಯವರೆವಿಗೂ ಬ್ರೂಟಸ್ ಆಕರ್ಷಕವ್ಯಕ್ತಿಯಾಗಿ ಉಳಿಯುವುದು. ಮುಂದುವರೆದ ಭಾಗದಲ್ಲಿ ಬ್ರೂಟಸನ ಮತ್ತೂ ಒಂದು ಅದ್ಭುತ ಸಾಲು ಇದೆ. ಕ್ಯಾಷಿಯಸ್ ಬ್ರೂಟಸನ ಹಾರೈಕೆಗೆ, ವಿದಾಯಕ್ಕೆ ಅದೇ ರೀತಿಯ ನುಡಿಗಳನ್ನು ಆಡಿದ ಮೇಲೆ ಬ್ರೂಟಸ್ ಈ ಮಾತುಗಳನ್ನು ಆಡುತ್ತಾನೆ:

> O then lead on. O, that a man might know
> The end of this day's business ere it come !
> But it sufficeth that the day will end
> And then the end is known.

ಈ ನಾಲ್ಕು ಸಾಲುಗಳಲ್ಲಿಯೆ ಎರಡು ಭಾಗವಿದೆ. ಮೊದಲನೆಯ ಭಾಗದ ಮೊದಲ ಎರಡು ಸಾಲುಗಳಲ್ಲಿ "ಓ, ದಿನದ ವಹಿವಾಟುಗಳೆಲ್ಲ ಹೇಗೆ ಮುಗಿಯಬಹುದೆಂದು ಮನುಷ್ಯನಿಗೆ ಮೊದಲೇ ಗೊತ್ತಾಗುವಂತಿದ್ದರೆ". ಮತ್ತೆ ಆ ಸಾಲಿನ 'O' ಎಂಬುದು ಒಂದೇ ವೇಳೆಗೆ ಆಸೆಯ ಹಾಗೂ ಹತಾಶೆಯ ಉದ್ಗಾರ. ನಡೆಯುವುದೆಲ್ಲ ಹೇಗೆ ಮುಕ್ತಾಯವಾಗುತ್ತದೆಂಬ ಆತಂಕದಲ್ಲಿಯೇ ಸೋಲಿನ ಭಯ ಅಡಗಿದೆ ; ಬೇಗ ಮುಗಿಯಲಿ ಎಂಬ ಆಸೆಯಿದೆ. ಈ ಆಸೆ ಎರಡನೇ ಭಾಗದಲ್ಲಿ ಮತ್ತೂ ಸ್ಪಷ್ಟವಾಗುತ್ತದೆ. "ಆದರೆ ದಿನ ಮುಕ್ತಾಯವಾಗುತ್ತದೆ, ಆಗ ಎಂಥ ಕೊನೆ ತರುತ್ತದೆ ಎಂಬುದು ತಿಳಿಯುತ್ತದೆ ಎಂಬುದಷ್ಟಕ್ಕೇ ಸಮಾಧಾನಪಟ್ಟುಕೊಳ್ಳಬೇಕು". 'ಮುಕ್ತಾಯ' ಯಾವುದಕ್ಕೆ ? ವ್ಯಕ್ತಿಗೋ ? ಅಥವಾ ವ್ಯಕ್ತಿ ಆರಂಭಿಸಿದ ರಾಜಕೀಯ ಪ್ರಕ್ರಿಯೆಗೋ ? ವ್ಯಕ್ತಿಗೆ 'ಮುಕ್ತಾಯ' ತರುವುದರಿಂದ ಅಥವಾ ವ್ಯಕ್ತಿಗೆ ಮಾತ್ರ ಮುಕ್ತಾಯವನ್ನೂ ಆಶಿಸುವುದರಿಂದ ಪ್ರಕ್ರಿಯೆಗೆ ಏನೂ ಪ್ರಯೋಜನವಿಲ್ಲ. ತನ್ನ ಮುಕ್ತಾಯದ ರೀತಿಗಾಗಿ ಕಾಯುತ್ತಿರುವ ವ್ಯಕ್ತಿ ಒಂದು ದೃಷ್ಟಿಯಲ್ಲಿ ಸ್ವಾರ್ಥಿಯಾಗಿ ಕಂಡುಬಿಡುತ್ತಾನೆ. 'ದಿನ ಮುಗಿಯುತ್ತಿದ್ದಂತೆ ಕೊನೆಯ ರೀತಿಯೂ ತಿಳಿಯುತ್ತದೆ. ಅದೇ ಸಮಾಧಾನದ ವಿಷಯ' ಅಂದರೆ ವ್ಯಕ್ತಿಗೆ ತಾನು ಆರಂಭಿಸಿದ, ಇಡೀ ದೇಶವನ್ನೇ ಪ್ರಕ್ಷುಬ್ಧಸ್ಥಿತಿಗೆ ತಳ್ಳಿದ ಚಳವಳಿಯ ಮುಕ್ತಾಯದ ಕುರಿತಾದ ಕಳಕಳಿ ಇಲ್ಲ ಎಂದಾಯಿತು. ಅದಕ್ಕಾಗಿಯೇ ಹತಾಶ ಮನಃಸ್ಥಿತಿಯ ಉದ್ಗಾರ ಎಂದು ಈ ಮಾತುಗಳನ್ನು ವರ್ಣಿಸಿದುದು. ಮನುಷ್ಯನ ದೇಹಕ್ಕೆ, ಅದಕ್ಕೂ ಹೆಚ್ಚಿಗೆ ಮನಸ್ಸಿಗೆ, ಕನಸು ಕಾಣುವ ಚೈತನ್ಯಕ್ಕೆ ಅಗಾಧವಾಗಿ ಆಯಾಸವಾಗಿ ಬಿಡುತ್ತದೆಯೆ? ಬ್ರೂಟಸನಿಗೂ ಕೂಡ ? ಬಹುಶಃ ದುರಂತ ಇರುವುದು ಇಲ್ಲಿ. ಅಮೂರ್ತಗಳ ಚಿಂತೆ ಹಿಂದಕ್ಕೆ ಸರಿದು ಈ ಮೂರ್ತ ವ್ಯಕ್ತಿತ್ವದ ಸದ್ಯದ ಹಿಂಸೆ ಕೊನೆಗೊಂಡರೆ ಸಾಕು, ಇದೇ ದುರಂತದ ಸ್ಥಿತಿ. ಈ ಬಗೆಯ ಭಾವನೆ ಆಂಟನಿಗೆ ಈ ಸಂದರ್ಭದಲ್ಲಿ ಖಂಡಿತ

ಬರಲಿಕ್ಕಿಲ್ಲ. ವಿಜಯದ ವಾಸನೆ ಮೂಗಿಗೆ ತಾಗಿದವನು ದಿನದ ಕೊನೆ ತರಬಹುದಾದ ಮುಕ್ತಾಯದ ರೀತಿಗಾಗಿ ಹಲುಬುವುದಿಲ್ಲ.

ಯುದ್ಧ ಆರಂಭವಾಗುತ್ತದೆ. ಕ್ಯಾಷಿಯಸನ ಕಡೆಯವರು ನಾಯಕನನ್ನು ತೊರೆದು ಹೋಗುತ್ತಿದ್ದಾರೆ. ಅಂಥವನೊಬ್ಬನನ್ನು ಕ್ಯಾಷಿಯಸನೇ ಕೊಂದಿದ್ದಾನೆ. ಕ್ಯಾಷಿಯಸ್ ಆಂಟನಿಯ ಪಡೆಗಳಿಂದ ಸೋಲು ಅನುಭವಿಸುತ್ತಿದ್ದಾನೆ. ಬ್ರೂಟಸ್ ಆಕ್ಟೇವಿಯಸನ ವಿರುದ್ಧ ಒಂದಷ್ಟೇ ಮೇಲುಗೈ ಗಳಿಸಿದ ಹಾಗೆ ಕಾಣುತ್ತಿದೆ. ದೂರದಲ್ಲಿ ಕ್ಯಾಷಿಯಸನ ಡೇರೆಗಳಿಗೆ ಬೆಂಕಿಬಿದ್ದಂತೆ ಕಾಣುತ್ತಿದೆ. ತನ್ನ ಆಪ್ತರಲ್ಲೊಬ್ಬನಾದ ಟಿಟನಿಯಸನನ್ನು ಆ ದೂರದ ದೃಶ್ಯದ ವಿವರಗಳೇನೆಂದು ತಿಳಿದುಬರಲು ಕಳಿಸುತ್ತಾನೆ. ತನ್ನ ಇನ್ನೊಬ್ಬ ಸಹಚರ ಪಿಂಡಾರಸನನ್ನು ಗುಡ್ಡ ಹತ್ತಿ ಇಲ್ಲಿಂದಲೇ ಏನು ಕಾಣುತ್ತದೆ ಅದನ್ನು ಬಂದು ಹೇಳು ಎಂದು ಕಳಿಸಿ ರಂಗದ ಮೇಲೆ ಒಬ್ಬನೇ ಉಳಿಯುತ್ತಾನೆ. ಪುನಃ ತನ್ನ ಜನ್ಮದಿನದ ನೆನಪಾಗುತ್ತದೆ. ''ನನ್ನ ಬದುಕು ಆರಂಭವಾದಂದೇ ನನ್ನ ಮುಕ್ತಾಯವಾಗುತ್ತದೆ. ತನ್ನ ಆರಂಭಕ್ಕೆ ನನ್ನ ಬದುಕು ಮತ್ತೆ ಬಂದು ಸೇರಿದೆ'' ಮನುಷ್ಯನ ವ್ಯಂಗ್ಯ, ಕಟಕಿ, ಅಸೂಯೆ, ಶಬ್ದದ ಕುರಿತು ತಿರಸ್ಕಾರ, ಅಸಹನೆಗಳೆಲ್ಲ ಕೊನೆಯ ಆತ್ಮಮರುಕದಲ್ಲಿ ಮುಕ್ತಾಯವಾಗಬೇಕೊ ಏನೋ ? ಕ್ಯಾಷಿಯಸನ ಬಗ್ಗೆ ಎಷ್ಟೇ ನಮ್ಮ ಅಸಮಾಧಾನಗಳಿದ್ದರೂ ಈ ಕ್ಷಣದಲ್ಲಿ ಅವನ ಕುರಿತಾಗಿ ಮರುಕಪಡುವುದಂತೂ ಖಂಡಿತ. ಪಿಂಡಾರಸ್ ಗುಡ್ಡವಿಳಿದು ಬಂದು ತಾನು ನೋಡಿದ ದೃಶ್ಯ ತೀರ ಭಯಂಕರವೆಂದು ಹೇಳಿ ''ಟಿಟನಿಯಸನನ್ನು ಸುತ್ತುವರಿದಿದ್ದಾರೆ, ಅವನು ಶತ್ರುಗಳಿಗೆ ಸೆರೆಯಾಗಿದ್ದಾನೆ'' ಎಂದು ಕ್ಯಾಷಿಯಸನನ್ನೂ ಮತ್ತೂ ಅಷ್ಟು ಧೃತಿಗೆಡಿಸುತ್ತಾನೆ. ನಿರ್ಧಾರದ ಸಮಯ ಬಂದ ಹಾಗಾಯಿತು. ಇನ್ನು ಕಾಯುವುದು ವ್ಯರ್ಥ. ಒಮ್ಮೆ ಪಿಂಡಾರಸನನ್ನು ಕ್ಯಾಷಿಯಸ್ ಬಂಧ ವಿಮುಕ್ತಗೊಳಿಸಿ ಅವನಿಂದ ಒಂದು ವಚನವನ್ನು ಪಡೆದಿದ್ದ ತಾನು. ಯಾವಾಗಲಾದರೂ ಪಿಂಡಾರಸನ ಸೇವೆ ತನಗೆ ಅವಶ್ಯವಾದರೆ ಅವನು ಪ್ರಶ್ನೆಯೇ ಮಾಡದೆ ತನ್ನ ಅಣತಿಯನ್ನು ಅನುಸರಿಸಬೇಕು ಎಂದು. ಈಗ ಆ ಕ್ಷಣ ಬಂದಿದೆ. ಪಿಂಡಾರಸನಿಗೆ ಕಠಾರಿಯೊಂದನ್ನು ನೀಡಿ ''ನಾನು ಮುಖ ಮುಚ್ಚಿಕೊಂಡ ಗಳಿಗೆಯಲ್ಲಿ ನನ್ನನ್ನು ಇರಿದು ಕೊಲ್ಲು'' ಎಂದು ಆಜ್ಞಾಪಿಸುತ್ತಾನೆ. ಪಿಂಡಾರಸ್ ಅದೇ ರೀತಿ ಮಾಡಿದ ಕೂಡಲೆ "Caesar, thou art revenged / Even with the sword that killed thee" ಎಂದು ಉಸುರಿ ಕಣ್ಣು ಮುಚ್ಚುತ್ತಾನೆ.

ಆದರೆ ಅಲ್ಲಿ ದೂರದಲ್ಲಿ ಕ್ಯಾಷಿಯಸನ ಡೇರೆಗಳ ಬಳಿ ನಡೆದದ್ದೇ ಬೇರೆ-ಬ್ರೂಟಸನ ಸೈನ್ಯ ಶತ್ರುಸೈನ್ಯವನ್ನು ಹಿಂದಕ್ಕಟ್ಟಿ ವಿಜಯೋತ್ಸಾಹದಲ್ಲಿ ಘೋಷಣೆಗಳನ್ನು ಕೂಗುತ್ತಿದ್ದು, ಟಿಟನಿಯಸ್ ಅಲ್ಲಿಗೆ ಬಂದ ಕೂಡಲೇ ವೀರೋಚಿತವಾಗಿ ಸ್ವಾಗತಿಸಿ ಕ್ಯಾಷಿಯಸನಿಗೆ ನೀಡಬೇಕೆಂದು ಪುಷ್ಪಕಿರೀಟವನ್ನು ನೀಡಿದ್ದಾರೆ. ದುರದುಷ್ಟದ ಸಂದರ್ಭಗಳಲ್ಲಿ ಎಲ್ಲವೂ ನಿರಾಶಾದಾಯಕವಾಗಿ ಕಾಣುತ್ತದೆ. ಇಲ್ಲಿಯೂ ಅಷ್ಟೆ ಮೆಸೆಲಾನನ್ನು ಅಲ್ಲಿಂದ ಕಳಿಸಿಕೊಟ್ಟು

ಕ್ಯಾಷಿಯಸನಿಗೆ ತುಂಬ ಆಪ್ತನಾಗಿದ್ದ ಟಿಟನಿಯಸ್ ಬದುಕಿ ಉಳಿಯಲು ಇಚ್ಛಿಸದೆ ತಾನು ಕೂಡ ಇರಿದುಕೊಂಡು ಸಾಯುತ್ತಾನೆ.

ಸುದ್ದಿ ತಿಳಿದ ಕೂಡಲೆ ಬ್ರೂಟಸ್ ಆ ಸ್ಥಳಕ್ಕೆ ಆಗಮಿಸಿದ್ದಾನೆ. ಬಂದು ಅವನು ಆಡುವ ಮೊದಲ ಮಾತೇ ಅರ್ಥಗರ್ಭಿತವಾಗಿದೆ. "O Julias Caesar, thou art mighty yet ! / Thy spirits walk abroad, and turns our swords / In our own proper entrails".

''ಕ್ಯಾಷಿಯಸನಿಗೆ, ಟಿಟನಿಯಸನಿಗೆ ಸೂಕ್ತಕಾಲದಲ್ಲಿ, ಸೂಕ್ತರೀತಿ ತನ್ನ ಸಂತಾಪ ವ್ಯಕ್ತಪಡಿಸುತ್ತೇನೆ. ನಿಮ್ಮಂಥ ಮತ್ತಿಬ್ಬರು ರೋಮನರು ಸಿಗುವುದು ಕಷ್ಟ. ನಾನು ಹರಿಸುತ್ತಿರುವ ಕಣ್ಣೀರಿಗಿಂತ ಹೆಚ್ಚಿಗೆ ಈ ಗೆಳೆಯರಿಗೆ ನಾನು ಋಣಿಯಾಗಿದ್ದೇನೆ.''

ಯುದ್ಧ ಮುಂದುವರೆಯಬೇಕು. ಮುಂದುವರೆದಂತೆ ಬ್ರೂಟಸನ ಪಡೆಗಳಿಗೆ ಎಲ್ಲ ಕಡೆಯಿಂದಲೂ ಸೋಲುಂಟಾಗುತ್ತಿದೆ. ಅವನ ಮುಖ್ಯ ಯೋಧರುಗಳು ಸೆರೆಯಾಗುತ್ತಿದ್ದಾರೆ.

ಬ್ರೂಟಸನಿಗೆ ಈಗ ಸಂಪೂರ್ಣ ಮನವರಿಕೆಯಾಗಿದೆ. ಸೀಸರನ ಪ್ರೇತ ಮತ್ತೆ ಇಲ್ಲಿ ಫಿಲಪಿಯಲ್ಲಿ ಕಾಣಿಸಿಕೊಂಡಿದೆ. 'I know my hour is come' ಶತ್ರುಗಳು ನಮ್ಮನ್ನು ಹಳ್ಳದತ್ತ ದಬ್ಬಿಕೊಂಡು ಬಂದಿದ್ದಾರೆ. ಅವರೇ ನಮ್ಮನ್ನು ತಳ್ಳುವುದಕ್ಕೆ ಮುಂಚೆ ನಾವೇ ಬಿದ್ದುಬಿಡುವುದು ಲೇಸು. ಮತ್ತೆ ಎಚ್ಚರಿಕೆಯ ಕೂಗುಗಳು. ಬ್ರೂಟಸನೂ ಕೂಡ ತನ್ನ ನಿರ್ಧಾರ ಮಾಡಿಯಾಗಿದೆ. ತನ್ನ ಗೆಳೆಯರಿಗೆ ತನ್ನ ಕೊನೆಯ ವಿದಾಯ ಹೇಳುತ್ತಾನೆ.

"Countrymen,
My heart doth joy that yet in all my life
I found no man but he was true to me

ಆಕ್ಟೇವಿಯಸ್ ಸೀಸರ್ ಮತ್ತು ಮಾರ್ಕ್ಆಂಟನಿ ಸಾಧಿಸುವ ವಿಕ್ರಮವನ್ನು ನಾನು ಸಾಧಿಸಿದ್ದೇನೆ. ನಿಮಗೆಲ್ಲ ಕೊನೆಯ ವಿದಾಯ. ತನ್ನ ಬದುಕಿನ ಚರಿತ್ರೆ ಉಸುರಿ ಮುಗಿದಿದೆ ಈ ನಾಲಗೆಗೆ, night hangs upon mine eyes ; my bones would rest, that have but laboured to attain this hour" 'Fly, my lord, fly' ಎಂದು ಪುನಃ ಬಂದ ಎಚ್ಚರಿಕೆಯ ಕೂಗುಗಳಿಗೆ 'Hence, I will follow' ಎಂದು ಎಲ್ಲರನ್ನೂ ಕಳಿಸಿ, ತನ್ನ ಬಹು ಆಪ್ತ ಸಹಚರ ಸ್ಟ್ರಾಟೋನನ್ನು ಮಾತ್ರ ಉಳಿಸಿಕೊಳ್ಳುತ್ತಾನೆ. 'ಕಠಾರಿಯನ್ನು ಹಿಡಿದು ನಿನ್ನ ಮುಖವನ್ನು ಅತ್ತ ತಿರುಗಿಸಿಕೋ' ಎಂದು ವಿನಂತಿಸಿಕೊಂಡು ಅವನು ಹಾಗೆ ಹಿಡಿದಾಗ ದೂರದಿಂದ ಓಡಿಬಂದು ಕಠಾರಿಯನ್ನು ತನ್ನ ಮೈಯಲ್ಲಿ ಹೂಗಿಸಿಕೊಂಡು "Farewell Strato, Caesar, now be still ; / I killed not thee with half so good a will" ಎಂದು ಕೊನೆಯ ಮಾತುಗಳನ್ನು ಆಡಿ ಸಾಯುತ್ತಾನೆ.

ಗೆದ್ದ ಸಂಭ್ರಮದಲ್ಲಿರುವ ಆಕ್ಟೇವಿಯಸ್ ಮತ್ತು ಆಂಟನಿ ಇಬ್ಬರೂ ಕೇಳುವುದು ಬ್ರೂಟಸನ ಸಾವಿನ ಸುದ್ದಿ, ಕಾಣುವುದು ಬ್ರೂಟಸನ ಶವ.

ಆಂಟನಿ ಇಡೀ ನಾಟಕದಲ್ಲಿ ಅತ್ಯಂತ ಪ್ರಾಮಾಣಿಕ ಮಾತುಗಳನ್ನು ಬ್ರೂಟಸನ ಈ ಅಂತ್ಯವನ್ನು ನೋಡಿ ಆಡುತ್ತಾನೆ.

"This was the noblest Roman of them all.
All the conspirators save only he
Did that they did in envy of great Caesar ;
He only, in a general honest thought
And common good to all, made one of them
His life was gentle, and the elements
So mixed in him, that Nature might stand up
And say to all the world, 'This was a man"

ಬ್ರೂಟಸ್ 'noblest Roman' ಆಗಿದ್ದುದಕ್ಕಾಗಿಯೇ, ಸೀಸರನನ್ನು ಯಾವ ಅಸೂಯೆ, ಸ್ವಾರ್ಥಕಾರಣಗಳಿಗಾಗಿ ಕೊಲ್ಲದಿದ್ದುಕ್ಕಾಗಿಯೇ, ಅವನ ಮನಸ್ಸಿನಲ್ಲಿ ಯಾವಾಗಲೂ 'general honest thought' ಇದ್ದುದರಿಂದಲೇ, ಎಲ್ಲರ 'common good' ಮಾತ್ರ ಅವನ ಕಳಕಳಿಯಾಗಿತ್ತಾದ್ದರಿಂದಲೇ, 'gentle' ಮನುಷ್ಯನಾದ ಕಾರಣಕ್ಕಾಗಿಯೇ, ಆಂಟನಿಯ ಕಣ್ಣಿನಲ್ಲಿ – ರಾಜಕಾರಣದ ದೃಷ್ಟಿಯಿಂದ – ಬ್ರೂಟಸ್ ಅತ್ಯಂತ ಅಪಾಯಕಾರಿ ಮನುಷ್ಯ. ಆದರೆ ಈಗ ಸಾವಿನಿಂದ ಅವನ ಅಪಾಯ ಪರಿಹಾರವಾದ ಮೇಲೆ ತಾನು ಪ್ರಾಮಾಣಿಕವಾಗಿ, ಹೃತ್ಪೂರ್ವಕವಾಗಿ ಅವನ ಬಗ್ಗೆ ಎಂದಿನಿಂದಲೂ ಹೊಂದಿದ್ದ ಗೌರವ, ಅಭಿಮಾನಗಳನ್ನು ವ್ಯಕ್ತಪಡಿಸಬಹುದು. ಈಗ ತಾನೂ ಆಕ್ಟೇವಿಯಸನೂ ಸೇರಿ ಬ್ರೂಟಸನಿಗೆ ಸಕಲ ರಾಜ ಮರ್ಯಾದೆಗಳನ್ನೂ, ಸರಕಾರೀ ಗೌರವಗಳನ್ನೂ ಪ್ರದರ್ಶಿಸಬಹುದು.

ಕ್ರಾಂತಿಯೆಂದು ತಿಳಿದು ಪಿತೂರಿಗೆ ತನ್ನನ್ನು ತಾನು ಒಪ್ಪಿಸಿಕೊಂಡ ಬ್ರೂಟಸ್ ಆರಂಭಿಸಿದ 'mischief' ಆಂಟನಿಯ ಚಾಣಾಕ್ಷತನದಿಂದ ಮತ್ತೂ ಬೃಹದಾಕಾರವಾಗಿ ಬೆಳೆದ 'mischief' ಕೊನೆಗೆ ಆಹುತಿ ತೆಗೆದುಕೊಂಡದ್ದು ವ್ಯಕ್ತಿಗಳನ್ನಲ್ಲ – ಮೌಲ್ಯಗಳನ್ನು. ಸೀಸರನ ಶ್ರೀಮಂತ ಮನಸ್ಸು, ಬ್ರೂಟಸನ ಉದಾತ್ತಜೀವನಾದರ್ಶಗಳು ಇನ್ನು ಇಲ್ಲಿ ಸಾಧ್ಯವಿಲ್ಲ. ಆಕ್ಟೇವಿಯಸ್ ಮತ್ತು ಆಂಟನಿಗಳಂಥ 'ಸಮರ್ಥ' ರಾಜಕಾರಣಿಗಳ ಯುಗ ಮಾತ್ರ ಉದ್ಘಾಟನೆಯಾಯಿತು ಅಷ್ಟೆ. ಇದರ ಪರಾಕಾಷ್ಠೆಯ ಸ್ವರೂಪವನ್ನು ನೋಡಲು ನಾವು 'ಆಂಟನಿ ಮತ್ತು ಕ್ಲಿಯೋಪಾತ್ರ' ನಾಟಕದವರೆವಿಗೆ ಕಾಯಬೇಕು.

೯೩

ಅಥೆಲೋ

ಅಥೆಲೋ

ನಾಟಕದ ಆರಂಭದ ವೇಳೆಗೇ ಅಥೆಲೋ- ಡೆಸ್ಡಿಮೋನಾರ ಮದುವೆ ನಡೆದುಹೋಗಿದೆ. ಇದು ನಮಗೆ ತಿಳಿಯುವುದು ವೆನಿಸಿನ ಒಬ್ಬ ಯುವಕ ರೋಡರೀಗೋ ಎಂಬುವನ ಮೂಲಕ. ಇವನು ಸಾಕಷ್ಟು ಅನುಕೂಲಸ್ಥ. ಅಥೆಲೋ ಮತ್ತು ಡೆಸ್ಡಿಮೋನಾರ ಮದುವೆಯ ವಿಷಯ ತಿಳಿದಾಗಿನಿಂದ ವ್ಯಗ್ರವಾಗಿದ್ದಾನೆ ಎಂಬುದು ಮೊದಲ ದೃಶ್ಯದಲ್ಲಿಯೇ ಕಾಣುತ್ತದೆ. ಇದಕ್ಕೆ ಕಾರಣವೆಂದರೆ ಸ್ವತಃ ತಾನೇ ಡೆಸ್ಡಿಮೋನಾಳಲ್ಲಿ ಅನುರಕ್ತನಾಗಿದ್ದಾನೆ. ಸಾಕಷ್ಟು ಬಾರಿ ಅವಳ ಮನೆಗೂ ಹೋಗಿ ಅವಳ ತಂದೆಯ ಕೈಯಲ್ಲಿ ಛೀಮಾರಿ ಹಾಕಿಸಿಕೊಂಡು ಬಂದಿದ್ದಾನೆ. ಇಂಥ ತಾನು ಇಷ್ಟಪಟ್ಟ ವೆನಿಸಿನ ಅತ್ಯಂತ ಸುಂದರ ಬಿಳಿಹುಡುಗಿ ತನ್ನಂಥ ಬಿಳಿಹುಡುಗನನ್ನು ಮೆಚ್ಚದೆ ಕಪ್ಪು ಅಥೆಲೋನನ್ನು ಮೆಚ್ಚಿ ಮದುವೆಯಾದದ್ದು ಅವನ ತಲೆಕೆಡಿಸಿಬಿಟ್ಟಿದೆ. ಈ ವಿಷಯ ತನಗೆ ಏನೂ ಗೊತ್ತಿಲ್ಲವೆಂದು ಹೇಳುತ್ತಿದ್ದಾನೆ ತನ್ನ ಗೆಳೆಯ, ಮತ್ತೊಬ್ಬ ಯುವಕ ಇಯಾಗೋ. ಅಥೆಲೋನಿಗೆ ತುಂಬ ಹತ್ತಿರದವನಾದ ಇವನಿಗೆ ಗೊತ್ತಿಲ್ಲ ಎಂದು ನಂಬುವುದಕ್ಕೆ ಕಷ್ಟವಾಗಿದೆ ರೋಡರೀಗೋನಿಗೆ. ಇಯಾಗೋಗೆ ಇವನನ್ನು ಹೇಗೆ ನಂಬಿಸುವುದೆಂದು ಗೊತ್ತಾಗುವುದಿಲ್ಲ, ಹೌದು, ತಾನು ಎಂದೂ ಅಥೆಲೋನನ್ನು ಗೌರವಿಸುವುದು ಸಾಧ್ಯವಿಲ್ಲ, ತನಗೆ ದಕ್ಕಬೇಕಾಗಿದ್ದ ಲೆಫ್ಟಿನೆಂಟ್ ಸ್ಥಾನವನ್ನು ತನಗೆ ನೀಡದೆಯೇ ಒಬ್ಬ ಜೋಕುಮಾರನಿಗೆ ನೀಡಿದ್ದಾನೆ. ಮಣಿಕಟ್ಟಿಲ್ಲದೆ ಲೆಕ್ಕ ಮಾಡಲಾಗದ, ಯುದ್ಧಭೂಮಿಯ ಬಗ್ಗೆ ಎಳ್ಳಷ್ಟೂ ಗೊತ್ತಿಲ್ಲದ ಆಜ್ಞನಿಗೆ ಆ ಸ್ಥಾನ ದಕ್ಕಿಬಿಟ್ಟಿತು. ತನ್ನ ನಿರ್ಧಾರವನ್ನು ಸಮರ್ಥಿಸಿಕೊಳ್ಳಲು ಅಥೆಲೋ ದಪ್ಪದಪ್ಪ ಮಾತುಗಳು ತುಂಬಿದ ವಿವರಣೆಗಳನ್ನು ನೀಡಿ ಎಲ್ಲರ ಬಾಯಿ ಮುಚ್ಚಿಸಿಬಿಟ್ಟ. ಯುದ್ಧ ಭೂಮಿಯಲ್ಲಿ ಎಲ್ಲಂದರಲ್ಲಿ ಅವನೊಡನೆ ಕೂಡಿ ಹೋರಾಡಿದ ಇಯಾಗೋವಿಗೆ ದಕ್ಕಿದ್ದು ಅಥೆಲೋವಿನ ಧ್ವಜಧಾರಿಯ ಪಟ್ಟ. ಸೇವಾಹಿರಿತನಕ್ಕೆ ಬೆಲೆಯೇ ಇಲ್ಲವಾಯಿತು. ಆದರೂ ತಾನು ಅವನನ್ನು ಹಿಂಬಾಲಿಸುತ್ತೇನೆ. ಕಾರಣ ಇಷ್ಟೆ. ಎಲ್ಲರೂ ಯಜಮಾನರೇ ಆಗಲೂ ಸಾಧ್ಯವಿಲ್ಲ, ಎಲ್ಲ ಯಜಮಾನರನ್ನೂ ವಿಧೇಯವಾಗಿ ಅನುಸರಿಸುವುದೂ ಸಾಧ್ಯವಿಲ್ಲ. ತಾನು ಅವನನ್ನು ಅನುಸರಿಸುವುದು ತನ್ನ ಸ್ವಾರ್ಥಕ್ಕಷ್ಟೆಯೇ. ಈಗ ಇಬ್ಬರೂ ಸೇರಿ ಮಾಡಬೇಕಾಗಿರುವುದು ಇಷ್ಟೆ– ಅವಳ ತಂದೆಯನ್ನು ಎಚ್ಚರಿಸುವುದು, ವಿಷಯ ತಿಳಿಸುವುದು. ಆ ಅಥೆಲೋ ಎಂಥ ಸುಮಧುರ ಗಳಿಗೆಗಳಲ್ಲಿ ಮುಳುಗಿದ್ದರೂ ಅದನ್ನು ತಾವು ಹಾಳುಗೆಡವಬೇಕು ಅಷ್ಟೆ. ಡೆಸ್ಡಿಮೋನಾಳ ತಂದೆಯ ಮನೆಯ ಎದುರು ಊರಿಗೆ ಬೆಂಕಿಬಿದ್ದಾಗ ಅರಚಿಕೊಳ್ಳುವಂತೆ ಬೊಬ್ಬೆ ಹಾಕುತ್ತಾರೆ. ಇಯಾಗೋ ಮರೆಯಾಗಿ ನಿಂತು ಆ

ವೃದ್ಧನಿಗೆ ಕೂಗಿಹೇಳುವ ಮಾತುಗಳು ಅವನ ವ್ಯಕ್ತಿತ್ವದ ಒಂದು ಮುಖವನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ. "....Even now, very now, an old black ram / Is tupping your white eve' ಆದದ್ದರಿಂದ ಎದ್ದೇಳು... ಊರನ್ನು ಎಚ್ಚರಿಸು. Or else the devil will make a grandsire of you" ''ಈ ಮುದುಕನಿಗೆ ಉಪಕಾರ ಮಾಡಬಂದರೆ ನಮ್ಮನ್ನೇ ಪುಂಡರು ಅನ್ನುತ್ತಾನೆ. ಸರಿ ಹಾಗಾದರೆ you'll have your daughter covered with a Barbary horse ; you'll have your nephews neigh to you ; you'll have courses for cousins, and gennets for germans" ಬ್ರಬಾನ್ಶಿಯೋನನ್ನು ಪ್ರಚೋದಿಸುವುದಷ್ಟೇ ಈ ಮಾತುಗಳ ಉದ್ದೇಶವಲ್ಲ. ಅಷ್ಟು ಮಾತ್ರವಾಗಿದ್ದರೆ ರೋಡರೀಗೋ ಬಳಸುವ ಮೆದು ಶಬ್ದಗಳೇ ಸಾಕಾಗಿತ್ತು".... Knave of common hire, a gondolier / To the gross clasps of a lascivious Moor .... an extravagant and wheeling stranger / Of here and everywhere." ಈ ಮಾತುಗಳೇ ಸಾಕಷ್ಟು ಪರಿಣಾಮಕಾರಿಯಾದವು. ಆದರೆ ಇಯಾಗೋ ಬಳಸುವುದು ತನ್ನ ಮನಸ್ಸಿನಾಳದಲ್ಲಿ ಈ ಮದುವೆಯ ಕುರಿತಾದ, ಬಿಳಿ-ಕಪ್ಪುಗಳ ಅಸಹನೀಯ ಮಿಶ್ರಣದ ಕುರಿತಾದ ತನ್ನ ದ್ವೇಷವನ್ನು ಧ್ವನಿಸುವಂಥ ಶಬ್ದಗಳನ್ನು. ಬ್ರಬಾನ್ಶಿಯೋ ಕೆಳಗೆ ಇಳಿದುಬರುವಷ್ಟರಲ್ಲಿ ಇಯಾಗೋ ಅಲ್ಲಿಂದ ಹೊರಟುಬಿಡುತ್ತಾನೆ. ಈ ಸಂದರ್ಭದಲ್ಲಿ ರೋಡರಿಗೊವಿನ ಜೊತೆ ತಾನು ಕಾಣಿಸಿಕೊಳ್ಳುವುದು ತಮ್ಮ ಕಾರ್ಯ ಸಾಧನೆಗೆ ಪೂರಕವಲ್ಲ. ತಾನು ನೇರ ಅಥೆಲೋನ ಹತ್ತಿರ ಹೋಗುತ್ತೇನೆ, ಎಲ್ಲರನ್ನೂ ಅಲ್ಲಿಗೇ ಕರೆದು ತಾ ಎಂದು ಹೇಳಿ ನಿಷ್ಕ್ರಮಿಸುತ್ತಾನೆ. ಮಗಳನ್ನು ಮನೆಯಲ್ಲಿ ಕಾಣದೆ ಕ್ಷೋಭೆಗೊಂಡ ಬ್ರಬಾನ್ಶಿಯೋ ಮಗಳನ್ನು ಈ ರೋಡರೀಗೋವಿಗೇ ಕೊಟ್ಟಿದ್ದರೆ ಚೆನ್ನಿರುತ್ತಿತ್ತು ಎಂದು ಹಲುಬುತ್ತಾನೆ. ತಂದೆಗೆ ಎಂಥ ದ್ರೋಹ ಬಗೆದಳು ಮಗಳು ! ಯಾರು ತಾನೆ ತಂದೆಯಾಗಲು ಬಯಸಿಯಾರು ? ಎಂದು ತನ್ನ ಆತ್ಮ ಮರುಕದಲ್ಲಿ ಇಡೀ ಜಗತ್ತಿನ ತಂದೆಯರಿಗೆ "Fathers, from hence, trust not your daughters' minds / By what you see them act." ಎಂಬ ಎಚ್ಚರಿಕೆ ನೀಡುತ್ತಾನೆ. ಇಲ್ಲಿಂದ ಮುಂದೆ ಅಂಕದ ಕೊನೆಯವರೆವಿಗೂ ಈ ವೆನಿಸಿನ ನಾಗರಿಕರ ನಡೆನುಡಿಗಳನ್ನು ಕೊಂಚ ಗಮನವಿಟ್ಟು ನೋಡಬೇಕು. ಈಗ, ಅಂದರೆ ನಾಟಕದ ಇನ್ನೂ ಆರಂಭದ ಗಳಿಗೆಯಲ್ಲೇ ತೀರ್ಮಾನಗಳನ್ನು ಮಾಡುವುದು ಕಷ್ಟವೂ ಹೌದು, ಪಾತ್ರಗಳಿಗೆ ನ್ಯಾಯವೂ ಅಲ್ಲ. ಆದರೆ ಸಣ್ಣಪಾತ್ರಗಳು ಎಂದು ಕಡೆಗಣಿಸಿಬಿಡಬಾರದು ಎಂಬುದಕ್ಕೆ ಹೇಳುತ್ತಿದ್ದೇನೆ. ಮುಂದುವರೆದು ಬ್ರಬಾನ್ಶಿಯೋ ಮತ್ತೂ ಕುತೂಹಲಕರ ಮಾತುಗಳನ್ನು ಆಡುತ್ತಾನೆ. ಹಾಗೆ ನೋಡಿದರೆ ಕಟ್ಟಕಡೆಯವರೆವಿಗೂ ಅದೇ ರೀತಿಯ ವಾದವನ್ನೇ ಮಂಡಿಸುತ್ತ ಹೋಗುತ್ತಾನೆ. '....Are there not charms / By which the property of youth and maidhood / May be abused ? Have you not read, Roderigo, / Of some such thing ?" ಅಥೆಲೋ ಒಬ್ಬ ಕಪ್ಪು ಮನುಷ್ಯ ; ನೀಗ್ರೊ ;

ಆಫ್ರಿಕಾಖಂಡದಂಥ ನಿಗೂಢ ಕರಾಳದೇಶದ ಮೂಲದವನು. ಮಾಟಮಂತ್ರಗಳ, ಭೂತ ಪ್ರೇತ ಆರಾಧನೆಗಳ ದೇಶ ಅದು. ಬಿಳೀ ಜಗತ್ತಿಗೆ ಕಿಂಚಿತ್ತೂ ಅರ್ಥವಾಗದ ಭಯಂಕರ ನಾಡು. ಹಾಗೆಂದಮೇಲೆ ಅಥೆಲೋ ಈ ಮಾಟಮಂತ್ರಗಳ ಬಳಕೆ ಮಾಡಿರಲಿಕ್ಕಿಲ್ಲ ಎಂದು ನಂಬುವುದು ಹೇಗೆ ? ಮುಂದಿನ ದೃಶ್ಯದಲ್ಲಿ ಅಥೆಲೋನನ್ನು ಕಂಡಾಗ ಕೂಡ ಇದೇ ಮಾತುಗಳನ್ನು ಮತ್ತೂ ಅಷ್ಟು ಒತ್ತಿ ಹೇಳುತ್ತಾನೆ. ಅಥೆಲೋ, ಇಯಾಗೋ ಈ ದೃಶ್ಯದಲ್ಲಿ ಒಟ್ಟಿಗೆ ಇದ್ದಾರೆ. ಇಯಾಗೋ ಅಥೆಲೋವಿನ ಮದುವೆಯ ಕುರಿತು ಕೇಳುತ್ತಿದ್ದಾನೆ. ಹಾಗೊಮ್ಮೆ ಮದುವೆ ಆಗಿಯೇ ಹೋಗಿದ್ದರೆ ಅಪಾಯವಿದೆ ಎಂದು ಎಚ್ಚರಿಸುತ್ತಾನೆ. ಬ್ರಬಾನ್ಶಿಯೋ ಪ್ರಭಾವಶಾಲೀ ನಗರ ಪ್ರಮುಖ. ಅವನ ಮಾತುಗಳಿಗೆ ತುಂಬ ಬೆಲೆ ಇದೆ. 'ಮಾಡಲಿ, ಬೇಕಾದ್ದು ಮಾಡಲಿ ಬಿಡು. ನಾನು ಈ ರಾಷ್ಟ್ರಕ್ಕೆ ಸಲ್ಲಿಸಿರುವ ಸೇವೆ ಅವನ ಆರೋಪಗಳನ್ನೆಲ್ಲ ತಳ್ಳಿಹಾಕಿಬಿಡುತ್ತದೆ. ...ರಾಜವಂಶಕ್ಕೆ ಸೇರಿದವನು ನಾನು. ಮತ್ತು ನನ್ನ ಅರ್ಹತೆಗಳಿಂದಾಗಿ ನಾನು ಯಾರಿಗೂ ತಲೆಬಾಗದಂತೆ ನನ್ನ ಸದ್ಯದ ಈ ಅದೃಷ್ಟದ ಕುರಿತಾಗಿ ಮಾತನಾಡಬಹುದು. ....for know, Iago, / But that I love the gentle Desdemona / I would not my unhoused free condition / Put into circumscription and confine / For the sea's worth". ಬಹು ಗಮನಾರ್ಹವಾದ ಮಾತು ಇದು. ತನ್ನ ಸ್ವಾತಂತ್ರ್ಯವನ್ನು ಸಮುದ್ರದಾಳದ ಎಲ್ಲ ಐಶ್ವರ್ಯದ ಆಸೆಗೂ ಕಳೆದುಕೊಳ್ಳಲು ಬಯಸದ ಅಥೆಲೋ ಈಗ ಡೆಸ್ಡಿಮೋನಾಳ ಪ್ರೀತಿಗಾಗಿ ಕಳೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದಾನೆ. ಅಂದರೆ ಮದುವೆಯ ಬಂಧನದಿಂದ ತಾನು ಎಂದಿಗೂ ಮುಕ್ತವಾಗಿಯೇ ಇರಬೇಕೆಂದು ಬಯಸಿದವ ಅಥೆಲೋ, ಈಗ ಡೆಸ್ಡಿಮೋನಾಳನ್ನು ಪ್ರೀತಿಸಿ ಈ ಸ್ವಾತಂತ್ರ್ಯಪ್ರಿಯತೆಯನ್ನು ಕೈಬಿಟ್ಟಿದ್ದಾನೆ. ಇಷ್ಟರಲ್ಲಿ ರಾಜಭವನದಿಂದ ಕರೆಬಂದಿದೆ. ಲೆಫ್ಟಿನೆಂಟ್ ಕ್ಯಾಷಿಯೋ ಸುದ್ದಿ ತಂದಿದ್ದಾನೆ. ಟರ್ಕರು ಸೈಪ್ರಸ್‌ಗೆ ಮುತ್ತಿಗೆ ಹಾಕುವ ಸನ್ನಾಹ ನಡೆಸಿದ್ದಾರೆ. ಮಂತ್ರಾಲೋಚನೆ ಸಭೆ ನಡೆದಿದೆ. ಅಥೆಲೋಗಾಗಿ ಕರೆ ಕಳಿಸಿದ್ದಾರೆ. 'ಸರಿ, ಮನೆಯೊಳಗೆ ಹೇಳಿಬರುತ್ತೇನೆ' ಎಂದು ಅಥೆಲೋ ಹೊರಡುತ್ತಾನೆ. ಕ್ಯಾಷಿಯೋ ಇಯಾಗೋನನ್ನು ಇಲ್ಲಿ ಏನು ಮಾಡುತ್ತಿದ್ದಾನೆ ಒಥೆಲೋ ಎಂದು ಕೇಳಿದ್ದಕ್ಕೆ ಇಯಾಗೋವಿನ ಉತ್ತರ ಮತ್ತು ನಂತರದ ಕ್ಯಾಷಿಯೋವಿನ ಪ್ರತಿಕ್ರಿಯೆ ಎರಡನ್ನೂ ನಾವು ಗಮನಿಸಬೇಕು. ಇಯಾಗೋ ಹೇಳುತ್ತಾನೆ "Faith, he tonight hath boarded a land carack : / If it prove lawful prize, he's made for ever" ಸ್ಪ್ಯಾನಿಷ್ ಮತ್ತು ಪೋರ್ಚ್‌ಗೀಸ್ ಸಂಪದ್ಭರಿತ ಹಡಗನ್ನೇರಿದ್ದಾನೆ ಅಥೆಲೋ. ಅದು ಕಾನೂನುಬದ್ಧವೆನಿಸಿದರೆ ಅವನನ್ನು ಹಿಡಿಯುವವರು ಯಾರು ? ಕ್ಯಾಷಿಯೋ ಅರ್ಥವಾಗದವನಂತೆ 'ಅಂದರೆ' ಎಂದಿದ್ದಕ್ಕೆ 'ಅವನು ಮದುವೆಯಾಗಿದ್ದಾನೆ'. 'ಯಾರೊಡನೆ' ಎಂದು ಕೇಳಿದ ಕ್ಯಾಷಿಯೋನಿಗೆ ಉತ್ತರ ಹೇಳುವಷ್ಟರಲ್ಲಿ ಅಥೆಲೋ ಪ್ರವೇಶಿಸುತ್ತಾನೆ. ಈ ನಾಲ್ಕು ಸಾಲುಗಳ ಸಂಭಾಷಣೆಯನ್ನು ಗಮನಾರ್ಹವೆಂದದ್ದು ಕೆಳಗೆ ಕಾಣಿಸಿದ ಕಾರಣಕ್ಕಾಗಿ : ಮೊದಲನೆಯದು ಅಥೆಲೋವಿನ

ಮದುವೆಯ ಬಗ್ಗೆ ಇಯಾಗೋ ವಿವರಿಸುವ ರೀತಿ. ಅಗೌರವ, ತಿರಸ್ಕಾರಗಳೇನೂ ಕಾಣದಿದ್ದರೂ ಆ ಧ್ವನಿಯಲ್ಲಿ ಒಂದಿಷ್ಟು ಅಸೂಯೆ, ಒಂದಿಷ್ಟು ಅಸಹನೆಗಳು ಕೇಳುತ್ತವೆ. ಎರಡನೆಯದು, ಅಥೆಲೋವಿಗೆ ಮದುವೆಯಾಯಿತು ಎಂದು ಸ್ಪಷ್ಟವಾಗಿ ಹೇಳಿದ ಮೇಲೆ ಕೂಡ ಕ್ಯಾಷಿಯೋ 'ಯಾರೊಡನೆ' ಎಂದು ಕೇಳುತ್ತಾನೆ, ತನಗೆ ಏನೂ ಗೊತ್ತಿಲ್ಲದವನಂತೆ. ಮುಂದೆ ಮೂರನೇ ಅಂಕದಲ್ಲಿ ಅಥೆಲೋ ಸ್ವತಃ ತಾನೇ ಇಯಾಗೋವಿನ ಹತ್ತಿರ ಮಾತನಾಡುವಾಗ 'ಕ್ಯಾಷಿಯೋಗೆ ತನ್ನ ಮದುವೆಯ ವಿಷಯ ಗೊತ್ತಿತ್ತು... ಅಷ್ಟೇ ಅಲ್ಲ ಮದುವೆಯ ಮುಂಚೆಯೂ ಗೊತ್ತಿತ್ತು. ಅನೇಕಬಾರಿ ತಮ್ಮಿಬ್ಬರ ಅಂದರೆ ತನ್ನ - ಡೆಸ್ಡಿಮೋನಾಳ ಮಧ್ಯೆ ದೂತನಂತೆ ಓಡಿಯಾಡುತ್ತಲೂ ಇದ್ದ ಅವನು' ಎಂದು ಹೇಳುತ್ತಾನೆ. ಶೇಕ್ಸ್‌ಪಿಯರ್‌ನ ಹಲವು ನಾಟಕಗಳಲ್ಲಿ ಮೊದಲನೇ ಅಂಕದಲ್ಲಿ ಹೇಳಿದ್ದನ್ನು ಮುಂದೆ ಯಾವಾಗಲೋ ಮರೆತುಬಿಡುವುದೋ ಅಥವಾ ತದ್ವಿರುದ್ಧವಾದ ಮತ್ತೊಂದನ್ನು ತಂದುಬಿಡುವುದೋ – ಇಂಥ ಉದಾಹರಣೆಗಳು ಕಾಣಸಿಗುತ್ತವೆ. ಇದೂ ಅಂತಹ ಒಂದು ಪ್ರಸಂಗವೇ ? 'ಅಲ್ಲ' ಎನ್ನಿಸುತ್ತದೆ ನನಗೆ. ಉದ್ದೇಶಪೂರ್ವಕವಾಗಿ ಕ್ಯಾಷಿಯೋ ಈ ಮದುವೆಯ ವಿಷಯ ತನಗೆ ಗೊತ್ತಿಲ್ಲದವನಂತೆ ನಡೆದುಕೊಳ್ಳುತ್ತಾನೆ. ಅಥೆಲೋ ತನ್ನಲ್ಲಿಟ್ಟ ನಂಬಿಕೆಯನ್ನು ಸಂಪೂರ್ಣವಾಗಿ ಉಳಿಸಿಕೊಳ್ಳುವಂಥವನು ಅವನು. ಈ ಮದುವೆಯ ವಿಷಯ ಇನ್ನೂ ಎಷ್ಟು ಬಹಿರಂಗವಾಗಿದೆಯೋ ಅವನಿಗೆ ಗೊತ್ತಿಲ್ಲ. ಎಂದೇ ತಿಳಿಯದವನಂತೆ ಇದ್ದುಬಿಡುತ್ತಾನೆ. ಅಷ್ಟಲ್ಲದೆಯೆ ಅಥೆಲೋ ಅವನನ್ನು ಲೆಫ್ಟಿನೆಂಟ್ ಸ್ಥಾನಕ್ಕೆ ನೇಮಿಸಿಕೊಳ್ಳಲು ಸಾಧ್ಯವೇ ?

ಇದೇ ವೇಳೆಗೆ ಬ್ರಬಾನ್ಷಿಯೋ ದೊಡ್ಡ ದಂಡನ್ನೇ ಕಟ್ಟಿಕೊಂಡು ಅಥೆಲೋನನ್ನು ಬಂಧಿಸಲು ಅಲ್ಲಿಗೆ ಬರುತ್ತಾನೆ. ಅಥೆಲೋ ಅಲ್ಲಿಂದ ಕದಲುವುದಕ್ಕೆ ಇಚ್ಛೆಪಡದೆ ಎರಡು ಗುಂಪುಗಳೂ ಕತ್ತಿಗಳನ್ನು ಹಿಡಿದು ಒಬ್ಬರ ಮೇಲೆ ಒಬ್ಬರು ಬೀಳುವುದರಲ್ಲಿದ್ದಾಗ 'Keep up your bright swords, for the dew will rust them' ಎಂದು ಸೂಕ್ಷ್ಮವಾದ ಹಿತವಚನ ನುಡಿಯುತ್ತಾನೆ. ಬ್ರಬಾನ್ಷಿಯೋವಿನ ಮುಂದಿನ ಮಾತುಗಳಲ್ಲಿ, ನಾವು ಹಿಂದೆಯೇ ಸೂಚಿಸಿದಂತೆ, ಅವನ ಆಕ್ರೋಶಕ್ಕಿಂತ ಹೆಚ್ಚಿಗೆ ಈ ಕಪ್ಪುಮನುಷ್ಯನ ಬಗೆಗಿನ ಅಸಹ್ಯ, ತಿರಸ್ಕಾರಗಳು ಸ್ಪಷ್ಟವಾಗಿ ಕಾಣುತ್ತವೆ. 'foul theif ನನ್ನ ಮಗಳನ್ನು ಎಲ್ಲಿ ಅಡಗಿಸಿದ್ದೀಯೆ ? Damned as thou art, thou hast enchanted her....' 'ಅವಳನ್ನು ನಿನ್ನ ಮಾಟಮಂತ್ರಗಳ ಸರಪಳಿಗಳಲ್ಲಿ ಬಂಧಿಸಿದ್ದೀಯೆ' ....ಮೃದು, ಸುಂದರ ಮತ್ತು ಉಲ್ಲಾಸದ ಹುಡುಗಿ, ಮದುವೆಯೇ ಬೇಡವೆನ್ನುತ್ತಿದ್ದವಳು, ವೆನಿಸಿನ ಸುಂದರ ತರುಣರನೇಕರನ್ನು ನಿರಾಕರಿಸಿದವಳು ಈಗ ...ಈ "Sooty bosom...to fear, not to delight'ನಂಥವನಲ್ಲಿ ಅನುರಕ್ತಳಾಗುವುದೆಂದರೆ ಏನು ?'' ಅವಳ 'delicate youth'ನ ಮೇಲೆ 'foul charms'

'drugs or minerals that weakens motion' ಇವುಗಳೇ ಕೆಲಸ ಮಾಡಿರಬೇಕು. ಅಥೆಲೋ ಒಬ್ಬ "practicer of arts inhibited, and out of warrant;" ಪ್ರತಿ ಶಬ್ದದಲ್ಲಿ ಕಪ್ಪು-ಬಿಳಿ, ಕುರೂಪ-ರೂಪ, ಅಸಹಜ-ಸಹಜ ಇವುಗಳ ಕುರಿತಾಗಿ ಬ್ರಬಾನ್ಷಿಯೋನಿನ ಪೂರ್ವಗ್ರಹಗಳ ಕರಾಳಛಾಯೆ ಕಾಣುತ್ತದೆ. ಇದು ಎಷ್ಟರ ಮಟ್ಟಿಗೆ ಹೋಗುತ್ತದೆಂದರೆ ಪುರಪ್ರಮುಖರೆದುರು ಅವನನ್ನು ಕರೆದೊಯ್ಯಲು ತೀರ್ಮಾನಿಸಿ ನಿಷ್ಕ್ರಮಿಸುವ ಮೊದಲು ಕೂಡ "....ರಾಷ್ಟ್ರಕ್ಕೆ ಒದಗಿರುವ ಸಂಕಷ್ಟದಷ್ಟೇ ದಾರುಣವಾದುದು ನನ್ನ ಸಂಕಷ್ಟ.... ನನ್ನ ಸಹೋದ್ಯೋಗಿ ಪುರಪ್ರಮುಖರು ಮನಗಾಣಬೇಕು. ಇಲ್ಲದಿದ್ದರೆ ....if such actions may have passage free / Bond slaves and pagans shall our statesmen be" ಎಂದು ಅನ್ನುವವರೆವಿಗೆ ಹೋಗುತ್ತದೆ.

ರಾಷ್ಟ್ರಕ್ಕೆ ಬಂದೊದಗಿದ ವಿಪತ್ತಿನ ಕುರಿತು ಸಮಾಲೋಚನೆ ನಡೆದಿದೆ. ಟರ್ಕ್ ಹಡಗುಗಳು ಸೈಪ್ರಸ್‌ನತ್ತ ಹೋಗುತ್ತಿರುವುದರ ಕಂರಿತು ಸುದ್ದಿ ಬರುತ್ತಲಿದೆ. ಅಥೆಲೋವಿಗಾಗಿ ಸಭೆ ಕಾದಿದೆ. ಅವನು ಬಂದ ಕೂಡಲೆ ಡ್ಯೂಕನು ಅವನಿಗೆ ಸಭೆಯ ತೀರ್ಮಾನವನ್ನು ತಿಳಿಸಿ ಈ ಕೂಡಲೆ ಅಥೆಲೋ ಸೈಪ್ರಸ್‌ಗೆ ಹೊರಡಬೇಕೆಂದು ನಿರ್ದೇಶಿಸುತ್ತಾನೆ. ಅಥಲೋ ಉತ್ತರಿಸುವುದಕ್ಕೆ ಮೊದಲೇ ಅವನೊಡನೆ ಬಂದ ಬ್ರಬಾನ್ಷಿಯೋನನ್ನು ಸ್ವಾಗತಿಸಿ ಅವನ ಮಾರ್ಗದರ್ಶನ ಮತ್ತು ಸಹಕಾರಕ್ಕಾಗಿ ತಾವು ಕಾದಿದ್ದೆವು ಎಂದು ಹೇಳುತ್ತಾನೆ. ನಾಡಿಗೆ ಒದಗಿಬಂದಿರುವ ವಿಪತ್ತಿನ ಬಗ್ಗೆ ಬ್ರಬಾನ್ಷಿಯೋನಿಗೆ ಗೊತ್ತಿಲ್ಲ. ತನಗೇ ಬಂದೊದಗಿದ ವಿಪತ್ತು ತನ್ನನ್ನು ಅರ್ಧರಾತ್ರಿಯಲ್ಲಿ ಎಚ್ಚರಿಸಿ ಇಲ್ಲಿಗೆ ಕರೆತಂದಿದೆ. 'ನನ್ನ ಮಗಳು ಇದ್ದರೂ ಸತ್ತಂತೆಯೇ.... ಅವಳನ್ನು ಅಪಹರಿಸಲಾಗಿದೆ. ಅವಳನ್ನು ಹಾಳುಮಾಡಲಾಗಿದೆ. ಕುರುಡಲ್ಲದ, ಕುಂಟಲ್ಲದ, ಈ ಹೆಣ್ಣನ್ನು ವಾಮಾಚಾರದ ಮಾರ್ಗದಲ್ಲಲ್ಲದೇ ಈ ರೀತಿ ದುರ್ಮಾರ್ಗಕ್ಕೆ ಸೆಳೆಯಲು ಸಾಧ್ಯವಿಲ್ಲ. ಕುಟಿಲ ಮಂತ್ರಗಾರರಿಂದ ಕೊಂಡುತಂದ 'spells and medicines'ಗಳ ಮೂಲಕ ತನ್ನ ಮಗಳನ್ನು ತನ್ನಿಂದ ಕದ್ದೊಯ್ಯಲಾಗಿದೆ' ಎಂದು ವಿಲಪಿಸಿದ ಬ್ರಬಾನ್ಷಿಯೋನಿಗೆ ಡ್ಯೂಕನು ಧೈರ್ಯನೀಡುವಂತೆ 'ನನ್ನ ಮಗನೇ ಇಂಥ ಕೃತ್ಯವನ್ನೆಸಗಿದ್ದರೂ ಅವನ ವಿರುದ್ಧ ಕ್ರಮ ಜರುಗಿಸುವುದಕ್ಕೆ ಬ್ರಬಾನ್ಷಿಯೋ ಅನುಮಾನಿಸಬೇಕಿಲ್ಲ' ಎಂದೆನ್ನುತ್ತಾನೆ. ಆರೋಪಿ ಅಥೆಲೋ ಎಂದು ಗೊತ್ತಾಗುತ್ತದೆ. ಈಗ ಅಥೆಲೋ ನಾಡಸೇವೆಗಾಗಿ ವಿಶೇಷ ಅಧಿಕಾರದೊಂದಿಗೆ ಸೈಪ್ರಸ್‌ಗೆ ಹೋಗಬೇಕಾಗಿದೆ. ಈ ಆರೋಪದ ಬಗ್ಗೆ ಅಥೆಲೋ ಏನು ಹೇಳುವುದಿದೆ ? ಅಥೆಲೋ ಈ ಕ್ಷಣದಿಂದ ಈ ದೃಶ್ಯದ ಕೊನೆಯವರೆವಿಗೆ ಬಳಸುವ ಭಾಷೆ, ನಡೆದುಕೊಳ್ಳುವ ರೀತಿ, ಘನತೆ ಗಾಂಭೀರ್ಯಗಳು ಅತ್ಯಂತ ಆಕರ್ಷಕವಾದವು. ಒಂದಷ್ಟು ಹುಳಿಯಾಗಲಿ, ಒಗರಾಗಲಿ ಮಾತಿನಲ್ಲಿ ಬೆರೆಸದೆ ತಾನು ನಿಂತು ಮಾತನಾಡುತ್ತಿರುವ ಪರಿಸರ, ತಾನು ಉದ್ದೇಶಿಸುತ್ತಿರುವ ಪುರಪ್ರಮುಖರು ಹಾಗೂ ತನ್ನದೇ ಸ್ಥಾನಮಾನ ಯಾವುದನ್ನೂ

ಕ್ಷಣವೂ ಮರೆಯದೆ ಮಾತುಗಳನ್ನು ತೂಕಮಾಡಿ, ಪ್ರಶಸ್ತವಾದ ಶಬ್ದಗಳನ್ನು ಆಯ್ಕೆ ಮಾಡಿ ತನ್ನ ನಿಲುವನ್ನು, ತನ್ನ ಪ್ರೀತಿಪ್ರಕರಣವನ್ನು, ಮದುವೆಯನ್ನು ಕುರಿತು ಮಾತನಾಡುತ್ತಾನೆ. ಇಲ್ಲಿ ವಿನಯವಿದೆ, ವಿವೇಕವಿದೆ, ವಿಧೇಯತೆ ಇದೆ. 'most potent, grave, and reverend signiors, / My very noble and approved good masters' ಎಂದು ಸಭೆಯನ್ನು ಸಂಬೋಧಿಸಿ ತನ್ನ ಮಾತುಗಳನ್ನು ಆರಂಭಿಸುತ್ತಾನೆ. 'ಈ ವಯೋವೃದ್ಧನ ಮಗಳನ್ನು ನಾನು ಅವನಿಂದ ದೂರ ಮಾಡಿದ್ದೇನೆಂಬುದು ಪರಮ ಸತ್ಯ. ಅಷ್ಟೇ ಸತ್ಯ - ನಾನು ಆಕೆಯನ್ನು ಮದುವೆಯೂ ಆಗಿದ್ದೇನೆ ಎಂಬುದು. ನಾನು ಮಾಡಿರುವ ಅಪರಾಧವೆಂದರೆ ಇಷ್ಟೆ. ನಾನು ಮಾತಿನಲ್ಲಿ ಒರಟ. ಮೃದುಮಧುರ ಮಾತುಗಳು ನನಗೆ ಸಾಧ್ಯವಿಲ್ಲ' ಎಂದು ಮುಂದುವರೆಸಿ ತಾನು ಹೇಗೆ ತನ್ನ ಏಳನೇ ವಯಸ್ಸಿನಿಂದಲೂ ಯುದ್ಧರಂಗದಲ್ಲಿಯೇ ಕಾಲಕಳೆದಿದ್ದೇನೆ. ಯುದ್ಧದ ಭಾಷೆ ವಿನಾ ತನಗೆ ಈ ಜಗತ್ತಿನ ಮಿಕ್ಕ ಯಾವ ವಿಷಯದ ಕುರಿತೂ ಮಾತನಾಡಲು ತಿಳಿಯದು. ಆದದ್ದರಿಂದ 'I will a round unvarnished tale deliver, / of my whole course of love, what drugs, what charms / what conjuration, and what mighty magic / (For such proceedings am I charged withal) / I won his daughter" ಈ ಮಾತುಗಳಿಂದ ಒಂದಿಷ್ಟೂ ಪ್ರಭಾವಿತನಾಗದವನೆಂದರೆ ಬ್ರಬಾನ್ಷಿಯೋ ಮಾತ್ರ. ಎಂದೂ ಎಲ್ಲೆ ಮೀರಿ ನಡೆದವಳಲ್ಲ ತನ್ನ ಮಗಳು. ಅವಳ ನಡೆನುಡಿಗಳು ಎಷ್ಟು ಶಾಂತಸ್ವಭಾವದವೆಂದರೆ ತನ್ನ ರೀತಿಗೆ ತಾನೇ ನಾಚಿ ಮುದುಡುವಂಥ ಹುಡುಗಿ. ಇಷ್ಟಿದ್ದೂ ಪ್ರಕೃತಿನಿಯಮಕ್ಕೆ ವಿರುದ್ಧವಾಗಿ ತನ್ನ ವಯಸ್ಸು, ತನ್ನದೇ ಸಂಸ್ಕೃತಿ, ತನ್ನ ಸ್ಥಾನಮಾನ ಎಲ್ಲವನ್ನೂ ಮರೆತು "To fall in love with what she feared to look on ?' ; ಎಂದೇ ಬ್ರಬಾನ್ಷಿಯೋಗೆ ಇದು ಯಾರದೋ ಭಯಂಕರ ಅತಾರ್ಕಿಕ ಕೃತ್ಯ ಎಂದು ಖಂಡಿತವಾಗಿರುವುದು. ಇಂಥ ಭಯಂಕರ ಕೃತ್ಯ ಎಸಗಿರುವುದಕ್ಕೆ ಅಥೋಲೋನೇ ಕಾರಣ ಎಂಬುದು ಅವನಿಗೆ ಶತಃಸಿದ್ಧವಾಗಿಬಿಟ್ಟಿದೆ. ಆದರೆ ಸಭೆಗೆ ಕೇವಲ ಆರೋಪಗಳು ಮಾಡುವುದರಲ್ಲಿ ಆಸಕ್ತಿಯಿಲ್ಲ. ಅಥೆಲೋ ಕೂಡ ಅವರೊಡನೆ ಸಹಕರಿಸುವವನಂತೆ ''ಡೆಸ್ಡಿಮೋನಾಳನ್ನೇ ಸಭೆಗೆ ಕರೆಸಿ, ಅವಳನ್ನೇ ಕೇಳಿ, ಹಾಗೊಮ್ಮೆ ನಾನು ಆರೋಪಿ ಎಂದು ಸಾಬೀತಾದರೆ ನನ್ನ ಉನ್ನತ ಪದವಿ ಹಾಗೂ ಈ ನಾಡು ನನ್ನಲ್ಲಿಟ್ಟಿರುವ ನಂಬಿಕೆ ಎಲ್ಲವನ್ನೂ ಮರೆತು ಘೋರವಾದ ಶಿಕ್ಷೆ ವಿಧಿಸಲಿ'' ಎಂದು ಹೇಳುತ್ತಾನೆ. ಡೆಸ್ಡಿಮೋನಾಳಿಗೆ ಹೇಳಿಕಳಿಸಿದ ಮೇಲೆ ಅವಳು ಬರುವಷ್ಟರಲ್ಲಿ ಅಥೆಲೋ ತನ್ನ - ಡೆಸ್ಡಿಮೋನಾಳ ಪ್ರೀತಿ ಹೇಗೆ ಹುಟ್ಟಿತು, ಹೇಗೆ ಬೆಳೆಯಿತು ಎಂದು ವಿವರಿಸುತ್ತಾನೆ. ಈ ಪ್ರೀತಿಪ್ರಕರಣದ ವಿವರಣಾ ಭಾಗವನ್ನು ಅನೇಕ ಕಾರಣಗಳಿಗಾಗಿ ನಾವು ಅತ್ಯಂತ ಜಾಗರೂಕತೆಯಿಂದ ಗಮನಿಸಬೇಕು ಎಂದು ನನಗೆ ಅನ್ನಿಸುತ್ತದೆ.

"Her father loved me, oft invited me,
Still questioned me the story of my life,
From year to year ; the battles, sieges, fortunes,
That I have passed :

'ಅವಳ ತಂದೆ ನನ್ನನ್ನು ಪ್ರೀತಿಯಿಂದ ಕಾಣುತ್ತಿದ್ದ' ಈ ಮೊದಲನೆಯ ಮಾತೇ ಕೇಳುಗರಲ್ಲಿ, ನಾಟಕ ನೋಡುತ್ತಿರುವವರಲ್ಲಿ ಅಚ್ಚರಿಯನ್ನು ಮೂಡಿಸಬೇಕು, ಹಾಗಿದೆ. ಇದೇ ತಂದೆ ಈಗ ಅವನ ವಿರುದ್ಧ ಮಾಟಮಂತ್ರಗಳ, ವಾಮಾಚಾರಗಳ, ಅನೈಸರ್ಗಿಕ ಕೃತ್ಯಗಳ ಆಪಾದನೆ ಹೊರಿಸುತ್ತಿರುವುದು, ತೀವ್ರವಾದ ಶಿಕ್ಷೆ ವಿಧಿಸಬೇಕು ಎಂದು ಪುರಪ್ರಮುಖರನ್ನು ಕೇಳುತ್ತಿರುವುದು. ಹಾಗಾದರೆ ಅಥೆಲೋ ಸುಳ್ಳು ಹೇಳುತ್ತಿದ್ದಾನೆಯೆ ? 'ಖಂಡಿತ ಅಲ್ಲ' ಎಂದೇ ಈ ಪ್ರಶ್ನೆಗೆ ಉತ್ತರ. ಹಾಗಾದರೆ ನಿಜವೇನು ? ಬ್ರಬಾನ್ಷಿಯೋ ಅಥೆಲೋವಿನ ಬಗ್ಗೆ ಅಭಿಮಾನ, ಪ್ರೀತಿಗಳನ್ನು ತೋರಿದ್ದು ನಿಜ. ಈ ಅಭಿಮಾನ, ಪ್ರೀತಿಗಳು ಯಾವ ಕಾರಣಕ್ಕೆ ಎಂಬುದು ಅಥೆಲೋವಿನ ಮುಂದಿನ ಸಾಲುಗಳಲ್ಲೇ ಸ್ಪಷ್ಟವಾಗುತ್ತದೆ. 'Still questioned me the story of my life / From year to year' ಅವನ ಬದುಕಿನ ವಿವರಗಳನ್ನು ಪದೇ ಪದೇ ಕೇಳಿ ತಿಳಿಯುತ್ತಿದ್ದ. ಈ ಬದುಕಿನ ವಿವರಗಳು ಯಾವುವು, ಬ್ರಬಾನ್ಷಿಯೋನಿಗೆ ಅವನ ಬಗ್ಗೆ ಕುತೂಹಲಗಳೆಂತಹವು ? 'the battles, sieges, fortunes / That I have passed' ಅಥೆಲೋ ಭಾಗವಹಿಸಿದ ಯುದ್ಧಗಳು, ನಡೆಸಿದ ಆಕ್ರಮಣಗಳು, ಅವುಗಳಲ್ಲಿ ಅವನಿಗೆ ದೊರಕಿದ ಅದೃಷ್ಟಗಳು ಇವುಗಳಲ್ಲಿ ಬ್ರಬಾನ್ಷಿಯೋನಿಗೆ ಇದ್ದ ಕುತೂಹಲಗಳು. ಬ್ರಬಾನ್ಷಿಯೋ ಬಿಳೀ ಜಗತ್ತಿನಲ್ಲಿ ಮೇಲ್ಸ್ತರದ ವರ್ಗಕ್ಕೆ ಸೇರಿದ ಶ್ರೀಮಂತ ಹಿರಿಯ. ಅಥೆಲೋ ಆಫ್ರಿಕಾಖಂಡದಂಥ ನಿಗೂಢನಾಡಿನಿಂದ ಬಂದ ಕಪ್ಪು ಮನುಷ್ಯ. ಎರಡು ಖಂಡಗಳ ಅಂತರವಿದೆ ಇಬ್ಬರಲ್ಲಿ. ಎರಡು ಜನಾಂಗಗಳು, ಎರಡು ಬಣ್ಣಗಳು, ಎರಡು ವಿಭಿನ್ನ ಸಂಸ್ಕೃತಿಗಳು ಇಬ್ಬರನ್ನೂ ಬೇರ್ಪಡಿಸಿವೆ. ಇಲ್ಲಿ ಬ್ರಬಾನ್ಷಿಯೋನಿಗೆ ಅಥೆಲೋ ಒಬ್ಬ ತನ್ನ ಕುತೂಹಲಗಳನ್ನು ತಣಿಸುವ, ತನಗೆ ಒಂದಷ್ಟು ರೋಮಾಂಚಕಾರಕ ಅನುಭವಗಳನ್ನು ಚಿತ್ರಿಸಿ ಒಂದು ಬಗೆಯ ಮನರಂಜನೆ ನೀಡುವ ವಿಚಿತ್ರಲೋಕದ ವಿಚಿತ್ರಮನುಷ್ಯ - ಅಷ್ಟೇ . ಏನೇ ಆದರೂ ತನ್ನ ಹತ್ತಿರ ಬರಲಾರದ, ಬರಬಾರದ ಪರಕೀಯ. ''ಅವನು ಹಾಗೆ ನನ್ನ ಬಗ್ಗೆ ಕೇಳಿದಾಗಲೆಲ್ಲ "I ran it through, even from my boyish days / To the very moment that he bade me tell it." ಒಂದು ಸುಭದ್ರ ಸ್ಥಿತಿಯಲ್ಲಿ, ಆತಂಕಗಳೇ ಇಲ್ಲದೆ ಬದುಕಿದ – ಆದ್ದರಿಂದಲೇ ಒಂದು ಅರ್ಥದಲ್ಲಿ ಬದುಕು ಸಾಹಸಮಯವಾದದ್ದು, ವೈವಿಧ್ಯಪೂರ್ಣವಾದದ್ದು ಎಂದು ಅನುಭವಕ್ಕೇ ಬರದ – ಬ್ರಬಾನ್ಷಿಯೋ ಅಂಥವರಿಗೆ ಅಥೆಲೋ ಒಂದು ಹೊಸ ಜಗತ್ತನ್ನೇ ನಿರ್ಮಾಣಮಾಡಿ ರಂಜಿಸಿದ್ದಿರಬೇಕು. ಎಂಥ ಸಾಹಸ, ಎಂಥ ವೈವಿಧ್ಯಗಳು ಎಂದು ಅವನ ಮಾತುಗಳಲ್ಲೇ ನೋಡೋಣ :

"Wherein I spake of most disastrous chances,
Of moving accidents by flood and field ;
Of hair-breath escapes in the imminent deadly breach;
Of being taken by the insolent foe;
And sold to slavery, and my redemption thence,
And with it all my travels' story

ಎದುರಿಸಿದ ಅನಾಹುತಗಳಾಯಿತು, ಗಂಡಾಂತರಗಳಾಯಿತು, ಕೂದಲೆಳೆಯ ಅಂತರದಲ್ಲಿ ಸಾವಿನ ದವಡೆಯಿಂದ ಪಾರಾದದ್ದಾಯಿತು, ಶತ್ರುವಿಗೆ ಸೆರೆಸಿಕ್ಕು ಗುಲಾಮಗಿರಿಗೆ ತಳ್ಳಲ್ಪಟ್ಟು ಹೋರಾಟದ ನಂತರ ಅವರಿಂದ ಮುಕ್ತನಾದದ್ದಾಯಿತು – ಈ ಅನುಭವಗಳು ಒಂದು ಬಗೆ. ಇನ್ನೊಂದು ಬಗೆಯ ಮತ್ತೂ ಮೈನವಿರೇಳಿಸುವ ಮುಖಾಮುಖಿಗಳು, ಭಯಂಕರಗಳೂ ಇವೆ :

Wherein of antres vast, and deserts idle,
Rough quarries, rocks and hills, whose heads touch heaven
It was my hint to speak, such was the process :
And of the cannibals, that each other eat ;
The Anthropophagi, and men whose heads
Do grow beneath their shoulders

ಬ್ರಬಾನ್ಷಿಯೋ ಮನೆಯ ವಾತಾವರಣವೇ ತಾನಗೆ ಮಾತನಾಡಲು ಪ್ರೇರಣೆ ನೀಡುವಂತಿತ್ತು – ಎಂಥ ಅದ್ಭುತಗಳು, ಬಿಳಿ ಜಗತ್ತಿನಲ್ಲಿ ಎಣಿಕೆಗೂ ಬಾರದಂಥ ಸಂಗತಿಗಳು. ಅಥೆಲೋ ಒಬ್ಬ ಯೋಧನಷ್ಟೇ ಅಲ್ಲ, ಶೂರ ಸೈನಿಕನಷ್ಟೇ ಅಲ್ಲ, ಅವನೊಂದು ರೀತಿಯಲ್ಲಿ ಭಯಾನಕ ಅಲೌಕಿಕ ಜಗತ್ತಿನ ರಾಯಭಾರಿ. ಎಂದೇ ಬ್ರಬಾನ್ಷಿಯೋನಿಗೆ ಅವನಲ್ಲಿ ಆಸಕ್ತಿ, ಪ್ರೀತಿ. ಈ ಕಥೆಗಳನ್ನು ಕೇಳಲು ಕೂಡುತ್ತಿದ್ದವನು ಬ್ರಬಾನ್ಷಿಯೋ ಒಬ್ಬನೇ ಅಲ್ಲ. '....this to hear / Would Desdemona seriously incline ;' ತೀವ್ರ ಕುತೂಹಲದಿಂದ ತನ್ನ ನಿರೂಪಣೆಯನ್ನು ಆಲಿಸಲು ಬರುತ್ತಿದ್ದವಳು ಡೆಸ್ಡಿಮೋನಾ. ಆದರೆ ಮೊದಲಿನಿಂದ ಕೊನೆಯವರೆವಿಗೆ ಅಡ್ಡಿಗಳಿಲ್ಲದೆ ಕೇಳುವುದು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಮನೆಗೆಲಸವೊ ಮತ್ತೊಂದೋ ಭಂಗತರುತಿದ್ದವು. ಅವಸರದಲ್ಲಿ ಎಲ್ಲವನ್ನೂ ಮುಗಿಸಿ ಮತ್ತೆ ಬರುತ್ತಿದ್ದಳು. 'and with a greedy ear / Devour up my discourse...' ಇದನ್ನು ಗಮನಿಸಿದ ಅಥೆಲೋ ಒಂಟಿಯಾಗೊಮ್ಮೆ ಅವಳನ್ನು ಭೆಟ್ಟಿಯಾದಾಗ ತನ್ನ ಜೀವನಕಥೆಯನ್ನು ಆಮೂಲಾಗ್ರವಾಗಿ ತನಗೆ ನಿರೂಪಿಸಬೇಕು ಎಂಬ ಅವಳ ಪ್ರಾರ್ಥನೆಯನ್ನು ಕೇಳಿ ಒಪ್ಪಿಕೊಳ್ಳುತ್ತಾನೆ. ''ನಾನು ಕಥೆ ಹೇಳುತ್ತಿದ್ದಂತೆ, ಯೌವನದಲ್ಲಿ ನಾನು ಎದುರಿಸಿದ

ಯಾತನೆಗಳ ಗಳಿಗೆಗಳ ವಿವರಣೆ ಕೇಳಿದಾಗ.... 'often did beguile her of her tears" "ನಿಡಿದಾದ ಉಸಿರಿನೊಂದಿಗೆ 'She swore in faith it was strange, it was passing strange ; / It was pitiful, it was wondrous pitiful;" ಇಂಥ ಕಥೆಗಳನ್ನು ತಾನು ಕೇಳದಿದ್ದರೇ ಚೆನ್ನಾಗಿತ್ತು ಅಂದಳು. ಆದರೂ 'ದೈವಸಂಕಲ್ಪದಲ್ಲಿ ತನಗೆ ಇಂಥ ಒಬ್ಬ ಗಂಡು ಸೃಷ್ಟಿಯಾಗಿದ್ದರೆ' ಎಂದು ಆಶಿಸಿದಳು. ಮತ್ತೂ ಮುಂದುವರೆದು 'She thanked me / And bade me, If I had a friend that loved her / I should but teach him how to tell my story / and that would woo her." ತನ್ನ ಮನಸ್ಸಿನ ಇಂಗಿತವನ್ನು ಇಷ್ಟು ಸೂಕ್ಷ್ಮವಾಗಿ ಅವಳು ಸೂಚಿಸಿದಳು. ಆ ಸೂಚನೆಯ ಮೇರೆಗೆ ನಾನು ಕಥೆ ಹೇಳಿದೆ. "She loved me for the dangers I had passed / And I loved her that she did pity them / This only is the witchcraft I have used ; / ನಾನು ಎದುರಿಸಿದ ಅಪಾಯಗಳಿಗಾಗಿ ಅವಳು ನನ್ನನ್ನು ಪ್ರೀತಿಸಿದಳು ; ನನ್ನ ಬಗ್ಗೆ ಅವಳು ತೋರಿದ ಅನುಕಂಪಕ್ಕಾಗಿ ನಾನು ಅವಳನ್ನು ಪ್ರೀತಿಸಿದೆ.' ಪ್ರೀತಿಯೆಂಬುದು ಇಷ್ಟು ತಾರ್ಕಿಕವಾಗಿ ಕಾರ್ಯಕಾರಣ ರೀತಿಯನ್ನು ಅನುಸರಿಸುತ್ತದೆಯೆ ? ವಿಸ್ಮಯಗಳಿಗೆ ಮನಸೋತು ಪ್ರೀತಿಸುವುದು, ಕೃತಜ್ಞತೆಯನ್ನು ಪ್ರೀತಿಯೆಂದು ಕರೆಯುವುದು ಸರಿಯೆ ? ಅಥವಾ ಅಥೆಲೋ ತಾನೇ ಹೇಳಿಕೊಳ್ಳುವಂತೆ 'little blest with the set phrase of peace / ....And little of this great world can I speak' ಎಂಬ ಮಾತು ನಿಜವಾದ ಕಾರಣವೆ ? ಒಂದು ವೇಳೆ ಅಥೆಲೋ ನೀಡುವ ವಿವರಣೆಯಷ್ಟೇ ಅವರಿಬ್ಬರ ಪ್ರೀತಿಯ ತಿರುಳು ಎನ್ನುವುದಾದರೆ ಅಥೆಲೋ-ಡೆಸ್ಡಿಮೋನಾರ ಮದುವೆ ನಾಶವಾಗುವುದಕ್ಕೆ ಬೇರೆಯವರ ಕೈವಾಡವೇ ಬೇಕಿರಲಿಲ್ಲ. ಟೊಳ್ಳಾದ ಸಂಬಂಧ ಯಾವ ಕಾರಣಕ್ಕೂ ಮುರಿದು ಬೀಳಬಹುದು. ಆದರೆ ಕಥೆ ಮುಂದುವರೆದಂತೆ ನಮ್ಮ ಅನುಭವಕ್ಕೆ ಬರುತ್ತ ಹೋಗುವ ಸಂಗತಿಯೆಂದರೆ ಇವರಿಬ್ಬರ ಮಧ್ಯೆ ಮೂಡಿರುವುದು, ವಿಕಾಸವಾಗಿರುವುದು, ಬಹುಗಟ್ಟಿಯೂ ಆಗಿರುವುದು ಒಂದು ಉದಾತ್ತ ಹಾಗೂ ಗಾಢಪ್ರೀತಿ ಎಂದು. ಬಹುಶಃ ಅಥೆಲೋ ಮೂಲತಃ ಒಬ್ಬ ಸೈನಿಕನಾದದ್ದರಿಂದ ಯುದ್ಧದ ತಯಾರಿ ಹಾಗೂ ಕಾರ್ಯಾಚರಣೆಗಳನ್ನು ವಿವರಿಸಿದಷ್ಟೇ ಪ್ರೀತಿಪ್ರಕರಣವನ್ನು ವಿವರಿಸುವುದು ಸರಳವೂ ಕಷ್ಟಸಾಧ್ಯವೇ ಅಲ್ಲದ್ದೂ ಎಂದು ನಂಬಿರಬೇಕು. ಈ ಪ್ರೀತಿ ಸಂಬಂಧ ಗಾಢವಾದದ್ದು ಎಂಬುದಕ್ಕೆ ಬಹಳಷ್ಟು ಕಾಯಲೂ ಬೇಕಾಗಿಲ್ಲ. ಡೆಸ್ಡಿಮೋನಾ ಪ್ರವೇಶ ಮಾಡಿ ಎಲ್ಲರೆದುರು ತನ್ನ ಮತ್ತು ಅಥೆಲೋವಿನ ಪ್ರೀತಿ, ಮದುವೆಗಳ ಕುರಿತಾಗಿ ಮಾತನಾಡುವಾಗ ಈ ಅಂಶ ಸ್ಪಷ್ಟವಾಗುತ್ತದೆ.

ತಂದೆ ಮಗಳನ್ನು ಕೇಳುತ್ತಾನೆ : 'ಈ ಸಭೆಯಲ್ಲಿರುವವರಲ್ಲಿ ಯಾರಿಗೆ ನಿನ್ನ ನಿಷ್ಠೆ ಮತ್ತು ವಿಧೇಯತೆ ಸಲ್ಲುತ್ತದೆ ಹೇಳು' ಎಂದು. ಡೆಸ್ಡಿಮೋನಾಳ ಉತ್ತರ ಅಥೆಲೋವಿನ ಮಾತುಗಳಂತೆಯೇ ಗಂಭೀರವೂ, ವಿನಯಪೂರ್ಣವೂ ಆದರೆ ಅಷ್ಟೇ ದಿಟ್ಟವೂ ಆಗಿ

ಹೊಮ್ಮುತ್ತದೆ. ''ಸನ್ಮಾನ್ಯ ತಂದೆಯೇ, ನನ್ನನ್ನು ಇಲ್ಲಿ ಎರಡು ರೀತಿಯ ನಿಷ್ಠೆಗಳು ಸೆಳೆಯುತ್ತಿವೆ. ನನ್ನ ಬದುಕು ಬೆಳವಣಿಗೆಗಳಿಗೆ ನಾನು ನಿನಗೆ ಋಣಿಯಾಗಿದ್ದೇನೆ. ನಿನ್ನನ್ನು ಎಷ್ಟೊಂದು ಗೌರವಿಸಬೇಕೆಂದು ನಾನು ಕಲಿತಿದ್ದೇನೆ. ನನ್ನ ಎಲ್ಲ ವಿವರಗಳಿಗೂ ನೀನು ಪ್ರಭು. ಎಲ್ಲ ವಿವರಗಳಲ್ಲಿಯೂ ನಾನು ನಿನ್ನ ಮಗಳು. ಆದರೆ ಇಲ್ಲಿ ನನ್ನ ಗಂಡನಿದ್ದಾನೆ. And so much duty as my mother showed / To you, preferring you before her father, / So much I challenge, that I may profess, / Due to the Moor my lord." ಅಷ್ಟೆ. ತನ್ನ ಪ್ರೀತಿ ಹೇಗೆ ಹುಟ್ಟಿತು. ಹೇಗೆ ಬೆಳೆಯಿತು ಎಂಬ ಸುದ್ದಿಗೇ ಹೋಗುವುದಿಲ್ಲ. ಪ್ರೀತಿ ಹೇಗೆ ಹುಟ್ಟುತ್ತದೆ, ಬೆಳೆಯುತ್ತದೆ ಎಂದು ಮಾತನಾಡುವುದೂ ಕಷ್ಟ. ಆದರೆ ಇಲ್ಲಿ ಮುಖ್ಯವಾದ ವಿಷಯ, ಮುಂದಿನ ಚರ್ಚೆಗೆ ಅವಕಾಶವೇ ಇಲ್ಲದಂತೆ ಸ್ಪಷ್ಟವಾಗುವ ಸತ್ಯವೆಂದರೆ ಡೆಸ್ಡಿಮೋನಾ ಅಥೆಲೋನನ್ನು ಸಾರ್ವಜನಿಕವಾಗಿ ತನ್ನ ಗಂಡನೆಂದು ಒಪ್ಪಿಕೊಂಡಿದ್ದಾಳೆ ಅನ್ನುವುದು. ಮತ್ತು ಸದ್ಯದ ತನ್ನ ಸ್ಥಿತಿಯಲ್ಲಿ ತನ್ನ ನಿಷ್ಠೆ ಅಥೆಲೋವಿಗೆ ಸೇರಿದ್ದು ಎಂಬುದು ಮತ್ತೊಂದು. ನೈಜಪ್ರೇಮ ಒಂದು ಬಗೆಯ ನಮ್ರತೆಯಿಂದ ಕೂಡಿದ ದಿಟ್ಟತನವನ್ನೂ ಕಲಿಸುತ್ತದೆ. ''ದೇವರು ನಿನ್ನನ್ನು ಕಾಪಾಡಲಿ'' ಎಂದು ಅವಳನ್ನು ಹರಸಿ ಡ್ಯೂಕನಿಗೆ 'ಇನ್ನು ರಾಜಕೀಯ ವಿದ್ಯಮಾನಗಳ ಕುರಿತು ಮಾತನಾಡೋಣ' ಎಂದು ಇಡೀ ಪ್ರಕರಣಕ್ಕೆ ಮುಕ್ತಾಯ ಹೇಳುತ್ತಾನೆ ಬ್ರಬಾನ್ಷಿಯೋ. ಯಾವುದನ್ನು ಹೃತ್ಪೂರ್ವಕವಾಗಿ ಅವನಿಂದ ದೂರವಿಡಲು ಬಯಸಿದ್ದನೋ ಅದನ್ನು, ಅಂದರೆ ತನ್ನ ಮಗಳನ್ನು ಈಗ ಹೃತ್ಪೂರ್ವಕವಾಗಿ ಅಥೆಲೋವಿಗೆ ಧಾರೆ ಎರೆದುಕೊಡುತ್ತಾನೆ. ''ಬೇರೆ ಮಕ್ಕಳಿಲ್ಲದಿರುವುದು ನನಗೆ ಈಗ ಸಂತೋಷ ನೀಡುತ್ತಿದೆ, ಏಕೆಂದರೆ ಈ ಅನುಭವ ನನ್ನನ್ನೊಬ್ಬ ಕಟುಕನನ್ನಾಗಿ ಮಾಡಿಬಿಡುತ್ತಿತ್ತು.'' ಈ ಹಿಂದೆಯೇ ಒಂದು ಅಂಶವನ್ನು ನಾನು ಮಾಡಿದ್ದೆ. 'ವೆನಿಸಿನ ನಾಗರಿಕರ ನಡೆನುಡಿಗಳನ್ನು ಕೊಂಚ ಗಮನವಿಟ್ಟು ನೋಡಬೇಕು' ಎಂದು. ಅಥೆಲೋವಿನ ವಿಷಯದಲ್ಲಿ, ಅವನು ಮಗಳನ್ನು ಅಪಹರಿಸಿಕೊಂಡು ಹೋಗುವ ಮೊದಲು, ಬ್ರಬಾನ್ಷಿಯೋ ಹೇಗೆ ಪ್ರೀತಿ, ವಿಶ್ವಾಸಗಳನ್ನು ತೋರುತ್ತಿದ್ದ ಎಂಬುದನ್ನು ಈಗಾಗಲೇ ಅಥೆಲೋವಿನ ಬಾಯಿಂದಲೇ ಕೇಳಿದ್ದೇವೆ. ಮಗಳು ಕೂಡ ಈ ಕತೆ ಕೇಳಲು ಬರುತ್ತಿದ್ದುದು ಅವನೂ ಕಂಡಿದ್ದಾನೆ. ಆದರೆ ಕನಸುಮನಸ್ಸಿನಲ್ಲಿಯೂ ಅವನು 'perfection would so err against all rules of nature' ಎಂದು ನಂಬಿರಲಿಲ್ಲ. ಡೆಸ್ಡಿಮೋನಾಳಂಥ ಹುಡುಗಿ 'to fall in love with what she feared to look on ?' ಸಾಧ್ಯವೇ ಇಲ್ಲ. ಇಲ್ಲಿ ಗಮನಿಸಬೇಕಾದ ಅಂಶ ಇದು. ಬ್ರಬಾನ್ಷಿಯೋನಿಗೆ ಕಣ್ಣಿಗೆ ಗೋಚರವಾಗುವುದಕ್ಕಿಂತ ಮಿಗಿಲಾಗಿ ಏನೂ ಇಲ್ಲ. ತನ್ನ ಮಗಳು ಬಿಳಿ ಹುಡುಗಿ, ಸುಂದರಿ, ಯುವತಿ, ಸುಸಂಸ್ಕೃತಳು ; ಅಥೆಲೋ ಒಬ್ಬ ಅನಾಗರಿಕ, ಬರ್ಬರ, ಕಪ್ಪು ಮನುಷ್ಯ. ಅಷ್ಟೇ. ಇವುಗಳಾಚೆ ಇವುಗಳೆಲ್ಲವನ್ನೂ ಮೀರಿ ಕೆಲಸ ಮಾಡಬಹುದಾದ ಮನಸ್ಸುಗಳು ಇರಬಹುದು ಎಂದು ಅನ್ನಿಸುವುದೇ ಇಲ್ಲ. ಇದನ್ನೇ ಅತಿ

ಟೊಳ್ಳು ಸಂಸ್ಕೃತಿ ಎನ್ನುವುದು. ಇಂಥ ಸಂಸ್ಕೃತಿಗೆ ದಿಢೀರ್ ತೀರ್ಮಾನಗಳಿಗೆ ಬರುವುದು ಸುಲಭ. ಮಗಳು ಓಡಿಹೋಗಿದ್ದಾಳೆಂದರೆ, ಮಾಟಮಂತ್ರಗಳು ಮಾತ್ರ ಇದಕ್ಕೆ ಕಾರಣವಿರಬೇಕು ಎಂದು ನಿಶ್ಚಯಿಸಿಬಿಡುವ ಪ್ರವೃತ್ತಿಗಳು ಇವು. ಸೂಕ್ಷ್ಮಗಳು, ಆಳಗಳು, ಆಯಾಮಗಳು ಇಲ್ಲದ ಸಂಸ್ಕೃತಿ ಇದು. ಬ್ರಬಾನ್ಷಿಯೋ ಒಬ್ಬನ ವರ್ತನೆಯಿಂದ ಇಡೀ ವೆನಿಸಿನ ಸಂಸ್ಕೃತಿಯನ್ನೇ ಹೀಗೆ ಎಂದು ತೀರ್ಮಾನಿಸಿಬಿಡುವುದು ತಪ್ಪು ಹೌದು. ಆದರೆ ಇಲ್ಲಿ ಬೇರೆ ಪುರಪ್ರಮುಖರು ಇದ್ದಾರೆ. ಡ್ಯೂಕನಿದ್ದಾನೆ, ಬೇರೆ ಹಿರಿಯ ನಾಗರಿಕರು ಇದ್ದಾರೆ. ಈ ಇಡೀ ಪ್ರಸಂಗದ ಬಗ್ಗೆ ಅವರ ಪ್ರಕ್ರಿಯೆಗಳು ಏನು ನೋಡೋಣ. ಅಥೆಲೋ ತನ್ನ, ಡೆಸ್ಡಿಮೋನಾಳ ಪ್ರೀತಿ ಹೇಗೆ ಆರಂಭವಾಯಿತು ಎಂದು ವಿವರಿಸಿ ಹೇಳಿದ ಮೇಲೆ ಡ್ಯೂಕನು ಆಡುವ ಮಾತುಗಳು ಏನು ? 'ಇಂಥ ಕತೆಯು ನನ್ನ ಮಗಳ ಹೃದಯವನ್ನೂ ಗೆದ್ದುಬಿಡುತ್ತಿತ್ತು' ಮತ್ತು ಮುಂದುವರೆದು ಬ್ರಬಾನ್ಷಿಯೋನಿಗೆ 'ವಿವೇಕ'ದ ಮಾತುಗಳನ್ನು ಹೇಳುತ್ತಾ 'ಕುಲಗೆಟ್ಟಿತೆಂದು ನೀನು ತಿಳಿದ ಈ ವಿಷಯವನ್ನು ಸಮಚಿತ್ತದಿಂದ ಒಪ್ಪಿಕೊ. Men do their broken weapons rather use, than their bare hands' ಮೆದುಳಿನಿಂದ ಹೊರಡುವ ಮಾತಿನ ರೀತಿ ಇದು. ಇದ್ದಕ್ಕಿದ್ದಂತೆ 'ಹ್ಯಾಮ್ಲೆಟ್' ನಾಟಕದ ಪಲೋನಿಯಸ್ ನೆನಪಿಗೆ ಬಂದು ಬಿಡುತ್ತಾನೆ. ನೀತಿಪಾಠಗಳ ಸುರಿಮಳೆಗೈಯುವ ಆತುರ. ಎಲ್ಲದರಿಂದಲೂ ಪಾಠ ಕಲಿತುಬಿಟ್ಟ ಭಾವನೆ. ಅನುಭವವೆಂಬುದು ಎಷ್ಟು ಸಂಕೀರ್ಣವೆಂಬುದರ ಅರಿವೇ ಇಲ್ಲದೆ ಮೇಲ್ಮೈ ಹೊಳಪಿನ ಜಗತ್ತಿನಲ್ಲಿ ಬದುಕುವ ಜನ. ಬ್ರಬಾನ್ಷಿಯೋ ಎಷ್ಟೇ ಈ ಸಂದರ್ಭದಲ್ಲಿ ನಮ್ಮ ಟೀಕೆಗೆ ಪಾತ್ರನಾಗುವನಾದರೂ ಅವನು ಪ್ರೀತಿಯಿಂದ ಬೆಳೆಸಿದ ಮಗಳನ್ನು ಕಳೆದುಕೊಂಡ ತಂದೆ ಎಂದು ನಾವು ಮರೆಯಬಾರದು. ಅವನ ಅನುಭವಗಳನ್ನು ವ್ಯಕ್ತಪಡಿಸಲು ಅರಿಯದೆ ತೊಳಲುತ್ತಿರಬಹುದು. ಅಂಥವನ ಮುಂದೆ ಡ್ಯೂಕನು ಆಡುವ ಮಾತುಗಳು ಎಷ್ಟು ಬರಡಾಗಿ, ಎಷ್ಟು ಟೊಳ್ಳಾಗಿ ಕಾಣುತ್ತವೆ. ಮುಂದೆ, ಅಂದರೆ ಬ್ರಬಾನ್ಷಿಯೋ ಈ ಮದುವೆಯನ್ನು ಮನಸ್ಸಿಲ್ಲದೆ ಒಪ್ಪಿಕೊಂಡ ಮೇಲೆ, ಪ್ರಸ್ತುತ ಅಧಿಕೃತ ರಾಜಕೀಯ ಪರಿಸ್ಥಿತಿಯತ್ತ ಮತ್ತೆ ಗಮನಹರಿಸುವುದಕ್ಕೆ ಮುನ್ನ, ಡ್ಯೂಕನು ಬ್ರಬಾನ್ಷಿಯೋವಿಗೆ ಹೇಳುವ ಸಮಾಧಾನದ ಮಾತುಗಳನ್ನು ಗಮನಿಸೋಣ : ''ಇಂಥ ವಿಷಯಗಳಲ್ಲಿ ನಾನು ನಿನ್ನಂತೆಯೇ ನನ್ನ ತೀರ್ಪು ನೀಡಲು ಬಯಸುತ್ತೇನೆ. ಇದರಿಂದಾಗಿ ಈ ಪ್ರೀತಿಯ ಜೀವಿಗಳು ನಿನಗೆ ಹತ್ತಿರವಾಗುವಂತಾಗಲಿ ; ಪರಿಹಾರಗಳು ಇಲ್ಲದಿರುವಾಗ ದುಃಖಗಳು ಕೊನೆಗೊಂಡಂತೆ. To mourn a mischief that is past and gone ; / Is the next way to draw more mischief on / What cannot be preserved when fortune takes / Patience her injury a mockery makes. / The robbed that smiles, steals something from the thief / He robs himself, that spends a bootless grief.' ಆತ್ಮತೃಪ್ತ ಮನಸ್ಸಿನಿಂದ ಸೂತ್ರರೂಪದಲ್ಲಿ ಹೊಮ್ಮುವ ಉಕ್ತಿಗಳು 'ಕಳೆದುಕೊಂಡವನು ತನ್ನ ನಷ್ಟಕ್ಕೆ ಮರುಗದೆ

ನಕ್ಕುಬಿಟ್ಟರೆ ಕಳ್ಳನಿಗೇ ನಷ್ಟ ಉಂಟುಮಾಡಿದಂತೆ. ನಿಷ್ಪ್ರಯೋಜಕಗಳ ಬಗ್ಗೆ ದುಃಖ ಪಡುವುದೆಂದರೆ ನಮಗೆ ನಾವೇ ಚೌರ್ಯವೆಸಗಿಕೊಂಡಂತೆ' ಮನಸ್ಸಿಗೆ ಹೋಗಲಿ, ಮೆದುಳಿಗೂ ತಾಗದೆ ಪುಟಿದು ಹೊರಗೆ ಉದುರಿಬೀಳುವ ನೀರಸ ಮಾತುಗಳು. ಇಡೀ ದೃಶ್ಯದಲ್ಲಿ, ಈ ಇಡೀ ಪ್ರಸಂಗದಲ್ಲಿ ಮೊದಲ ಸಾರಿಗೆಂಬಂತೆ ಬ್ರಬಾನ್ಷಿಯೋ ಒಬ್ಬ ತಂದೆಯ ಹಾಗೆ ಮಾತನಾಡುತ್ತಾನೆ. ಹಾಗೆ ತಂದೆಯ ಹಾಗೆ ಎಲ್ಲಿಯೋ ಆಳದಲ್ಲಿ ಆಘಾತ ಅನುಭವಿಸಿದ್ದರಿಂದಲೇ ಡ್ಯೂಕನಿಗೆ ಸಮಸ್ತರೆದುರು ವಿರೋಧಿಸಿ ಮಾತನಾಡುವ ಧೈರ್ಯವಾಗುವುದು. ''ಸರಿ ಹಾಗಾದರೆ ತುರ್ಕಿಗಳೂ ನಮ್ಮನ್ನೂ ವಂಚಿಸಲು ಸ್ವತಂತ್ರರಿರಲಿ. ನಮಗಾಗುವ ನಷ್ಟಕ್ಕೆ ನಾವು ಮುಗುಳ್ನಕ್ಕು ಬಿಟ್ಟರೆ ನಮಗೇನು ನಷ್ಟವಾದಂತಲ್ಲ. ಅನುಭವಿಸದವರು ಇಂಥ ತೀರ್ಮಾನಗಳಿಂದ ಸಮಾಧಾನದಿಂದ ತೃಪ್ತರಾಗಬಹುದು. ಆದರೆ ಅನುಭವಿಸಿದವನು ತನ್ನ ದುಃಖವನ್ನು, ಮತ್ತೆ ಇಂಥ ತೀರ್ಪುಗಳನ್ನು ಎರಡನ್ನೂ ಸಹಿಸಿಕೊಳ್ಳಬೇಕು. These sentences to sugar, or to gall, / Being strong on both sides, are equivocal. ನೊಂದ ಹೃದಯಕ್ಕೆ ಎಂದೂ ಕಿವಿಗಳು ಕೇಳುವ ಮಾತುಗಳ ಮೂಲಕ ಸಾಂತ್ವನ ದೊರಕಿದ್ದು ನನಗೆ ಗೊತ್ತಿಲ್ಲ'' ನೋವಿನ ಮಾತುಗಳು. ಅಂಥ ನೋವಿನಲ್ಲಿ ಚುಚ್ಚುವ ಮಾತುಗಳು. ಮೊಟ್ಟಮೊದಲ ಬಾರಿಗೆಂಬಂತೆ ನಾವು ಕೂಡ ಬ್ರಬಾನ್ಷಿಯೋನ ಬಗ್ಗೆ ಮರುಕ ಪಡುವಂಥ ಮಾತುಗಳು. 'ಸದ್ಯಕ್ಕೆ ನಮ್ಮ ಮುಂದಿರುವ ನಾಡಿನ ಪ್ರಶ್ನೆ ಕುರಿತು ಮಾತನಾಡೋಣ' ಎಂದು ಇಡೀ ಪ್ರಕರಣಕ್ಕೆ ತೆರೆ ಎಳೆಯುತ್ತಾನೆ. ತತ್‌ಕ್ಷಣದಲ್ಲಿ ಅಥೆಲೋ ಆಡಳಿತದ ದೃಷ್ಟಿಯಲ್ಲಿ ಒಬ್ಬ ವೀರಯೋಧ. ಸೈಪ್ರಸ್‌ಗೆ ಧಾವಿಸಬೇಕಾದ ಸೇನಾನಿ. ಅವನು ಕಂಡುಕೊಂಡ ಹೊಚ್ಚಹೊಸ ಸಂತೋಷಗಳನ್ನು ಬದಿಗೊತ್ತಿ ಆದಷ್ಟು ಶೀಘ್ರವಾಗಿ ಸೈಪ್ರಸ್ಸಿಗೆ ತೆರಳಬೇಕಾಗಿದೆ. ಅಥೆಲೋ ಸಿದ್ಧನಿದ್ದಾನೆ. ಯುದ್ಧವೆಂಬುದು ಅವನ ಬದುಕಿನ ರೀತಿ. ಈಗಲೂ ಅಷ್ಟೆ. ತುರ್ಕೀ ಸೈನ್ಯವನ್ನು ಹಿಮ್ಮೆಟ್ಟಿಸುವುದರಲ್ಲಿ ಸಂದೇಹ ಬೇಡ. ಆದರೆ ಅವನದೊಂದು ಪ್ರಾರ್ಥನೆ ಇದೆ. 'I crave fit disposition for my wife, / Due reference of place and exhibition / With such accommodation and besort / As levels with her breeding". ಡ್ಯೂಕನ ಉತ್ತರ ಸಿದ್ಧವಿದೆ ''ಒಪ್ಪಿಗೆಯಾಗುವುದಾದರೆ, ಅವಳ ತಂದೆಯ ಜೊತೆಗಿರಲಿ'' ತತ್‌ಕ್ಷಣ ಮೂರೂ ಜನ ತಮ್ಮ ವಿರೋಧ ವ್ಯಕ್ತಪಡಿಸುತ್ತಾರೆ – ತಂದೆ, ಮಗಳು, ಅಳಿಯ. ಡೆಸ್ಡಿಮೋನಾಳಿಗೆ ತಂದೆಯ ಬಳಿ ಇದ್ದು ಅವನಿಗೆ ಸದಾ ಇರಿಸುಮುರಿಸು ಉಂಟು ಮಾಡುತ್ತಿರುವುದಕ್ಕೆ ಇಷ್ಟವಿಲ್ಲ. ಅವಳದೇ ಒಂದು ಪ್ರಾರ್ಥನೆಯಿದೆ. ಆ ಉತ್ತರದಲ್ಲಿ ಡೆಸ್ಡಿಮೋನಾಳ ವ್ಯಕ್ತಿತ್ವ ಪ್ರಖರವಾಗಿ ಕಾಣುತ್ತದೆ. ಏನು ಹೇಳುತ್ತಾಳೆ ಮೊದಲು ನೋಡೋಣ. ''ನಾನು ಅಥೆಲೋನನ್ನು ಪ್ರೀತಿಸಿದುದು, ಅವನೊಡನೆ ಒಟ್ಟಿಗೆ ಬದುಕುವುದಕ್ಕೆ (ಅವನಿಂದ ದೂರವಿರುವುದಕ್ಕಾಗಿ ಅಲ್ಲ), ಇದಕ್ಕಾಗಿ ನಾನು ಆರಿಸಿಕೊಂಡ ಹಾದಿ ಎಂಥ ಸಂದರ್ಭವನ್ನಾಗಲಿ ಎದುರಿಸುವುದಕ್ಕೆ

ತಯಾರಾಗಿರುವಂಥ ಹಾದಿ ; ಇದು ಇಡೀ ಜಗತ್ತಿಗೆ ಗೊತ್ತು. 'my heart is subdued / Even to the utmost pleasure of my Lord :' ''ಇದಕ್ಕೆ ಮೊದಲೇ ಡೆಸ್ಡಿಮೋನಾ ದಿಟ್ಟೆ ಎಂಬುದನ್ನು ಗಮನಿಸಿದ್ದೇವೆ. ಮೇಲಿನ ಸಾಲುಗಳು ಮತ್ತು ಮುಂದುವರೆದು ಆಡುವ ಸಾಲುಗಳು ಅವಳು ಅಥೆಲೋವಿನ ಕುರಿತು ತನ್ನ ಉತ್ಕಟವಾದ ಭಾವನೆಗಳನ್ನು , ತಮ್ಮ ಒಟ್ಟು ದಾಂಪತ್ಯದ ಬದುಕಿನ ಕುರಿತಾಗಿ ತನ್ನ ಆಶಯಗಳೇನು ಎಂಬುದನ್ನು ಈ ರಾಜಾಸ್ಥಾನದಲ್ಲಿ, ಊರ ಪ್ರಮುಖರ ಮುಂದೆ ಪ್ರಾಮಾಣಿಕವಾಗಿ, ಧೈರ್ಯವಾಗಿ, ಮಾತುಗಳಿಗೆ ನಾಜೂಕಿನ ಮುಸುಕುಗಳನ್ನು ಹಾಕದೆ, ನೇರವಾಗಿ ಹೊರಹಾಕುತ್ತವೆ. 'ನನ್ನ ಗಂಡನ ಪರಮ ಅಭೀಷ್ಟಗಳನ್ನೂ ತೃಪ್ತಿಪಡಿಸುವುದು ನನ್ನ ಆಸೆ.' 'pleasure' ಎಂಬ ಶಬ್ದಕ್ಕೆ ಇಂದ್ರಿಯಭೋಗ ಎಂಬ ಅರ್ಥವೂ ಇದೆ. ಈ ನಾಟಕದ ಮಡಿವಂತ ಸಂಪಾದಕರುಗಳು 'utmost pleasure' ಎಂಬುದನ್ನು ತೆಗೆದುಹಾಕಿ 'Even to the very quality....' ಎಂಬ ಮಾತುಗಳನ್ನು ಹಾಕುತ್ತಾರೆ. ಅವರುಗಳ ವಾದದ ಪ್ರಕಾರ ಡೆಸ್ಡಿಮೋನಾ ನಯ ನಾಜೂಕುಗಳ ಮರ್ಯಾದಸ್ತ ಹೆಣ್ಣು ಮಗಳು. ಇಂಥ ಹುಡುಗಿಯು ಎಲ್ಲ ಗಂಡಸರೇ ಇರುವ ಸಭೆಯಲ್ಲಿ ಎಗ್ಗಿಲ್ಲದೆ ಮಾತನಾಡುವುದು ಸಾಧ್ಯವೇ ಇಲ್ಲ. 'ನನ್ನ ಗಂಡನ ಮುಖವನ್ನು ಅವನ ಹೃದಯದಲ್ಲಿ ಕಂಡೆ' ಎಂಬ ಅವಳ ಮಾತು ಇದಕ್ಕೆ ಸಾಕ್ಷಿ ಎಂದು ವಾದಿಸುತ್ತಾರೆ. ಈ ಮಾತುಗಳನ್ನು ಒಪ್ಪುವುದಾದರೆ ಡೆಸ್ಡಿಮೋನಾ ಅಥೆಲೋನನ್ನು ಪ್ರೀತಿಸಿದ್ದಾಳೆ. ಅವನೊಡನೆ ಎಲ್ಲ ಅರ್ಥಗಳಲ್ಲಿ ಬದುಕುವುದಕ್ಕೆ ನಿರ್ಧರಿಸಿದ್ದಾಳೆ ಎಂದು ನಂಬುವುದು ಕಷ್ಟವಾಗುತ್ತದೆ. ಆರ್ಡೆನ್ ಸಂಪುಟವನ್ನು ಸಂಪಾದಿಸಿರುವ ಎಂ.ಆರ್. ರಿಡ್ಲೀ ಹೇಳುವಂತೆ 'ಡೆಸ್ಡಿಮೋನಾ ಶೇಕ್ಸ್‌ಪಿಯರ್ ಸೃಷ್ಟಿಸಿದ ಅತ್ಯುತ್ತಮ ಮಹಿಳಾಪಾತ್ರಗಳಲ್ಲಿ ಒಬ್ಬಳು. ಅದರಂತೆಯೇ ಮನಬಿಚ್ಚಿ ಮಾತನಾಡುತ್ತಾಳೆ.' ಶೇಕ್ಸ್‌ಪಿಯರ್‌ನ ನಾಟಕಗಳನ್ನು ಓದುವುದೆಂದರೆ ಬೂಟಾಟಿಕೆಯ ಮತ್ತು ಆತ್ಮವಿನಾಶಕಾರೀ ಮಡಿವಂತಿಕೆಯನ್ನು ಕಳೆದುಕೊಳ್ಳುತ್ತ ಹೋಗುವುದು ಎಂದೂ ಅರ್ಥ. 'ನನ್ನ ಗಂಡನ ಮುಖವನ್ನು ಅವನ ಹೃದಯದಲ್ಲಿ ಕಂಡೆ' ಎಂಬುದು ಆಲಂಕಾರಿಕವಾಗಿ ಮಧ್ಯೆ ತೂರಿದ ಒಂದು ಮಾತು ಅಷ್ಟೆ ''ಅವನ ಗೌರವಾನ್ವಿತ ಹಾಗೂ ಸಾಹಸಮಯ ವ್ಯಕ್ತಿತ್ವಕ್ಕೆ ನಾನು ಮಾರುಹೋಗಿರುವುದು. ......so that, dear lords, if I be left behind, / a moth of peace, and he go to the war / The rites for which I love him are bereft me, /And I a heavy interim shall support, / By his dear absence ; let me go with him." ಅವನು ಯೋಧನೆಂಬ ಕಾರಣಕ್ಕಾಗಿಯೇ ಅವಳು ಮೆಚ್ಚಿರುವುದು. 'ನನ್ನನ್ನು ಬಿಟ್ಟು ಅವನು ಏಕಾಂಗಿಯಾಗಿ ಈ ಯುದ್ಧಕ್ಕೆ ಹೋಗಿಬಿಟ್ಟರೆ ನಾನೊಂದು moth of peace ಆಗಿ ಬಿಡುತ್ತೇನೆ. The rites for which I love him are bereft me' ಇಲ್ಲಿಯೂ ಅಷ್ಟೆ ನಮ್ಮ ಮಡಿವಂತರುಗಳು 'rites' ಶಬ್ದವನ್ನು ಕಿತ್ತು ಹಾಕಿ 'rights' ಎಂದು ಮಾಡುತ್ತಾರೆ. ಹೆಂಡತಿಯಾಗಿ ನನ್ನ'rights' ಎನ್ನುವುದಕ್ಕೂ ಹೆಂಡತಿಯಾಗಿ 'rites for which I love him'

ಅನ್ನುವುದಕ್ಕೂ ಬಹಳಷ್ಟು ವ್ಯತ್ಯಾಸಗಳಿವೆ. ನನ್ನ ಗಂಡನೊಡನೆ ಎಲ್ಲ ಬಗೆಯ ಸಂಸಾರ ಸುಖವನ್ನೂ ನಾನು ಪಡೆಯಬೇಕು ಎಂದು ಹೇಳಿಕೊಳ್ಳುವುದು ಸಂಪ್ರದಾಯಸ್ಥ ಹುಡುಗಿಗೆ ಕಷ್ಟವಾಗಬಹುದು. ; ಪ್ರೀತಿಸಿದ ಹುಡುಗಿಗೆ, ಪ್ರೀತಿ ಎಂದರೆ ಏನೆಂದು ಅನುಭವಿಸಿದ ಹುಡುಗಿಗೆ ಕಷ್ಟವಾಗಲಾರದು. 'ಆದದ್ದರಿಂದ ಅವನೊಡನೆ ಹೋಗಲು ಅನುಮತಿ ನೀಡಿ' ಎಂದು ಕೇಳಿಕೊಳ್ಳುತ್ತಾಳೆ. ಅಥೆಲೋ ಕೂಡ ಡೆಸ್ಡಿಮೋನಾಳ ಈ ಕೆಚ್ಚಿನ ಪ್ರೀತಿಯ ಮುಖವನ್ನು ಕಂಡಿರಲಿಕ್ಕಿಲ್ಲ. ಅವಳ ವಿನಂತಿಗೆ ತಾನೂ ದನಿಗೂಡಿಸುತ್ತಾನೆ. ''ಅವಳ ಇಷ್ಟವನ್ನು ನೆರವೇರಿಸಿ. ಇದನ್ನು ನಾನು ನನ್ನ ಭೋಗ-ತೃಷೆಯನ್ನು ತೀರಿಸಿಕೊಳ್ಳಲು ಕೇಳುತ್ತಿಲ್ಲ. ಯೌವನದ ಸೆಳೆತಗಳನ್ನು ನಾನು ಈಗ ಮೀರಿ ಬೆಳೆದಿದ್ದೇನೆ. ಕರ್ತವ್ಯಭ್ರಷ್ಟನಾಗಿ ನಾನು ನನ್ನ ಸ್ವಾರ್ಥದ ಅಭಿಲಾಷೆಗಳನ್ನು ತೀರಿಸಿಕೊಳ್ಳುವುದರಲ್ಲಿ ಹೊತ್ತು ಕಳೆದರೆ ನನ್ನ ಶಿರಸ್ತ್ರಾಣವನ್ನು ಹೆಣ್ಣುಮಕ್ಕಳು ಬಾಂಡಲೆಗಳು ಮಾಡಿಕೊಳ್ಳುವಂತಾಗಲಿ ; ನನ್ನ ಇಂದಿನವರೆಗಿನ ಕೀರ್ತಿ ಯಶಸ್ಸುಗಳೆಲ್ಲ ತೀವ್ರ ಅಪಮಾನಕ್ಕೀಡಾಗಲಿ.''

ಡ್ಯೂಕನಿಗೆ ಹೊತ್ತು ಹೋಗುತ್ತಿರುವುದೊಂದರ ಪರಿವೆಯಷ್ಟೆ. ಅಥೆಲೋ ಈ ತತ್‌ಕ್ಷಣ ಹೊರಡಬೇಕು. ಇದೇ ರಾತ್ರಿಗೆ. ನಾಳೆ ಮತ್ತೆ ಹತ್ತುಗಂಟೆಗೆ ಊರ ಪ್ರಮುಖರೆಲ್ಲ ಸೇರಬೇಕು. ಎಲ್ಲರಿಗೂ ಶುಭರಾತ್ರಿ ಕೋರಿ ಹೊರಡುವುದಕ್ಕೆ ಮುಂಚೆ ಬ್ರಬಾನ್ಷಿಯೋ ಬಳಿಗೆ ಬಂದು ಮತ್ತೊಂದು ಆಣಿಮುತ್ತು ಸುರಿಸುತ್ತಾನೆ. ....noble signior / If virtue no delighted beauty lack, / Your son-in-law is far more fair than black'. ಇದಕ್ಕೆ ಸರಿದೂಗುವಂತೆ ಬ್ರಬಾನ್ಷಿಯೋ ತಾನು ನಿಷ್ಕ್ರಮಿಸುವುದಕ್ಕೆ ಮುಂಚೆ ಅಥೆಲೋವಿಗೆ ಕಿವಿ ಮಾತು ಹೇಳಿ ಹೋಗುತ್ತಾನೆ. "Look to her, Moor, have a quick eye to see : / She has deceived her father, may do thee." ಮೊದಲ ನೋಟಕ್ಕೆ ಬಹು ನಾಟಕೀಯವಾಗಿ ಕಂಡುಬರುತ್ತದೆ – ವಿಶೇಷವಾಗಿ ನಾಟಕದ ಅಂತ್ಯ ಗೊತ್ತಿರುವವರಿಗಂತೂ ಮತ್ತೂ ಅಷ್ಟು. ಇದ್ದಕ್ಕಿದ್ದ ಹಾಗೆ ಬ್ರಬಾನ್ಷಿಯೋನಿಗೆ ಭವಿಷ್ಯದತ್ತ ಇಣುಕುನೋಟ ಸಾಧ್ಯವಾಗುವ vision ಫಲಿಸಿಬಿಟ್ಟಿತು ಎಂದು ನಂಬುವುದು ಕಷ್ಟ. ಎಲ್ಲೋ ಕೇಳಿ, ನೆನಪಿನಲ್ಲಿ ಉಳಿದ ಜಾಣನುಡಿಯಷ್ಟೆ ಅದು.

ಅಥೆಲೋವಿಗೆ ಉಳಿದಿರುವುದು ಒಂದು ಗಂಟೆ ಮಾತ್ರ. ಇಯಾಗೋ ಮತ್ತು ಅವನ ಹೆಂಡತಿ ಎಮಿಲಿಯಾಗೆ ಡೆಸ್ಡಿಮೋನಾಳನ್ನು ಸೈಪ್ರಸ್‌ಗೆ ಕರೆತರುವ ಜವಾಬ್ದಾರಿ ವಹಿಸಿ ಡೆಸ್ಡಿಮೋನಾಳೊಂದಿಗೆ ಉಳಿದ ಹೊತ್ತನ್ನು ಕಳೆಯಲು ನಿಷ್ಕ್ರಮಿಸುತ್ತಾನೆ.

ಈಗ ರಂಗದ ಮೇಲೆ ಉಳಿದಿರುವುದು ಇಯಾಗೋ ಮತ್ತು ರೋಡರೀಗೋ ಇಬ್ಬರೇ. ರೋಡರೀಗೋನಿಗೆ ಇದ್ದ ಒಂದೇ ಎಳೆ ಆಸೆಯೂ ಈಗ ನಶಿಸಿಹೋಗಿದೆ. ಹತಾಶನಾಗಿ ಬಿಟ್ಟಿದ್ದಾನೆ. ಹೊಳೆಗೆ ಹಾರಿಕೊಂಡು ಬಿಡಬೇಕೆಂದು ನಿರ್ಧರಿಸಿದ್ದಾನೆ. ಬದುಕೊಂದು

ಯಾತನೆಯಾದಾಗ ಹಟದಿಂದ ಬದುಕಹೋಗುವುದು ಮೂರ್ಖತನ ಎಂದು ಮನಗಂಡುಬಿಟ್ಟಿದ್ದಾನೆ. ಇಯಾಗೋವಿಗೆ ಇಂಥ ಮನುಷ್ಯನ ಕುರಿತು ಅಪಾರ ಕನಿಕರ, ಅಷ್ಟೇ ಮಟ್ಟದ ಕಿರಿಕಿರಿ ಉಂಟಾಗುತ್ತದೆ. ಅವನ ಈ ಇಪ್ಪತ್ತೇಳು ವರ್ಷಗಳ ಜೀವನದಲ್ಲಿ ಲಾಭ ಯಾವುದು, ನಷ್ಟ ಯಾವುದು ಎಂದು ತಿಳಿಯುವುದು ಅರಿವಾದಾಗಿನಿಂದ ಮನುಷ್ಯ ತನ್ನನ್ನು ತಾನು ಹೇಗೆ ಗೌರವಿಸಿಕೊಳ್ಳುವುದು ಎಂದು ಕಲಿತವನೊಬ್ಬನನ್ನು ಕಂಡಿಲ್ಲ. ''ಒಂದು ಗಿನಿಕೋಳಿಯ ವ್ಯಾಮೋಹಕ್ಕಾಗಿ ಹೊಳೆ ಹಾರುತ್ತೇನೆ ಎಂದು ಹೇಳುವುದಕ್ಕೆ ಮೊದಲು ನಾನು ನನ್ನ ಮನುಷ್ಯಹುಟ್ಟನ್ನು ಒಂದು ಗಡವಕೋತಿಯ ಜಾತಿಗೆ ಬದಲಿಸಿಕೊಂಡೇನು.'' ಆದರೆ ರೋಡರೀಗೋವಿಗೆ ಬೇರೆ ದಾರಿಯೇ ಕಾಣುತ್ತಿಲ್ಲ. ಇಷ್ಟು ವ್ಯಾಮೋಹಪಡುವುದು ತನಗೇ ನಾಚಿಕೆ ತರಿಸುತ್ತದೆ-ನಿಜ. 'ಆದರೆ ಏನು ಮಾಡಲಿ ? ಬದಲಾಗುವುದು ನನ್ನ ಗುಣದಲ್ಲಿಲ್ಲ' ಎಂದು ಹಲುಬುತ್ತಾನೆ. 'ಗುಣ ?' ತೃಣಸಮಾನವಾದದ್ದು ಈ ಗುಣವೆಂಬುದು. 'ಈ ಪ್ರೀತಿ' ಯೆಂದು ರೋಡರೀಗೋ ಕರೆಯುತ್ತಿರುವುದು ಕೇವಲ ಇಂದ್ರಿಯಭೋಗದಾಸೆ ಅಷ್ಟೆ. ಮನುಷ್ಯನಿಗೆ ಈ ಭೋಗದಾಸೆಯನ್ನು ನಿಯಂತ್ರಣದಲ್ಲಿಡುವುದಕ್ಕೆ ವಿವೇಚನೆಯೆಂಬುದೊಂದು ಇರುವುದರಿಂದ ತನ್ನ ಆಸೆ ಅಭೀಷ್ಟಗಳನ್ನು ಮಿತಿಗಳೊಳಗೆ ಇರಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಅದು ಬಿಟ್ಟರೆ ಎಲ್ಲವೂ ಲೈಂಗಿಕಾಕರ್ಷಣೆಗಳು, ಸಂಭೋಗಾಕಾಂಕ್ಷೆ ಅಷ್ಟೆ. ರೋಡರೀಗೋವಿನಂಥ ಸಾಮಾನ್ಯ ಬುದ್ಧಿಶಕ್ತಿಯವನಿಗೂ ಇಯಾಗೋನ ಮಾತುಗಳು ಸರಿ ಎನಿಸುತ್ತಿಲ್ಲ. ಆದರೆ ಇಯಾಗೋವಿಗೆ ಖಂಡಿತ ಗೊತ್ತು, ಕಾಮತೃಷೆ, ವಿಷಯಾಸಕ್ತಿ ಇವುಗಳನ್ನು ಮೀರಿ ಮತ್ತೇನೂ ಇಲ್ಲ. 'ಹೊಳೆಗೆ ಹಾರುವುದಾ ?, ಬೆಕ್ಕುಗಳನ್ನು ಕುರುಡು ಕುನ್ನಿಗಳನ್ನು ಹೊಳೆಗೆ ಹಾಕು' ರೋಡರೀಗೋವಿನೊಡನೆ ತನ್ನ ಸಂಬಂಧ ನಿಕಟವಾದದ್ದು, ಗಟ್ಟಿಯಾದದ್ದು–ಸದ್ಯಕ್ಕಂತೂ ಮತ್ತೂ ಹೆಚ್ಚಿಗೆ ಈ ಸ್ನೇಹ ಸದುಪಯೋಗಕ್ಕೆ ಬಳಕೆಯಾಗುತ್ತದೆ. 'ಹೋಗು, ನಿನ್ನ ಥೈಲಿಯನ್ನು ಹಣದಿಂದ ತುಂಬಿಸಿಕೊ, ಕೊಂಚ ವೇಷವೂ ಬದಲಿಸಿ, ಸೈಪ್ರಸ್ಸಿಗೆ ನಮ್ಮನ್ನು ಹಿಂಬಾಲಿಸು. ಹಾಳಾಗಲೇಬೇಕು ಎಂದು ನಿರ್ಧರಿಸಿದ್ದರೆ ಹೊಳೆಗೆ ಹಾರುವುದಕ್ಕಿಂತ ಬೇರೆ ಯಾವುದಾದರೂ ಮಾರ್ಗ ಕಂಡುಕೊ. ಎಷ್ಟು ಸಾಧ್ಯವೋ ಅಷ್ಟು ಹಣ ತುಂಬಿಸಿಕೊ. 'If sanctimony, and a frail vow, betwixt an erring barbarian, and a super-subtle venetian, be not too hard for my wits, and all the tribe of hell, thou shalt enjoy her.' ಈ Erring barbarian ಅಥೆಲೋನನ್ನೂ supersubtle Venetian ಡೆಸ್ಡಿಮೋನಾಳನ್ನೂ ಬಂಧಿಸಿರುವುದು ಡಾಂಭಿಕ ಆಚಾರ ಮತ್ತು ಜಳ್ಳು ಶಪಥ – ಇವುಗಳಷ್ಟೆ. ''ನನ್ನ ಚತುರಮತಿಗೆ ಇಂಥ ಕಪಟಗಳನ್ನು ಮುರಿಯುವುದು ಸಾಧ್ಯವಾದರೆ ಡೆಸ್ಡಿಮೋನಾಳನ್ನು ನೀನು ಭೋಗಿಸುವುದು ಖಂಡಿತ.... ಅವಳನ್ನು ಅನುಭವಿಸುವ ಯತ್ನದ ಹಾದಿಯಲ್ಲಿ ಪ್ರಾಣಬಿಟ್ಟರೆ ಅದಕ್ಕೊಂದು ಬೆಲೆ.... ಹೊಳೆಹಾರಿಕೊಂಡರೇನು ಬಂತು ಮಣ್ಣು ?'' ಇಯಾಗೋವಿಗೆ ಒಂದು ಮಾತಂತೂ ಖಂಡಿತವಾಗಿ ಅರಿವಿಗೆ ಬಂದಿದೆ. ಡೆಸ್ಡಿಮೋನಾ

ಅಥೆಲೋನನ್ನು ಬಹಳ ದಿವಸ ಹಚ್ಚಿಕೊಂಡಿರುವುದು ಸಾಧ್ಯವೇ ಇಲ್ಲ. ಅವನೂ ಅಷ್ಟೆ. ಆರಂಭದಲ್ಲಿ ಆಕರ್ಷಣೆ ಉಕ್ಕಿ ಹರಿದಿದೆ ನಿಜ. ಅಷ್ಟೆ. ಬಹುಬೇಗ ಇದು ತಣ್ಣಗಾಗುವುದು ಖಂಡಿತ. ಈ ಕಪ್ಪುಜನ ಅಸ್ಥಿರಮನಸ್ಸಿನವರು, ಚಂಚಲರು. ಈಗ ಬಹುರುಚಿಯಾಗಿ ಕಾಣುತ್ತಿರುವುದೇ ನಾಳೆ ಹುಳಿಯಾಗುತ್ತದೆ. ಮತ್ತೆ ಅವಳಿಗೆ ಅವನ ಮೈಮಾಟಗಳ ಸುಖವುಂಡು ತಣಿದ ಮೇಲೆ, ತನ್ನ ಆಯ್ಕೆ ಎಂಥ ದೋಷಪೂರ್ಣವೆಂದು ಅರಿವಿಗೆ ಬರುತ್ತದೆ. ಅವಳಿಗೆ ವೈವಿಧ್ಯ ಬೇಕೇಬೇಕು. 'Therefore put money in thy purse' ''ನನ್ನ ಬಗ್ಗೆ ಏನೂ ಅನುಮಾನ ಪಡಬೇಡ. ಅಥೆಲೋನನ್ನು ನಾನು ದ್ವೇಷಿಸುತ್ತೇನೆ ಎಂದು ನಿನಗೆ ಅನೇಕ ಸಲ ಹೇಳಿದ್ದೇನೆ. ಮತ್ತೆ ಮತ್ತೆ ಹೇಳುತ್ತೇನೆ. ನಿನ್ನ ಕಾರಣವೂ ಏನೂ ಕಡಿಮೆಯದಲ್ಲ – ಇಬ್ಬರೂ ಒಟ್ಟು ಸೇರಿ ಅವನ ಮೇಲೆ ಪ್ರತೀಕಾರ ಸಾಧಿಸೋಣ. ಅವಳನ್ನು ಹಾದರಕ್ಕಿಳಿಸಿ ಅವನನ್ನು ಜಾರಿಣಿಯ ಗಂಡನನ್ನಾಗಿ ಮಾಡುವುದಾದರೆ ನೀನು ಬಯಸುತ್ತಿರುವ ಸಂತೋಷ ನಿನಗೂ, ಈ ಇಡೀ ಪ್ರಕರಣದಿಂದ ವಿನೋದ ನನಗೂ ದಕ್ಕುವುದು ಖಂಡಿತ. ಹೋಗು ದುಡ್ಡು ಹೊಂದಿಸಿಕೋ. ನಾ ಹೇಳಿದ್ದು ಸ್ಪಷ್ಟ ಆಯಿತಲ್ಲ ?.... ಹೊಳೆ ಹಾರುವ ಮಾತು ಇನ್ನು ಮುಂದಕ್ಕಿಲ್ಲ.... ಹೋಗು ಹಣ ತುಂಬಿಸಿಕೋ!''

ಈ ನಾಟಕದಲ್ಲಿಯಷ್ಟೇ ಅಲ್ಲ, ಶೇಕ್ಸ್‌ಪಿಯರ್‌ನ ಒಟ್ಟು ನಾಟಕಗಳಲ್ಲಿಯೇ ಇಯಾಗೋ ಒಂದು ಕ್ಲಿಷ್ಟಪಾತ್ರ, ಅತ್ಯಂತ ಸಂಕೀರ್ಣ ಪಾತ್ರ. ಅವನು ಎಂಥ ಮನುಷ್ಯ ಎಂದು ನಿರ್ದಿಷ್ಟವಾಗಿ ಹೇಳುವುದು ಸುಲಭದ ಮಾತೇ ಅಲ್ಲ. ಸಾಂಪ್ರದಾಯಿಕ ರೀತಿಯ ಖಳನಾಯಕನೆ ? ಅಥವಾ ಕೇವಲ ಬೇರೆಯವರ ಸುಖವನ್ನು, ಸಂತೋಷವನ್ನು ಸಹಿಸದೆ ಅವರಿಗೆ ಹಿಂಸೆಕೊಟ್ಟು ಅವರು ನರಳುವುದನ್ನು ನೋಡಿ ಆನಂದಿಸುವವನೆ ? ಮಾನಸಿಕವಾಗಿ ಅಸ್ವಸ್ಥನೆ ? ಅಥವಾ ತೀವ್ರವಾದ ಫ್ಯಾಸಿಸ್ಟ್ ರೀತಿಯ ಜನಾಂಗ ದ್ವೇಷಿಯೆ ? ಕುಚೇಷ್ಟೆಸ್ವಭಾವದ ವಿನೋದಪ್ರಿಯನೆ ? ಅಥವಾ ಆಳದಲ್ಲಿ ಭಯಂಕರ ಸ್ತ್ರೀದ್ವೇಷಿಯೆ ? ಬಹುಶಃ ಎಲ್ಲ ಈ ಲಕ್ಷಣಗಳೂ ಅವನಲ್ಲಿವೆ. ಈ ಎಲ್ಲದರ ಮಿಶ್ರಣ ಎಷ್ಟು ಸತ್ಯವೋ ಈ ಎಲ್ಲ ವಿವರಗಳನ್ನು ಮೀರುವ ವಿಚಿತ್ರಗಳೂ ಅವನಲ್ಲಿವೆ ಎಂಬುದೂ ಅಷ್ಟೇ ಸತ್ಯ. ಅವನ ಮಿದುಳು ಪಾದರಸದಷ್ಟು ಚುರುಕು. ಕ್ಷಣಾರ್ಧದಲ್ಲಿ ತಂತ್ರಗಳನ್ನು ಬದಲಿಸಿ, ಹೊಸತೊಂದನ್ನು ಕಲ್ಪಿಸಿ ಅದಕ್ಕೆ ರೆಕ್ಕೆಪುಕ್ಕ ಹಚ್ಚಿ ಹಾರಿಸಿಬಿಡಬಲ್ಲ ಚಾಣಾಕ್ಷ, ತನ್ನೆದುರು ನಿಂತಿರುವವರನ್ನು ಅವಲಂಬಿಸಿ ಭಾಷೆ, ವರ್ತನೆ, ನಡವಳಿಕೆಗಳನ್ನು ಅಳವಡಿಸಿಕೊಳ್ಳಬಲ್ಲ ಜಾಣ. ಬದುಕು ಸಲೀಸಾಗಿ ನಡೆದುಕೊಂಡು ಹೋಗುತ್ತಿದೆ ಎಂದರೆ ಇಯಾಗೋ ಅಂಥವರು ಅಸ್ವಸ್ಥರಾಗುತ್ತಾರೆ. ಅಷ್ಟೇ ಮಟ್ಟಿಗೆ ರೋಡರೀಗೋವಿನಂಥ ದಡ್ಡನೊಬ್ಬ ಕೈಗೆ ಸಿಕ್ಕಿದರೆ ಅವನನ್ನು ಕಿರುಬೆರಳು ಸುತ್ತ ಆಡಿಸಿ ಬಿಟ್ಟುಬಿಡುತ್ತಾರೆ ವಿನೋದಕ್ಕಾಗಿ, ಸ್ವಾರ್ಥಕ್ಕಾಗಿ. 'ಹೀಗೆ ದಡ್ಡರನ್ನು ನಾನು ನನ್ನ ಹಣದ ಥೈಲಿಮಾಡಿಕೊಳ್ಳುತ್ತೇನೆ' ಅಂದವನು ತನ್ನ ಇಂಥ ಸ್ಥಿತಿಗೆ ಮರುಕವೂ ಪಟ್ಟುಕೊಳ್ಳುವವನಂತೆ

ನಟಿಸುತ್ತಾನೆ. 'For I mine own gained knowledge should profane, / If I would time expend with such a snipe, / But for my sport and profit. ಮೊದಲನೆಯ ಅಂಕದ ಮೂರನೆಯ ದೃಶ್ಯದ ಕೊನೇಭಾಗದಲ್ಲಿ ಅವನದೊಂದು ಸ್ವಗತವಿದೆ. ಮೊದಲ ಸ್ವಗತ. ತನ್ನ ಇಡೀ ಯೋಜನೆಗಳ ಹಿಂದಿನ ಉದ್ದೇಶಗಳಿಗಾಗಿ ಹುಡುಕುತ್ತಿದ್ದಾನೆ. ಅಥೆಲ್ಲೋವಿನ ಕುರಿತಾದ ತನ್ನ ಅಸಹನೆಗೆ ಏನು ಕಾರಣ ? 'I hate the moor' ಎಂದು ಹೇಳಿಬಿಟ್ಟಾದ ಮೇಲೆ ಅದನ್ನು ಸ್ಥಾಪಿಸಲು ಬಹು ಗಟ್ಟಿಯಾಗಿ ನೆಲೆಹುಡುಕುತ್ತಾನೆ. 'And it is thought abroad, that betwixt my sheets / He has done my office ; I know not if it be true..../ Yet I, for mere suspicion in that kind, will do, as if for surety. ಮಡಿವಂತ ಸಂಪಾದಕರು ಈ ಸಾಲುಗಳನ್ನು ತೆಗೆದುಹಾಕುತ್ತಾರೆ. ಹಾಗೆ ನಾವು ನಾಟಕವನ್ನು ಶುದ್ಧಿಗೊಳಿಸುತ್ತ ಹೋದರೆ ಪಾತ್ರಕ್ಕಷ್ಟೇ ಅಲ್ಲ, ಇಡೀ ನಾಟಕಕ್ಕೂ ಅನ್ಯಾಯವೆಸಗಿದಂತೆ. ಇಂಥ ವಿಕೃತ ಕಲ್ಪನೆಗಳಿರುವುದ ರಿಂದಲೇ ಇಯಾಗೋ ಆಗಿರುವುದು. 'ಅಥೆಲ್ಲೋ' ಇಡೀ ನಾಟಕವೇ ಗಂಡು-ಹೆಣ್ಣು, ಪ್ರೀತಿ-ಕಾಮ, ಅಸೂಯೆ-ಪ್ರತೀಕಾರ ಈ ವಸ್ತುಗಳ ಮೇಲೆ ನಿಂತಿರುವುದು. ನಮ್ಮ ಬರಡು ಪಾವಿತ್ರ್ಯವನ್ನು ಉಳಿಸಿಕೊಳ್ಳುವ ಅವಸರದಲ್ಲಿ ಒಬ್ಬ ಮಹಾನ್ ನಾಟಕಕಾರನಿಗೆ ಅನ್ಯಾಯವೆಸಗಬಾರದು ಎಂಬ ವಿನಯ ನಮ್ಮಲ್ಲಿರಬೇಕು. ಈ ಮಾತುಗಳನ್ನು ನಾಟಕದ ಮುಂದಿನ ಭಾಗಗಳಲ್ಲಿಯೂ ಪದೇಪದೇ ನಾವು ನೆನಪುಮಾಡಿಕೊಳ್ಳುತ್ತಿರಬೇಕಾಗುತ್ತದೆ. ಇಲ್ಲಿ ಇಯಾಗೋ ಏನು ಹೇಳುತ್ತಿದ್ದಾನೆ ? ಅಥೆಲ್ಲೋ ತನ್ನ ಹಾಸಿಗೆಗೂ ನುಸುಳಿ ತನ್ನ ಹೆಂಡತಿಯನ್ನೂ ಭೋಗಿಸಿದ್ದಾನೆ ಎಂಬ ಮಾತಿದೆ. ಆ ಮಾತು ಸತ್ಯವೋ ಅಲ್ಲವೋ ಗೊತ್ತಿಲ್ಲ ಎಂದು ಒಪ್ಪಿಕೊಳ್ಳುವಷ್ಟು ಕನಿಷ್ಠ ಪ್ರಾಮಾಣಿಕತೆಯನ್ನೂ ಪ್ರದರ್ಶಿಸುತ್ತಾನೆ. ಆದರೆ ತನ್ನ ಕಾರ್ಯ ಸಾಧಿಸುವುದಕ್ಕೆ ಅನುಮಾನವಷ್ಟೇ ಸಾಕು. ಈ ಗುಮಾನಿ ಸತ್ಯವೆಂದೇ ನಂಬಿ ಕಾರ್ಯತತ್ಪರನಾಗಬೇಕು. ತನ್ನ ಪರವಾಗಿ ಇರುವ ವಿಷಯಗಳು ಯಾವುವು ? 'he holds me well, / The better shall my purpose work on him'. ರೋಡರಿಗೋ ತನ್ನಲ್ಲಿಟ್ಟ ನಂಬಿಕೆಯನ್ನು ಒಂದು ರೀತಿ ಬಳಸಿಕೊಂಡರೆ, ಅಥೆಲ್ಲೋ ತನ್ನ ಬಗ್ಗೆ ಇಟ್ಟಿರುವ ವಿಶ್ವಾಸ, ಗೌರವಗಳನ್ನು ಮತ್ತೊಂದು ರೀತಿ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳಬೇಕು. ಹೇಗೆ ? 'Cassio is a proper man, let me see now, / To get his place, and to make up my will / A double knavery.... how, how ? let me see..../' ಪ್ರತಿ ಹೆಜ್ಜೆಯನ್ನೂ ಕರಾರುವಾಕ್ಕಾಗಿ ಇಡಬೇಕು. ಸ್ವಲ್ಪ ದಿವಸ ಕಳೆದ ಮೇಲೆ ಕ್ಯಾಷಿಯೋ ಡೆಸ್ಡಿಮೋನಾಳ ವಿಷಯದಲ್ಲಿ ಅತಿ ಸಲಿಗೆ ವಹಿಸುತ್ತಿದ್ದಾನೆ ಎಂದು ಅಥೆಲ್ಲೋವಿನ ಕಿವಿಯಲ್ಲಿ ಊದುವುದು ; ಕ್ಯಾಷಿಯೋ ಹೆಣ್ಣುಮಕ್ಕಳು ದಾರಿತಪ್ಪುವಂತೆ ಮಾಡಬಲ್ಲಷ್ಟು ಆಕರ್ಷಕ ವ್ಯಕ್ತಿತ್ವ ಉಳ್ಳವನು. ಯಾರಾದರೂ ಅನುಮಾನ ಪಡಬೇಕು ಅಷ್ಟು ಸ್ನೇಹಸೂಚಕ ಪ್ರಯತ್ನ ರೀತಿಯವನು. ಮತ್ತೆ ಈ ಅಥೆಲ್ಲೋ 'a free and open nature' ಉಳ್ಳ ಮನುಷ್ಯ.

ಕಾಣುವುದಕ್ಕೆ ಪ್ರಾಮಾಣಿಕರಾದವರನ್ನು ನಿಜವಾಗಿ ಪ್ರಾಮಾಣಿಕರೆಂದು ಭ್ರಮಿಸಿಬಿಡುವವನು. ಎಂದೇ 'will as tenderly be led by the nose / As asses are. ಆಯಿತು. ಮನಸ್ಸಿನಲ್ಲಿ ಆವಿರ್ಭಾವ ಗೊಂಡದ್ದಾಯಿತು. 'Hell and night / Must bring this monstrous birth to the world's light". ಅಥೆಲೋ, ಡೆಸ್ಡಿಮೋನಾ ಪಾತ್ರಗಳ ಸಂಪೂರ್ಣ ಪರಿಚಯವಿನ್ನೂ ಆಗದಿರುವಾಗ, ಇಲ್ಲಿಯವರೆವಿಗೆ ಪ್ರಧಾನವಾಗಿ ಡ್ಯೂಕನ, ಬ್ರಬಾನ್ಷಿಯೋನ ಮತ್ತು ಊರ ಪ್ರಮುಖರ ಒಣಮಾತುಗಳು ಕೇಳಿ ಜಡ್ಡು ಹಿಡಿದಿದ್ದ ಕಿವಿಗಳಿಗೆ, ಕೆಡುಕೆನಿಸಿದರೂ, ಇಯಾಗೋವಿನ ಮಾತುಗಳು ಆಕರ್ಷಕವಾಗಿ ಕಂಡುಬಿಟ್ಟರೆ ಅಚ್ಚರಿ ಏನು ?

ಸಮುದ್ರ ಆಕ್ರೋಶಗೊಂಡಿದೆ. ಆಕಾಶ ಭೂಮಿಗಳ ಮಧ್ಯೆ ಏನನ್ನೂ ಗುರುತಿಸಲಾಗದಂಥ ಭಯಂಕರ ಸ್ಥಿತಿ ಏರ್ಪಟ್ಟಿದೆ. ಒಂದು ಹಡಗೂ ಕಾಣುತ್ತಿಲ್ಲ. ಬೆಟ್ಟಗಳನ್ನೇ ಕರಗಿಸುವಷ್ಟು ಪ್ರಬಲವಾಗಿ ಚಂಡಮಾರುತ ಸಮುದ್ರದ ಅಲೆಗಳನ್ನು ಹುಚ್ಚೆಬ್ಬಿಸಿದೆ. ಆಕಾಶದ ನಕ್ಷತ್ರಗಳು, ನಾವೆಗಳ ಮಾರ್ಗದರ್ಶಕ ಧ್ರುವನಕ್ಷತ್ರಗಳನ್ನೂ ಸೇರಿದ ಹಾಗೆ ನೀರಿನ ಅಲೆಗಳು ಅಳಿಸಿಹಾಕಿಬಿಟ್ಟಂತೆ ಕಾಣುತ್ತಿವೆ. ವೆನಿಸರಿಗೆ ಅಸಾಧ್ಯವೆನಿಸಿದರೆ ಖಂಡಿತವಾಗಿ ತುರ್ಕೀ ಹಡಗುಗಳು ಮುಳುಗಿಯೇ ಹೋಗಿರಬೇಕು. ಹೀಗೆಲ್ಲ ಆತಂಕದಲ್ಲಿ, ಆಸೆಯಲ್ಲಿ ಸಮುದ್ರ ತೀರದಲ್ಲಿ ನಿಂತ ವೆನಿಸಿನ ಮಾಂಟನೋ ಮತ್ತು ಅವನ ಸಹಚರರಿಗೆ ಯುದ್ಧ ಮುಗಿಯಿತು, ವೆನಿಸಿಗೆ ಜಯ ಲಭಿಸಿತು ಎಂದ ಸುದ್ದಿ ಸಿಗುತ್ತದೆ. ಜೊತೆಜೊತೆಗೆ ಸಮುದ್ರದಲ್ಲಿ ಮತ್ತೊಂದು ತಮ್ಮದೇ ಹಡಗು ತೀವ್ರ ಹಾನಿಗೊಳಗಾದ ವಿಷಯವೂ ತಿಳಿಯುತ್ತದೆ. ಈಗ ಆ ಹಡಗು ದಡ ಮುಟ್ಟಿದ್ದು, ವೆನಿಸಿನ ಕ್ಯಾಷಿಯೋ, ಅಥೆಲೋವಿನ ಲೆಫ್ಟಿನೆಂಟ್ ಆಗಮಿಸಿದ್ದಾನೆ ಎಂದು ತಿಳಿಯುತ್ತದೆ. ಅಥೆಲೋನನ್ನು ಸೈಪ್ರಸ್‌ನ ರಾಜ್ಯಪಾಲನನ್ನಾಗಿ ನೇಮಿಸಲಾಗಿದೆ. ಹೌದು ಅವನು 'ಅರ್ಹ', 'ಧೈರ್ಯಶಾಲಿ' ಎಂಬುದು ಮಾಂಟನೋಗೆ ಗೊತ್ತು. ಆದರೆ ಈಗ ಅವನನ್ನು ಕರೆತರುತ್ತಿರುವ ಹಡಗು ಅಪಾಯಕ್ಕೆ ಸಿಲುಕಿದೆ. ಈ ಸುದ್ದಿ ತಂದ ಕ್ಯಾಷಿಯೋ ಅಥೆಲೋವಿನ ಸುರಕ್ಷಿತ ಆಗಮನಕ್ಕಾಗಿ ಪ್ರಾರ್ಥಿಸುತ್ತಿದ್ದಾನೆ. ''ಹೌದು ಅಥೆಲೋ 'commands like a full soldier', ಸಮುದ್ರ ದಡಕ್ಕೆ ಹೋಗೋಣ, ಬಂದ ಹಡಗನ್ನು ಸ್ವಾಗತಿಸುವುದಕ್ಕೆ ಹೋಗೋಣ, ಹಾಗೆಯೇ ಅಥೆಲೋವಿನ ಹಡಗು ಕ್ಷೇಮವಾಗಿ ದಡಮುಟ್ಟಲಿ ಎಂಬುದನ್ನು ನಮ್ಮ ಕಣ್ಣುಗಳನ್ನು 'Even till we make the main and the aerial blue / An indistinct regard' ಹಾಯಿಸೋಣ. ಕ್ಯಾಷಿಯೋ ಪ್ರವೇಶಿಸಿ ಅವರೊಡನೆ ತನ್ನ ದನಿಯನ್ನೂ ಕೂಡಿಸಿ 'ಅಥೆಲೋವಿಗೆ ಏನೂ ಅಪಾಯವಾಗಲಾರದು, ಅವನ ಹಡಗು ಬಹು ಗಟ್ಟಿಮುಟ್ಟಾದದ್ದು ಮತ್ತು ಅದನ್ನು ನಡೆಸುತ್ತಿರುವ ನೌಕಾನಾಯಕ ಬಹು ಸಮರ್ಥ' ಎಂದು ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸುತ್ತಾನೆ.

ಹಡಗೊಂದು ದಡಮುಟ್ಟಿತು ಎಂಬ ಕೂಗು ಕೇಳಿದ ಕೂಡಲೆ ಕ್ಯಾಷಿಯೋನಿಗೆ ಅದು ಅಥೆಲೋವಿನದೇ ಇರಬೇಕೆಂದು ಅನ್ನಿಸಿ ಸಹಾಯಕರನ್ನು ನೋಡಿಬರಲು ಅಟ್ಟುತ್ತಾನೆ. ಮಾಂಟನೋಗೆ ಅಥೆಲೋ ಮದುವೆಯಾದ ವಿಷಯ ಗೊತ್ತಿಲ್ಲ. 'ಹೌದು, ಆಗಿದ್ದಾನೆ' ಎಂದು ಕ್ಯಾಷಿಯೋ ಡೆಸ್ಡಿಮೋನಾಳನ್ನು ಅತ್ಯಂತ ಮಧುರವಾಗಿ ವರ್ಣಿಸುತ್ತಾನೆ. ಮೆಚ್ಚುಗೆ, ಗೌರವ, ಅಭಿಮಾನ ಹಾಗೂ ಅಥೆಲೋನಿಗೆ ಉಂಟಾದ ಈ ಅದೃಷ್ಟ ಎಲ್ಲವೂ ಅವನ ಮಾತುಗಳಲ್ಲಿ ಪ್ರತಿಧ್ವನಿತವಾಗುತ್ತದೆ.

> 'Most fortunately, he hath achieved a maid
> That paragons description, and wild fame :
> One that excels the quirks of blazoning pens,
> And in the essential vesture of creation
> Does bear all excellency....'

ಈ ಮಾತುಗಳಲ್ಲಿ ಡೆಸ್ಡಿಮೋನಾಳ ಬಗ್ಗೆ ಎಷ್ಟು ವಿನಯಪೂರ್ವಕ ಮೆಚ್ಚುಗೆ ಇದೆಯೋ ಅಷ್ಟೇ ಮಟ್ಟಿಗೆ ಅಥೆಲೋವಿನ ಸುಯೋಗದ ಬಗ್ಗೆ ಸಂತಸವಿದೆ. ತನ್ನ ನಾಯಕನಿಗೆ ಒಳ್ಳೆಯದಾಯಿತಲ್ಲ ಎಂಬ ಧನ್ಯತೆಯ ಭಾವವಿದೆ. ಹೀಗೆ ಅವನು ಮಾತನಾಡುತ್ತಿದ್ದಂತೆಯೇ, ಮಾತಿನ ಮಧ್ಯದಲ್ಲಿಯೇ ಅಥೆಲೋವಿನ ಧ್ವಜಧಾರಿ ಇಯಾಗೋ ಬಂದು ತಲುಪಿದ ಸುದ್ದಿ ಬರುತ್ತದೆ. ಅನುಕೂಲಕರ ಹಾಗೂ ಸುಖಕರ ಯಾನವಾಗಿದೆ ಅವನಿಗೆ ಎಂದು ಹರ್ಷಿಸಿದ ಕ್ಯಾಸಿಯೋ, 'ಡೆಸ್ಡಿಮೋನಾ ಕೂತ ಹಡಗಿಗೆ ಬಿರುಗಾಳಿಯಾಗಲೀ, ಚಂಡಮಾರುತವೇ ಆಗಲೀ ಸಮುದ್ರದ ದೈತ್ಯ ಅಲೆಗಳಾಗಲೀ ಏನೂ ಮಾಡಲಾರವು – ಏನೂ ಮಾಡಲಾರವು ಎಂಬುದು ತಪ್ಪು – ಏನೂ ಮಾಡಲು ಇಚ್ಛಿಸುವುದಿಲ್ಲ ಎಂಬುದು ಹೆಚ್ಚು ನಿಜ.' ಆ ಇಡೀ ಆರು ಸಾಲುಗಳ ನಿರೂಪಣೆ ಕ್ಯಾಷಿಯೋನಿಗೆ ಡೆಸ್ಡಿಮೋನಾಳ ಬಗ್ಗೆ ಇರುವ ಆದರ, ಅಭಿಮಾನಗಳು ಎಷ್ಟು ಉನ್ನತಮಟ್ಟದ್ದು ಎಂಬುದನ್ನು ಮತ್ತೂ ಅಷ್ಟು ಸಾಬೀತುಗೊಳಿಸುತ್ತದೆ. 'Divine Desdemona' ಹಡಗಿನಲ್ಲಿದ್ದಾಳೆಂದರೆ

> 'Tempests themselves, high seas, and howling winds,
> The guttered rocks, and congregated sands,
> Traitors ensteeped, to clog the guiltless keel,
> As having sense of beauty, do omit
> Their common natures, letting go safely by
> The divine Desdemona'

ಪ್ರಕೃತಿಗೇ ಸೌಂದರ್ಯಪ್ರಜ್ಞೆಯಿರುವುದರಿಂದ, ತಮ್ಮ ಸಹಜರೀತಿಗಳನ್ನು ಕೈಬಿಟ್ಟು

ದೈವೀ ಸ್ವರೂಪದ ಡೆಸ್ಡಿಮೋನಾಳನ್ನು ಕ್ಷೇಮವಾಗಿ ದಡಮುಟ್ಟಿಸುತ್ತದೆ. 'ಓ ದೇವರೇ ಆಥೆಲೋನನ್ನು ಕೂಡ ಶೀಘ್ರ ತಲಪುವ ಹಾಗೆ ಮಾಡಿ ಅವನು ಡೆಸ್ಡಿಮೋನಾಳನ್ನು ಸೇರುವಂತಾಗಲಿ' ಎಂದು ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ. ಪ್ರವೇಶಿಸುತ್ತಿರುವ ಡೆಸ್ಡಿಮೋನಾಳಿಗೆ ಹೃತ್ಪೂರ್ವಕ ಸ್ವಾಗತ ಬಯಸುತ್ತಾನೆ : ''ಹಡಗಿನ ಸಂಪತ್ತೆಲ್ಲ ತೀರ ತಲುಪಿದಂತಾಯಿತು. ಸೈಪ್ರಸ್‌ನ ನಾಗರಿಕರೆ ಮಂಡಿಯೂರಿ ನಿಮ್ಮ ಗೌರವವನ್ನರ್ಪಿಸಿ. ಶುಭ ಹಾರೈಸಿ, ಆರ್ಯೆ, ದೈವೀಕೃಪೆ ನಿನ್ನ ಹಿಂದೆ ಮುಂದೆ' ಸುತ್ತಮುತ್ತಲೂ ಆವರಿಸುವಂತಾಗಲಿ''. ಡೆಸ್ಡಿಮೋನಾಳಿಗೆ ಆಥೆಲೋವಿನ ಕ್ಷೇಮದ ಚಿಂತೆ. ಆಕಾಶ-ಸಮುದ್ರಗಳ ಹೊಯ್ದಾಟದಲ್ಲಿ ಕ್ಯಾಷಿಯೋ ಅವನಿಂದ ಬೇರ್ಪಟ್ಟು ಏಕಾಕಿಯಾಗಿ ಬಂದಿದ್ದಾನೆ. ಆ ಕ್ಷಣದಲ್ಲಿಯೇ ಹಡಗೊಂದು ತೀರ ಸೇರಿದ ಸೂಚನೆಯಾಗಿ ಗುಂಡುಗಳು ಹಾರಿಸಿದ್ದು ಕೇಳಿಸುತ್ತದೆ. ಬಂದವನು ಸ್ನೇಹಿತನೇ ಆಗಿರಬೇಕು. ಕೂಡಲೇ ಜನಗಳನ್ನು ತೀರಕ್ಕೆ ಕಳಿಸಲಾಗುತ್ತದೆ. ವಿಷಯ ತಿಳಿಯುವವರೆಗೆ ಈಗ ಕೊಂಚ ಹೊತ್ತಿದೆ. ಶೇಕ್ಸ್‌ಪಿಯರ್ ಈ ಭಾಗವನ್ನು ಅಂದರೆ ಸುಮಾರು ಎಪ್ಪತ್ತೆರಡು ಸಾಲುಗಳನ್ನು, ಕೇವಲ ನಾಟಕ ನೋಡಬಂದವರ ಮನರಂಜನೆಗೆ ರಚಿಸಿದ ಎಂಬ ಮಾತೂ ಇದೆ. ಕಟ್ಟುನಿಟ್ಟಿನ ಅರ್ಥದಲ್ಲಿ ಈ ಭಾಗಕ್ಕೂ ಮಿಕ್ಕ ಇಡೀ ನಾಟಕಕ್ಕೂ ನೇರ ಸಂಬಂಧವಿದ್ದಂತೆ ಕಾಣುವುದಿಲ್ಲ. ಈ ಇಡೀ ಭಾಗಕ್ಕೆ ಪ್ರೇರಣೆ ಕ್ಯಾಷಿಯೋವಿನ ಒಂದು ಮಾತಿನಲ್ಲಿ ಕಾಣಸಿಗುತ್ತದೆ. ಮತ್ತು ೭೨ ಸಾಲುಗಳಲ್ಲಿ ಪ್ರಧಾನವಾಗಿ ಮಾತನಾಡುವುದು ಇಯಾಗೋ. ಕ್ಯಾಷಿಯೋ ಹೊಸದಾಗಿ ಬಂದವರನ್ನು ಸ್ವಾಗತಿಸುವ ರೀತಿಯಲ್ಲಿ ಇಯಾಗೋನ ಪತ್ನಿ ಎಮಿಲಿಯಾಳ ಕೈಗೆ ಮುತ್ತಿಟ್ಟು ಸ್ವಾಗತಿಸುವುದಕ್ಕೆ ಮುಂಚೆ ''ಈ ನನ್ನ ಸೌಜನ್ಯತೆ ನಿನ್ನ ಸಹನೆ ಕಳೆಯದಂತಿರಲಿ – ಇದು ನಾನು ಕಲಿತ ಸಭ್ಯತೆಯ ಸೂಚಕವಷ್ಟೆ'' ಎಂಬುವ ಮಾತೇ ಈ ಇಡೀ ಭಾಗಕ್ಕೆ ನಾಂದಿ. 'ನನಗೆ ಬಾಯಿಮಾಡುವಷ್ಟು ನಿನಗೆ ಅವಳು ತುಟಿಕೊಟ್ಟರೆ ನಿನಗೆ ಸಾಕುಬೇಕೆನಿಸುತ್ತದೆ' ಎಂದು ಹೆಂಡತಿಯ ಬಗ್ಗೆ ಒಂದು ಚಟಾಕಿ ಹಾರಿಸುತ್ತಾನೆ. ಎಮಿಲಿಯಾ ಪರವಾಗಿ ನಿಂತ ಡೆಸ್ಡಿಮೋನಾಳಿಗೆ 'ಹೌದು ತಮ್ಮೆದುರು ನಾಲಗೆಯನ್ನೊಂದಷ್ಟು ಬಿಗಿಹಿಡಿದಿರುತ್ತಾಳೆ. ಆಡಬೇಕಾದ್ದನ್ನೆಲ್ಲ ಮನಸ್ಸಿನಲ್ಲೇ ಗುಣಗುಣಿಸುತ್ತಿರುತ್ತಾಳೆ' ಎಂದು ವಾದಿಸುತ್ತಾನೆ. ಮುಂದೆ ಅವನು ಮಾತನಾಡುವುದರ ಕುರಿತು ಹೇಳುವುದಕ್ಕೆ ಮುಂಚೆ ಯಾವ ಸಂದರ್ಭದಲ್ಲಿ ಈ ಮಾತುಗಳನ್ನು ಆಡುತ್ತಿದ್ದಾನೆ ಎಂಬುದನ್ನು ನಾವು ಗಮನಿಸಬೇಕು. ಆಥೆಲೋವಿನ ಕ್ಷೇಮದ ಬಗ್ಗೆ ಎಲ್ಲರಲ್ಲೂ ಆತಂಕವಿದೆ. ಸಮುದ್ರತೀರಕ್ಕೆ ಜನಗಳನ್ನು ಕಳುಹಿಸಿದ್ದಾರೆ. ಈ ಆತಂಕದ ಕ್ಷಣಗಳನ್ನು ಮನಸ್ಸು ಹಗುರಗೊಳಿಸುವುದಕ್ಕೆ ಇಯಾಗೋ ವಿನೋದದಲ್ಲಿ ಮಾತನಾಡುತ್ತಿದ್ದಾನೆ ಎಂದು ಭಾವಿಸಬಹುದು. ಅವನು ಮಾತನಾಡು ತ್ತಿರುವುದೆಲ್ಲ ಹೆಂಗಸರ ಕುರಿತಾಗಿ. ಡೆಸ್ಡಿಮೋನಾಳಂಥ ಗೌರವಾನ್ವಿತ, ಪ್ರತಿಷ್ಠಿತ ಮಹಿಳೆಯೊಬ್ಬಳು ಮತ್ತು ತನ್ನ ಹೆಂಡತಿ ಇನ್ನೊಬ್ಬಳು – ಇವರೆದುರಿಗೆ. ಅವರ ಮನಸ್ಸುಗಳನ್ನು ಹಗುರಗೊಳಿಸುವುದಕ್ಕಾಗಿ ಅವರನ್ನು ರಂಜಿಸುತ್ತಿದ್ದಾನೆ ಎಂದೂ ಹೇಳಬಹುದು. ಒಟ್ಟು ನಾಟಕ

ಓದಿದ ಮೇಲೆ ಹಿಂತಿರುಗಿ ನೋಡಿದಾಗ ಈ ಭಾಗದಲ್ಲಿ ಅವನು ಹೆಣ್ಣುಮಕ್ಕಳ ಬಗ್ಗೆ ಮಾತನಾಡುವುದು ಅವನ ನಂಬಿಕೆಯ ಮೂಲಗಳಿಂದಲೇ ಎಂದೂ ಗುರುತಿಸಬಹುದು. ಅವನ ಇಡೀ ವ್ಯಕ್ತಿತ್ವದ ಪ್ರತಿಬಿಂಬವಾಗಿಯೂ ಈ ಭಾಗ ಮೂಡಿಬರುತ್ತದೆ. ಆದರೆ ಸಂದರ್ಭ ಹೇಗಿದೆಯೆಂದರೆ, ಯಾರಾದರೂ ಅಕಸ್ಮಾತ್ ಆತನನ್ನು ಅವನಾಡುವ ಮಾತುಗಳ ಶೈಲಿ, ಸ್ವರೂಪಗಳ ಕುರಿತು ಜಗ್ಗಿ ಕೇಳಿದರೆ 'ಎಷ್ಟಾದರೂ ತಮಾಷೆಗಾಗಿ ಆಡಿದ ಮಾತುಗಳು' ಎಂದು ಜಾರಿಕೊಳ್ಳಲೂಬಹುದು. ಕೈಗೆ ಸಿಗದಂತೆ ನುಸುಳಿಹೋಗಲು ಎಂದೂ ಹಿತ್ತಲ ಬಾಗಿಲನ್ನು ತೆರೆದಿಟ್ಟುಕೊಂಡೇ ವ್ಯವಹರಿಸುವವ ಇಯಾಗೋ.

ತನ್ನ ಬಗ್ಗೆ ಆಡಿದ ಮಾತುಗಳಿಗೆ ಒಪ್ಪಿಗೆ ಸೂಚಿಸಿದ ಹೆಂಡತಿಗೆ, ಒಟ್ಟು ಸ್ತ್ರೀ :ಜಾತಿಗೇ ಅನ್ವಯಿಸುವಂತೆ ತನ್ನ ವ್ಯಾಖ್ಯಾನ ನೀಡುತ್ತಾನೆ. ''ಗೊತ್ತು, ಗೊತ್ತು ಬಿಡಿ, ಮನೆಯ ಹೊರಗೆ ಮೂಕ ಚಿತ್ರಗಳು, ದಿವಾನಖಾನೆಗಳಲ್ಲಿ ಗಂಟೆಗಳು ; ಅಡಿಗೆಮನೆಯ ಕಾಡುಬೆಕ್ಕುಗಳು, ಘಾಸಿಗೊಳಿಸುವಾಗಲೆಲ್ಲ ಸಂತರು, ರೇಗುಬಂದಾಗ ರಕ್ಕಸಿಯರು, ಮನೆವಾರ್ತೆಯಲ್ಲಿ ಹಗುರಮನಸ್ಸಿನವರು, ಹಾಸಿಗೆಯಲ್ಲಿ ಗೃಹಿಣಿಯರು'' ಇಯಾಗೋವಿನ ಮಾತಿನ ರೀತಿಯಲ್ಲಿ ಒಂದು ಸಾಮಾನ್ಯ ಅಂಶವನ್ನು ನಾವು ಮೊದಲಿನಿಂದಲೂ ಗಮನಿಸುವುದು ಸಾಧ್ಯ. ತನ್ನ ಮಾತಿನ ಓಘದಲ್ಲಿ ಮಾತುಗಳಿಗೆ ಏನಾದರೂ ಒಟ್ಟು ಅರ್ಥವಿದೆಯೇ ಇಲ್ಲವೆ ಎಂಬ ಪರಿವೆ ಇಲ್ಲದೆ ಮುಂದುವರೆಯುತ್ತಿರುತ್ತಾನೆ. ರೋಡರಿಗೋವಿನ ಜೊತೆ ಅವನ ಮಾತುಕತೆಗಳಲ್ಲಿ ಅನೇಕ ಬಾರಿ ಈ ಶೈಲಿಯನ್ನು ಕಾಣಬಹುದು. ಇಲ್ಲಿ ಕೊನೆಯ 'ಮನೆವಾರ್ತೆಯಲ್ಲಿ....' ಮಾತೂ ಅದೇ ಬಗೆಯದು. ಇಲ್ಲಿಯೂ ಅಷ್ಟೆ. ಒಟ್ಟು ಮಾತಿನ ಮತ್ತು ದನಿಯ ಅರ್ಥಗಳ ಬಗ್ಗೆ ಅನುಮಾನಗಳು ಮಾತ್ರವಿರುವುದಿಲ್ಲ. ಡೆಸ್ಡಿಮೋನಾಳು 'ಛೆ, ಛೇ, ಕೇಡಿಗ ನೀನು' ಅಂದದ್ದಕ್ಕೆ ''ಖಂಡಿತ ಅಲ್ಲ, ಇದೇ ಸತ್ಯ ; ಆಡುವುದಕ್ಕಾಗಿ ಹಾಸಿಗೆ ಬಿಟ್ಟೇಳುತ್ತೀರಿ, ಕೆಲಸ ಮಾಡುವುದಕ್ಕಾಗಿ ಹಾಸಿಗೆ ಸೇರುತ್ತೀರಿ'' ಅವನ ಒಟ್ಟು ತಾತ್ಪರ್ಯವಿಷ್ಟು. ರೂಪವೊಂದು ಇದ್ದರೆ ಸಾಕು ; ಹೆಣ್ಣು ಏನನ್ನು ಬೇಕಾದರೂ ಸಾಧಿಸಬಲ್ಲಳು ; ಅಥವಾ ರೂಪವಿಲ್ಲದೆ ಕೇವಲ ಚಾಕಚಕ್ಯತೆಯಿದ್ದರೆ ಅಷ್ಟೇ ಸಾಕು, ಏನನ್ನೂ ಜಯಿಸಬಲ್ಲಳು ; ರೂಪವೂ ಇಲ್ಲ, ಬುದ್ಧಿಯೂ ಇಲ್ಲ ಎಂದರೂ ಕೂಡ ಅಂಥವಳೂ 'does foul pranks, which fair and wise ones do'. ಆದರೆ ಡೆಸ್ಡಿಮೋನಾಳ ಕುತೂಹಲವೆಂದರೆ ಹೆಣ್ಣು ರೂಪವತಿಯೂ ಗುಣವತಿಯೂ ಸುಶೀಲಳೂ ಗಂಭೀರಳೂ ಆಗಿದ್ದರೆ ಅಂಥ ಹೆಣ್ಣಿನ ಬಗ್ಗೆ ಇಯಾಗೋ ಅಭಿಪ್ರಾಯವೇನು ? ಇಯಾಗೋವಿನ ಪ್ರಕಾರ ಅಂಥವಳೊಬ್ಬಳಿದ್ದರೆ ಅವಳು 'to suckle fools and chronicle small beer' ಅಷ್ಟಕ್ಕೆ ಮಾತ್ರ ಯೋಗ್ಯಳು. ಈ ಇಷ್ಟನ್ನು ಕುರಿತು ಇಷ್ಟೊಂದು ಗಮನಿಸಿರುವುದಕ್ಕೆ ಕಾರಣ ಇಷ್ಟೆ: ಮಾತನಾಡುತ್ತಿರುವವನು ಇಯಾಗೋ ಮತ್ತು ಇಡೀ ನಾಟಕ ಪ್ರಧಾನವಾಗಿ ಗಂಡು-ಹೆಣ್ಣುಗಳ ಸಂಬಂಧಗಳ ಕುರಿತಾದುದು - ಆದಕ್ಕಾಗಿ.

ಬೇರೆಯವರ ಕಿವಿಗೆ ವಿನೋದವಾಗಿ ಕೇಳಿದರೂ ಇದು ಇಯಾಗೋನ ಮಟ್ಟಿಗೆ ನಂಬಿಕೆಗಳು ಎಂಬುದು ನಾಟಕ ಮುಂದುವರೆಯುತ್ತ ಹೆಚ್ಚುಹೆಚ್ಚು ಸ್ಪಷ್ಟವಾಗುತ್ತ ಹೋಗುತ್ತದೆ. ಈ ಇಷ್ಟು ಮಾತುಕತೆ ಯಾಗುತ್ತಿರುವಂತೆ ಕ್ಯಾಷಿಯೋ ಡೆಸ್ಡಿಮೋನಾಳ ಹತ್ತಿರ ನಿಂತಿದ್ದಾನೆ. ಇಯಾಗೋವಿನ ಮಾತು ಮುಗಿಯುತ್ತಿದ್ದಂತೆ ಡೆಸ್ಡಿಮೋನಾಳ ಕೈ ತೆಗೆದುಕೊಂಡು 'ಅವನನ್ನು ತಲೆಗೆ ಹಚ್ಚಿಕೊಳ್ಳಬೇಡಿ, ಅವನು ಪಂಡಿತನಿಗಿಂತ ಸೈನಿಕ ಎಂಬುದು ಹೆಚ್ಚು ಸತ್ಯ' ಎಂದು ಉಸುರುತ್ತಾನೆ. ಇಯಾಗೋವಿಗೆ ಇಷ್ಟು ಸಾಕು. ಅವನ ಒಳದನಿ ತನ್ನನ್ನು ಮೋಸಗೊಳಿಸಿಲ್ಲ. ಈ ಪುಟ್ಟ ಬಲೆಯಲ್ಲಿ ಕ್ಯಾಷಿಯೋನಂಥ ಗಡವನೊಬ್ಬನನ್ನು ಹಿಡಿದುಹಾಕಬಹುದು. "ಹಾ, ಹಾ, ಮುಗುಳ್ನಗು, ನಿನ್ನ ಸೌಜನ್ಯತೆಗಳಲ್ಲೇ ನಿನ್ನನ್ನು ಕಟ್ಟಿಹಾಕುತ್ತೇನೆ. ಅವಳನ್ನು ನೋಡನೋಡುತ್ತ, ಅದೆಷ್ಟು ಬಾರಿ ನಿನ್ನ ಬೆರಳುಗಳನ್ನೇ ಮುದ್ದಿಸಿಕೊಳ್ಳುತ್ತಿ, ಮತ್ತೆ ಮುದ್ದಿಸಿಕೋ... ಅದ್ಭುತ ಸೌಜನ್ಯತೆ... ಈ ಸುಶೀಲಗುಣಗಳೇ ನಿನ್ನನ್ನು ಲೆಫ್ಟಿನೆಂಟ್ ಸ್ಥಾನದಿಂದ ಉರುಳಿಸುತ್ತವೆ. ಅದೇನು ನಿನ್ನ ಕೈಬೆರಳುಗಳೇ ? ಬದಲಿಗೆ ಅವು ಎನಿಮಾಪೈಪುಗಳೋ ? ಕೊಳವೆಗಳೋ ?" ಇಯಾಗೋವಿನ ಕೀಳುವಾಕ್ಯಸರಣಿಗಳಿಗೆ ಮಿತಿಯೇ ಇಲ್ಲ.

ದುರ್ಗಮ ಸಮುದ್ರಯಾನ ಮುಗಿಸಿ ಅಥೆಲೋ ತೀರ ಸೇರಿ ಈಗ ಡೆಸ್ಡಿಮೋನಾಳ ಬಳಿಗೆ ಬಂದಿದ್ದಾನೆ. ಎಪ್ಪತ್ತೆರಡು ಸಾಲುಗಳ ಇಯಾಗೋವಿನ ಸ್ತ್ರೀಯರ ರೀತಿನೀತಿಗಳ ಕುರಿತಾದ ಚತುರಭಾಷ್ಯ ಕೇಳಿಯಾದ ಮೇಲೆ ಈಗ ಅಥೆಲೋ-ಡೆಸ್ಡಿಮೋನಾರ ಮೂವತ್ತೆರಡು ಸಾಲುಗಳು. ಈ ದೃಶ್ಯ ಎಷ್ಟು ವಿಭಿನ್ನವಾಗಿ ಕಾಣುತ್ತದೆ, ಅವರಾಡುವ ಮಾತುಗಳು ಹೇಗೆ ಕೇಳುತ್ತವೆ ಎಂದು ನಾವು ಗಮನಿಸಬೇಕು. ಡೆಸ್ಡಿಮೋನಾಳನ್ನು ಕಂಡಕೂಡಲೆ ಅವನ ಬಾಯಿಂದ ಹೊರಡುವ ಮಾತು 'O my fair warrior'. ಅವಳೂ ಒಂದು ಯುದ್ಧವನ್ನೇ ಜಯಿಸಿ ಇಲ್ಲಿ ತನ್ನೊಡನೆ ಇರಲು ಬಂದಿದ್ದಾಳೆ. ತಂದೆಯೊಡನೆ, ನಗರಪ್ರಮುಖರೊಡನೆ, ತನ್ನ ಸಂಪ್ರದಾಯಸ್ಥ ರೀತಿ ನೀತಿಗಳೊಡನೆ ನಡೆಸಿದ ಯುದ್ಧ ಇದು. ಈಗ ತನ್ನೊಡನೆ ಯುದ್ಧರಂಗಕ್ಕೆ ಯೋಧಳಂತೆ ಬಂದಿದ್ದಾಳೆ. 'O my dear Othello' ಎಂದು ಡೆಸ್ಡಿಮೋನಾ ಅಥೆಲೋನನ್ನು ಆಲಿಂಗಿಸುತ್ತಾಳೆ. ಆಗ ಅಥೆಲೋ ಆಡುವ ಮಾತುಗಳು ನೋಡೋಣ :

It gives me wonder great as my content
To see you here before me : O my soul's joy,
If after every tempest come such calmness,
May the winds blow, till they have wakened death,
And let the labouring bark climb hills of seas,
Olympus high, and duck again as low
As hell is from heaven....

ಈ ಇಡೀ ಭಾಗದ ಹೃದಯಾಳದಿಂದ ಹೊಮ್ಮಿದ ಸಂಭ್ರಮ ಮತ್ತು ಅದಕ್ಕೆ ನುಡಿಕೊಡುವ ಶಬ್ದಗಳ ವೈಭವ ಅಪೂರ್ವವಾದದ್ದು. ''ನನಗಿಂತ ಮುಂಚೆಯೇ ನೀನಿಲ್ಲಿ ಬಂದು ಸೇರಿರುವುದು ಅಚ್ಚರಿಯನ್ನೆಷ್ಟೋ ಅಷ್ಟೇ ಅಮಿತಸಂತಸವನ್ನು ನೀಡುತ್ತಿದೆ. ಪ್ರತಿ ಚಂಡಮಾರುತದ ನಂತರವೂ 'ಇಂಥ ಪ್ರಶಾಂತತೆ ಒದಗಿಬರುವುದಾದರೆ ಸಾವನ್ನೇ ಎಚ್ಚರಿಸಿಬಿಡುವಷ್ಟು ಅಬ್ಬರದಲ್ಲಿ ಬಿರುಗಾಳಿ ಬೀಸಲಿ, ನೀರ ಮೇಲೆ ಉಳಿಯಲು ಹೆಣಗುತ್ತಿರುವ ನೌಕೆ ಸಮುದ್ರದ ಅಲೆಗಳ ಬೆಟ್ಟಗಳ ಎತ್ತರಕ್ಕೆ ಚಿಮ್ಮಿ ಸ್ವರ್ಗದಿಂದ ನರಕಕ್ಕೆ ಇರುವಷ್ಟು ಆಳದ ಪ್ರಪಾತಕ್ಕೆ ಜಿಗಿಯಲಿ.'' ಮತ್ತೂ ಮುಂದುವರೆದು "If it were now to die, / It were now to be most happy, for I fear / My soul hath her content so absolute , / That not another comfort, like to this / succeeds in unknown fate." ಎರಡು ಬಾರಿ 'soul' ಶಬ್ದವನ್ನು ಬಳಸುತ್ತಾನೆ, 'my soul's joy' ಮತ್ತು 'my soul hath....' ಎಂದು. ಈ ಇಡೀ ಮಾತುಗಳಲ್ಲಿ , ತನಗೆ ಅನುಭವಕ್ಕೆ ಬಂದ ಸಮುದ್ರದ ಭೀಕರತೆ ಮತ್ತು ಇಲ್ಲಿ ದಡದಲ್ಲಿ ಡೆಸ್ಡಿಮೋನಾಳ ಸಾನ್ನಿಧ್ಯದಲ್ಲಿ ದೊರಕಿದ ಶಾಂತಿ ; ಹಾಗೂ ತನ್ನೆಲ್ಲ ಸಾಹಸಗಳಿಗೂ, ಪರಾಕ್ರಮಗಳಿಗೂ ಅಪಾಯಗಳನ್ನು ಎದುರಿಸುವ ಶೌರ್ಯಕ್ಕೂ ಈಗ ಒಂದು ಅರ್ಥ ದೊರಕಿಬಿಟ್ಟಿದೆ. ಎಂದೇ ಎಂಥ ಅಪಾಯವಾಗಲೀ ಎದುರಿಸುವ ಶಕ್ತಿ ಉಕ್ಕಿಬಿಟ್ಟಿದೆ. ಇದು ಕೇವಲ ಮೈಮನಸ್ಸುಗಳಿಗೆ ಸೀಮಿತಗೊಂಡವಲ್ಲ, ಅದನ್ನು ಮೀರಿ ತನ್ನ ವ್ಯಕ್ತಿತ್ವವನ್ನೇ ಆವರಿಸಿದ ಆತ್ಮಕ್ಕೆ ಹತ್ತಿರವಾದ ಅನುಭವ. ಎರಡನೆಯ ಭಾಗದಲ್ಲಿ ಏನು ಹೇಳುತ್ತಾನೆ ? 'If it were now to die....' ಅವಳ ಆಲಿಂಗನದಲ್ಲಿ, ಅವಳ ಬೆಚ್ಚನೆ ಮೈಅಪ್ಪುಗೆಯಲ್ಲಿ, ಪ್ರೀತಿಯ ಈ ಉತ್ಕಟಕ್ಷಣದಲ್ಲಿ ಈ ಕ್ಷಣವೇ ಅನಂತವಾಗಿ ಉಳಿದುಬಿಡಲಿ ಎಂದು ಹಾರೈಸುತ್ತಾನೆ. 'ಸಾಯುವುದಾದರೆ ಈ ಗಳಿಗೆಗಿಂತ ಪ್ರಶಸ್ತವಾದದ್ದು ಮತ್ತೊಂದು ಇಲ್ಲ' ಎಂಬುದಕ್ಕೆ ಇದೇ ಅರ್ಥ. 'ನನ್ನ ಆತ್ಮವು ಈ ಕ್ಷಣದಲ್ಲಿ ಪರಿಪೂರ್ಣ ಸಂತಸವನ್ನೂ ತೃಪ್ತಿಯನ್ನೂ ಅನುಭವಿಸಿಬಿಟ್ಟಿದೆ. ಇದರಂತೆ ಮತ್ತೊಂದು ಕ್ಷಣವು ನಮ್ಮ ಅರಿವಿಗೆ ಬಾರದ ಭವಿಷ್ಯದಲ್ಲಿ ಮರುಕಳಿಸಬಹುದೆಂಬ ವಿಶ್ವಾಸ ನನಗಿಲ್ಲ.' ಈ ಸಾಲುಗಳು ಏಕೆ ಇಷ್ಟು ಗಾಢ ಪರಿಣಾಮ ಬೀರುತ್ತವೆ ? ಎಂಬ ಪ್ರಶ್ನೆಗೆ ಉತ್ತರವಾಗಿ ನಾವು ಮೊದಲ ಅಂಕದಲ್ಲಿ ಅವನು ತನ್ನ-ಡೆಸ್ಡಿಮೋನಾಳ ಮಧ್ಯೆ ಪ್ರೀತಿ ಹೇಗೆ ಅಂಕುರಿಸಿತು ಎಂದು ವಿವರಿಸಿದ ಭಾಗಕ್ಕೆ ಒಂದು ಕ್ಷಣ ಹಿಂತಿರುಗಬೇಕು. 'Her father loved me.... oft invited me' ಎಂದು ಶುರುವಾಗಿ ಕೊನೆಗೆ ಮುಕ್ತಾಯ ಮಾಡಿದಾಗ "She loved me for the dangers I has passed / And I loved her that she did pity them / This only is the witchcraft I have used" ಎಂಬ ಮಾತಿನವರೆವಿಗೆ. ಆ ದೃಶ್ಯವನ್ನು ವಿವರಿಸುವಾಗ ಆಡಿದ್ದ ಕೆಲವು ಮಾತುಗಳನ್ನು ನೆನಪುಮಾಡಿಕೊಳ್ಳೋಣ ''ಒಂದು ವೇಳೆ ಅಥೆಲೋ ನೀಡುವ ವಿವರಣೆಯಷ್ಟೇ ಇವರಿಬ್ಬರ ಪ್ರೀತಿಯ ತಿರುಳು ಎನ್ನುವುದಾದರೆ ಇವರಿಬ್ಬರ ಮದುವೆ ನಾಶವಾಗುವುದಕ್ಕೆ ಬೇರೆಯವರ

ಕೈವಾಡವೇ ಬೇಕಿರಲಿಲ್ಲ.... ಆದರೆ ಕಥೆ ಮುಂದುವರೆದಂತೆ ನಮ್ಮ ಅನುಭವಕ್ಕೆ ಬರುತ್ತ ಹೋಗುವ ಸಂಗತಿಯೆಂದರೆ ಅವರಿಬ್ಬರ ಮಧ್ಯೆ ಮೂಡಿರುವುದು, ವಿಕಾಸವಾಗಿರುವುದು, ಬಹು ಗಟ್ಟಿಯೂ ಆಗಿರುವುದು ಒಂದು ಉದಾತ್ತ ಹಾಗೂ ಗಾಢ ಪ್ರೀತಿ ಎಂದು''. ಆ ಅಂಥ 'ಅನುಭವ' ನೀಡುವ ಭಾಗ ಇದು. ಭೋರ್ಗರೆವ ಸಮುದ್ರದ ಮೊರೆತದ ಹಿನ್ನೆಲೆಯಲ್ಲಿ, ಎತ್ತರದ ದಿಟ್ಟ ಮೌನ ಬೆಟ್ಟಗಳ ಹಿನ್ನೆಲೆಯಲ್ಲಿ ಪ್ರಕೃತಿಯ ಸಹಜಸೃಷ್ಟಿಯಾದ ಮನುಷ್ಯ ತನ್ನ ಪ್ರೀತಿಯನ್ನು ಹೇಳಿಕೊಳ್ಳುವ ರೀತಿಗೂ ಝಗಝಗಿಸುವ ಆಸ್ಥಾನದಲ್ಲಿ, ದರ್ಪ ಅಧಿಕಾರಿಗಳ ಪೋಷಾಕು ಧರಿಸಿದವರ ಮುಂದೆ ತನ್ನ ಅನುಭವದ ಆಳ ಅಗಲಗಳನ್ನು ತಿಳಿಹೇಳುವ ಆತೃಪ್ತಿಕರ ಯತ್ನಗಳಿಗೂ ವ್ಯತ್ಯಾಸವೆಷ್ಟು ಎಂದು ನಾವು ಮನಗಾಣಬೇಕು. ತರ್ಕಬದ್ಧ ವಿವರಣೆಗೂ ಹುಚ್ಚೆದ್ದು ಹರಿವ ಸ್ವಚ್ಛಂದ ತೊರೆಯ ರೀತಿಯ ಮಾತಿನ ರೀತಿಗೂ ಹೋಲಿಕೆ ಸಾಧ್ಯವೇ ಇಲ್ಲ. 'If it were now to die....' ಎಂದು ಆಥೆಲೋ ಆಡಿದ್ದ ಮಾತುಗಳಿಗೆ ಉತ್ತರವಾಗಿ ಡೆಸ್ಡಿಮೋನಾ '......The heavens forbid / But that our loves and comforts should increase / Even as our days do grow' ಎಂದು ಮೊರೆಯಿಡುತ್ತಾಳೆ. ದಿನಕಳೆದಂತೆ ನಮ್ಮ ಪ್ರೀತಿ, ಸಂತಸಗಳು ವೃದ್ಧಿಸುತ್ತಲೇ ಇರಲಿ ಎಂದು ಹಾರೈಸುತ್ತಾಳೆ. ತತ್‌ಕ್ಷಣ ಅವಳ ಹಾರೈಕೆಯನ್ನು ದೇವರಿಗೆ ಸಲ್ಲಿಸಿದ ಪ್ರಾರ್ಥನೆಯೋ ಎಂಬಂತೆ "Amen to that, sweet powers" ಎಂದು ದನಿಗೂಡಿಸುತ್ತಾನೆ. ಇಡೀ ನಾಟಕದಲ್ಲಿ ಹಲವು ಕಡೆ ಬೇರೆ ಬೇರೆ ಪಾತ್ರಗಳು ಜೊತೆಗೂಡಿ ಸಲ್ಲಿಸಿದ ಪ್ರಾರ್ಥನೆಗಳಿವೆ. ಅವುಗಳಲ್ಲಿ ಇದು ಮೊದಲನೆಯದು. ಕೊನೆಯದೂ ಇವರಿಬ್ಬರ ಮಧ್ಯೆಯೇ – ಆದರೆ ಅದಕ್ಕೆ ಇನ್ನೂ ಸಮಯವಿದೆ.

ಆಥೆಲೋ ಸದ್ಯಕ್ಕಂತೂ ನವತರುಣನ ಹಾಗೆ ನಲಿಯುತ್ತಿದ್ದಾನೆ. 'I cannot speak enough of this content / It stops me here, it is too much joy' ಎಂದು ತನ್ನ ಹೃದಯದ ಬಡಿತದಲ್ಲೇ ಏರಿಳಿತವಾದ ಹಾಗೆ ಎದೆ ಮುಟ್ಟಿ ನೋಡಿಕೊಳ್ಳುತ್ತಾನೆ. 'ಸದ್ಯದ ಸಂತಸದ ಗಳಿಗೆಯ ಬಗ್ಗೆ ನಾನು ಎಷ್ಟು ಮಾತನಾಡಿದರೂ ಸಾಲದು.... ಅಷ್ಟೊಂದು ಹರ್ಷ ನೀಡಿದೆ'ಮುಂದುವರೆಸಿ 'ನಮ್ಮಿಬ್ಬರ ಮಧ್ಯದಲ್ಲಿ ಏರ್ಪಡಬಹುದಾದ ವಿರೋಧಗಳು ಈ ಬಗೆಯ ಸಿಹಿಮುತ್ತುಗಳಷ್ಟೆ ಆಗಿರಲಿ' ಎಂದೆನ್ನುತ್ತ ಅವಳನ್ನು ಮತ್ತೆಮತ್ತೆ ಚುಂಬಿಸುತ್ತಾನೆ. ಇಯಾಗೋವಿಗೆ ಇದನ್ನು ನೋಡಿ ಸಹಿಸಲು ಸಾಧ್ಯವಿಲ್ಲ. ''ಓ, ಸದ್ಯಕ್ಕೆ ನಿಮ್ಮಿಬ್ಬರ ಶ್ರುತಿ ಸೇರಿ ಚೆನ್ನಾಗಿ ಮೇಳೈಸಿದೆ. ಸತ್ಯವಾಗಿ ಹೇಳುತ್ತೇನೆ, ನಿನ್ನ ವಾದ್ಯಗಳ ಬಿರಟೆಗಳ ಮೇಲೆ ಕೈಯಾಡಿಸಿ ನಿಮ್ಮ ಸಂಗೀತವನ್ನು ಹಾಳುಗೆಡವುತ್ತೀನಿ''. ಆಥೆಲೋ ತನ್ನ ಅರಮನೆಗೆ ಹೋಗುವುದಕ್ಕೆ ಮುನ್ನ ಯುದ್ಧ ಮುಗಿದು ತಾವು ಜಯಶೀಲರಾದ ಬಗ್ಗೆ ಘೋಷಿಸುತ್ತಾನೆ. ಟರ್ಕರ ಹಡಗುಗಳು ಮುಳುಗಿವೆ. ಹೆಂಡತಿಯ ಕಡೆ ತಿರುಗಿ ಸೈಪ್ರಸ್ ಜನ ಅವಳನ್ನು ಗೌರವದಿಂದ ಕಾಣುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಾನೆ. ತನ್ನ ಉತ್ಸಾಹದ ಮಾತುಗಳಿಗೆ ತಾನೇ ಕಡಿವಾಣ

ಹಾಕಿಕೊಳ್ಳುವವನಂತೆ ''ಬಾಯಿಗೆ ಬಂದದ್ದೆಲ್ಲ ಹರಟುತ್ತಿದ್ದೇನೆ. ನನ್ನ ಸಂತೋಷದಲ್ಲಿ ನನ್ನ ಬಗ್ಗೆಯೇ ಮಾತನಾಡಿಕೊಳ್ಳುತ್ತಿದ್ದೇನೆ'' ಎಂದು ಇಯಾಗೋವಿನ ಕಡೆ ತಿರುಗಿ ತೀರಕ್ಕೆ ಹೋಗಿ ತನ್ನ ಸಾಮಾನುಸರಂಜಾಮುಗಳನ್ನು ಕೊಂಡುಬರುವಂತೆ ಆಜ್ಞಾಪಿಸಿ ಎಲ್ಲರಿಗೂ ಶುಭಕೋರಿ ಡೆಸ್ಡಿಮೋನಾಳ ಜೊತೆ ನಿಷ್ಕ್ರಮಿಸುತ್ತಾನೆ.

ಈ ಮೂವತ್ತೆರಡು ಸಾಲುಗಳ ದೃಶ್ಯ ಮತ್ತೂ ಒಂದು ಕಾರಣಕ್ಕೆ ಮಹತ್ವದ್ದಾಗುತ್ತದೆ. ಇಡೀ ನಾಟಕದಲ್ಲಿ ಅಥೆಲೋ-ಡೆಸ್ಡಿಮೋನಾರ ಮಧ್ಯದ ಅತ್ಯಂತ ಪ್ರೀತಿಯ ಮಧುರ ಕ್ಷಣಗಳ ದೃಶ್ಯ ಇದೊಂದೇ. ಆದರೆ ಈ ದೃಶ್ಯ ಹತ್ತು ಜನರ ಮಧ್ಯದಲ್ಲಿ ನಡೆಯುತ್ತದೆ – ಅಂದರೆ ಮತ್ತು ಅಷ್ಟೂ ಆಪ್ತವಾಗುವುದಕ್ಕೆ, ಅವರಿಬ್ಬರ ಪ್ರೀತಿಯ ಸಂಬಂಧವು ಮತ್ತೂ ಪರಿಣಾಮಕಾರಿ ಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಮಿತಿಗಳಲ್ಲೂ ಈ ದೃಶ್ಯ ಮತ್ತೆಮತ್ತೆ ಪ್ರಜ್ಞೆಯಾಳದಲ್ಲಿ ಹಾದುಹೋಗುತ್ತ ನಮ್ಮನ್ನು ಕಾಡುವುದರಲ್ಲಿ ಅನುಮಾನವಿಲ್ಲ. ಇಷ್ಟಿದ್ದರೂ ಈ ಭಾವಗೀತಾತ್ಮಕ ಭಾಗವನ್ನು ಓದಿದ ಮೇಲೆ ಹಿಂದಿನ ಎಪ್ಪತ್ತೆರಡು ಸಾಲುಗಳ ಇಯಾಗೋವಿನ ಜಾಣ ಮಾತುಗಳು ಗೊಡ್ಡಾಗಿ ಕೇಳಿಸುವುದರಲ್ಲಿ ಅನುಮಾನವಿಲ್ಲ.

ಇಯಾಗೋವಿಗೆ ಈಗ ಶೀಘ್ರದಲ್ಲಿ ಸಾಧಿಸಬೇಕಾದ ಹಲವು ಕಾರ್ಯಗಳಿವೆ. ಮೊಟ್ಟ ಮೊದಲನೆಯದಾಗಿ ಮಡ್ಡ ರೋಡರಿಗೋವನ್ನು ತನ್ನ ಅನಿಷ್ಟ ಕೆಲಸಗಳನ್ನು ಮಾಡುವುದಕ್ಕೆ ತಯಾರುಮಾಡುವುದು. ಈಗ ರಂಗದ ಮೇಲೆ ಒಬ್ಬನೇ ಇದ್ದಾನೆ. ಅವನಿಗೆ ಹಲವು ವಿಷಯಗಳು ಮನದಟ್ಟು ಮಾಡುವ ಜರೂರು ಇದೆ. ''ಪ್ರೀತಿಸುವ ಜನಕ್ಕೆ ಎಲ್ಲಿಲ್ಲದ ಧೈರ್ಯ ಬಂದು ಬಿಡುತ್ತದೆ ಎಂಬ ನಂಬಿಕೆ ಇದೆ. ಆ ಕ್ಯಾಷಿಯೋಗೆ ಇಂದು ಕಾವಲು ಕಾಯುವ ಜವಾಬ್ದಾರಿ ಹೊರಿಸಲಾಗಿದೆ, ಮತ್ತೆ ಒಂದು ಮಾತು ಹೇಳ್ತೇನೆ ತಿಳಿದುಕೋ, ಡೆಸ್ಡಿಮೋನಾ ಕ್ಯಾಷಿಯೋನನ್ನ ಪ್ರೀತಿಸ್ತಿದಾಳೆ''. ''ಬಾಯಿಬಿಡಬೇಡ, ಮನಸ್ಸಿನಲ್ಲಿ ಇಟ್ಟುಕೋ, ಅಷ್ಟೆ. ನೀನೇ ನೋಡಿದ್ಯಲ್ಲ, ಈ ಮೂರನನ್ನ ಎಷ್ಟು ಉಗ್ರವಾಗಿ ಪ್ರೀತಿಸಿದ್ಲು ಅಂತ ; ಯಾಕೆ ? ಬುರುಡೆಗಳು ಹೊಡೆದು, ಕೊಚ್ಚಿ ಕೊಂಡದ್ದಕ್ಕೆ ; ಭರ್ಜರಿ ಸುಳ್ಳುಗಳು ಹೇಳಿದ್ದಕ್ಕೆ. ಇಂಥ ಪೊಳ್ಳು ಮಾತುಗಳಿಗೆ ಇನ್ನೂ ಮನಸೋಲ್ತಾಳೆ ಅಂತ ತಿಳಿದ್ಯೇನು ? ವಿವೇಕವಿರೋನು ಹಾಗೆ ಭಾವಿಸೋದೇ ಇಲ್ಲ'' ಇಯಾಗೋವಿನ ಪ್ರಕಾರ ಅವಳಿಗೆ ಈ ಭೂತದಿಂದ ಬಿಡುಗಡೆ ಬೇಕಾಗಿದೆ. ಅವಳ ಕಣ್ಣುಗಳು ತಣಿಸುವ ಸೌಂದರ್ಯ ಬೇಕಾಗಿದೆ. ಎರಡು ದಿವಸ ಮೈಯಿನ ತೀಟೆ ತೀರಿದ ಮೇಲೆ ಅವಳಿಗೆ ಮತ್ತೆ ರಕ್ತ ಬೆಚ್ಚಗಾಗಿಸಲು ಮನಸ್ಸು, ಸ್ಥಾನಮಾನ, ಸಂಸ್ಕೃತಿಗಳು, ರೂಪ ಇವಕ್ಕೆ ತಕ್ಕಂಥ ಬೇರೆಯವನು ಬೇಕಾಗುತ್ತದೆ. ಈ ಯಾವುದೂ ಮೂರನಲ್ಲಿ ಇಲ್ಲ. ಪ್ರಕೃತಿಯೇ ಇದನ್ನು ಅವಳಿಗೆ ಕಲಿಸುತ್ತದೆ. ಈ ಮೂರನನ್ನು ಅವಳು ತಿರಸ್ಕರಿಸುತ್ತಾಳೆ. ಹಾಗಾದರೆ ಬದಲಿ ಯಾರು ? ಕ್ಯಾಷಿಯೋ ನೋಡುವುದಕ್ಕೆ ನಯ, ವಿನಯಗಳ ಮನುಷ್ಯ. ಎಲ್ಲವೂ ತೋರಿಕೆ ಅಷ್ಟೆ. ತನ್ನ ಬಚ್ಚಿಟ್ಟ ಪ್ರೀತಿಯನ್ನು ಸಾಧಿಸುವುದಕ್ಕೆ ಅವನು ಧರಿಸುವ

ಮುಖವಾಡಗಳು ಇವು – ಮಹಾಜಾರಿಕೆಯ ನೀಚ. ಅವಕಾಶಗಳಿಗಾಗಿ ಕಾದಿರುತ್ತಾನೆ. ಮತ್ತೆ ಸುಂದರ, ಯುವಕ ; ಡೆಸ್ಡಿಮೋನಾ ಆಗಲೇ ಅವನನ್ನು ಆರಿಸಿಕೊಂಡಾಗಿದೆ.

ಇಷ್ಟು ವಿವರವಾಗಿ ಅವನ ವಿಚಾರವನ್ನು ಇಲ್ಲಿ ಮಂಡಿಸುವುದಕ್ಕೆ ಕಾರಣವಿಷ್ಟೆ. ಇಯಾಗೋವಿನ ತರ್ಕ ಹೇಗೆ ಕೆಲಸ ಮಾಡುತ್ತದೆ ಎಂದು ತೋರಲು. ಅಥೆಲೋ-ಡೆಸ್ಡಿಮೋನಾರ ನಡುವಿನ ದೃಶ್ಯದಿಂದ ಅವನು ಪ್ರಭಾವಿತನಾಗಿಲ್ಲವೆಂಬುದು ಸುಳ್ಳಾಗುತ್ತದೆ. ಅವನು ಅಂಥ ದಡ್ಡನಲ್ಲ, ಆ ಪ್ರೇಮ ನಿಜವಾಗಿ ಗಟ್ಟಿಯಾದದ್ದು ಎಂಬ ಅನುಮಾನ ಅವನಿಗೆ ಕಾಡಿದ್ದಿರಬೇಕು. ಎಂದೇ ತನ್ನ ಮುಂದಿರುವ ಕೆಲಸಗಳನ್ನು ಕ್ಷಿಪ್ರಗತಿಯಲ್ಲಿ ಮುಗಿಸಬೇಕು. ಅಥೆಲೋ-ಡೆಸ್ಡಿಮೋನಾರ ದೃಶ್ಯ ಪರಿಣಾಮ ಬೀರಿದ್ದಕ್ಕಿಂತ ಹೆಚ್ಚಿಗೆ ಕ್ಯಾಷಿಯೋ-ಡೆಸ್ಡಿಮೋನಾರ ಮಧ್ಯೆ ನಡೆದ ದೃಶ್ಯ ಅವನ ಪ್ರಕಾರ ಹೆಚ್ಚು ನಂಬಲರ್ಹವಾದದ್ದು. ಡೆಸ್ಡಿಮೋನಾಳ ಬಗ್ಗೆ ಇಷ್ಟು ಕೇವಲವಾಗಿ ಮಾತನಾಡುವುದು ರೋಡರಿಗೋನಂಥ ವ್ಯಕ್ತಿಗೂ ಸಹನೆಯಾಗುವುದಿಲ್ಲ, ಅವಳು ಶುದ್ಧಳು, ಪವಿತ್ರಳು ಎಂದು ಅವನಾಡಿದ ಮಾತಿಗೆ ಇಯಾಗೋ 'ಪವಿತ್ರ ! ನಿನ್ನ ತಲೆ ! ಪವಿತ್ರಳಾಗಿದ್ದರೆ ಆ ಅಥೆಲೋನನ್ನ ಎಂದಿಗೂ ಪ್ರೀತಿಸ್ತಿರಲಿಲ್ಲ, ಆ ಕ್ಯಾಷಿಯೋ ಕೈಗಳು ಹಿಡಿದು ಹ್ಯಾಗೆ ಆಟವಾಡ್ತಿದ್ದಳು, ನೋಡಿದ್ಯಲ್ಲ?''. ಈಗಲೂ ರೋಡರಿಗೋ ನಂಬುವುದಕ್ಕೆ ತಯಾರಿಲ್ಲ. 'ಹೌದು, ಆದರೆ ಅದು ಸಜ್ಜನಿಕೆಯ ರೀತಿ ಅಷ್ಟೆ' 'ಹಾದರ ಅದು. ಮನಸ್ಸಿನೊಳಗಣ ಹೊಲಸು ಭಾವನೆಗಳಿಗೆ ಪೀಠಿಕೆ. ತುಟಿಗಳನ್ನು ಎಷ್ಟು ಹತ್ತಿರ ತಂದರೆಂದರೆ ಅವರ ಉಸಿರುಗಳು ಬೆರೆತುಹೋದವು.' ಮತ್ತಷ್ಟು ವಿವರಗಳನ್ನು ಕೊಡುವುದು ಇಯಾಗೋವಿಗೆ ಬೇಕಿಲ್ಲ. ರೋಡರಿಗೋನನ್ನು ವೆನಿಸಿನಿಂದ ಕರೆತಂದದ್ದು ತಾನು. ಅವನು ತನ್ನ ಮಾತು ಕೇಳಬೇಕು. ಈಗ ಅವನು ಮಾಡಬೇಕಾದದ್ದು ಇಷ್ಟು, ಕ್ಯಾಷಿಯೋ ಕಾವಲು ಕಾಯುತ್ತಿದ್ದಾಗ ಅವನನ್ನು ಕೆರಳಿಸಬೇಕು. ಅವನು ಮುಂಗೋಪಿ. ರೋಡರಿಗೋನನ್ನು ಖಂಡಿತ ಥಳಿಸುತ್ತಾನೆ. ಅಷ್ಟು ಸಾಕು. ಅಲ್ಲಿಂದ ಮುಂದಕ್ಕೆ ಇಯಾಗೋವಿನ ಜವಾಬ್ದಾರಿ. ಇಡೀ ಸೈಪ್ರಸ್ ದಂಗೆ ಏಳುವಂತೆ ಮಾಡಿ ಕ್ಯಾಷಿಯೋ ಲೆಫ್ಟಿನೆಂಟ್ ಗಿರಿಯನ್ನು ಕಳೆದುಕೊಳ್ಳಬೇಕು. ಅಲ್ಲಿಯವರೆವಿಗೆ ಈ ಘಟನೆಯನ್ನು ಮುಟ್ಟಿಸಲು ನಿರ್ಧಾರಮಾಡುತ್ತಾನೆ. ರೋಡರಿಗೋವಿಗೆ ಕೂಡ ತನ್ನ ಬಯಕೆಯನ್ನು ತೀರಿಸಿಕೊಳ್ಳುವುದು ಸುಲಭವಾಗುತ್ತದೆ. ಇಲ್ಲದಿದ್ದರೆ ಅವನು ಆಸೆ ಕೈಬಿಡುವುದೇ ಒಳ್ಳೆಯದು. ಇಷ್ಟು ಆಶ್ವಾಸನೆ ಸಿಕ್ಕಮೇಲೆ ರೋಡರಿಗೋ ಖಂಡಿತ ತನ್ನ ಆಸೆ ಪೂರೈಸಿಕೊಳ್ಳಲು ಮುಂದುವರೆಯಲು ಒಪ್ಪುತ್ತಾನೆ. ಮತ್ತೆ ಭೇಟಿಯಾಗುವುದಾಗಿ ಹೇಳಿ ರೋಡರಿಗೋ ನಿಷ್ಕ್ರಮಿಸುತ್ತಾನೆ.

ಇಯಾಗೋವಿನ ಮತ್ತೊಂದು ಪ್ರಮುಖ ಸ್ವಗತದಿಂದ ಮೊದಲ ದೃಶ್ಯ ಮುಕ್ತಾಯವಾಗುತ್ತದೆ.

ಮೊದಲು ಸ್ವಗತವನ್ನು ನೋಡೋಣ :

That Cassio loves her, I do well believe it ;
That she loves him, it is apt and of great credit

ಈ ಸಾಲುಗಳಿಂದ ಆರಂಭವಾಗುತ್ತದೆ. ಕ್ಯಾಷಿಯೋ ಡೆಸ್ಡಿಮೋನಾಳಲ್ಲಿ ಅನುರಕ್ತನಾಗಿರುವುದರ ಬಗ್ಗೆ ಅವನಿಗೆ ಸಂದೇಹಗಳೇ ಇಲ್ಲ. ಮತ್ತೆ ಅವಳು ಅವನಲ್ಲಿ ಅನುರಕ್ತಳಾಗಿದ್ದಾಳೆಂಬ ಸಾಧ್ಯತೆಗಳಿವೆ. ನಿಜವೂ ಕೂಡ ಎಂದು ನಂಬಲೂಬಹುದು. ಸಮಸ್ಯೆ ಇರುವುದೆಲ್ಲ ಅಥೆಲೋ ವಿಷಯದಲ್ಲಿ -

The Moor, how be it that I endure him not,
Is of a constant, noble, loving nature ;
And I dare think, he'll prove to Desdemona
A most dear husband.

ಅಥೆಲೋ ಪ್ರವೇಶದ ನಂತರ ಗಂಡ-ಹೆಂಡಿರ ದೃಶ್ಯವನ್ನು ಇಯಾಗೋ ಕೂಡ ನೋಡಿದ್ದಾನೆ. ಬಹುಶಃ ಈ ಮದುವೆ ಯಶಸ್ವಿಯಾಗಿಬಿಡುವ ಸಾಧ್ಯತೆಗಳಿವೆ. ಅಥೆಲೋವನ್ನ ಕಂಡರೆ ನನಗೆ ಸಹನೆ ಇರದಿದ್ದರೂ ಅವನು 'constant, noble loving nature' ಎಂಬ ಮಾತನ್ನು ತಾನು ಒಪ್ಪಲೇಬೇಕು. ಎಂದೇ ಅವನೊಂದು ದೊಡ್ಡ ಸವಾಲಾಗುವುದರಲ್ಲಿ ಅನುಮಾನವಿಲ್ಲ. ಅವನ ವ್ಯಕ್ತಿತ್ವ ಅರಿತ ಯಾರಾದರೂ ಅವನು ಡೆಸ್ಡಿಮೋನಾಳಿಗೆ ಪ್ರಿಯಗಂಡನಾಗಿಬಿಡುತ್ತಾನೆ ಎಂಬುದರ ಬಗ್ಗೆ ಶಂಕಿಸುವುದು ಸಾಧ್ಯವಿಲ್ಲ. ಈ ಸಕಾರಾತ್ಮಕ ಜಾಡಿನಲ್ಲಿ ಯೋಚನೆಮಾಡುವುದೇ ಇಯಾಗೋವಿನ ಜಾಯಮಾನಕ್ಕೆ ಒಪ್ಪದ ಮಾತು. ತಕ್ಷಣ ಅದನ್ನು ಬಿಟ್ಟು ಬೇರೆ ಜಾಡು ಹಿಡಿಯುತ್ತಾನೆ. ಒಂದಂತೂ ಸತ್ಯ – ಇಯಾಗೋ ಮೊದಲ ಬಾರಿಗೆಂಬಂತೆ ಅತ್ಯಂತ ಗೊಂದಲದ, ಅನಿಶ್ಚಿತತೆಯ ಸ್ಥಿತಿಯಲ್ಲಿ ಇದ್ದಾನೆ – ಎಂಬ ಮಾತು.

....now I do love her too
not out of absolute lust, (though peradventure
I stand accountant for as great a sin)
But partly led to diet my revenge,
For that I do suspect the lustful Moor
Hath leaped into my seat, the thought whereof
Doth like a poisonous mineral gnaw my inwards,
And nothing can, nor shall content my soul
Till I am even with him, wife, for wife.

ಹೆಣಗಾಡಿ, ತಿಣುಕಾಡಿ ತನ್ನನ್ನು ತಾನು ಪ್ರಚೋದಿಸಿಕೊಳ್ಳುವ ಬಗೆಯ ಒಳ್ಳೆಯ ಉದಾಹರಣೆ. ''ನಾನೇನೂ ಸಂತನಲ್ಲ, ಆದರೂ ಡೆಸ್ಡಿಮೋನಾಳ ಕುರಿತು ನನಗಿರುವ ಆಸಕ್ತಿ ಕೇವಲ ಕಾಮತೃಷೆಯನ್ನು ತಣಿಸಿಕೊಳ್ಳುವುದಕ್ಕಾಗಿ ಅಲ್ಲ. ಆದರೆ ಪ್ರತೀಕಾರಕ್ಕಾಗಿ. ಈ ಮೂರನು ನನ್ನ ಹಾಸಿಗೆಗೆ ನುಸುಳಿದ್ದಾನೆ ಎಂಬ ಅನುಮಾನವೇ ವಿಷದಂತೆ ನನ್ನ ದೇಹಾದ್ಯಂತ ಹರಡಿ ಕೊಲ್ಲುತ್ತದೆ''. ಈ ಹಿಂದೆ ಅಂದರೆ ಮೊದಲ ಅಂಕದ ಅವನ ಸ್ವಗತದಲ್ಲಿ ಅಥೆಲೋ ತನ್ನ ಹೆಂಡತಿಯನ್ನು ದುರುಪಯೋಗಪಡಿಸಿಕೊಂಡಿದ್ದಾನೆಂಬುದರ ಬಗ್ಗೆ 'I know not if it be true' ಎಂದು ತೀವ್ರವಾಗಿ ಅನುಮಾನ ಪಟ್ಟಿದ್ದವನು ಈಗ ಬಹು ಖಂಡಿತವಾಗಿ ಆ ಬಗ್ಗೆ ಮಾತನಾಡುತ್ತಿದ್ದಾನೆ. ಡೆಸ್ಡಿಮೋನಾಳ ಬಗ್ಗೆ 'I do love her too' ಅನ್ನುತ್ತಾನೆ. ಇಯಾಗೋವಿನ ವಿಷಯ ಮಾತನಾಡುವಾಗ ಅವನಿಗೆ 'love' ಮತ್ತು 'lust' ಇವುಗಳ ಕುರಿತಾದ ವ್ಯತ್ಯಾಸಗಳು ಕಾಣಿಸುವುದೇ ಇಲ್ಲ ಎಂಬ ಮಾತನ್ನು ನೆನಪಿನಲ್ಲಿಟ್ಟು ಕೊಂಡಿರಬೇಕು. 'I do love her too' ಅಂದವನು ಮುಂದಿನ ಸಾಲಿನಲ್ಲಿ 'not out of absulute lust' ಎಂದು ಸೇರಿಸುವುದರಲ್ಲೇ ನಮಗೆ ಅರ್ಥವಾಗಬೇಕು. ಈಗ ತನ್ನ ಮುಂದಿರುವ ಪ್ರಶ್ನೆಯಿದು – ತನ್ನ ಹೆಂಡತಿಯನ್ನು ಕೆಡಿಸಿದ ಅಥೆಲೋವಿನ ಮೇಲೆ ಸೇಡು ತೀರಿಸಿಕೊಳ್ಳುವುದೆಂದರೆ ಅವನ ಹೆಂಡತಿಯನ್ನು ಕೆಡಿಸುವುದು 'ನನ್ನ ಆತ್ಮಕ್ಕೆ ಅಲ್ಲಿಯವರೆವಿಗೆ ತೃಪ್ತಿ ಸಾಧ್ಯವಿಲ್ಲ, ಹಗೆ ಸಾಧಿಸಬೇಕು – ಹೆಂಡತಿಗೆ ಹೆಂಡತಿ'. ಆದರೆ ಇದು ಸಾಧ್ಯವಾಗದೆ ಹೋದರೆ....

> Or failing so, yet that I put the Moor,
> Atleast, into a jealousy so strong,
> That judgement cannot cure....

ಹೆಂಡತಿ ಸಿಗದೆ ಹೋದರೆ ಅವನೇ ಹೆಂಡತಿಯ ಬಗೆಗೆ, ವಿವೇಕ ವಿವೇಚನೆಗಳು ಗುಣಪಡಿಸಲಾಗದಂಥ, ಭಯಂಕರ ಅಸೂಯೆಯನ್ನು ಮೂಡಿಸಬೇಕು. ಈ ಮಳ್ಳ ರೋಡರಿಗೋವನ್ನು ನಾನು ಸೂಚಿಸಿರುವ ಹೇಯಕೆಲಸಕ್ಕೆ ಹಚ್ಚಿ ಅವನು ಯಶಸ್ವಿಯಾದರೆ 'I'll have our Michael Cassio on the hip' ''ಬಿಡಿಸಿಕೊಳ್ಳಲಿಕ್ಕಾಗದ ಪಟ್ಟಿನಲ್ಲಿ ಹಿಡಿದುಬಿಡುತ್ತೇನೆ'' ಎಂದು ನಿರ್ಧರಿಸುತ್ತಾನೆ. ಹೇಗೆ ? ಬಳಸಬೇಕಾದ ತಂತ್ರ ಯಾವುದು ?

> 'Abuse him to the moor, in the rank garb
> (For I fear Cassio with my night-Cap too)

ತಂತ್ರ ರೂಪಿಸುತ್ತಿದ್ದಾಗಲೇ ತಟ್ಟನೆ ನೆನಪಿಗೆ ಬಂದವನಂತೆ ಕ್ಯಾಷಿಯೋ ತನ್ನ ಹೆಂಡತಿಯ ಮೇಲೆಯೂ ಕಣ್ಣುಹಾಕಿದ್ದನೆಂಬ ತನ್ನ ಅನುಮಾನ ನೆನಪಿಗೆ ಬರುತ್ತದೆ. ಎಂಥ ಅನಾರೋಗ್ಯದ ಮನಸ್ಸು ಎಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ. ಎಲ್ಲ ಗಂಡಸರೂ ಕಾಮುಕರು

ಎಂದು ಇಯಾಗೋ ನಿಷ್ಕರ್ಷಿಸಿಬಿಟ್ಟಿದ್ದರೆ ಅದು ಬೇರೆ ಮಾತು ; ಆದರೆ ಜೊತೆಜೊತೆಗೇ ಪ್ರತಿ ಹೆಣ್ಣು ಕೂಡ ತನ್ನನ್ನು ತಾನು ಭೋಗವಸ್ತುವಾಗಿ ವಿನಾ ಬೇರೆಯಾಗಿ ತಿಳಿದಿಲ್ಲ ಎಂದು ಅನುಮಾನಗಳೇ ಇಲ್ಲದೆ ಪ್ರತಿಪಾದಿಸುತ್ತ ಹೋಗುವುದು ಆರೋಗ್ಯವಂತ ಮನಸ್ಸಿನ ಲಕ್ಷಣ ಖಂಡಿತ ಅಲ್ಲ. ಹೀಗೆ ತಾನು ಅಥೆಲೋ ಮನಸ್ಸನ್ನು ವಿಷದಿಂದ ತುಂಬಿಬಿಟ್ಟರೆ ಆದರಿಂದ

Make the moor thank me, love me, and reward me,
For making him egregiously an ass,
And practising upon his peace and quiet,
Even to madness....

ಎರಡು ಲಾಭಗಳು - ಅಥೆಲೋ ತನಗೆ ಕೃತಜ್ಞನಾಗಿರುತ್ತಾನೆ, ಪ್ರೀತಿಸುತ್ತಾನೆ ಮತ್ತು ಅದಕ್ಕೂ ಹೆಚ್ಚಿಗೆ ತನಗೆ ಇನಾಮು ನೀಡಿಯೇ ನೀಡುತ್ತಾನೆ. ಎರಡನೇ ಲಾಭವೆಂದರೆ ಅಥೆಲೋ ಒಬ್ಬ ಲೋಕೋತ್ತರ ಮೂರ್ಖನಾಗುತ್ತಾನೆ. ಹಾಗೆ ಮೂರ್ಖನನ್ನಾಗಿ ಮಾಡಿದ್ದಕ್ಕಾಗಿಯೇ ತನ್ನನ್ನು ಗೌರವಿಸುವುದು ಕೂಡ. ಅವನ ಶಾಂತಿ, ಸಮಾಧಾನಗಳನ್ನೆಲ್ಲ ಧೂಳೀಪಟಮಾಡಿ ಅವನನ್ನು ಹುಚ್ಚನನ್ನಾಗಿ ಮಾಡಿಬಿಡಬೇಕು. ಅದೇ ಗುರಿ. ಹೌದು 'it is here, but yet confused; / Knavery's plain face is never seen, till used : ಎಲ್ಲ ತಲೆಯೊಳಗಿದೆ. ಆದರೂ ಯಾವುದೂ ಸ್ಪಷ್ಟವಿಲ್ಲ. ಧೂರ್ತತನದ ಮುಖ ಕ್ರಿಯೆಯಲ್ಲಿ ಮಾತ್ರ ಕಾಣುವುದು... ಅಲ್ಲಿಯವರೆವಿಗೆ ಅಲ್ಲ. ಮೊದಲನೆಯ ಅಂಕದ ಕೊನೆಯಲ್ಲಿ ತನ್ನ ಸ್ವಗತವನ್ನು

"I have it, it is engendered ; Hell and night
Must bring this monstrous birth to the world's light.

''ನನ್ನ ಬುದ್ಧಿಯ ಬಸಿರಲ್ಲಿ ಬೀಜ ನೆಟ್ಟಾಯಿತು. ಕತ್ತಲ ರಾತ್ರಿ, ಪ್ರೇತಲೋಕಗಳು ಜೊತೆಗೂಡಿ ಹಡೆದ ಈ ಬೀಭತ್ಸ ಹುಟ್ಟನ್ನು ಜಗತ್ತಿನ ಬೆಳಕಿಗೆ ಒಯ್ದು ತರಬೇಕು'' ಎಂದು ಖಡಾಖಂಡಿತವಾಗಿ ಹೇಳಿದ ನೆನಪು ನಮಗೆ ಮಾಸಿಲ್ಲ. ಅದು ವೆನಿಸಿನಲ್ಲಿ ಆಡಿದ ಮಾತುಗಳು. ಜಾಳುಜಾಳು ಬದುಕಿನ, ಥಳಕುಬಳಕುಗಳ ಲೋಕದ, ಆಳಗಳೇ ಇಲ್ಲದ ಮಾತುಗಳ ಮಧ್ಯದಲ್ಲಿ ಗಟ್ಟಿಸ್ವರೂಪದ ಧೂರ್ತತನಕ್ಕೆ ಇಂಥ ಕಡು ಆತ್ಮವಿಶ್ವಾಸವಿರುವುದು ಸಹಜ. ಆಗಲೇ ಗಮನಿಸಿದ್ದ ಹಾಗೆ ಅಥೆಲೋ ಕೂಡ ಮಾತನಾಡುವುದು ಆಸ್ಥಾನ ಭಾಷೆ , ಆದರೆ ಇಲ್ಲಿ ಈ ಪ್ರಕೃತಿಯ ಸಹಜಸ್ವರೂಪದೆದುರು ಕ್ಯಾಷಿಯೋ ಕೂಡ ಸೇರಿದ ಹಾಗೆ ಎಲ್ಲರೂ ಪ್ರಜ್ಞೆಯಾಳದಿಂದ ಮಾತುಗಳನ್ನಾಡುತ್ತಾರೆ. ವೆನಿಸಿನಲ್ಲಿ ದೊಡ್ಡ ದಾದಾಗಿರಿ ಮಾಡಿದಂತೆ ಕಂಡ ಇಯಾಗೋ ಇಲ್ಲಿ ಅಸ್ಥಿರನಾಗಿದ್ದಾನೆ. ಮೊದಲ ಸ್ವಗತದಲ್ಲಿ ಕಂಡ ಸ್ಪಷ್ಟತೆ ಕೂಡ ಇಲ್ಲಿ ಮಾಯವಾಗಿದೆ. ಒಂದು ವಿಷಯದಿಂದ ಮತ್ತೊಂದಕ್ಕೆ ಮರ್ಕಟದ ಹಾಗೆ ನೆಗೆಯುತ್ತಿದೆ

ಅವನ ವಿಚಾರ ಲಹರಿ. ಅವನ ಮುಂದಿರುವ ಸವಾಲೆಂದರೆ ತನ್ನನ್ನು ತಾನು ಹೇಗೆ ಹದ್ದುಬಸ್ತಿಗೆ ತಂದುಕೊಂಡು ತನ್ನ ಯೋಜನೆಯನ್ನು ಸಾಧಿಸುವುದು ಎಂದು. ಎಂದೇ ಈ ಸ್ವಗತ ಮುಕ್ತಾಯವಾಗುವುದು ದೃಢತೆ ಕಳೆದುಕೊಂಡ ಮಾತುಗಳಿಂದ 'It is here, but yet confused ;'.....

ಅಥೆಲೋ ಸೈಪ್ರಸ್ಸಿನಾದ್ಯಂತ ವಿಜಯೋತ್ಸವವನ್ನು ಆಚರಿಸಲು ಘೋಷಿಸಿದ್ದಾನೆ. ಈ ಸಂತಸದ ಸುದ್ದಿಯೊಂದಿಗೆ ತನ್ನ ವಿವಾಹದ ಸಂದರ್ಭದ ಸಂತೋಷವೂ ಸೇರಿದೆ. ಎಲ್ಲ ಪ್ರಜೆಗಳೂ ಈ ದಿನವನ್ನು ಹಬ್ಬವಾಗಿ ಆಚರಿಸಬೇಕು – ಅವರವರ ಆಯ್ಕೆಯಂತೆ. ರಾತ್ರಿ ಹನ್ನೊಂದರವರೆವಿಗೆ ಈ ಸಂತೋಷಕೂಟಗಳು ಮುಂದುವರೆಯಬಹುದು. 'ಸೈಪ್ರಸ್ಸನ್ನೂ ನಮ್ಮ ಮಹಾನ್ ಜನರಲ್ ಅಥೆಲೋನನ್ನೂ ದೇವರು ಹರಸಲಿ.' ಇದು ಡಂಗುರ ವಾರ್ತೆ.

ಎರಡನೇ ಅಂಕದ ಮೂರನೆಯ ದೃಶ್ಯ ಅತ್ಯಂತ ವೇಗದ ಗತಿಯಲ್ಲಿ ಸಾಗುತ್ತದೆ. ಮೊದಲ ಭಾಗದಲ್ಲಿ ಅಥೆಲೋ ಕ್ಯಾಷಿಯೋನಿಗೆ ಎಚ್ಚರಿಕೆಯಿಂದ ಕಾವಲು ಕಾಯುವುದರ ಕುರಿತು ಅಂತಿಮ ಸೂಚನೆಗಳನ್ನು ನೀಡುತ್ತಿದ್ದಾನೆ. ವಿವೇಚನೆಯ ಹದ್ದು ಮೀರಿ ನಾವು ವರ್ತಿಸಬಾರದು ಎಂಬ ನೆನಪು ಇರಲಿ ಎಂದು ಎಚ್ಚರಿಸುತ್ತಾನೆ. ಇಯಾಗೋ ಮಾರ್ಗದರ್ಶನದಂತೆ ತಾನು ನಡೆದುಕೊಳ್ಳುವುದಾಗಿ ಹೇಳಿದ ಕ್ಯಾಷಿಯೋಗೆ, ಅಥೆಲೋ 'Iago is most honest' ಎಂದು ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿ ತಾನಿನ್ನು ಹೊರಡುವುದಾಗಿ ಹೇಳುತ್ತಾನೆ. ಹೋಗುವುದಕ್ಕೆ ಮುಂಚೆ ಹೆಂಡತಿಯ ಕಡೆ ತಿರುಗಿ

'........Come, my dear love,
The purchase made, the fruits are to ensue,
The profit is yet to come betwixt me and you,
Good night'

ಎಂದು ಹೊರಡುತ್ತಾನೆ. ಈ ಎರಡು ಮೂರು ಸಾಲುಗಳೂ ಮಡಿವಂತರ ಕತ್ತರಿಪ್ರಯೋಗಕ್ಕೆ ಬಲಿಯಾಗಿವೆ. 'purchase made' 'fruits are to ensure' 'the profit is yet to come betwixt me and you' ತೀರ ಅಸಭ್ಯ ಮಾತುಗಳಾಗಿ ಕಂಡಿವೆ. ಮೈಯಾಗಲಿ, ಮನಸ್ಸಾಗಲಿ ಎರಡರ ವಿಷಯದಲ್ಲಿಯೂ ಅಥೆಲೋ ಹಾಗೂ ಡೆಸ್ಡಿಮೋನಾ ಇಬ್ಬರೂ ಕೂಡ ಒಂದು ಮಟ್ಟದ ಮುಕ್ತತೆಯನ್ನು ಸಾಧಿಸುವುದರಿಂದಲೇ, ಮುಂದಿನ ದುರಂತ ಭಾಗದಲ್ಲಿ ವಿಶೇಷವಾಗಿ ಅಥೆಲೋವಿನ ಮಾತುಗಳಲ್ಲಿ, ವರ್ತನೆಯಲ್ಲಿ ಇಲ್ಲಿಗೆ ತದ್ವಿರುದ್ಧವಾದ ಹೇಯವೂ, ಅಸಹ್ಯವೂ ಆದ ಬಗೆಗೆ ಸಮರ್ಥನೆ ದೊರಕುವುದು. ಆದರೆ ಈ ಭಾಗಗಳನ್ನು ನಮ್ಮ ಮಡಿವಂತರು ಕಿತ್ತುಹಾಕಿದ್ದಾರೆ ಎಂಬುದೂ ನಮಗೆ ಕಾಣುತ್ತದೆ. ನಾಯಕ,

ನಾಯಕಿ, ಖಳನಾಯಕರ ಸಂಪ್ರದಾಯದ ಕತೆಗಳಲ್ಲಿ ಮಾತ್ರ ಆಸಕ್ತಿಯಿರುವವರು ಶೇಕ್ಸ್‌ಪಿಯರನ ಹತ್ತಿರಕ್ಕೆ ಹೋಗಬಾರದು.

ಅಥೆಲೋ ನಿರ್ಗಮಿಸಿದ ಕೂಡಲೆ ಕ್ಯಾಷಿಯೋ ತನ್ನ ಕರ್ತವ್ಯಪಾಲನೆಯತ್ತ ಗಮನಹರಿಸುತ್ತಾನೆ. ಆದರೆ ಇಯಾಗೋವಿನ ಇರಾದೆಗಳೇ ಬೇರೆ ಇವೆ. ಕ್ಯಾಷಿಯೋನನ್ನು ಸಂತೋಷ ಸಂಭ್ರಮಗಳಲ್ಲಿ ಪಾಲುಗೊಳ್ಳುವುದಕ್ಕೆ ಪುಸಲಾಯಿಸಬೇಕು. ಇನ್ನು ಹತ್ತು ಗಂಟೆ ಕೂಡ ಇಲ್ಲ. ಅಥೆಲೋ ಬೇಗ ಮಲಗಲು ಹೋದ ಎನ್ನುವುದಕ್ಕೆ ಕಾರಣವಿದೆ. ಡೆಸ್ಡಿಮೋನಾ ಇದ್ದಾಳೆ. ಒಂದು ರಾತ್ರಿಯೂ ಇದುವರೆವಿಗೆ ಅವಳೊಡನೆ ಸ್ವೇಚ್ಛೆಯಿಂದ ಚೆಲ್ಲಾಟವಾಡಿಲ್ಲ. ಅದಕ್ಕಾಗಿ ಅವನನ್ನು ನಾವು ದೂಷಿಸಬಾರದು ; 'ದೇವರಾಣೆ, ಚೆಲ್ಲಾಟಕ್ಕೆ ಹೇಳಿ ಮಾಡಿಸಿದವಳು ಅವಳು' ಎಂದು ಕ್ಯಾಷಿಯೋನ ಮೇಲೆ ತನ್ನ ಮೊದಲ ಪಟ್ಟು ಪ್ರಯೋಗಿಸುತ್ತಾನೆ. 'ಅವಳು ಅತ್ಯಂತ ಸುಂದರ ಹೆಣ್ಣು' ಎಂದು ಸಿಕ್ಕಿಬೀಳದೆ ತಪ್ಪಿಸಿಕೊಳ್ಳುತ್ತಾನೆ ಕ್ಯಾಷಿಯೋ. 'ಮತ್ತೆ ಖಾತರಿಯಾಗಿ ಹೇಳಬಲ್ಲೆ - ಕಾಮಕೇಳಿಯಲ್ಲಿ ನಿಪುಣೆ ಇರಲೇಬೇಕು' ಎಂದು ಎರಡನೆ ಪಟ್ಟು ಯತ್ನಿಸುತ್ತಾನೆ. ''ಹೌದು, ಅವಳೊಬ್ಬ ನಿಷ್ಕಲ್ಮಷ ಹಾಗೂ ಕೋಮಲ ಮನಸ್ಸಿನ ಗೌರವಾನ್ವಿತ ಮಹಿಳೆ'' ಮತ್ತೂ ಇಯಾಗೋವಿನ ಕೈಗೆ ಸಿಗದೇ ನುಸುಳುತ್ತಾನೆ. ಮೂರನೆಯದು : 'ಎಂಥ ಕಣ್ಣುಗಳಪ್ಪ ಅವಳದು ! ಆಹ್ವಾನ ನೀಡಿ ಪ್ರಚೋದಿಸುವಂಥವು' 'ಹೌದು ಆಕರ್ಷಕ ಕಣ್ಣುಗಳು, ಆದರೆ ವಿನಯಶೀಲ, ಗಂಭೀರ ಕಣ್ಣುಗಳು' ಇಯಾಗೋ ಅಂತಿಮವಾಗಿ ಒಂದು ಪಟ್ಟು ಪ್ರಯೋಗ ಮಾಡುತ್ತಾನೆ. ''ಅವಳು ಮಾತನಾಡಿದಳೆಂದರೆ, ಪ್ರೀತಿಯ ಸನ್ನೆ'' ; ಕ್ಯಾಷಿಯೋ ಪ್ರಾಮಾಣಿಕವಾಗಿ ಸಂಭಾವಿತ ಮತ್ತು ಇಯಾಗೋವಿನ ಬಗ್ಗೆ ಗೌರವವೂ ಇರುವವನು. ಆದದ್ದರಿಂದ ಇವುಗಳು ತನ್ನನ್ನು ಹಿಡಿದುಹಾಕಲು ಬೀಸಿದ ಬಲೆಗಳು ಎಂದು ಅನ್ನಿಸುವುದೇ ಇಲ್ಲ. ''ನೀನು ಹೇಳುವುದು ನಿಜ ; ಅವಳು ಮಾತನಾಡಿದರೆ ಕುಶಲತೆ, ನೈಪುಣ್ಯಗಳು ಕಾಣುತ್ತವೆ'' ಎನ್ನುತ್ತಾನೆ. ಮೊದಲ ಸುತ್ತಿನ ಜಯ ಖಂಡಿತ ಕ್ಯಾಷಿಯೋನಿಗೆ. ಆದರೆ ಇಯಾಗೋವಿನ ಬತ್ತಳಿಕೆಯಲ್ಲಿ ಸಿದ್ಧ ಅಸ್ತ್ರವೊಂದಿದೆ. ಸಂತೋಷಕೂಟಕ್ಕೆ ಹಲವು ಗಣ್ಯರು ಕಾದಿದ್ದಾರೆ. ಒಂದೇ ಒಂದು ಬಟ್ಟಲು ಪಾನೀಯವಷ್ಟೆ. ಆಮೇಲೆ ಕರ್ತವ್ಯ. ಕ್ಯಾಷಿಯೋವಿಗೆ ಅರ್ಥವಾಗದ ಸಂಗತಿಯೆಂದರೆ ಸಂತೋಷ ಸಂಭ್ರಮಗಳನ್ನು ಪಾನೀಯಗಳಿಲ್ಲದೆಯೇ ಯಾಕೆ ಆಚರಿಸುವುದಿಲ್ಲ ಎಂದು. ಅವನದು ಬಹು ದುರ್ಬಲ ದೇಹ ಪ್ರಕೃತಿ. ಒಂದು ತೊಟ್ಟು ಹೆಚ್ಚಿಗೆಯಾದರೂ ನಿಯಂತ್ರಣ ತಪ್ಪುತ್ತದೆ. ಮತ್ತೆ ಈ ರಾತ್ರಿ ಈಗಾಗಲೇ ಒಂದು ಬಟ್ಟಲು ಕುಡಿದಾಗಿದೆ. ಆದರೆ ಇಲ್ಲಿ ಇಯಾಗೋವಿನ ಬಲವಂತ. ಕೊನೆಗೂ ಒಪ್ಪಿ ಅತಿಥಿಗಳನ್ನು ಕರೆತರುತ್ತಾನೆ. ಇಯಾಗೋವಿಗೆ ಈಗ ಸಮಾಧಾನ. ಅತ್ತ ತಲೆಕೆಟ್ಟ ದಡ್ಡ ರೋಡರಿಗೋ ಡೆಸ್ಡಿಮೋನಾಳ ಕನಸಿನಲ್ಲಿ ಕಂಠಪೂರ್ತಿ ಕುಡಿದಿದ್ದಾನೆ. ಇತ್ತ ಕ್ಯಾಷಿಯೋನಿಗೂ ಒಂದಷ್ಟು ಕುಡಿಸಿ ಇಬ್ಬರನ್ನೂ ಮುಖಾಮುಖಿ ಮಾಡಿಬಿಟ್ಟರೆ ತನ್ನ ಕೆಲಸ

ಸಾಧಿಸಿದ ಹಾಗೆ. ಕ್ಯಾಷಿಯೋ ಮಾಂಟನೋ ಮತ್ತಿತರರನ್ನು ಕರೆತಂದ ಕೂಡಲೇ ಸಂತೋಷಕೂಟ ಆರಂಭವಾಗುತ್ತದೆ. ಇಯಾಗೋವಿನ ಉತ್ಸಾಹಕ್ಕೆ ಎಲ್ಲೆಯೇ ಇಲ್ಲ. ಹಾಡುತ್ತಾನೆ. ಕುಣಿಯುತ್ತಾನೆ. ಕುಡಿದು, ಕುಡಿಸುತ್ತಾನೆ ವಿಶೇಷವಾಗಿ ಕ್ಯಾಷಿಯೋಗೆ. ಬೇಡಬೇಡವೆನ್ನುತ್ತಲೇ ಕ್ಯಾಷಿಯೋ ಒಂದಾದ ಮೇಲೊಂದರಂತೆ ಕುಡಿದು ಕ್ರಮೇಣ ನಾಲಗೆಯ ಮೇಲೆ ಹಿಡಿತ ತಪ್ಪುತ್ತ ಹೋಗುತ್ತದೆ. 'ನಾನು ಕುಡಿದಿದ್ದೀನಿ ಅಂತ ಭಾವಿಸಬೇಡಿ... ಇದು ನಮ್ಮ ಧ್ವಜಧಾರಿ, ಇದು ನನ್ನ ಬಲಗೈ, ಮತ್ತಿದು ನನ್ನ ಎಡಗೈ... ನಾನು ಕುಡಿದಿಲ್ಲ ಮತ್ತೆ, ಸ್ಥಿರವಾಗಿ ನಿಲ್ಲಬಲ್ಲೆ, ಸರಿಯಾಗಿ ಮಾತನಾಡಬಲ್ಲೆ... ನಾನು ಕುಡಿದುಬಿಟ್ಟಿದೀನಿ ಅಂತ ನೀವು ಯಾರೂ ಭಾವಿಸಬಾರದು' ಎಂದು ತೂರಾಡುತ್ತಲೇ ತನ್ನ ಕರ್ತವ್ಯಪಾಲನೆಗೆ ಹೊರಡುತ್ತಾನೆ. ಅವನು ಅತ್ತ ಬೆನ್ನು ತಿರುಗಿಸಿದ ತತ್‌ಕ್ಷಣ ಇಯಾಗೋ ಅತ್ಯಂತ ಮರುಕದ ಧ್ವನಿಯಲ್ಲಿ ಅವನ ಬಗ್ಗೆ ಮಾತನಾಡುತ್ತಾನೆ ''ನೋಡಿದಿರಾ... ಇವನು ಎಂಥ ಯೋಧನೆಂದರೆ ಸೀಸರ:ನ ಪಕ್ಕದಲ್ಲಿ ನಿಂತು ನಿರ್ದೇಶನ ಮಾಡಬಲ್ಲಷ್ಟು ಪ್ರತಿಭೆಯುಳ್ಳವನು. ಆದರೆ ಅವನ ದೌರ್ಬಲ್ಯ ನೋಡಿ. ಇಂಥವನ ಕೈಲಿ ಜವಾಬ್ದಾರಿ ನೀಡಿದ್ದಾನೆ ಅಥೆಲೊ. ಎಂದೋ ಒಂದು ದಿನ ಇವನ ಶಿಥಿಲ, ಅದೃಢ ಸ್ಥಿತಿಯಲ್ಲಿ ಇಡೀ ಸೈಪ್ರಸ್ ಬುಡಮೇಲಾಗಿಬಿಡುತ್ತದೆ. ಹೌದು, ಯಾವಾಗಲೂ ಹೀಗೇ. ಕುಡಿಯದೇ ನಿದ್ದೆ ಹೋಗುವುದು ಎಂಬುದೇ ಇಲ್ಲ. ಕುಡಿಯದೇ ಹೋದರೆ ಅವನು ಎರಡರಷ್ಟು ಕೆಲಸ ಮಾಡಬಲ್ಲ ಶಕ್ತಿಯುಳ್ಳವನು.'' ಮಾಂಟನೋಗೆ ಆತಂಕ ಶುರುವಾಗುತ್ತದೆ. ಅಥೆಲೋವಿಗೆ ಈ ವಿಷಯ ತಿಳಿಯಲೇಬೇಕು. ಅವನ ಒಳ್ಳೆಯತನದಲ್ಲಿ ಕ್ಯಾಷಿಯೋನ ದೌರ್ಬಲ್ಯಗಳ ಕಡೆ ಲಕ್ಷ್ಯಕೊಡದೆ ಹೋಗಿರಬಹುದು. ಯಾರಾದರೂ ಹೇಳಲೇಬೇಕು. ಆದರೆ ಇಯಾಗೋ ತಾನು ಈ ಕೆಲಸ ಮಾಡಲು ಒಪ್ಪುವುದಿಲ್ಲ. 'ಕ್ಯಾಷಿಯೋನ ಬಗ್ಗೆ ನನಗೆ ತುಂಬ ಪ್ರೀತಿಯಿರುವುದರಿಂದ ಅವನ ದೋಷವನ್ನು ತಿದ್ದುವುದಕ್ಕೆ ಯತ್ನಿಸುತ್ತೇನೆ' ಎಂದು ಹೇಳುತ್ತಿರುವಂತೆಯೇ ಕ್ಷಣ ಮುಂಚೆ ಪ್ರವೇಶ ಮಾಡಿದ ಕ್ಯಾಷಿಯೋ ಇದ್ದತ್ತ ಹೊರಟ ರೋಡರಿಗೋನ 'ಕಾಪಾಡಿ, ಕಾಪಾಡಿ' ಎಂಬ ಕೂಗು ಕೇಳಿಬಂದು, ಕೂಗಿನ ಹಿಂದೆಯೇ ರೋಡರಿಗೋವನ್ನು ಅಟ್ಟಿಬರುತ್ತಿರುವ ಕ್ಯಾಷಿಯೋ ರಂಗಪ್ರವೇಶ ಮಾಡುತ್ತಾನೆ. ಪರಸ್ಪರ ನಿಂದನೆಗಳು, ಹೊಡೆದಾಟಗಳು ಆರಂಭವಾಗಿ ತಡೆಯಲು ಹೋದ ಮಾಂಟನೋ ಕ್ಯಾಷಿಯೋಗೆ ಮೃದುವಾಗಿ 'ಸ್ವಲ್ಪ ಕುಡಿದಿದ್ದೀಯೆ....' ಎಂದು ಎಚ್ಚರಿಸ ಹೋಗಿದ್ದಕ್ಕೆ ವ್ಯಗ್ರನಾಗಿ ಅವನ ಮೇಲೆಯೇ ಬೀಳುತ್ತಾನೆ. ಕತ್ತಿ ಹಿಡಿದು ಹೋರಾಟ ಮೊದಲಾಗುತ್ತದೆ. ಇಯಾಗೋ ರೋಡರಿಗೋಗೆ 'ಹೋಗಿ ಗಂಟೆ ಬಾರಿಸಿ ಇಡೀ ಊರನ್ನು ಎಚ್ಚರಿಸು' ಎಂದು ಹೇಳಿ, ಮರಳಿ ಬಂದು ಕಾದಾಡುತ್ತಿರುವವರನ್ನು ಬೇರ್ಪಡಿಸುವ ಸರ್ವಯತ್ನ ಮಾಡುವವನಂತೆ ಕಾಣಿಸಿಕೊಳ್ಳುತ್ತಾನೆ.

ಗಂಟೆಯ ಸದ್ದಿಗೆ ಎಚ್ಚರಾಗಿ ಅಥೆಲೋ ಅಲ್ಲಿಗೆ ಬರುತ್ತಾನೆ. ಕಾದಾಟ ನಡೆದೇ ಇದೆ.

ಭಯಂಕರ ಸಿಟ್ಟು ಬರುತ್ತದೆ. 'ಯಾರು, ಯಾರು ಶುರುಮಾಡಿದ್ದು ಈ ಬಡಿದಾಟ?' ಯಾರೂ ಮಾತನಾಡುವುದಿಲ್ಲ. ಕ್ಯಾಷಿಯೋ 'ನನ್ನನ್ನು ಏನೂ ಕೇಳಬೇಡ, ನಾನು ಏನೂ ಹೇಳಲಾರೆ' ಅಂದುಬಿಡುತ್ತಾನೆ ; ಮಾಂಟನೋ ತಿಂದ ಪೆಟ್ಟುಗಳ ನೋವಿನಿಂದ ನರಳುತ್ತಿದ್ದಾನೆ. ಅವನು ಕೂಡ 'ಇಯಾಗೋ ಎಲ್ಲವನ್ನು ಹೇಳಬಲ್ಲ' ಎಂದು ಅವನತ್ತ ಬೊಟ್ಟು ಮಾಡಿಬಿಡುತ್ತಾನೆ. ಇಯಾಗೋ ತನ್ನ ಕಣ್ಣಿಗೆ ಕಂಡದ್ದನ್ನು ಅತ್ಯಂತ 'ಪ್ರಾಮಾಣಿಕ'ವಾಗಿ ಹೇಳುತ್ತಾನೆ. ''ಕ್ಯಾಷಿಯೋ ಅಟ್ಟಿಬಂದ. ಆ ಅಪರಿಚಿತ, ಕ್ಯಾಷಿಯೋವಿಗೆ ಏನು ಮಾಡಿದನೋ ಗೊತ್ತಿಲ್ಲ. ಏನಾದರೂ ಮಾಡಿರಲೇಬೇಕು, ಸಹನೆ ಕಳೆದುಕೊಂಡ ಕ್ಯಾಷಿಯೋ ಅವನನ್ನು ಅಟ್ಟಿಬಂದು ಬಡಿದ. ಅಷ್ಟರಲ್ಲಿ ಗಂಟೆ ಬಾರಿಸಿದವರ್‍ಯಾರು ಎಂದು ನೋಡಹೋಗಿ ತಿರುಗಿಬರುವಷ್ಟರಲ್ಲಿ ಕತ್ತಿಗಳು ಝಳಪಿಸುತ್ತಿದ್ದವು, ಹೋರಾಟ ನಡೆದಿತ್ತು. ಮನುಷ್ಯರು ಮನುಷ್ಯರೇ, ಏನೋ ಕೆಟ್ಟಗಳಿಗೆ....'' ಆಥೆಲೋವಿಗೆ ಗೊತ್ತು – ಇಯಾಗೋ ತನ್ನ ಪ್ರಾಮಾಣಿಕತೆ ಮತ್ತು ಕ್ಯಾಷಿಯೋನ ಕುರಿತಾದ ಪ್ರೀತಿಯಿಂದಾಗಿ ವಿಷಯಗಳನ್ನು ಸ್ಪಷ್ಟ ಹೇಳುತ್ತಿಲ್ಲ ಎಂದು. ಆದರೆ ಕ್ಯಾಷಿಯೋ ತಪ್ಪಿತಸ್ಥ, ಶಿಕ್ಷೆಯಾಗಲೇಬೇಕು ಎಂದು ನಿಶ್ಚಯಿಸಿ "Casio, I love thee / But never more be officer of mine" ಎಂದು ಆಜ್ಞೆ ಮಾಡಿಬಿಡುತ್ತಾನೆ. ಡೆಸ್ಡಿಮೋನಾಳು ಕೂಡ ಎಚ್ಚರಾಗಿ ಬಂದುಬಿಟ್ಟಿದ್ದಾಳೆ. ಮತ್ತಷ್ಟು ಸಿಟ್ಟು ಬರುತ್ತದೆ. ಏನಾಯಿತೆಂದು ಕೇಳಿದ ಅವಳಿಗೆ 'ಈಗ ಎಲ್ಲ ಸರಿಹೋಯಿತು' ಎಂದು ಹೇಳಿ ''ಸೈನಿಕನ ಬದುಕೇ ಇಷ್ಟು, ಸುಂದರ ನಿದ್ರೆಗಳನ್ನು ಇಂಥ ವ್ಯಾಜ್ಯ, ಕಲಹಗಳಿಂದ ಕೆಡಿಸಿಕೊಳ್ಳುತ್ತಿರುವುದು, ನಡಿ ಹೋಗೋಣ'' ಎಂದು ಹೊರಟು ಬಿಡುತ್ತಾನೆ.

ಈಗ ರಂಗದ ಮೇಲೆ ಇಯಾಗೋ ಮತ್ತು ಕ್ಯಾಷಿಯೋ ಮಾತ್ರವಿದ್ದಾರೆ. 'ಏನು ಗಾಯವಾಯಿತೆ ಲೆಫ್ಟಿನೆಂಟ್ ?'' ಎಂದು ಬಹು ಮೃದುವಾಗಿ ಕೇಳುತ್ತಾನೆ. 'ಹೌದು, ಎಂಥ ಚಿಕಿತ್ಸೆಯೂ ಗುಣಪಡಿಸದ ರೀತಿಯ ಗಾಯ....' ''ಕೀರ್ತಿ, ಪ್ರತಿಷ್ಠೆಗಳು, ನನ್ನ ಕೀರ್ತಿ, ನನ್ನ ಪ್ರತಿಷ್ಠೆ.. ನನ್ನಲ್ಲಿನ ಶಾಶ್ವತವಾದದ್ದನ್ನು ಕಳೆದುಕೊಂಡು ಈಗ ಕೇವಲ ಪಾಶವೀ ಅಂಶ ಮಾತ್ರ ಉಳಿದಿದೆ. ನನ್ನ ಕೀರ್ತಿ ಇಯಾಗೋ, ನನ್ನ ಪ್ರತಿಷ್ಠೆ..'' ಇಯಾಗೋವಿಗೆ ಈ ಕೀರ್ತಿ ಪ್ರತಿಷ್ಠೆಗಳೆಂಬ ಮಾತುಗಳೆಲ್ಲ ಒಣಗಿಹೋದ ಮೂರ್ಖ ಶಬ್ದಗಳು. ನಮಗೆ ನಾವೇ ಆರೋಪಿಸಿಕೊಂಡುಬಿಡುವ ಆದರ್ಶಗಳು. ಯೋಗ್ಯತೆಯಿಲ್ಲದವರಿಗೆ ಸಲ್ಲಿಬಿಡುತ್ತದೆ, ಕಾರಣವೇ ಇಲ್ಲದೇ ಅವರನ್ನು ಬಿಟ್ಟು ಹೋಗುತ್ತದೆ. 'ಏನೋ ನಿನಗೆ ದೇಹಕ್ಕೆ ಪೆಟ್ಟಾಗಿದೆ ಎಂದು ಭಾವಿಸಿದ್ದೆ... ಹೋಗಿ ಆಥೆಲೋನನ್ನು ಮತ್ತೆ ವಿನಂತಿಸಿಕೋ, ಖಂಡಿತ ನಿನ್ನ ಸ್ಥಾನ ನಿನಗೆ ಮರಳಿ ದೊರಕುತ್ತದೆ' ಎಂದು ಉತ್ತೇಜಿಸುತ್ತಾನೆ. ಕ್ಯಾಷಿಯೋಗೆ ಇದರಲ್ಲಿ ನಂಬಿಕೆಯಿಲ್ಲ, 'ಕುಡುಕ' ಅಂದುಬಿಡುತ್ತಾನೆ ಆಥೆಲೋ. ''ಈಗ ಹೀನಸ್ಥಿತಿಯಲ್ಲಿ ನಾನು ಅವನನ್ನು ಎದುರಿಸುವುದಾದರೂ ಹೇಗೆ ?.... ಹಾಳು ಕುಡಿತ, ಮನುಷ್ಯನನ್ನು ಮೂರ್ಖನನ್ನಾಗಿ ಮಾಡಿ

ಕೊನೆಗೆ ಪಶುವನ್ನಾಗಿ ಮಾಡಿಬಿಡುತ್ತದೆ. ಪೈಶಾಚಿಕ ಅಂಶಗಳುಳ್ಳದ್ದು ಅದು'' ಎಂದು ಗೋಳಾಡುತ್ತಾನೆ. ಇಯಾಗೋ ಕಾದಿದ್ದುದು ಈ ಕ್ಷಣಕ್ಕೆ. ಕಾದಿರಿಸಿದ್ದ ಅತ್ಯಂತ ಪ್ರಬಲ ಅಸ್ತ್ರವನ್ನು ಪ್ರಯೋಗಿಸುತ್ತಾನೆ. 'ಬಿಡು, ಬಿಡು, ಯಾವನಾದರೂ ಯಾವಾಗಲಾದರೂ ಕುಡಿದಿರಬಹುದು. ಹೇಳುವುದನ್ನು ಕೇಳು – ನಮ್ಮ ಸೇನಾಧಿಪತಿಯ ಹೆಂಡತಿ ಈಗ ಸೇನಾಧಿಪತಿ. ಅವಳ ಸೌಂದರ್ಯ, ಬೆಡಗುಗಳಿಗೆ ಸಂಪೂರ್ಣ ತನ್ನನ್ನು ತಾನು ಅರ್ಪಿಸಿಕೊಂಡು ಬಿಟ್ಟಿದ್ದಾನೆ ಅಥೆಲೋ. ಅವಳದೇ ಧ್ಯಾನ, ಅವಳದೇ ಗೀಳು ಅವನಿಗೆ. ಅವಳ ಬಳಿ ಹೋಗು. ಸಂಪೂರ್ಣ ಮನಸ್ಸು ಬಿಚ್ಚಿ ಅವಳ ಬಳಿ ಎಲ್ಲ ಹೇಳಿಕೋ. ಅವಳು ನಿನಗೆ ನಿನ್ನ ಸ್ಥಾನ ದೊರಕಿಸಿಕೊಡುತ್ತಾಳೆ. She is so free, so kind, so apt, so blessed a disposition. ಅವಳನ್ನು ಕೇಳಿದ್ದಕ್ಕಿಂತ ಹೆಚ್ಚಿಗೆ ಉಪಕಾರ ಮಾಡಲಾಗದಿದ್ದರೆ ಅದು ತನ್ನ ದೋಷ ಎಂದು ತಿಳಿಯುತ್ತಾಳೆ. ಸದ್ಯದಲ್ಲಿ ಅವಳ ಗಂಡ ಮತ್ತು ನಿನ್ನ ಮಧ್ಯೆ ಉಂಟಾಗಿರುವ ಬಿರುಕನ್ನು ಮುಚ್ಚುವುದಕ್ಕೆ ಕೇಳಿಕೋ. ಪ್ರಮಾಣ ಮಾಡಿ ಹೇಳುತ್ತೇನೆ, ನಿಮ್ಮಿಬ್ಬರ ಸಂಬಂಧ ಇದರಿಂದ ಮತ್ತಷ್ಟು ಗಟ್ಟಿಯಾಗುತ್ತದೆ.'' ಕ್ಯಾಷಿಯೋ ಅತ್ಯಂತ ಕೃತಜ್ಞತೆಯಿಂದ ಒಪ್ಪಿ ಹೇಳುತ್ತಾನೆ. 'you advise me well' ಮರುದಿನ ಬೆಳಿಗ್ಗೆಯೇ ಡೆಸ್ಡಿಮೋನಾಳನ್ನು ಕಾಣಲು ನಿಶ್ಚಯಿಸುತ್ತಾನೆ. 'ಪ್ರಾಮಾಣಿಕ ಪ್ರೀತಿ ಮತ್ತು ಮರುಕದಿಂದ ತಾನು ಈ ಸಲಹೆ ಮಾಡಿರುವುದು, ಒಳ್ಳೆಯದಾಗಲಿ ಹೋಗಿ ಬಾ' ಎಂದು ಹರಸಿ ಕ್ಯಾಷಿಯೋನನ್ನು ಕಳಿಸಿಕೊಡುತ್ತಾನೆ. ಈಗ ಇಯಾಗೋ ಒಬ್ಬನೇ ಇದ್ದಾನೆ. ಎರಡನೇ ಅಂಕದ ಮೊದಲ ದೃಶ್ಯದಲ್ಲಿ ಕಂಡಿದ್ದ ಅನುಮಾನ, ಅಸ್ಥಿರತೆಗಳೆಲ್ಲ ಮಾಯವಾಗಿಬಿಟ್ಟಿದೆ. ಈಗ ತಾನು ಗಟ್ಟಿನೆಲದ ಮೇಲೆ ನಿಂತಿದ್ದೇನೆ ಎಂಬ ಆತ್ಮವಿಶ್ವಾಸ ನೂರುಪಟ್ಟು ಬೆಳೆದುಬಿಟ್ಟಿರುವುದು ಅವನ ಸ್ವಗತದ ದನಿಯಲ್ಲಿಯೇ ಒಡೆದು ಕಾಣುತ್ತದೆ.

> And what is he then, that says I play the villian
> When this advice is free I give, and honest,
> Probal to thinking, and indeed the course
> To win the moor again ?

ಹಾಗಾದರೆ ನಾನು ದುಷ್ಟ ಹೇಗಾಗಲು ಸಾಧ್ಯ ? ಅಥೆಲೋವಿನ ಪ್ರೀತಿಯನ್ನು ಮತ್ತೆ ಗಳಿಸಲು ನಾನು ಪ್ರಾಮಾಣಿಕವಾಗಿ ಹೇಳಿಕೊಟ್ಟ ದಾರಿ... ಅದು ಹೇಗೆ ಕೆಡಕಾಗುತ್ತದೆ ? ಹತ್ತಿಕ್ಕಲಾರದಂಥ ಉತ್ಸಾಹದಲ್ಲಿದ್ದಾನೆ ಇಯಾಗೋ.

> For'tis most easy,
> The inclining Desdemona to subdue,
> In any honest suit ; she's framed as fruitful
> As the free elements :

ಪ್ರಾಮಾಣಿಕ ಅಹವಾಲುಗಳಿಗೆ ಸುಲಭವಾಗಿ ಒಲಿಯುವ ಡೆಸ್ಡಿಮೋನಾಳನ್ನು ಒಪ್ಪಿಸುವುದು ಸುಲಭ.

ಗಾಳಿ ಬೆಳಕುಗಳಂತೆ ಬಹು ಉದಾರಹೃದಯದ ಹೆಣ್ಣು ಅವಳು.

.... and then for her
To win the Moor, were't to renounce his baptism,
All seals and symbols of redeemed sin,
His soul is so infettered to her love
That she may make, unmake, do what she list,
Even as her appetite shall play the god
With his weak function.

ಒಂದು ಸಲ ಅವಳು ಒಪ್ಪಿದಳೆಂದರೆ ಮುಂದಿನ ಹೆಜ್ಜೆ ಮೂರನನ್ನು ಒಲಿಸುವುದು. ಅವಳಿಗಾಗಿ ಏನನ್ನು ಬೇಕಾದರೂ ಮಾಡುತ್ತಾನೆ ಅವನು. ಜಾತಿ, ಧರ್ಮಗಳನ್ನು ಕೂಡ ತ್ಯಜಿಸಿಬಿಡುತ್ತಾನೆ. ಹೇಗೆ ಬೇಕಾದರೂ ಅವನನ್ನು ಆಡಿಸುತ್ತಾಳೆ. ಮನಸ್ಸಿಗೆ ಬಂದ ಹಾಗೆ ಅವನನ್ನು ಕುಣಿಸುತ್ತಾಳೆ. ಅವಳ ಬಗೆಗಿನ ಅವನ ವ್ಯಾಮೋಹ ಅವನನ್ನು ಅವಳ ಗುಲಾಮನನ್ನಾಗಿಸಿಬಿಟ್ಟಿದೆ. ಪ್ರೀತಿ, ಗಂಡು-ಹೆಣ್ಣುಗಳ ಸಂಬಂಧಗಳೆಂದರೆ ಇದಕ್ಕಿಂತ ಮೇಲೆ ಏರಿ ಯೋಚಿಸುವುದಕ್ಕೆ ಇಯಾಗೋವಿಗೆ ಸಾಧ್ಯವೂ ಇಲ್ಲ, ಅವನು ತಯಾರೂ ಇಲ್ಲ. ತನ್ನ ಮಿದುಳಿನ ವ್ಯಾಪ್ತಿಗೆ ಬರದ ಯಾವುದೂ ಇರಲಿಕ್ಕೆ ಸಾಧ್ಯ ಎಂಬುದನ್ನು ಅವನು ಒಪ್ಪಲು ಸಿದ್ಧನಿಲ್ಲ.

....How am I then a villain,
To counsel Cassio to this parallel course,
Directly to his good ? Divinity to hell !

ಹಾಗಾದರೆ ದುಷ್ಟನಾಗುವುದು ಹೇಗೆ ಸಾಧ್ಯ ? ಕ್ಯಾಷಿಯೋನ ಒಳಿತಿಗಾಗಿ ತಾನೆ ಈ ಪರ್ಯಾಯಮಾರ್ಗ ಸೂಚಿಸಿರುವುದು.... 'ನನ್ನದೊಂದು ಬಗೆಯ ಪೈಶಾಚಿಕ ಜಗತ್ತಿನ ಧರ್ಮಶಾಸ್ತ್ರ.'

When devils will their blackest sins put on,
They do suggest at first with heavenly shows,
As I do now :

ಈ ಶಾಸ್ತ್ರದ ಪ್ರಕಾರ ದುಷ್ಟಶಕ್ತಿಗಳು ಅತ್ಯಂತ ಕರಾಳ ಪೋಷಾಕು ಧರಿಸಿದಾಗ ಬಹು ಸ್ವರ್ಗೀಯವಾಗಿ ಕಾಣುತ್ತವೆ. 'ಈಗ ನಾನು ಕಾಣುತ್ತಿರುವ ರೀತಿ'.

'.....for while this honest fool
plies Desdemona to repair his fortunes,
And she for him pleads strongly to the Moor,
I'll pour this pestilence into his ear,
That she repeals him for her body's lust ;

'ಈ ಮೂರ್ಖ ಅವಳ ಬಳಿ ಮನವಿ ಸಲ್ಲಿಸಿ ಅವಳು ಅಥೆಲೋವಿಗೆ ಅವನ ಪರವಾಗಿ ಪ್ರಬಲವಾದ ವಕೀಲಿ ವಹಿಸಿದಾಗ ಅಥೆಲೋವಿನ ಕಿವಿಯಲ್ಲಿ ವಿಷ ಸುರಿದುಬಿಡುತ್ತೇನೆ. ಅವಳು ಅವನ ಪರ ವಹಿಸುತ್ತಿರುವುದು ಅವಳಿಗೆ ಅವನ ದೇಹದೊಡನೆ ಬೇಕಾಗಿರುವ ಕಾಮಕೇಳಿಗಾಗಿ ಎಂದು. ಅವಳು ಎಷ್ಟೆಷ್ಟು ಪ್ರಬಲವಾಗಿ ಅವನ ಪರ ಮಾತನಾಡುತ್ತಾಳೆ ಅಷ್ಟಷ್ಟೂ ಮೂರನ ಕಣ್ಣಲ್ಲಿ ಅವಳು ಅಪಮೌಲ್ಯಗೊಳ್ಳುತ್ತ ಹೋಗುತ್ತಾಳೆ. 'So will I turn her virtue into pitch, / And out of her own goodness make the net / that shall enmesh them all.' ಅವಳ ಒಳ್ಳೆಯತನದಿಂದಲೇ ಅವಳ ಸಚ್ಚಾರಿತ್ರ್ಯಕ್ಕೆ ಕಪ್ಪುಮಸಿ ಬಳಿದುಬಿಡುತ್ತೇನೆ. ಈ ಒಂದು ಬಲೆಗೆ ಎಲ್ಲರೂ ಬಲಿಗಳಾಗುವಂತೆ ಮಾಡುತ್ತೇನೆ.' ಇಯಾಗೋನ ಯೋಜನೆಗಳಿಗೆ ಈಗ ಸ್ಪಷ್ಟ ರೂಪು ದೊರಕಿದಂತೆ ಆಯಿತು. ಮೊದಲನೆ ಘಟ್ಟ ಜಯಿಸಿದ್ದಾಯಿತು. ಈಗ ಇರುವುದೇ ಪ್ರಮುಖ ಘಟ್ಟ. ಇಷ್ಟರಲ್ಲಿ ರೋಡರಿಗೋ ಅಲ್ಲಿಗೆ ಬಂದು ಗೊಣಗಲು ಆರಂಭಿಸಿದ್ದಾನೆ. ಕ್ಯಾಷಿಯೋನ ಕೈಯಲ್ಲಿ ಚೆನ್ನಾಗಿ ಪೆಟ್ಟು ತಿಂದಾಯಿತು. ತಂದ ಹಣ ಮುಕ್ಕಾಲುವಾಸಿ ಮುಗಿಯಿತು. ಈ ಇಡೀ ಪ್ರಸಂಗದಲ್ಲಿ ಅವನಿಗೊಂದಷ್ಟು ಅನುಭವ ದೊರಕಿದಂತೆ ಆಯಿತು ಮತ್ತು ಅದಕ್ಕೆ ಸಾಕಷ್ಟು ಹಣವೂ ಪೋಲು ಮಾಡಾಯಿತು. ಉಳಿದಿರುವುದೊಂದೇ – ವೆನಿಸಿಗೆ ವಾಪಸಾಗುವುದು. ಇಯಾಗೋವಿಗೆ ಇವನಿಂದ ಕಿರಿಕಿರಿ ಹೌದು. ಆದರೆ ಅವನ ಅವಶ್ಯಕತೆ ಬಹಳಷ್ಟಿದೆ. ಅವನ ಹಣ ತನಗೆ ಬೇಕು. ತಾನು ಮಾಡಲೆಣಿಸುವ ಹೊಲಸು ಕೆಲಸಗಳನ್ನು ಉತ್ಸಾಹದಿಂದ ಮಾಡುವ ಒಬ್ಬ ಮೂರ್ಖ ಬೇಕು. ಎಂದೇ ಅತ್ಯಂತ ಸಹನೆಯಿಂದ ಅವನಿಗೆ ಬುದ್ಧಿವಾದ ಹೇಳುತ್ತಾನೆ. 'ಸಹನೆಯಿಲ್ಲದವರು ಎಂಥ ನಿರ್ಭಾಗ್ಯರು. ಇಲ್ಲಿ ನಾವು ಕೆಲಸಮಾಡುತ್ತಿರುವುದು ಬುದ್ಧಿ ಬಳಸಿಯೇ ಹೊರತು ವಾಮಾಚಾರದ ಮಾಟ, ಮಂತ್ರಗಳಿಂದಲ್ಲ. ನಿನಗೆ ಏಟು ಬಿದ್ದಿದೆ ನಿಜ. ಆದರೆ ನಿನ್ನ ಸಣ್ಣಗಾಯದಿಂದ ಕ್ಯಾಷಿಯೋಗೆ ಸ್ಥಾನಪಲ್ಲಟವಾಗುವ ಹಾಗೆ ಮಾಡಿದ್ದಿ. ಸ್ವಲ್ಪ ಸಹನೆಯಿಂದಿರು. ಬೆಳಗಾಗಲಿ.... ಮತ್ತೆ ನಿನ್ನನ್ನು ಭೆಟ್ಟಿಯಾಗುತ್ತೇನೆ.... ಸದ್ಯಕ್ಕೆ ಹೋಗು... ಮನೆಗೆ ಹೋಗು' ಎಂದು ಹೆಚ್ಚೂ ಕಡಿಮೆ ಅವನನ್ನು ತಳ್ಳಿಯೇ ಬಿಡುತ್ತಾನೆ. ಈಗ ಮತ್ತೆ ಇಯಾಗೋ ಒಬ್ಬನೇ. ತನ್ನ ಹಂಚಿಕೆಗಳಿಗೆ ಅಂತಿಮ ಸ್ವರೂಪವನ್ನು ಕೊಡಬೇಕಿದೆ. 'ನನ್ನ ಹೆಂಡತಿಯ ಮೂಲಕ ಕ್ಯಾಷಿಯೋ ಡೆಸ್ಡಿಮೋನಾಳನ್ನು ಸಂಧಿಸುವುದಕ್ಕೆ ಏರ್ಪಾಟು ಮಾಡಬೇಕು. ಆ ಹೊತ್ತಿನಲ್ಲಿ ಮೂರನನ್ನು ನಾನು ದೂರ ಕರೆದೊಯ್ದಿರಬೇಕು. ಕ್ಯಾಷಿಯೋ

ಡೆಸ್ಡಿಮೋನಾಳನ್ನು ತನ್ನ ವಿನಂತಿಮಾಡಿ ಹೇಳಿಕೊಳ್ಳುತ್ತಿರುವ ಕ್ಷಣದಲ್ಲಿ ಹಠಾತ್ ಅಲ್ಲಿಗೆ ಮೂರನನ್ನು ಕರೆತಂದು ಆ ದೃಶ್ಯ ನೋಡುವಂತೆ ಮಾಡಬೇಕು.... ಅದು, ಅದು ದಾರಿ ; ಉದಾಸೀನ, ವಿಳಂಬಗಳಲ್ಲಿ ಈ ಹಂಚಿಕೆಯನ್ನು ಮಂಕುಗೊಳಿಸಬಾರದು.'

ಮೂರನೇ ಅಂಕವನ್ನು 'ದುಷ್ಪ್ರೇರಣೆ ಅಂಕ' ಎಂದು ವಿವರಿಸಲಾಗಿದೆ. ಇಯಾಗೋ ಅಥೆಲೋನ ಮನಸ್ಸನ್ನು ಸಂಪೂರ್ಣ ಆವರಿಸಿ ಇಯಾಗೋವಿನ ಮನಸ್ಸು ಇಚ್ಛಿಸಿದಂತೆ ಅಥೆಲೋ ವರ್ತಿಸುವಂತೆ ಮಾಡುವ ಅಂಕ. ಆದರೆ ದುಷ್ಪ್ರೇರಣೆ ಎಂಬ ಒಂದು ಶಬ್ದ ಮಾತ್ರ ಈ ಇಡೀ ಅನುಭವವನ್ನು ಚಿತ್ರಿಸಬಲ್ಲುದೆ ? ಅಥೆಲೋಗೆ ದುಷ್ಪ್ರೇರಣೆ ಹೌದು. ಆದರೆ ಓದುಗನಿಗೆ, ಪ್ರೇಕ್ಷಕನಿಗೆ ? ನಮ್ಮ ಮೇಲೆ ಏನು ಪರಿಣಾಮ ಬೀರುತ್ತದೆ ಈ ಅಂಕ ? ಯಾವಯಾವ ಪಾತ್ರಗಳ ಬಗ್ಗೆ ಏನೇನು ಕಲ್ಪನೆಗಳು ನಮಗೆ ಇಲ್ಲಿಯವರೆವಿಗೆ ಇದ್ದಿತ್ತೋ ಅವೇ ನಿಜವಾದ ಕಲ್ಪನೆಗಳೇ ಅಥವಾ ಈ ಅಂಕದ ಕೊನೆಗೆ ನಮಗೆ ಬೇರೆ ಕಲ್ಪನೆಗಳು ಸೃಷ್ಟಿಯಾಗುತ್ತವೆಯೋ ? ಈ ಎರಡು ಕಲ್ಪನೆಗಳಲ್ಲಿ ಆ ಪಾತ್ರಗಳ ಕುರಿತಾಗಿ ಯಾವುದು ನಿಜವಾದದ್ದು ? ಈ ಎಲ್ಲ ಪ್ರಶ್ನೆಗಳು ನಮಗೆ ಇದಿರಾಗುತ್ತ ಹೋಗುತ್ತವೆ. ಈ ಅಂಕವನ್ನು ಕುರಿತು ಮಾತನಾಡುವುದೂ ಅದಕ್ಕಿಂತ ಹೆಚ್ಚಿಗೆ ಬರೆಯುವುದೂ ನನಗನ್ನಿಸುವ ಮಟ್ಟಿಗೆ ಬಹು ಕಷ್ಟದ ಕೆಲಸ. ಸಂಕೀರ್ಣ ಅಂಕ ಇದು. ಅಂಕದ ಕೊನೆಯ ಗಳಿಗೆಯ ವೇಳೆಗೆ ನಾಟಕ ಪರಾಕಾಷ್ಠೆಯನ್ನು ಮುಟ್ಟುವುದನ್ನು ನಾವು ಕಾಣುತ್ತೇವೆ. ಹೆಚ್ಚಿಗೆ ಮುಂದುವರೆಯುವುದಕ್ಕೆ ಮುಂಚೆ ಅಂಕದ ವಿವರಗಳನ್ನೇ ನೋಡುತ್ತ ಹೋಗೋಣ.

ಕ್ಯಾಷಿಯೋ ಅಥೆಲೋವಿನ ಮನಸ್ಸನ್ನು ಗೆಲ್ಲುವುದಕ್ಕೆ ಅವನ ನಿವಾಸದ ಕೆಳಗೆ ವಾದ್ಯ ಸಂಗೀತ ಗೋಷ್ಠಿ ಏರ್ಪಡಿಸಿದ್ದಾನೆ. ಆದರೆ ಸಂಗೀತ ಸುಶ್ರಾವ್ಯವಾಗಿಲ್ಲವೆಂದು ಅದನ್ನು ನಿಲ್ಲಿಸಲಾಗಿದೆ. ಈಗ ಡೆಸ್ಡಿಮೋನಾಳನ್ನು – ಇಯಾಗೋವಿನ ಸಲಹೆಯ ಪ್ರಕಾರ – ಕಾಣುವ ತವಕ ಕ್ಯಾಷಿಯೋಗೆ. ಡೆಸ್ಡಿಮೋನಾಳ ಆಪ್ತ ಪರಿಜನರಲ್ಲೊಬ್ಬಳಾದ ಎಮಿಲಿಯಾ ಮೂಲಕ ಅವಳ ಯಜಮಾನತಿಯನ್ನು ಕಾಣುವುದಕ್ಕೆ ಯತ್ನಿಸುತ್ತಿದ್ದಾನೆ. ಅಲ್ಲಿಗೆ ಬಂದ ಇಯಾಗೋ ತನ್ನ ಹೆಂಡತಿಯನ್ನು ತತ್‌ಕ್ಷಣ ಕ್ಯಾಷಿಯೋ ಬಳಿ ಕಳಿಸುವುದಷ್ಟೇ ಅಲ್ಲ ಡೆಸ್ಡಿಮೋನಾಳ ಜೊತೆ ಕ್ಯಾಷಿಯೋನ ಮಾತುಕತೆ ನಿರಾತಂಕವಾಗಿ ಸಾಗಲಿ ಎಂಬ ಕಾರಣಕ್ಕಾಗಿಯೇ ಮೂರನನ್ನು ಒಂದಷ್ಟು ಹೊತ್ತು ದೂರ ಕರೆದೊಯ್ಯುವುದಾಗಿ ಆಶ್ವಾಸನೆ ನೀಡುತ್ತಾನೆ. ಸರ್ವಜನಹಿತಚಿಂತಕ ಈ 'ಪ್ರಾಮಾಣಿಕ' ಇಯಾಗೋ. ಎಮಿಲಿಯಾ ಕ್ಯಾಷಿಯೋನ ಸಂಕಟವನ್ನು ಅರ್ಥಮಾಡಿಕೊಂಡಿದ್ದಾಳೆ. ಈ ಗಳಿಗೆಯಲ್ಲಿಯೇ ಡೆಸ್ಡಿಮೋನಾ ಅಥೆಲೋ ಬಳಿ ಕ್ಯಾಷಿಯೋನ ವಿಷಯ ಕುರಿತು ಮಾತನಾಡುತ್ತಿದ್ದಾಳೆ ಎಂದೂ ಹೇಳುತ್ತಾಳೆ. ಅಥೆಲೋವಿಗೆ ಕ್ಯಾಷಿಯೋನ ಬಗ್ಗೆ ವೈಯಕ್ತಿಕವಾಗಿ ಏನೂ ಇಲ್ಲ, ಆದರೆ ಸೈಪ್ರಸ್‌ನಲ್ಲಿ ಖ್ಯಾತನಾಮವಾದ ಮಾಂಟನೋವನ್ನು ಕ್ಯಾಷಿಯೋ ಘಾಸಿಗೊಳಿಸಿದ್ದಾನೆ. ಆದಕ್ಕಾಗಿ ಈ ಶಿಕ್ಷೆ. ಆದರೆ ನಿಜ ಹೇಳಬೇಕೆಂದರೆ ಅಥೆಲೋವಿಗೆ ಕ್ಯಾಷಿಯೋನ ಬಗ್ಗೆ ಇರುವ ಪ್ರೀತಿ ವಿಶ್ವಾಸಗಳೇ ಅವನಿಗೆ

ಮತ್ತೆ ಸ್ಥಾನಮಾನಗಳನ್ನು ಹಿಂತಿರುಗಿಸಿಕೊಡಲು ಸಾಕು, ಯಾರ ವಶೀಲಿಯೂ ಬೇಕಾಗಿಲ್ಲ, 'ಆದಷ್ಟು ಬೇಗ ಅವನನ್ನು ಹಿಂದೆ ತೆಗೆದುಕೊಳ್ಳುತ್ತೇನೆ ಎಂದು ಅಥೆಲೋ ಡೆಸ್ಡಿಮೋನಾಳಿಗೆ ಮಾತು ಕೊಡುತ್ತಿದ್ದಾನೆ. ಈ ಭಾಗವನ್ನು ಕೊಂಚ ವಿವರವಾಗಿ ನಿರೂಪಿಸಿದ್ದಕ್ಕೆ ಕಾರಣವಿದೆ. ಡೆಸ್ಡಿಮೋನಾ ಕ್ಯಾಷಿಯೋನ ಕುರಿತಾಗಿ ಮಾತನಾಡುತ್ತಿರುವುದು ಅಥೋಲೋವಿಗೆ ಕೊಂಚವೂ ತಪ್ಪೆನಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಕ್ಯಾಷಿಯೋನ ಕುರಿತಾಗಿ ಬದಲಿಸಲಿಕ್ಕಾಗದಂಥ ವಿರೋಧವೇನೂ ಅವನಲ್ಲಿ ಬೆಳೆದಿಲ್ಲ ಎಂಬುದು ಇನ್ನೊಂದು. ಈ ಎರಡೂ ವಿಷಯಗಳು ನಮಗೆ ತಿಳಿಯುತ್ತದೆ. ಎಮಿಲಿಯಾ ಕ್ಯಾಷಿಯೋ ಎದುರು ಅವನ ಮನಸ್ಸಮಾಧಾನಕ್ಕೆ ಹೀಗೆ ಮಾತನಾಡುತ್ತಿದ್ದಾಳೆ ಎಂದು ಹೇಳಲಾಗದು. ಅಥೆಲೋ-ಡೆಸ್ಡಿಮೋನಾಳ ನಡುವೆ ನಡೆದ ಮಾತುಕತೆಯ ಪ್ರತಿ ವಿವರವನ್ನು ಅವಳು ನೀಡಿರುವುದೇ ಇದಕ್ಕೆ ಸಾಕ್ಷಿ. ಕ್ಯಾಷಿಯೋ ತನ್ನ ವಿನಂತಿಯನ್ನು ಸ್ವತಃ ಡೆಸ್ಡಿಮೋನಾಳ ಎದುರು ನಿವೇದಿಸಿಕೊಳ್ಳುವುದಕ್ಕೆ ತಾನು ಅವಕಾಶ ಮಾಡಿಕೊಡುವುದಾಗಿ ಮಾತುಕೊಡುತ್ತಾಳೆ. ಅಥೆಲೋ ಕಾರ್ಯನಿಮಿತ್ತ ಹೊರಗೆ ಹೋಗಿದ್ದಾನೆ. ಇಯಾಗೋ ಅವನನ್ನು ಸೇರಿಕೊಳ್ಳುತ್ತಾಳೆ.

ಕ್ಯಾಷಿಯೋ ಡೆಸ್ಡಿಮೋನಾಳನ್ನು ಭೆಟ್ಟಿಯಾಗಿದ್ದಾನೆ. ಹತಾಶನಾಗಿದ್ದಾನೆ. ಅವಳಲ್ಲಿ ದಯಾಭಿಕ್ಷೆ ಬೇಡುತ್ತಾ ಅಥೆಲೋ ತನ್ನನ್ನು ಮತ್ತೆ ಆದರಿಸುವಂತೆ ಮಾಡಬೇಕೆಂದು ಬಿನ್ನವಿಸುತ್ತಾನೆ. ಡೆಸ್ಡಿಮೋನಾ ತನ್ನ ಕೈಯಲ್ಲಿ ಸಾಧ್ಯವಾದದ್ದೆಲ್ಲ ಮಾಡುವುದಾಗಿ ಮಾತುಕೊಡುತ್ತಾಳೆ. ಇಯಾಗೋವಿಗೂ ಈ ಬಗ್ಗೆ ತುಂಬ ಚಿಂತೆಯಾಗಿದೆ ಎಂದ ಎಮಿಲಿಯಾಗೆ, 'ಓ, ಅವನೊಬ್ಬ ಪ್ರಾಮಾಣಿಕ ಮನುಷ್ಯ....' ಎಂದು ಆ ವಿಷಯದಲ್ಲಿ ಚರ್ಚೆಯೇ ಅನವಶ್ಯಕ ಎಂಬಂತೆ ಹೇಳುತ್ತಾಳೆ, ಇಯಾಗೋ ಒಬ್ಬ 'ಪ್ರಾಮಾಣಿಕ'ನೆಂಬುದು ಜಗತ್ತಿಗೇ ಗೊತ್ತಿರುವ ನಿರ್ವಿವಾದದ ವಿಷಯ ಎಂಬಂತೆ. ಡೆಸ್ಡಿಮೋನಾ ಕ್ಯಾಷಿಯೋವಿಗೆ ತನ್ನ ಸಂಪೂರ್ಣ ಬೆಂಬಲ ನೀಡುವುದಾಗಿ ಹೇಳುತ್ತ "ಅಥೆಲೋ ಬಗ್ಗೆ ನಿನಗೆ ಗೌರವವಿದೆ, ಬಹಳ ಕಾಲದಿಂದ ಅವನನ್ನು ನೀನು ಬಲ್ಲೆ; ಎಷ್ಟು ಬೇಕೋ ಅದಕ್ಕಿಂತ ಹೆಚ್ಚಿಗೆ ಅಥೆಲೋ ನಿನ್ನಿಂದ ದೂರವಾಗದಂತೆ ನಾನು ನೋಡಿಕೊಳ್ಳುತ್ತೇನೆ. ಹೆಚ್ಚು ಸಮಯವೂ ಇದಕ್ಕಾಗಿ ವ್ಯರ್ಥವಾಗದು. ಈ ಎಮಿಲಿಯಾಳ ಎದುರು ನಿನಗೆ ಮಾತುಕೊಡುತ್ತೇನೆ. ನಾನು ಸ್ನೇಹದ ಪ್ರಮಾಣ ಮಾಡಿದರೆ ಕೊನೆಯ ತನಕ ಕಾರ್ಯಗತಗೊಳಿಸಿಯೇ ಮುಗಿಸುತ್ತೇನೆ. My lord shall never rest, / I'll watch him tame, and talk him out of patience ; / His bed shall seem a school, his board a shrift, / I'll intermingle everything he does / with Cassio's suit ; ಸಮಾಧಾನದಿಂದಿರು. ಈ ವಿಷಯದಲ್ಲಿ ನಿನ್ನ ವಕೀಲಳು ಸಾಯುವುದಕ್ಕೂ ಹೇಸಳು, ಆದರೆ ನಿನ್ನ ಕೈ ಮಾತ್ರ ಬಿಡುವುದಿಲ್ಲ" ಎಂದು ಬಹು ದೃಢವಾಗಿ

ವಚನನೀಡುತ್ತಾಳೆ. ಅಥಲೋ ಬಗ್ಗೆ ತನಗೆ ಇರುವ ಪ್ರೀತಿ, ವಿಶ್ವಾಸ, ಅಥೆಲೋ ತನ್ನ ಮಾತುಗಳನ್ನು ಮೀರುವುದಿಲ್ಲ ಎಂಬ ನಂಬಿಕೆ, ಕ್ಯಾಷಿಯೋನಂಥ ನಂಬಿಕೆಯ ಮನುಷ್ಯನ ಸ್ನೇಹ ಹಾಗೂ ಸೇವೆಗಳಿಂದ ಅಥೆಲೋ ವಂಚಿತನಾಗಬಾರದು ಎಂಬ ಆಸೆ ಎಲ್ಲವೂ ಕೂಡಿ ಡೆಸ್ಡಿಮೋನಾಳಿಂದ ಈ ಮಾತುಗಳು ಆಡಿಸುತ್ತಿವೆ. ಆವಳಿಗೆ ಇದೊಂದು ಸರಳ ವಿಷಯ. ಈ ದೃಶ್ಯ ಒಂದಷ್ಟು ಹೀಗೇ ಮುಂದುವರೆದಿದ್ದರೆ ಈಗ ನಮಗೆ ಗೊತ್ತಿರುವ ಅಥೆಲೋ ನಾಟಕವೇ ಇರುತ್ತಿರಲಿಲ್ಲ. ಅಂದರೆ ಆ ಕ್ಷಣದಲ್ಲಿ, ಅಥೆಲೋ ಪ್ರವೇಶವಾದ ಮೇಲೆ ಕೂಡ, ಡೆಸ್ಡಿಮೋನಾಳ ಮಾತಿನ ಪ್ರಕಾರ ಕ್ಯಾಷಿಯೋ ಅಲ್ಲಿಯೇ ಇದ್ದು ಅಥೆಲೋನನ್ನು ನೇರ ಮಾತನಾಡಿಸಿಬಿಡಲು ಒಪ್ಪಿಬಿಟ್ಟಿದ್ದರೆ ಇಯಾಗೋನ ಇಡೀ 'ನಾಟಕ ಸಂಯೋಜನಾ ಯತ್ನ'ವೆಲ್ಲ ವಿಫಲಗೊಂಡುಬಿಡುತ್ತಿತ್ತು. ಈ ಒಂದು ವಿವರದಲ್ಲಿ ಇಯಾಗೋ ಭಯಂಕರ ರಿಸ್ಕ್ ತೆಗೆದುಕೊಂಡಿದ್ದಾನೆ ಎಂದೇ ಹೇಳಬೇಕು. 'ಅಥೆಲೋನನ್ನು ನಾನು ಕರೆತಂದ ಕೂಡಲೇ ನೀನು ನಿರ್ಗಮಿಸಿಬಿಡು' ಎಂದು ಕ್ಯಾಷಿಯೋಗೆ ಹೇಳಿಕೊಟ್ಟಿಲ್ಲ. ಅದು ಹೇಳಿಕೊಡುವಂಥ ಸದುದ್ದೇಶದ ಉಪದೇಶವೂ ಆಗುವುದಿಲ್ಲ. ಅದು ತೀರ ಸಂಶಯಾಸ್ಪದ ಸಲಹೆಯಾಗಿ ಬಿಡುತ್ತಿತ್ತು. ಅಥೆಲೋ-ಕ್ಯಾಷಿಯೋರನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡುತ್ತಿದ್ದೇನೆ ಎಂದು ನಂಬಿಸುತ್ತಿರುವವನು ಖಂಡಿತ ಇಂಥ ಸಲಹೆ ನೀಡಲಾರ. ಎಂದೇ ಈ ಒಂದು ಕ್ಷಣದ ಬಗ್ಗೆ ಇಯಾಗೋ ಸಂಪೂರ್ಣ ತನ್ನ ಗ್ರಹಗತಿಗಳನ್ನು ಮಾತ್ರ ನಂಬಿ ಮುಂದುವರೆದಿರಬೇಕು. ಡೆಸ್ಡಿಮೋನಾ ಮಾತಾಡಿ ಮುಗಿಸುವಷ್ಟರಲ್ಲಿ ನೇಪಥ್ಯದಲ್ಲಿ ಅಥೆಲೋ, ಇಯಾಗೋ ಅವರುಗಳು ಬರುತ್ತಿರುವುದು ಕಾಣುತ್ತದೆ. ಎಮಿಲಿಯಾ ಅವರು ಆಗಮಿಸುತ್ತಿರುವ ಸುದ್ದಿ ತಿಳಿಸಿದ ಕೂಡಲೇ ಕ್ಯಾಷಿಯೋ 'ನಾನಿನ್ನು ಹೊರಡುತ್ತೇನೆ' ಎಂದು ಮಂಡಿಯೂರಿ ಕೂತವನು ಎದ್ದು ನಿಲ್ಲುತ್ತಾನೆ. ಡೆಸ್ಡಿಮೋನಾಳಿಗೆ ಅವನು ಈ ಕ್ಷಣದ ಸಂಪೂರ್ಣ ಪ್ರಯೋಜನ ಪಡೆಯಲಿ ಎಂಬ ಆಸೆ.... 'ಯಾಕೆ, ಇದ್ದು ನಾನು ನಿನ್ನ ಪರ ಮಾತನಾಡುವುದನ್ನು ಕೇಳಿ ಹೋಗು' ಎಂದರೂ ಒಪ್ಪದೆ ಕ್ಯಾಷಿಯೋ ಹೊರಡುವ ತರಾತುರಿ ತೋರುತ್ತಾನೆ. 'ನನ್ನ ಉದ್ದೇಶಗಳಿಗೇ ನಾನು ಈಗ ಅನುಚಿತ ಸ್ಥಿತಿಯಲ್ಲಿದ್ದೇನೆ' ಎಂದು ಹೇಳಿ ಹೊರಟುಬಿಡುತ್ತಾನೆ. ಅವನ ಮನಃಸ್ಥಿತಿಯು ಅರ್ಥವಾಗುವಂಥದೇ. ತಪ್ಪು ಮಾಡಿದ್ದೇನೆ ಎಂದು ತನಗೇ ಸ್ಥಿರಪಟ್ಟಿದೆ. ಅಥೆಲೋನಂಥ ಶಿಸ್ತಿನ ಅಧಿಕಾರಿಗೆ ಮುಖ ತೋರಿಸುವ ಆತ್ಮವಿಶ್ವಾಸ ಸಂಪೂರ್ಣ ನಶಿಸಿಬಿಟ್ಟಿದೆ. ನಾಚಿಕೆ, ಸಂಕೋಚಗಳಲ್ಲಿ ಮುದುರುಹೋಗಿದ್ದಾನೆ. ಅಥೆಲೋ ತನ್ನ ಬಗ್ಗೆ ಯಾವ ರೀತಿ ಪ್ರತಿಕ್ರಿಯಿಸಬಹುದೆಂಬ, ಒಂದಿಷ್ಟೂ ಊಹಿಸಲಾಗದ ತನ್ನ ಸ್ಥಿತಿಯಲ್ಲಿ ಸದ್ಯಕ್ಕೆ ಅಲ್ಲಿಂದ ಕದಲಿಹೋಗಿಬಿಡುವುದೇ ಕ್ಷೇಮವೆಂದು ಹೊರಟುಬಿಡುತ್ತಾನೆ. 'ಹೊರಟು ಬಿಡುತ್ತಾನೆ' ಎನ್ನುವುದಕ್ಕಿಂತ ಎಲ್ಲಿ ತಾನು ಅಥೆಲೋ ಕಣ್ಣಿಗೆ ಬಿದ್ದುಬಿಡುವೆನೋ ಎಂಬ ಗಾಬರಿಯಲ್ಲಿ ಎತ್ತರದ ಆಕಾರವನ್ನು ಕುಬ್ಜಗೊಳಿಸಿಕೊಂಡು ಕಳ್ಳ ತಪ್ಪಿಸಿಕೊಂಡು ನುಸುಳಿ ಹೋಗುವವನಂತೆ ನಿಷ್ಕ್ರಮಿಸಿಬಿಡುತ್ತಾನೆ ಎನ್ನುವುದು ಹೆಚ್ಚು ಸರಿಯೆನಿಸಬಹುದು. ಬಹುಶಃ

ಕನಸು ಮನಸ್ಸಿನಲ್ಲಿಯೂ ಎಣಿಸದಿದ್ದ ಈ ಹಠಾತ್ ಸುಯೋಗ ಇಯಾಗೋ ಕಟ್ಟಿರುವ ಇಡೀ ನಾಟಕಕ್ಕೆ ಹಸಿರು ನಿಶಾನೆಯಷ್ಟೇ ಅಲ್ಲ, ನಿರ್ವಿಘ್ನವಾಗಿ ಸಾಗುವುದಕ್ಕೆ ಚಾಲನೆಯನ್ನು ನೀಡಿಬಿಡುತ್ತದೆ. 'ಸರಿ, ನಿನ್ನಿಷ್ಟದಂತೆ ಮಾಡು' ಎಂದು ಕ್ಯಾಷಿಯೋಗೆ ಹೇಳಿ ಇತ್ತ ತಿರುಗುವಷ್ಟರಲ್ಲಿ ಅಥೆಲೋ, ಇಯಾಗೋ ನೇಪಥ್ಯದ ಅಂಚಿಗೆ ಪ್ರವೇಶ ಮಾಡಿ ಆಗಿದೆ. ಡೆಸ್ಡಿಮೋನಾ ಇತ್ತ ತಿರುಗುವಷ್ಟರಲ್ಲಿ ಇಯಾಗೋ ತನ್ನ ಕೈಗಳನ್ನು ಡೆಸ್ಡಿಮೋನಾ-ಕ್ಯಾಷಿಯೋ ದೃಶ್ಯದತ್ತ ಬಹು ಅರ್ಥಪೂರ್ಣವಾಗಿ ಚಾಚಿ, ಧ್ವನಿಯನ್ನು ಆದಷ್ಟು ತಗ್ಗಿಸಿ 'Ha, I like not that' ಎಂದು ಉಸರುತ್ತಾನೆ. ಈ ಆಂಗಿಕ ಅಭಿನಯವನ್ನೂ, ಅವನು ಬಳಸಿದ ಧ್ವನಿಯ ಮಟ್ಟವನ್ನು ನಾನು ಸೂಚಿಸುತ್ತಿದ್ದೇನೆ, ನಿಜ. ಆದರೆ ಆ ಸಂದರ್ಭದಲ್ಲಿ ಅತ್ಯಂತ ಪರಿಣಾಮಕಾರಿಯಾಗುವುದಕ್ಕೆ ಹೀಗೆಯೇ ಅವನು ವರ್ತಿಸಿರಬೇಕು ಎಂದು ಊಹಿಸುವುದು ಕಷ್ಟವಲ್ಲ. 'Ha, I like not that' ಎಂಬ ಒಂದು ಪುಟ್ಟ ವಾಕ್ಯ, ಅಥೆಲೋನನ್ನು ಬಾಣದ ಹಾಗೆ ನಾಟುವುದಿಲ್ಲ – ಬದಲಿಗೆ ಹರಿವ ಹಿಮಝರಿಯೊಂದು ಸುಯ್ಯನೆ ಕಣ್ಣುಮಿಟುಕಿಸುವುದ ರೊಳಗೆ ಅವನ ಪ್ರಜ್ಞೆಯೊಳಕ್ಕೆ ಹೊಕ್ಕಿಬಿಟ್ಟಂತೆ ಅನುಭವವಾಗುತ್ತದೆ. ಆ ಕ್ಷಣವೇ ಒಂದಷ್ಟಾದರೂ ಭಾಗವನ್ನು ತನ್ನ ಕೊರೆಯುವ ನಾಲಗೆಯಿಂದ ನುಂಗಿಬಿಟ್ಟಿದ್ದರೂ ಅಚ್ಚರಿಯಿಲ್ಲ. ನಿರೀಕ್ಷಿಸದಿದ್ದ ಈ ತಣು ಅನುಭವದಿಂದ ಎಚ್ಚರಗೊಂಡಂತೆ 'What dost thou say ?' ಎಂದು ಕೇಳುತ್ತಾನೆ ಅಥೆಲೋ. ಇಯಾಗೋ ತಾನೂ ಎಚ್ಚರಗೊಂಡವನಂತೆ, ಏನೂ ಆಗದವನಂತೆ, ತಾನು ಏನೂ ಹೇಳಿಯೇ ಇಲ್ಲದವನಂತೆ 'nothing, my lord, or if - I know not what.' ಎಂದು ಒಗಟಾಗಿ ಉತ್ತರಿಸುತ್ತಾನೆ. ಸೈನಿಕನಾಗಿ ತರಬೇತಿ ಪಡೆದ, ಇಡೀ ಬದುಕು ಸೈನಿಕನಾಗಿ ಬದುಕಿದ ಅಥೆಲೋವಿಗೆ ಈ ಮಾರ್ಮಿಕಗಳಲ್ಲಿ ನಂಬಿಕೆಯೂ ಇಲ್ಲ, ಅರ್ಥವೂ ಆಗುವುದಿಲ್ಲ. ಆದರೆ ವಿಚಿತ್ರವಾಗಿ ಎಲ್ಲಿಯೋ ತಾಗಿ ಒಂದಷ್ಟು ದಾಂಧಲೆ ಉಂಟುಮಾಡಿದೆ ಎಂಬುದಂತೂ ನಿಜ. ಎಂದೇ ಇದನ್ನು ನೇರ ಎದುರಿಸಬೇಕು. 'was not that Cassio parted from my wife ?' ಎಂದು ಕೇಳುತ್ತಾನೆ. ಇದಕ್ಕೆ ಇಯಾಗೋವಿನ ಉತ್ತರ ಅವನ ಉದ್ದೇಶವನ್ನು, ಅವನ ಗುರಿಯನ್ನು ನಿಸ್ಸಂದೇಹವಾಗಿ ಸ್ಪಷ್ಟಪಡಿಸುತ್ತದೆ – ಅಥೆಲೋಗೆ ತತ್‌ಕ್ಷಣದಲ್ಲಿ ಅಲ್ಲದಿದ್ದರೂ ಓದುಗರಿಗೆ ಖಂಡಿತವಾಗಿ: "Cassio, my lord ? ....no sure, I cannot think it, / That he would sneak away so guilty - like / seeing you coming." ಕ್ಯಾಷಿಯೋನೇ, ಅವನು, ಇವನು ಎಂಬ ಯಾರೋ ಒಬ್ಬ ಅಪರಿಚಿತನಲ್ಲ, ನಿನ ಆಪ್ತ ಕ್ಯಾಷಿಯೋನೇ.... ಆ ಚುಕ್ಕೆಗಳು ಸೂಚಿಸುವ ಕ್ಷಣಗಳೆರಡರ ನೀರವತೆ ಇಡೀ ಅವನ ಮಾತಿಗೆ ಹರಿತವಾದ ಚೂಪು ನೀಡಿಬಿಡುತ್ತದೆ. ಮತ್ತವನು ಬಳಸುವ ಶಬ್ದಗಳು – 'no sure....' 'ಸಾಧ್ಯವೇ ಇಲ್ಲ, ಕ್ಯಾಷಿಯೋನಂತವನು ಹಾಗೆ 'seeing you coming'.... that he would sneak away' ... ಮತ್ತು ಕೊನೆಯ ಉಳಿಯ ಪೆಟ್ಟು 'guilty-like' ...'Ha, I like not that' ನಿಂದ ಈ ಸಂಭಾಷಣೆಯ ಕೊನೆಯವರೆವಿಗೆ

ಅವನು ಆಡುವ ಪ್ರತಿ ಶಬ್ದವು ಪೂರ್ವನಿಶ್ಚಿತವಾದವು, ಪರಿಣಾಮದ ಪರಿ ಎಂಥದ್ದಿರಬೇಕೆಂದು ಕಲ್ಪಿಸಿಕೊಂಡೇ ಆಡಿದಂಥವು. 'I do believe it was he' ಎಂದಷ್ಟೇ ಹೇಳಿ ಅಥೆಲೋ ಮುಗಿಸುವಷ್ಟರಲ್ಲಿ ಅವನ ಬಳಿ ಡೆಸ್ಡಿಮೋನಾ ಬಂದಿದ್ದಾಳೆ. ನೇರ ನಡೆದು ಬಂದು ಅಥೆಲೋವಿಗೆ ತಾನೊಬ್ಬ ಮನವಿಗಾರನೊಡನೆ ಮಾತನಾಡುತ್ತಿದ್ದುದಾಗಿಯೂ ಅವನು ತನ್ನ ಯಜಮಾನನು ತನ್ನ ಬಗ್ಗೆ ಅಸಂತೋಷ ಗೊಂಡಿರುವುದರ ವಿಷಯದಲ್ಲಿ ತುಂಬ ಕುಗ್ಗಿಹೋಗಿದ್ದಾನೆಂದೂ ಹೇಳುತ್ತಾಳೆ. 'ಯಾರ ಬಗ್ಗೆ ಹೇಳುತ್ತಿದ್ದಿ ನೀನು' ಎಂದು ಅಥೆಲೋ ಕೇಳುವುದರಲ್ಲೇ, ತಾನು ಕಂಡದ್ದು ಕ್ಯಾಷಿಯೋನೇ ಅಲ್ಲವೆ ಎಂದು ದೃಢಪಡಿಸಿಕೊಳ್ಳುವ ಆತುರವೂ ಕಾಣುತ್ತದೆ. "ಯಾಕೆ ಗೊತ್ತಿಲ್ಲವೇನು... ನಿನ್ನ ಲೆಫ್ಟಿನೆಂಟ್ ಕ್ಯಾಷಿಯೋ. ನಿನ್ನ ಮೇಲೆ ನನ್ನ ಪ್ರಭಾವವೇನಾದರೂ ಕೆಲಸ ಮಾಡುವುದು ಸಾಧ್ಯವಿದ್ದರೆ ಅವನ ಪ್ರಾರ್ಥನೆಯನ್ನು ಮನ್ನಿಸು. ದುಡುಕಿ ನಡೆದುಕೊಂಡಿದ್ದಾನೆ ಅವನು, ಆದರೆ ಉದ್ದೇಶಪೂರ್ವಕವಾಗಿಯಲ್ಲ, ನಿನ್ನ ಬಗ್ಗೆ ಅವನಿಗೆ ಅಪಾರ ಗೌರವ ಪ್ರೀತಿಗಳಿವೆ ; ಅವನ ಪ್ರಾಮಾಣಿಕ ಮುಖದಲ್ಲಿ ಇದನ್ನು ನಾನು ಕಂಡೆ. ಇದು ತಪ್ಪು ತೀರ್ಮಾನವೆನಿಸಿದರೆ ನನಗೆ ವಿವೇಚನಾಶಕ್ತಿಯೂ ಇಲ್ಲ ಎಂದರ್ಥವಷ್ಟೆ' ಮಾತುಗಳು ಎಷ್ಟು ಸಹಜವಾಗಿ, ನೇರವಾಗಿ, ಸ್ಪಷ್ಟವಾಗಿ ಬರುತ್ತಿವೆ. ತಗ್ಗಿದ ಧ್ವನಿಯಲ್ಲ, ಕಿವಿಯಲ್ಲಿ ಉಸುರಿದ ಗುಟ್ಟಲ್ಲ. (ಆದರೂ 'Ha I like not that' ಕಿತ್ತು ಒಗೆಯುವುದಕ್ಕಾಗುತ್ತಿಲ್ಲ-) 'ಅವನೆಯೇ ಈಗ ಇಲ್ಲಿಂದ ಹೋದದ್ದು ?' ('Sneak away', 'guilty like' 'seeing you coming.) "ಹೌದು, ತುಂಬ ನಾಚಿಕೊಂಡು ಹೊರಟುಹೋದ. ತನ್ನ ದುಃಖವನ್ನೆಲ್ಲ ನನ್ನ ಮಡಿಲಲ್ಲಿ ಹಾಕಿ ಹೋದ ; ನಾನು ಅವನಿಗಾಗಿ ಸಂಕಟಪಡುತ್ತಿದ್ದೇನೆ ('Ha, I like not that') ; ಅವನನ್ನು ಹಿಂತಿರುಗಿ ಬರುವಂತೆ ಹೇಳು" 'ಈಗ ಬೇಡ ಪ್ರಿಯೆ.... ಮತ್ಯಾವಾಗಲಾದರೂ....' ಇಲ್ಲಿಂದ ಮುಂದೆ ಡೆಸ್ಡಿಮೋನಾ ಅಥೆಲೋನನ್ನು ಅವಸರಿಸುವುದರಲ್ಲಿ, ಹಾಗೆ ಬಲವಂತಪಡಿಸುವಾಗ ಅವಳು ಬಳಸುವ ಶೈಲಿಯಲ್ಲಿ ಒಂದು ಬಗೆಯ ಹಠಮಾರಿತನವೇ ಕಾಣುತ್ತದೆ. ಈ ಹಠದ ಹಿಂದೆ ಅಥೆಲೋ ಮತ್ತು ತನ್ನ ಮಧ್ಯದ ಇಡೀ ಪ್ರೇಮಪ್ರಕರಣವನ್ನೇ ಪಣವಾಗಿಟ್ಟು ಮಾತನಾಡುತ್ತಿರುವಂತೆ ಕಾಣುತ್ತದೆ. ಅಥೆಲೋ ತನ್ನ ಇಷ್ಟು ಸಣ್ಣ ಬೇಡಿಕೆಗೆ ಇಷ್ಟೊಂದು ಮೀನಮೇಷವೆಣಿಸಬೇಕೆ ಎಂಬ ಅಚ್ಚರಿಯ ಜೊತೆಗೆ ತನಗೆ ಅವನು ತೋರುತ್ತಿರುವ ಉದಾಸೀನದ ಬಗ್ಗೆ ಮನಸ್ಸು ಎಳ್ಳಷ್ಟು ಸ್ತಿಮಿತವನ್ನು ಕಳೆದುಕೊಂಡಂತೆಯೂ ಕಾಣುತ್ತದೆ. "ಸರಿ, ಹಾಗಾದರೆ, ನಾಳೆ ರಾತ್ರಿ, ಮಂಗಳವಾರ ಬೆಳಗ್ಗೆ ಮಧ್ಯಾಹ್ನ ರಾತ್ರಿ, ಬುಧವಾಗ ಬೆಳಗ್ಗೆ... ಯಾವತ್ತೆಂದು ಹೇಳು. ಮೂರು ದಿವಸಕ್ಕೆ ಮೀರಬಾರದು ಅಷ್ಟೆ... ಪಾಪ ಅವನು ತುಂಬ ಪಶ್ಚಾತ್ತಾಪಪಡುತ್ತಿದ್ದಾನೆ. ಯಾವಾಗ ಬರಬೇಕು ಹೇಳು." ಮಾತಿನಿಂದ ಮಾತಿಗೆ ಒತ್ತಾಯ ಹೆಚ್ಚುತ್ತ ಹೋಗುತ್ತದೆ. ತನ್ನ ಕೋರಿಕೆ ತೀರಿಸಿಕೊಳ್ಳಲೇಬೇಕೆಂದು ಪಟ್ಟು ಹಿಡಿದಿದ್ದಾಳೆ ಡೆಸ್ಡಿಮೋನಾ. ಕ್ಯಾಷಿಯೋಗೆ ಮಾತುಕೊಟ್ಟಾಗ 'For thy solcitor shall rather die / Than give the cause away' ಎಂದು

ಹೇಳಿದ್ದಾಳಲ್ಲ. ಹಠ ಹೌದು. ಆದರೆ ಪ್ರೀತಿಯ ತನ್ನ ಗಂಡನ ಮನಸ್ಸನ್ನು ತಾನು ಸಂಪೂರ್ಣ ಬಲ್ಲೆನೆಂಬ ವಿಶ್ವಾಸ ಹಾಗೂ ತಾನು ವಾದಿಸುತ್ತಿರುವುದು ನ್ಯಾಯಕ್ಕಾಗಿ ಎಂಬ ನಂಬಿಕೆ. ಅಥೆಲೋ ತನ್ನನ್ನು ಏನೇ ಕೇಳಿದ್ದರೂ ತಾನು ಹೀಗೆ ಅನುಮಾನಪಡುತ್ತ ನಿಂತಿರುತ್ತಿದ್ದೆನೆ ? ಇಷ್ಟು ಬೇಗ ಅಥೆಲೋ ಮರೆತನೆ.... 'Michael Cassio / That came a -wooing with you, and so many a time / When I have spoke of you dispraisingly / Hath taken your part.....' ಅಥೆಲೋವಿನ ಆತ್ಮಸಾಕ್ಷಿಯನ್ನೇ ಪ್ರಶ್ನಿಸುವಂಥ ಮಾತು ಇದು. ತಮ್ಮಿಬ್ಬರ ಪ್ರೀತಿ ಬೆಳುಯುತ್ತಿದ್ದಾಗ ಅನೇಕ ಸಲ ಅಥೆಲೋ ಜೊತೆಗೆ ಬರುತ್ತಿದ್ದವನು. ಕೆಲವು ವೇಳೆ ಡೆಸ್ಡಿಮೋನಾ ಅಸಮಾಧಾನದಲ್ಲಿ ಅಥೆಲೋವಿನ ಬಗ್ಗೆ ಮಾತನಾಡಿದಾಗ ಅವನ ಪರ ವಹಿಸಿ ಅಥೆಲೋವಿಗೆ ನೆನಪುಮಾಡಿ ಕೊಡುವಂತೆಯೇ ಇಯಾಗೋವಿಗೆ ಗೊತ್ತಿರದಿದ್ದ ಹೊಸ ವಿಷಯ ತಿಳಿಸಿದಂತೆಯೂ ಆಗುತ್ತದೆ. ಆ ಕ್ಷಣದಲ್ಲಿ ಇಯಾಗೋವಿಗೆ ಮೊದಲನೆ ಅಂಕದಲ್ಲಿ ಕ್ಯಾಷಿಯೋ, ಅಥೆಲೋ-ಡೆಸ್ಡಿಮೋನಾಳ ವಿವಾಹದ ವಿಷಯ ತಿಳಿಯದವನ ಹಾಗೆ ನಟಿಸಿದ್ದು ಕೂಡ ನೆನಪಾಗಿರಬೇಕು. ಹೊಟ್ಟೆಯಲ್ಲಿ ಕತ್ತರಿಯಾಡಿಸಿದ ಅನುಭವವಾಗಿರಬೇಕು ಅವನಿಗೆ. ಇದರ ಪರಿಣಾಮ ಎಂಥದೆಂದು ತಿಳಿಯಲು ನಾವೇನು ಬಹಳ ಹೊತ್ತು ಕಾಯಲೂ ಬೇಕಾಗಿಲ್ಲ. ಡೆಸ್ಡಿಮೋನಾಳನ್ನು ತೃಪ್ತಿಗೊಳಿಸುವಂತೆ ಅಥೆಲೋ 'ಆಯಿತು... ಅವನಿಗೆ ಬೇಕಾದಾಗ ಬರಲಿ, ನಿನಗೆ ನಾನು 'ಇಲ್ಲ' ಎಂದು ಹೇಳುವುದಿಲ್ಲ' ಎಂದು ಪ್ರಕರಣವನ್ನು ಮುಗಿಸಲು ಯತ್ನಿಸುತ್ತಾನೆ. ಡೆಸ್ಡಿಮೋನಾಳಿಗೆ ಮತ್ತಷ್ಟು ಬೇಸರವಾಗುತ್ತದೆ.... ''ಇದೇನು ನನಗೆ ವರ ನೀಡುತ್ತಿದ್ದಿ ಎಂದು ಭಾವಿಸಿದ್ದೀಯೇನು ? ನಿನ್ನ ಒಳ್ಳೆಯದಕ್ಕೆ ಹೇಳುತ್ತಿದ್ದೇನೆ ಅಷ್ಟೇ... ನನಗೆ ನಿಜವಾಗಲೂ ನಿನ್ನಲ್ಲಿ ಏನಾದರೂ ಉಪಕಾರ ಕೇಳಬೇಕೆನಿಸಿದರೆ ಅದು ಮಹತ್ವದ್ದೂ ಆಗಿರುತ್ತದೆ. ಮತ್ತು ನಿನಗೆ ನೀಡುವುದೂ ಖಂಡಿತ ಅಷ್ಟೇ ಸವಾಲಿನದಾಗಿರುತ್ತದೆ. ಆದರೆ ಈಗ ಕೇಳುತ್ತಿರುವುದು ಅಂಥದಲ್ಲ'' ಅಥೆಲೋವಿಗೆ ಇದನ್ನು ಇಲ್ಲಿಗೇ ಮುಕ್ತಾಯಗೊಳಿಸಬೇಕು ಅನ್ನಿಸಿ ಅವಳ ಯಾವ ಪ್ರಾರ್ಥನೆಯನ್ನೂ ತಾನು ನಿರಾಕರಿಸುವುದಿಲ್ಲ. 'ಸದ್ಯಕ್ಕೆ ನನ್ನಷ್ಟಕ್ಕೆ ಒಂದಷ್ಟು ಹೊತ್ತು ಬಿಟ್ಟು ಹೋಗು, ನಾನು ನಂತರ ನಿನ್ನ ಬಳಿಗೆ ಬರುತ್ತೇನೆ' ಎಂದು ಹೇಳಿ ಅವಳನ್ನು ಕಳಿಸುತ್ತಾನೆ. ತಾನು ಎಂದೂ ಅಥೆಲೋವಿಗೆ ವಿಧೇಯಳು ಎಂದು ಹೇಳುತ್ತ ಡೆಸ್ಡಿಮೋನಾ ನಿರ್ಗಮಿಸುತ್ತಾಳೆ. ಈ ಸಣ್ಣ ದೃಶ್ಯ ಅಥೆಲೋನನ್ನು ಅವನಿಗೆ ಅರ್ಥವಾಗದ ರೀತಿಯಲ್ಲಿ ಕದಡಿದೆ. ಹಿನ್ನೆಲೆಯಲ್ಲಿ ಇಯಾಗೋ ಆಡಿದ ಮಾತುಗಳು ಸಣ್ಣಗೆ ಕೊರೆಯುತ್ತಲೇ ಇದೆ. ಈ ಹಿನ್ನೆಲೆಯೂ, ಡೆಸ್ಡಿಮೋನಾಳ ಮಾತುಗಳು, ನಡತೆ, ತನ್ನೊಡನೆ ಅವಳು ತೋರಿದ ಸಹಜ ಸಲಿಗೆ, ಸ್ವಾತಂತ್ರ್ಯ ಇವುಗಳೂ ಎಷ್ಟು ವ್ಯತಿರಿಕ್ತವಾಗಿವೆ ? ಯಾವುದು ಸತ್ಯ ? ಡೆಸ್ಡಿಮೋನಾಳ ನಿಷ್ಕ್ರಮಣದ ತತ್‌ಕ್ಷಣದಲ್ಲಿ ಅವನ ಬಾಯಿಂದ ಹೊರಡುವ ಮಾತುಗಳು ಈ ವಿರುದ್ಧ ರೀತಿಗಳಲ್ಲಿ ತನ್ನನ್ನು ಸೆಳೆಯುತ್ತಿರುವ ಎರಡು ಶಕ್ತಿಗಳ ಕುರಿತಾಗಿ ಅತ್ಯಂತ ಪ್ರಭಾವಶಾಲಿ ನುಡಿಗಳಾಗುತ್ತವೆ.

Excellent wretch, perdition catch my soul,
But I do love thee, and when I love thee not,
Chaos is come again.

'Wretch' ಶಬ್ದದ ಬಳಕೆ ನೋಡೋಣ. ಚಾಲ್ತಿಯಲ್ಲಿರುವ ಅರ್ಥವೆಂದರೆ 'ಹತಭಾಗ್ಯ', 'ಪಾಪಿ', 'ದುರಾತ್ಮ', 'ದರಿದ್ರ', 'ತುಚ್ಛ', 'ನೀಚ', 'ಕೀಳ'.... ಎಲ್ಲವೂ ನಕಾರಾತ್ಮಕ ವಿಶೇಷಣಗಳು. ಹಾಗಾದರೆ ಇಲ್ಲಿ ಅಥೆಲೋ 'Wretch' ಎಂದು ಬಳಸಿದಾಗ ಅವನ ಮನಸ್ಸಿನಲ್ಲಿದ್ದುದೇನು ? ಈ ಶಬ್ದಕ್ಕೆ ಇಂಗ್ಲೆಂಡಿನ ಕೆಲವು ಭಾಗಗಳಲ್ಲಿ ಮೃದು ಹಾಗೂ ಪ್ರೀತಿಯ ವಸ್ತುವನ್ನು ಪ್ರೀತಿಯಿಂದ ಸಂಬೋಧಿಸುವುದಕ್ಕೂ ಬಳಸುತ್ತಾರೆ. ಕೋಲಿಯರ್ ಎಂಬುವನು ಹೇಳುವಂತೆ ಪ್ರೀತಿ, ಮೆಚ್ಚುಗೆ, ಸಂತೋಷಗಳನ್ನು ವ್ಯಕ್ತಪಡಿಸಲು ಶಬ್ದಗಳು ಸೂಕ್ತವಾಗಿ ಸಿಕ್ಕದೇ ಹೋದಾಗ ಈ ಬಗೆಯ ಶಬ್ದವನ್ನು ಆ ಭಾಗಗಳಲ್ಲಿ ಬಳಸುತ್ತಾರೆ. ಹಾಗೆಂದರೆ 'Excellent Wretch'ಗೆ 'ಅತ್ಯುತ್ಕೃಷ್ಟ ಪ್ರೀತಿಯೇ' ಎಂದಾಯಿತು. ಹಾಗೆ ನಾವು ತೀರ್ಮಾನ ಮಾಡುತ್ತಿದ್ದಂತೆಯೇ 'perdition catch my soul' ಎಂಬ ಮಾತು ಅನುಸರಿಸಿ ಬರುತ್ತದೆ. 'predition' ಅಂದರೆ ಆತ್ಮನಾಶ, ಸರ್ವನಾಶ, ನರಕ, ವಿನಾಶ ಎಂದು ಅರ್ಥ. 'ನನ್ನ ಒಟ್ಟು ಜೀವಾಳವೇ, ಚೈತನ್ಯವೇ ಸರ್ವನಾಶದ ಹಾದಿ ಹಿಡಿದಂತಾಗಿದೆ', 'ನನ್ನ ಅಂತಃಸತ್ವವೇ ನರಕಕ್ಕೆ ಬಿದ್ದಂತಾಗಿದೆ' ಅಥೆಲೋವಿನ ಸದ್ಯದ ಸ್ಥಿತಿಯ ಚಿತ್ರಣ ಮುಂದಿನ ಎರಡು ಸಾಲುಗಳಲ್ಲಿದೆ ....'ನಾನು ನಿನ್ನನ್ನು ಪ್ರೀತಿಸುತ್ತೇನೆ.... ನಿನ್ನ ಪ್ರೀತಿಸದ ಗಳಿಗೆಯಲ್ಲಿ ಮತ್ತೆ ಬ್ರಹ್ಮಾಂಡವೇ ಅಸ್ತವ್ಯಸ್ತ ಸ್ಥಿತಿಗೆ ಕುಸಿದಂತೆ ಅನ್ನಿಸುತ್ತದೆ'.... 'Excellent Wretch'ಗೆ ಹಾಗಾದರೆ ನಿರ್ವಿವಾದವಾಗಿ 'ಅತ್ಯುತ್ಕೃಷ್ಟ ಪ್ರೀತಿಯೇ' ಎಂದು ಅರ್ಥಮಾಡುವುದು ತಪ್ಪಾಗಬಹುದೋ ಏನೋ. ಅಥೆಲೋವಿನ ಸದ್ಯದ ಸ್ಥಿತಿಯಲ್ಲಿ 'ಅತ್ಯುತ್ಕೃಷ್ಟ ದರಿದ್ರವೇ' ಎಂದೂ ಆಗಬಹುದೆ ? ಎರಡನೇ ಅಂಕದಲ್ಲಿ ಸೈಪ್ರಸ್‌ಗೆ ಬಂದಕೂಡಲೆ ಡೆಸ್ಡಿಮೋನಾಳನ್ನು ಕಂಡ ಗಳಿಗೆಯಲ್ಲಿ ಅವನು ಆಡಿದ ಮಾತುಗಳ ವಿವರಣೆ ನೀಡುತ್ತಿದ್ದಾಗ ಅವನ ಪ್ರೀತಿ ಎಷ್ಟು ಗಾಢ, ನೈಜ ಹಾಗೂ ಉದಾತ್ತ ಎಂಬುದನ್ನು ಗಮನಿಸಿದ್ದೆವು. ಇಲ್ಲಿಯೂ ಅಷ್ಟೆ. ಈ ಮೂರು ಸಾಲುಗಳು ಅದೇ ರೀತಿಯ ಗಾಢ ಹಾಗೂ ಉದಾತ್ತಭಾವವನ್ನು ಅಭಿವ್ಯಕ್ತಿಸುತ್ತವೆ. ಆ ಸಾಲುಗಳ ತೀವ್ರತೆ ಇಲ್ಲಿಯೂ ಕೂಡ ಸ್ಪಷ್ಟವಾಗಿ ಕಾಣುತ್ತದೆ. ಆದರೆ ಒಂದು ವ್ಯತ್ಯಾಸವಿದೆ. ಮನಸ್ಸಿನ ಗೊಂದಲದ ಎಳೆ ಸ್ಪಷ್ಟವಾಗಿ ಕಾಣುತ್ತದೆ. ಈ ಗೊಂದಲದ ಎಳೆಗೆ ಇಯಾಗೋವಿನ 'Ha, I like not that....' ಇತ್ಯಾದಿ ಮಾತುಗಳು ಎಷ್ಟು ಹೊಣೆಯಾಗಿವೆ ಎಂಬುದನ್ನು ಮುಂದೆ ನಾವೇ ನೋಡುತ್ತೇವೆ. ಬಹುಶಃ ಈ ಮೂರು ಸಾಲುಗಳನ್ನು ಸಂಪೂರ್ಣ ಬೇರೆ ಕೋನದಿಂದಲೂ ನೋಡಬಹುದು. 'ಇಂಥ ಹುಡುಗಿಯ ಬಗ್ಗೆ ಎರಡನೇ ಮಾತು ಸಾಧ್ಯವೆ ?' ಎಂಬ ಭಾವನೆಯಲ್ಲಿ ತನ್ನ ಅದೃಷ್ಟದ ಬಗ್ಗೆ ಉದ್ಗರಿಸಿದ ಸಾಲುಗಳಷ್ಟೆಯೇ ? ''ಅತ್ಯುತ್ಕೃಷ್ಟ ಪ್ರೀತಿಯೇ, ನನ್ನ ಅಸ್ತಿತ್ವವೇ ನರಕಕ್ಕೆ ಬೀಳಲಿ.... ನಿನ್ನನ್ನು ಇಷ್ಟೊಂದು ಪ್ರೀತಿಸುತ್ತೇನೆ - ನಿನ್ನ

ಪ್ರೀತಿಸದ ಗಳಿಗೆಯೆಂದರೆ ಮತ್ತೆ ಸುತ್ತಲ ಜಗತ್ತೆಲ್ಲ ಅಸ್ತವ್ಯಸ್ತಗೊಂಡಂತೆ.'' ಆದರೂ ಈ ಮಾತುಗಳು ಇದ್ದಕ್ಕಿದ್ದಂತೆ ಆತ್ಮಮರುಕದ ಸ್ಫೋಟವಾಗಿ, ಕ್ಷೋಭೆಯ ಸಿಡಿತವಾಗಿ ಕಂಡುಬಿಡುವುದೂ ಸದ್ಯ. ಆದರೆ ಏಕೆ ಎಂಬುದು ಪ್ರಶ್ನೆ. ಏನೇ ಆದರೂ ಮುಂದಿನ ನೂರಾ ಎಪ್ಪತ್ತೊಂದು ಸಾಲುಗಳ ಅಥೆಲೋ-ಇಯಾಗೋ ಇವರ ದೃಶ್ಯಕ್ಕೆ - ಈ ಮೂರು ಸಾಲುಗಳ ಅಥೆಲೋವಿನ ಮಾತುಗಳು ನಾಂದೀಪದ್ಯದ ಹಾಗೆ ಎಂಬ ಒಂದು ಮಾತಂತೂ ಸತ್ಯ.

ಮೊದಲ ಇಪ್ಪತ್ತು ಸಾಲುಗಳಲ್ಲಿ ಇಯಾಗೋ ಹೆಚ್ಚಿನ ಮಟ್ಟಿಗೆ ತನ್ನ ಮಾತುಗಳನ್ನು ಪ್ರಶ್ನೆಗಳ ರೂಪದಲ್ಲಿ ಆಡುತ್ತಾನೆ. ಕ್ಯಾಷಿಯೋವಿಗೆ ಅಥೆಲೋವಿನ ಪ್ರೇಮದ ಹಾಗೂ ವಿವಾಹದ ಬಗ್ಗೆ ಗೊತ್ತಿತ್ತು ಎಂಬುದನ್ನು ಅವನಿಗೆ ಅರಗಿಸಿಕೊಳ್ಳಲು ಆಗಿಲ್ಲ. ಎಂದೇ ಅವನ ಮೊದಲ ಬಲಿಪಶು ಕ್ಯಾಷಿಯೋ ಆಗಬೇಕು. ಇಯಾಗೋ ನಿಧಾನವಾಗಿ, ಮೆಟ್ಟಿಲುಮೆಟ್ಟಿಲಾಗಿ, ಒಂದು ಸಲಕ್ಕೆ ಒಂದೇ ಹೆಜ್ಜೆ ಇಡುತ್ತಾ ಸಾಗುತ್ತಾನೆ. ಮುಗ್ಧ ರೀತಿಯ ಕುತೂಹಲಗಳಾಗಿ ಪ್ರಶ್ನೆಗಳನ್ನು ಕೇಳುತ್ತಾನೆ. ತನ್ನ ಕುತೂಹಲವನ್ನು ಮೀರಿ ಯಾವುದಕ್ಕೂ ಹೆಚ್ಚಿನ ಅರ್ಥವಿಲ್ಲ ಎಂದು ನಂಬಿಸಲು ಯತ್ನಿಸುತ್ತಾನೆ. ಆದರೆ ಪ್ರಶ್ನೆ ಕೇಳುವ ರೀತಿಯಲ್ಲಿ, ಉತ್ತರ ದೊರಕಿದ ಕ್ಷಣದಲ್ಲಿ ಅದಕ್ಕೆ ಪ್ರತಿಕ್ರಿಯಿಸುವ ರೀತಿಯಲ್ಲಿ ಅಥೆಲೋನನ್ನು ಕ್ರಮೇಣ ಕಟ್ಟಿಹಾಕುತ್ತ ಬರುತ್ತಾನೆ. 'ಮೈಕೆಲ್ ಕ್ಯಾಷಿಯೋಗೆ, ನಿನ್ನ ಪ್ರೀತಿಪ್ರಕರಣದ ವಿಷಯ ಗೊತ್ತಿತ್ತೆ?' ಎಂದು ಮೊದಲ ಪ್ರಶ್ನೆ ಕೇಳುತ್ತಾನೆ. 'ಹೌದು, ಮೊದಲಿಂದ ಕೊನೆಯವರೆವಿಗೆ....' ಒಂದು ಮೌನ. 'ಹೌದು, ಮೊದಲಿನಿಂದ ಕೊನೆಯವರೆವಿಗೆ....' ಒಂದು ಮೌನ. ಬಹುಶಃ ಇಯಾಗೋವಿನ ಮೌನ ಅಥೆಲೋವಿನ ಕುತೂಹಲ ಕೆರಳಿಸಿರಬೇಕು. ''ಯಾಕೆ ಕೇಳುತ್ತಿದ್ದಿ?'' ''ಏನೂ ಇಲ್ಲ ಇಷ್ಟೇ... ನನ್ನ ಸಮಾಧಾನಕ್ಕಷ್ಟೆ. ಮತ್ತೇನೂ ಇಲ್ಲ''. ಅಥೆಲೋವಿಗೆ ಈ ಉತ್ತರದ ಶೈಲಿ ಸರಿಕಾಣುತ್ತಿಲ್ಲ.... 'ಏನು... ಏನು ನಿನ್ನ ಯೋಚನೆ ?....' ಮತ್ತೊಂದು ಹೆಜ್ಜೆ ಮುಂದುವರೆದು ಇಯಾಗೋ ''ಕ್ಯಾಷಿಯೋಗೆ ನಿಮ್ಮಿಬ್ಬರ ಪ್ರೀತಿಯ ಬಗ್ಗೆ ಅರಿವಿತ್ತು ಎಂದು ನನಗೆ ಗೊತ್ತಿರಲಿಲ್ಲ...'' ''ಹೌದು ಹೌದು.... ನಮ್ಮಿಬ್ಬರ ಮಧ್ಯೆ ಓಡಿಯಾಡುತ್ತಲೂ ಇದ್ದ'' ಇದಕ್ಕೆ ಉತ್ತರವಾಗಿ ಇಯಾಗೋವಿನ 'Indeed ?' ಅಥೆಲೋವಿನ ಪ್ರಜ್ಞೆಯಲ್ಲಿ ಮುಳ್ಳು ಆಡಿಸಿದ ಅನುಭವವಾಗುತ್ತದೆ. 'Indeed ? Indeed : discernest thou aught in that ? Is he not honest ?'

ಇಲ್ಲಿಂದ ಆರಂಭವಾಗುತ್ತದೆ ಇಯಾಗೋವಿನ 'ಶಿಕ್ಷಣ ಶಾಲೆ'. ಅಥೆಲೋವಿಗೆ 'ಶಿಕ್ಷಣ' ಸಮರ್ಪಕವಾಗಿ ಆಗಿಲ್ಲ. ವಿದೇಶಿಯೆಂಬುದೊಂದು, ಬಿಳಿಯ ಜನಾಂಗಕ್ಕೆ ತದ್ವಿರುದ್ಧವಾದ ಕಪ್ಪು ಜನಾಂಗಕ್ಕೆ ಸೇರಿದವನು ಎಂಬುದು ಮತ್ತೊಂದು. ಅವನು ಕಲಿತಿರುವುದು, ಆಸ್ಥಾನ ಸಂಸ್ಕೃತಿ - ನಯನಾಜೂಕುಗಳ, ಆಡಂಬರದ, ಪ್ರದರ್ಶನಗಳ ಸಂಸ್ಕೃತಿ. ಒಳಗಿನ ಜಗತ್ತನ್ನೇ ಮುಚ್ಚಿಹಾಕಿಬಿಡುವ ಪೋಷಾಕು. ಮತ್ತೆ ಅದಕ್ಕೆ ತಕ್ಕಂತೆ ಆಡುವ ಭಾಷೆ. ಮೊದಲನೆಯ

ಅಂಕದಲ್ಲಿ ತನ್ನ - ಡೆಸ್ಡಿಮೋನಾಳ ಪ್ರೀತಿ ಅಂಕುರಿಸಿದ್ದು, ಬೆಳೆದದ್ದು ಇವುಗಳ ಬಗ್ಗೆ ಮಾತನಾಡಿದ ಶೈಲಿಯಲ್ಲಿ ಅಥೆಲೋ ವೆನಿಸಿನ ಈ ತೋರಿಕೆಯ ಜಗತ್ತಿನ ಮುಖ್ಯವಾಹಿನಿಯಲ್ಲಿ ಹೇಗೆ ಸಂಪೂರ್ಣ ಕರಗಿಹೋಗಿದ್ದಾನೆ ಎಂಬುದನ್ನು ಈಗಾಗಲೇ ನಾವು ಗಮನಿಸಿದ್ದೇವೆ. ಎಂದೇ ಅವನು ಮುಗ್ಧನಷ್ಟೇ ಅಲ್ಲ, ವೆನಿಸಿನ ನಿಜವಾದ ಮುಖ ಅರಿಯದ ಅಜ್ಞ. ಅವನ ಕಣ್ಣು ತೆರೆಸಬೇಕು. ಮಂಪರಿನಿಂದ ಎಚ್ಚರಗೊಳಿಸಿ ಸತ್ಯದ ಮುಖ ಪರಿಚಯ ಮಾಡಿಸಬೇಕು. ''ಪ್ರಾಮಾಣಿಕತೆ'' ''ಒಳ್ಳೆತನ'' ''ವೆನಿಸಿನ ಹೆಣ್ಣುಗಳ ರೀತಿನೀತಿಗಳು'' ಇವೆಲ್ಲವನ್ನೂ ಸಾವಧಾನವಾಗಿ ಅತ್ಯಂತ ಸಹನೆಯಿಂದ ತಿಳಿಯ ಹೇಳುತ್ತ ಚಿಕ್ಕಮಕ್ಕಳನ್ನು ಕೈಹಿಡಿದು ನಡಿಗೆ ಕಲಿಸುವ ಹಿರಿಯನಂತೆ ಇಯಾಗೋ ಇಡೀ ವ್ಯವಹಾರವನ್ನು, ಸಂದರ್ಭವನ್ನು ನಿರ್ವಹಿಸುತ್ತಾನೆ. ವಿಚಿತ್ರವೂ ಮತ್ತು ದೃಶ್ಯ ಮುಂದುವರೆದಂತೆ ಅಥೆಲೋ ದೃಷ್ಟಿಯಲ್ಲಿ ವ್ಯಂಗ್ಯವೂ ಆದ ಸತ್ಯವೆಂದರೆ ಕಲಿಸುವ ಇಯಾಗೋವಿನ ಉತ್ಸಾಹಕ್ಕಿಂತ ಮಿಗಿಲಾಗಿ ಅಥೆಲೋವಿನ ಕಲಿಯುವ ಆತುರ, ಉತ್ಸಾಹಗಳು ಕಾಣುತ್ತ ಹೋಗುತ್ತವೆ. ತಾನು ಕೀಳು ಸಂಸ್ಕೃತಿಯಿಂದ ಬಂದವನೆಂಬ ಕೀಳರಿಮೆ ಈ ಇಡೀ ದೃಶ್ಯದಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತ ಹೋಗುತ್ತದೆ. ತಾನು ತನ್ನ ಭ್ರಮೆಗಳ ಲೋಕದಿಂದ ಮುಕ್ತನಾಗಬೇಕು. ಅದಕ್ಕೆ ಇಯಾಗೋ ಸಹವಾಸವೇ ದಾರಿ - ಅವನು ಪ್ರಾಮಾಣಿಕ, ಸತ್ಯವಂತ, ಸ್ನೇಹಿತ, ಹಿತೈಷಿ ; ತನ್ನ ಇಷ್ಟು ದಿನಗಳ ಈ ಅಧಿಕಾರದ ಸ್ಥಾನದಲ್ಲಿ ವಿಧೇಯರು ಮಾತ್ರ ಸುತ್ತುವರಿದಿದ್ದಾರೆ. ಕೃತಜ್ಞ ನಗರಪ್ರಮುಖರಿದ್ದಾರೆ. ನಿಷ್ಠೆ ತೋರಿದವರಿದ್ದಾರೆ. ಆದರೆ ತನ್ನ ಹಿತಚಿಂತನೆ ಮಾಡಿದ ಸ್ನೇಹಿತರುಗಳು ಇಲ್ಲ. ತನ್ನ ಕಣ್ಣು ತೆರೆಸಲು ಬಯಸುವ ಹಿತೈಷಿಗಳು ಇಲ್ಲ - ಈ ಇಯಾಗೋವನ್ನು ಹೊರತಾಗಿ ; ಎಂದೇ ಸಂಪೂರ್ಣವಾಗಿ ಎಲ್ಲವನ್ನೂ ಅವನಿಂದ ತಿಳಿಯಬೇಕು. ಅವನು ತನ್ನನ್ನು ಪ್ರೀತಿಸುತ್ತಾನೆಂಬುದು ಖಂಡಿತ. ಪ್ರತಿಮಾತನ್ನೂ ತೂಕಮಾಡಿ ಮಾತನಾಡುತ್ತಾನೆ. ಹಾಗಾಗಿಯೇ ಅವನ ಮಾತುಮಾತುಗಳ ಮಧ್ಯದ ಮೌನ ತನ್ನನ್ನು ಬೆಚ್ಚಿಬೀಳಿಸುತ್ತದೆ. ಸುಳ್ಳುಗಳನ್ನು ಹೇಳುವ ದಗಾಖೋರರು ಹೀಗೆ ನಡೆದುಕೊಂಡರೆ ಅದು ಅವರ ಚಾಲಾಕಿತನವೆನ್ನಬಹುದು. ಆದರೆ ಪ್ರಾಮಾಣಿಕನೊಬ್ಬನ ಈ ಮೌನಗಳು ಹೃದಯ ದಾಳದ ಕಳಕಳಿಗಳ ಸೂಚನೆಗಳು. ಅಂತಹವರು ಭಾವಾವೇಶಗಳಿಗೆ ಬಲಿಯಾಗುವವರಲ್ಲ. ಇಯಾಗೋ ತನ್ನ ಹೆದರಿಕೆಗಳನ್ನೇ, ಅನುಮಾನಗಳನ್ನೇ ಧ್ವನಿಸುವಂತೆ ಮಾತನಾಡುತ್ತಿದ್ದಾನೆ. ತನ್ನ ಹೆಂಡತಿಯ ಜೊತೆಗೆ ಇದ್ದ ಕ್ಯಾಷಿಯೋ ಹೊರಹೋಗಿದ್ದು ನೋಡಿ 'Ha I like not that' ಎಂದು ಉಸಿರಿದ. ಏನು, ಏನು ಈ ಮಾತುಗಳ ಅರ್ಥ ? 'ಮೈಕೆಲ್ ಕ್ಯಾಷಿಯೋ ಒಬ್ಬ ಪ್ರಾಮಾಣಿಕ ಎಂದು ನನ್ನ ಭಾವನೆ' ಎಂದ ಇಯಾಗೋವಿಗೆ ಅಥೆಲೋ 'ಹೌದು... ನನ್ನದೂ ಅದೇ ಭಾವನೆ' ಎಂದು ಸೇರಿಸುತ್ತಾನೆ. ಇಯಾಗೋ ತಾನು ಆಡಿದ ಮಾತುಗಳಿಗೇ ವಿಚಿತ್ರವಾದ ತಿರುವುಗಳು ಕೊಡುತ್ತಾನೆ. ಶಬ್ದಗಳ ಜೊತೆ ಚೆಲ್ಲಾಟ ವಾಡುವುದರಲ್ಲಿ ಅವನು ನಿಸ್ಸೀಮ. ಮಾತುಗಳಿಗೆ ಅರ್ಥವಿರಲಿ, ಇಲ್ಲದಿರಲಿ ನಿಗೂಢವಾಗಿ

ಕಾಣಬೇಕು. ಅಂಥದೊಂದು ಪ್ರಯೋಗ ಇಲ್ಲಿ ಮಾಡುತ್ತಾನೆ : 'Men should be what they seem, / Or those that be not, would they might seem none.' ಮೊದಲ ಸಾಲು ಸ್ಪಷ್ಟ. ಎರಡನೆಯ ಸಾಲಿಗೆ ಏನು ಅರ್ಥ ಎಂಬುದು ಬಹುಶಃ ಅವನಿಗೂ ತಿಳಿದಿರಲಿಕ್ಕಿಲ್ಲ. ಆದರೆ ತಾನು ಮಾತನಾಡುತ್ತಿರುವುದು ಅಥೆಲೋ ಎದುರಿಗೆ - ಭಾಷೆಯ ಸೂಕ್ಷ್ಮಗಳು ತಿಳಿಯದ ವಿದೇಶೀ ಒಡ್ಡನ ಎದುರು. ಅರ್ಥವೇ ಇಲ್ಲದ ಈ ಮಾತುಗಳೂ ಅಥೆಲೋವಿಗೆ ಗೂಢಾರ್ಥಗಳ ಒಗಟಿನಂತೆ ಕೇಳಿದ್ದರೆ ಆಚ್ಚರಿಯಿಲ್ಲ. ''ಹೌದು ಹೌದು, ಜನಗಳು ಕಾಣುವ ಹಾಗೆಯೇ ಅವರ ಗುಣವೂ ಇರಬೇಕು'' ಎಂದು ಮತ್ತೂ ಕಗ್ಗಂಟು ಮಾಡುತ್ತಾನೆ. ಆ ಧ್ವನಿ, ಆ ರೀತಿ ಅಥೆಲೋವಿಗೆ ಅರ್ಥವಾಗುವುದಿಲ್ಲ. 'ಇಲ್ಲ, ಇಲ್ಲ ಮತ್ತೂ ಏನೋ ನಿನ್ನ ಮಾತುಗಳಲ್ಲಿ ಹುದುಗಿದೆ. ಏನು ಅನ್ನಿಸುತ್ತದೆ ಅದನ್ನು ನೇರ ಹೇಳು. ನಿನ್ನ ಘೋರ ಚಿಂತನೆಗಳಿಗೆ ಘೋರ ನುಡಿಗಳನ್ನೇ ಕೊಟ್ಟು ಎಲ್ಲವನ್ನೂ ಸ್ಪಷ್ಟಪಡಿಸು' ಎಂದು ಒತ್ತಡ ಹೇರುತ್ತಾನೆ.

ಒಂದು ಮಟ್ಟದಲ್ಲಿ ಅಥೆಲೋವಿನ ಕಿವಿ ತನ್ನ ಮಾತುಗಳಿಗೆ ಎಚ್ಚರವಾಗಿವೆ ಎಂಬುದು ಸ್ಪಷ್ಟವಾದ ಕೂಡಲೆ ಇಯಾಗೋ ತನ್ನ ತಂತ್ರದ ಎರಡನೇ ಸ್ವರೂಪವನ್ನು ತೋರುತ್ತಾನೆ. ತನ್ನ ಮೇಲೇ ತನಗಿರುವ ಅನುಮಾನಗಳನ್ನು, ತನ್ನಲ್ಲಿ ಇದ್ದಿರಬಹುದಾದ ದೋಷಗಳನ್ನು ಕುರಿತು ಹೇಳುತ್ತಾನೆ. ತಾನೂ ಒಬ್ಬ ಮನುಷ್ಯ ತಾನೆ ? ಎಂಥದೇ ಮನುಷ್ಯ, ಎಷ್ಟೇ ದೊಡ್ಡವನಿರಲಿ, ಅವನ ಮನಸ್ಸಿನಲ್ಲಿಯೂ ಒಮ್ಮೊಂದೊಮ್ಮೆಗೇ ಕೆಟ್ಟ ಯೋಚನೆಗಳು, ತಪ್ಪು ಗ್ರಹಿಕೆಗಳು ಅವತರಿಸಿಬಿಡಬಹುದು. 'ಅದಕ್ಕಾಗಿ ನೀನು ನನ್ನನ್ನು ಇಂಥ ವೇಳೆಗಳಲ್ಲಿ ಮನ್ನಿಸಿಬಿಡಬೇಕು' ಎಂದು ನಮ್ರವಾಗಿ ಕೇಳಿಕೊಳ್ಳುತ್ತಾನೆ. ಸಹನೆ ಕಳೆದುಕೊಂಡ ಅಥೆಲೋ ''ನಿನ್ನ ಸ್ನೇಹಿತನ ವಿರುದ್ಧ ಪಿತೂರಿ ನಡೆಸಿದ್ದಿ ಇಯಾಗೋ. ಅವನಿಗೆ ಅನ್ಯಾಯವಾಗಿದೆ ಎಂದು ನಿನಗೆ ನಂಬಿಕೆಯಾಗಿದ್ದರೆ, ಅದನ್ನು ಅವನಿಂದ ಮುಚ್ಚಿಡುವುದರಿಂದ ದ್ರೋಹ ಬಗೆಯುತ್ತಿದ್ದಿ'' ಎಂದು ಮೊದಲ ಬಾರಿಗೆಂಬಂತೆ ಇಯಾಗೋ ತನ್ನನ್ನು ಸ್ನೇಹಿತನೆಂದು ಭಾವಿಸಬೇಕು ಎಂದು ನಿಶ್ಚಯವಾಗಿ ಹೇಳುತ್ತಾನೆ. ಇಯಾಗೋ ಮತ್ತೂ ಅಷ್ಟು ಅಥೆಲೋವಿನ ಸಹನೆ ಪರೀಕ್ಷೆ ಮಾಡುತ್ತಾನೆ. ತನ್ನ ರೀತಿಯೇ ಹಾಗೆ. ಎಲ್ಲವನ್ನು ಅನುಮಾನದಿಂದ ನೋಡುವುದು. ತನ್ನದೊಂದು ರೋಗ ಅದು. ತನ್ನ ಊಹೆಗಳೆಲ್ಲ ತಪ್ಪಿರಬಹುದು. ಆದ್ದರಿಂದ ಅಥೆಲೋ ಅವುಗಳನ್ನೆಲ್ಲ ನಂಬುವುದೆಂದರೆ 'It were not for your quiet, nor your good, / ಅಷ್ಟೇ ಅಲ್ಲ ಅವುಗಳನ್ನೆಲ್ಲ ತಾನು ಬಾಯಿಬಿಟ್ಟು ಹೇಳುವುದೆಂದರೆ 'nor for my manhood, honesty or wisdom / To let you know of my thoughts'. ಇಯಾಗೋವಿನ ಇಂಗಿತವನ್ನು ಸಂಪೂರ್ಣ ಗ್ರಹಿಸಿದವನಂತೆ ಅಥೆಲೋ ವಿಪರೀತದ ಶಾಪದ ಶಬ್ದವನ್ನು ಬಳಸುತ್ತಾನೆ - ಅರಚುತ್ತಾನೆ - 'Zounds' ಎಂದರೆ ಒಂದು ರೋಷಸೂಚಕ ಅವ್ಯಯ ಹೌದು.

ಜೊತೆಗೆ 'ಶಿಲುಬೆಯ ಮೇಲಿನ ಕ್ರಿಸ್ತನ ಗಾಯಗಳು' 'Gods wounds' ಎಂಬುದರ ಸಂಕ್ಷಿಪ್ತ ರೂಪ ಕೂಡ ಹೌದು. ಅಥೆಲೋವಿನ ಈ ಪ್ರಕ್ಷುಬ್ಧ ಮನಃಸ್ಥಿತಿಯ ಪೂರ್ಣ ಲಾಭ ಪಡೆದು ಇಯಾಗೋ 'ಒಳ್ಳೆಯ ಹೆಸರು' ಎಂದರೇನು ? 'ಒಳ್ಳೆಯ ಹೆಸರು ಕಳೆದುಕೊಳ್ಳುವುದು, ಎಂದರೆ ಏನು ? ಎಂದು ಒಂದು ಪುಟ್ಟ ವ್ಯಾಖ್ಯಾನವನ್ನೇ ಮಾಡುತ್ತಾನೆ. ತನ್ನ ಆಲೋಚನೆ ಗಳನ್ನು ಊಹಿಸಬಲ್ಲೆ ಎಂದ ಅಥೆಲೋವಿಗೆ 'ನನ್ನ ಹೃದಯ ನಿನ್ನ ಕೈಲಿಟ್ಟರೂ ನಿನಗೆ ಸಾಧ್ಯವಿಲ್ಲ; ಹಾಗಿರುವಾಗ ನನ್ನ ಹೃದಯ ನನ್ನ ಕೈಲೇ ಇರುವಾಗ ನೀನು ತಿಳಿಯುವುದಾದರೂ ಹೇಗೆ' ಎಂದು ಅತ್ಯಂತ ಕನಿಕರದಿಂದ ಹೇಳುತ್ತಲೇ ಅಥೆಲೋವಿನ ಮುಖಭಾವದಿಂದ ತಾನೇ ಬೆಚ್ಚಿದವನಂತೆ 'O, beware jealousy ; / It's the green eyed monster, which doth mock / That meat it feeds on....' ಎಂದು ಎಚ್ಚರಿಕೆ ನೀಡುತ್ತಾನೆ. ಈರ್ಷ್ಯೆ, ಮತ್ಸರಗಳನ್ನು ಆರೋಪಿಸುತ್ತಿರುವುದೂ ಕೂಡ ತಾನೇ ; ಈರ್ಷ್ಯೆ, ಮತ್ಸರಗಳನ್ನು ಪೋಷಿಸುತ್ತಿರುವುದೂ ತಾನೆಯೇ. 'Beware jealousy....' ಎಂದವನು ಅಥೆಲೋ ಪ್ರತಿಕ್ರಿಯಿಸಲೂ ಸಮಯ ನೀಡದೆ, ಹೆಂಡಂತಿರಿಂದ ಮೋಸಹೋದವರು ತಮಗೆ ಅದರ ಅರಿವೇ ಇಲ್ಲದಿದ್ದರೆ ಎಷ್ಟು ಕ್ಷೇಮವಾಗಿರುತ್ತಾರೆ.... ಆದರೆ ಮೋಹಕ್ಕೆ ಬಿದ್ದಿರುವವನು ಅನುಮಾನ ಪಡುತ್ತ, ಸದಾ ಶಂಕಿಸುತ್ತ, ಆದರೂ ಪ್ರಬಲವಾಗಿ ಪ್ರೀತಿಸುತ್ತಾ ಎಂಥ ನರಕದ ಕ್ಷಣಗಳನ್ನು ಕಳೆಯುತ್ತಾನೆ ಎಂದು 'ಮತ್ಸರಗೊಳ್ಳದಿರಬೇಡ' ಎಂದು ಸೂಚಿಸುವಂತೆಯೂ ವರ್ಣಿಸುತ್ತಾನೆ, 'ಓ ದುಃಸ್ಥಿತಿಯೇ' ಎಂದು ನರಳಿದ ಅಥೆಲೋವಿಗೆ ಉತ್ತರರೂಪವಾಗಿ 'ದಾರಿದ್ರ್ಯದಲ್ಲೇ ತೃಪ್ತನಾಗಿರುವವನು ಐಶ್ವರ್ಯವಂತ, ಆದರೆ ಸದಾಕಾಲವೂ ತನ್ನ ಐಶ್ವರ್ಯ ತನ್ನ ಕೈತಪ್ಪಿ ಹೋಗುವುದೆಂಬ ಭಯದಲ್ಲೇ ಕಳೆಯುವವನು ನಿಜವಾಗಿ ದರಿದ್ರ' ಎಂಬ ನೀತಿಪಾಠ ಹೇಳುತ್ತಾನೆ.... "Good God, the souls of all my tribe defend / From jealousy." ನರಳಿದ ಅಥೆಲೋನನ್ನು ಮತ್ಸರದ ವಿರುದ್ಧ ಮತ್ತೆ ಎಚ್ಚರಿಸಬೇಕಾದುದು ಧರ್ಮವೆನಿಸುತ್ತದೆ ಇಯಾಗೋನಿಗೆ. ಸಂಯಮದ ಕಟ್ಟೆಯೊಡೆದು ಅಥೆಲೋ ಚೀರುತ್ತಾನೆ - 'Why, why is this ? / Thinks't thou I would make a life of jealousy ?' ಅಲ್ಲಿಂದ ಮುಂದಕ್ಕೆ ಮತ್ತೂ ಹದಿನೈದು ಸಾಲುಗಳಲ್ಲಿ ತನ್ನ ನಿಲುವನ್ನು ಸ್ಪಷ್ಟಪಡಿಸುತ್ತಾನೆ. ಬಹುಮುಖ್ಯವಾದ ಘಟ್ಟ ಇದು. ತನ್ನ ವ್ಯಕ್ತಿತ್ವದ ಕುರಿತಾದ ದೃಢವಾದ ಹೇಳಿಕೆ. ದ್ವಂದ್ವಾರ್ಥಗಳ, ವಿರೋಧಾತ್ಮಕವಾದ, ನಿಗೂಢ ಮಾತುಗಳನ್ನು ಕೇಳಿ ಸಾಕಷ್ಟು ಗೊಂದಲಗೊಂಡಿದ್ದಾನೆ. ಮನಸ್ಸು ಅಲ್ಲೋಲ ಕಲ್ಲೋಲವಾಗಿದೆ. ಆದರೆ ತಾನೊಬ್ಬ ಸೇನಾಧಿ ಪತಿ, ಯೋಧ, ಗಣ್ಯಪುರುಷ ; ಸಾಧಾರಣರಂತೆ, ಸಾಧಾರಣ ವಿಷಯಗಳಿಗೆ, ಪುಕಾರುಗಳಿಗೆ, ತಲೆಕೆಡಿಸಿಕೊಂಡು ನಶಿಸಿಹೋಗುವಂಥ ಕ್ರಿಮಿಯಲ್ಲ, ಹೊಸಹೊಸ ಅನುಮಾನಗಳನ್ನು ಸೃಷ್ಟಿಸಿಕೊಂಡು ತನ್ನನ್ನು ಹಿಂಸಿಸಿಕೊಳ್ಳುವವನೆ ತಾನು ? ಅಥೆಲೋವಿಗೆ, ಈ ಹಿಂದೆಯೇ ಗಮನಿಸಿದ್ದಂತೆ, ಬದುಕೊಂದು ಸಮರವಿದ್ದ ಹಾಗೆ. '....to be once in doubt / Is once

to be resolved :' ಅನುಮಾನ ಬಂದ ಕ್ಷಣದಲ್ಲಿ ಪರಿಹಾರವೂ ಕಂಡುಕೊಳ್ಳುತ್ತಾನೆ ಅವನು. 'doubt' ಎಂಬುದು ಶತ್ರುವಿದ್ದ ಹಾಗೆ - ತತ್‌ಕ್ಷಣ ಜಯಿಸಿಯೇ ತೀರುತ್ತೇನೆ. ಇಯಾಗೋನಿಗೆ ಮುಖಕ್ಕೆ ರಾಚುವಂತೆ, ಈ ಇಡೀ ದೃಶ್ಯದಲ್ಲಿ ಮೊದಲ ಬಾರಿಗೆಂಬಂತೆ ಮಾತನಾಡುತ್ತಾನೆ. ''ನಿನ್ನ ತೀರ್ಮಾನಗಳೆಲ್ಲ ತಿರಸ್ಕಾರಾರ್ಹವಾದ ಮತ್ತು ಊದಿಕೊಂಡ ಅಂದಾಜುಗಳು. ಅವಕ್ಕೆ ಹೆದರಿಕೊಂಡು ನನ್ನ ವ್ಯಕ್ತಿತ್ವವನ್ನೇ ಬುಡಮೇಲುಮಾಡಿಕೊಳ್ಳುವಂಥವ ನಾನಾದರೆ ನಾನೊಬ್ಬ ಮುಠ್ಠಾಳನೆಂದು (ವಿಷಯಲಂಪಟನೆಂದು) ತಿಳಿ'' ಇಷ್ಟು ಕಠಿಣವಾಗಿ ಆಡಿದ ಮಾತುಗಳನ್ನು ಕೇಳಿದ ಮೇಲೂ ಯಾರಾದರೂ ತಮ್ಮ ಪ್ರಯತ್ನಗಳನ್ನು ಮುಂದುವರೆಸಬಹುದೆಂದು ಭಾವಿಸುವುದು ಕಷ್ಟ. ಇಯಾಗೋ ಹೇಗೆ ಪ್ರತಿಕ್ರಿಯಿಸುತ್ತಾನೆ ಎಂದು ನೋಡುವುದಕ್ಕೆ ಮತ್ತೂ ಕೊಂಚ ಹೊತ್ತು ಕಾಯಬೇಕು. ಅಥೆಲೋವಿನ ಮಾತುಗಳಲ್ಲಿ ಈ ಇಡೀ ಮಾತುಕತೆಯನ್ನೇ ಕೊನೆಗಾಣಿಸಬೇಕೆಂದ ದೃಢ ನಿಶ್ಚಯ ಕಾಣುತ್ತಿದೆ.

> ......It is not to make me jealous
> to say my wife is fair, feeds well, loves company,
> Is free of speech, sings, plays and dances well;
> Where virtue is, these are more virtuous....'

'ಹೆಂಡತಿ ಸುಂದರಳು, ಜನಗಳೊಡನೆ ಬೆರೆಯುತ್ತಾಳೆ, ಚಂದ ಮಾತನಾಡುತ್ತಾಳೆ, ಹಾಡುತ್ತಾಳೆ, ಆಡುತ್ತಾಳೆ, ನರ್ತಿಸುತ್ತಾಳೆ ಎಂಬ ಯಾವುವೂ ನನ್ನನ್ನು ಮತ್ಸರಗೊಳಿಸುವುದಿಲ್ಲ, ಗುಣವಿದ್ದಲ್ಲಿ ಇವೆಲ್ಲ ಗುಣಕ್ಕೆ ಶೋಭೆ ತರುವಂಥವು' ಅಷ್ಟೇ ಅಲ್ಲ ''ನನ್ನದೇ ದೌರ್ಬಲ್ಯಗಳ ಬಗ್ಗೆಯೂ ನನಗೆ ಅಂಜಿಕೆಯಿಲ್ಲ... ಆ ಕಾರಣಕ್ಕಾಗಿ ಅವಳು ನನ್ನ ವಿಶ್ವಾಸಘಾತ ಮಾಡುತ್ತಾಳೆ ಎಂದು ಅನ್ನಿಸುವುದಿಲ್ಲ, ಅವಳಿಗೆ ಕಣ್ಣು ಇದ್ದು ನನ್ನನ್ನು ಆಯ್ಕೆಮಾಡಿಕೊಂಡಳು'' ಈ ಮಾತುಗಳು ಇಯಾಗೋನ ಮೇಲೆ ಏನು ಪ್ರತಿಕ್ರಿಯೆ ಬೀರಿತು ಎನ್ನುವುದಕ್ಕಿಂತ ನಮ್ಮ ಮೇಲೆ ಹೇಗೆ ಪರಿಣಾಮ ಬೀರುತ್ತದೆ ? ಒಬ್ಬ ಮನುಷ್ಯ ತನ್ನ ಪ್ರೀತಿಯ ಕುರಿತಾಗಿ ಸಮರ್ಥನೆ ಹಾಗೂ ಪುರಾವೆಗಳನ್ನು ನೀಡುತ್ತ ಹೋಗುವುದೆಂದರೆ ಎಂಥ ದುರದೃಷ್ಟದ ಸಂಗತಿ. ಅಥೆಲೋ ಇಲ್ಲಿ ನೀಡಿರುವುದೆಲ್ಲ ತರ್ಕಕ್ಕೆ ಸಮ್ಮತವಾದವುಗಳು. ಅನುಭವಕ್ಕೆ ಬರುವಂಥವಲ್ಲ, ಅವಳ ಸೌಂದರ್ಯ ಮತ್ತು ತನ್ನ ದೌರ್ಬಲ್ಯ ಇವುಗಳು ಕ್ರಮವಾಗಿ ಪರಸ್ಪರರಲ್ಲಿ ಮತ್ಸರ ಅಥವಾ ಜುಗುಪ್ಸೆಗಳನ್ನು ಹುಟ್ಟಿಸುವುದಿಲ್ಲ ಎಂದು ವಾದಿಸುವುದೇ, ನಂಬಿಸಲಿಕ್ಕೆ ಹೋಗುವುದೇ ಕರುಣಾಜನಕ ಸ್ಥಿತಿಯನ್ನು ಮುಟ್ಟಿರುವ ಸೂಚನೆ. ಅಥೆಲೋವಿಗೆ ಡೆಸ್ಡಿಮೋನಾಳ ಬಗೆಗಿರುವ ಪ್ರೀತಿ ಶುದ್ಧವೂ, ಅಪ್ಪಟವೂ ಎಂದು ಈಗಾಗಲೇ ನಾವು ಗುರುತಿಸಿದ್ದೇವೆ. ಹಾಗೂ ಮುಂದೆ ಕೂಡ ಗಮನಿಸುತ್ತೇವೆ. ಆದರೆ ಸದ್ಯದಲ್ಲಿ ಇದೊಂದು ಉಸಿರುಕಟ್ಟಿಸುವಂಥ ಸ್ಥಿತಿ. ಪ್ರಾಣ ಉಳಿಸಿಕೊಳ್ಳುವ ಆತುರದಲ್ಲಿ ಹೃದಯ ಮನಸ್ಸುಗಳು ಕೊಂಚ ಮೂಲೆಗುಂಪಾಗುವುದು ಅನಿವಾರ್ಯವೋ ಏನೋ.

ಅಥೆಲೋವಿಗೆ ತನ್ನ ಮುಂದಿರುವ ಪ್ರಶ್ನೆ ಬಹು ಸ್ಪಷ್ಟ. ''ಅನುಮಾನಿಸುವುದಕ್ಕೆ ಮುಂಚೆ ಗಮನಿಸುತ್ತೇನೆ ; ಒಮ್ಮೆ ಅನುಮಾನಿಸಿದರೆ ಸಿಂಧುತ್ವವನ್ನು ಸ್ಥಾಪಿಸುತ್ತೇನೆ. ಸತ್ಯ ಕಂಡುಕೊಂಡ ಮೇಲೆ ಪ್ರೀತಿ ಅಥವಾ ಮತ್ಸರ ಎರಡರಲ್ಲೊಂದನ್ನು ವರ್ಜಿಸಿಬಿಡುತ್ತೇನೆ'' ಸೇನಾದಂಡ ನಾಯಕನೊಬ್ಬನ ಠೀವಿಯ ಮಾತುಗಳು. ಆದರೆ ಇಲ್ಲಿ ಅವನು ಎದುರಿಸುತ್ತಿರುವುದು ಸೈನ್ಯವನ್ನಲ್ಲ, ಬಳಸುತ್ತಿರುವುದು ಶಸ್ತ್ರಾಸ್ತ್ರಗಳನ್ನಲ್ಲ - ಇಯಾಗೋನನ್ನು. ಅವನನ್ನು ಎದುರಿಸಲು ಸೇನಾ ದಂಡನಾಯಕನ ಸಜ್ಜು; ಸಿದ್ಧತೆಗಳು ಸಮರ್ಪಕವೆ ? ನೋಡೋಣ.

ತಾನು ಜಾಣತನದಿಂದ ನೆಯ್ದ ಒಗಟಿನ ಮಾತುಗಳಿಗೆ ಮರುಳಾಗುವುದಿಲ್ಲ ಹಾಗಾದರೆ... ''ಸಂತೋಷ... ಈಗ ನಾನು ಹೆಚ್ಚು ಧೈರ್ಯವಾಗಿ ನಿನ್ನ ಬಗೆಗಿನ ಪ್ರೀತಿ ಮತ್ತು ಕರ್ತವ್ಯ ಪ್ರಜ್ಞೆಯನ್ನು ಪ್ರದರ್ಶಿಸಬಹುದು... ಈ ಅನಿವಾರ್ಯ ಸ್ಥಿತಿಯಲ್ಲಿ ನಾನು ಹೇಳುವುದನ್ನು ಕೇಳಿಸಿಕೋ. ಪುರಾವೆಗಳ ಬಗ್ಗೆ ಇನ್ನೂ ನಾನು ಹೇಳಲಾರೆ.... Look to your wife, observe her well with Cassio, / Wear your eye thus, not jealous, nor secure." ಕದ್ದು ಮುಚ್ಚಿದ ಮಾತುಗಳು ಇಲ್ಲ, ನೇರ, ಸ್ಪಷ್ಟ, ಶಂಕೆಯೂ ಪಡದ, ತೀರ ನೆಚ್ಚಿಕೆಯೂ ಪಡದ ಸ್ಥಿತಿಯಲ್ಲಿ ಅವಳನ್ನು ಗಮನಿಸು. ಅಥೆಲೋವಿನದು 'free and noble nature' ಮತ್ತು ಇಂಥ ಉದಾರಶೀಲತೆಯೇ ದುರುಪಯೋಗಕ್ಕೆ ಕಾರಣವಾಗಬಹುದು. ''ಚೆನ್ನಾಗಿ, ಗಮನಿಸು.... I know our country disposition well ; ? In venice they do let God see the pranks / They dare not show their husbands : their best conscience / Is not to leave undone, but keep unknown". ಒಂದೇ ಏಟಿಗೆ ನೆಲಕಚ್ಚಿಸಿಬಿಡುವಂಥ ಹೊಡೆತ. "I know our country disposition well" ಎನ್ನುವಾಗ 'I know' ಮೇಲೆ ತುಸು ಹೆಚ್ಚು ಒತ್ತುಕೊಡುವುದು ಸಹಜವೆ. 'ನಿನಗೆ ಗೊತ್ತಿಲ್ಲ, ನೀನು ವಿದೇಶಿ, ನೀನು ಅಜ್ಞಾನಿ... ಆದದ್ದರಿಂದ ನೀನು ಇಲ್ಲಿ ಬಲಿಪಶುವಾಗಿ ಬಳಕೆಯಾಗುತ್ತಿ ಅಷ್ಟೆ' ಎಂಬ ಅರ್ಥ ಧಾರಾಳವಾಗಿ ಇಲ್ಲಿ ಕಾಣುತ್ತದೆ. 'disposition' ಅಂದರೆ 'ಒಲವು, ಮನೋಧರ್ಮ, ಪ್ರವೃತ್ತಿ ಎಂದರ್ಥ - 'ನಿನಗೆ ಗೊತ್ತಿರುವ ವೆನಿಸ್ ನಿಜವಾದ ವೆನಿಸ್ ಅಲ್ಲ' ಎಂಬ ಅರ್ಥವೂ ಇಲ್ಲಿ ಅಡಕವಾಗಿದೆ. ಈ ಸಂಸ್ಕೃತಿ 'ನನಗೆ ಚೆನ್ನಾಗಿ ಗೊತ್ತು' ; ಶಿಕ್ಷಣದ ಮೊದಲ ಪಾಠ. ಗಂಡಂದಿರಿಂದ ಮುಚ್ಚಿಡುತ್ತಾರೆ, ಆದರೆ ತಮ್ಮ ಕುಚೇಷ್ಟೆಗಳು ದೇವರ ಕಣ್ಣಿಗೆ ಬಿದ್ದರೆ ತಲೆಕೆಡಿಸಿಕೊಳ್ಳುವುದಿಲ್ಲ. ಇಷ್ಟೇ ಸಾಲದು. ಇನ್ನೂ ಮುಂದುವರೆಯುತ್ತಾನೆ. ಮತ್ತೂ ಅಷ್ಟು ಆಳಕ್ಕೆ ವಿಷ ಸುರುವುತ್ತಾನೆ. 'ನಮ್ಮ ಹೆಣ್ಣುಮಕ್ಕಳ ನೈತಿಕತೆಯೆಂದರೆ ಬಯಕೆಗಳನ್ನು ತೀರಿಸಿಕೊಳ್ಳದೆ ಉಳಿದುಬಿಡುವುದರಲ್ಲಲ್ಲ, ಆದರೆ ಯಾರ ಕಣ್ಣಿಗೂ ಬೀಳದ ಹಾಗೆ ಕಾಪಾಡಿಕೊಳ್ಳುವುದು' ಈ ನಾಟಕದ ಆರ್ಡೆನ್ ಆವೃತ್ತಿಯನ್ನು ಸಂಪಾದಿಸಿದ ಎಂ.ಆರ್. ರಿಡ್ಲೀ ಈ ಸಂದರ್ಭದಲ್ಲಿ ಒಂದು ಬಹುಮುಖ್ಯವಾದ ಅಂಶವನ್ನು ಗಮನಿಸುತ್ತಾರೆ. ಅಥೆಲೋವಿನ ವೆನಿಸ್ ಸಾಮಾಜಿಕ ರೀತಿನೀತಿಗಳ ಅಜ್ಞಾನದ ಸಂಪೂರ್ಣ ದುರ್ಲಾಭ ಪಡೆದು

ಆಡಿದ ಮಾತುಗಳು ಇವು. ಅಥೆಲೋವಿನ ಅನುಮಾನಗಳನ್ನು, ಶಂಕೆಗಳನ್ನು ದ್ವಿಗುಣ ಗೊಳಿಸುವುದಷ್ಟೇ ಅಲ್ಲ, ಒಂದು ರೀತಿ ಅವನ ಸತ್ಯಶೋಧನಾ ಯತ್ನಗಳಿಗೆ ಬಾಗಿಲು ಬಡಿದಂತೆ ಕೂಡ. ಅಕಸ್ಮಾತ್ ಅಥೆಲೋ ಡೆಸ್ಡಿಮೋನಾಳನ್ನು ನೇರವಾಗಿ ಪ್ರಶ್ನಿಸಹೋದರೆ ಪರಿಣಾಮಗಳು ಏನಾಗಬಹುದು ? ಒಂದೋ ಅವಳು ಅಲ್ಲಗಳೆಯಬಹುದು. ಮತ್ತೊಂದು ಎಂದರೆ 'ಆಯಿತು, ನಿಜವೇ ಎಂದಿಟ್ಟುಕೋ ; ಇದು ನಮ್ಮಲ್ಲೇನು ಅಪರಾಧವಲ್ಲ ; ನಮ್ಮ ರೀತಿನೀತಿಗಳೇ ಹಾಗೆ' ಅಂದುಬಿಟ್ಟರೆ ! ಈ ಭಯದಿಂದಲೇ ಈ ಕ್ಷಣದಿಂದ ಕೊನೆಯವರೆವಿಗೆ ಅಥೆಲೋ ಕ್ಯಾಷಿಯೋನನ್ನಾಗಲೀ ಅದಕ್ಕೂ ಹೆಚ್ಚಿಗೆ ಡೆಸ್ಡಿಮೋನಾಳನ್ನಾಗಲೀ ಮುಖಾಮುಖಿ ಯಾಗುವ ಧೈರ್ಯವೇ ಮಾಡುವುದಿಲ್ಲ. ಇಯಾಗೋನ ಮಾತುಕೇಳಿ ಒಮ್ಮಿಂದೊಮ್ಮೆಗೇ ಎಂಥ ಪ್ರಪಾತಕ್ಕೆ ತಾನು ಬಿದ್ದಿದ್ದೇನೆಂಬ ಹಠಾತ್ ಅರಿವಿನಿಂದ 'Dost thou say so ?' ಎಂದು ಚೈತನ್ಯವೆಲ್ಲ ಉಡುಗಿಹೋದವನಂತೆ ಉಸುರವುದು. ಕಾದ ಕಬ್ಬಿಣದ ಮೇಲೆ ಸುತ್ತಿಗೆ ಪೆಟ್ಟು ಮತ್ತೆಮತ್ತೆ ಬೀಳಬೇಕು, 'ನಿನ್ನ ಮದುವೆಯಾಗಿ ಅವಳ ಅಪ್ಪನಿಗೇ ವಂಚನೆ ಮಾಡಿದಳು.... ಮತ್ತೆ, ನಿನ್ನ ಮುಖ ನೋಡಿ ನಡುಗಿ ಹೆದರಿದವಳು ಅತಿಯಾಗಿ ಪ್ರೀತಿಸುತ್ತೇನೆಂದಳು.... 'ಹೌದು, ಹೌದು ಹಾಗೆಯೇ ಆಗಿರುವುದು' ಇಯಾಗೋ ಮತ್ತೂ ಮುಂದುವರೆಸುತ್ತಾನೆ 'ಬಿಡು, ಬಿಡು, ಅಪ್ಪನ ಕಣ್ಣುಗಳಿಗೇ ಮೋಸ ಮಾಡಿದ ಅವಳು.... ಪಾಪ ಅವನು ಮಾಟಮಂತ್ರ ಎಂದು ಭಾವಿಸಿದ...' ಮೊದಲನೆಯ ಪಾಠದ ನೀತಿ - 'ಈ ಬಿಳೀ ಹುಡುಗಿಯರನ್ನು ನಂಬಬೇಡ'. ಅಥೆಲೋವಿನ ಪ್ರಜ್ಞೆಯೊಳಕ್ಕೆ ಇಳಿದ ಜ್ಞಾನೋದಯದ ಕಿರಣ. ಈ ಪ್ರಹಾರಗಳನ್ನೆದುರಿಸಲು ಒಂದೂ ಅಸ್ತ್ರವಿಲ್ಲದೆ ನಿಸ್ಸಹಾಯಕನಾಗಿ, ಅನಾಥನಾಗಿ ನಿಂತಿದ್ದಾನೆ ಸೇನಾದಂಡನಾಯಕ. ಮನಸ್ಸು ಅಸ್ತವ್ಯಸ್ತಗೊಂಡಿದೆ. ನೀರೊಳಗೆ ಮುಳುಗಿ ಉಸಿರುಕಟ್ಟಿದವನಂತೆ ನರಳುತ್ತಿದ್ದಾನೆ. ಇಯಾಗೋನ ತಂತ್ರವೇ ಇದು. ಜುಟ್ಟು ಹಿಡಿದು ನೀರೊಳಗೆ ಮುಖ ತಳ್ಳುವುದು, ಉಸಿರುಕಟ್ಟಿ ಒದ್ದಾಡಲು ಆರಂಭವಾದ ಕ್ಷಣ ಮೃದುವಾಗಿ ಎತ್ತಿ ಗಾಳಿಬೆಳಕಿನಲ್ಲಿ ಏದುಸಿರುಬಿಡುತ್ತ ಮತ್ತೆ ಉಸಿರಾಡಲು ಅನುವು ಮಾಡಿಕೊಡುವುದು. ಈಗ ಮುಳುಗಿದ ಮುಖವನ್ನು ಎತ್ತಬೇಕು.... ''ನಿನ್ನನ್ನು ತುಂಬ ಪ್ರೀತಿಸುತ್ತೇನೆ... ಆ ಪ್ರೀತಿಗಾಗಿಯೇ ನೀನು ನನ್ನನ್ನು ಕ್ಷಮಿಸಬೇಕು. ...ನನ್ನ ಮಾತುಗಳು ನಿನ್ನನ್ನು ಕೊಂಚ ಅಸ್ಥಿರಗೊಳಿಸಿದಂತಿವೆ.... ನಾನು ಆಡಿದ ಮಾತುಗಳೆಲ್ಲ ನಿನ್ನ ಮೇಲಿನ ಪ್ರೀತಿ, ವಿಶ್ವಾಸಗಳಿಂದ ಆಡಿದವು. ನನ್ನ ಮಾತುಗಳನ್ನು ಮಿತಿಮೀರಿ ಅರ್ಥಮಾಡಿಕೊಂಡು ಸಂತಪಿಸಬೇಡ.'' ಅಥೆಲೋ ಇಯಾಗೋವಿನ ಒಂದೊಂದು ಎಚ್ಚರಿಕೆಯ 'ಹಿತವಚನ'ಗಳಿಗೂ ತಾನು ಧೃತಿಗೆಟ್ಟಿಲ್ಲ, ತನ್ನ ಶಾಂತಿ ಭಂಗವಾಗಿಲ್ಲ, ತಾನು ಇಯಾಗೋನ ಮಾತುಗಳಿಗೆ ಅನವಶ್ಯಕ ಅರ್ಥಗಳನ್ನು ಕಲ್ಪಿಸುವುದಿಲ್ಲ ಎಂದು ಎಷ್ಟೇ ಹೇಳಿದರೂ ಇಯಾಗೋ ಮಾತ್ರ ತಡೆಯೇ ಇಲ್ಲದಂತೆ, ಅಥೆಲೋ ಬಗೆಗಿನ ತನ್ನ ಪ್ರೀತಿಗೆ ತಾನೇ ದೂಷಿಸಿಕೊಳ್ಳುವಂತೆ ಮಾತನಾಡುತ್ತಲೇ ಹೋಗುತ್ತಾನೆ. ಆದರೆ ಅವನಲ್ಲಿ ಎಂಥ ಕುಶಾಗ್ರ ಠಕ್ಕುತನವಿದೆಯೆಂದರೆ ಎಚ್ಚರಿಕೆಯ,

ಹಿತವಚನಗಳ ನಡುವೆಯೂ ಅಥೆಲೋ ಮರೆಯಬಾರದ, ಕಡೆಗಣಿಸಬಾರದ ಹೆಸರುಗಳನ್ನು ನೆನಪುಮಾಡುತ್ತಿರುತ್ತಾನೆ. '....Cassio is my trusty friend, / My lord, I see you are moved' ಉತ್ತರವಾಗಿ ಅಥೆಲೋ ನಂಬಿಕೆಯೇ ಇಲ್ಲದವನಂತೆ, ಆದರೆ ನಂಬಿಕೆ ಕಳೆದುಕೊಳ್ಳಲಾರದೆ ದಿಕ್ಕುಗೆಟ್ಟವನಂತೆ 'no, not much moved, / I do not think but Desdemona is honest' ದುರ್ಬಲ ದನಿಯಲ್ಲಿ ಉಸುರುತ್ತಾನೆ. ನಿರಾಳ ಉಸಿರಾಡುವ ಸೂಚನೆ ಕಂಡಕೂಡಲೆ ಜುಟ್ಟುಹಿಡಿದು ನೀರೊಳಗೆ ದೂಡಬೇಕು. 'Long live she so, and long live you to think so !' ಆ ಧ್ವನಿಯಲ್ಲಿ 'ನಿನಗೆ ಎಷ್ಟು ಹೇಳಿದರೆ ತಾನೆ ಏನು ಪ್ರಯೋಜನ, ನಿನ್ನ ವ್ಯಾಮೋಹಗಳಲ್ಲಿಯೇ ನೀನು ಸಂಭ್ರಮಿಸುತ್ತಿ, ಆಗಲಿ, ಹಾಗೇ ಆಗಲಿ' ಎಂಬ ಇಡೀ ಪ್ರಕರಣವನ್ನೇ ಕೈಬಿಟ್ಟು ನಿರಾಳವಾಗುವ ಧ್ವನಿಯಿದೆ. ಎಂದೇ ಮತ್ತೂ ಕಂಗೆಡುತ್ತಾನೆ ಅಥೆಲೋ. 'And yet how nature erring from itself....' ತನ್ನ ಹುಟ್ಟಿನ, ಬೆಳೆದು ಬಂದ ವಾತಾವರಣದ ವಿರುದ್ಧ ನಡೆದುಕೊಳ್ಳುವುದೆಂದರೆ... ಅನೈಸರ್ಗಿಕ ನಡತೆಯೆಂದರೆ... ಎಂದು ಮಾತು ಮುಗಿಸುವುದಕ್ಕೆ ಮುನ್ನ ತನ್ನ ಜುಟ್ಟನ್ನು ತಾನೇ ಅಥೆಲೋ ಅರ್ಪಿಸಿಬಿಟ್ಟ ಮೇಲೆ ಇಯಾಗೋ ಅವಕಾಶ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ... ಅರ್ಧಕ್ಕೆ ತಡೆದು 'Ay; there is the point.' ಅದೇ ನೀನು ಮರೆಯಬಾರದ ವಿಷಯ. ಪ್ರಕೃತಿ ಧರ್ಮಕ್ಕೆ ವಿರುದ್ಧವಾಗಿ ತನ್ನ ದೇಶ, ಬಣ್ಣ ಹಾಗೂ ಸ್ಥಾನಮಾನಗಳ್ಯಾವುದನ್ನೂ ಲೆಕ್ಕಿಸದೆ ಅನೇಕ ವೈವಾಹಿಕ ಪ್ರಸ್ತಾಪಗಳನ್ನು ತಿರಸ್ಕರಿಸುವುದು ಎಂದರೇ ? 'in all things nature tends' ಹೀಗೆ ಪ್ರಕೃತಿಧರ್ಮವನ್ನು ಅನುಸರಿಸಬೇಕಾದುದು ಕೇವಲ ಮನುಷ್ಯ ಮಾತ್ರನಲ್ಲ...ಪ್ರತಿ ಜೀವಿಯೂ, ಪ್ರಾಣಿಪಕ್ಷಿಗಲೂ ಅನುಸರಿಸಬೇಕಾದುದು. ಅಂತಹುದರಲ್ಲಿ ಇವಳು ವಿರುದ್ಧ ದಿಕ್ಕಿನಲ್ಲಿ ನಡೆದಳೆಂದರೆ ? 'Fie, we may smell in such a will most rank / Foul disproportion ; thoughts unnatural...' ಮೂಗಿಗೆ ಹೊಲಸು ಬಡಿಯುವಂಥ ನಡೆಯಿದು. ಮುಗ್ಧ ಹೆಣ್ಣು ಹುಡಿಗಿ ಹೇಗೆ ನಡೆದುಕೊಳ್ಳಬೇಕೆಂದು ನಿರೀಕ್ಷಿಸುತ್ತೇವೆ, ಹೇಗೆ ನಡೆದುಕೊಳ್ಳುತ್ತಿದ್ದಾಳೆ ಎಂಬ ಇವುಗಳ ಮಧ್ಯದ ವಿರೋಧವೇ ಅಸಹ್ಯವಾದದ್ದು... ತುಂಬ ಆಳಕ್ಕೆ ತಳ್ಳಿಬಿಟ್ಟೆನೆ ? ಎಂಬ ಅನುಮಾನ ಬಂದಕೂಡಲೆ 'But pardon me ; I do not in position / Distinctly speak of her. ಆದರೂ ನನ್ನ ಅಂಜಿಕೆಯೆಂದರೆ, ಇಂದಲ್ಲ ನಾಳೆ ಅವಳ ಸಹಜ ಪ್ರವೃತ್ತಿಗಳು ಹಿಂತಿರುಗಿ ನಿನ್ನನ್ನು ತನ್ನ ಸುತ್ತಲವರೊಡನೆ ಹೋಲಿಸಿನೋಡುತ್ತ ಹೋದರೆ ಅವಳು ಖಂಡಿತ ಪಶ್ಚಾತ್ತಾಪಪಟ್ಟು ಬಿಡಬಹುದು ಎಂದು.' ಅಥೆಲೋವಿಗೆ ಆಯಾಸವಾಗಿಬಿಟ್ಟಿದೆ. ಸಾಕಷ್ಟು ಕೇಳಿಯಾಯಿತು. ಬಾಧೆಪಟ್ಟಾಯಿತು. ಸದ್ಯಕ್ಕೆ ಸಾಕು. ಇಯಾಗೋವಿಗೆ ಮತ್ತೇನಾದರೂ ಕಣ್ಣಿಗೆ ಬಿದ್ದರೆ ತನಗೆ ತಿಳಿಸು. ನಿನ್ನ ಹೆಂಡತಿಗೇ ಅವಳ ಮೇಲೆ ಕಣ್ಣಿಟ್ಟಿರಲು ಹೇಳು, ಈಗ ಹೋಗು ಎಂದು ಕಳಿಸಿ ಏಕಾಕಿಯಾಗಿ ನಿಂತಿದ್ದಾನೆ. ಇಯಾಗೋ ಅತ್ತ ಹೋದ ಕೂಡಲೆ ಅವನ ಬಾಯಿಂದ ಹೊರಡುವ ಉದ್ಗಾರವೆಂದರೆ 'Why did I

marry ? This honest creature doubtless / Sees and knows more, much more, than he unfolds.... ಯಾಕಾದರೂ ಮದುವೆಯಾದೆ ? ಮೊದಲ ಅಂಕದ ಎರಡನೇ ದೃಶ್ಯದಲ್ಲಿ ಇಯಾಗೋ 'ನೀನು ನಿಜವಾಗಿ ಮದುವೆಯಾಗಿದ್ದೀಯಾ ?' ಎಂದು ಕೇಳಿದಾಗ ಆಥೆಲೋ ಹೇಳಿದ ಉತ್ತರವನ್ನು ನಾವು ಇಷ್ಟರೊಳಗಾಗಿ ಮರೆತಿರುವುದಕ್ಕೆ ಸಾಧ್ಯವಿಲ್ಲ.... 'But that I love gentle Desdemona / I would not my unhoused free condition / Put into circumscription and confine / For the seas worth' ಎಂದು ಹೆಮ್ಮೆಯಿಂದ ಸಾರಿದ್ದ. 'my unhoused free condition' .... ತಾನೊಬ್ಬ ಸ್ವತಂತ್ರ ಜೀವಿ ; ಮದುವೆ, ಮನೆ, ಸಂಸಾರಗಳೆಂಬ ಬಂಧನಗಳಿಗೆ ಸಿಲುಕಿಕೊಳ್ಳದವನು. ಆದರೆ ಈಗ ಮದುವೆಯಾಗಿರುವುದು... 'that I love gentle Desdemona'. ಪ್ರೀತಿ, ಮದುವೆಗಳೆಂಬ ಸವಿ ತನ್ನ ಸ್ವತಂತ್ರ ಜೀವಕ್ಕೆ ಹೊಸದೊಂದು ಜಗತ್ತನ್ನೇ ಪರಿಚಯಿಸಿದೆ. ತನ್ನ ಬದುಕಿಗೊಂದು ಆಯಾಮ ಬಂದಿದೆ. ಸೈಪ್ರಸ್‌ಗೆ ಕಾಲಿಟ್ಟ ಗಳಿಗೆಯೇ, ತನಗಿಂತ ಮುಂಚೆಯೇ ತಲುಪಿದ್ದ ಡೆಸ್ಡಿಮೋನಾಳನ್ನು ನೋಡಿ 'O my souls joy' ಎಂದು ಅವಳನ್ನು ಆಲಂಗಿಸಿ ಅವನು ಆಡಿದ ಮಾತುಗಳೂ ಕೂಡ ಇನ್ನೂ ಹಸಿರಾಗಿವೆ. If it were now to die, / It were now to be most happy, for I fear / My soul hath her content so absolute, That not another comfort, like to this / succeeds in unknown fate. ಈ ಸಂದರ್ಭದಲ್ಲಿ ಮರುಕಳಿಸುವ ಅದ್ಭುತ ಸುಂದರ ಸಾಲುಗಳು. ಮತ್ತೆ ಈ ದೃಶ್ಯದ ಮೊದಲಲ್ಲಿ ಅವನು ಆಡಿದ ಮಾತುಗಳು I do love thee and when I love thee not / Chaos is come again. ಆಳದಲ್ಲಿ ಅನುಭವಿಸಿದ ಅಮೂರ್ತ ಅನುಭವಗಳಿಗೂ ಈಗ ಸದ್ಯದಲ್ಲಿ ಮೂರ್ತವಾಗಿ ಕಾಣುತ್ತಿರುವ ಇಯಾಗೋ ಸೃಷ್ಟಿಸುತ್ತಿರುವ ಈ ಕರಾಳ ಸತ್ಯಗಳಿಗೂ ಸಮುದ್ರದಷ್ಟು ವಿಸ್ತಾರದ ಅಂತರವೇರ್ಪಟ್ಟು ಅಲ್ಲಿಯೂ ಇರಲಾರದೆ, ಇಲಿಯೂ ಇರಲು ಒಪ್ಪದೆ, ಎಂಥ ಹಿಂಸೆಗೆ ಬಲಿಯಾದೆ ತಾನು ? ಈ ಇಷ್ಟಕ್ಕೂ ತನ್ನ ಮದುವೆಯೇ ಕಾರಣವಲ್ಲವೆ ?' 'Why did I marry ?' ಡೆಸ್ಡಿಮೋನಾಳೊಂದಿಗಿನ ಸಂಬಂಧದಲ್ಲಿ ತನಗೆ ದೊರಕಿದ ಅನಿರ್ವಚನೀಯ ಆನಂದವು ಈ ಇಯಾಗೋನ ಮಾತುಗಳು, ಅವನು ಸೃಷ್ಟಿಸುತ್ತಿರುವ ಜಗತ್ತು ಇವುಗಳಲ್ಲಿ ಕರಗಿಹೋಗುತ್ತಿವೆ. "This honest creatue doubtless / Sees and knows more, much more, than he unfolds." ತನ್ನ ಸಂಕಟವನ್ನು ಮತ್ತೆ ಯಾರಲ್ಲಿಯೂ ಹೇಳಿಕೊಳ್ಳಲಾಗದಂಥದು, ಹಂಚಿಕೊಳ್ಳಲಾಗದಂಥದು. ಖಂಡಿತವಾಗಿ ನೇಪಥ್ಯದಲ್ಲೇ ನಿಂತು ಈ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಇಯಾಗೋ ಮತ್ತೆ ಪ್ರವೇಶಿಸಿ ಮತ್ತಷ್ಟು ಎಚ್ಚರಿಕೆ, ಜೊತೆಗೆ ಆಥೆಲೋ ಅನುಸರಿಸಬೇಕಾದ ಮಾರ್ಗದ ವಿವರಗಳು ಮತ್ತು ತನ್ನ ಮಾತುಗಳನ್ನು ತೀರ ತಲೆಗೆ ಹಚ್ಚಿಕೊಳ್ಳಬಾರದೆಂಬ ಬುದ್ಧಿವಾದ ಹೇಳಿಹೋಗುತ್ತಾನೆ. ''ನಾನು ಹೇಳಿದ್ದೆಲ್ಲವನ್ನ ತೀರ ತಲೆಗೆ ತೆಗೆದುಕೊಳ್ಳಬೇಡ. ಎಲ್ಲವನ್ನೂ ಕಾಲವೇ ನಿರ್ಧರಿಸಲಿ ಬಿಡು. ಕ್ಯಾಷಿಯೋ ಒಳ್ಳೇ ಅಧಿಕಾರಿ,

ಅವನಿಗೆ ಸ್ಥಾನ ಮರಳಿ ಸಿಗಬೇಕು ನಿಜ, ಆದರೆ ಸ್ವಲ್ಪ ದಿವಸ ಅವನನ್ನು ದೂರವೇ ಇಡು. ಆಗವನು ನಿನ್ನ ಹೆಂಡತಿಯ ಮೂಲಕವಲ್ಲದೆ ತನಗೆ ಸ್ಥಾನ ಸಿಗುವುದು ಕಷ್ಟ ಎಂದು ತಿಳಿದು ಹಾಗೆಯೇ ವರ್ತಿಸುವುದನ್ನು ನೀನು ಗಮನಿಸು. ಮತ್ತು ನಿನ್ನ ಹೆಂಡತಿ ಅವನ ಪರವಾಗಿ ಹೇಗೆ ನಿನ್ನ ಬಳಿ ಪ್ರಬಲವಾದ, ಹಠದ ವಾದ ಹೂಡುತ್ತಾಳೆಯೋ ನೋಡು. ಇವುಗಳಿಂದಲೇ ಸಾಕಷ್ಟು ನಿನಗೇ ತಿಳಿಯುತ್ತದೆ. ಅಷ್ಟೆ, ಸದ್ಯಕ್ಕೆ ನನ್ನ ಮಾತುಗಳಿಗೆ ತಲೆಬಿಸಿಮಾಡಿಕೊಳ್ಳಬೇಡ, ನಿನ್ನನ್ನು ಬೇಡಿಕೊಳ್ಳುತ್ತೇನೆ''. ಎಲ್ಲ ಅಂಶಗಳನ್ನೂ ಮಿಶ್ರಣ ಮಾಡಿದ ಸಂದೇಶ. ತನ್ನ ಶಿಕ್ಷಣದ ಮೊದಲ ಭಾಗ ಮುಕ್ತಾಯವಾಗಿದೆ. ಸಾಕಷ್ಟು ಸಾಧಿಸಿಯಾಯಿತೆಂಬ ತೃಪ್ತಭಾವವೂ ಈ ಮಾತುಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಅಥೆಲೋ ತನ್ನ ಸಂಯಮವನ್ನು ಕಳೆದುಕೊಳ್ಳುವುದಿಲ್ಲ ಎಂದು ಇಯಾಗೋವಿಗೆ ಹೇಳಿದರೂ ಕೂಡ ಅವನು ಅತ್ತ ಸಾಗಿದ ಕೂಡಲೇ ತನ್ನ ವ್ಯಕ್ತಿತ್ವ ಎಷ್ಟು ಅಲ್ಲೋಲಕಲ್ಲೋಲವಾಗಿದೆಯೆಂಬುದನ್ನು ಗುರುತಿಸುತ್ತ ಹೋಗುತ್ತಾನೆ. ಈ ಇಷ್ಟು ಅಲ್ಲೋಲಕಲ್ಲೋಲಕ್ಕೆ ಕಾರಣ ತಾನು ದೃಢವಾಗಿ ನಂಬಿರುವ "This fellow is of exceeding honesty....' ಎಂಬ ಮಾತು. ಅದೇ ಅವನ ಸದ್ಯದ ಅಸ್ತಿತ್ವದ ಬುನಾದಿ. ಆ ಮಾತು ನಿಸ್ಸಂಶಯವಾಗಿ ತನ್ನ ಮನಸ್ಸಿನಲ್ಲಿ ಸ್ಥಾಪನೆಗೊಂಡಿರುವುದರಿಂದ ಮಿಕ್ಕಿದ್ದೆಲ್ಲವೂ ಆ ಮೂಲದಿಂದಲೇ ಹೊರಡಬೇಕು. 'exceeding honesty' ಅಷ್ಟೇ ಅಲ್ಲ ಅವನು 'knows all qualities, with a learned spirit / of human dealing :" 'learned spirit;' ಅರಿತವನು ಅವನು, ವಿದ್ವತ್ಪೂರ್ಣ ಚೇತನ ಅವನದು. ಮನುಷ್ಯಕುಲದ ರೀತಿನೀತಿಗಳನ್ನು ಗುಣಾವಗುಣಗಳನ್ನುತೂಗಬಲ್ಲ. ಹೀಗೆ ಹೇಳುವಾಗಲೇ ತಾನು ಈ ವಿಷಯದಲ್ಲಿ ಅಜ್ಞ ಎಂಬ ಭಾವವೂ ಇದ್ದೇ ಇದೆ. ಅವನು ಹೇಳಿದ ಹಾಗೆ 'If I do prove her haggard / Though that her jesses were my dear heartstrings / I would whistle her off and let her down the wind / to prey at fortune. ಪ್ರಥಮಬಾರಿಗೆಂಬಂತೆ ನಿರ್ಧಾರದ ಮಾತುಗಳು. ಕಟುವೂ ನಿಷ್ಠುರವೂ ಆದ ಮಾತುಗಳು. ಕ್ರೂರವೂ ಹೌದು. 'ಅವಳೊಂದು ಪಳಗದ ಡೇಗೆಯಾಗಿದ್ದು ನನ್ನ ಹೃದಯಸೂತ್ರಗಳಿಂದ ಅವಳನ್ನು ಕಾಪಾಡುತ್ತಿದ್ದರೂ ಸೂತ್ರಗಳನ್ನು ಕತ್ತರಿಸಿ ಬೀಸುವ ಗಾಳಿಗೆ ಸಿಕ್ಕು ಅವಳ ಹಣೆಬರಹದಂತೆ ಹಾಳಾಗಲಿ ಎಂದು ಬಿಟ್ಟುಬಿಡುತ್ತೇನೆ' ಎಂದು ಶಪಥ ಮಾಡುತ್ತಾನೆ. ಅವಳ ವಿಷಯ ಇರಲಿ, ತನ್ನದೇ ಏನಾಗಿದೆ ? 'Haply, for I am black, / And have not those soft parts of conversation / That Chamberers have, or for I am declined / Into the vale of years - yet that is not much / She is gone, I am abused, and my relief / Must be to loathe her. ಪ್ರೀತಿ ಗಂಡು-ಹೆಣ್ಣುಗಳ ಮಧ್ಯೆ ಏರ್ಪಡುತ್ತದೆ ಎಂಬ ಅನುಭವಕ್ಕೆ ತದ್ವಿರುದ್ಧವಾಗಿ ಈಗ ಪ್ರೀತಿಯೆಂಬುದು, ಆಕರ್ಷಣೆ ಎಂಬುದು ರೂಪ, ಬಣ್ಣ, ವಯಸ್ಸು ಇವುಗಳ ಮೇಲೂ ಅವಲಂಬಿಸಿದೆ ಎಂದು ಅಥವಾ ಅವುಗಳ ಮೇಲೆ ಮಾತ್ರ ಅವಲಂಬಿಸಿದೆ

ಎಂದು ನಾನು ನಂಬಬೇಕು. ತಾನು ಕಪ್ಪು - ಅವಳು ಬಿಳಿಯಳು ; ನಾನೊಬ್ಬ ಅಸಂಸ್ಕೃತ ಮಡ್ಡ. ಆಸ್ಥಾನದ ಸೊಗಸುಗಾರ ಯುವಕರು ಹಾಗೂ ಉಚ್ಚವರ್ಗದ ಪುರುಷರು ಇವರುಗಳ ನಯ, ನಾಜೂಕುಗಳ ಭಾಷೆಗಳಿಗೆ ಅಪರಿಚಿತ ತಾನು. 'Chamberers' ಎಂಬ ಶಬ್ದಕ್ಕೆ ಸ್ಟೀವನ್ಸ್ ಎಂಬ ವಿಮರ್ಶಕ 'ಒಳಸಂಚು ನಡೆಸುವ ಜನ' ಎಂದೂ ಅರ್ಥ ಮಾಡುತ್ತಾನೆ. ಈ ಸಂದರ್ಭದಲ್ಲಿ ತೀರ ಅನುಚಿತವಾದ ಬಳಕೆಯೇನೂ ಆಗಲಾರದು. ತನಗೆ ಪ್ರಾಯ ಮೀರಿದೆ ಎಂದೇ ? ... ಆದರೂ ಅಷ್ಟೇನೂ ವಯಸ್ಸಾದವನಲ್ಲ ತಾನು. ಅವಳು ಯುವತಿ... ಮುಂದುವರೆಸಲಾರದೆ - ಅವಳು ತನ್ನ ಕೈ ಜಾರಿ ಹೋದಳು. ಅದಕ್ಕೂ ಹೆಚ್ಚಿಗೆ - ತಾನು ವಂಚನೆಗೆ ಈಡಾಗಿದ್ದಾಗಿದೆ. ಅವಳ ಬಗ್ಗೆ ಅಸಹ್ಯಪಟ್ಟುಕೊಳ್ಳುವುದೊಂದೇ ತನಗೆ ಉಳಿದಿರುವ ಮಾರ್ಗ. 'O curse of marriage, / that we can call these delicate creatures ours, / And not their appetites ! ಕೋಮಲ, ಲಾವಣ್ಯಗಳ ಈ ಪ್ರಾಣಿಗಳನ್ನು ನಮ್ಮದೆಂದು ಹೇಳಿಕೊಳ್ಳುತ್ತೇವೆ. ಆದರೆ ಅವರ ಕಾಮನೆಗಳು ನಮ್ಮದಲ್ಲ?... ಮದುವೆಯ ಶಾಪವಿದು.' ಮುಂದುವರೆಯುತ್ತ ಹೋದಂತೆ ಮಾತಿನಲ್ಲಿ ಹುಳಿ, ಕಹಿಗಳು ತೀವ್ರಗೊಳ್ಳುತ್ತ ಹೋಗುತ್ತವೆ. ತನ್ನ ವೈಯಕ್ತಿಕ ಸ್ಥಿತಿಯು ಸಾರ್ವತ್ರಿಕವಾಗಿ ಅನ್ವಯವಾಗುವ ಸತ್ಯಗಳು ಎಂಬಂತೆ ಮಾತನಾಡುತ್ತಾನೆ. "I had rather be a toad, / And live upon the vapour in a dungeon, / Than keep a corner in a thing I love, / For others uses." ತಾನು ಪ್ರೀತಿಸುವ ಹೆಣ್ಣನ್ನು ಬೇರೆಯವರು ಬಳಸಿ ಕೊಳ್ಳುವುದಕ್ಕೆ ಬಿಡುವುದಕ್ಕಿಂತ ಹೊಲಸು ಗಾಳಿಯುಸಿರಾಡುವ ದರಿದ್ರ ಕಾಡುಕಪ್ಪೆಯಾಗಿದ್ದೇನು. ಆದರೇನು ಮಾಡುವುದು. It is the plague of great ones, / Prerogatived are they less than the base, / It is destiny, unshunnable, like death: ಮಹಾನ್ ವ್ಯಕ್ತಿಗಳನ್ನು ಕಾಡುವ ಜಾಡ್ಯ.. ಸಾಮಾನ್ಯರಿಗಿಂತ ಹೆಚ್ಚು ನತದೃಷ್ಟರು ಅವರು. ಅದು ಅವರ ವಿಧಿ. ಅನಿವಾರ್ಯ, ಶತಸ್ಸಿದ್ಧ - ಸಾವಿನ ಹಾಗೆ. ಅಥೆಲೋನ ಮನಸ್ಸು ಎಷ್ಟು ಗೊಂದಲಗೊಂಡಿದೆ ಎಂದರೆ ಈ ಜಾಡ್ಯಕ್ಕೆ ಅಂದರೆ ಹೆಂಡಂದಿರಿಂದ ಮೋಸ ಹೋಗುವುದು - ಮಹಾನ್ ವ್ಯಕ್ತಿಗಳು ಹೇಗೆ ಹೆಚ್ಚು ಬಲಿಬೀಳುತ್ತಾರೆ ಎಂದು ಯೋಚಿಸುವುದೇ ಇಲ್ಲ. ಮುಂದುವರೆದು ಸಾವಿನ ಹಾಗೆ ಈ ದುರ್ವಿಧಿಯೂ ಕೂಡ ಎಲ್ಲರಿಗೂ ಕಟ್ಟಿಟ್ಟ ಸತ್ಯವೆ. ತಾಯ ಗರ್ಭದಲ್ಲೇ ಜಾರಪತಿತ್ವ ಅಂಟಿಕೊಂಡುಬಿಟ್ಟಿರುತ್ತದೆ. ಇಷ್ಟು ಕಹಿಯಲ್ಲಿ ಮಾತನಾಡು ವಾಗಲೂ ನೇಪಥ್ಯದಲ್ಲಿ ಡೆಸ್ಡಿಮೋನಾ ಬರುತ್ತಿರುವುದನ್ನು ನೋಡಿದ ಕೂಡಲೇ ಸಂಪೂರ್ಣ ಮೃದುವಾಗಿಬಿಡುತ್ತಾನೆ. ಮಾತಿನ ಶೈಲಿಯೇ ಬದಲಾಗಿಬಿಡುತ್ತದೆ. ಅವಳ ಮುಖಚರ್ಯೆ, ನಡಿಗೆ ಇವುಗಳನ್ನು ಗಮನಿಸಿದ ಅಥೆಲೋ 'Desdemona comes, / If she be false, O, then heaven mocks itself, / I'll not believe it. ಈ ಹುಡುಗಿ ಸುಳ್ಳಾದರೆ, ಅಪ್ರಮಾಣಿಕಳಾದರೆ ದೇವಲೋಕ ತನ್ನನ್ನೇ ತಾನು ಹಂಗಿಸಿಕೊಂಡಂತೆ. ಇಷ್ಟು ಮುಗ್ಧ ಹೆಣ್ಣು ದ್ರೋಹ ಬಗೆಯುವುದೆಂದರೇನು ? 'I'll not believe it'. ಅವಳನ್ನು ನೋಡಿ, ಅವಳ

ಮುಗ್ಧತನವನ್ನು ಗಮನಿಸಿ ಈ ಮಾತುಗಳು ಆಡುವುದೋ ಅಥವಾ ತನ್ನನ್ನು ತಾನು ನಂಬಿಸಿಕೊಳ್ಳಲಿಕ್ಕೆ ಮಾಡುತ್ತಿರುವ ಯತ್ನವೋ ? ಎರಡೂ ನಿಜವಿರಬಹುದು. ಡೆಸ್ಡಿಮೋನಾ ಪ್ರವೇಶಿಸಿದ ಮೇಲೆ ಅವರಿಬ್ಬರ ನಡುವಿನ ಅತ್ಯಂತ ಕಿರುದೃಶ್ಯ ಇದು - ಕೇವಲ ಹನ್ನೆರಡೇ ಸಾಲುಗಳು. ಭೋಜನ ಕೂಟಕ್ಕೆ ಆಹ್ವಾನಿಸಿದ್ದ ನಗರ ಪ್ರಮುಖರು ಆಗಮಿಸಿದ್ದಾರೆ. ಅಥೆಲೋನ ದಾರಿ ಕಾಯುತ್ತಿದ್ದಾರೆ ಎಂದು ಹೇಳುತ್ತಾಳೆ. 'ನನ್ನದೇ ತಪ್ಪಾಗಿದೆ' ಎಂದು ಕ್ಷೀಣ ದನಿಯಲ್ಲಿ ಉತ್ತರಿಸಿದ ಅಥೆಲೋಗೆ ಡೆಸ್ಡಿಮೋನಾ ಕಳವಳಗೊಂಡು ಯಾಕೆ ದನಿ ಇಷ್ಟು ಕುಗ್ಗಿದೆ, ಆರೋಗ್ಯ ಚೆನ್ನಾಗಿಲ್ಲವೇ ಎಂದು ಕೇಳುತ್ತಾಳೆ. ಕೊಂಚ ತಲೆನೋವು ಅನ್ನುತ್ತಾನೆ ಅಥೆಲೋ. ತನ್ನ ಕರವಸ್ತ್ರ ತೆಗೆದು ಅವನ ಹಣೆಗೆ ಕಟ್ಟಲು ಹೋದ ಹೆಂಡತಿಗೆ 'ನಿನ್ನ ಕರವಸ್ತ್ರ ತುಂಬ ಪುಟ್ಟದು, ಅದನ್ನು ಬಿಡು, ಹೋಗೋಣ ನಡೆ' ಎಂದು ಕರೆದೊಯ್ಯುತ್ತಾನೆ. ಅವನ ದೇಹಸ್ಥಿತಿ ಚೆನ್ನಾಗಿಲ್ಲದುದರ ಬಗ್ಗೆ ಡೆಸ್ಡಿಮೋನಾ ಖಿನ್ನಳಾಗಿದ್ದಾಳೆ. ಅಷ್ಟೆ. ಹನ್ನೆರಡೇ ಸಾಲು. ಅವನ ವರ್ತನೆಯಲ್ಲಿ ಬಿಗುವು ಸ್ಪಷ್ಟವಾಗಿ ಕಾಣುತ್ತದೆ. ನಿರ್ಭಾವುಕನಾಗಿ ಅವಳಿಗೆ ಉತ್ತರಗಳನ್ನು ಕೊಡುತ್ತಾನೆ. ಮತ್ತೆ ಡೆಸ್ಡಿಮೋನಾ ಎಂದಿನಂತೆ ತನ್ನ ಸರಳ ಮುಗ್ಧ ರೀತಿಗಳಲ್ಲಿ ವರ್ತಿಸುತ್ತಾಳೆ. ಆದರೆ ಈ ಪುಟ್ಟ ದೃಶ್ಯದ ಅತಿ ಮುಖ್ಯ ಅಂಶವೆಂದರೆ ಡೆಸ್ಡಿಮೋನಾ ತನ್ನ ಕರವಸ್ತ್ರವು ತನ್ನ ಕೈ ಜಾರಿ ಬಿದ್ದುದೂ ಗಮನಿಸದೆ ಹಾಗೆಯೇ ಗಂಡನ ಹಿಂದೆ, ಅವನ ಆರೋಗ್ಯದ ಆತಂಕದಲ್ಲಿ ನಡೆದುಬಿಡುವುದು. ಆ ಕರವಸ್ತ್ರ ಅವಳಿಗೆ ಎಷ್ಟು ಪ್ರಿಯವಾದದ್ದು ಎಂದು ಇನ್ನೊಂದು ಕ್ಷಣದಲ್ಲಿ ನಾವು ಎಮಿಲಿಯಾ ಬಾಯಿಂದ ಕೇಳುತ್ತೇವೆ. ಹಾಗಿದ್ದೂ 'Let it alone, come, I'll go in with you' ಎಂದು ಅಥೆಲೋ ಹೇಳಿದ ಕೂಡಲೇ ವಿಧೇಯಳಾಗಿ ಅವನನ್ನು ಅನುಸರಿಸಿ ನಡೆದುಬಿಡುತ್ತಾಳೆ. ಈ ಒಂದು ಪುಟ್ಟ ನಿದರ್ಶನದಲ್ಲಿಯೂ ಡೆಸ್ಡಿಮೋನಾಳಿಗೆ ಅಥೆಲೋನ ಬಗೆಗಿನ ತವಕ ಮಿಕ್ಕೆಲ್ಲದಕ್ಕಿಂತ ಎಷ್ಟು ಹೆಚ್ಚು ಪ್ರಮುಖವಾದುದು ಎಂಬುದನ್ನು ನಾವು ಗಮನಿಸಬಹುದು. ಈ ಒಂದು ಕರವಸ್ತ್ರವೇ ಮುಂದೆ ಭಯಾನಕ ದುರಂತದ ತಿರುವು ಪಡೆಯುತ್ತದೆಂಬುದು ನಾಟಕೀಯ ವ್ಯಂಗ್ಯವಷ್ಟೆ.

ರಂಗದ ಮೇಲೆ ಒಬ್ಬಳೇ ಉಳಿದ ಎಮಿಲಿಯಾ ಈ ಕರವಸ್ತ್ರವನ್ನು ಎತ್ತಿಕೊಳ್ಳುತ್ತಾಳೆ. ಈ ಕರವಸ್ತ್ರದ ಹಿನ್ನೆಲೆ ಅವಳಿಗೆ ಚೆನ್ನಾಗಿ ಗೊತ್ತು. ಮೂರನು ಡೆಸ್ಡಿಮೋನಾಳಿಗೆ ಕೊಟ್ಟ ಪ್ರಥಮ ಪ್ರೇಮ ಕಾಣಿಕೆ ಅದು. ಅವಳು ಇದನ್ನು ಎಷ್ಟೊಂದು ಪ್ರೀತಿಸುತ್ತಾಳೆ ಎಂದು ತನಗೆ ಗೊತ್ತು. ಎಂದೂ ಕಳೆಯಬಾರದೆಂದು ಗಂಭೀರಭಾವದಿಂದ ಕೇಳಿಕೊಂಡಿದ್ದನೆಂದೂ ತನಗೆ ಗೊತ್ತು. ಸದಾ ಕಾಲವೂ ಈ ಕಾಣಿಕೆಯನ್ನು ಅವಳು ತನ್ನ ಬಳಿಯೇ ಇಟ್ಟುಕೊಂಡಿರುತ್ತಾಳೆ - ಅದಕ್ಕೆ ಮುತ್ತಿಡುತ್ತಿರುತ್ತಾಳೆ, ಅದರೊಡನೆ ಮಾತನಾಡುತ್ತಿರುತ್ತಾಳೆ. ಅಷ್ಟೊಂದು ಆಸ್ಥೆ ಅವಳಿಗೆ. ಆದರೆ ತನ್ನ ಗಂಡ, ಅವನೊಂದು ವಕ್ರ ಎಂದು ತನಗೆ ಗೊತ್ತು, ಈ ಕರವಸ್ತ್ರವನ್ನು ಹೇಗಾದರೂ ಮಾಡಿ ಕದ್ದು ತಾ ಎಂದು ನೂರು ಬಾರಿಯಾದರೂ ತನಗೆ ದುಂಬಾಲು ಬಿದ್ದಿದ್ದಾನೆ. 'ಅವನಿಗೆ ಇದರಿಂದ ಏನು ಪ್ರಯೋಜನವೋ ಆ ದೇವರೇ ಬಲ್ಲ. ನನಗಂತೂ ತಿಳಿಯದು' ಏನೇ ಆಗಲಿ

ಈ ಕರವಸ್ತ್ರದ ನಕಲು ಒದು ತಯಾರಿಸಿ ತನ್ನ ಗಂಡನಿಗೆ ಕೊಡುತ್ತೀನಿ... ಅವನ ಹುಚ್ಚು ಖಾಯಿಷಿಗೆ ಮಾತ್ರ ತಾನು ಇದನ್ನು ಮಾಡುತ್ತಿರುವುದು, ಎಂದು ಹೇಳಿಕೊಂಡು ಮುಗಿಸುವಷ್ಟರಲ್ಲಿ ಇಯಾಗೋ ಪ್ರವೇಶವಾಗಿಬಿಡುತ್ತದೆ ; ಈ ಕ್ಷಣದಲ್ಲಿ ಎಮಿಲಿಯಾ ತಾನು ಏನು ಮಾಡಬೇಕು ಎಂದು ಯೋಚಿಸಿ ನಿರ್ಧರಿಸುವುದರಲ್ಲಿ ಅವಳ ಬಾಯಿಂದ ಮಾತು ಹೊರಬಿದ್ದುಬಿಟ್ಟಿರುತ್ತದೆ. ಇದು ಡೆಸ್ಡಿಮೋನಾಳಿಗೆ ಬಗೆದ ದ್ರೋಹವೇ ? ಇಯಾಗೋ ಬಗೆಗಿನ ಪ್ರೀತಿಯೆ ? ನಂಬಿಕೆಯೆ ? ಅಥವಾ ಇದೆಲ್ಲಕ್ಕಿಂತ ಪ್ರಮುಖವಾಗಿ 'ತಾನು ಎಷ್ಟು ಜಾಣೆ, ಹೇಗೆ ಗಂಡ ಹೇಳಿದ ಕೆಲಸ ಮಾಡಿದ್ದೇನೆ' ಎಂದು ಪ್ರದರ್ಶಿಸುವ ಅತ್ಯುತ್ಸಾಹವೆ ? ಖಂಡಿತ ಮೊದಲನೆಯ ಕಾರಣವಲ್ಲ. ಬಹುಶಃ ಮೂರನೆಯದೇ ಹೆಚ್ಚು ವಿಶ್ವಸನೀಯ ಕಾರಣ. ಮತ್ತೆ ಗಂಡನ ಬಗ್ಗೆ ನಂಬಿಕೆಯೂ ಒಂದ ಕಾರಣ. ಹೌದೇ ಹೌದು. ಎಮಿಲಿಯಾ ವಿಷಯ ಒತ್ತಟ್ಟಿಗಿಟ್ಟು, ಇಯಾಗೋವಿಗೆ ಅನಿರೀಕ್ಷಿತವಾಗಿ ಖುಲಾಯಿಸಿದ ಈ ಅದೃಷ್ಟಕ್ಕೆ ಅವನನ್ನು 'ಅಭಿನಂದಿಸಲೇ' ಬೇಕು. ಹಿಂದೆ ನಾವೇ ಗಮನಿಸಿದ ಹಾಗೆ ಅಥೆಲೋ ಮತ್ತು ತಾನು ದೃಶ್ಯ ಪ್ರವೇಶ ಮಾಡಿದ ಕೂಡಲೇ ನುಸುಳಿಹೋದ ಕ್ಯಾಷಿಯೋ ಒಂದು ಮಹದುಪಕಾರ ಮಾಡಿದ ಹಾಗೆ. ಈಗ ಎಮಿಲಿಯಾ ಈ ಕರವಸ್ತ್ರದ ನಕಲು ಮಾಡಿಸಬೇಕು ಎಂದು ಯೋಚಿಸುತ್ತಿರುವ ಕ್ಷಣದಲ್ಲಿಯೇ ಆಕೆಯನ್ನು ತಾನು ಹಠಾತ್ ಭೆಟ್ಟಿಯಾದುದು, ಇವುಗಳನ್ನು ನೋಡಿದಾಗ ವಿಧಿ ಸಂಪೂರ್ಣ ತನ್ನ ಕಡೆಗೇ ಇದೆ ಎಂದು ಎದೆ ಉಬ್ಬಿರಬೇಕು ಅವನಿಗೆ. ಹೀಗಿದ್ದೂ ಕರವಸ್ತ್ರವನ್ನು ಅವನಿಗೆ ಕೊಡುವುದಕ್ಕೆ ಮುಂಚೆ ತಾನು ಅವಸರಮಾಡಿಬಿಟ್ಟೆನೋ ಏನೋ ಎಂಬ ಅನುಮಾನ ಇದ್ದಕ್ಕಿದ್ದಂತೆ ಕಾಡಿದಂತಾಗಿ 'What will you do with it....' ....poor lady, she'll run mad / when she shall lack it' ಎಂದು ಹೇಳಿ 'ನನಗೆ ಹಿಂತಿರುಗಿಸಿ ಬಿಡು' ಎಂದು ಕೇಳಿಕೊಳ್ಳುತ್ತಾಳೆ. 'ನಿನಗೆ ಯಾಕೆ ಬೇಕು ? ನನಗದರಿಂದ ಪ್ರಯೋಜನವಿದೆ, ನೀನೀಗ ಹೊರಡು' ಎಂದು ಅವಳನ್ನು ಕಳಿಸಿ ಬಿಡುತ್ತಾನೆ. ಅವನ ಆನಂದಪರವಶತೆಗೆ ಎಣೆಯೇ ಇಲ್ಲ ಈಗ. ಯೋಜನೆ ಸಿದ್ಧವೂ ಆಗಿದೆ. ಈ ಕರವಸ್ತ್ರವನ್ನು ಕ್ಯಾಷಿಯೋ ನಿವಾಸದಲ್ಲಿ ಬಿಟ್ಟುಬರಬೇಕು. ಅವನಿಗೆ ಅದು ಸಿಕ್ಕುವಂತೆ ಮಾಡಬೇಕು. ಗಾಳಿಯಂತೆ ಹಗುರಾದ ಪುರಾವೆಗಳೂ ಧರ್ಮಗ್ರಂಥಗಳಲ್ಲಿ ಉಕ್ತವಾದ ಸೂಕ್ತಿಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗಿಬಿಡುತ್ತದೆ. ಇದರಿಂದ ಸಾಕಷ್ಟು ಸಾಧಿಸಬಹುದು. ಇಯಾಗೋಗೆ ಈಗಾಗಲೇ ಖಂಡಿತವಾದಂತೆ ಮೂರನು ತನ್ನ ವಿಷಕ್ಕೆ ಕ್ರಮೇಣ ಬಲಿಯಾಗುತ್ತಿದ್ದಾನೆ. ವಿಷದ ಲಕ್ಷಣವೇ ಹಾಗೆ. ಮೊದಮೊದಲು ಹಾನಿಕರವೇ ಅಲ್ಲವೆಂದು ತೋರುವುದು. ಕ್ರಮೇಣ ಗಂಧಕದ ಬಂಡಾರವೇ ಉರಿಯುವ ಹಾಗೆ ಮೈಯಾದ್ಯಂತ ಹಬ್ಬಿಬಿಡುತ್ತದೆ. ಹೀಗೆ ಹೇಳುತ್ತಿರುವಂತೆಯೇ ಪ್ರವೇಶಿಸುತ್ತಿರುವ ಅಥೆಲೋನನ್ನು ನೋಡಿ 'ನಾನು ಹೇಳಲಿಲ್ಲವೆ ? ಹೇಗೆ ಬರುತ್ತಿದ್ದಾನೆ ನೋಡಿ... not poppy, nor mandragora, / Nor all the drowsy syrups of the world, / shall ever medicine thee to that sweet sleep / Which thou owedst

yesterday ಎಂದು ಬೀಗುತ್ತಾನೆ. ಅವನ ಸಂಭ್ರಮ ಎಷ್ಟು ಉತ್ಕಟವೆಂದರೆ ಅವನ ಬಾಯಿಂದ ಒಂದಷ್ಟು ಕಾವ್ಯವೂ ಹೊಮ್ಮಿಬಿಡುತ್ತದೆ. 'ಜಗತ್ತಿನ ಯಾವ ಪ್ರಬಲ ನಿದ್ರಾಜನಕವಸ್ತುವೂ ನಿನಗೆ ಮತ್ತೆ ನಿನ್ನ ನೆನ್ನೆಯ ಸವಿನಿದ್ರೆಯನ್ನು ತರಲಾರದು.' ಆದರೆ ತನ್ನ ಎಣಿಕೆಯಲ್ಲಿ ಭಾರಿ ತಪ್ಪಿದೆ ಎಂದು ಕ್ಷಣದಲ್ಲಿ ಕಂಡುಬಿಡುತ್ತದೆ. ಒಂದಷ್ಟು ಆಘಾತವನ್ನೇ ಅನುಭವಿಸಿಬಿಡುತ್ತಾನೆ. ಅಥೆಲೋ ವ್ಯಗ್ರನಾಗಿದ್ದಾನೆ. ಆದರೆ ಇಯಾಗೋ ಭಾವಿಸಿದ ಹಾಗೆ ಅದು ಡೆಸ್ಡಿಮೋನಾಳನ್ನು ಉದ್ದಶಿಸಿ ಅಲ್ಲ, ತನ್ನನ್ನೇ ಕುರಿತಾದದ್ದು ಎಂದು ತಿಳಿದು ಕೊಂಚ ಗಲಿಬಿಲಿಗೊಳ್ಳುತ್ತಾನೆ. ಅಥೆಲೋ ಬಂದವನೆ 'Ha, Ha, false to me, to me ?' ಎಂದು ಚೀರುತ್ತಾನೆ. 'to me....' ಅನಂತರದ ಎರಡನೇ 'to me' ಮತ್ತೂ ಅರ್ಥಪೂರ್ಣವಾಗುತ್ತದೆ. ಪ್ರೀತಿಸಿದ ನನಗೆ, ಅವಳೇ ಪ್ರೀತಿಸಿದ ನನ್ನನ್ನು, ಎರಡೂ ಅರ್ಥಗಳಿವೆ ಇಲ್ಲಿ, ನನಗೆ ದ್ರೋಹಬಗೆಯುತ್ತಾಳೆಯೆ ? ನನ್ನನ್ನು ಮೋಸಗೊಳಿಸುತ್ತಾಳೆಯೆ ?... ಸಿಟ್ಟು, ಉದ್ರೇಕಗಳು ತಾರಕವನ್ನು ಮುಟ್ಟಿವೆ. ಇಯಾಗೋ 'ಬಿಡು, ಬಿಡು, ಆ ಮಾತು ಮತ್ತೆ ಯಾಕೆ' ಎಂದು ಉಸಿರುತ್ತಿದ್ದಂತೆಯೇ ರೋಷಾವಿಷ್ಟ ಅಥೆಲೋ 'ತೊಲಗಿ ಹೋಗು, ಹಾಳಾಗಿ ಹೋಗು ; ಚಿತ್ರಹಿಂಸೆಯ ಚೌಕಟ್ಟಿನಲ್ಲಿ ನನ್ನನ್ನು ಬಂಧಿಸಿದ್ದಿ... ಅರೆಬರೆ ತಿಳಿಯುವುದಕ್ಕಿಂತ ತಿಳಿಯದೇ ಸಂಪೂರ್ಣ ಮಾನಹಾನಿಗೀಡಾಗುವುದು ಲೇಸು' ಎಂದು ಅಬ್ಬರಿಸುತ್ತಾನೆ. 'ಏನಾಯಿತು, ಏನಾಯಿತು' ಎಂದು ಕೇಳುತ್ತಿರುವ ಇಯಾಗೋನನ್ನು ಸಂಪೂರ್ಣ ನಿರ್ಲಕ್ಷಿಸಿದಂತೆಯೇ ಅಥೆಲೋ ತನ್ನ ಆಳದ ನರಳಾಟದ ಸ್ವರೂಪವನ್ನು ತಾನೇ ಅರ್ಥಮಾಡಿಕೊಳ್ಳುವ ಯತ್ನದಲ್ಲಿ ಮಗ್ನನಾದಂತೆ ಮಾತನಾಡುತ್ತಾನೆ. ಇದು ನಾಟಕದ ಉನ್ನತ ಗಳಿಗೆ ಎಂಬುದು ಎಷ್ಟು ಸತ್ಯವೋ ಅಷ್ಟೇ ಸತ್ಯ ಅಥೆಲೋ ಪಾತ್ರದ ವಿಕಾಸದಲ್ಲಿ ಒಂದು ಮಹತ್ವ ಗಳಿಗೆ ಎಂಬುದು ಕೂಡ. ಒಂದು ಅರ್ಥದಲ್ಲಿ ಅಥೆಲೋ ತಾನು ಎದುರಿಸುತ್ತಿರುವ ಸಂಘರ್ಷದ ಲಕ್ಷಣವನ್ನೂ ವಿವರಿಸುತ್ತಿದ್ದಾನೆ. ಡೆಸ್ಡಿಮೋನಾಳೊಂದಿಗೆ ಕೆಲವೇ ಹೊತ್ತು ಕಳೆದುಬಂದಿದ್ದಾನೆ. ಭೋಜನ ಕೂಟ, ಬಹುಶಃ ನಂತರದ ಕೆಲವೇ ಕ್ಷಣಗಳ ಏಕಾಂತ. ಕೆಂಡವಾಗಿ ಉರಿಯುತ್ತಿದ್ದ ತನ್ನ ಮೈಮನಸ್ಸುಗಳಿಗೆ ಡೆಸ್ಡಿಮೋನಾ ತಂಗಾಳಿಯಾಗಿ ಕಂಡಿದ್ದಾಳೆ. ಸ್ವಚ್ಛ, ಶುಭ್ರ, ಮುಗ್ಧರೀತಿಯ ಅನುಭವ ಅದು. ಇಂಥ ಅನುಭವಕ್ಕೆ ಹಿನ್ನೆಲೆಯಲ್ಲಿ ಇಯಾಗೋನ ಎಲ್ಲ ಯತ್ನಗಳಿದ್ದೂ ಅಥೆಲೋ ಇನ್ನೂ ಕೂಡ ತೆರೆದ ಮನಸ್ಸಿನವನಾಗಿದ್ದನೆಂದರೆ, ಈ ತಂಗಾಳಿಯನ್ನು ಮುಕ್ತವಾಗಿ ತನ್ನ ಮೇಲೆ ಆಡಲು ಅಡಚಣೆ ಒಡ್ಡಿಲ್ಲ ಎಂದರೆ - ಒಂದೇ ತೀರ್ಮಾನ ಸಾಧ್ಯ : ಅಥೆಲೋ ತನ್ನ ಹೃದಯವನ್ನು ಭ್ರಷ್ಟಗೊಳಿಸಿಕೊಂಡಿಲ್ಲ, ಅಥವಾ ಇಯಾಗೋ ಕಿವಿಗೆ ಸುರಿದ ವಿಷ ಮಿದುಳನ್ನು ತಾಗಿದೆಯೇ ವಿನಾ ಹೃದಯವನ್ನು ಇನ್ನೂ ತಾಗಲಾಗಿಲ್ಲ ಎಂದು. ಎರಡನೇ ಅಂಕದಲ್ಲಿ ಚಂಡಮಾರುತ ಮತ್ತು ಹುಚ್ಚೆದ್ದ ಸಮುದ್ರದ ಅಲೆಗಳಿಗೆ ಸಿಲುಕಿ ಜೀವಾಪಾಯದ ಕ್ಷಣಗಳೆಲ್ಲವನ್ನೂ ಗೆದ್ದು ಬಂದು ಡೆಸ್ಡಿಮೋನಾಳನ್ನು ಕಂಡ ಕೂಡಲೇ ಅವನು ಆಡಿದ ಮಾತುಗಳನ್ನು ನಾವು ಮತ್ತೆ ನೆನಪು ಮಾಡಿಕೊಳ್ಳಬೇಕು.

....O my sou's joy
If after every tempest come such calmness,
May the winds blow, till they have wakened death,
And let the labouring bark climb hills of seas
Olympus high, and duck again as low
As hell is from heaven....

ಇಲ್ಲಿಯೂ ಅಷ್ಟೆ... ಇಯಾಗೋನಂಥವರು ಎಷ್ಟೇ ಚಂಡಮಾರುತವನ್ನು ಮನಸ್ಸಿನಲ್ಲಿ ಸೃಷ್ಟಿಸಲಿ, ಎಷ್ಟೇ ರೋಷಾವಿಷ್ಟವಾದ ಭಾವಗಳನ್ನು ಅಪ್ಪಳಿಸಲಿ ಡೆಸ್ಡಿಮೋನಾಳ ಜೊತೆ ಕಳೆಯುವ ಗಳಿಗೆಗಳು... 'my souls joy' ಮತ್ತು ಅಂಥ ಕ್ಷಣಗಳಲ್ಲಿ 'my soul hath her content so absolute'... ಇಲ್ಲಿ ಇರುವ ಸಂಘರ್ಷವೇ ಇದು : ಹೃದಯ ಮತ್ತು ಮಿದುಳು, ಕಾಣ್ಕೆ ಮತ್ತು ನಿಜ ಇವುಗಳ ಮಧ್ಯದ ಸಂಘರ್ಷ. ಹೃದಯಕ್ಕೆ ಅನುಭವವಾಗಿದ್ದನ್ನು ಹೇಗೆ ನಿರಾಕರಿಸುವುದು...

'What sense had I of her stolen hours of lust ? / I saw it not, thought it not, it harmed not me, / I slept the next night well, was free and merry / ...." ಹೀಗಿರುವಾಗ ತನಗೆ ದ್ರೋಹಬಗೆದಿದ್ದಾಳೆ ಎಂದು ನಂಬುವುದು ಹೇಗೆ ? ಏನು ಕಳುವಾಗಿದೆ ಎಂದೇ ಗೊತ್ತಿಲ್ಲದವನು ಕಳೆದುಕೊಂಡಿದ್ದೇನೆಂದು ಹಲುಬಬೇಕು ಯಾಕೆ ? ಅಥವಾ ಇನ್ನೊಂದು ರೀತಿ ನೋಡಿದಾಗ ಇದು ಆತ್ಮಮರುಕದ ಮತ್ತೊಂದು ರೂಪವೇ ? ಇಲ್ಲ – ಇಡೀ ಸಂದರ್ಭಕ್ಕೆ ತಾರ್ಕಿಕ ವಿವರಣೆ ನೀಡುವುದರ ಮೂಲಕ ವಿಚಿತ್ರ ಸಮಾಧಾನ ತಂದುಕೊಳ್ಳುವ ರೀತಿಯೇ ? ನಿರ್ಣಯಿಸುವುದಕ್ಕೆ ಮುಂಚೆ ಮುಂದಿನ ಭಾಗವನ್ನು ನೋಡೋಣ. ಅದಕ್ಕೂ ಮುಂಚೆ ಇಯಾಗೋನ 'I am sorry to hear this' ಮಾತಿದೆ. 'ನೀನು ಹೀಗೆ ಮಾತನಾಡುವುದು ನನಗೆ ದುಃಖ ತರುತ್ತದೆ' ಎಂದು ಅರ್ಥವೇ ? ಅಂದರೆ ಇಷ್ಟು ಹೇಳಿದ ಮೇಲೂ ನಿನಗೆ ತಿಳಿಯಲಿಲ್ಲವೆಂದರೆ ವಿಷಾದಪಡಬೇಕು ಎಂದೆ ? ಅಥವಾ ನಿನ್ನ ಮನಸ್ಸಿಗೆ ಇಷ್ಟು ಬೇಸರವಾಗಿರುವುದು ಕೇಳಿ ದುಃಖವಾಗುತ್ತಿದೆಯೆಂದೆ ? ಕೇವಲ 'I am sorry' ಅಂದುಬಿಟ್ಟಿದ್ದರೆ ಸರಳವಾಗಿ ಅರ್ಥಮಾಡಬಹುದಿತ್ತು. ಆದರೆ ಇಯಾಗೋ ಎಂದೂ ಸರಳ ಅಲ್ಲ. ಅವನ ಕೆಲವು ಮಾತುಗಳಿಗೆ ಹೇಗೂ ಅರ್ಥಮಾಡಬಹುದು ಅಥವಾ ಅರ್ಥಮಾಡಲಿಕ್ಕಾಗದೇ ಹೋಗಬಹುದು. ಅಥೆಲೋನ ಮುಂದಿನ ಹದಿಮೂರು ಸಾಲುಗಳು ಮಹಾನ್ ಕಲ್ಪನಾತ್ಮಕ ಕಾವ್ಯಭಾಗ. ಹಿಂದಿನ ಆರುಸಾಲುಗಳಿಗಿಂತ ಮತ್ತೂ ಸ್ವಗತಾತ್ಮಕವಾಗಿ ತೋರುವ ಭಾಗ.

'I had been happy if the general camp,
Pioners, and all, had tasted her sweet body,
So I had nothing known ;

ಅಥೆಲೋ ಒಳಗೆ ಎಂಥ ಹಿಂಸೆಯಲ್ಲಿ ತೊಳಲುತ್ತಿರಬೇಕು ಎಂಬುದು ಈ ಸಾಲುಗಳಲ್ಲಿ ಸ್ಪಷ್ಟವಾಗುತ್ತದೆ. 'ನನ್ನ ಸೈನ್ಯದ ತುಕಡಿಗಳು, ಕೊನೆಗೆ ಶಿಕ್ಷೆಗೆ ಒಳಗಾದ ಸಾಧಾರಣ ಸೈನಿಕನಿಗೂ ಕೀಳುದರ್ಜೆಯಲ್ಲಿರುವವರೂ ಕೂಡ ನನ್ನ ಅರಿವಿಗೆ ಬಾರದಂತೆ ಅವಳ ಸುಂದರ ದೇಹದ ಸುಖ ಅನುಭವಿಸಿದ್ದರೂ ನಾನು ಯೋಚನೆಮಾಡುತ್ತಿರಲಿಲ್ಲ... ಇದು ಗೊತ್ತಾಗದಿರುವವರೆಗೆ ನಾನು 'was free and merry' 'ಕ್ಯಾಷಿಯೋ ಅವಳಿಗಿತ್ತ ಮುತ್ತುಗಳನ್ನು ನಾನು ಕಾಣಲಿಲ್ಲ... ಕ್ಯಾಷಿಯೋ ಅಷ್ಟೇ ಅಲ್ಲ... ಎಲ್ಲರೂ, ಯಾರಾದರೂ ಅವಳನ್ನು ಭೋಗಿಸಿರಬಹುದು. ಆದರೆ ನನಗೇನು ಅರಿವಿತ್ತು? 'I saw it not, thought it not, it harmed not me' .... ಆದರೆ ಈಗ,

O now for ever
farewell the tranquil mind, farewell content....

ಅವನು ಬಳಸುವ ಶಬ್ದಗಳು – 'tranquil mind', 'content'. ಅಕ್ಷುಬ್ಧ, ಪ್ರಶಾಂತ ಸ್ಥಿತಿ ಹಾಗೂ ಸಂತುಷ್ಟ ಮನಸ್ಸು ಇವಕ್ಕೆಲ್ಲ ಈಗ ವಿದಾಯ. ನೆಲದಿಂದ ಆಕಾಶದವರೆವಿಗೆ ಜಿಗಿಯುವ ಸಮುದ್ರದ ಅಲೆಗಳ ಮೇಲೆ ನಾವೆ ಚಲಿಸಬೇಕಾದ ದುರ್ದೈವ ಸ್ಥಿತಿ ತನ್ನದು. ಇನ್ನು ಮುಂದೆ ತೀರ ತಲುಪಿದರೆ ಮನಸ್ಸಿಗೆ ಹರ್ಷದ ಚಿಲುಮೆ ಹರಿಸುವ ಪ್ರೀತಿಯ ಮುಖವಿಲ್ಲ...

Farewell the plumed troop, and the big wars,
That makes ambitioin virtue : O farewell,
Farewell the neighing steed, and the shrill trump,
The spirit - stirring drum, the ear-piercing fife ;
The royal banner, and all quality,
Pride, pomp and circumstance of glorious war !
And, O ye mortal engines, whose wide throats
The immortal Jove's great clamour counterfeit ;
Farewell, Othello's occupation is gone !

ಈ ಒಂಬತ್ತು ಸಾಲುಗಳಲ್ಲಿಯೂ ಯುದ್ಧದ ಪ್ರತಿಮೆಗಳು ತುಂಬಿಬಿಟ್ಟಿವೆ. ನಮಗೆ ಚೆನ್ನಾಗಿ ನೆನಪಿದೆ - ಮೊದಲ ಅಂಕದ ಮೂರನೇ ದೃಶ್ಯದಲ್ಲಿ ಅಥೆಲೋ ತನ್ನ ಮತ್ತು ಡೆಸ್ಡಿಮೋನಾಳ ಮಧ್ಯೆ ಪ್ರೀತಿ ಅಂಕುರಿಸಿದ ಬಗೆಯನ್ನು ವಿವರಿಸುವಾಗ ಬಳಸಿದ್ದೂ ಕೂಡ ಶೌರ್ಯ, ಸಾಹಸ,

ಸಮರ, ಭಯಾನಕ ಕ್ಷಣಗಳ ವಿವರ – ಇವುಗಳನ್ನು ಕುರಿತಾದ ಮಾತುಗಳೇ. ಅಲ್ಲಿ ಕಂಡದ್ದು ಒಂದು ಆತ್ಮತೃಪ್ತ ಸ್ಥಿತಿ, ಭೌತಿಕ ಜಗತ್ತಿನೊಡನೆ ತನ್ನ ಜೀವನಾದ್ಯಂತ ನಡೆಸಿದ ಮುಖಾಮುಖಿಗಳ ಮತ್ತು ಏರ್ಪಟ್ಟ ಹಣಾಹಣಿಗಳ ಕುರಿತಾದದ್ದು. ಆದರೆ ಮೇಲಿನ ಉದ್ಧೃತ ಭಾಗದ ವೇಳೆಗೆ ಈ ಭೌತಿಕ ಜಗತ್ತಿನಿಂದಲೂ ತಾನು ಉಚ್ಚಾಟಿತನಾದ ಭಾವ ಆಳೆತ್ತರ ತನ್ನೆದುರೇ ನಿಂತು ತನ್ನ ಅಸ್ತಿತ್ವವನ್ನೇ ಬುಡಮೇಲುಮಾಡುತ್ತಿದೆ. 'Othello's occupation is gone' ... ಅಥೆಲೋ ಈಗೊಂದು ದೊಡ್ಡ ಸೊನ್ನೆ ; ಸೈನಿಕನಾಗಿ, ದಂಡನಾಯಕನಾಗಿ, ಯುದ್ಧರಂಗದಲ್ಲಿ ವೀರಾಗ್ರಣಿಯಾಗಿ ತನ್ನ ಹಿರಿಮೆ, ಮಹತ್ವಾಕಾಂಕ್ಷೆ, ಯಶಸ್ಸು ಇವುಗಳಿಂದೆಲ್ಲ ಗಳಿಸಿದ ಘನತೆ ಗೌರವ ಎಲ್ಲಕ್ಕೂ ಇನ್ನು ತಿಲಾಂಜಲಿಯಿಟ್ಟಂತೆಯೇ. ಇಯಾಗೋ ಸುರುವಿದ ವಿಷ, ಡೆಸ್ಡಿಮೋನಾಳೊಂದಿಗೆ ಕಳೆಯುವ ಅಮೃತಗಳಿಗೆ ಇವುಗಳೆರಡರಲ್ಲಿ ಯಾವುದು ಸತ್ಯ ? ಯಾವುದು ಸುಳ್ಳು ? ಸಂಘರ್ಷ ಹೀಗೆ ತನ್ನನ್ನು ಕ್ರಮೇಣ ವಿಷಾನಿಲದ ಹಾಗೆ ಸುತ್ತುವರಿದು ಉಸಿರುಕಟ್ಟಿಸುತ್ತಿದೆಯೆಂಬುದಂತೂ ತಾನು ಗಟ್ಟಿಯಾಗಿ ಅನುಭವಿಸುತ್ತಿರುವುದು ನಿಜ ... ಈ ಇಡೀ ಭಾಗ ತನ್ನ ತೀವ್ರತೆಯಿಂದ, ಗಾಢತೆ ಹಾಗೂ ಅತ್ಯಾಕರ್ಷಕ ಗಂಭೀರದಿಂದ ಸಮುದ್ರದ ಅಲೆಗಳ ಹಾಗೆ ನಮ್ಮಲ್ಲಿ ಭೋರ್ಗರೆದುಬಿಡುತ್ತದೆ.

ಈ ಅನಿರೀಕ್ಷಿತದಿಂದ ಇಯಾಗೋ ಕೂಡ ಕೊಂಚ ಅಸ್ಥಿರನಾಗಿರುವುದು ಖಂಡಿತ... 'Is it possible, my lord ?' ...ದುರ್ಬಲನಾಗಿ ಗೊಣಗುತ್ತಾನೆ. ಅವನ ದನಿಯೇ ಮೈಯೆಲ್ಲ ಪರಚಿದಂತಾಗಿ ಅವನನ್ನು ಕೊಂದೇಬಿಡುವವನಂತೆ ಅವನ ಮೇಲೆ ನುಗ್ಗಿ ಚೀತ್ಕರಿಸುತ್ತಾನೆ. ಅಥೆಲೋ

> Villain, be sure thou sprove my love a whore,
> Be sure of it, give me the ocular proof....

ಪ್ರಾಮಾಣಿಕ, ನೇರನುಡಿಯ ಸ್ನೇಹಿತ, ಹಿತೈಷಿ ಎಲ್ಲವೂ ಆಗಿದ್ದ ಇಯಾಗೋ ಈಗ ಕೇವಲ 'ದುಷ್ಟ', 'ದುರುಳ'. 'ನನ್ನ ಹೆಂಡತಿ ಹಾದರಗಿತ್ತಿ ಎಂಬುದನ್ನು ಕಣ್ಣಾರೆ ನೋಡಿ ನಾನು ನಂಬಬೇಕು ಅಂಥ ಪುರಾವೆ ಕೊಡು... 'ocular proof' ಇಷ್ಟುಹೊತ್ತೂ ಕ್ಷುದ್ರ ಮಾತುಗಳನ್ನು ಆಲಿಸಿಯಾಗಿದೆ. 'ಈಗ ಪುರಾವೆ ನೀಡು. ಇಲ್ಲವಾದರೆ ....by the worth of man's eternal soul / Thou hads't been better have been born a dog, / Than answer my wak'd wrath.' ಅಥೆಲೋನ ಆಕ್ರೋಶ ಮುಗಿಲು ಮುಟ್ಟಿದೆ. 'ಇದು ಇಲ್ಲಿಗೆ ಬಂತೆ' ಎಂದು ಅಚ್ಚರಿಪಡುವಂತೆ ಕಂಡ ಇಯಾಗೋವಿಗೆ 'Make me to see it....' ಅಥವಾ ಒಂದು ಎಳ್ಳಷ್ಟೂ ಅನುಮಾನ ಬಾರದ ರೀತಿ ನೀನು ಆಡುವ ಮಾತುಗಳು ಸತ್ಯ ಎಂದು ಸಾಧಿಸಿ ತೋರಿಸು... ಇಲ್ಲವಾದರೆ ನಿನ್ನ ವಿನಾಶ ಕಾದಿದೆ ಎಂದು ತಿಳಿ...' ಮತ್ತೆ ಇಯಾಗೋ ತನಗೆ ಮಾತಾಡಲು ಅವಕಾಶ ಬೇಡುವವನಂತೆ 'My noble lord....' ಎಂದು ಹೇಳುವಷ್ಟರಲ್ಲಿ

ಅಥೆಲೋ ಅವನ ಬಾಯಿ ಮುಚ್ಚಿಸಿ ಅಬ್ಬರಿಸುತ್ತಾನೆ. 'If thou dost slander her, and torture me / Never pray more, abandon all remorse / ದೇವತೆಗಳೇ ಕಣ್ಣೀರು ಸುರಿಸಬೇಕು – ಅಂಥ ನೀಚ ಕುಟಿಲೋಪಾಯಗಳಲ್ಲಿ ಮನುಷ್ಯ ತೊಡಗುತ್ತಾನೆ. ಇನ್ನೂ ಈಗಾಗಲೇ ಮಾಡಿರುವುದಕ್ಕಿಂತ ಮತ್ತೂ ಹೆಚ್ಚಿಗೆ ಹೊಲಸು ಕೃತ್ಯಗಳನ್ನು ನೀನು ಮಾಡಲು ಸಾಧ್ಯವಿಲ್ಲ.' ಅಪರಾಧವೆಸಗಿದ ಸೈನಿಕನನ್ನು ದಂಡಿಸುವ ಸೇನಾದಂಡನಾಯಕನಂತೆ, ಸೈಪ್ರಸ್ ನಗರದ ಅಧಿಪತಿಯಂತೆ, ಎಂದೂ ಶತ್ರುಸೈನ್ಯಗಳೆದುರು ನಿಂತು ಸೋಲೇ ಕಂಡರಿಯದ ವೀರಪುರುಷನಂತೆ ಆಡಿದ ಮಾತುಗಳು. ಸಾತ್ವಿಕ ರೋಷದ ಮಾತುಗಳು... ಆದರೆ ಇಯಾಗೋವಿಗೆ ಇನ್ನು ಕೇಳಿ ಸಹಿಸುವುದು ಸಾಧ್ಯವಿಲ್ಲ. ಈ ಹೀಯಾಳಿಕೆ, ಬೆದರಿಕೆಗಳನ್ನು ಸಾಕಷ್ಟು ಸಹಿಸಿಯಾಯಿತು. ಈ ದಂಡನಾಯಕನನ್ನು , ಈ ವೀರಾವೇಶದ ಗೌರವಾನ್ವಿತ ಅಧಿಕಾರಿಯನ್ನು ಎದುರಿಸುವುದಕ್ಕೆ ಬೇರೆಯೇ ತಂತ್ರಗಳು ಅವಶ್ಯ. ಆಕ್ರಮಣವೇ ಅತ್ಯಂತ ಪರಿಣಾಮಕಾರಿ ಆತ್ಮರಕ್ಷಣಮಾರ್ಗ. ಅಥೆಲೋ ಕ್ರೂರವಾಗಿ ಮಾತನಾಡಬಲ್ಲೆನೆಂದು ಭಾವಿಸಿದ್ದರೆ ಕ್ರೂರವಾಗಿ ತಾನೂ ಮಾತಾನಾಡಬಲ್ಲೆನೆಂಬ ವಿಶ್ವಾಸ ಇಯಾಗೋವಿಗೆ ಇದೆ.

O grace, O heaven defend me !
Are you a man, have you a soul or sence ?
God buy you, take mine office....

ನೀನೇನು ಮನುಷ್ಯನೆ ? ನಿನಗೆ ಬುದ್ಧಿ ಹೃದಯಗಳಿವೆಯೆ?... ನನ್ನ ಸ್ಥಾನಕ್ಕೆ ಈಗಿಂದೀಗಲೇ ರಾಜೀನಾಮೆ ನೀಡುತ್ತಿದ್ದೇನೆ.... 'office' ಶಬ್ದ ಎರಡು ಅರ್ಥದಲ್ಲಿಯೂ ಬಳಸಬಹುದು. ಒಂದು ಅಧಿಕೃತರಾಗಿ ಗೊತ್ತಾಗಿರುವ ತನ್ನ ಧ್ವಜಧಾರಿಯ ಸ್ಥಾನ ; ಮತ್ತೊಂದು ಅಥೆಲೋವಿನೊಡನೆ ಇರುವ ತನ್ನ ಸ್ನೇಹದ ಸ್ಥಾನ 'ದೇವರು ಕಾಪಾಡಲಿ ನಿನ್ನನ್ನು..' ಎಂದು ಇಂಥ ಪ್ರಾಮಾಣಿಕ ಸೇವೆ ಸಲ್ಲಿಸಲು ಹೋದ ತನ್ನನ್ನು ತಾನು ಹಳಿದುಕೊಳ್ಳಬೇಕು ಅಷ್ಟೆ ಅನ್ನುವಂತೆ ಮಾತನಾಡಲು – ಒಂದು ಬಗೆ ಅವನದೂ ಸ್ವಗತವೇ ಅನ್ನಬಹುದಾದ ರೀತಿಯಲ್ಲಿ – ಆರಂಭಿಸುತ್ತಾನೆ.

O wretched fool,
That livest to make thine honesty a vice !
O monstrous world, take note, take note, O world
To be direct and honest, is not safe....

ಪ್ರಾಮಾಣಿಕತೆಯನ್ನೇ ತನ್ನ ದೋಷವನ್ನಾಗಿ ಮಾಡಿಕೊಂಡ ದಡ್ಡ ನಾನು. ನೇರ ನುಡಿಗಳು, ಪ್ರಾಮಾಣಿಕತೆ ಈ ಜಗತ್ತಿನಲ್ಲಿ ಕ್ಷೇಮಕರಗುಣಗಳಲ್ಲ. 'take note, take note, O world....' ವೇಷದಿಂದ ವೇಷಕ್ಕೆ ಕ್ಷಣಾರ್ಧದಲ್ಲಿ ಬದಲಾಗುವ ಪ್ರತಿಭೆಯಿರುವ

ಇಯಾಗೋವಿಗೆ ಹೀಗೆ ಆತ್ಮಮರುಕದಲ್ಲಿ ಉಳಿಡುವುದೇನು ಬಹು ದೊಡ್ಡ ಸವಾಲಲ್ಲ. ಈ ಪಾಠ ತನಗೆ ಕಲಿಸಿ ಕೊಟ್ಟದ್ದಕ್ಕಾಗಿ ಅಥೆಲೋನಿಗೆ ಕೃತಜ್ಞತೆ ಹೇಳುತ್ತಾನೆ. '.... and from hence / I'll love no friend, since love breeds such offence'.... ಸ್ನೇಹ ಮಾಡುವ ಗೊಡವೇ ಇನ್ನು ತನಗೆ ಬೇಡ ಎಂದು ಹೊರಟವನನ್ನು ಅಥೆಲೋ ಹಿಡಿದು ನಿಲ್ಲಿಸುತ್ತಾನೆ. 'ಇರು, ಇರು, ನೀನು ಪ್ರಾಮಾಣಿಕನಾಗಿರಲೇಬೇಕು' 'ಪ್ರಾಮಾಣಿಕ ಇಂಥ ಮೂರ್ಖ, ತಾನು ಸೇವೆಸಲ್ಲಿಸಿದವನನ್ನೇ ಕಳೆದುಕೊಳ್ಳುತ್ತಾನೆ ಎಂದಾದಮೇಲೆ ತಾನು ಇನ್ನಾದರೂ ವಿವೇಕಸ್ಥನಾಗಬೇಕು' ಎಂದು ಮತ್ತೂ ತನ್ನ ಮನಸ್ಸಿನಲ್ಲಿಯೇ ಮುಂದುವರೆಯುತ್ತಾನೆ. ಅಥೆಲೋನಿಗೆ ತನ್ನ ಸಂದಿಗ್ಧ ತನ್ನೆದುರು ಮೈದಾಳಿ ನಿಂತಷ್ಟು ಸ್ಪಷ್ಟವಾಗಿ ಕಾಣುತ್ತದೆ. ಸದ್ಯದ ತನ್ನ ಸಂದಿಗ್ಧಕ್ಕೆ ರೂಪ ಕೊಡಹೋಗುವುದೇ ಒಂದು ಅರ್ಥದಲ್ಲಿ ಹೃದಯವನ್ನು ಕೊಂಚ ಪಕ್ಕಕ್ಕೆ ಸರಿಸಿ ಮೆದುಳಿಗೆ ಪ್ರಾಧಾನ್ಯತೆ ಕೊಟ್ಟಂತೆ. 'Ha Ha false to me, to me' ಎಂದು ಅಬ್ಬರಿಸಿದಾಗ ಇದ್ದ ವ್ಯಕ್ತಿತ್ವದ ಚೈತನ್ಯ ಈಗ ಸಂಪೂರ್ಣ ಉಡುಗಿಹೋಗಿದೆ. 'O now, for ever / farewell the tranquil mind, farewell content' ಭಾಗವನ್ನು ವಿವರಿಸುವಾಗ ನಾನು ಬಳಸಿದ ಶಬ್ದಗಳು 'ಗಾಢತೆ, ಅತ್ಯಾಕರ್ಷಕ ಗಂಭೀರದಿಂದ ಭೋರ್ಗರೆವ ಸಮುದ್ರದ ಹಾಗೆ' ಎಂಬುವು. ಈ ಸದ್ಯದ 'I think my wife be honest, and think she is not / I think that thou art just, and think thou art not ; I'll have some proof' ಎಂಬ ಮಾತುಗಳು ನೆರವು ಬಯಸಿ ಕಿರಲುತ್ತಿರುವ ಅಸಹಾಯಕನೊಬ್ಬನ ಮೊರೆಯಂತೆ ಕೇಳುತ್ತವೆ. 'I'll have some proof :' ರಚ್ಚೆ ಹಿಡಿದ ಮಕ್ಕಳ ಹಾಗೆ ಪದೇಪದೇ ಅದಕ್ಕಾಗಿಯೇ ಹಠ ಮಾಡುತ್ತಾನೆ. ಹೇಗಿದ್ದವನು ತಾನು, ಹೇಗಾದೆ ಈಗ ? 'my name, that was as fresh / as Dian's visage, is now begrimed, and black / As mine own face' : ಮನಸ್ಸು ಕಲಕುವ ರೀತಿ ಹೇಳುತ್ತಾನೆ. ನಿರ್ಮಲತೆಗೆ ದೇವತೆ .... ಹಾಗಿದ್ದ ನನ್ನ ವ್ಯಕ್ತಿತ್ವವು ಈಗ ನನ್ನ ಮುಖದ ಹಾಗೆ ಕಪ್ಪಾಗಿ ಹೋಯಿತು ಎಂದು ವ್ಯಾಕುಲಪಡುತ್ತಾನೆ. ಹಾಡಿನ ಪಲ್ಲವಿಯಂತೆ ಈಗ ತನ್ನ ಕುರೂಪ, ಕಪ್ಪು, ಕೀಳುಸಂಸ್ಕೃತಿ, ಇವುಗಳು ಅವನ ಮಾತುಗಳಲ್ಲಿ, ಅವನ ದನಿಯಲ್ಲಿ ಮರುಕಳಿಸುತ್ತ ಹೋಗುತ್ತವೆ. ಆತ್ಮಮರುಕದಿಂದ ಒಮ್ಮಿಂದೊಮ್ಮೆಗೇ ಚೇತರಿಸಿಕೊಂಡವನಂತೆ ಈಗ ತನ್ನ ಮುಂದಿರುವ ಕರ್ತವ್ಯದ ಬಗ್ಗೆ ಗಮನಹರಿಸುತ್ತಾನೆ – 'if there be cords, or knives, / Poison 'or fire' or suffocating streams, / I'll not endure it' ಪ್ರತೀಕಾರಕ್ಕೆ ಯಾವ ಮಾರ್ಗವಾಗಲಿ – ಎಷ್ಟು ಕ್ರೂರವಾಗಲಿ, ಭಯಂಕರವಾಗಲಿ – ಈಗ ಅದರ ಚಿಂತೆಯಿಲ್ಲ. ಪ್ರತೀಕಾರವಷ್ಟೆ ತನ್ನ ಗುರಿ. ಅಥೆಲೋ ಈಗ ಉದ್ರೇಕಗೊಂಡಿದ್ದಾನೆ. ಇದಕ್ಕೆ ತಾನು ಕಾರಣವೆಂದು ಇಯಾಗೋವಿಗೆ ಪಶ್ಚಾತ್ತಾಪವಾಗಿದೆ. ಸರಿ – 'you would be satisfied ?' 'would, nay, I will' ... ಎಂದು ಅಥೆಲೋ ಸಂಪೂರ್ಣ ತನ್ನ ದಾರಿ ಸುಗಮ ಮಾಡಿದ ಕೂಡಲೆ ಇಯಾಗೋ ಇಲ್ಲಿಯವರೆವಿಗಿನ –

ತೋರಿಕೆಗಾದರೂ ಪಾಲಿಸುತ್ತಿದ್ದ – ಸೌಮ್ಯತೆ, ಸಭ್ಯತೆ, ಶಿಷ್ಟೋಚಿತ ಶಬ್ದಪ್ರಯೋಗಗಳನ್ನೆಲ್ಲ ಗಾಳಿಗೆ ತೂರಿ ಅಥೆಲೋವಿನ ಮೇಲೆ ರೂಕ್ಷ ಹಾಗೂ ಪಾಶವೀಯ ಆಕ್ರಮಣ ಮಾಡುತ್ತಾನೆ. ಈಗ ಯಾವುದೂ ಅವನಿಗೆ ಮಿತಿಗಳಿಲ್ಲ. 'Villian' ಅಂದನಲ್ಲರೆ ? ಇಲ್ಲಿದೆ 'Villiany'ಯ ಒಂದು ಮಾದರಿ. ಅವನು ಆಡುವ ಮಾತುಗಳಿಗೆ ಹೋಗುವುದಕ್ಕೆ ಮುಂಚೆ ಪುನಃ ನಮ್ಮ ಶಿಷ್ಟಾಚಾರಬದ್ಧ ಮಡಿವಂತರ ಕುರಿತು ಒಂದೆರಡು ಮಾತು ಹೇಳಲೇಬೇಕು. ಇಯಾಗೋ ಇಲ್ಲಿಂದ ಸುಮಾರು ಹನ್ನೆರಡು ಸಾಲುಗಳಲ್ಲಿ ಗಂಡು-ಹೆಣ್ಣಿನ ಮಧ್ಯದ ಸಂಭೋಗಾಪೇಕ್ಷೆಗಳ, ವಿಷಯ ಲಂಪಟತನಗಳ ಕುರಿತು ಎಗ್ಗಿಲ್ಲದೆ ಮಾತನಾಡುತ್ತಾನೆ. ನಾಜೂಕುಗಳೇ ಇಲ್ಲದ ಅಸಭ್ಯಭಾಷೆ ಬಳಸುತ್ತಾನೆ. ಡೆಸ್ಡಿಮೋನಾಳ ಕುರಿತಾಗಿ ತೀರ ಕೀಳಾಗಿ ಕೊಂಕುನುಡಿಗಳನ್ನು ಆಡುತ್ತಾನೆ. ಉಚ್ಚವರ್ಗದ ನಾಗರಿಕಸಮಾಜ ಕೇಳರಿಯದಂಥ ಅಶ್ಲೀಲಪದಗಳನ್ನು ಕ್ರೂರವಾಗಿ ಪ್ರಯೋಗಿಸುತ್ತಾನೆ. ಈ ಶೈಲಿ ಅಸಹನೀಯ ನಿಜ. ಆದರೆ ನಾವು ಮರೆಯಬಾರದ ಒಂದು ಮುಖ್ಯ ಅಂಶ ಇಲ್ಲಿದೆ ಎಂದು ನನಗೆ ಕಾಣುತ್ತದೆ. ಈ ಇಡೀ ನಾಟಕವೇ ಗಂಡು-ಹೆಣ್ಣುಗಳಿಗೆ ಸಂಬಂಧಪಟ್ಟದ್ದು. ಗಂಡು-ಹೆಣ್ಣಿನ ಸಂಬಂಧ ಇಲ್ಲಿ ಗಂಡ-ಹೆಂಡತಿಯರ ಸಂಬಂಧವೂ ಆಗಿರುವುದರಿಂದ ಎಷ್ಟೇ ಪ್ರೀತಿ ವಾತ್ಸಲ್ಯಗಳ ಮೇಲೆ ನಿಂತಿರಬಹುದಾದರೂ ಕೇಂದ್ರದಲ್ಲಿ ಲೈಂಗಿಕಸಂಬಂಧದ ಬುನಾದಿಯ ಮೇಲೆ ನಿಂತಿರುತ್ತದೆ. ಲೈಂಗಿಕಸಂಬಂಧವಿರದ ಗಂಡು-ಹೆಣ್ಣುಗಳ ನಡುವಿನ ಪ್ರೀತಿಗೆ, ಆಕರ್ಷಣೆಗೆ ಸಂಪೂರ್ಣರೀತಿಯ ಅರ್ಥವೂ ಬರುವುದಿಲ್ಲ. ಮತ್ತು ಲೈಂಗಿಕ ವಿಷಯಗಳಲ್ಲಿ ಗಂಡಾಗಲೀ ಹೆಣ್ಣಾಗಲೀ ಪರಸ್ಪರರ ಕುರಿತಾಗಿ ಭಯಂಕರ ಏಕಸ್ವಾಮ್ಯದ ಪ್ರವೃತ್ತಿಯನ್ನು ಪ್ರದರ್ಶಿಸುತ್ತಾರೆ. ಈ ಬಗ್ಗೆ ಅನುಮಾನ, ಶಂಕೆಗಳು ಕೆರಳಿದರೆ ನಮ್ಮ ಎಲ್ಲ ನಾಗರಿಕ, ಸಾತ್ವಿಕ, ಸುಸಂಸ್ಕೃತ ರೀತಿಗಳೂ ಕೇವಲ ಧರಿಸಿದ್ದ ಪೋಷಾಕುಗಳಂತೆ ಕಳಚಿಬಿದ್ದು, ನಮ್ಮ ಪ್ರಜ್ಞೆಯಾಳದಲ್ಲಿ ಎಂದೂ ಗುಪ್ತವಾಗಿ ಹಣಕಿ ಹಾಕುತ್ತಲೇ ಇರುವ ಮೃಗೀಯ, ಪಾಶವೀಶಕ್ತಿಗಳು ನಮ್ಮ ಇಡೀ ವ್ಯಕ್ತಿತ್ವವನ್ನು ಭೂತದ ಹಾಗೆ ಆವರಿಸಿಕೊಂಡು ಬಿಡುತ್ತದೆ. ಈ ಯಾವ ವಿಷಯಗಳೂ ಹೊಸದೇನಲ್ಲ. ಹಾಗೆ ನೋಡಿದರೆ ಇವೆಲ್ಲ ಪ್ರಾಥಮಿಕಾಂಶಗಳು. ಆದರೆ ಇಲ್ಲಿ ಹೇಳುವ ಆವಶ್ಯಕತೆ ಯಾಕೆ ತೋರುತ್ತದೆಂದರೆ ಈ ನಾಟಕದ ವಸ್ತುವೇ ಪ್ರೀತಿ ಮತ್ತು ಮದುವೆ. ಅದು ಒಂದು ಕಾರಣವಾದರೆ ಮತ್ತೂ ಒಂದು ಮಹತ್ವದ ಕಾರಣವಿದೆ. ಈ ಮಾತನಾಡುತ್ತಿರುವುದೆಲ್ಲ ಇಯಾಗೋ. ಅವನು ಉದ್ದೇಶಿಸಿ ಮಾತನಾಡುತ್ತಿರುವುದು ಅಥೆಲೋನನ್ನು. ಇಯಾಗೋವಿಗೆ ಅಥೆಲೋ-ಡೆಸ್ಡಿಮೋನಾಳ ಮದುವೆಯೇ, ಅವರುಗಳು ಹೇಳಿಕೊಳ್ಳುತ್ತಿರುವ ಪ್ರೀತಿಯೇ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ. ಎರಡನೇ ಅಂಕದ ಮೊದಲ ದೃಶ್ಯದಲ್ಲಿ ಡೆಸ್ಡಿಮೋನಾಳನ್ನು ಕಂಡ ಕೂಡಲೆ ಅಥೆಲೋ ಆಡುವ ಮಾತುಗಳು ಮತ್ತು ಆ ಇಡೀ ದೃಶ್ಯ ಇವರ ಕುರಿತು ಬರೆಯುವಾಗಲೇ ಇಯಾಗೋವಿಗೆ ಇವರಿಬ್ಬರ ಪ್ರೀತಿ ಸಾಧಾರಣ ಮಟ್ಟದ್ದಲ್ಲ ಎಂದು ಅರಿವಾಗಿದೆ ಎಂಬ ಅಂಶವನ್ನು ನಾವು ಗಮನಿಸಿದ್ದೆವು. ಈ 'constant, noble, loving nature'ನ ಮೂರನು

ಡೆಸ್ಡಿಮೋನಾಳಿಗೆ 'most dear husband' ಆಗುವುದು ಖಂಡಿತ ಎಂಬುದು ಮನವರಿಕೆಯಾಗಿದೆ. ಈಗ ತನ್ನ ಮೇಲೆ ಹೀಗೆ ಆಕ್ರೋಶ ವ್ಯಕ್ತಪಡಿಸುತ್ತಿರುವುದಕ್ಕೂ ಅವರಿಬ್ಬರ ಮಧ್ಯದ ಗಾಢ ನಂಟೇ ಕಾರಣ ಎಂಬುದೂ ಅವನಿಗೆ ಸ್ಪಷ್ಟವಾಗಿದೆ. ಈ ನಂಟನ್ನು ಮುರಿಯಬೇಕಾದರೆ ತಾನು ಪ್ರತಿಯಾಗಿ ಅವನ ಮೇಲೆ ಮಾಡಬೇಕಾದ ಧಾಳಿ ಉಗ್ರವೂ ನಿರ್ದಯವೂ ಆಗಿರದಿದ್ದರೆ ತನ್ನ ನಾಶಕ್ಕೆ ತಾನೇ ಹಾದಿಮಾಡಿಕೊಟ್ಟಂತಾಗುತ್ತದೆ ಎಂದು ಅರಿವಿಗೆ ಬಂದಿದೆ. ಎಂದೇ ಈ ಧಾಳಿಯ ಸ್ವರೂಪ ಎಷ್ಟು ಕೀಳುಮಟ್ಟದ್ದಾದರೆ ಅಷ್ಟು ಫಲಪ್ರದ. ವಿಷಯ ಹೆಣ್ಣಿನ ನಿಷ್ಠೆ ಮತ್ತು ವಿಶ್ವಾಸಾರ್ಹತೆಯದಾದ್ದರಿಂದ, ಆಕೆಯ ಬಗ್ಗೆ ಈಗಾಗಲೇ ಶಂಕೆಗಳು ಬಿತ್ತಿಯಾಗಿದ್ದು ಮೊಳಕೆಯೊಡೆಯುವ ವೇಳೆಗೇ ಒಣಗಿಹೋಗಿಬಿಡುವ ಭಯ ಆವರಿಸುತ್ತಿದ್ದು ಅದನ್ನು ಉಳಿಸಿ, ಬೆಳೆಸಿ ಹೆಮ್ಮರವಾಗಿಸುವುದಕ್ಕೆ ಗಾಳಿ ಬೆಳಕು ನೀರುಗಳನ್ನು ಹಾಕಿ ಪೋಷಿಸಬೇಕು. ಈ ಗಾಳಿ ಬೆಳಕು ನೀರುಗಳೇ ಅವನು ಬಳಸುವ ಬೆಚ್ಚಿಬೀಳುವಂಥ ಅಶ್ಲೀಲ ವಾಕ್‌ಚಿತ್ರಣಗಳು. ಇಲ್ಲಿಯವರೆವಿಗೆ ಪ್ರದರ್ಶಿಸುತ್ತಿದ್ದ ಸೂಕ್ಷ್ಮತೆಗಳು ಹಾಗೂ ಜಾಣತನದ ದ್ವಂದ್ವಾರ್ಥ ಪದಪ್ರಯೋಗಗಳನ್ನು ಇನ್ನು ಸಂಪೂರ್ಣ ತಿರಸ್ಕರಿಸಿಬಿಡಬೇಕು. ಅಥೆಲೋನ ಉದಾತ್ತ ಪ್ರೀತಿಯನ್ನು ಸಹಿಸದೆ ಅದನ್ನು ಕಲಕಿದ್ದಾಯಿತು ; ರಾಡಿಮಾಡಿದ್ದಾಯಿತು. ಆದರೆ ಆ ಉದಾತ್ತಪ್ರೀತಿಯು ನಷ್ಟವಾಗುತ್ತಿದೆಯೆಂಬ ವೇದನೆಯಲ್ಲಿ ಅಥೆಲೋ ಅನುಭವಿಸುತ್ತಿರುವ ಈ ಉದಾತ್ತ ನರಳಾಟವನ್ನೂ ಕೂಡ ಇಯಾಗೋ ಸಹಿಸಲಾರ. ಯಾವುದರಲ್ಲಾಗಲೀ ಉದಾತ್ತತೆಯೆಂಬುದೇ ಅವನ ಪ್ರಕಾರ ಒಪ್ಪಿಕೊಳ್ಳ ಬಾರದಂಥ ಮನುಷ್ಯಗುಣದ ಒಂದು ವಿಕಾರ. ಎಂದೇ ಈ ಉದಾತ್ತ ನರಳಾಟದ ಸ್ಥಿತಿಯಿಂದ ಅಥೆಲೋನನ್ನು ಆಫ್ರಿಕಾಖಂಡದ ಕಾಡುಮೃಗದ ಸ್ಥಿತಿಗೆ ಒಯ್ದುಬಿಡಬೇಕು. ಅವನ ಬರ್ಬರತೆಯನ್ನೆ ಅವನ ಪ್ರಜ್ಞೆಯಾಳದಿಂದ ಅಗೆದು ತೆಗೆದುಬಿಡಬೇಕು. ಈ ಉದ್ದೇಶಸಾಧನೆಗೆ ಇಯಾಗೋ ಬಳಸುವ ಭಾಷೆ ಸರ್ವಥಾ ಅನಿವಾರ್ಯ. ಈ ಭಾಗವನ್ನು ತೆಗೆದು ಹಾಕುವ ಪರಿಶುದ್ಧಾತ್ಮರೂ, ದಿವಾನಖಾನೆಯ ನೀತಿಶಾಸ್ತ್ರಪ್ರವೀಣರೂ, ತರಗತಿಗಳಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರ ನೈತಿಕ ಮಟ್ಟವನ್ನು ಕಾಪಾಡಲು ಹಠತೊಟ್ಟವರೂ 'ಅಥೆಲೋ' ನಾಟಕವನ್ನು ನಾಶಗೊಳಿಸಿಬಿಡುತ್ತಾರೆ. ಅಶ್ಲೀಲ ಶಬ್ದಗಳೆಂದು ಕರೆಯುವ ಈ ಭಾಗವು ನಾಟಕೀಯ ಪ್ರಸ್ತುತತೆಯನ್ನು ಹೊಂದಿಲ್ಲದೆ ಇದ್ದಿದ್ದರೆ ಶೇಕ್ಸ್‌ಪಿಯರನಿಗೆ ವೈಯಕ್ತಿಕವಾಗಿ ಈ ಬಗೆಯ ಭಾಷೆ ಬಳಸುವ ತೆವಲು ಇದ್ದಿತು ಎಂದು ಮಾತ್ರ ಹೇಳಬೇಕಾಗುತ್ತದೆ. ಈ ಭಾಗಗಳನ್ನು ಕಿತ್ತುಹಾಕಿದರೆ ಅಥೆಲೋ ಕ್ರಮೇಣ ಮುಟ್ಟುತ್ತ ಹೋಗುವ ಮೃಗೀಯ ಮಟ್ಟಗಳು ನಮ್ಮನ್ನು ನಂಬಿಸುವುದರಲ್ಲಿ ಖಂಡಿತ ಸೋಲುತ್ತವೆ.

'ಹೇಗೆ, ಹೇಗೆ ನಿನ್ನನ್ನು ತೃಪ್ತಿಪಡಿಸುವುದು ? ಮೈಥುನಕ್ರಿಯೆಯಲ್ಲಿ ತೊಡಗಿದ ಅವಳನ್ನು ಕಣ್ಣು ಬಾಯಿಬಿಟ್ಟುಕೊಂಡು ನೋಡಬೇಕೇನು ನೀನು ?' ಈ ಮುಖಕ್ಕೆ ರಾಚುವ

ಭಯಂಕರವನ್ನು ನಿರೀಕ್ಷಿಸದಿದ್ದ ಅಥೆಲೋ 'Death and damnation....O' ಎಂದು ಚೀರುತ್ತಾನೆ. ಇಯಾಗೋ ಸುತ್ತಿಗೆ ಎತ್ತಿಎತ್ತಿ ಬಡಿಯುತ್ತಾನೆ... 'ಎಂಥ ಕಸಿವಿಸಿಯ ಕೆಲಸ ಅವರಿಬ್ಬರನ್ನ ಈ ಸ್ಥಿತಿಯಲ್ಲಿ ಹಿಡಿದು ಹಾಕುವುದು... Damn them then, ಅವರಿಬ್ಬರೂ ಒಂದೇ ತಲೆದಿಂಬು ಹಂಚಿಕೊಂಡು ಬಿದ್ದುಕೊಂಡಿರುವುದನ್ನು ನೋಡುವುದಾದರೂ ಹೇಗೆ? ಮತ್ತೆ ಏನು ಮಾಡುವುದು? ಹೇಗೆ? ಏನು ಹೇಳಬೇಕು ನಿನಗೆ? ಎಲ್ಲಿದೆ ಸಮಾಧಾನ?' "It is impossible you should see this / Were they as prime as goats, as hot as monkeys / As salt as wolves, in pride ; and fools as gross / As ignorance made drunk...." ನೇರವಾಗಿ ಸಾಧ್ಯವಾಗದೇ ಹೋಗಬಹುದು. ಆದರೂ ಸಂದರ್ಭಗಳು ಮತ್ತು ಪುರಾವೆಗಳು ಅಥೆಲೋನನ್ನು ಸತ್ಯದ ಬಾಗಿಲ ಬಳಿ ಕೊಂಡೊಯ್ಯುವುದು ಸಾಧ್ಯವಾದರೆ ತಾನು ಖಂಡಿತ ಸಾಧಿಸುತ್ತೇನೆ ಎಂದು ಮಾತು ಕೊಡುತ್ತಾನೆ. 'ಸತ್ಯದ ಬಾಗಿಲು' ಎಂಬುದು ಡೆಸ್ಡಿಮೋನಾ ತನ್ನ ಪ್ರಿಯಕರನೊಡನೆಯಿರುವ ಕೋಣೆಯ ಬಾಗಿಲ ಬಳಿ ಅಥೆಲೋನನ್ನು ಕಿಂಡಿಯ ಮೂಲಕ ಕದ್ದು ನೋಡುವ ಸ್ಥಿತಿಗೆ ಕೊಂಡೊಯ್ಯುವುದು ಎಂಬ ಅರ್ಥವನ್ನು ಒಳಗೊಂಡಿದೆ. ಅಥಲೋವಿಗೆ ಇಷ್ಟು ಕೂಡ ಸಾಲದು. ಮತ್ತೂ ಸಮಾಧಾನವಾಗಬೇಕು. ಡೆಸ್ಡಿಮೋನಾ ತನಗೆ ದ್ರೋಹಬಗೆದಿದ್ದಾಳೆ ಎಂಬ ಅಪವಾದಕ್ಕೆ. 'living reason' ಬೇಕು. ಇಯಾಗೋವಿಗೆ ಈಗ ತನ್ನ ಕಲ್ಪನಾಲಹರಿ ಇಚ್ಛೆಬಂದಂತೆ ಹರಿಯುವುದಕ್ಕೆ ಬಿಡುವುದೊಂದೇ ಮಾರ್ಗ. ''ನನ್ನ ಮೂರ್ಖ ಪ್ರಾಮಾಣಿಕತೆ ಮತ್ತು ಪ್ರೀತಿಗಳು ಇಲ್ಲಿಯವರೆವಿಗೆ ನಿನ್ನ ಸಲುವಾಗಿ ಕೊಂಡುತಂದಿದೆ. ಮುಂದುವರೆಯುತ್ತೇನೆ'' ಎಂದು ಹೇಳಿ ಒಂದು ರೋಚಕ ಕಥೆ ಕಟ್ಟುತ್ತಾನೆ. ''ಇತ್ತೀಚೆಗೆ ನಾನು ಕ್ಯಾಷಿಯೋನ ಕೋಣೆಯಲ್ಲಿ ಮಲಗಿದ್ದಾಗ, ನಾನು ಹಲ್ಲುನೋವಿನಿಂದ ನಿದ್ದೆಯೇ ಬಾರದೆ ನರಳುತ್ತಿದ್ದೆ. ಕೆಲವರು ಇರುತ್ತಾರೆ – ಅವರು ಗಟ್ಟಿಮನಸ್ಸಿನವರಲ್ಲ. ತಮ್ಮ ನಿದ್ರೆಯಲ್ಲಿ ತಮ್ಮ ವಿಷಯಗಳನ್ನೆಲ್ಲ ಬಾಯಿಬಿಟ್ಟುಬಿಡುತ್ತಾರೆ. ಕ್ಯಾಷಿಯೋ ಅಂಥವರಲ್ಲಿ ಒಬ್ಬ. ಅವನು ನಿದ್ರೆಯಲ್ಲಿ 'ಪ್ರೀತಿಯ ಡೆಸ್ಡಿಮೋನಾ... ನಾವು ಎಚ್ಚರದಿಂದಿರೋಣ, ನಮ್ಮ ಪ್ರೀತಿಗಳನ್ನು ಗುಪ್ತವಾಗಿ ಇಟ್ಟಿರೋಣ' ಹಾಗಂದು ನನ್ನ ಕೈಗಳನ್ನು ಹಿಡಿದು, ಒತ್ತಿ 'ಓ ನನ್ನ ಪ್ರಿಯತಮೆ' ಎಂದು ನನಗೆ ತನ್ನ ತುಟಿಗಳ ಬೇರಿನಿಂದಲೇ ಮುತ್ತುಗಳನ್ನು ಕಿತ್ತುಬಿಡುವವನಂತೆ ಮುತ್ತಿಟ್ಟು, ತನ್ನ ಕಾಲುಗಳನ್ನು ನನ್ನ ತೊಡೆಯ ಮೇಲೆ ಹಾಕಿ, ನಿಟ್ಟುಸಿರಿಟ್ಟು, ಮುತ್ತಿಟ್ಟು 'ನಿನ್ನಂಥವಳನ್ನು ಮೂರನಿಗೆ ಕೊಟ್ಟ ಕ್ರೂರವಿಧಿಯೇ' ಎಂದು ಗೊಣಗಿದ'' (ಈ ಭಾಗದಲ್ಲಿಯೂ ಮಡಿವಂತರ ಕ್ರೂರ ಕತ್ತರಿ ಕೈಯಾಡಿಸಿದೆ.) ರೋಷಗೊಂಡ ಅಥೆಲೋವಿಗೆ, ಅದು ಕೇವಲ ಕನಸಷ್ಟೆ... ಎಂದು ಸಮಾಧಾನಗೊಳಿಸಲು ಯತ್ನಿಸುತ್ತಾನೆ. ಆದರೆ ಅಥೆಲೋವಿಗೆ ಮಾತ್ರ ಪೂರ್ಣ ನಂಬಿಕೆಯಾಗಿ ಬಿಟ್ಟಿದೆ. ಇವನೋ ಮನಸ್ಸಿಲ್ಲದ ಮನಸ್ಸಿನಲ್ಲಿ ಅಥೆಲೋ ಮಾತನ್ನು ತಾನೂ ಒಪ್ಪುವವನಂತೆ, ಕನಸಾದರೂ ಅನುಮಾನ ಮಾತ್ರ ಉಳಿಯುತ್ತದೆ, ಮತ್ತೆ ತೆಳುವಾಗಿ ತೇರುವ ಇತರೇ

ಪುರಾವೆಗಳಿಗೆ ಪುಷ್ಟಿ ನೀಡುತ್ತದೆ ಎಂದು ಮತ್ತಷ್ಟು ತನ್ನ ಕುಣಿಕೆಯನ್ನು ಬಿಗಿಗೊಳಿಸುತ್ತ ಹೋಗುತ್ತಾನೆ. ಭಯಂಕರ ಆವೇಶದಲ್ಲಿ ಅಥೆಲೋ ಅವಳನ್ನು ಹರಿದು ಚೂರುಚೂರು ಮಾಡಿಬಿಡುತ್ತೇನೆಂಬ ಆರ್ಭಟಕ್ಕೆ ಉತ್ತರವಾಗಿ 'ಸಹನೆ ಕಳೆದುಕೊಳ್ಳಬೇಡ, ಅವಳು ಈಗಲೂ ಪ್ರಾಮಾಣಿಕಳಾಗಿರಬಹುದು' ಎಂದು ಹೇಳುತ್ತಲೆ ತನ್ನ ಮುಂದಿನ ಅಸ್ತ್ರ ಪ್ರಯೋಗಿಸುತ್ತಾನೆ. 'ಡೆಸ್ಡಿಮೋನಾಳ ಬಳಿ ಸುಂದರ ಕಸೂತಿ ಮಾಡಿರುವ ಕರವಸ್ತ್ರವೊಂದನ್ನು ಅಥೆಲೋ ನೋಡಿರಲೇಬೇಕಲ್ಲ?' 'ಹೌದು ನಾನೇ ಅವಳಿಗೆ ಕೊಟ್ಟಿದ್ದೇನೆ – ನನ್ನ ಪ್ರಥಮ ಕಾಣಿಕೆ ಅದು.' ಇರಬಹುದು, ಆದರೆ ಆ ಕರವಸ್ತ್ರ ಬಳಸಿ ಕ್ಯಾಷಿಯೋ ತನ್ನ ಮುಖ ಒರೆಸಿಕೊಳ್ಳುತ್ತಿದ್ದುದನ್ನು ತಾನು ಕಂಡುದಾಗಿ ಇಯಾಗೋ, ತನ್ನ ಪರಿಣತ ಮೆಲುದನಿಯಲ್ಲಿ, ಏನೂ ಅತಿಶಯವನ್ನು ಹೇಳುತ್ತಿಲ್ಲವೆಂಬಂತೆ ಹೇಳಿಬಿಡುತ್ತಾನೆ. 'ಅದು ಅದೇ ಆಗಿದ್ದರೆ ಅಥವಾ ಯಾವುದೇ ಅವಳ ವಸ್ತುವಾಗಿದ್ದರೂ ಅವಳ ವಿರುದ್ಧದ ಸಾಕ್ಷಿಯಾಗುತ್ತದೆ' ಎಂದು ಸ್ಪಷ್ಟವಾಗಿ ನುಡಿದು ಬಿಡುತ್ತಾನೆ. ಅಸ್ತ್ರ ಮರ್ಮಸ್ಥಾನವನ್ನು ಮುಟ್ಟಿ ತನ್ನ ಗುರಿಯನ್ನು, ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಸಾಧಿಸಿದೆ. ಉದಾತ್ತನರಳಾಟವೂ ನಿಶ್ಶೇಷವಾಗಿ ಅಳಿಸಿಹೋಗಿ ಬರ್ಬರತೆಯ ಕರಾಳ ಮುಖ ಹಣಕಿ ಹಾಕುತ್ತಿದೆ. ಇನ್ನು ಮುಂದೆ ಅನುಮಾನಗಳಿಲ್ಲ ; ವಿರೋಧಾತ್ಮಕವಾಗಿ ಕಂಡ ಭಾವೋದ್ವೇಗಗಳಿಗೆ ಇನ್ನು ಅವಕಾಶವಿಲ್ಲ. ಇನ್ನು ಪ್ರತೀಕಾರದ ಮಾರ್ಗವಷ್ಟೆ; ಹಗೆ ಸಾಧನೆಯ ಬಗೆಗಳ ಚಿಂತೆಯಷ್ಟೆ ಇನ್ನು. ಆದರೆ ಎಂಥ ದುರದೃಷ್ಟ ಈ ಕ್ಯಾಷಿಯೋಗೆ ಇರುವುದು ಒಂದೇ ಜೀವ. ತನ್ನ ಪ್ರತೀಕಾರದ ಬಯಕೆ ಪ್ರಚೋದನೆ ಎಷ್ಟು ತೀವ್ರವಾಗಿದೆಯೆಂದರೆ

> 'O that the slave had forty thousand lives !
> One is too poor, too weak for my revenge.

ನಲವತ್ತು ಸಾವಿರದಷ್ಟು ಸಲ ಅವನನ್ನು ಕೊಲ್ಲುವುದಕ್ಕೆ ಸಾಧ್ಯವಿದ್ದಿದ್ದರೆ! ಆದರಿರುವುದು ಒಂದೇ. ನನ್ನ ದ್ವೇಷ ತಣ್ಣಗಾಗುವುದಕ್ಕೆ ಒಂದು ಜೀವ ಅತಿ ನಿಕೃಷ್ಟ, ಅತಿ ದುರ್ಬಲ-' ಇನ್ನು ಮುಗಿಯಿತು.

> 'Now do I see it is true ; look here, Iago,
> All my fond love thus do I blow to heaven....
> It is gone.'

'fond' ಎನ್ನುವ ಶಬ್ದಕ್ಕೂ ಎರಡು ಅರ್ಥವಿದೆ. I am fond of children ಎಂಬ ವಾಕ್ಯದಲ್ಲಿ fond ಶಬ್ದಕ್ಕೆ ಮುದ್ದು, ಮೆಚ್ಚು, ಪ್ರೀತಿ ಎಂಬರ್ಥವಿದೆ. ಇದು ಸಕಾರಾತ್ಮಕ ಪ್ರಯೋಗ. ಮತ್ತೊಂದು, ಮತ್ತು ನನಗೆ ಅನ್ನಿಸುವಂತೆ ಅಥೆಲೋ ಬಳಸುವುದು ಈ ಮತ್ತೊಂದು ರೀತಿಯಲ್ಲಿ 'ಹುಚ್ಚು ಭರವಸೆಯ', 'ಹುಚ್ಚು ಪ್ರೀತಿಯ' ಎಂದರ್ಥ. 'ನನ್ನ ವ್ಯಾಮೋಹವನ್ನು ಹೀಗೆ ಗಾಳಿಗೆ ತೂರಿಬಿಟ್ಟುಬಿಡುತ್ತೇನೆ. ನೀನು ಹೇಳುವುದು ಖಂಡಿತವೆಂದು

ಮನದಟ್ಟಾಗಿದೆ' ಎಂದು ಘೋಷಿಸಿಬಿಡುತ್ತೇನೆ. ಆದ್ದರಿಂದ 'Arise, black vengeance, from thy hollow cell / Yield up, O love, thy crown, and hearted throne / To tyrannous hate, swell, bosom, with thy fraught / For it is of aspics' tongues !' ·

ಆಫ್ರಿಕಾಖಂಡದ ದಟ್ಟ ಕತ್ತಲ ಕಾಡಿನ ಕಪ್ಪು ಮತ್ತೂ ಅಷ್ಟು ಅಥೆಲೋನ ಪ್ರಜ್ಞೆಯನ್ನು ಕವಿದಿದೆ. 'O blood, Iago, blood !' ರಕ್ತದಾಹದಲ್ಲಿ ಹುಚ್ಚೆದ್ದವನಂತೆ ಗುಡುಗುತ್ತಾನೆ. 'ತಾಳ್ಮೆ ತಾಳ್ಮೆ... ನಿನ್ನ ಮನಸ್ಸು ಬಹುಶಃ ಬದಲಾಗಬಹುದು.' ಎಂದಿನ 'ವಿವೇಕ'ದ ಎಚ್ಚರ ನೀಡಿದ ಇಯಾಗೋವಿಗೆ ಅನಿಶ್ಚಿತತೆಯ ಮೀನ-ಮೇಷ ಎಣಿಕೆಯ ಕಾಲ ಮುಗಿದು ಹೋಯಿತು. ಇನ್ನು ದೃಢ ನಿರ್ಧಾರ – ಕಾರ್ಯಾಚರಣೆ ಅಷ್ಟೆ. ಎಷ್ಟು ಗಟ್ಟಿ ತನ್ನ ನಿರ್ಧಾರ ಎಂದು ತನಗೆ ತಾನು ಖಂಡಿತಮಾಡಿಕೊಳ್ಳುವ ರೀತಿಯಲ್ಲಿ ಮತ್ತು ಸಹಜವಾಗಿ ಇಯಾಗೋವಿಗೂ ಸ್ಪಷ್ಟಪಡಿಸುವ ಉದ್ದೇಶದಲ್ಲಿ ಪ್ರತೀಕಾರದ ಪ್ರಮಾಣ ಸ್ವೀಕಾರ ಹಾಗೂ ಹೀಗೆ ಸ್ವೀಕರಿಸಿದ ಮಾತು ನಡೆಯುವುದಾಗಿ ಮಾಡುವ ನಿರ್ಧಾರ ಎರಡನ್ನೂ ಏಕಕಾಲದಲ್ಲಿ ಸಾಧಿಸುತ್ತಾನೆ. ಈ ಹತ್ತು ಸಾಲುಗಳ ಭಾಗ ಅಥೆಲೋ ಆಡುವ ಅದ್ಭುತ ಮಾತುಗಳಲ್ಲಿ ಒಂದು ಮತ್ತು 'ಅಥೆಲೋ' ನಾಟಕದಲ್ಲಿಯೇ ಬಹು ಪರಿಣಾಮಕಾರಿಯಾದ ಶಕ್ತಿಶಾಲಿ ಭಾಗ. ಈ ಸಾಲುಗಳಲ್ಲಿ ಅಥೆಲೋ ತನ್ನ ಬದುಕಿನ ಒಂದು ಅಧ್ಯಾಯಕ್ಕೆ ತೆರೆ ಎಳೆಯುತ್ತಿದ್ದಾನೆ. ಶಾಶ್ವತವಾಗಿ ಆ ಬಾಗಿಲು ಮುಚ್ಚಿದ್ದಾಯಿತು. ಮತ್ತು ಅದೇ ವೇಳೆಗೆ ತನ್ನ ಬದುಕಿನ ಮತ್ತೊಂದು ಅಧ್ಯಾಯವನ್ನು ಉದ್ಘಾಟನೆ ಮಾಡುತ್ತಿದ್ದಾನೆ. ಭೂಗತ ಮಾಡಿದ ಅಧ್ಯಾಯಕ್ಕೆ ಚರಮಗೀತೆ, ಬರಲಿರುವ ದಿನಗಳಿಗೆ ನಾಂದೀಪದ್ಯ. ಮನಸ್ಸಿನ ಸದ್ಯದ ಸ್ಥಿತಿಯಲ್ಲಿ ಅಥೆಲೋ ಇಷ್ಟು ಅದ್ಭುತ ಪ್ರತಿಮೆಗಳಿಂದ ಕೂಡಿದ ಇಂಥ ಕಾವ್ಯವನ್ನು ಮಾತನಾಡಲು ಸಾಧ್ಯವೆ ? ಈ ಪ್ರಶ್ನೆ ಏಳುವುದು ಸಹಜ. 'ಅಥೆಲೋ' ನಾಟಕದ ಆರ್ಡೆನ್ ಆವೃತ್ತಿಯ ಸಂಪಾದಕ ಎಂ.ಆರ್. ರಿಡ್ಲೀ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತಾನೆ : 'ಕವಿಹೃದಯವಿರುವವನು ಅಥೆಲೋ. ಒಬ್ಬ ಧೀರೋದಾತ್ತ ನಾಯಕ ಹಾಗೂ ಭಾವೋದ್ದೀಪ್ತ ಕವಿಯೂ ಹೌದು ಅವನು' ಎಂದು. ಸಂಪೂರ್ಣ ನಂಬಬಹುದಾದಂಥ ಮಾತು ಇದು. ಇದರ ಜೊತೆಗೆ ಮತ್ತೂ ಒಂದು ಮಾತು ಇದೆ ಎಂದು ನನಗನ್ನಿಸುತ್ತದೆ – ಅಥೆಲೋ ತನ್ನ ಮನಸ್ಸು, ಹೃದಯ ಹಾಗೂ ಭಾವನೆಗಳ ಸ್ಥಿರತೆಯನ್ನು ಸಾಧಿಸಿ, ಗೊಂದಲಗಳ ಆಲ್ಲೋಲಕಲ್ಲೋಲಗಳು ಇಲ್ಲದೆ ಜೀವಸಂಭ್ರಮವೊಂದೇ ಪ್ರಧಾನಸ್ಥಿತಿಯಾಗಿದ್ದಾಗಲೆಲ್ಲ ಈ ಬಗೆಯ ಕಾವ್ಯಾತ್ಮಕ ಭಾಷೆ ಮಾತನಾಡಿದ್ದಾನೆ. ಆದರೆ ಇಲ್ಲಿ ಜೀವಸಂಭ್ರಮ ಪ್ರಧಾನ ಸ್ಥಿತಿಯಲ್ಲ; ಜೀವವಿಮುಖೀ, ಜೀವದ್ವೇಷೀ ಸ್ಥಿತಿಯನ್ನು ತಲುಪುತ್ತಿರುವ ಸೂಚನೆ. ಈ ಸ್ಥಿತಿಯನ್ನು ಮೊದಲಿನ ಜೀವಸಂಭ್ರಮ ಸ್ಥಿತಿಯಲ್ಲಿಯಂತೆಯೇ ಗಾಢವಾಗಿ, ಸ್ಪಷ್ಟವಾಗಿ, ಸಂಶಯಗಳೇ ಇಲ್ಲದೆ ತಲುಪಿದ್ದಾನೆ. ಎಂದೇ ಕಾವ್ಯ ನಿರರ್ಗಳವಾಗಿ ಹರಿಯುತ್ತದೆ. ಮೊದಲನೆಯ ಅಂಕದ ಮೂರನೇ ದೃಶ್ಯದಲ್ಲಿ ಆಸ್ಥಾನದಲ್ಲಿ ತನ್ನ ಪ್ರೇಮ

ಪ್ರಕರಣವನ್ನು ವಿವರಿಸಿದಾಗ, ಎರಡನೇ ಅಂಕದ ಮೊದಲ ದೃಶ್ಯದಲ್ಲಿ ಡೆಸ್ಡಿಮೋನಾಳನ್ನು ಭೆಟ್ಟಿಯಾದ ತತ್‌ಕ್ಷಣದಲ್ಲಿ ಈ ಬಗೆಯ ಕಾವ್ಯದ ಹೊನಲು ಹರಿದದ್ದನ್ನು ನಾವು ಕಂಡಿದ್ದೇವೆ. ಈಗ ಆ ಉತ್ಸಾಹವಿಲ್ಲ, ಸಂಭ್ರಮವಿಲ್ಲ, ಬದಲಿಗೆ ಈಗ ಮನಸ್ಸು ಹೃದಯಗಳು ಮೈಕೊರೆಸುವಂಥ ಗಟ್ಟಿ ಮಂಜುಗಡ್ಡೆಯಾಗಿದೆ. ಗಟ್ಟಿಯಾಗಿದೆ ಎಂಬುದು ಮುಖ್ಯ.

Never Iago, Like to the pontic sea,
Whose Icy current, and compulsive course,
Never feels retiring ebb, but keeps due on
To the Propontic and the Hellespont :
Even so my bloody thoughts, with violent pace
Shall never look back, never ebb to humble love,
Till that a capable and wide revenge
Swallow them up.

ಇದು ಸ್ವೀಕರಿಸಿದ ಪ್ರಮಾಣ ವಚನ. ಸೈಪ್ರಸ್ ನೆಲದ ಮೇಲೆ ಕಾಲಿಟ್ಟ ಗಳಿಗೆಯಲ್ಲೇ ಡೆಸ್ಡಿಮೋನಾಳನ್ನು ಕಂಡಾಗ [II(i)] ಕೂಡ ಆಥೆಲೋ ಬಳಸುವುದು ಸಮುದ್ರದ ಪ್ರತಿಮೆಗಳನ್ನು. ಭಯಾನಕ ಚಂಡಮಾರುತ ಮತ್ತು ಸಮುದ್ರದಲ್ಲಿನ ಅಲೆಗಳ ಹೊಡೆತ ಎಷ್ಟೇ ಧೃತಿಗೆಡಿಸಿದರೂ, ಪ್ರತಿಬಾರಿ ಅಂಥ ಅನುಭವವಾದ ಮೇಲೂ ಇಷ್ಟು ಪ್ರಶಾಂತ ಅನುಭವ ದೊರಕುವುದಾದರೆ ಸಮುದ್ರವು ಆಕಾಶವನ್ನೇ ಅಲುಗಿಸುವಷ್ಟು ಕ್ರೂರವಾದರೂ ಚಿಂತೆಯಿಲ್ಲ ಎಂದು ಆಗ ಸಂಭ್ರಮಿಸಿದ್ದ ನೆನಪು ಮಾಸುವುದರೊಳಗೆ, ಪಾಂಟಿಕ್ ಸಮುದ್ರದ ಅಲೆಗಳು ಹಿಂತಿರುಗಿ ಬರದಷ್ಟು ಎತ್ತರೆತ್ತರಕ್ಕೆ ಲಂಘಿಸುತ್ತ ಏಕಮುಖವಾಗಿ ಪ್ರವಹಿಸುವಂತೆ ತನ್ನ 'bloody thoughts' 'violent pace'ನೊಂದಿಗೆ ಹಿಂತಿರುಗಿ ನೋಡದಂತೆ ತನ್ನ ಪ್ರತೀಕಾರದತ್ತ ಮುನ್ನುಗ್ಗಿಸಲಿ ಎಂದು ಹಾರೈಸುತ್ತಾನೆ. ಆ ಪ್ರತೀಕಾರ 'capable and wide' ಆಗಿದ್ದು ತನ್ನ 'humble love' ಅನ್ನು ನುಂಗಿಬಿಡಬೇಕು. ಮಂಡಿಯೂರಿ, ದೇವರ ಸಾಕ್ಷಿಯಾಗಿ ಇದನ್ನು ತಾನು ಸಾಧಿಸುವುದು ಖಂಡಿತ ಎಂದು 'ಪವಿತ್ರ' ಪ್ರತಿಜ್ಞೆ ಮಾಡುತ್ತಾನೆ.

Now by yond marble heaven
In the due reverence of a sacred vow,
I here engage my words

ಈ ಕ್ಷಣಕ್ಕಾಗಿಯೇ ಕಾದಿದ್ದವನಂತೆ ಆಥೆಲೋನಷ್ಟೇ ಅತ್ಯುತ್ಸಾಹದ ಭಾವಾವೇಶಕ್ಕೆ ಪಕ್ಕಾಗಿ ಇಯಾಗೋ ತಾನೂ ಮಂಡಿಯೂರಿ ತನ್ನ ಸಹಕಾರ, ಬೆಂಬಲ ಮತ್ತು ಸಂಪೂರ್ಣ ಬದ್ಧತೆಗಳನ್ನು ಆಕಾಶದ ಗ್ರಹ ನಕ್ಷತ್ರಗಳ ಆಣೆಯಾಗಿ ಘೋಷಿಸುತ್ತಾನೆ.

Do not rise yet.
Witness, you ever-burning lights above,
You elements that clip us round about,
Witness that here Iago doth give up
The excellency of his wit, hand, heart,
To wronged Othello's service : Let him command
And to obey shall be in me remorse
What bloody work so ever.

ಅಥೆಲೋನನ್ನು ವಿಧೇಯನಾಗಿ ಅನುಸರಿಸುವುದು ತನ್ನ 'shall be in me remorse' ಎನ್ನುತ್ತಾನೆ ಇಯಾಗೋ. 'remorse' ಅಂದರೆ ಇಲ್ಲಿ 'ಪಶ್ಚಾತ್ತಾಪದ ಎಳೆಯೂ ಇಲ್ಲದಂತೆ' ಎಂದು ಅರ್ಥಮಾಡಬೇಕು. ಶೇಕ್ಸ್‌ಪಿಯರ್ ಈ ಶಬ್ದವನ್ನು ಆಧುನಿಕ ಅರ್ಥದಲ್ಲಿ ಬಳಸಿಲ್ಲ. ಇಯಾಗೋ ತನ್ನೊಳಗಿನ ಕರುಣೆ, ಅನುಕಂಪ ಎಲ್ಲವನ್ನು ಬದಿಗಿಟ್ಟು ಅನ್ಯಾಯಕ್ಕೆ ಒಳಗಾದ ಅಥೆಲೋವಿನ ಸೇವೆಯಲ್ಲಿ ತೊಡಗಲು ನಿರ್ಧರಿಸುತ್ತಾನೆ. ಅಥೆಲೋ ಆ ತತ್‌ಕ್ಷಣವೇ ಇಯಾಗೋವಿಗೆ ಮೊದಲ ಕರ್ತವ್ಯವಾಗಿ ಕ್ಯಾಷಿಯೋನನ್ನು ಮೂರು ದಿನಗಳಲ್ಲಿ ಇಲ್ಲದಂತೆ ಮಾಡು ಎಂದು ಅಣತಿ ಮಾಡುತ್ತಾನೆ. 'ನನ್ನ ಸ್ನೇಹಿತ ಮುಗಿದಂತೆ, ನಿನ್ನ ಕೋರಿಕೆಯನ್ನು ನೆರವೇರಿಸುತ್ತೇನೆ. ಆದರೆ ಅವಳು ಜೀವಂತವಿರಲಿ ಎಂದು ಅಥೆಲೋನ ಮನಸ್ಸನ್ನು ಮತ್ತಷ್ಟು ಪರೀಕ್ಷಿಸುತ್ತೇನೆ. 'Damn her, lewd minx : O, damn her !' ಎಂದು, 'ನಡೆ ಹೋಗೋಣ. ಆ ಸುಂದರ ರಕ್ಕಸಿಯನ್ನು ಮುಗಿಸುವುದಕ್ಕೆ ಮಾರ್ಗಗಳ ಕುರಿತು ಚಿಂತಿಸುತ್ತೇನೆ.' ಮತ್ತು ಕೊನೆಯದಾಗಿ ಈ ಇಡೀ ದೃಶ್ಯದ ಕಲಶಪ್ರಾಯವಾಗಿ 'now art thou my lieutenant' ಎಂದು ನಿಂತ ನಿಲುವಿನಲ್ಲಿಯೇ ಹುಕುಮ್ ಹೊರಡಿಸುತ್ತಾನೆ. ವಿನಯ ವಿಧೇಯತೆಗಳಿಂದ ಇಯಾಗೋ ತಾನು ಎಂದೆಂದಿಗೂ ಅಥೆಲೋವಿನ ಅನುಯಾಯಿ ಎಂದು ಮಾತು ಜೋಡಿಸುತ್ತಾನೆ.

ಮೂರನೇ ಅಂಕದ ನಾಲ್ಕನೇ ದೃಶ್ಯದ ವೇಳೆಗೆ ಡೆಸ್ಡಿಮೋನಾ ತನ್ನ ಕರವಸ್ತ್ರವನ್ನು ಕಳೆದುಕೊಂಡು ಆತಂಕದಲ್ಲಿ ಚಡಪಡಿಸುತ್ತಿದ್ದಾಳೆ. ಅಮೂಲ್ಯ ನಾಣ್ಯಗಳು ತುಂಬಿದ ತನ್ನ ಹಣದ ಚೀಲವನ್ನಾದರೂ ತಾನು ಕಳೆದುಕೊಳ್ಳುವುದಕ್ಕೆ ಸಿದ್ಧ, ಆದರೆ ಈ ಕರವಸ್ತ್ರವನ್ನು ಕಲೆದುಕೊಳ್ಳಲಾರೆ. ಇಷ್ಟಿದ್ದೂ ಅವಳಿಗೊಂದು ಸಮಾಧಾನವಿದೆ – ತನ್ನ ಗಂಡ ನಿರ್ಮಲಮನಸ್ಸಿನವನು. ಶಂಕೆ, ಅಸೂಯೆಗಳನ್ನು ಪಡುವಂಥ ಕೀಳುದರ್ಜೆಯ ಮನುಷ್ಯನಲ್ಲ. ಇಲ್ಲದಿದ್ದರೆ ಏನೆಲ್ಲ ತಪ್ಪುಗ್ರಹಿಕೆಗಳು ಮಾಡಿಕೊಳ್ಳುವ ಅವಕಾಶವಿತ್ತು ಎಂದು ತನ್ನ ಅದೃಷ್ಟದ ಬಗ್ಗೆ ಸಮಾಧಾನಪಟ್ಟುಕೊಳ್ಳುತ್ತಾಳೆ. ಅಥೆಲೋ ಹೊಟ್ಟೆಕಿಚ್ಚುಪಡುವವನಲ್ಲವೆ ಎಂದು ಎಮಿಲಿಯಾ ಕೇಳುತ್ತಾಳೆ. ಇದು ಪ್ರಶ್ನೆಯೂ ಹೌದು, ಒಂದು ಅರ್ಥದಲ್ಲಿ

ಅನುಮಾನವೂ ಹೌದು. ಅಥೆಲೋ ಅವಳ ದೃಷ್ಟಿಯಲ್ಲಿ ಬೇರೆಲ್ಲ ಗಂಡಸರಿಗಿಂತ ವಿಶೇಷವೇನೂ ಇಲ್ಲದವನು ಎಂದು ಭಾವಿಸುವುದು ಬಹು ವಾಸ್ತವ ರೀತಿಯ ಯೋಚನಾಕ್ರಮ. ಡೆಸ್ಡಿಮೋನಾ ಈ ಪ್ರಶ್ನೆಗೆ ಖಂಡತುಂಡವಾಗಿ ಉತ್ತರಿಸುತ್ತಾಳೆ. 'ಯಾರು, ಅವನು ? ಹುಟ್ಟಿದ ಕ್ಷಣವೇ ಸೂರ್ಯನ ಬಿಸಿಲಿನ ತಾಪಕ್ಕೆ ಇಂಥ ಎಲ್ಲ ಮನೋವಿಕಾರಗಳೂ ಇಂಗಿಹೋದವನು !' ಆತ್ಮವಿಶ್ವಾಸದಿಂದ, ಹೆಮ್ಮೆಯಿಂದ ಹೇಳುತ್ತಾಳೆ. ಆ ಕ್ಷಣವೇ ಅಥೆಲೋವಿನ ಪ್ರವೇಶವಾಗುತ್ತದೆ. ಅವನು ಬರುವುದನ್ನು ನೋಡಿಯೇ ಡೆಸ್ಡಿಮೋನಾ ಕರವಸ್ತ್ರದ ವಿಷಯ ಸಂಪೂರ್ಣ ಮರೆತು 'ಕ್ಯಾಷಿಯೋನ ವಿಷಯ ಇತ್ಯರ್ಥಮಾಡಿಯೇ ಮುಗಿಸುತ್ತೇನೆ, ಕ್ಯಾಷಿಯೋನನ್ನು ಇಲ್ಲಿಗೆ ಬರಲಿಕ್ಕೆ ಹೇಳು' ಎಂದು ಎಮಿಲಿಯಾಗೆ ಹೇಳಿ ಗಂಡನನ್ನು 'ಹೇಗಿದ್ದಿ ?' ಎಂದು ಕೇಳುತ್ತಾಳೆ. 'ಚೆನ್ನಾಗಿದ್ದೀನಿ' ಎಂದವನು ತನ್ನಷ್ಟಕ್ಕೇ 'O hardness to dissemble' ನನ್ನ ಮನಸ್ಸಿನ ನಿಜಸ್ಥಿತಿಯನ್ನು ಇವಳಿಂದ ಮುಚ್ಚಿಡುವುದು ಎಷ್ಟು ಕಷ್ಟ' ಎಂದು ಮರುಗುತ್ತಾನೆ. ಯಾವುದು ಈ ನಿಜಸ್ಥಿತಿ ? ತಾನು ಅವಳನ್ನು ಮುಗಿಸಿ ಬಿಡಬೇಕೆಂದು ನಿರ್ಧರಿಸಿರುವುದೆ ? ಅಥವಾ ಆಳದಲ್ಲಿ ಅವಳ ಬಗ್ಗೆ ಇರುವ ತನ್ನ ಮಮತೆಯನ್ನು ಮರೆಮಾಡಿ ಕ್ರೂರವಾಗಿ ನಡೆದುಕೊಳ್ಳಬೇಕಾಗಿ ಬಂದ ಸ್ಥಿತಿಯೇ ? 'ನಿನ್ನ ಗುಟ್ಟೆಲ್ಲ ಬಯಲಾಗಿ ಬಿಟ್ಟಿದೆ' ಎಂದು ಹೇಳಲಿಕ್ಕಾಗದೆ ಸಹಜವಾಗಿ, ಎಂದಿನಂತೆ ವರ್ತಿಸಬೇಕಾಗಿ ಬಂದಿರುವ ಈ ವ್ಯಂಗ್ಯದ ಸಂದರ್ಭವೆ ? ಎಷ್ಟೇ ಗಟ್ಟಿಮನಸ್ಸು ಮಾಡಿಕೊಂಡಿದ್ದರೂ ಅವಳೊಂದಿಗಿನ ಪ್ರತಿ ಭೆಟ್ಟಿಯೂ ತನ್ನಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡುತ್ತದೆಂಬುದು ಮಾತ್ರ ಗಟ್ಟಿ. 'ನೀನು ಹೇಗಿದ್ದಿ, ಡೆಸ್ಡಿಮೋನಾ ?' 'ಚೆನ್ನಾಗಿದ್ದೇನೆ'. ಅಥೆಲೋ ಅವಳ ಕೈ ನೀಡುವಂತೆ ಕೇಳಿ ಅವಳು ನೀಡಿದ ಕೈಯನ್ನು ತನ್ನ ಕೈಯಲ್ಲಿ ಹಿಡಿದು 'ಈ ಕೈಗಳು ತುಂಬ ತೇವವಾಗಿದೆ' ಎನ್ನುತ್ತಾನೆ. ಹೌದು, ತನ್ನ ಕೈಗಳು ಯೌವನದವು ಹಾಗೂ ದುಃಖಗಳೇ ಕಾಣದವು ಎಂದು ಹಿಗ್ಗಿ ಹೇಳಿದ ಹೆಂಡತಿಗೆ "This argues fruitfulness, and liberal heart / Hot, Hot and moist, this hand of yours requires / A sequester from liberty....' 'ಹುಲುಸಾದ ಕೊಡುಗೈ ಸಂಕೇತ ಈ ಬೆಚ್ಚನೆಯ ತೇವದ ಕೈಗಳು. ನಿನ್ನ ಕೈಗಳು ಅತಿ ಉದಾರತೆಯಿಂದ ಸ್ವಾಧೀನ ತಪ್ಪಿದೆ. ಅದನ್ನು ಅಂಕೆಯೊಳಗಿಡಬೇಕು. ನಿರಶನ ಮತ್ತು ದೇವತಾಸ್ಮರಣೆ, ಹೇರಳ ದಂಡನೆ, ಶ್ರದ್ಧಾವಂತ ಶಿಕ್ಷಣಾಭ್ಯಾಸ ಇವುಗಳು ಈ ಕೈಗಳಿಗೆ ಬೇಕಾದುದು. ಯಾಕೆಂದರೆ ಈ ಕೈಗಳು ಪ್ರತಿರೋಧ ಪ್ರದರ್ಶಿಸುವ ಉತ್ಕಟ ಓಜಸ್ಸಿನ ಪ್ರಕೃತಿಯವು' ಮತ್ತೂ ಮುಂದುವರೆದು 'it is a good hand / A frank one' ಎಂದು ದ್ವಂದ್ವಾರ್ಥದಲ್ಲಿ ಸೇರಿಸುತ್ತಾನೆ. 'moist', 'hot', 'liberal', 'good', 'frank' ಇಲ್ಲಿ ಯಾವ ಶಬ್ದಕ್ಕೂ ನಿಘಂಟುವಿನ ಅರ್ಥ ಮಾತ್ರವಲ್ಲ, ಅದ್ದಕೂ ಮೀರಿದ ಅರ್ಥಗಳಿವೆ, ಧ್ವನಿಗಳಿವೆ. ಬಹು ಮೆದುವಾಗಿ ಆಡಿದ ಕ್ರೂರ ಶಬ್ದಗಳು. ಬೆಚ್ಚಗಿನ ತೇವದ ಕೈಗಳು, ಉದ್ರೇಕಿಸುವ ಕಾಮನೆಗಳ ಸೂಚಕ. ಡೆಸ್ಡಿಮೋನಾ ಇಂಥ ತೇವದ ಕೈಗಳನ್ನು

ಅತಿ 'liberal' ಆಗಿ ಬಳಸಿದ್ದಾಳೆ. 'good' ಮತ್ತು 'frank' ಕೂಡ ಅಷ್ಟೆ, ಧಾರಾಳವಾಗಿ ತನ್ನನ್ನು ಕೊಟ್ಟುಕೊಂಡಿದ್ದಾಳೆ ಎಂದೂ 'frank'ಗೆ ಮತ್ತೂ ವಿಶೇಷವಾಗಿ 'ಎಗ್ಗಿಲ್ಲದೆ' ಎಂದೂ ಅರ್ಥ ಬರುತ್ತದೆ. ಅಥೆಲೋವಿಗೆ ಮನಸ್ಸು ವಿಕಾರಗೊಂಡಂತೆ ಅವನ ಭಾಷೆಯೂ ವಿಕಾರಗೊಳ್ಳುತ್ತದೆ. ಹಿಂಸೆಯ ಮೊದಲ ಹಂತವಿದು. ದಾಂಪತ್ಯಜೀವನ ಕವಲೊಡೆದು ಇಬ್ಬರೂ ಬೇರೆಬೇರೆ ತೀರಗಳಲ್ಲಿ ನಿಂತು ಮಾತನಾಡುವಂತೆ ಕಾಣುತ್ತದೆ. ಅಥೆಲೋ ಮಾತುಗಳನ್ನು ಸರಳವಾಗಿ, ಸಹಜವಾಗಿ ಮಾತ್ರ ಡೆಸ್ಡಿಮೋನಾ ನೋಡಬಲ್ಲಳು. 'ನೀನು ಹೇಳುವುದು ನಿಜ. ಇದೇ ಕೈಗಳಲ್ಲವೆ ನನ್ನ ಹೃದಯವನ್ನು ನಿನಗೆ ನೀಡಿಬಿಟ್ಟದ್ದು' ಎಂದು ಅಭಿಮಾನದಲ್ಲಿ ಹೇಳುತ್ತಾಳೆ. 'ಹೌದು ಹೌದು ಬಹು ಉದಾರ ಕೈಗಳು. ಹಿಂದಿನ ಕಾಲದಲ್ಲಿ ಹೃದಯಗಳು ಕೈಗಳನ್ನು ನೀಡುತ್ತಿದ್ದವು, ಈಗ ಕೈಗಳು ಮಾತ್ರ ಸೇರುತ್ತವೆ, ಹೃದಯಗಳಲ್ಲ....' ಎಂದು ಮತ್ತೂ ಕೊಂಕು ಮಾತನಾಡುತ್ತಾನೆ. ಡೆಸ್ಡಿಮೋನಾಳಿಗೆ ಅವನು ಏನು ಮಾತನಾಡುತ್ತಿದ್ದಾನೆ ಎಂದು ನಿಜವಾಗಿ ಅರ್ಥವಾಗುವುದಿಲ್ಲ. ಅವನ ಮಾತಿಗೆ ಏನು ಹೇಳಬೇಕೆಂದು ತೋರುವುದೂ ಇಲ್ಲ. ಮಾತನ್ನು ಬೇರೆ ದಿಕ್ಕಿಗೆ ತಿರುಗಿಸಿ ತನ್ನ ಪ್ರಧಾನ ಕಳಕಳಿಯ ವಿಷಯ ಎತ್ತುತ್ತಾಳೆ. 'ಸರಿಸರಿ ; ನೀನು ಕೊಟ್ಟ ವಚನದ ಬಗ್ಗೆ ಮಾತನಾಡು'. ಯಾವುದು ಎಂದದ್ದಕ್ಕೆ ತಾನು ಕ್ಯಾಷಿಯೋಗೆ ಹೇಳಿ ಕಳಿಸಿರುವುದಾಗಿ ಹೇಳುತ್ತಾಳೆ. ಅಥೆಲೋ ಕಿವಿಯ ಮೇಲೆ ಹಾಕಿಕೊಳ್ಳದವನಂತೆ, ತನಗೆ ಶೀತವಾಗಿ ಬಾಧೆಯಾಗಿದೆ ಎಂದು ಅವಳ ಕರವಸ್ತ್ರ ನೀಡುವಂತೆ ಕೇಳುತ್ತಾನೆ. ಇಲ್ಲಿಂದ ಮುಂದಕ್ಕೆ ಆಗುವುದನ್ನು – ಅಂದರೆ ಎರಡೇ ಸಾಲುಗಳ ಅಂತರದಲ್ಲಿ ಆಗುವುದನ್ನು ನಾನು ನೋಡಿದ ರಷ್ಯನ್ ನಿರ್ದೇಶಕನೊಬ್ಬನ 'ಅಥೆಲೋ' ಚಿತ್ರದ ವಿವರಣೆಯ ಮೂಲಕ ಕೊಡಲು ಬಯಸುತ್ತೇನೆ. ಮರೆಯಲೇ ಆಗದೆ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದ ದೃಶ್ಯ ಅದು. 'Lend me thy handkerchief' ಅಂದಕೂಡಲೆ, ಆ ಕ್ಷಣದಲ್ಲಿ ಡೆಸ್ಡಿಮೋನಾ 'Here, my lord' ಎಂದು ಅವನಿಗೆ ನೀಡುತ್ತಾಳೆ. ಹಾಗೆ ಕರವಸ್ತ್ರ ಕೈತಾಗಿದ ಕೂಡಲೇ ಹಿಗ್ಗಿನಲ್ಲಿ, ತೃಪ್ತಿಯಲ್ಲಿ ಒಂದೇ ಕ್ಷಣದಲ್ಲಿ ತನ್ನ ಎಲ್ಲ ಸಂಶಯ ಭೀತಿಗಳನ್ನೂ ಗುಡಿಸಿಹಾಕಿದಂತೆ ಆನಂದಪರವಶತೆಯಲ್ಲಿ – ಕೈಗೆ ತಾಗಿದ ಕರವಸ್ತ್ರದ ಕಡೆಗೆ ದೃಷ್ಟಿಯೂ ಹಾಯಿಸದೆ – ಡೆಸ್ಡಿಮೋನಾಳನ್ನು ಗಾಢವಾಗಿ ಅಪ್ಪುತ್ತಾನೆ. ತನ್ನ ಸಂಭ್ರಮದಲ್ಲಿ ಕಣ್ಣುಗ್ಗಳು ಒದ್ದೆಯಾಗಿ ಕಣ್ಣುಗ್ಗಳು ಮುಚ್ಚಿಕೊಳ್ಳುತ್ತವೆ. ಒಂದು ಕ್ಷಣದ ಉತ್ಕೃಷ್ಟ ಸ್ಥಿತಿ ಇದು. ಕಣ್ಣುಗ್ಗಳು ನಿಧಾನವಾಗಿ ತೆರೆದು ತನ್ನ ಕೈಗಳಲ್ಲಿ ತಾನು ಹಿಡಿದ ಕರವಸ್ತ್ರ ತನ್ನ ಆಲಿಂಗನದಲ್ಲೇ ಇರುವ ಡೆಸ್ಡಿಮೋನಾಳ ಬೆನ್ನ ಹಿಂದೆ ಕಾಣುತ್ತದೆ. ಭೂಕಂಪವಾದಂತೆ ನಡುಗಿ ಹಾವಿನ ಮೈಯಿನ ತಣುವು ಮೈತಾಗಿದಂತೆ ಅವಳಿಂದ ತಟ್ಟನೆ ದೂರಸರಿದು 'That which I gave you' ಎಂದು ಅಬ್ಬರಿಸುತ್ತಾನೆ. ಆ ರಷ್ಯನ್ ಚಿತ್ರದ ಈ ಎರಡೇ ಕ್ಷಣದ ದೃಶ್ಯ ವೀಕ್ಷಕರ ವ್ಯಕ್ತಿತ್ವಗಳನ್ನೇ ಕಲಕಿಬಿಡುವಂಥದು. ಇಲ್ಲಿಂದ ಮುಂದಕ್ಕೆ ಸುಮಾರು ಇಪ್ಪತ್ತೆರಡು ಸಾಲುಗಳು ವಿಚಿತ್ರವೂ ನಿಗೂಢವೂ ಆದ ಜಗತ್ತಿನ ಚಿತ್ರಣ. ಈ ಜಗತ್ತಿಗೆ ಡೆಸ್ಡಿಮೋನಾ ತೀರಾ

ಅಪರಿಚಿತಳು. ಅಚ್ಚರಿ ಮತ್ತು ಭಯಗಳು ಮಾತ್ರ ಅವಳಿಗೆ ಸಾಧ್ಯ. ಇಷ್ಟೆಲ್ಲವೂ ಒಂದು ಪುಟ್ಟ ಕರವಸ್ತ್ರ ಅನಾವರಣಗೊಳಿಸುವ ಲೋಕದ ವ್ಯವಹಾರಗಳು. ತನಗೆ ಇದು ಅರ್ಥವೇ ಆಗುವುದಿಲ್ಲವೋ ಅಥವಾ ತನಗೆ ಈ ಲೋಕದೊಳಗೆ ಪ್ರವೇಶವೇ ಸಾಧ್ಯವಿಲ್ಲವೋ ಅವಳಿಗೆ ತಿಳಿಯುವುದಿಲ್ಲ. ಅಥೆಲೋ-ಡೆಸ್ಡಿಮೋನಾಳ ಮದುವೆಯಷ್ಟೇ ಅಲ್ಲ, ಎಲ್ಲ ಮದುವೆಗಳೂ ಎರಡು ಜಗತ್ತುಗಳ ಸಾಂಗತ್ಯ ಮತ್ತು ಮೈತ್ರಿಗಳ ಯತ್ನ, ಸಮನ್ವಯ ಸಾಮರಸ್ಯಗಳು ಸಾಧಿಸಿದಾಗ ಮಾತ್ರ ಈ ಎರಡೂ ಜಗತ್ತುಗಳು ಕೂಡಿ ಒಂದು ಹೊಸಜಗತ್ತು ಸೃಷ್ಟಿಯಾಗಬಹುದು. ಹಾಗೆ ಸಾಧ್ಯವಾಗದೇ ಹೋದರೆ ಎರಡೂ ಜಗತ್ತುಗಳು ಛಿದ್ರವಾಗಿಬಿಡುವುದು ಖಂಡಿತ. ಎಲ್ಲ ಸಾಮಾನ್ಯ ಮದುವೆಗಳಿಗೂ ಇದು ಅನ್ವಯಿಸಬಹುದಾದರೆ ಅಥೆಲೋ-ಡೆಸ್ಡಿಮೋನಾಳ ಮದುವೆಗೆ ಮತ್ತೂ ಅಷ್ಟು ಉತ್ಕಟವಾಗಿ ಅನ್ವಯವಾಗುತ್ತದೆ. ಎರಡು ಖಂಡಗಳು, ಎರಡು ಜನಾಂಗಗಳು, ಎರಡು ಬಣ್ಣಗಳು ಮತ್ತು ತೀರ ವೈರುಧ್ಯಗಳ ಎರಡು ಸಂಸ್ಕೃತಿಗಳು ಇಲ್ಲಿ ಐಕ್ಯವನ್ನೂ ಮೈತ್ರಿಯನ್ನೂ ಸ್ಥಾಪಿಸಲು ಯತ್ನಿಸಿವೆ. ಅಥೆಲೋವಿಗೆ ಈ ಬಿಳೀ ಜಗತ್ತಿನ ಸಂಸ್ಕೃತಿ, ನಡಾವಳಿ, ನಂಬಿಕೆಗಳು ಹೇಗೆ ಎಂದಿಗೂ ಸವಾಲುಗಳಾಗಿ, ಪ್ರಶ್ನೆಗಳಾಗಿ ಉಳಿಯುತ್ತವೆಯೋ ಹಾಗೆಯೇ ಡೆಸ್ಡಿಮೋನಾಳಿಗೆ ಅಥೆಲೋವಿನ ಕಪ್ಪುಜಗತ್ತಿನ ನಿಗೂಢಗಳು ಕಲ್ಪನೆಗೂ ಬಾರದ ರಹಸ್ಯವೂ ಸಮಸ್ಯೆಯೂ ಆಗಿ ಉಳಿಯುತ್ತವೆ. ಡೆಸ್ಡಿಮೋನಾ, ಒಂದು ಅರ್ಥದಲ್ಲಿ ಅಥೆಲೋನಲ್ಲಿ ಅನುರಕ್ತಳಾಗಲು ಈ ಜಗತ್ತಿನ ಆಕರ್ಷಣೆಯೂ ಸೇರಿಕೊಂಡಿದೆ ಎಂಬುದು ನಿರ್ವಿವಾದ ಅಂಶ. ಅಥೆಲೋವಿಗೆ ಈಗ ತಾನೇ ಒಂದು ಹಂತದವರೆವಿಗೆ ತನ್ನ ತರಬೇತಿನಿಂದ ಇಯಾಗೋ ಕಲಿಸಿದ ಪಾಠವೆಂದರೆ ಈ ಬಿಳೀ ಜಗತ್ತು, 'ನೀನು ತಿಳಿದುಕೊಂಡಷ್ಟು ಸಾಚಾ ಅಲ್ಲ, ಕಣ್ಣಿಗೆ ಕಾಣುವುದು ನಿಜವಲ್ಲ, ಒಳಗೆ ಬೇರೆಯದೇ ಸತ್ಯಗಳಿವೆ' ಎಂದು. ಹೀಗಾಗಿ ಅಥೆಲೋ ಈ ಡೆಸ್ಡಿಮೋನಾಳ ಬಿಳೀ ಲೋಕವನ್ನು ಮಾರ್ಗದರ್ಶಕನ ಸಹಾಯವಿಲ್ಲದೆ ಪ್ರವೇಶಿಸಲೇ ಆಗುವುದಿಲ್ಲ. ತನ್ನ ಮದುವೆ ಮುರಿದು ಬೀಳುತ್ತದೆಂಬ ದೃಢ ನಿಶ್ಚಯ ಅವನಿಗಾಗಿ ಬಿಟ್ಟಿದೆ. ಈಗ ಡೆಸ್ಡಿಮೋನಾಳ ಸರದಿ. ಅವಳು ಈಗ ಈ ಲೋಕದ ಪರಿಚಯಮಾಡಿಕೊಳ್ಳಬೇಕು. ಸಾರ್ಥಕವಾಗಿ ಗ್ರಹಿಸಬೇಕು. ಗೌರವದಿಂದ ಕಾಣಬೇಕು. ತಮ್ಮಿಬ್ಬರ ಮಧ್ಯೆ ಈ ಪುಟ್ಟ ಕರವಸ್ತ್ರ ಎಂದೂ ಜಾರದ ಅಂತರಪಟರಾಗಿಬಿಡುವ ಭಯ ಆ ಕ್ಷಣದಲ್ಲಿ ಸಣ್ಣದಾಗಿ ಅವಳಿಗೂ ಕಾಡಿರಬೇಕು.

ಆ ಕರವಸ್ತ್ರ ತನ್ನಲ್ಲಿಲ್ಲ ಎಂದವಳಿಗೆ 'ಇಲ್ಲವೇ ?' ಎಂದು ಮತ್ತೆ ಕೇಳುತ್ತಾನೆ. 'no, faith, my lord' ಎಂದು, ಅಥೆಲೋವಿನ ಮನಃಸ್ಥಿತಿಯನ್ನು ಊಹಿಸಿದವಳಂತೆ ತಬ್ಬಿಬ್ಬಾಗುತ್ತಾಳೆ. ಈ ಕರವಸ್ತ್ರದ ಇತಿಹಾಸ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಚಿತ್ರವತ್ತಾಗಿ ವಿವರಿಸುತ್ತಾನೆ ಅಥೆಲೋ. ಝಗಝುಗಿಸುವ ಬಿಳೀಲೋಕದ ನಾಗರಿಕತೆ ಎಷ್ಟು ಪ್ರಭಾವ ಬೀರಿದ್ದರೂ ಅಲ್ಲಿ ಪ್ರಜ್ಞೆಯ ಆಳದ ಪದರಗಳಲ್ಲಿ ಗುಪ್ತವಾಗಿ ಮನೆಮಾಡಿಕೊಂಡಿರುವ ಆ ಕಪ್ಪುಲೋಕದ ಅದ್ಭುತಗಳು

ಅಳಿಸಿಹೋಗಿಲ್ಲ. "ಅಪರಾಧವೆಸಗಿದ್ದೀ ನೀನು... ಆ ಕರವಸ್ತ್ರವನ್ನು ಒಬ್ಬ ಈಜಿಪ್ಟ್ ದೇಶದಾಕೆ ನನ್ನ ತಾಯಿಗೆ ಕೊಟ್ಟಿದ್ದಳು. ಅವಳೊಬ್ಬ ಮಾಟಗಾತಿ. ಜನಗಳ ಮನೋವ್ಯಾಪಾರಗಳನ್ನೆಲ್ಲ ಹುಡುಕಿ ತೆಗೆದುಬಿಡುತ್ತಿದ್ದಳು. ಈ ಕರವಸ್ತ್ರವನ್ನು ನಮ್ಮಮ್ಮ ತನ್ನ ಬಳಿ ಭದ್ರವಾಗಿ ಇಟ್ಟುಕೊಂಡಿರುವವರೆಗೆ ಅವಳ ಗಂಡ ಅವಳ ಅಂಕೆಯೊಳಗೆ ಇರುತ್ತಾನೆ ಎಂದು ಹೇಳಿದ್ದಳು. ಎಂದಿಗೂ ನಮ್ಮಮ್ಮ ನಮ್ಮಪ್ಪನ ಕಣ್ಣಿಗೆ ಆಕರ್ಷಕವಾಗಿ ಉಳಿಯುವಳು. ಆದರೆ ಈ ಕರವಸ್ತ್ರವನ್ನು ನಮ್ಮಮ್ಮ ಕಳೆದುಕೊಂಡರೆ ಅಥವಾ ಮತ್ಯಾರಿಗಾದರೂ ಕಾಣಿಕೆಯಾಗಿ ನೀಡಿಬಿಟ್ಟರೆ ನಮ್ಮಪ್ಪನ ಕಣ್ಣಿಗೆ ಅವಳು ಹೇಸಿಗೆಯಾಗಿ ಕಾಣುತ್ತಾಳೆ. ಮತ್ತವನು ಬೇರೆಕಡೆ ತನ್ನ ಕಣ್ಣುಗಳನ್ನು ಹಾಯಿಸಿ ತನ್ನ ಬಯಕೆಗಳನ್ನು ತೀರಿಸಿಕೊಳ್ಳುತ್ತಾನೆ. ನಮ್ಮಮ್ಮ ಸಾಯುವಾಗ ಈ ಕರವಸ್ತ್ರವನ್ನು ನನಗೆ ಕೊಟ್ಟು ನಾನು ಮದುವೆಯಾದಾಗ ಅದನ್ನು ನನ್ನ ಹೆಂಡತಿಗೆ ಕೊಡಬೇಕೆಂದು ಹೇಳಿದ್ದಳು. ಅಂತೆಯೇ ನಾನು ನಿನಗೆ ನೀಡಿದೆ. ಎಚ್ಚರದಿಂದಿರು. ಅಮೂಲ್ಯ ಕಣ್ಣುಗಳಂತೆ ನಿನ್ನ ಆಪ್ತವಸ್ತುವನ್ನಾಗಿ ಅದನ್ನು ಕಾಣು. ಕಳೆದುಕೊಂಡೋ ಅಥವಾ ಬೇರೆಯವರಿಗೆ ಕೊಟ್ಟುಬಿಟ್ಟೆಯೋ ಎಂದರೆ ಎಂದೂ ಕಾಣದಂಥ ಸರ್ವನಾಶಕ್ಕೆ ಗುರಿಯಾಗುತ್ತಿ". ನಂಬಿಕೆಯ ಮೂಲದಿಂದ ಹೊಮ್ಮಿದ ಮಾತುಗಳು, ಆತ್ಮವಿಶ್ವಾಸದ ಮಾತುಗಳು. 'ಇಲ್ಲಿ ನಾನು ಯಜಮಾನ' ಎಂಬ ಕೆಚ್ಚಿನಲ್ಲಿ ಮಾತನಾಡಿದವು. ಡೆಸ್ಡಿಮೋನಾಳಿಗೆ ಏನೂ ತಿಳಿಯದೆ 'Is it possible' ಎಂದು ಮಾತ್ರ ಉಸುರಬಲ್ಲಳು. ಮತ್ತೂ ಅಷ್ಟು ದೃಢತೆಯಿಂದ ಉತ್ತರಿಸುತ್ತಾನೆ ಅಥೆಲೋ 'it is true, there's magic in the web of it' ಆ ಕರವಸ್ತ್ರದಲ್ಲಿ ಅನಿರ್ವಚನೀಯ ಮಾಂತ್ರಿಕತೆಯಿದೆ. ಮಂತ್ರಸದೃಶವಾದದ್ದು ಅದು. ಒಬ್ಬ ಸಾಧಾರಣ ಮಾಟಗಾತಿ ಕೊಟ್ಟದ್ದಲ್ಲ ಆ ಕರವಸ್ತ್ರ, ಒಬ್ಬ ಕೊರವಂಜಿ, ಅದ್ಭುತಲೋಕಗಳ ಪ್ರತಿನಿಧಿ, ಪ್ರವಾದಿನಿ ಕೊಟ್ಟದ್ದು. ಈ ಸೂರ್ಯ ಭೂಮಿಯನ್ನು ಇನ್ನೂರು ಬಾರಿ ಸುತ್ತಿದ್ದನ್ನು ಕಂಡಿದ್ದ ಮಹಾಮಾಂತ್ರಿಕಳು ಅವಳು. ಈ ಕರವಸ್ತ್ರವನ್ನು ಅವಳು ತನ್ನ ಭವಿಷ್ಯನೋಟದ ಶಕ್ತಿಯು ಪ್ರಚಂಡಸ್ಥಿತಿಯಲ್ಲಿದ್ದ ಗಳಿಗೆಯಲ್ಲಿ ನೆಯ್ದದ್ದು. ಮತ್ತು ಅವಳು ಬಯಸಿದ ರೇಷ್ಮೆನೂರು ಪುನೀತ ಹುಳುಗಳಿಂದ ಆಯ್ದದ್ದು. ಮತ್ತದಕ್ಕೆ ಲೇಪಿಸಿದ ಬಣ್ಣ ಕೆಡದಂತೆ ಸಂಸ್ಕರಿಸಿ ರಕ್ಷಿಸಿದ ಕನ್ನಿಕೆಯರ ಶವಗಳಿಂದ ತಯಾರಿಸಿದ್ದು. ಡೆಸ್ಡಿಮೋನಾಳ ಸುತ್ತ ಮತ್ತೂ ಅಷ್ಟು ಹಗ್ಗ ಸುತ್ತಿ ಗಂಟುಗಳು ಹಾಕಿ ಬಿಗಿಯುತ್ತಿದ್ದಾನೆ ಅಥೆಲೋ. ಮಾಟಗಾತಿ, ಇನ್ನೂರು ವರ್ಷಗಳು ಬಾಳಿದ ಕೊರವಂಜಿ ; ಅವಳು ಬಳಸಿದ ನೂಲು, ಲೇಪಿಸಿದ ಬಣ್ಣ, ಅವಳು ನೆಯ್ದ ಗಳಿಗೆ ಯಾವುವೂ ಮೆದುಳು ಗ್ರಹಿಸಲಾಗದ, ಪ್ರಜ್ಞೆಗೆ ಇಳಿಯಲಾಗದ ಆದರೂ ಬೆಚ್ಚಿಸುವ, ದಿಙ್ಮೂಢಗೊಳಿಸುವ ಲೋಕದ ವಿವರಗಳು. ಡೆಸ್ಡಿಮೋನಾ ಇಂಥ ಲೋಕದ ಪ್ರವೇಶ ಮಾಡಬೇಕು, ಅಲ್ಲಿ ಸಲ್ಲಬೇಕು. ಅವಳ ಮನಸ್ಸು ತನಗೆದುರಾಗಿರುವ ಸವಾಲಿನೆದುರು ಸಹಜವಾಗಿ ಹೌಹಾರಿರಬೇಕು. ಅಥೆಲೋ ಈ ವಿವರಗಳನ್ನು ಅವಳ ತಿಳುವಳಿಕೆಗಷ್ಟೇ ಹೇಳುತ್ತಿಲ್ಲ, ಈ ಲೋಕವನ್ನು ಒಪ್ಪಿ ನಡೆಯದಿದ್ದರೆ "to lose, or give away, were such perdition / As nothing else

could match" ಎಂದು ಚಳಿ ಹುಟ್ಟಿಸುವ ಬೆದರಿಕೆ ಹಾಕಿದ್ದಾನೆ. ದಿಗ್ಭ್ರಮೆ ಗೊಂಡು ದಿಕ್ಕು ತೋರದವಳಂತಾಗಿಬಿಟ್ಟಿದ್ದಾಳೆ ಡೆಸ್ಡಿಮೋನಾ. 'In faith, is it true ?' ಎಂದು ಸುರಿದ ಅವಳ ಪ್ರಶ್ನೆಗೆ 'Most veritable, therefore look to it well' ಎಂದು ಸ್ಪಷ್ಟ ದನಿಯಲ್ಲಿ ಉತ್ತರಿಸುತ್ತಾನೆ. ಈ ಕರವಸ್ತ್ರವನ್ನು ತಾನು ನೋಡದೇ ಇದ್ದಿದ್ದರೆ ಚೆನ್ನಾಗಿತ್ತು ಎಂದು ಮರಗುತ್ತಾಳೆ. ಇಲ್ಲಿಂದ ಮುಂದೆ ಸುಮಾರು ಒಂಬತ್ತು ಸಾಲುಗಳು ಅಥೆಲೋ ಪ್ರತಿ ಮಾತಿನಲ್ಲಿಯೂ ಪ್ರತಿ ಪ್ರಶ್ನೆಯಲ್ಲಿಯೂ ಅವಳ ಸುತ್ತ ತಾನು ಈಗಾಗಲೇ ಸುತ್ತಿರುವ ಹಗ್ಗವನ್ನು ಮತ್ತೂ ಬಿಗಿಗೊಳಿಸುತ್ತ, ಹಿಂಸಿಸುತ್ತ ಹೋಗುವ ಛಲ ಕಾಣಿಸುತ್ತದೆ. ಅವಳು ತನ್ನ ಉತ್ತರಗಳಲ್ಲಿ ಈ ಬಿಗಿತದಿಂದ ಮುಕ್ತಳಾಗುವ ಯತ್ನ ಕಾಣುತ್ತ ಹೋಗುತ್ತದೆ. ಬಹುಶಃ ಈ ಪುಟ್ಟ ಹಣಾಹಣಿಯ ದೃಶ್ಯವನ್ನು ಇಡಿಯಾಗಿ ನಾವು ನೋಡಬೇಕು.

Oth : Ha, wherefore ?

Des : Why do you speak so startingly and rash ?

Oth : Is it lost, is it gone ? speak, is it out of the way ?

Des : Heaven bless us

Oth : Say you ?

Des : It is not lost, but what if it were ?

Oth : Ha !

Des : I say it is not lost.

Oth : Fetch it, let me see it

Des : Why, so I can Sir, but I will not now...

ಕ್ರಮೇಣ, ಮಾತಿನಿಂದ ಮಾತಿಗೆ ಹೇಗೆ ಅವರ ಮನಃಸ್ಥಿತಿಗಳು ಬೇರೆ ಬೇರೆ ಆಯಾಮಗಳನ್ನು ಪಡೆದುಕೊಳ್ಳುತ್ತಿವೆ ಎಂಬುದನ್ನು ಗ್ರಹಿಸುವುದು ಕಷ್ಟವಾಗಲಾರದು. ಅಥೆಲೋನಿಗೆ ಈಗ ಈ ಕರವಸ್ತ್ರ ಕೇವಲ ತಾಯಿಕೊಟ್ಟ ಮಂತ್ರಾಚ್ಛಾದಿತ ಕಾಣಿಕೆಯಷ್ಟೆ ಅಲ್ಲ ಅಥವಾ ಒಂದು ನಿಗೂಢ ಜಗತ್ತಿನ ಪ್ರಶಸ್ತ ವಸ್ತುವಷ್ಟೇ ಅಲ್ಲ. ಈಗ ಅದಕ್ಕೆ ಬೇರೆ ಅರ್ಥಗಳು, ಬೇರೆ ಸಂಬಂಧಗಳು ಹುಟ್ಟಿಕೊಂಡುಬಿಟ್ಟಿವೆ. ಡೆಸ್ಡಿಮೋನಾ 'ಅದು ತನ್ನಲ್ಲಿಲ್ಲ...' ಎಂದು ಹೇಳಿದ ಕ್ಷಣವೇ ಇಯಾಗೋ ವಿವರಿಸಿದ ದೃಶ್ಯದ ನೆನಪಾಗುತ್ತದೆ. ತನ್ನ ಕರವಸ್ತ್ರವನ್ನು, ತಾನು ತನ್ನ ಹೆಂಡತಿಗೆ ಕೊಟ್ಟ ಪ್ರಥಮ ಪ್ರೇಮಕಾಣಿಕೆಯನ್ನು ಕ್ಯಾಷಿಯೋ ತನ್ನ ಗಡ್ಡ ತೀಡಿಕೊಳ್ಳುವುದಕ್ಕೆ ಬಳಸುತ್ತಿದ್ದ ಎಂಬುದು ಕಣ್ಣಿಗೆ ಕಟ್ಟಿದಂತಾಗುತ್ತದೆ. ಎಂದೇ ಪ್ರಶ್ನೆ ಕ್ರಮೇಣ

ಹೆಚ್ಚುಹೆಚ್ಚು ಕ್ರೂರವಾಗುತ್ತ ಹೋಗುತ್ತದೆ. ಚುಚ್ಚುತ್ತ ಹೋಗುತ್ತದೆ. ಇಯಾಗೋ ಹೇಳಿದ್ದ ಪ್ರತಿ ಮಾತೂ ಸತ್ಯವೆಂಬುದು ಮನಸ್ಸಿನಲ್ಲಿ ಖಾತ್ರಿಯಾಗುತ್ತ ಹೋಗುತ್ತದೆ. ಡೆಸ್ಡಿಮೋನಾಳಿಗೆ ಪ್ರತಿಬಾರಿ ಮೈಸುತ್ತಿದ ಹಗ್ಗದ ಬಿಗಿತ ಏರುತ್ತಿದ್ದಂತೆಯೂ ತನ್ನ ಗಂಡನ ಕುರಿತಾದ ತನ್ನ ನಂಬಿಕೆ ಕುಸಿಯುತ್ತಿರುವ ಭಾವನೆಯೂ ಉಂಟಾಗಿ, 'ಇಲ್ಲ, ಆ ಭಯಕ್ಕೆ ಕಾರಣವಿಲ್ಲ' ಎಬಂತೆ ಬಿಗಿ ಸಡಿಲಗೊಳಿಸಿಕೊಳ್ಳುವಂತೆ ತನ್ನ ಮಾತುಗಳನ್ನು ಆಡುತ್ತಾಳೆ. ಮನಸ್ಸಿನಲ್ಲಿ ಗುಪ್ತವಾಗಿ ಬೆಳೆಯುತ್ತಿರುವ ಶಂಕೆ, ತಾನು ಕ್ಷಣದ ಹಿಂದೆ ಎಮಿಲಿಯಾಗೆ ಹೇಳಿದ್ದ 'I think the sun where he was born / Drew all such humours from him' ಎಂಬ ಮಾತು ಸುಳ್ಳಾಗುತ್ತಿದೆಯೆ ಎಂದು ಕಾಡಲು ಆರಂಭಿಸುತ್ತದೆ. ಎಷ್ಟೇ ಪ್ರಶಸ್ತವಾಗಲೀ ಎಷ್ಟೇ ಪವಿತ್ರವಾಗಲೀ ಒಂದು ಕರವಸ್ತ್ರ ತಮ್ಮ ಜೀವಂತ ಪ್ರೇಮಕ್ಕಿಂತ ಮಿಗಿಲಾದುದೆ ಎಂಬಂತೆ 'It is not lost, what if it were' 'I say it is not lost' 'Why, so I can Sir, but I will not now' ಎಂದು ಮಾತಿನಿಂದ ಮಾತಿಗೆ ತಾನೂ ಸಾತ್ವಿಕ ಹಠದ ಧ್ವನಿ ಮಾಡುತ್ತಾಳೆ. 'ನಾನು ಹೇಳಿದರೆ ನಂಬಿಕೆಯಾಗದೆ ? ತರುತ್ತೇನೆ, ಆದರೆ ಈಗಲೇ ಯಾಕೆ ಕೊಂಡುತರಬೇಕು ?' ಎಂದು ಗಂಡನ ರಚ್ಚೆಯ ಈ ರೀತಿ ಅರ್ಥವಾಗದವಳಂತೆ ಕೇಳುತ್ತಾಳೆ. ತತ್‌ಕ್ಷಣ ನೆನಪಾದವಳಂತೆ, ಗಂಡನ ಈ ಇಡೀ ವರ್ತನೆ ಉದ್ದಿಶ್ಯಪೂರ್ಣವಾದದ್ದು ಎಂಬಂತೆ, ತನಗೆ ನಿಜವಾದ ಗುಟ್ಟು ಗೊತ್ತಾಯಿತು ಎಂಬುತೆ ಅವನು ತನ್ನ ಸುತ್ತ ಸುತ್ತಿ ಬಿಗಿಯುತ್ತಿದ್ದ ಹಗ್ಗವನ್ನು ಒಮ್ಮೆಗೇ ಪೂರ್ಣ ಸಡಿಲಿಸಿಕೊಂಡು ಮತ್ತೊಂದು ತುದಿ ಹಿಡಿದು ಜಗ್ಗಲಾರಂಭಿಸುತ್ತಾಳೆ. ಹಗ್ಗದ ಎಳೆದಾಟ ಆರಂಭವಾಗುತ್ತದೆ. 'ನನಗೆ ಗೊತ್ತು, ನನ್ನ ಪ್ರಾರ್ಥನೆಯನ್ನು ನಿರಾಕರಿಸುವುದಕ್ಕೆ ನೀನು ಹೂಡಿರುವ ಆಟ ಇದು. ದಯವಿಟ್ಟು ಕ್ಯಾಷಿಯೋಗೆ ಕರೆ ಕಳಿಸು' ಎಂದು. ಅಥೆಲೋ ಕರವಸ್ತ್ರಕ್ಕಾಗಿ, ಡೆಸ್ಡಿಮೋನಾ ಕ್ಯಾಷಿಯೋನಿಗಾಗಿ ಪರಸ್ಪರ ಜಗ್ಗಾಡುತ್ತ ಹೋಗುತ್ತಾರೆ. ಪ್ರತಿಬಾರಿ ಡೆಸ್ಡಿಮೋನಾ ಕ್ಯಾಷಿಯೋ ಬಗ್ಗೆ ಮಾತನಾಡುವಾಗಲೂ ಹೊಸಹೊಸ ವಿಶೇಷಣಗಳನ್ನೂ, ಅವನ ಗುಣಗಳ ಬಗ್ಗೆ ವರ್ಣನೆಯನ್ನೂ, ಅವನು ಅಥೆಲೋವಿಗೆ ಎಷ್ಟು ಅನಿವಾರ್ಯನೆಂಬುದನ್ನೂ ಸೇರಿಸುತ್ತ ಹೋಗುತ್ತಾಳೆ. ಸಹಜವಾಗಿ ಅಥೆಲೋವಿಗೆ ಅವಳ ಮಾತುಗಳು ತನ್ನ ಕರವಸ್ತ್ರದ ನೆನಪು, ಅದರ ಸದ್ಯದ ಗತಿಯ ಬಗ್ಗೆ ನೆನಪು ಇವುಗಳನ್ನು ಮತ್ತೂ ಅಷ್ಟು ಕೆರಳಿಸುತ್ತ ಹೋಗುತ್ತದೆ. ಡೆಸ್ಡಿಮೋನಾ ಸಹನೆ ಕಳೆದುಕೊಂಡವಳಂತೆ 'ಸತ್ಯವಾಗಿ ಹೇಳುತ್ತೇನೆ, ಇದಕ್ಕೆಲ್ಲ ನೀನೇ ಕಾರಣ' ಎಂದುಬಿಡುತ್ತಾಳೆ. ಅಥೆಲೋವಿಗೆ ತಲೆತಿರುಗಿದಂತಾಗಿ ಅವನು ಬಳಸಿದ್ದ ಉಗ್ರ ಶಾಪದ ಶಬ್ದ 'zounds' ಎಂದು ಗುಡುಗಿ ನಿಷ್ಕ್ರಮಿಸಿ ಬಿಡುತ್ತಾನೆ. ಹಿಂದೊಮ್ಮೆ ಮೂರನೇ ಅಂಕದ ಮೂರನೇ ದೃಶ್ಯದಲ್ಲಿಯೂ ಇದೇ ಶಬ್ದ ಬಳಸಿದ ನೆನಪು ನಮಗಿರಲೇಬೇಕು. (ಇಲ್ಲಿಯೂ ಕೂಡ ನಮ್ಮ ನಾಜೂಕು ಮನಸ್ಸಿನ ಸಂಪಾದಕರುಗಳು 'zounds' ಶಬ್ದವು ಅತಿ ಕ್ರೂರವೂ, ಅಥೆಲೋವಿನ ಬಾಯಲ್ಲಿ ಆಡಲು ತಕ್ಕದಲ್ಲದ್ದು ಎಂದು ತೆಗೆದುಹಾಕಿ ಅದರ ಬದಲು 'Away' ಎಂದು ಹೇಳಿಸುತ್ತಾರೆ. ಈ

ಸಂದರ್ಭದಲ್ಲಿ ಆರ್ಡೆನ್ ಆವೃತ್ತಿಯ ಎಂ. ಆರ್. ರಿಡ್ಲೀ ಮಾಡಿರುವ ಕೆಲವು ಅಂಶಗಳನ್ನು ನಾವು ಗಮನಿಸಬೇಕು. ಆದರೆ ಇಲ್ಲಿ ಅದರ ಪೂರ್ಣಪಾಠ ಕೊಡುವ ಅಗತ್ಯವಿಲ್ಲ ಎಂದು ಕೊಂಡಿದ್ದೇನೆ) ಹಗ್ಗದ ತನ್ನ ತುದಿಯನ್ನು ಜುಗುಪ್ಸೆಯಲ್ಲಿ, ಸಿಟ್ಟಿನಲ್ಲಿ ಕೈಬಿಟ್ಟು ಮತ್ತೊಂದು ತುದಿಯಲ್ಲಿ ಜಗ್ಗುತ್ತಿದ್ದ ಡೆಸ್ಡಿಮೋನಾ ಕುಸಿದುಬೀಳುವಂತೆ ಮಾಡಿ ನಡೆದುಬಿಡುತ್ತಾನೆ. ಇದ್ದಕ್ಕಿದ್ದಂತೆ ತಲೆಯಲ್ಲಿ ಶೂನ್ಯ ಆವರಿಸಿಬಿಟ್ಟಂತಾಗಿಬಿಡುತ್ತಾಳೆ ಡೆಸ್ಡಿಮೋನಾ. ಈ ಇಡೀ ದೃಶ್ಯಕ್ಕೆ ಸಾಕ್ಷಿಯಾಗಿದ್ದ ಎಮಿಲಿಯಾ ಈ ಮನುಷ್ಯ ಅಸೂಯೆಗೆ ತುತ್ತಾಗಿಲ್ಲವೆ ಎಂದು ಮತ್ತೆ ತನ್ನ ಅನುಮಾನ ವ್ಯಕ್ತಪಡಿಸಿದ್ದಕ್ಕೆ ಉತ್ತರವಾಗಿ ಡೆಸ್ಡಿಮೋನಾ 'ಹೀಗೆ ಅವನು ನಡೆದುಕೊಂಡದ್ದು ನಾನು ಎಂದೂ ನೋಡಿರಲಿಲ್ಲ. ಆ ಕರವಸ್ತ್ರದಲ್ಲಿ ಖಂಡಿತವಾಗಿ ಏನೋ ಅಚ್ಚರಿ ಇರಲೇಬೇಕು. ಕಳೆದುಕೊಂಡು ನಾನು ಮಹಾ ದುಃಖಿಯಾಗಿದ್ದೇನೆ' ಎಂದು ಮನಕಲಕುವ ಹಾಗೆ ನರಳುತ್ತಾಳೆ. ಈ ಸಂದರ್ಭದಲ್ಲಿ ಸಹಜವಾಗಿ ಒಂದು ಪ್ರಶ್ನೆ ಏಳುತ್ತದೆ – ಡೆಸ್ಡಿಮೋನಾಳಿಗೆ ತುಂಬ ಪ್ರಾಮಾಣಿಕ ಹಾಗೂ ಆಪ್ತ ಅನುಚರಳಾದ ಎಮಿಲಿಯಾ ಯಾಕೆ ಈ ಕರವಸ್ತ್ರದ ಬಗ್ಗೆ ಇಂಥ ಭಯಂಕರ ದೃಶ್ಯ ನೋಡಿದ ಮೇಲೂ ಮೌನವಾಗಿದ್ದಾಳೆ ಎಂಬ ಪ್ರಶ್ನೆ. ಒಂದು ಕ್ಷಣದಲ್ಲಿ ಇಡೀ ಸಂದರ್ಭವನ್ನು ತಿಳಿಗೊಳಿಸುವ ಶಕ್ತಿ ಇರುವುದು ಅವಳು ಒಬ್ಬಳಿಗೆ ಮಾತ್ರ. ಯಾಕೆ ಡೆಸ್ಡಿಮೋನಾಳಿಗೆ ಕರವಸ್ತ್ರದ ಕಳವಿನ ಕತೆ ಹೇಳಿಬಿಡುವುದಿಲ್ಲ ? ಭಯವೆ ? ತಾನು ಅಪ್ರಾಮಾಣಿಕವಾಗಿ ನಡೆದುಕೊಂಡೆನೆಂದು ಡೆಸ್ಡಿಮೋನಾ ಭಾವಿಸಿಬಿಡಬಹುದೆಂದೆ ? ಗಂಡನನ್ನು ರಕ್ಷಿಸಲೆಂದೆ ? ಅಥವಾ ಸಿಗುವ ಮೊದಲ ಅವಕಾಶದಲ್ಲಿ ಗಂಡನೊಡನೆ ಮಾತನಾಡಿ ಕರವಸ್ತ್ರವನ್ನು ಹಿಂತಿರುಗಿಸಿಬಿಡಬಹುದೆಂದೆ ? ಈ ಎಲ್ಲವೂ ಅವಳ ಮನಸ್ಸಿನಲ್ಲಿ ಕೆಲಸ ಮಾಡಿದ್ದರೂ ಆಶ್ಚರ್ಯವಿಲ್ಲ. ಇದಕ್ಕಿಂತ ಹೆಚ್ಚಿಗೆ ಅವಳಿಂದ ನಿರೀಕ್ಷಿಸುವುದು ನಮ್ಮ ತಪ್ಪೇ ಆಗಬಹುದು. ಸಾಮಾನ್ಯ ಹೆಂಗಸು ಆಕೆ. ಆಕೆಯಿಂದ ಮತ್ತೂ ಅಪೇಕ್ಷಿಸುವುದು ತಪ್ಪು; ಹಾಗೂ ಆಕೆ ಆದರ್ಶದ ಬೆನ್ನು ಹತ್ತಿ ಹೋಗಲು ಶಕ್ತಿ ಇಲ್ಲದ ವ್ಯಾವಹಾರಿಕ ಬದುಕಿನ ಮಹಿಳೆ. ಈ ಬಗೆಯ ಹೆಂಗಸಾದ್ದರಿಂದಲೇ ಅಥೆಲೋ ನಿರ್ಗಮಿಸಿದ ಕೂಡಲೆ ಅವಳು ಆಡುವ ಮಾತುಗಳಲ್ಲಿ ಆ ವ್ಯಾವಹಾರಿಕ ಜಗತ್ತಿನಲ್ಲಿ ಕಲಿತ 'ವಿವೇಕ' ಕಂಡುಕೊಂಡ 'ಸತ್ಯ'ಗಳು ಧ್ವನಿಸುತ್ತ ಹೋಗವುದು. ಒಂದು ಬಗೆಯ ಸಿನಿಕತನವೂ ಸಾರಾಸಗಟು ಗಂಡುಕುಲವನ್ನೇ ಅಳೆದು ತೀರ್ಪು ನೀಡಿಬಿಡುವ ಧಾಟಿಯೂ ಆ ಮಾತುಗಳಲ್ಲಿ ಇವೆ. ತನ್ನೊಳಗೆ ನಡೆಯುತ್ತಿರಬಹುದಾದ ಸಣ್ಣಪ್ರಮಾಣದ ಯಾತನೆಯಿಂದ ದೂರಸರಿಯುವ (ಜಾರಿಕೊಳ್ಳುವ) ಮಾರ್ಗವಾಗಿಯೂ ಈ ಮಾತುಗಳಲ್ಲಿ ಆಡಿದ್ದರೆ ಅಚ್ಚರಿಯಿಲ್ಲ. 'ವರ್ಷವೊಂದೋ ಎರಡೋ ಸಾಕು ಈ ಗಂಡಸರ ರೀತಿಗಳನ್ನು ಬಯಲುಮಾಡುವುದಕ್ಕೆ.... ಅವರೆಲ್ಲ ಹೊಟ್ಟೆಗಳು, ನಾವುಗಳು ಕೇವಲ ಅವು ನುಂಗುವ ಆಹಾರಗಳು. ಹಸಿದು ಕಂಗಾಲಾದವರ ಹಾಗೆ ನಮ್ಮನ್ನು ಮೆದ್ದು ಹೊಟ್ಟೆ ತುಂಬಿದ ಕೂಡಲೆ ನಮ್ಮನ್ನು ತೇಗಿ ಬಿಡುತ್ತಾರೆ'. ಆ ವೇಳೆಗೆ ಅಲ್ಲಿಗೆ ಇಯಾಗೋ, ಕ್ಯಾಷಿಯೋ ಬರುತ್ತಾರೆ. ಇಯಾಗೋ

ಬರುತ್ತಿದ್ದಂತೆಯೇ ಕ್ಯಾಷಿಯೋನಿಗೆ "ಡೆಸ್ಡಿಮೋನಾಳನ್ನು ಬಿಟ್ಟು ಬೇರೆ ಗತಿಯಿಲ್ಲ ನಿನಗೆ, ಅವಳೇ ನಿನ್ನನ್ನು ಕಾಪಾಡಬೇಕು" ಎಂದು ಕಿವಿಮಾತು ಹೇಳುತ್ತಿದ್ದಾನೆ. ಡೆಸ್ಡಿಮೋನಾಳಿಗೆ ಕ್ಯಾಷಿಯೋ ಮತ್ತೊಮ್ಮೆ ಅಷ್ಟೇ ಆರ್ತದನಿಯಲ್ಲಿ, ಹತಾಶೆಯ ಗಡಿ ತಲುಪಿದವನಂತೆ ವಿನಂತಿಸಿಕೊಳ್ಳುತ್ತಾನೆ. ಹಾಗೊಮ್ಮೆ ಅವಳಿಂದಲೂ ಸಾಧ್ಯವಿಲ್ಲದೆ ತನಗೆ ಸ್ಥಾನ ಮರಳಿ ಸಿಗುವುದೇ ಇಲ್ಲವೆಂದಾದರೆ ಬಲವಂತವಾಗಿ ಆ ಸ್ಥಿತಿಗೆ ಒಗ್ಗಿಕೊಳ್ಳುತ್ತ ಹೋಗುತ್ತೇನೆ. ಅದೃಷ್ಟ ತನ್ನನ್ನು ಎಲ್ಲಿ ಕೊಂಡೊಯ್ಯುತ್ತದೋ ಅಷ್ಟರಲ್ಲಿಯೇ ತೃಪ್ತಿಪಟ್ಟುಕೊಳ್ಳುತ್ತೇನೆ ಎಂದು ತನ್ನ ಕೊರಗು ಹೇಳಿಕೊಳ್ಳುತ್ತಾನೆ. ಡೆಸ್ಡಿಮೋನಾಳ ಮೊದಲ ಆತ್ಮವಿಶ್ವಾಸ ಕರಗಿಹೋಗಿದೆ. ಕುಗ್ಗಿ ಹೋಗಿದ್ದಾಳೆ ಅವಳು. ತಾನು ಕೂಡ ಸಹಾಯ ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದು ಒಪ್ಪಿಕೊಳ್ಳುತ್ತಾಳೆ. ತನ್ನ ಗಂಡ ತನ್ನ ಗಂಡನಂತೆಯೇ ಇಲ್ಲ, ಅವನ ಮನಸ್ಸು ಕೆಟ್ಟ ಹಾಗೆ, ವ್ಯಕ್ತಿಯೂ ಬದಲಾಗಿ ಬಿಟ್ಟಿದ್ದಾನೋ ಎಂದು ತಿಳಿಯದು. ಎಲ್ಲ ದೇವರುಗಳ ಆಣೆ, ಕ್ಯಾಷಿಯೋನ ಪರವಾಗಿ ತಾನು ತನ್ನ ಶಕ್ತಿಮೀರಿ ಯತ್ನಿಸಿದ್ದಾಗಿದೆ. ಹಾಗೆ ಮುಕ್ತವಾಗಿ ಮಾತನಾಡಿ ಅವನ ಅಸಂತೋಷಕ್ಕೆ ಗುರಿಯೂ ಆಗಿದ್ದೇನೆ ತಾನು. ಸದ್ಯಕ್ಕೆ ಕ್ಯಾಷಿಯೋ ಸಹನೆಯಿಂದ ಇರಬೇಕು. 'ನನ್ನ ಕೈಲಿ ಏನು ಸಾಧ್ಯವೋ ಅದು ಮಾಡುತ್ತೇನೆ, ನನಗೋಸ್ಕರ ನಾನು ಸಾಧಿಸಿಕೊಳ್ಳುವುದಕ್ಕಿಂತ ಹೆಚ್ಚಿಗೆ ನಿನಗೆ ನನ್ನ ಸಹಾಯಮಾಡುತ್ತೇನೆ. ಅಷ್ಟಕ್ಕೆ ತೃಪ್ತನಾಗಿರಬೇಕು ನೀನು' ಎಂದು ಕೊನೆಯದಾಗಿ ತನ್ನ ವಚನವನ್ನು ನೀಡುತ್ತಾಳೆ. ಇಯಾಗೋವಿಗೆ ಆಶ್ಚರ್ಯ. ತನ್ನ ದಣಿ ಕೋಪಗೊಂಡಿದ್ದಾನೆಯೆ ? ಸಾಧ್ಯವೆ ? ಎಂದು ಅಚ್ಚರಿಪಡಿಸಿ ಅವನು ಮುಂದೆ ಆಡುವ ಮಾತುಗಳು ಅತ್ಯಂತ ಧ್ವನಿಪೂರ್ಣವಾದವು ಎಂದು ನನಗೆ ಅನ್ನಿಸುತ್ತದೆ.

> I have seen the cannon,
> When it hath blown his ranks into the air ;
> And (like the devil) from his very arm
> Puffed his own brother, and can he be angry ?

ಅವನ ಸುತ್ತಲೂ ಸೈನ್ಯವು ಗುಂಡಿನ ಧಾಳಿಗೆ ಧೂಳಿಪಟವಾಗುತ್ತಿದ್ದುದು ತಾನು ನೋಡಿದ್ದೇನೆ. ತನ್ನ ಅತ್ಯಂತ ಆಪ್ತನನ್ನೂ ಗಾಳಿಯಲ್ಲಿ ಊದಿಬಿಟ್ಟಿರುವುದನ್ನು ನೋಡಿದ್ದೇನೆ. ಅಂಥಹುದರಲ್ಲಿ ಅವನು ಸಿಟ್ಟುಗೊಂಡಿರುವನೆ ? ನಿರುದ್ವೇಗದ ಮನುಷ್ಯ ಅಥೋಲೋ. ಹಾಗಿರುವಾಗ ಅವನು ಸಿಟ್ಟುಗೊಂಡನೆಂದರೆ ? ಏನೋ ಬಲವಾದ ಕಾರಣವಿರಬೇಕು, ತಾನು ನೋಡಿಬರುತ್ತೇನೆ ಎಂದು ನಿಷ್ಕ್ರಮಿಸುತ್ತಾನೆ. ಈ ಮಾತುಗಳು ಅಚ್ಚರಿಯನ್ನು ವ್ಯಕ್ತಪಡಿಸುವಂತೆಯೇ ಅಥೆಲೋನನ್ನು ಕುರಿತಾದ ಪ್ರಶಂಸೆಯ ಮಾತುಗಳೂ ಹೌದು. ಆದರೆ ಅದಕ್ಕಿಂತ ಮಿಗಿಲಾಗಿ ತನ್ನ ವೈಯಕ್ತಿಕ ವಿಜಯದ ಸಂಭ್ರಮವೂ ಕೂಡ ಹೌದು. ಯುದ್ಧಗಳನ್ನು ಗೆಲ್ಲಬಲ್ಲ

ವೀರಾಗ್ರಣಿ ಅಥೆಲೋ. ಇಲ್ಲಿ ಸೈಪ್ರಸ್ಸಿನಲ್ಲಿ ಒಂದು ಗುಂಡೂ ಹಾರಿಸದೆ ಯುದ್ಧ ಗೆದ್ದಿದ್ದಾನೆ. ಆದರೆ ತಾನೊಡ್ಡಿದ ಏಕಸೈನಿಕಸೈನ್ಯದೆದುರು ನೆಲಕಚ್ಚಿದ್ದಾನೆ ಎಂದು ಸಂಭ್ರಮಿಸುತ್ತಾನೆ ಇಯಾಗೋ. ಕುಸಿದು ಹೋದ ಡೆಸ್ಡಿಮೋನಾ ಮತ್ತೆ ಎದ್ದು ನಿಲ್ಲುವ ಚೈತನ್ಯ ಪಡೆದು ಕೊಳ್ಳಬೇಕಾದರೆ ಇರುವ ಮಾರ್ಗವೆಂದರೆ ತನ್ನನ್ನು ತಾನು ಸಮಾಧಾನಪಡಿಸಿ ಕೊಳ್ಳುವುದು. ಅಥೆಲೋವಿನ ವರ್ತನೆಗೆ ತನ್ನನ್ನೇ ನಂಬಿಸಿಕೊಳ್ಳುವಂತೆ ಕಾರಣಗಳನ್ನು ಹುಡುಕುವುದು. ತಾರ್ಕಿಕ ವಿವರಣೆಗಳನ್ನು ಸೃಷ್ಟಿಸಿಕೊಂಡು ತನಗಾದ ಆಘಾತವನ್ನು ತಿಳಿಗೊಳಿಸುವುದು. 'ಇರಬಹುದು, ಅಥೆಲೋವಿಗೆ ವೆನಿಸಿನ ಯಾವುದೋ ಸುದ್ದಿ ಅಥವಾ ಇಲ್ಲಿಯೇ ಅವನ ಗಮನಕ್ಕೆ ಬಂದ ಸ್ಫೋಟಿಸಬಹುದಾದ ಸಂಚಿನ ಕುರಿತಾದ ಚಿಂತೆ ಅವನ ಮನಸ್ಸನ್ನು ಕೆಡಿಸಿರಬೇಕು. ಇಂಥ ಸಂದರ್ಭಗಳಲ್ಲಿ ದೊಡ್ಡ ವಿಷಯಗಳ ಚಿಂತೆಯಲ್ಲಿ ಸಣ್ಣ ವಿಷಯಗಳಿಗೆ ಮಿತಿಮೀರಿ ಪ್ರತಿಕ್ರಿಯೆ ತೋರುವುದು ಮನುಷ್ಯ ಲಕ್ಷಣ'. ಡೆಸ್ಡಿಮೋನಾಳ ಈ ಸ್ಥಿತಿ ಯಾರಿಗಾದರೂ ಅನುಕಂಪ ಹುಟ್ಟಿಸುವಂಥದೆ. ಗಂಡನೊಡನೆ ಎಲ್ಲ ಬಗೆಯ ಕಷ್ಟಸುಖಗಳನ್ನು ಹಂಚಿಕೊಳ್ಳಲು ಬಂದ ಅವಳಿಗೆ ಗಂಡನಿಂದ ದೊರಕುತ್ತಿರುವುದು ಈ ಬಗೆಯ ಅನುಭವ. ತನ್ನ ಗಂಡನದು ಇದೇ ನಿಜವಾದ ಮುಖವೆಂದು ಅವಳು ನಂಬಿಬಿಟ್ಟರೆ ತನ್ನ ಬದುಕು ನುಚ್ಚುನೂರಾದಂತೆ. ಎಂದೇ ಕೇವಲ ತಾತ್ಕಾಲಿಕ ಎಂದು ನಂಬಬೇಕಾಗಿದೆ. ಈ ರೀತಿಯ ಸಮಾಧಾನವನ್ನು ಕಂಡುಕೊಳ್ಳುತ್ತಿದ್ದಂತೆಯೇ ಅವಳಿಗೆ ಒಂದು ಸತ್ಯದ ಅರಿವಾಗುತ್ತದೆ.

> We must think
> Men are not Gods;
> Nor of them look for such observances
> As fits the bridal ; beshrew me much, Emilia,
> I was (unhandsome worrior as I am)
> Arrigning his unkindness with my soul;
> But now I find I had suborned the witness,
> And he is indicted falsely

'ನಮ್ಮ ಗಂಡಂದಿರನ್ನು ನಾವು ಪರಿಪೂರ್ಣರು ಎಂದು ಭಾವಿಸುವುದು ತಪ್ಪು. ಅವರೇನು ದೇವರುಗಳಲ್ಲ, ಸದಾ ತಮ್ಮ ಹೆಂಡಂದಿರನ್ನು ನವವಿವಾಹಿತ ತರುಣ ಗಂಡ ತನ್ನ ವಧುವನ್ನು ರಮಿಸುತ್ತಿರುವಂತೆ ರಮಿಸಬೇಕು ಎಂದು ಬಯಸುವುದೂ ತಪ್ಪು. ಎಂಥ ಪಾಪಿ ನೋಡು ನಾನು ! ನಾನು ನನ್ನ ಹೃದಯದೆದುರು ಅವನನ್ನು ಅಪರಾಧಿಯಂತೆ ನಿಲ್ಲಿಸಿ ಸುಳ್ಳುಸಾಕ್ಷ್ಯ ಒದಗಿಸಿ ಅಪರಾಧಿ ಎಂದು ಸಾರಿಬಿಡುವುದರಲ್ಲಿದ್ದೆ. ನನ್ನ ಭಾವನೆಗಳೇ ಈ ಸಾಕ್ಷಿಗಳು. ಅವುಗಳನ್ನು ಅವನ ವಿರುದ್ಧ ಎತ್ತಿಕಟ್ಟಿ ಆಪಾದನೆಗಳನ್ನು ಹೊರಿಸಿಬಿಟ್ಟೆ.....' ಈ ಮಾತುಗಳ ಮಧ್ಯೆ ಶೇಕ್ಸ್‌ಪಿಯರ್ ಕಂಸದಲ್ಲಿ ಒಂದು ಮಾತು ಸೇರಿಸುತ್ತಾನೆ ('unhandsome warrior

as I am') ಎಂದು. ನಮಗೆ ಜ್ಞಾಪಕವಿದೆ ಎರಡನೇ ಅಂಕದ ಮೊದಲ ದೃಶ್ಯದಲ್ಲಿ ಪೈಪ್ರಸ್ಸಿನಲ್ಲಿ ಅವರಿಬ್ಬರ ಭೆಟ್ಟಿಯಾದಾಗ ಅಥೆಲೋ ಅವಳನ್ನು ಸಂಬೋಧಿಸಲು ಬಳಸಿದ ಒಂದು ಮಾತು 'my fair warrior' ಎಂದು. ಸುಂದರ ಯೋಧಳು ಅವಳು. ಯುದ್ಧರಂಗಕ್ಕೆ ಬಂದಿದ್ದಾಳೆ – ತನ್ನೊಡನೆ ಎಲ್ಲ ಸಾಹಸಗಳಲ್ಲಿ ಪಾಲ್ಗೊಳ್ಳಲು. ಈಗ ಅದೇ ಮಾತನ್ನು ಡೆಸ್ಡಿಮೋನಾ ಬಳಸುತ್ತಿದ್ದಾಳೆ, 'handsome warriro'. ವೈವಾಹಿಕಜೀವನಕ್ಕೆ ಪ್ರವೇಶ ಮಾಡುವುದೇ ಒಂದು ರೀತಿಯಲ್ಲಿ ಕೆಚ್ಚು, ನಂಬಿಕೆ, ಆತ್ಮವಿಶ್ವಾಸಗಳ ಶಕ್ತಿ ಇಬ್ಬರಲ್ಲಿಯೂ ಇದೆ ಎಂಬ ಸೂಚನೆ. ಈ ಗುಣಗಳು ಇಡೀ ಜೀವನ ವೃದ್ಧಿಸುತ್ತ ವಿಕಾಸವಾಗುತ್ತ ಹೋಗುತ್ತಿದ್ದರೆ ಮಾತ್ರ ವೈವಾಹಿಕ ಜೀವನ ಫಲಪ್ರದವಾಗುವುದು. ಒಂದು ರೀತಿಯ 'warrior' ಗುಣಗಳು ಇವು. ವೈವಾಹಿಕ ಜೀವನ ಯುದ್ಧರಂಗವಲ್ಲದಿದ್ದರೂ ದಿನನಿತ್ಯವೂ ಸವಾಲುಗಳನ್ನು ಸಂಘರ್ಷಗಳನ್ನು ಎದುರಿಸಲು ಸಿದ್ಧವಿರಬೇಕು. ಡೆಸ್ಡಿಮೋನಾಳಿಗೆ ತಾನು ಸೋತಿದ್ದೇನೆ ಎನ್ನಿಸುತ್ತಿದೆ. ತನ್ನ ಅಹಂಕಾರವನ್ನು ಮುಂದಿಟ್ಟು ಅಥೆಲೋನನ್ನು ಬಹು ಅವಸರದಲ್ಲಿ ನಿಂದಿಸಿಬಿಟ್ಟೆನಲ್ಲ ಎಂದು ಪಶ್ಚಾತ್ತಾಪವಾಗುತ್ತಿದೆ. ಗಂಡ ಎಷ್ಟೇ ದೊಡ್ಡ ಸೇನಾಧಿಕಾರಿಯಾದರೂ ವೀರಾಗ್ರಣಿಯಾದರೂ ಅವನೂ ಒಬ್ಬ ಮನುಷ್ಯ ಎಂಬುದನ್ನು ತಾನು ಮರೆತೆ. ಎಂದೇ ತಾನು 'handsome warrior' ಗುಣ-ಅವಗುಣ, ಸಾಮರ್ಥ್ಯ-ದೌರ್ಬಲ್ಯ ಎಲ್ಲ ಸೇರಿ ಮನುಷ್ಯರಾಗುತ್ತಾರೆಯೇ ವಿನಾ ತಾನು ಅಥೆಲೋವಿನಲ್ಲಿ ಮೆಚ್ಚಿದಂತೆ ಸಾಹಸಗುಣಗಳಿಂದಷ್ಟೇ ಅಲ್ಲ. ಪ್ರಬುದ್ಧ ರೀತಿಯ ವಿವೇಕದ ಪಾಠ ಕಲಿತಿದ್ದಾಳೆ. ವಿನಯ, ಪ್ರೀತಿಗಳು ಆತ್ಮವಿಮರ್ಶಾಗುಣಗಳನ್ನು ಸ್ಫುರಿಸಿದೆಯೇ ಹೊರತು ಗಂಡನನ್ನು ದೂಷಿಸುವ ಗುಣವನ್ನಲ್ಲ. ದುರದೃಷ್ಟವೆಂದರೆ ಈ 'handsome warrior' ಲಕ್ಷಣ ಬಹು ನಿರ್ಣಾಯಕ ಗಳಿಗೆಗಳಲ್ಲಿ ಅವಳ ನೆರವಿಗೆ ಬರುವುದಿಲ್ಲ ಎಂಬುದು. 'ನೀ ಹೇಳುವ ಮಾತೇ ನಿಜವಾಗಲಿ' ಎಂದು ಹಾರೈಸಿದ ಎಮಿಲಿಯಾಗೆ ''ನನ್ನ ನಡತೆಯಿಂದ ಯಾವ ರೀತಿಯೂ ಅವನ ಈ ಬಗೆಯ ವರ್ತನೆಗೆ ಆಸ್ಪದವೇ ಕೊಟ್ಟಿಲ್ಲ'' ಎಂದು ಮರುಗುತ್ತಾಳೆ. ಎಮಿಲಿಯಾ ಮೂರನೇ ಅಂಕದ ಮೂರನೇ ದೃಶ್ಯದಲ್ಲಿ ಇಯಾಗೋ ಅಥೆಲೋನಿಗೆ ಎಚ್ಚರಿಸುವಾಗ ಆಡುವ ಮಾತುಗಳನ್ನೇ ಆಡುತ್ತಾಳೆ.... ಮತ್ಸರದಲ್ಲಿ ನರಳುವವರಿಗೆ ಕಾರಣವೇ ಬೇಡ. 'It is a monster / Begot upon itself, born on itself' ಎಂದು ತೀರ್ಪು ನೀಡುತ್ತಾಳೆ. ಈ ನಾಟಕದಲ್ಲಿ, ಈಗಾಗಲೇ ಹೇಳಿದಂತೆ, ಅನೇಕ ಬಾರಿ ಪ್ರಾರ್ಥನೆಗಳು ಇವೆ. ಡೆಸ್ಡಿಮೋನಾ ಇಲ್ಲೊಂದು ಕಿರಿದಾದ ಪ್ರಾರ್ಥನೆ ಮಾಡುತ್ತಾಳೆ, 'Heaven keep that monster from Othello's mind:' ಎಂದು, ಅದಕ್ಕೆ ಉತ್ತರವಾಗಿ ಎಮಿಲಿಯಾ 'Lady, amen' ಎಂದು ಅವಳ ಜೊತೆಗೂಡುತ್ತಾಳೆ. ಕಾದು ನಿಂತಿರುವ ಕ್ಯಾಷಿಯೋನಿಗೆ ಅಲ್ಲಿಯೇ ಕೊಂಚ ಇರುವುದಕ್ಕೆ ಹೇಳಿ ತಾನು ಅಥೆಲೋನನ್ನು ಭೆಟ್ಟಿಯಾಗಿ ಅವನ ವಿಷಯವಾಗಿ ಮಾತನಾಡುವುದಾಗಿ ಹೇಳಿ ಹೊರಡುತ್ತಾಳೆ. ಕ್ಯಾಷಿಯೋ ಅವಳಿಗೆ ಕೃತಜ್ಞತೆ ಅರ್ಪಿಸಿ ಅಲ್ಲಿಯೇ ನಿಲ್ಲುತ್ತಾನೆ. ಕ್ಯಾಷಿಯೋನ ನಲ್ಲೆ ಬಿಯಾಂಕ ಅಲ್ಲಿಗೆ ಬರುತ್ತಾಳೆ. ಒಂದು ವಾರದಿಂದ

ಕ್ಯಾಷಿಯೋ ಮುಖ ತೋರಿಸಿಲ್ಲ. ಅವನನ್ನು ಎದುರುನೋಡುತ್ತ ಸೊರಗಿದ್ದಾಳೆ. ಕ್ಯಾಷಿಯೋ ತನ್ನದೇ ಸಮಸ್ಯೆಗಳಲ್ಲಿ ಸಿಲುಕಿಕೊಂಡು ಅವಳನ್ನು ಭೆಟ್ಟಿಯಾಗಲಾಗಿಲ್ಲವೆಂದು ಹೇಳುತ್ತಾನೆ. ಆದರೆ ಶೀಘ್ರದಲ್ಲಿಯೇ ಬಂದು ಇಷ್ಟು ದಿವಸದ ತನ್ನ ಗೈರುಹಾಜರಿಗೆ ನ್ಯಾಯ ದೊರಕಿಸುತ್ತೇನೆ ಎಂದು ಹೇಳಿ ತನ್ನ ಬಳಿಯಿರುವ ಕರವಸ್ತ್ರವನ್ನು ಅವಳಿಗೆ ನೀಡಿ, ಇದರ ನಕಲೊಂದನ್ನು ನೆಯ್ದುಕೊಡಲು ಹೇಳುತ್ತಾನೆ. ಬಿಯಾಂಕಾ ಈ ಕರವಸ್ತ್ರ ಅವನ ಹೊಸ ಹುಡುಗಿಯ ಕಾಣಿಕೆಯೇ ಆಗಿರಬೇಕೆಂದು ಅಸೂಯೆ ವ್ಯಕ್ತಪಡಿಸುತ್ತಾಳೆ. ಕ್ಯಾಷಿಯೋ ಇದನ್ನು ತನ್ನ ಕೋಣೆಯಲ್ಲಿ ಕಂಡುದಾಗಿಯೂ, ಅದು ಯಾರದೆಂದು ತಿಳಿಯದೆಂದೂ, ವೃಥಾ ಮತ್ಸರಪಟ್ಟು ಕೊರಗಬೇಡವೆಂದೂ ಹೇಳುತ್ತಾನೆ. ಈಗ ಸದ್ಯಕ್ಕೆ ತನ್ನಷ್ಟಕ್ಕೆ ತನ್ನನ್ನು ಬಿಟ್ಟು ತೆರಳಬೇಕೆಂದು ಸೂಚಿಸಿದ್ದಕ್ಕೆ, ಯಾಕೆ, ಯಾಕೆ ಬಿಟ್ಟು ತೆರಳಬೇಕೆಂದು ಮತ್ತೆ ಅನುಮಾನಪಡುತ್ತಾಳೆ. ತಾನು ಅಥೆಲೋವಿಗಾಗಿ ಕಾದಿರುವುದಾಗಿಯೂ, ಆ ಸಮಯದಲ್ಲಿ ಅವಳು ಜೊತೆಗೆ ಇರುವುದು ತಕ್ಕುದಲ್ಲವೆಂದೂ ಹೇಳಿ ಕಳಿಸುತ್ತಾನೆ. ಆಯಿತು, ಬೇಗ ಭೆಟ್ಟಿಯಾಗುವ ಆಸೆಯನ್ನು ವ್ಯಕ್ತಪಡಿಸಿ ನಿಷ್ಕ್ರಮಿಸುತ್ತಾಳೆ. ಈ ಪುಟ್ಟ ದೃಶ್ಯ ಒಂದು ಅರ್ಥದಲ್ಲಿ ಗಮನಾರ್ಹವಾಗುತ್ತದೆ. ಈ ನಾಟಕದಲ್ಲಿ ಮೂರು ಗಂಡು-ಹೆಣ್ಣುಗಳ ಜೊತೆಗಳಿವೆ. ಈ ಮೂರು ಜೋಡಿಗಳಲ್ಲಿ ಕ್ಯಾಷಿಯೋ-ಬಿಯಾಂಕ ಜೋಡಿ ಅತಿ ಸರಳವಾದದ್ದು. ಒತ್ತಡಗಳಿಲ್ಲದ, ಪರಸ್ಪರ ಆತಂಕಗಳಿಲ್ಲದ ಮತ್ತು ಪರಸ್ಪರ ಬಹು ನಿರೀಕ್ಷೆಗಳೂ ಇಲ್ಲದ ಸಂಬಂಧ ಇದು. ಸಾಮಾನ್ಯ ಹಾಗೂ ಸಹಜವಾದ ಸಣ್ಣಪುಟ್ಟ ಅಸೂಯೆಗಳು ಕಾಣುತ್ತವೆಯೇ ಹೊರತು ಮನಶ್ಶಾಂತಿ ಕೆಡಿಸುವ ಪಿರಿಪಿರಿಗಳಿಲ್ಲ, ಪೀಡನೆಗಳಿಲ್ಲ. ಮಿಕ್ಕ ಎರಡು ಜೋಡಿಗಳಂತೆ ಇವರಿಬ್ಬರೂ ಗಂಡ-ಹೆಂಡಿರೂ ಅಲ್ಲ. ಉಚ್ಚವರ್ಗದ, ಬಹುಗೌರವಾನ್ವಿತ ಸಮಾಜಕ್ಕೂ ಸೇರಿದವಳಲ್ಲ ಬಿಯಾಂಕಾ. ಹಾಗೆಂದು ಕ್ಯಾಷಿಯೋ ಅವಳ ಕುರಿತಾಗಿ ಅವಹೇಳನ, ತಿರಸ್ಕಾರ ಭಾವಗಳನ್ನು ಪ್ರದರ್ಶಿಸುವುದಿಲ್ಲ. ಶೇಕ್ಸ್‌ಪಿಯರ್ ಈ ಜೋಡಿಯನ್ನು ನಾಟಕದಲ್ಲಿ ಅನಾವಶ್ಯಕವಾಗಿ ಸೇರ್ಪಡೆ ಮಾಡಿದ್ದಾನೆ ಎಂದೂ ಅನ್ನಿಸುವುದಿಲ್ಲ.

ಇಯಾಗೋವಿಗೆ ಈಗ ಎಲ್ಲಾ ಆತಂಕಗಳೂ ಅಳಿಸಿಹೋಗಿವೆ. ಸನ್ನಿವೇಶದ ಸಂಪೂರ್ಣ ಹತೋಟಿ ಈಗ ತನ್ನ ಕೈಲಿದೆ. ಸಂದರ್ಭದ ಯಜಮಾನ ತಾನು. ತಾನು ಏನನ್ನು, ಯಾವಾಗ, ಎಷ್ಟೆಷ್ಟು ಬಾಯಿಗಿಟ್ಟು ತಿನ್ನಿಸಿದರೂ ಮರುಪ್ರಶ್ನೆ ಮಾಡದೆ ಸ್ವೀಕರಿಸುವುದಷ್ಟೆ ಅಲ್ಲ ಮಹಾಕೃತಜ್ಞತೆಯನ್ನೂ ಪ್ರದರ್ಶಿಸಿ ಸವಿಯಲು ಅಥೆಲೋ ಈಗ ಸಿದ್ಧನಾಗಿದ್ದಾನೆ. ಆ ನಂಬಿಕೆ ಇಯಾಗೋವಿಗೆ ಈಗ ಶತಸ್ಸಿದ್ಧವಾಗಿದೆ. ನಾಲ್ಕನೇ ಅಂಕದಲ್ಲಿ ಮೊದಲ ದೃಶ್ಯ ಒಂದು ರೀತಿ ಅಥೆಲೋವಿಗೆ ಇಯಾಗೋ ನಡೆಸುವ ಮೌಖಿಕ ಪರೀಕ್ಷೆಯಂತೆ ತೋರುತ್ತದೆ. ಎಷ್ಟು ಗಾಢವಾಗಿ ಮತ್ತು ಎಷ್ಟು ಸ್ಪಷ್ಟವಾಗಿ ಅಥೆಲೋ ತಾನು ಕಲಿಸಿದ ಪಾಠಗಳನ್ನು ಕಲಿತಿದ್ದಾನೆ, ಎಷ್ಟು ಅದರಿಂದ 'ಬೆಳೆದಿದ್ದಾನೆ' ಎಂಬುದು ಇಯಾಗೋವಿಗೆ ಮನದಟ್ಟಾಗಬೇಕಾಗಿದೆ. ದೃಶ್ಯದ

ಮೊದಲಲ್ಲಿ ಅಥೆಲೋ ಮತ್ತು ಇಯಾಗೋ ಹೆಣ್ಣಿನ ನಡತೆಯ ಬಗ್ಗೆ ಛಾರಿತ್ರ್ಯದ ಬಗ್ಗೆ ಚರ್ಚಿಸುತ್ತಿದ್ದಾರೆ. ಇಯಾಗೋ ಬಹು ಆರಾಮ ಮನಃಸ್ಥಿತಿಯಲ್ಲಿಯೂ ಅಥೆಲೋ ಪ್ರಕ್ಷುಬ್ಧ ಸ್ಥಿತಿ ಉಂಟುಮಾಡುವ ಕಾಠಿಣ್ಯದ ಮನಃಸ್ಥಿತಿಯಲ್ಲಿಯೂ ಇದ್ದಾರೆ. ದೃಶ್ಯದ ಆರಂಭದಲ್ಲಿಯೇ ತಾವು ಈಗಾಗಲೇ ನಡೆಸುತ್ತಿರುವುದು ಚರ್ಚೆಯ ಮುಂದುವರಿದ ಭಾಗದಂತೆ ಕಾಣುತ್ತದೆ. 'ನೀನು ಹೀಗೆ ಭಾವಿಸುತ್ತೀಯಾ.... ಅಂದರೆ ಗುಟ್ಟಾಗಿ ಮುತ್ತಿಡುವುದು....' ಎಂದು ಅಥೆಲೋನನ್ನು ಕೇಳುತ್ತಾನೆ. 'ಆದರದು ಸಮರ್ಥನೀಯವಲ್ಲದ ಕ್ರಿಯೆ' ನೀತಿನಿಷ್ಠನಾಗಿ ಪ್ರತಿಕ್ರಿಯಿಸುತ್ತಾನೆ ಅಥೆಲೋ. 'ಅಥವಾ ಗೆಣೆಗಾರನೊಂದಿಗೆ ಹಾಸಿಗೆಯಲ್ಲಿ ಬೆತ್ತಲೆ ಬಿದ್ದಿದ್ದರೆ ? ಒಂದು ತಾಸು, ಎರಡೂ, ಏನೂ ಕೆಡುಕು ಮನಸ್ಸಿನಲ್ಲಿಲ್ಲದೆ ?' ಮಹಾ ಉದ್ರೇಕಕಾರಿ ಪ್ರಶ್ನೆಯ್ನು ತೀರ ಸಹಜವಾಗಿ ಕೇಳುತ್ತಾನೆ. ''ಏನೂ ಕೆಡುಕು ಮನಸ್ಸಿನಲ್ಲಿಲ್ಲದೆಯೆ ಹಾಸಿಗೆಯಲ್ಲಿ ಬಿದ್ದಿರುವುದೆ ? ಭೂತಗಳ ಲೋಕದಲ್ಲಿಯೂ ಇದು ಕಪಟವೆಸಗಿದ ಹಾಗೆ. ಭೂತಗಳೇ ಅವರ ಕಾಮನೆಗಳನ್ನು ಉದ್ರೇಕಿಸುತ್ತವೆ ; ದೇವರೂ ಅಂಥವರನ್ನು ಕಾಪಾಡಲಾರ.'' ಅಥೆಲೋನ ದೆಲ್ಲವೂ ನಿರೀಕ್ಷಿತ ಪ್ರತಿಕ್ರಿಯೆಗಳೇ. ಇಲ್ಲಿ ಇಯಾಗೋವಿನ ಉದ್ದೇಶ ಅಥೆಲೋನ ಪ್ರತಿಕ್ರಿಯೆಗಳನ್ನು ಗಮನಿಸುವುದಲ್ಲ, ಬದಲಿಗೆ ಅವನ ಮನಸ್ಸನ್ನು ಪದೇಪದೇ ಇದೇ ಮಾತುಗಳು, ಇದೇ ಚಿತ್ರಗಳು, ಇಂತವೇ ಅಸಹ್ಯಗಳಿಂದ ತುಂಬುವುದು. ಕ್ಷಣವೂ ನಿರಾಳವಾಗಿ ಉಸಿರಾಡಲು ಸಾಧ್ಯವಾಗಬಾರದು ಅವನಿಗೆ. 'ಅದು ಕ್ಷಮಾರ್ಹ – ಬಿಡು, ಆದರೆ ನಾನು ನನ್ನ ಹೆಂಡತಿಗೊಂದು ಕರವಸ್ತ್ರ ನೀಡಿದರೆ....' ಈಗ ವಿಷಯ ಹತ್ತಿರಕ್ಕೆ ಬರುತ್ತಿದೆ. ವೈಯಕ್ತಿಕವಾಗುತ್ತಿದೆ. ಇಯಾಗೋವಿನ ನೀರವಗಳು ಮುಟ್ಟಿ, ತಾಗಿ, ಜರ್ಝರಿತ ಗೊಳಿಸುವಷ್ಟು ಗಟ್ಟಿಯವು. 'ಆಗ ?' ಎಂದು ಅವಸರಿಸುತ್ತಾನೆ ಅಥೆಲೋ. 'ಆಗೇನು ? ಅದು ಅವಳದು ; ಅವಳದಾದ ಮೇಲೆ ಅವಳು ಇಷ್ಟಬಂದವರಿಗೆ ಕೊಡಬಹುದು' ; ಶುದ್ಧ ತರ್ಕದ ವಾದ ಮಂಡಿಸುತ್ತಾನೆ. ''ಆದರೆ ಅವಳ ಗೌರವ, ಘನತೆಗಳನ್ನು ಕಾಪಾಡಿಕೊಳ್ಳಲೂ ಬೇಕು. ಅದನ್ನೂ ಬಿಕರಿ ಮಾಡಬಹುದೆ ?'' ಅಥೆಲೋವಿನ ಈ ಭ್ರಮಾಲೋಕದಿಂದ ಅವನನ್ನು ಮುಕ್ತಗೊಳಿಸಬೇಕು. ಈ ಗೌರವ ಘನತೆಗಳೆಂಬುದು ಕಣ್ಣಿಗೆ ಕಾಣದ ಭಾವನಾತ್ಮಕ ಅಬದ್ಧಗಳು. ಇದೆ ಎಂದು ನಾವು ಭಾವಿಸಿದವರನೇಕರಲ್ಲಿ ಅದು ಇರುವುದಿಲ್ಲ. ಅದನ್ನೆಲ್ಲ ಬಿಟ್ಟು ಹೆಚ್ಚು ವಾಸ್ತವವಾದ ಕರವಸ್ತ್ರದ ಬಗ್ಗೆ ಮಾತನಾಡೋಣ ಎಂದು ಇಯಾಗೋ ಮುಗಿಸುವಷ್ಟರಲ್ಲಿ, ಮಧ್ಯೆ ಬಾಯಿಹಾಕಿ ಈ ವಿಷಯವನ್ನೇ ಸಂತೋಷದಿಂದ ಮರೆತುಬಿಡುತ್ತಿದ್ದೆ ತಾನು. ಸೋಂಕು ಹತ್ತಿದ ಮನೆಯ ಮಾಳಿಗೆಯ ಮೇಲೆ ಕೂತು ಕೆಡುಕನ್ನು ಸೂಚಿಸುವ ಡೊಂಬಕಾಗೆಯ ಹಾಗೆ ಇಯಾಗೋನ ಮಾತುಗಳು ತನ್ನ ನೆನಪಿಗೆ ಬರುತ್ತಿವೆ. 'ನನ್ನ ಕರವಸ್ತ್ರ ಅವನ ಬಳಿ ಇದ್ದಿತಲ್ಲರೆ....' ಇಯಾಗೋವಿಗೆ ಈಗ ಮತ್ತೂ ಒಂದು ಹೆಜ್ಜೆ ಇಡುವ ಧೈರ್ಯ ವಿಶ್ವಾಸಗಳು ಹೆಚ್ಚಿವೆ. ಕರವಸ್ತ್ರಕ್ಕಿಂತ ಹೆಚ್ಚಾಗಿ ಅವನು ಅಥೆಲೋನಿಗೆ ದ್ರೋಹ ಬಗೆದಿದ್ದರ ಬಗ್ಗೆ ಹೇಳಿದರೆ ? ಅಥವಾ ಕ್ಯಾಷಿಯೋ ತನ್ನ ಕೂಡ ಮಾತನಾಡಿದ್ದರ

ವಿಷಯ ಹೇಳಿದರೆ ? ಕ್ಯಾಷಿಯೋವಿನಂತಹ ದಗಾಕೋರರೇ ಹಾಗೆ. ತಾವೇ ದುಂಬಾಲು ಬಿದ್ದು ಒಲಿಸಿಕೊಂಡ ಹೆಣ್ಣುಗಳೋ ಅಥವಾ ಅವರಾಗಿಯೇ ಇವರ ಬೆನ್ನುಹತ್ತಿದರೋ, ಅಂತೂ ಅವರುಗಳ ಜೊತೆಗಿನ ತಮ್ಮ ಸಾಹಸಗಳ ಬಗ್ಗೆ ಒದರುತ್ತಲೇ ಇರುತ್ತಾರೆ. ಏನೆಲ್ಲ ಹೇಳಿದ್ದಾನೆ ಗೊತ್ತೆ ? ಆದರೆ ಹೇಳಿದ್ದನ್ನು ಯಾವುದನ್ನೂ ಅವನೇನು 'ಹೇಳಲಿಲ್ಲ' ಎಂದು ಹಿಂದಕ್ಕೆ ಪಡೆಯುವವನಲ್ಲ. ಏನು, ಏನು ಹೇಳಿದ್ದಾನೆ ಎಂದು ಕೇಳುವ ತವಕ ಅಥೆಲೋವಿಗೆ. 'ಇಷ್ಟೆ that he did.... I know not what he did' that he did ಆದ ಮೇಲೆ ಇಯಾಗೋವಿನ – ಇಷ್ಟರೊಳಗೆ ಚಿರಪರಿಚಿತವಾದ ಅರ್ಥಪೂರ್ಣ ನೀರವ.

Othe : 'But what ?"

Iago : 'Lie'

Oth : With her ?

Iago : With her, on her, what you will

ಇಯಾಗೋವಿನ ಧೈರ್ಯ ಯಾವ ಮಟ್ಟ ಮುಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೇ ಅಥೆಲೋವಿನಲ್ಲಿ ಯಾವ ಮಟ್ಟದಲ್ಲಿ ಆತ್ಮಸ್ಥೈರ್ಯ ನಾಶವಾಗಿದೆ ಎಂಬುದೂ ಕಾಣುತ್ತದೆ. ಇಯಾಗೋವಿನ ಶಿಕ್ಷಣ ಶಾಲೆಯಲ್ಲಿ ಕಲಿಯುವುದೆಂದರೆ ಧರಿಸಿದ ಪೋಷಾಕುಗಳನ್ನೆಲ್ಲ ಕಳಚುತ್ತ ನಿಜಸ್ವರೂಪಕ್ಕೆ ಮುಟ್ಟುವುದು ಎಂದು ಅರ್ಥ. ವೆನಿಸಿನ ಸೌಜನ್ಯಶೀಲ ಸಮಾಜ ಕಲಿಸಿದ ನಾಗರಿಕ ರೀತಿಗಳು, ನಯನಾಜೂಕುಗಳು ಮೊದಲ ಪದರ. ಅದು ಹರಿದು ಕಿತ್ತಾಯಿತು. ಎರಡನೆಯ ಪದರವೆಂದರೆ ತನ್ನ ಸ್ಥಾನಮಾನಗಳು ಅವನಿಗೆ ತೊಡಿಸಿದ ಗಾಂಭೀರ್ಯದ, ದರ್ಪದ, ಠೀವಿಯ ಪೋಷಾಕು. ತನ್ನ ಯಶಸ್ಸು ಕೀರ್ತಿ, ಸಾಧನೆಗಳೆಲ್ಲ ತಂದುಕೊಟ್ಟ ಪ್ರಭಾವಳಿ ಇವುಗಳೂ ಕಳಚಿಬಿದ್ದಾಯಿತು. ಮೂರನೆಯದೇ ಅತ್ಯಂತ ಗಟ್ಟಿಯಾಗಿ ಅಂಟಿಕೊಂಡ ಪದರ. ಇದು ಡೆಸ್ಡಿಮೋನಾಳ ಕುರಿತಾದ ಪ್ರೀತಿ. ಈ ಪ್ರೀತಿ ಎದುರು ಮಿಕ್ಕೆಲ್ಲ ಪದರಗಳೂ ಹಗುರವಾಗಿ, ತೆಳುವಾಗಿ ತನ್ನ ವ್ಯಕ್ತಿತ್ವಕ್ಕೆ ಅಂಟಿಕೊಂಡಿದ್ದು ಕಳಚುವುದು ದೊಡ್ಡ ಸವಾಲಾಗಲಿ ಅಥವಾ ಕ್ಲೇಶಕರವಾಗಲಿ ಆಗಿದೆ ಎಂದು ತೋರಿರಲೇ ಇಲ್ಲ. ಆದರೆ ಅವನು ಪ್ರೀತಿಸಿದ ಅನುಭವ ಮಾತ್ರ ಗಟ್ಟಿಯಾಗಿ ತಳಮುಟ್ಟಿ ಅವನ ವ್ಯಕ್ತಿತ್ವವನ್ನು ಆವರಿಸಿಕೊಂಡುಬಿಟ್ಟಿದೆ ಎಂಬುದು ಕ್ಷಣಕ್ಷಣಕ್ಕೂ ಅನುಭವಕ್ಕೆ ಬರುತ್ತದೆ. ಭೋರ್ಗರೆವ ಸಮುದ್ರ, ಆಕಾಶದೆತ್ತರಕ್ಕೆ ಚಿಮ್ಮುವ ಅಲೆಗಳು, ಬೆಟ್ಟಗುಡ್ಡಗಳು, ಇಡೀ ಪ್ರಕೃತಿಯ ರುದ್ರಸೌಂದರ್ಯವನ್ನು ಮನಸ್ಸಿಗೆ ತರುತ್ತಿದ್ದ ಪ್ರೀತಿಯ ಕಲ್ಪನೆಗಳು, ಇದು ಒಂದು ಹಾಸಿಗೆಯಲ್ಲಿ ಬೆತ್ತಲಾದ ಒಂದು ಗಂಡು ಒಂದು ಹೆಣ್ಣಿನ ಹೊರಳಾಟ, ಇಷ್ಟಕ್ಕೆ ಕುಬ್ಜಗೊಂಡುಬಿಟ್ಟಿದೆ. ಅಥೆಲೋ ಈಗ ಪ್ರೀತಿಯ ಅನುಭವದಿಂದ ದೈವತ್ವದ ಅಂಚು ತಲುಪಿದ ಅಪರೂಪದ

ಸಾಕಾರಮೂರ್ತಿಯಲ್ಲ; ಹೀಗೆ ಅವನು ಆ ಸ್ಥಿತಿ ತಲುಪುವುದಕ್ಕೆ ಅವನ ಹುಟ್ಟು, ಅವನ ಬಣ್ಣ, ಅವನ ಜನಾಂಗ ಇವು ಯಾವುವೂ ಅಡ್ಡ ನಿಲ್ಲಲಿಲ್ಲ. ಅದು ಅನುಭವಕ್ಕೆ ಮಾತ್ರ ಸಿಗುವ ಲೋಕ. ಆದರೆ ಈಗ ಇಯಾಗೋ ಆ ಅನುಭವಲೋಕದಿಂದ ಇಂದ್ರಿಯಲೋಕಕ್ಕೆ ಬಂದು ಕುಕ್ಕರಿಸಿದ್ದಾನೆ. ಇಲ್ಲಿ ತನ್ನ ಬಣ್ಣ, ಜನಾಂಗ, ತನ್ನ ಮೂಲಸಂಸ್ಕೃತಿ ಇವುಗಳೆಲ್ಲ ಇದ್ದಕ್ಕಿದ್ದಂತೆ ರಾಕ್ಷಸಾಕಾರ ತಾಳಿ ತನ್ನನ್ನು ಹೀಯಾಳಿಸುವಂತೆ, ಅಟ್ಟಹಾಸದಿಂದ ಕೇಕೆ ಹಾಕುವಂತೆ ಕಾಣುತ್ತಿವೆ. ಪ್ರೀತಿ, ಗೌರವ, ಘನತೆ ಎಲ್ಲವೂ ದುರ್ಬಲ ಮನಸ್ಸಿನ ಊಹೆಗಳು. ಇಲ್ಲಿ ಸತ್ಯವೊಂದೇ – ಮೃಗೀಯ ಕಾಮನೆಗಳು, ದೇಹದ ಹಸಿವುಗಳು, ತೀರಿಸಿದಷ್ಟೂ ದ್ವಿಗುಣಗೊಳ್ಳುತ್ತ ಹೋಗುವ ವಿಕೃತ ಬಯಕೆಗಳು. ಡೆಸ್ಡಿಮೋನಾ ತನ್ನ ಹಸಿವು ತೀರಿಸಿಕೊಳ್ಳಲು ತನ್ನನ್ನು ಬಳಸಿಕೊಂಡಿದ್ದಾಳಷ್ಟೆ. ಅಥೆಲೋವಿನ ಭಾಷೆ ಕತ್ತರಿಸಿಕೊಂಡು ತುಂಡು, ತುಂಡಾಗಿ ಸಿಡಿಯುತ್ತವೆ. ಚೂರುಗಳಾಗಿ ಮುರಿದು ಉರುಳುತ್ತಿರುವ ಭಾಷೆಯನ್ನು ಒಳಗೆ ಉರಿಯುತ್ತಿರುವ ದ್ವೇಷಜ್ವಾಲೆ ಮತ್ತೂ ಧಗಧಗಿಸುವುದಕ್ಕೆ ಒಟ್ಟುತ್ತಿದ್ದಾನೆ. "Lie with her ? Lie on her ? ....Handkarchief - confessions - handkerchief ! To confess and to be hanged for his labour.... ಕೇವಲ ಶಬ್ದಗಳ ಪ್ರಭಾವಕ್ಕೆ ಮಾತ್ರ ಒಳಗಾಗದೆ ತನ್ನ ಮನಸ್ಸು ಹೀಗೆ ಕಪ್ಪಾಗಿಬಿಡಲು ಸಾಧ್ಯವಿಲ್ಲ...'' ಮಾತಿನಿಂದ ಮಾತಿಗೆ ರೋಷದ ಜೊತೆಜೊತೆಗೇ ಏರುತ್ತಿರುವ ಹೇಸಿಗೆಯ ಭಾವ, ಅಸಹ್ಯ ದೃಶ್ಯಗಳ ಕಲ್ಪನೆ ಮನಸ್ಸಿನ ಮೇಲಷ್ಟೇ ಅಲ್ಲ ಅವನ ದೇಹದ ಮೇಲಿನ ನಿಯಂತ್ರಣವನ್ನೂ ಕಳೆದುಬಿಡುತ್ತವೆ. "It is not words that shake me thus, Pish ! noses, ears and lips. Is it possible ? – confess ? – Handkerchief ? O devil !" ಎಂದು ಚೀತ್ಕರಿಸಿ ಪ್ರಜ್ಞೆ ತಪ್ಪಿ ಬೀಳುತ್ತಾನೆ.

ಪರಿಸ್ಥಿತಿಯ ಸಂಪೂರ್ಣ ಪ್ರಭುತ್ವ ಸ್ಥಾಪಿಸಿದ ತೃಪ್ತಿ ಸಾಧಿಸಿದ್ದಾನೆ ಇಯಾಗೋ. ತನ್ನ ಮದ್ದು ಕೆಲಸ ಮಾಡುತ್ತಿದೆ, ಮಾಡಲಿ... ಹೀಗೆಯೇ ಭೋಳೇ ಮೂರ್ಖರನ್ನು ಕಟ್ಟಿಹಾಕುವುದು. ಇದರಿಂದ ಪಾಪ, ಎಷ್ಟೊಂದು ಗೌರವಾರ್ಹ ಸಾಧ್ವೀಹೆಣ್ಣುಗಳು, ಎಷ್ಟೇ ನಿರ್ದೋಷಿಗಳಾಗಿದ್ದರೂ ಕಳಂಕದ ಪಟ್ಟ ಕಟ್ಟಿಕೊಳ್ಳುತ್ತಾರೆ ಎಂದು ತನ್ನ ಸಾಧನೆಯ ಕುರಿತಾಗಿ ತಾನೆಯೇ ಪಶ್ಚಾತ್ತಾಪ ಪಟ್ಟುಕೊಳ್ಳುವ ರೀತಿ ಮಾತನಾಡುತ್ತಾನೆ. ಎಚ್ಚರತಪ್ಪಿ ಬಿದ್ದ ತನ್ನ ದಣಿಯನ್ನು ಎಚ್ಚರಿಸುವ ಯತ್ನವೂ ಮಾಡುತ್ತಾನೆ.

ಈ ಘಟ್ಟದಲ್ಲಿ ಬಹುಶಃ ಇಯಾಗೋನ ಕುರಿತಾಗಿ ಒಂದೆರಡು ಅಂಶಗಳನ್ನು ಗಮನಿಸಬಹುದು ಎಂದೆನಿಸುತ್ತದೆ. ಮೊದಲನೆಯ ಅಂಕದ ಕೊನೆಯ ಭಾಗದಲ್ಲಿ ಅವನ ಸ್ವಗತದ ಬಗ್ಗೆ ಬರೆಯುವುದಕ್ಕೆ ಮುಂಚೆ ಇಯಾಗೋ ಯಾವ ತರಹದ ಮನುಷ್ಯ ಎಂದು ಪ್ರಶ್ನೆ ಮಾಡಿಕೊಂಡಿದ್ದರ ನೆನಪು ಇರಲೇಬೇಕು. ಇಯಾಗೋ ಮೂಲಭೂತವಾಗಿ ಎಂಥವನು ? ಮೊದಲನೆಯ ಅಂಕದ ವೇಳೆಗೆ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದಕ್ಕೆ ನಮಗೆ ಸಾಕಷ್ಟು

ಅವನ ಪರಿಚಯವಾಗಿರಲಿಲ್ಲ. ಈಗ ನಾಲ್ಕನೆಯ ಅಂಕದ ಮೊದಲ ದೃಶ್ಯದ ವೇಳೆಗೆ ಇಯಾಗೋ ಮತ್ತು ಅವನ ಚಿಂತನರೀತಿ ಮತ್ತು ಕಾರ್ಯವೈಖರಿಗಳನ್ನು ನಾವು ಸಾಕಷ್ಟು ಗಮನಿಸಿದ್ದೇವೆ. ಆದ್ದರಿಂದ ಆ ಪ್ರಶ್ನೆಗೆ ಈಗ ಉತ್ತರ ಸಿಗಬಹುದೇನೋ ನೋಡೋಣ. ತನ್ನ ಸುತ್ತಲ ಪರಿಸರ ಮತ್ತು ಸುತ್ತಲ ಜನ ಇವರುಗಳೊಡನೆ ಒಂದು ಸ್ವಸ್ಥ ಬಾಂಧವ್ಯ ಸಾಧ್ಯವೇ ಇಲ್ಲದಂಥ ಮನುಷ್ಯ ಇಯಾಗೋ. ಸಹಜಸ್ಥಿತಿ ಮತ್ತು ಕ್ರಮಬದ್ಧತೆಗಳೆಂದರೆ ಅವನು ಸಹಿಸಲಾರ. ವಕ್ರಮಾರ್ಗಗಳು, ವಕ್ರಚಿಂತನಾಕ್ರಮವೇ ಅವನಿಗೆ ನೇರ ಸರಳ ಬದುಕಿನ ರೀತಿ. ಅವನ ವ್ಯಕ್ತಿತ್ವದಲ್ಲಿ ಹಲವು ಸಂಕೀರ್ಣ ಗ್ರಂಥಿಗಳು ಏರ್ಪಟ್ಟಿದ್ದು ಅವು ಅವನ ನೋಟವನ್ನೂ ಕೇಳಿದ ಮಾತುಗಳನ್ನೂ ಗ್ರಹಿಸುವ ರೀತಿಯನ್ನೂ ತಿರುಚಿಬಿಟ್ಟಿವೆ. ಇಡೀ ಜಗತ್ತಿನ ಬಗ್ಗೆ ನಿರಂತರ ದುಗುಡ ದುಮ್ಮಾನಗಳ ಸ್ಥಿತಿಯೇ ಅವನ ಜೀವನಧರ್ಮ. ಇವು ಯಾವುವೂ ವೆನಿಸ್ ನಗರದ ತೋರಿಕೆಯ, ಥಳಕು ಬಳುಕಿನ, ಟೊಳ್ಳು ಬದುಕಿನ ರೀತಿಯ ವಿರುದ್ಧದ ನೈತಿಕರೋಷವೇನೂ ಖಂಡಿತ ಅಲ್ಲ. ಪ್ರಾಮಾಣಿಕತೆಯ ಹಾಗೂ ಅರ್ಥಪೂರ್ಣ ಬದುಕಿನ ಬಗೆಗಿನ ಒಲವು ಕೂಡ ಅಲ್ಲ. ಗಾಳಿ ಬೀಸುತ್ತದೆ, ನದಿ ಹರಿಯುತ್ತದೆ, ಬೆಳಗಾಗುತ್ತದ, ಜನ ಸಾವಕಾಶವಾಗಿ, ಯಥಾರೀತಿ ಬದುಕು ಸಾಗಿಸಿಕೊಂಡು ಹೋಗುತ್ತಾರೆ ಎಂಬ ಪ್ರತಿಯೊಂದೂ ಕೂಡ ಅವನ ಸ್ತಿಮಿತವನ್ನು ಕೆಡಿಸಬಲ್ಲದು. ಅಮೂರ್ತಗಳಲ್ಲಿ ಲವಲೇಶವೂ ಶ್ರದ್ಧೆಯಾಗಲಿ, ನಂಬಿಕೆಯಾಗಲಿ ಅವನಿಗೆ ಸಾಧ್ಯವಿಲ್ಲ. ಪ್ರೀತಿ, ಗೌರವ, ಘನತೆ, ಕೀರ್ತಿ ಇವುಗಳೆಲ್ಲರೂ ದೊಡ್ಡ ಶಬ್ದಮಾಡುವ ಅರ್ಥರಹಿತ ಸೊನ್ನೆಗಳು. ಅವುಗಳನ್ನು ಅರಸಿ ಹೊರಡುವವರು, ಅವನ್ನು ನಂಬಿ ನಡೆಯುವವರು ಮಹಾಮೂರ್ಖರು. ಮೂರ್ ಒಬ್ಬನೇ ಅಲ್ಲ, ಅವನಿಗೆ ಗೊತ್ತು, ನಾಟಕದ ಪ್ರತಿ ವ್ಯಕ್ತಿಯೂ – ಡೆಸ್ಡಿಮೋನಾ, ಕ್ಯಾಷಿಯೋ, ರೋಡರಿಗೋ, ಗ್ರೇಷಿಯಾನೋ, ಮಾಂಟನೋ ಮತ್ತು ಎಮಿಲಿಯಾ – ಎಲ್ಲರೂ are of free and open nature / That think men honest that but seem to be so / And will as tenderly be led by the nose as asses are'. ಇದನ್ನು ಯಶಸ್ವಿಯಾಗಿ ಸಾಧಿಸಬೇಕಾಗಿದ್ದರೆ ತಾನು ಯಾವಾಗಲೂ ಪ್ರತಿಯೊಬ್ಬರಿಗಿಂತಲೂ ಒಂದು ಹೆಜ್ಜೆ ಮುಂದೆ ಇಟ್ಟಿರಬೇಕು. ಪ್ರಚಂಡ ಬುದ್ಧಿಶಕ್ತಿಯೂ ಚಾಕಚಕ್ಯತೆಯೂ ತಂತ್ರಗಾರಿಕೆಯೂ ಎಲ್ಲವನ್ನೂ ಮೈಗೂಡಿಸಿಕೊಂಡಿರುವ ಇಯಾಗೋವಿಗೆ, ಅದೇ ಕಾರಣಕ್ಕಾಗಿಯೇ ಬೇರೆಯವರೆಲ್ಲರ ಕುರಿತಾದ ತಿರಸ್ಕಾರ ಮತ್ತು ಕೆಲವು ಸಲ ದ್ವೇಷ ಕೂಡ. ರೋಡರಿಗೋನಂಥ ಮಡ್ಡನನ್ನು ಸಂಪೂರ್ಣ ಬಳಸಿಕೊಳ್ಳಬೇಕು. ಹಾಗೆಯೇ ಕ್ಯಾಷಿಯೋನ ಅತಿ ಸಭ್ಯ, ಸುಸಂಸ್ಕೃತ ರೀತಿಗಳು ಅವನಿಗೇ ಮುಳುವಾಗುವ ರೀತಿ ಯೋಜನೆಗಳನ್ನು ಹಾಕಬೇಕು. ಅಥೆಲೋನ ಬಗ್ಗೆ ಇಯಾಗೋನದು ಯಾವ ಬಗೆಯ ನಿಲುವು ? ಜನಾಂಗದ್ವೇಷದ ಕಾರಣಕ್ಕಾಗಿ ಈ ರೀತಿ ಅವನನ್ನು ನಡೆಸಿಕೊಳ್ಳುತ್ತಾನೆಯೆ ? ಬಿಳಿ ಹುಡುಗಿಯನ್ನು ಹಾರಿಸಿಕೊಂಡುಬಿಟ್ಟನೆಂಬ ದ್ವೇಷವೆ ? ಎರಡೂ ಅಂಶಗಳೂ ಸತ್ಯಕ್ಕೆ

ಹತ್ತಿರವೇ ಹೌದು. ಅವನ ಸ್ಥಾನ, ಯಶಸ್ಸು, ಕೀರ್ತಿಗಳು ಕೂಡ ಹೊಟ್ಟೆಯಲ್ಲಿ ಹುಳಿಹಿಂಡಿರುವುದು ನಿಜ. ಇದಕ್ಕೂ ಮೀರಿದ ಮತ್ತೊಂದು ಕಾರಣವಿರಬಹುದು ಎಂದೂ ಅನ್ನಿಸುತ್ತದೆ. ಯಾವ ಮನುಷ್ಯನಾದರೂ 'free and open nature' ಆಗಿರಬಹುದು, ಮತ್ತೆ ಅವನೇ ಮತ್ತೊಂದು ಸಂದರ್ಭದಲ್ಲಿ ಹೇಳುವಂತೆ ಒಬ್ಬ ಮನುಷ್ಯ – ಅವನು ಮೂರನೇ ಆಗಿರಲಿ – 'constant loving, noble nature'ನವನಾಗಿದ್ದು ತನ್ನ ಹೆಂಡತಿಗೆ 'a most dear husband' ಆಗಿಬಿಡಬಹುದು ಎಂಬ ವಿಚಾರಗಳೇ ಅವನ ಸ್ವಾಸ್ಥ್ಯವನ್ನು ಕೆಡಿಸುವಂಥ ವಿಚಾರಗಳು. ಅಥೆಲೋವಿಗೆ ಅನ್ವಯಿಸಿ ಬಳಸುವ ಯಾವ ಶಬ್ದಗಳೂ ತಾನು ಎಳ್ಳುಕಾಳಿನಷ್ಟೂ ಬೆಲೆಕೊಡದ ಶಬ್ದಗಳು. 'Free' 'open nature' 'constant' 'noble' 'loving' ಮತ್ತು ಮದುವೆ ಎಂಬ ಪದ್ಧತಿಯ ಬಗ್ಗೆಯೇ ತೀವ್ರ ಅನುಮಾನಗಳಿರುವ ವ್ಯಕ್ತಿ ಇಯಾಗೋ. ತನ್ನ ದಾಂಪತ್ಯದ ಬಗೆಗೂ ಅಷ್ಟೇನೂ ನಂಬಿಕೆ ವ್ಯಕ್ತಪಡಿಸಿದವನೇ ಅಲ್ಲ ಅವನು. ಹೀಗೆ ತಾನು ಬೆಲೆಕೊಡದ ಗುಣಗಳು ಹಾಗೂ ಒಂದು ಪದ್ಧತಿ ಇವುಗಳು ತನ್ನ ಕಣ್ಣ ಮುಂದೆಯೇ – ತನಗೆ ಕಣ್ಣು ಕುಕ್ಕುವಂತೆ, ಎದೆಗೆ ಮುಳ್ಳಾಗುವಂತೆ – ಗಟ್ಟಿಯಾಗಿ ಬಿಡುವ ಸ್ಪಷ್ಟ ಸೂಚನೆಗಳು ಕಾಣುತ್ತಿವೆ. ಎಂದೇ ಭಯಂಕರ ಸವಾಲಾಗುತ್ತಿವೆ ಈ ಪ್ರಶ್ನೆಗಳು. ಡೆಸ್ಡಿಮೋನಾ ತನ್ನ ಮುಗ್ಧತೆ, ಲಾವಣ್ಯ ಹಾಗೂ ಸ್ವಚ್ಛಂದತೆಗಳಿಂದ ಎಲ್ಲರ ಗೌರವವನ್ನು ಗಳಿಸಿದ್ದಾಳೆ. ಅಥೆಲೋನಂತೂ ತನ್ನ ಪ್ರೇಮ ಹಾಗೂ ವಿವಾಹಗಳಲ್ಲಿ ಬೇರೆ ಲೋಕವನ್ನೇ ಕಂಡಷ್ಟು ಸಂಭ್ರಮದಲ್ಲಿದ್ದಾನೆ. ಮತ್ತು ಅಥೆಲೋ ಬಗೆಗಿನ ಡೆಸ್ಡಿಮೋನಾಳ ಪ್ರೀತಿಯ ಬಗ್ಗೆ ಇಯಾಗೋನಿಗೂ ಸಂದೇಹ ಇರಲಿಕ್ಕಿಲ್ಲ. ಇಡೀ ನಾಟಕದಲ್ಲಿ ಅವಳೊಬ್ಬಳೆದುರಿಗೆ ಮಾತ್ರ ಇಯಾಗೋ ಮೃದುವೇ ಅನ್ನಬಹುದಾದಷ್ಟು ತಗ್ಗಿದ ಧ್ವನಿಯನ್ನು ಉಳಿಸಿಕೊಂಡು ಬರುತ್ತಾನೆ. ಎರಡನೇ ಅಂಕದ ಮೊದಲ ದೃಶ್ಯದಲ್ಲಿ, ಅಥೆಲೋವಿನ ಪ್ರವೇಶಕ್ಕೆ ಮುಂಚೆ ಡೆಸ್ಡಿಮೋನಾಳ ಮನರಂಜನೆಗೆಂಬಂತೆಯೇ ಹೆಣ್ಣುಮಕ್ಕಳ ಕುರಿತಾಗಿ ಆಡಿದ ಕೆಲವು ಲಘುಮಾತುಗಳನ್ನು ಬಿಟ್ಟರೆ ಎಂದೂ ಡೆಸ್ಡಿಮೋನಾಳೆದುರು ತನ್ನ ವಾಡಿಕೆಯ ಕೊಂಕು, ವ್ಯಂಗ್ಯ, ಮಾತಿನ ಜಾಣತನ ಇವುಗಳನ್ನು ಪ್ರದರ್ಶಿಸುವುದಿಲ್ಲ. ಅಷ್ಟೇ ಅಲ್ಲ, ಮುಂದಿನ ದೃಶ್ಯಗಳಲ್ಲಿ ನಾವು ಗಮನಿಸುವಂತೆ ಡೆಸ್ಡಿಮೋನಾಳ ಅತ್ಯಂತ ವೇದನೆಯ ಸಂದರ್ಭದಲ್ಲಿಯೂ, ಅಥೆಲೋನಿಂದಾಗಿ ಆಕೆ ತೀರಾ ಹಿಂಸೆಗೆ ಒಳಗಾಗಿದ್ದಾಗಲೂ ಸಂದರ್ಭದ ದುರುಪಯೋಗಪಡಿಸಿಕೊಂಡು ಅಥೆಲೋ ಬಗ್ಗೆ ಅವಳ ಮುಂದೆ ಒಂದು ಅಪಶಬ್ದವಾಡುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವಳ ಬಗ್ಗೆ ಗೌರವವಾಗಲೀ ಅಭಿಮಾನವಿದೆಯೆಂದಾಗಲೀ ಅಲ್ಲ. ನನಗನ್ನಿಸುವ ಮಟ್ಟಿಗೆ ಇಡೀ ನಾಟಕದಲ್ಲಿ ಅವನ ಪ್ರಧಾನ ಗುರಿ ಹಾಗೂ ಲಕ್ಷ್ಯ ಡೆಸ್ಡಿಮೋನಾಳೇ – ಅಥೆಲೋ ಅಲ್ಲ. ಈ ಹಂತದಲ್ಲಿ ಇಷ್ಟು ಸಾಕು ಎಂದೆನಿಸುತ್ತದೆ. ಮುಂದೆ ನಾಟಕ ಮುಂದುವರೆದಂತೆ ನಾನು ಮೇಲೆ ಹೇಳಿದ ಕೆಲವು ಅಂಶಗಳಿಗೆ ಪುಷ್ಟಿ ದೊರಕುತ್ತದೋ ನೋಡೋಣ.

ಇಯಾಗೋ ಅಥೆಲೋವಿನ ಆರೈಕೆ ಮಾಡುತ್ತಿದ್ದಂತೆ ಅಲ್ಲಿಗೆ ಕ್ಯಾಷಿಯೋ ಆಗಮಿಸಿ ಏನಾಯಿತು ಎಂದು ಕೇಳುತ್ತಾನೆ. ಅಥೆಲೋ ಮೂರ್ಛೆಹೋಗಿರುವನೆಂದೂ ಕ್ರಮೇಣ ತಾನೇ ಎಲ್ಲ ಸರಿಹೋಗುವುದೆಂದೂ ಹೇಳಿ ಸಮಾಧಾನಪಡಿಸುತ್ತಾನೆ. ಅಕಸ್ಮಾತ್ ಅಸಹಜರೀತಿಗಳಲ್ಲಿ ಎಚ್ಚರ ತರಿಸಿದರೆ ನೊರೆಕಾರುತ್ತ ಉಗ್ರರೀತಿಯಲ್ಲಿ ಕೆರಳಿಬಿಡುತ್ತಾನೆ. ಎಚ್ಚರಗೊಳ್ಳುವ ಸೂಚನೆಗಳು ಕಾಣುತ್ತಿವೆ, ಸದ್ಯಕ್ಕೆ ಕ್ಯಾಷಿಯೋ ಕೊಂಚ ಮರೆಯಾಗಿರುವುದು ಒಳ್ಳೆಯದು. ಅವನು ನಿಷ್ಕ್ರಮಿಸಿದ ನಂತರ ತಾವುಗಳು ಮಾತನಾಡಬಹುದು ಎಂದು ಆಶ್ವಾಸನೆಯಿತ್ತು ಕ್ಯಾಷಿಯೋನನ್ನು ಅಲ್ಲಿಂದ ಕಳಿಸಿಬಿಡುತ್ತಾನೆ.

ಅಥೆಲೋ ಪೂರ್ಣ ಎಚ್ಚರಗೊಂಡಕೂಡಲೆ 'How is it general ? have you not hurt your head ?' ಎಂದು ಮಾರ್ಮಿಕವಾಗಿ ಕೇಳುತ್ತಾನೆ. ಮಾತು ಚುಚ್ಚಿದಂತಾಗಿ ಅಥೆಲೋ 'ಏನು ನನ್ನನ್ನು ಹಂಗಿಸುತ್ತಿದ್ದೀಯ' ಎದು ಸಿಡಿಯುತ್ತಾನೆ. ಛೆ, ಛೆ, ಹಂಗಿಸುವುದೇ.... ಆದರೆ ಅಥೆಲೋ ತನ್ನ ವಿಧಿಯನ್ನು ಪೌರುಷದಿಂದ ಎದುರಿಸುವಂತಾಗಬೇಕು ಎಂದು ಬಯಸುತ್ತಾನೆ. ಆದರೆ ತಾನು ಮನುಷ್ಯನೇ ಅಲ್ಲ, ಹೆಂಡತಿಯಿಂದ ದ್ರೋಹವನ್ನನುಭವಿಸಿದ ಕ್ಷುಲ್ಲಕಮೃಗವಷ್ಟೇ ಎಂದು ಹಲುಬಿದ ಅಥೆಲೋವಿಗೆ ಇಯಾಗೋ ಒಂದು ಪುಟ್ಟ ಲೌಕಿಕವಿವೇಕದ ಪಾಠ ಹೇಳುತ್ತಾನೆ. ''ನಿನ್ನ ಹಾಗೆ ಲೆಕ್ಕವಿಲ್ಲದಷ್ಟು ಜನರಿದ್ದಾರೆ. ತಮ್ಮ ಹಾಸಿಗೆಗಳು ತಮಗಷ್ಟೇ ಮೀಸಲು ಎಂದು ನಂಬಿ ತಮ್ಮ ಅಪವಿತ್ರ ಹಾಸಿಗೆಗಳಲ್ಲಿ ಉರುಳುತ್ತಾರೆ. ನಿನ್ನದು ಎಷ್ಟೋ ವಾಸಿ. ಅನಿಷ್ಟ ಶಕ್ತಿಗಳ ಪ್ರತೀಕಾರ ಇದು – ಪವಿತ್ರವೆಂದು ಭಾವಿಸಿ ಸುರಕ್ಷಿತವೆಂದು ತಿಳಿದು ತಮ್ಮ ನಡೆತೆಗೆಟ್ಟ ಹೆಣ್ಣುಗಳನ್ನು ತಮ್ಮ ಸುಪ್ಪತ್ತಿಗೆಗಳಲ್ಲಿ ಆಲಂಗಿಸಿ ಚುಂಬಿಸುವವರ ಪಾಡು ಹೇಳು. ನಾನು ಹಾಗಲ್ಲ, ನನ್ನ ರೀತಿಗಳು ನನಗೆ ಗೊತ್ತಿರುವುದರಿಂದ ಅಂಥವಳಿಗೆ ಏನು ಮಾಡಬೇಕೆಂದು ನನಗೆ ಗೊತ್ತು.'' ಅಥೆಲೋವಿಗೆ ಇಯಾಗೋನ ಜೀವನಧರ್ಮಯೋಗದ ಹಠಾತ್ ಸಾಕ್ಷಾತ್ಕಾರವಾದಂತೆ 'O, thou art wise, it is certain' ಎಂದು ತುಂಬುಹೃದಯದ ಅಂತಿಮ ಪ್ರಶಂಸಾ ಪತ್ರವನ್ನು ನೀಡಿಬಿಡುತ್ತಾನೆ. ಇಲ್ಲಿಂದ ಇಯಾಗೋ ತನ್ನ ಮುಂದಿನ ಯೋಚನೆಯ ಬಗ್ಗೆ ಅಥೆಲೋನಿಗೆ ವಿವರಿಸುತ್ತಾನೆ. ಕ್ಯಾಷಿಯೋ ಈಗ ತಾನೆ ಇಲ್ಲಿಗೆ ಬಂದಿದ್ದ. ಕ್ಷಣಬಿಟ್ಟು ಬಾ ಎಂದು ತಾನು ಕಳಿಸಿದ್ದೇನೆ. ಈಗ ಬರುತ್ತಾನೆ. ಅಥೆಲೋ ಇಲ್ಲಿಯೇ ಮರೆಯಾಗಿ ನಿಲ್ಲಬೇಕು. ಅಥೆಲೋನ ಹೆಂಡತಿಯೊಡನೆ ಅವನ ಸರಸಸಲ್ಲಾಪಗಳ ಬಗ್ಗೆ ಕೇಳಿದಾಗ ಅವನ ಮಾತಿನ ಅಣಕು, ಸಿನಿಕತನ, ಅಸಡ್ಡೆಗಳನ್ನು ಬಹು ಸೂಕ್ಷ್ಮವಾಗಿ ಅಥೆಲೋ ಗಮನಿಸಬೇಕು. "For I will make him tell the tale anew, / where, how, how oft, how long ago, and when / He has and is again to cope your wife." ಮತ್ತೆ ಇನ್ನೊಂದು ಮಾತು – ಅಥೆಲೋ ಸಹನೆಯಿಂದಿರಬೇಕು. ಇಲ್ಲವಾದರೆ ಅವನೊಬ್ಬ ಅಸೂಯೆ, ಸಿಟ್ಟುಗಳ ಮೊಟ್ಟೆ ಮಾತ್ರ

ಎಂದುಬಿಡಬೇಕಾಗುತ್ತದೆ ಎಂದು ಎಚ್ಚರವೂ ನೀಡುತ್ತಾನೆ. ಎಂಥ ಸುವರ್ಣಾವಕಾಶ – ಈಗ ತನಗೆ ಸಂಪೂರ್ಣ ನಂಬಿಕೆಯಾಗಬೇಬೇಕು – ಅಂಥ ಸಂದರ್ಭವೊಂದನ್ನು ಸೃಷ್ಟಿ ಮಾಡಿದ ಇಯಾಗೋವಿಗೆ ನಾನು ಋಣಿ. "ಆಯಿತು ; I will be found most cunning in my patience ; But dost thou hear - most bloody" ಎಂದು ನೇಪಥ್ಯದಲ್ಲಿ ಅಡಗಿಕೊಳ್ಳಲು ತೆರಳುತ್ತಾನೆ. ಇಯಾಗೋನ ಯೋಜನೆ ಬಹು ಸ್ಪಷ್ಟ. ಕ್ಯಾಷಿಯೋನನ್ನು ಬಿಯಾಂಕ ಕುರಿತಾಗಿ ಪ್ರಶ್ನೆ ಮಾಡಬೇಕು. ಕ್ಯಾಷಿಯೋನ ಬಗ್ಗೆ ತೀರ ವ್ಯಾಮೋಹ ಈ ಬೆಲೆವೆಣ್ಣಿಗೆ. ನೂರುಜನರಿಗೆ ಮಂಕುಬೂದಿ ಎರಚಿದರೂ ತಾನೇ ಒಬ್ಬನಿಂದ ಮಂಕುಬೂದಿ ಎರಚಿಸಿಕೊಳ್ಳುವುದೇ ಇಂಥವರ ಪಾಡು. ಅವಳ ಬಗೆಗಿನ ಪ್ರಶ್ನೆಗಳಿಗೆ ಕ್ಯಾಷಿಯೋ ಹೊಟ್ಟೆಬಿರಿದು ನಗುತ್ತಾನೆ. ಈ ನಗು ಕೇಳಿದ ಅಥೆಲೋ ಹುಚ್ಚನಾಗುತ್ತಾನೆ. ಕ್ಯಾಷಿಯೋನ ನಗು, ಹಗುರ ವರ್ತನೆ, ಅಂಗಸನ್ನೆಗಳೆಲ್ಲ ಅಥೆಲೋನಲ್ಲಿ ಬೇರೆ ಅರ್ಥಗಳನ್ನು ಪಡೆದುಕೊಂಡು ಅವನು ಮಿತಿಮೀರಿದ ಅಸೂಯೆಗೆ ಮತ್ತಷ್ಟು ತುಪ್ಪಹೊಯ್ದಂತೆ ಆಗುವುದರಲ್ಲಿ ಸಂದೇಹವಿಲ್ಲ.

ಇಲ್ಲಿ ಕೂಡ ಒಂದು ಕುತೂಹಲಕರ ವಿಷಯವನ್ನು ದಾಖಲುಗೊಳಿಸಲೇ ಬೇಕು. ಆರ್ಡೆನ್ ಆವೃತ್ತಿಯ ಎಂ.ಆರ್. ರಿಡ್ಲಿ ಈ ಬಗ್ಗೆ ವಿವರಿಸಿದ್ದಾರೆ. 'ಅಥೆಲೋ' ನಾಟಕದ ಈ ಭಾಗದ ಕುರಿತಾಗಿ ಪಂಡಿತವರ್ಗದ ಕೆಲವರಲ್ಲಿ ಒಂದು ಭಾವನೆಯಿದೆ. ಅಥೆಲೋ ಮರೆಯಲ್ಲಿ ನಿಂತು ಕದ್ದುಕೇಳುವುದು ಹಾಗೂ ಕ್ಷಣದಿಂದ ಕ್ಷಣಕ್ಕೆ ಆವೇಶಗೊಳ್ಳುತ್ತ ಹೋಗುವುದು, ತನ್ನ ಪ್ರತಿಕ್ರಿಯೆಗಳನ್ನು ಪ್ರದರ್ಶಿಸುತ್ತ ಹೋಗುವುದು, ಇವು ಯಾವುವೂ ಒಬ್ಬ ಮಹಾನ್ ದುರಂತ ನಾಯಕನಿಗೆ ಒಪ್ಪುವಂಥವುಗಳಲ್ಲ, ಒಬ್ಬ ದುರುಳನ, ನೀಚನ ಕಾಲಡಿಯಲ್ಲಿ ಬಿದ್ದು ಹೊರಳಾಡುವಂಥ ಸ್ಥಿತಿಗೆ ತನ್ನನ್ನು ತಾನು ತಂದುಕೊಳ್ಳುವುದು ಸಹನೀಯವೇ ಅಲ್ಲದ ಮಾತು. ಮರೆಯಲ್ಲಿ ನಿಂತು, ಕತ್ತು ಚಾಚಿ, ಕಿವಿಗಳನ್ನು ಎಚ್ಚರವಾಗಿರಿಸಿಕೊಂಡು, ತನ್ನ ಕಪ್ಪು ಮುಖವನ್ನು ಕ್ಷಣಕ್ಕೊಮ್ಮೆ ಮರೆಯಿಂದ ಹೊರದೂಡಿ ಅಪಭ್ರಂಶಗಳನ್ನು ಬಡಬಡಿಸುವುದು ಇಡೀ ನಾಟಕದ ಘನತೆಯನ್ನೇ ಹಾಳುಗೆಡವಿ ಅಥೆಲೋನನ್ನು ಮಹಾನ್ ನಾಟಕದ ನಾಯಕಪಟ್ಟದಿಂದ ಒಂದು ಬಫೂನನ ಪಾತ್ರಕ್ಕೆ ಅವನತಿಗೊಳಿಸಿಬಿಟ್ಟ ಹಾಗೆ. ಈ ಭಾವನೆ ಎಲ್ಲಿಯವರೆವಿಗೆ ಮುಟ್ಟಿದೆಯೆಂದರೆ ಕೆಲವು ನಾಯಕಪಾತ್ರಗಳು ವಹಿಸುವ ನಟರು ಈ ಭಾಗವನ್ನು ಅಭಿನಯಿಸುವುದಕ್ಕೆ ಸಮ್ಮತಿಸದಿರುವ ಮಟ್ಟದವರೆವಿಗೆ ಮುಟ್ಟಿದೆ. ಈ ಮನೋಭಾವವೂ ಕೂಡ ಮಡಿವಂತರ ಅಭಿಪ್ರಾಯ ಹಾಗೂ ನಿಲುವುಗಳಿಗೆ ಹೊರತಾದುದೇನಲ್ಲ. ಇದು ಇನ್ನೊಂದು ರೀತಿಯ ಮಡಿವಂತಿಕೆ. ಈ ನಾಟಕದ ವಸ್ತುವಿನ ಪ್ರಧಾನ ಅಂಶಗಳಲ್ಲಿ ಈ ದೃಶ್ಯದಲ್ಲಿ ಕಾಣುವ ಅಥೆಲೋ ಮುಟ್ಟುವ ಹೀನಾಯ ಸ್ಥಿತಿಯೂ ಒಂದು. ಮಡಿವಂತರು ಮುಟ್ಟುಗೋಲು ಹಾಕುವ ಭಾಗಗಳು ಮತ್ತು ಗೌರವಾನ್ವಿತ ನಟರು ಅಭಿನಯಿಸಲು ಒಪ್ಪದ ಭಾಗಗಳು, ಇವುಗಳನ್ನು ಬಿಟ್ಟು ನಾಟಕ ಓದುವುದಾಗಲೀ ಅಂಥ

ಪ್ರದರ್ಶನ ನೋಡುವುದಾಗಲೀ ಒಂದು ಅಸ್ಥಿಪಂಜರವನ್ನು ಜೀವಂತ ಸುಂದರಮೂರ್ತಿ ಎಂದು ಭ್ರಮಿಸಿದಂತೆ.

ಕ್ಯಾಷಿಯೋ ಮತ್ತೆ ಕಾಣಿಸಿಕೊಂಡ ಕೂಡಲೇ ಇಯಾಗೋ ತನ್ನ ಎಂದಿನ ಸಲಹೆಯನ್ನು ಮತ್ತೆ ನೀಡುತ್ತಾನೆ. 'ಡೆಸ್ಡಿಮೋನಾಳ ಮುಂದೆ ಎಡೆಬಿಡದೆ ನಿನ್ನ ಅಹವಾಲನ್ನು ಮಂಡಿಸುತ್ತ ಹೋಗು' ಎಂದು, ಅಥೆಲೋನಿಗೂ ಕೇಳುವ ರೀತಿ ದೊಡ್ಡದನಿಯಲ್ಲಿ ಹೇಳಿ ಮರುಕ್ಷಣ ಅಥೆಲೋನಿಗೆ ಕೇಳಿಸದ ಹಾಗೆ, ಆದರೆ ಕ್ಯಾಷಿಯೋನಿಗೆ ಮೃದುವಾಗಿ ಕೀಟಲೆಮಾಡು ವವನಂತೆ ಮೆಲ್ಲಗೆ '....Now if this suit lay in Bianca's power / How quickly should you speed' ಎಂದು ಬಿಯಾಂಕ ಹೆಸರನ್ನು ಮಾತ್ರ ಅವನ ಕಿವಿಯಲ್ಲಿ ಉಸುರುತ್ತಾನೆ. ಕ್ಯಾಷಿಯೋ ದೊಡ್ಡದಾಗಿ ನಕ್ಕು 'ಅಯ್ಯೋ, ದಡ್ಡ ಹೆಂಗಸು ಅದು' ಎಂದದ್ದು ಕೇಳಿಯೇ ಅಥೆಲೋನ ಪಿತ್ಥ ಕೆರಳಲು ಆರಂಭವಾಗುತ್ತದೆ–'Look how he laughs already' ಎಂದು ಕನಲುತ್ತಾನೆ. ಇಲ್ಲಿಂದ ಮುಂದಕ್ಕೆ ದೃಶ್ಯ ಮುಗಿಯುವವರೆವಿಗೆ ಇಯಾಗೋ ಹೆಜ್ಜೆಹೆಜ್ಜೆಗೂ ತನ್ನ ಪ್ರಶ್ನೆಗಳ ರೀತಿಯನ್ನು ಹೆಚ್ಚುಹೆಚ್ಚು ಪ್ರಚೋದನಾತ್ಮಕ ಮಾಡುತ್ತ ಹೋಗುತ್ತಾನೆ. ಕ್ಯಾಷಿಯೋನ ಮಟ್ಟಿಗೆ ಕೇವಲ ಕೀಟಲೆ ಮಾಡುವ ಹಾಗೂ ಅಥೆಲೋನನ್ನು ಮನುಷ್ಯತ್ವದಿಂದ ಕ್ರಮೇಣ ಪಶುತ್ವದ ಮಟ್ಟಕ್ಕೆ ಮುಟ್ಟಿಸುವ ಎರಡನ್ನೂ ಕೂಡ ಸಮರ್ಥವಾಗಿ ಸಾಧಿಸುತ್ತಾನೆ. 'ನೀನು ಅವಳನ್ನು ಮದುವೆಯಾಗುತ್ತಿ ಎಂದು ಹರಡುತ್ತಿದ್ದಾಳೆ. ಹೌದೇನು ?' ಎಂದು ಕೇಳಿದ್ದಕ್ಕೆ ಕ್ಯಾಷಿಯೋ ಗಹಗಹಿಸಿ ನಕ್ಕುಬಿಡುತ್ತಾನೆ. ಈ ನಗು ಅಥೆಲೋನನ್ನು ಹುಚ್ಚೆಬ್ಬಿಸಿಬಿಡುತ್ತದೆ. 'Do you triunph, Roman, do you triumph ?' ಎಂದು ಧ್ವನಿಯನ್ನು ಏರಿಸಲೂ ಆಗದೆ, ಉಕ್ಕುತ್ತಿರುವ ರೋಷವನ್ನು ಹತ್ತಿಕ್ಕಲೂ ಆಗದೆ ಆಫ್ರಿಕಾಖಂಡದ ಕಾಡುಗಳಲ್ಲಿನ ತೋಳಗಳ ಹಾಗೆ ಊಳಿಡುತ್ತಾನೆ. ಲಾರೆನ್ಸ್ ಆಲಿವಿಯರ್ ಅಭಿನಯಿಸಿದ 'ಅಥೆಲೋ' ಚಿತ್ರವನ್ನು ನೋಡಿ ಈ ಮಾತು ಸೇರಿಸಿದ್ದೇನೆ. ಘನತೆ ಗಾಂಭೀರ್ಯಗಳೆಲ್ಲ ಗಾಳಿಗೆ ತೂರಿ ಆಯಿತು. ಆಸ್ಥಾನ ನಾಗರಿಕತೆಯ ಲಕ್ಷಣಗಳೆಲ್ಲ ಹೇಳ ಹೆಸರಿಲ್ಲದೆ ಅಳಿಸಿಹೋದವು. ಈಗ ಉಳಿದಿರುವುದು, ಈ ಪಾಶವೀಸ್ಥಿತಿ. ಕ್ಯಾಷಿಯೋನ ಒಂದೊಂದು ಮಾತೂ, ಅದನ್ನು ಆಡಿದ ಶೈಲಿಯೂ, ಜೊತೆಗೂಡಿದ ನಗುವೂ ಅವನ ಮೇಲೆ ಉಲ್ಬಣಿಸುತ್ತಿರುವ ದ್ವೇಷಕ್ಕಿಂತ ಮಿಗಿಲಾಗಿ ಡೆಸ್ಡಿಮೋನಾಳು ತನಗೆ ಎಸಗಿದ ದ್ರೋಹ ಎಂಥ ಭಯಂಕರ ಮಟ್ಟದ್ದು ಎಂಬ ಅರಿವು ಮೂಡಿಸುತ್ತ ಹೋಗುತ್ತದೆ. ಕ್ಯಾಷೀಯೋ ಮುಂದುವರೆಸಿದ್ದಾನೆ 'ನಾನು ಎಲ್ಲಿ ಹೋದರೂ ನನ್ನ ಅನುಸರಿಸಿ ಬಂದು ಕಾಡುತ್ತಾಳೆ. ಮೊನ್ನೆ ನಾನು ವೆನಿಸಿನ ಗಣ್ಯರ ಜೊತೆಗೆ ಇದ್ದೇನೆ. ಈ ಜುಜುಬಿ ಹೆಣ್ಣು ಅಲ್ಲಿಗೂ ಬರುತ್ತದೆ. ನನ್ನ ಕತ್ತ ಸುತ್ತ ಕೈ ಹಾಕುತ್ತಾಳೆ' ಎಂದು ಮುಗಿಸುವಷ್ಟರಲ್ಲೇ ಅಥೆಲೋ ಕತ್ತು ಚಾಚಿ " 'ಓ ಪ್ರಿಯ ಕ್ಯಾಷಿಯೋ' ಎಂದು ಒದರುತ್ತಾಳೆ. ಅವನ ಮುಖ ಅದನ್ನೇ ಸೂಚಿಸುತ್ತಿರವುದು'' ಎಂದು ಮತ್ತೂ ಪಾತಾಳಕ್ಕೆ ಕುಸಿಯುತ್ತಾನೆ. ಕ್ಯಾಷಿಯೋ

ವಿವರಿಸುತ್ತಲೇ ಇದ್ದಾನೆ. 'So hangs and lolls and weeps upon me : so hales and pulls me, ha, ha, ha !'

ಹಾಗಾದರೆ ಮುಂದಿನ ಭಾಗದಲ್ಲಿ ಡೆಸ್ಡಿಮೋನಾ ಹೇಗೆ ಅವನನ್ನು ತನ್ನ ಮಲಗುವ ಕೋಣೆಗೆ ಒಯ್ದಳು ಎಂದು ವಿವರಿಸಬೇಕು. ಕ್ಯಾಷಿಯೋನ ಅಹಂಕಾರದ ಮುಖ ಕಾಣತ್ತಿದೆ. ಆದರೆ ಅವನನ್ನು ಕತ್ತರಿಸಿ ಎಸೆದಾಗ ಅವನ್ನು ಹರಿದು ತಿನ್ನುವ ನಾಯಿಗಳು ಕಾಣುತ್ತಿಲ್ಲ, ಎಂದು ಅಥೆಲೋ ಕೊಂಚ ಭಾವೋನ್ಮತ್ತನಾಗುತ್ತಾನೆ. ಅಷ್ಟರಲ್ಲಿ ಬಿಯಾಂಕಳೇ ಅಲ್ಲಿಗೆ ಧಾವಿಸಿ ಬರುತ್ತಾಳೆ. ಅವಳ ಕೈಯಲ್ಲಿ ಕ್ಯಾಷಿಯೋ ನೀಡಿದ್ದ ಕರವಸ್ತ್ರವಿದೆ. ಮುಖದಲ್ಲಿ ಕೋಪವಿದೆ. ಕ್ಯಾಷಿಯೋ ತನಗೆ ದ್ರೋಹಬಗೆಯುತ್ತಿರಬಹುದೆಂಬ ಅನುಮಾನ, ಅಸೂಯೆಗಳಿವೆ. ಕವವಸ್ತ್ರವನ್ನು ಕ್ಯಾಷಿಯೋನತ್ತ ಬಿಸುಟು ಯಾರು ಅವನಿಗೆ ಈ ಕರವಸ್ತ್ರ ನೀಡಿದರೋ ಅವರಿಗೇ ಕೊಡು ಹೋಗು ಎಂದು ಅರಚುತ್ತಾಳೆ. ''ಯಾರು ನಿನ್ನ ಕೋಣೆಯಲ್ಲಿ ಬಿಟ್ಟುಹೋದರೆಂದು ತಿಳಿಯದಲ್ಲವೆ ನಿನಗೆ ? ಯಾವಳೋ ವಯ್ಯಾರಿ ಬಿಟ್ಟು ಹೋಗಿದ್ದಾಳೆ. ಆ ಕರವಸ್ತ್ರದ ನಕಲು ನಾನು ಮಾಡಬೇಕಲ್ಲ ? ಆ ಮಿಟುಕಲಾಡಿಗೇ ಕೊಡು ಹೋಗು.... ರಾತ್ರಿ ಊಟಕ್ಕೆ ಬರುವುದಾದರೆ ಬಾ, ಇಲ್ಲವೆ ಯಾವಾಗ ಮನಸ್ಸು ಬರುತ್ತದೋ ಆಗ'' ಎಂದು ಅಷ್ಟೇ ವೇಗವಾಗಿ ನಿಷ್ಕ್ರಮಿಸಿಬಿಡುತ್ತಾಳೆ. ಇಯಾಗೋ ಅವಳನ್ನು ಪುಸಲಾಯಿಸಿ ಒಪ್ಪಿಸಿ, ಅವಳನ್ನು ಅನುಸರಿಸಿ ಹೋಗುವಂತೆ ಕಳಿಸಿಬಿಡುತ್ತಾನೆ, ಇಲ್ಲದಿದ್ದರೆ ಕ್ಯಾಷಿಯೋಗೂ ತಿಳಿದ ಹಾಗೆ ಅವಳು ಬೀದಿರಂಪ ಮಾಡುವುದು ಖಂಡಿತ. ಮುಂದುವರೆಯುವುದಕ್ಕೆ ಮುನ್ನ ಒಂದು ಮಾತು ಸೇರಿಸಲೇಬೇಕು ಎಂದೆನಿಸುತ್ತದೆ. ಹಿಂದಿನ ಬಾರಿ ಕ್ಯಾಷಿಯೋ ಬಿಯಾಂಕಳನ್ನು ಭೇಟ್ಟಿಯಾಗಿದ್ದಾಗ ಅವಳ ಕುರಿತು ಅಪಾರಗೌರವ, ಕಳಕಳಿಗಳು ತೋರದಿದ್ದರೂ ಖಂಡಿತ ಕನಿಷ್ಠ ಮಟ್ಟದ ಆಸಕ್ತಿ, ಒಲವುಗಳನ್ನು ತೋರಿದ್ದ. ಅವಳನ್ನು ನಿಕೃಷ್ಟವಾಗಿ ಕಂಡಿರಲಿಲ್ಲ. ಅವಳ ಬಗ್ಗೆ ತಾತ್ಸಾರ ಭಾವ ತೋರಿರಲಿಲ್ಲ. ಆಗ ಅವರಿಬ್ಬರೇ ಇದ್ದುದು ಎಂದೂ ನಮಗೆ ನೆನಪಿದೆ. ಆದರೆ ಇಲ್ಲಿ ಇಯಾಗೋ ಅವಳ ಕುರಿತು ಪ್ರಶ್ನೆ ಮಾಡಿದ ಕೂಡಲೆ ತಿರಸ್ಕಾರ, ಉದಾಸೀನಗಳನ್ನು ಪ್ರದರ್ಶಿಸಿದ್ದಷ್ಟೇ ಅಲ್ಲದೆ ಅವಳ ಕುರಿತಾಗಿ ಕೀಳುದರ್ಜೆಯ ಶಬ್ದಗಳನ್ನು ಬಳಸುತ್ತಾನೆ. ಮಾತುಮಾತಿಗೆ ಅವಳನ್ನು ನೆನೆಸಿಕೊಂಡು ಗಹಗಹಿಸುತ್ತಾನೆ. ಈ ಎರಡು ರೀತಿಯ ವರ್ತನೆಗಳಲ್ಲಿ ಯಾವುದು ಸತ್ಯ, ಯಾವುದು ಸುಳ್ಳು ? ಕ್ಯಾಷಿಯೋ ಕೂಡ ವೆನಿಸ್‌ನ ಸಂಸ್ಕೃತಿಯ ಒಂದು ಪ್ರತೀಕ ಅಷ್ಟೆ. ಅವನದು ಟೊಳ್ಳು ವ್ಯಕ್ತಿತ್ವಕ್ಕೆ ಸಹಜವಾದ ಆಷಾಢಭೂತಿತನ, ಸದ್ಗುಣಗಳ ಸೋಗು ; ಹೆಣ್ಣು ತನ್ನ ಬಯಕೆಗಳನ್ನು ತೀರಿಸಿಕೊಳ್ಳಲು ಬೇಕಾದ ವಸ್ತು. ಖಾಸಗಿಯಾಗಿ ಅವಳನ್ನು ರಮಿಸುತ್ತ, ನಾಲ್ಕು ಜನರ ಮುಂದೆ ಅವಳನ್ನು ಜರೆಯುತ್ತ, ತಾನು ಮಹಾಸಂಪನ್ನನೆಂದು ಕಾಣಿಸಿಕೊಳ್ಳುವ ತವಕ ಅವನದು. ಸದ್ಯಕ್ಕಂತೂ ಇಯಾಗೋನ ಎದುರು ತಾನೊಬ್ಬ ಮಹಾಸುಸಂಸ್ಕೃತ ಸತ್ಪುರುಷನಾಗಿ ಕಾಣಬೇಕಾದ

ತುರ್ತಿದೆ. ಇಯಾಗೋ ಅಥೆಲೋನಿಗೆ ಬಹಳ ಆಪ್ತ, ಸದ್ಯದ ತನ್ನ ಸ್ಥಿತಿಯಲ್ಲಿ ಅವನೊಬ್ಬನೇ ತನ್ನ ಆಪದ್ಬಾಂಧವ. ಹಾಗಿರುವಾಗ ಅನವಶ್ಯಕವಾಗಿ ತಲೆಯನ್ನು ಅಪಾಯಕ್ಕೇಕೆ ಒಡ್ಡಬೇಕು ? ಇಂಥ ಆಷಾಢಭೂತಿಗಳ ಮಧ್ಯೆ 'ಮನಸ್ಸಿಗೆ ತೋರಿದ್ದನ್ನು ಸ್ಪಷ್ಟವಾಗಿ ಮಾತನಾಡಿಬಿಡುವ ಪ್ರಾಮಾಣಿಕ' ಎಂದು ಹೆಸರಾದ ಇಯಾಗೋ ಮಿಂಚದಿರುವುದು ಹೇಗೆ ಸಾಧ್ಯ ?

ಮುಂದಿನ ನಲವತ್ತು ಸಾಲುಗಳ ಇಯಾಗೋ-ಅಥೆಲೋ ದೃಶ್ಯ, ಅವರಿಬ್ಬರ ಮಧ್ಯದ ಕೊನೆಯ ದೃಶ್ಯ. ಅಥೆಲೋವಿಗೆ ಮತ್ತೇನೂ ಸಾಕ್ಷಿಗಳ ಅವಶ್ಯಕತೆ ಬೇಡವೆನ್ನುವಷ್ಟು ಗಟ್ಟಿಯಾಗಿ ಡೆಸ್ಡಿಮೋನಾಳು ತನಗೆ ಬಗೆದ ದ್ರೋಹದ ಕುರಿತಾದ ನಂಬಿಕೆ ಅವನಲ್ಲಿ ಸ್ಥಾಪಿಸಲಾಗಿದೆ. ಕ್ಯಾಷಿಯೋ ಅತ್ತಕಡೆ ನಿಷ್ಕ್ರಮಿಸಿದ ಕೂಡಲೆ ಧ್ವಂಸ ಮಾಡ ಹೊರಟ ಗೂಳಿಯ ಹಾಗೆ ನುಗ್ಗಿ ಬಂದು 'How shall I murder him Iago' ಎಂದು ಔಡುಕಚ್ಚಿ ಅಬ್ಬರಿಸುತ್ತಾನೆ. ಅಥೆಲೋ ಎಷ್ಟೆಷ್ಟು ಪಾಶವೀ ಮಟ್ಟಗಳನ್ನು ಮುಟ್ಟುತ್ತಾನೋ ಅಷ್ಟಷ್ಟೂ ಇಯಾಗೋ ತನ್ನ ತೋರ್ಕೆಯ ಅನುದ್ವಿಗ್ನ ಸ್ಥಿತಿಯನ್ನು ಗಟ್ಟಿಗೊಳಿಸಿಕೊಳ್ಳುತ್ತ ಹೋಗುತ್ತಾನೆ. ಅಥೆಲೋನ ಆವೇಶದ ಅಬ್ಬರಕ್ಕೆ ಪ್ರತಿಯಾಗಿ ಇಯಾಗೋ ಅಷ್ಟೇ ತಣ್ಣಗೆ, ಆದರೆ ಚೂಪಾಗಿ 'ತನ್ನ ಪಾಪಗಳ ಬಗ್ಗೆ ಹೇಗೆ ಗಹಗಹಿಸಿದ ಗಮನಿಸಿದೆಯಾ' ಎಂದು ಅಥೆಲೋನನ್ನು ಮತ್ತಷ್ಟು ಆಳಕ್ಕೆ ತಳ್ಳುತ್ತಾನೆ. ಏನೂ ಹೇಳಲಾಗದೆ 'O, Iago' ಎಂದು ಮೈಯೆಲ್ಲ ಬಿಗಿದು ಕಟ್ಟಿಸಿಕೊಂಡ ಮೃಗದ ಹಾಗೆ ನರಳುತ್ತಾನೆ. 'ಮತ್ತೆ, ಕರವಸ್ತ್ರ ಕಂಡಿ ತಾನೆ ?' ಅಥೆಲೋಗೆ ಮತ್ತೂ ಅನುಮಾನ ಅದು ತನ್ನದೇ ಹೌದೋ ಅಲ್ಲವೋ ಎಂದು. 'ಖಂಡಿತ ಹೌದು.... ನಿನ್ನ ಹೆಂಡತಿ ನಿನಗೆ ಕೊಟ್ಟ ಗೌರವ ಕಂಡಿತಲ್ಲ ? ಅವಳು ಅವನಿಗೆ ನೀಡಿದಳು. ಅವನು ತನ್ನ ಸೂಳೆಗೆ ನೀಡಿದ' ಇಯಾಗೋನ ಪೈಶಾಚಿಕ ಕ್ರೌರ್ಯ ಮಿತಿಗಳೇ ಕಾಣದಂತೆ ಇಡೀ ಸುತ್ತಲ ಜಗತ್ತನ್ನು ಆಕ್ಟೋಪಸ್ಸಿನಂತೆ ಆವರಿಸುತ್ತ ಹೋಗುತ್ತದೆ. ಅಥೆಲೋ ಕ್ಷಣಕ್ಷಣಕ್ಕೆ ಮನುಷ್ಯತ್ವದ ಲಕ್ಷಣಗಳನ್ನು ಕಳೆದುಕೊಂಡು ಮೃಗತ್ವದ ತಳಮಟ್ಟಕ್ಕೆ ಕುಸಿಯುತ್ತಿದ್ದಂತೆಯೇ ಇಯಾಗೋ ಸಮಸಮವಾಗಿ ತನ್ನ ಆಸುರೀಪ್ರವೃತ್ತಿಗಳಲ್ಲಿ ನೀಚಮಟ್ಟಗಳನ್ನು ತಲಪುತ್ತ ಹೋಗುತ್ತಾನೆ. ಈ ಇಡೀ ಅನುಭವ ಇಯಾಗೋನಿಗೂ ಒಂದು ರೀತಿ ತಾನೇ ತನ್ನ ಸ್ವರೂಪದರ್ಶನ ಮಾಡಿಕೊಂಡಂತೆ ಕೂಡ. ಸುತ್ತಲ ಜೀವಜಗತ್ತಿನ ಕುರಿತಾಗಿ ಎಂಥ ಅಸಹನೆ, ದ್ವೇಷಗಳು ಅವನಲ್ಲಿ ಮನೆಮಾಡಿದೆ ಎಂಬುದಕ್ಕೆ ಬಹುಶಃ 'ದುಷ್ಪ್ರೇರಣಾ ಪ್ರಕ್ರಿಯೆ'ಯೇ ಕಲಶಪ್ರಾಯವಾದ ಈ ಅಂತಿಮಭಾಗದಲ್ಲಿ ಗರಿಷ್ಠ ಮಟ್ಟದ ನಿದರ್ಶನಗಳು ಗೋಚರವಾಗುತ್ತವೆ. ಈ ದರ್ಶನದಿಂದ ಮುಜುಗರ ಪಡುವಂಥ ಅಳ್ಳೆದೆಯವನೇ ಅಲ್ಲ ಇಯಾಗೋ. ಬದಲಿಗೆ ತೀವ್ರ ಖುಷಿಯಲ್ಲಿ ಮೆರೆಯುತ್ತಾನೆ. ಈ ಹಿಂದೆಯೇ ಗಮನಿಸಿದ್ದಂತೆ ಅಥೆಲೋ ಮುಟ್ಟಿದ ಪಾಶವೀ ಮಟ್ಟಗಳು ಯಾವುವೂ ಇಯಾಗೋನನ್ನು ಕಂಗೆಡಿಸುವುದಿಲ್ಲ, ತಾನು ನಿಯಂತ್ರಿಸುತ್ತಿರುವ, ಯಜಮಾನಿಕೆ ವಹಿಸಿರುವ ಈ ಸರ್ಕಸ್ಸಿನಲ್ಲಿ ತಾನು ರಿಂಗ್ ಮಾಸ್ಟರನೂ ಹೌದು. ಹೀಗಾಗಿ ಅಥೆಲೋನನ್ನು ಹುಚ್ಚೆದ್ದು

ಕುಣಿಸಬಲ್ಲ, ಒಂದು ಚಾಟಿ ಬೀಸಿ ತಣ್ಣಗಾಗಿಸಬಲ್ಲ, ಗೂಳಿಯ ಹಾಗೆ ನುಗ್ಗಿಬಂದರೆ ಮತ್ತೂ ಅಷ್ಟು ಕೆಂಪು ತೋರಿಸಿ ಇನ್ನೂ ಕೆರಳಿಸಬಲ್ಲ. ವಿನಾಶಕಾರೀ ಮಟ್ಟಗಳನ್ನು ತಲುಪಿದನೆಂಬ ಅನುಮಾನ ಬಂದ ಕೂಡಲೆ ಆ ಪ್ರವೃತ್ತಿ ಹರಿಯಬೇಕಾದ ದಿಕ್ಕು, ಮುಟ್ಟಬೇಕಾದ ಗುರಿಗಳನ್ನು ಚಾಣಾಕ್ಷತನದಿಂದ ಸೂಚಿಸಬಲ್ಲ. ಈ ಕ್ಷಣದಿಂದ ಈ ನಲವತ್ತು ಸಾಲುಗಳ ಅಂತ್ಯದವರೆವಿಗೆ ಅಥೆಲೋ ಅಂತಿಮವಾಗಿ ತನ್ನ ಪ್ರಜ್ಞೆಯಾಳದ ಭಾವನೆಗಳೊಂದಿಗೆ ದಿಟ್ಟವಾಗಿ ಮುಖಾಮುಖಿಯಾಗುವ ಯತ್ನಗಳು ಕಾಣುತ್ತವೆ. ಒಂದು ಬಗೆಯಲ್ಲಿ ತನ್ನ ಹೊಯ್ದಾಟವನ್ನು ಸಮಾಪ್ತಿ ಮಾಡಲೇಬೇಕೆಂಬ ನಿರ್ಧಾರ ಕಾಣತ್ತದೆ. ಆದರೆ ಈ ದೃಶ್ಯ ನಾಟಕೀಯತೆಯ ಸಾಂದ್ರತೆಯನ್ನು ಪಡೆದುಕೊಳ್ಳಲು ಕಾರಣ ಈ ನಿರ್ಧಾರ, ಯತ್ನಗಳು ತೀರ ಪ್ರಜ್ಞಾಪೂರ್ವಕವಾದವೂ ಅಲ್ಲ. ಕಣ್ಣಿಗೆ ಕಾಣುತ್ತಿರುವ ಇಯಾಗೋ ಪ್ರದರ್ಶಿಸಿದ ಸತ್ಯಗಳೂ ಮನಸ್ಸಿನಲ್ಲಿ ಆಳದಲ್ಲಿ ಮನೆ ಮಾಡಿದ ಅನುಭವಜನ್ಯವಾದ ಭಾವನೆಗಳೂ – ಇವುಗಳ ಮಧ್ಯದ ಬರುಕಿನಲ್ಲಿ ತಾನು ಉರುಳುತ್ತಿರುವಂತೆ ಅನ್ನಿಸಿ ದಿಕ್ಕೆಟ್ಟಿದ್ದಾನೆ.

ಕ್ಯಾಷಿಯೋ ತನಗೆ ಬಗೆದ ದ್ರೋಹಕ್ಕೆ ಒಂದೇ ಬಾರಿಗೆ ಹೊಡೆದು ಸಾಯಿಸುವುದು ತೀರ ಕಡಿಮೆಯಾಯಿತು. ವರ್ಷಾನುಗಟ್ಟಲೆ ಅವನನ್ನು ಹಿಂಸಿಸಿ ಕೊಲ್ಲಬೇಕು. ಅಂದರೆ ಮಾತ್ರ ಅದು ತಕ್ಕ ಪ್ರತೀಕಾರ. ಹೀಗೆಂದ ಮರುಕ್ಷಣದಲ್ಲಿ ಡೆಸ್ಡಿಮೋನಾಳ ಮುಖ ಕಣ್ಣ ಮುಂದೆ ತೇಲಿ ಬರುತ್ತದೆ. ಆವೇಶ, ಸಿಟ್ಟು, ತಿರಸ್ಕಾರಗಳೆಲ್ಲ ಮೈಗೂಡಿದಂತೆ "a fine woman, a fair woman, a sweet woman !' ಎಂದು ಶಪಿಸುತ್ತಾನೆ. ಈ ಎಲ್ಲ ಗುಣಗಳಿಂದ ತನ್ನನ್ನು ಮೋಹದ ಬಲೆಗೆ ಸಿಲುಕಿಸಿ ನಾಶಮಾಡಿದ್ದಾಳೆ. ಕಂಡದ್ದು ಯಾವುದೂ ಸತ್ಯವಲ್ಲ. ಹೀಗೆ ಬಯಸಿದಂತೆ ಮತ್ತೊಂದು ತುದಿ ಮುಟ್ಟಿದನೆಂಬ ತೃಪ್ತಿಯಾದ ಕೂಡಲೇ ಇಯಾಗೋ, ಇಷ್ಟರೊಳಗೆ ಪರಿಚಿತವಾದ 'ಬಿಡು, ಬಿಡು, ನೀನು ಅದನ್ನು ಮರೆಯಬೇಕು' ಎಂಬ ಬಾಯ್ದುದಿಯ ಎಚ್ಚರಿಕೆ ನೀಡುತ್ತಾನೆ. ಇಯಾಗೋನ ರೀತಿಯೇ ಹಾಗೆ - ಗರಗಸವನ್ನು ಮುಂದಕ್ಕೆ ಸರಿಸಿದರೂ ಅಷ್ಟೆ, ಹಿಂದಕ್ಕೆ ಎಳೆದುಕೊಂಡರೂ ಅಷ್ಟೆ– ಪರಿಣಾಮ ಒಂದೇ. ಈ ಉಪದೇಶಗಳು, ಎಚ್ಚರಿಕೆಗಳು ಅಥೆಲೋನನ್ನು ವ್ಯಗ್ರಗೊಳಿಸಲೇ ಆಡಿದವು ಮತ್ತು ಅಥೆಲೋ ವಿಧೇಯ ವಿದ್ಯಾರ್ಥಿ ಕೂಡ. 'And let her rot, and perish and be damned tonight, for she shall not live' ಎಂದು ಸಾರಿದವನು ಮರುಕ್ಷಣದಲ್ಲಿ ತನ್ನ ಸ್ಥಿತಿಯ ಅರಿವಾದವನಂತೆ ಸಂಕಟದಲ್ಲಿ ತನ್ನ ಎದೆ ಎಷ್ಟು ಕಲ್ಲಾಗಿಬಿಟ್ಟಿದೆ, ಅದನ್ನು ಕುಟ್ಟಹೋದರೆ ತನ್ನ ಕೈಗಳೇ ಹೇಗೆ ಯಾತನೆಪಡುತ್ತವೆ ಎಂದು ಮರುಗುತ್ತಾನೆ. ಈ ಹಂತದಿಂದ ಮತ್ತೂ ಒಂದಷ್ಟು ಕೆಳಗಿನ ಪ್ರಜ್ಞೆಯ ಹಂತಕ್ಕೆ ಇಳಿದು 'O, the world has not a sweeter creature, she might lie by an emperor's side, and command him tasks' ಎಂದು ಡೆಸ್ಡಿಮೋನಾಳಂಥ ಹೆಣ್ಣು 'ತನ್ನ ಬಲೆಗೆ ಹಾಕಿಕೊಳ್ಳುವ' ಸಾಮರ್ಥ್ಯದ ಬಗ್ಗೆ

ವ್ಯಂಗ್ಯವಾಡುತ್ತಾನೆ. ಈ ಮಾತು ಓದುತ್ತಿದ್ದಂತೆಯೇ ತಟ್ಟನೆ ನಮಗೆ ಕ್ಲಿಯೋಪಾತ್ರಳ ನೆನಪಾದರೆ ಆಶ್ಚರ್ಯವಿಲ್ಲ. ಇಲ್ಲಿ ಈ ನಾಟಕದಲ್ಲಿ 'Emperor' – ಅಥೆಲ್ಲೋ ಮಟ್ಟಿಗೆ – ತಾನೇ. ಡೆಸ್ಡಿಮೋನಾ ತನ್ನ ಬಿಂಕಬಡಿವಾರಗಳಿಂದ ತನ್ನನ್ನು ವಶಪಡಿಸಿಕೊಂಡು ಈ ಸ್ಥಿತಿಗೆ ತಂದಿದ್ದಾಳೆ, ಅವಮಾನವಾಗಿದೆ ತನಗೆ. ತನ್ನನ್ನು ಗೊಂಬೆಯನ್ನಾಗಿ ಕುಣಿಸಿದ್ದಾಳೆ, ತನ್ನದೇ ಸ್ವಾರ್ಥಗಳನ್ನು ತೀರಿಸಿಕೊಂಡಿದ್ದಾಳೆ. ಮತ್ತೆ ಇಯಾಗೋ ಗರಗಸವನ್ನು ಸ್ವಲ್ಪ ಮೃದುವಾಗಿ ಹಿಂದಕ್ಕೆ ಎಳೆಯುತ್ತಾನೆ. 'ಇದು ನಿನ್ನ ರೀತಿಯಲ್ಲ ಬಿಡು' ಎಂದು ಅವನ ಸ್ಥಾನಮಾನಗಳ ನೆನಪು ಮಾಡುತ್ತಾನೆ. ''ನೇಣಿಗೆ ಹಾಕು ಅವಳನ್ನು'' ಎಂದು ಅರಚಿ, ಏನು ತಾನೆ ಹೇಳಿದೆ ತಾನು, ಅವಳಲ್ಲಿರುವ ಗುಣಗಳನ್ನು ತಾನೆ ? 'so delicate with her needle, an admirable musician. O, She will sing the savageness out of a bear ; of so high and plenteous wit and invention !' ವ್ಯಂಗ್ಯ, ಕ್ರೌರ್ಯಗಳ ಜೊತೆಗೇ ಅಪಾರ ಆತ್ಮ ಮರುಕವೂ ಕೂಡಿದ ಮಾತುಗಳು. 'sing the savageness ot of a bear' ಹಿಂದೆ 'Emperor'ನನ್ನು ಕೈಬೆರಳ ಸುತ್ತ ಆಡಿಸಬಲ್ಲವಳು ಈಗ ಕರಡಿಯ ಕ್ರೌರ್ಯವನ್ನು ಕೋಮಲವಾಗಿ ಒರಸಿಹಾಕಿಬಿಡುತ್ತಾಳೆ. ಅಲ್ಲಿ Emperor ಆದವನು ಅಥೆಲ್ಲೋ ಈಗ bear ಆಗಿದ್ದಾನೆ. ಅವನ ಪ್ರಕಾರ ಸರ್ಕಸ್ಸಿನ ರಿಂಗ್‌ಮಾಸ್ಟರ್ ಅವಳು, ತಾನು ಅವಳ ಆಜ್ಞೆಗಳನ್ನು ಪಾಲಿಸುವ ಒಂದು ಯಃಕಶ್ಚಿತ್ ಪ್ರಾಣಿ. ಈಗ ಅವನ ವಿಷಯದಲ್ಲಿ ನಿಜವಾದ ವ್ಯಂಗ್ಯ ಮಿಶ್ರಿತ ದುರಂತವೆಂದರೆ ಇದೆಯೇ : ತನ್ನನ್ನು ಕುಣಿಸುತ್ತಿರುವ ಇಯಾಗೋನನ್ನು ತನ್ನನ್ನು ನರಕದಿಂದ ಪಾರು ಮಾಡಲು ಅವತರಿಸಿದ ಹಿತೈಷಿ ಎಂದೂ ತನ್ನನ್ನು ಪ್ರೀತಿಸಿ ಮದುವೆಯಾಗಿ ತನ್ನ ನೆರಳಾಗಿರಲು ಬಯಸಿದ ಡೆಸ್ಡಿಮೋನಾಳನ್ನು ತನ್ನ ಶತ್ರುವೆಂದೂ ಭಾವಿಸಿರುವುದು. ಅವಳು 'admirable musician' ಮತ್ತು 'wit and invention' ಗಳಿರುವ ಪ್ರತಿಭಾಶಾಲಿ ಎಂಬುದಕ್ಕೆ ನಾಟಕದಲ್ಲಿ ಪುರಾವೆಗಳಿಲ್ಲ ಎಂಬ ಒಂದು ಮಾತಿದೆ. ಬಹುಶಃ ಇಲ್ಲಿ ಗಂಡನೇ ಈ ಮಾತುಗಳಾಡುತ್ತಿರುವುದರಿಂದ ಮತ್ತು ನಾಟಕೀಯವಾಗಿ ಅಷ್ಟು ಮಹತ್ವದ ಅಂಶಗಳಲ್ಲವಾದ್ದರಿಂದ ಇದನ್ನು ಲಂಬಿಸಬೇಕಾದ ಅವಶ್ಯಕತೆಯಿಲ್ಲ ಎಂದು ಕಾಣುತ್ತದೆ. ಅಥೆಲ್ಲೋ ಕೊಂಚ ತನ್ನ ಕೈತಪ್ಪುತ್ತಿರುವಂತೆ ಕಂಡಕೂಡಲೆ ಗರಗಸವನ್ನು ಸ್ವಲ್ಪ ಒತ್ತಿ ಮುಂದಕ್ಕೆ ತಳ್ಳಬೇಕು. 'She is the worse for all this' ಹೌದು ಹೌದು, ಸಾವಿರ ಸಾವಿರ ಪಾಲು ನಿಜ. ಆದರೂ ಎಷ್ಟು ದಯಾಪರ ಮೃದು ಮನಸ್ಸಿನ ಉದಾರಮನಸ್ಕಳು' ಇದು ತಾನು ಕಂಡಿರುವ ಸತ್ಯ. ಇಯಾಗೋವಿನ ದೃಷ್ಟಿಯಲ್ಲೂ ಅಷ್ಟೆ 'ತುಂಬ ಉದಾರಳು !' ಕ್ಯಾಷಿಯೋ ವಿಷಯದಲ್ಲಿ ಎಷ್ಟು ಉದಾರಳು ಎಂಬುದನ್ನು ನೆನಪಿಗೆ ತಂದ ಇಯಾಗೋವಿಗೆ 'ಹೌದು ಹೌದು ನೀನು ಹೇಳುವುದು ನಿಜ.....' ಎಂದು, ಆ ಕ್ಷಣದಲ್ಲಿ ಇಂಥ ಹೆಣ್ಣಿನ ಇಂಥ ರೀತಿಗಳು, ಅವಳು ಜಾರಿದ ಮಟ್ಟಗಳು ಮನಸ್ಸಿಗೆ ಬರುವುದರ ಜೊತೆಗೆ, ತನ್ನದೇ ದಾರುಣ ಅವಸ್ಥೆಯ ಕಲ್ಪನೆ ಒತ್ತಿಕೊಂಡು ಬಂದು 'but yet the pity of it, Iago ; O Iago, the pity of it, Iago' ಎಂದು

ಹಲುಬುತ್ತಾನೆ. ಇಯಾಗೋವಿಗೆ ಇದು ಮಿತಿಮೀರಿತು ಎಂದೆನಿಸಿರಬೇಕು. ಸರಿ ಹಾಳಾಗಲಿ, ತನಗೇನು ?· ಅವಳ ಪಾಪಗಳು ಅಷ್ಟು ಪ್ರಿಯವಾಗಿದ್ದರೆ, ಮನಸ್ಸು ನೋಯಿಸುವುದಕ್ಕೆ ಸಂಪೂರ್ಣ ಸಮ್ಮತಿ ನೀಡಲಿ. 'ಯಾಕೆಂದರೆ ....if it touches not you, it comes near nobody' ಎಂದು ತಿವಿಯುತ್ತಾನೆ. 'ಕತ್ತರಿಸಿ ತುಂಡರಿಸಿ ಬಿಡುತ್ತೇನೆ.... ನನಗೆ ದ್ರೋಹ ಬಗೆಯುತ್ತಾಳೇನು ?'' ಎಂದು ತಿವಿಸಿಕೊಂಡ ಹುಲಿಯ ಹಾಗೆ ಘರ್ಜಿಸುತ್ತಾನೆ. 'ಹೊಲಸು ಅದು....' ಇಯಾಗೋ ಒಪ್ಪುತ್ತಾನೆ. 'ಅದೂ ನನ್ನ ಅಧೀನ ಅಧಿಕಾರಿಯೊಡನೆ' ಅಥೆಲೋವಿಗೆ ಅಸಹ್ಯವಾಗುತ್ತದೆ. 'ಮತ್ತೂ ಹೊಲಸು' ; ಮುಗಿಯಿತು, ಇನ್ನು ಮುಂದಕ್ಕೆ ಚರ್ಚೆಯಿಲ್ಲ ; ಮನಸ್ಸಿಗೆ ನಂಬಿಕೆಯಾಗಬೇಕಾದುದಿಲ್ಲ. ಇಯಾಗೋ ಈಗ ಮಾಡಬೇಕಾದುದಿಷ್ಟೆ. ಇಂದು ರಾತ್ರಿಯೇ ತನಗೆ ಒಂದಷ್ಟು ವಿಷ ತಂದುಕೊಡಬೇಕು. ಅವಳೊಂದಿಗೆ ಮತ್ತೆ ಮಾತುಕತೆ, ಮನವರಿಕೆ ಇವುಗಳೆಲ್ಲ ಅಪಾಯದ ಹಾದಿಗಳು. ಅವಳ ಮೈಮಾಟಗಳು, ಅವಳ ಸೌಂದರ್ಯ ತನ್ನ ಧೃತಿಗೆಡಿಸಬಹುದು. ಇಂದೇ, ಇದೇ ರಾತ್ರಿ ತನಗೆ ವಿಷ ತಂದು ಕೊಡಬೇಕು ಇಯಾಗೋ. ಇಯಾಗೋವಿನ ಕೊನೆಯ ಸಲಹೆ, ಹುಕುಮು ರೀತಿಯಲ್ಲಿ ನೀಡಿದ ಸಲಹೆ. ವಿಷ ಬೇಡ. ಅವಳ ಹಾಸಿಗೆಯಲ್ಲಿ ಅವಳ ಕತ್ತು ಹಿಸುಕಿ ಸಾಯಿಸು. ಅವಳು ಮಲಿನಗೊಳಿಸಿದ ಸಾಹಿಗೆಯಲ್ಲಿಯೇ ಕತ್ತು ಹಿಸುಕಿ ಸಾಯಿತು. ಅಥೆಲೋ ಇಯಾಗೋನ ಸಲಹೆಗೆ ಸಂಪೂರ್ಣ ಶರಣಾಗುತ್ತಾನೆ. 'good, good, the justice of it pleases, very good' ಗುರುವಿಗೆ ಅರ್ಪಿಸುವ ಅಂತಿಮ ಕಾಣಿಕೆ. ಮನಸ್ಸೂ ಹಗುರಾಯಿತು. ಸಮಸ್ಯೆ ಬಗೆಹರಿದು ತಾನು ಮುಕ್ತನಾದೆ. ಮತ್ತೆ ಕ್ಯಾಷಿಯೋನ ಅಂತ್ಯದ ಮಟ್ಟಿಗೆ ಅದು ಸಂಪೂರ್ಣವಾಗಿ ಇಯಾಗೋ ತಾನೇ ಒಪ್ಪಿಕೊಳ್ಳುವ ಜವಾಬ್ದಾರಿ. ಈ ರಾತ್ರಿಯ ವೇಳೆಗೇ ಅಥೆಲೋ ಈ ಬಗ್ಗೆ ವಿವರಗಳು ಪಡೆಯುತ್ತಾನೆ ಎಂಬ ಆಶ್ವಾಸನೆ ಕೂಡ ನೀಡುತ್ತಾನೆ. ಸಂಪೂರ್ಣವಾಗಿ ತೃಪ್ತಗೊಂಡ ಅಥೆಲೋ 'Excellent good' ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಂತೆಯೇ ದೂರದಲ್ಲಿ ಕಹಳೆಯ ಕೂಗು ಕೇಳಿ 'ಏನು ಕಾರಣಕ್ಕೆ ಈ ಮೊಳಗು' ಎಂದು ಕೇಳುತ್ತಾನೆ. ವೆನಿಸಿನಿಂದ ದೂತನಿರಬೇಕು. ಲೋಡೊವಿಕೋ ಡ್ಯೂಕನಿಂದ ಬರುತ್ತಿದ್ದಾನೆ. ಇದು ಸುದ್ದಿ ; ಆದರೆ ಇಯಾಗೋ ಪ್ರಕಾರ, ಅಥೆಲೋ ಗಮನಿಸಬೇಕಾದದ್ದು ಅವನ ಹೆಂಡತಿ ಡೆಸ್ಡಿಮೋನಾ ಅವನ ಜೊತೆ ಬರುತ್ತಿರುವುದನ್ನು. ಇದು ಸುದ್ದಿಯಷ್ಟೇ ಅಲ್ಲ, ತನ್ನ ವಾದಕ್ಕೆ ಪುಷ್ಟಿ ನೀಡುವ ಮತ್ತಷ್ಟು ಪುರಾವೆ. ಅವನು ಬಳಸುವ ಶಬ್ದಗಳು ನೋಡಿ 'See, your wife is with him'. ಶಬ್ದ ಇಯಾಗೋ ಮನಸ್ಸಿನ ಡೊಂಕನ್ನು ಪ್ರತಿಬಿಂಬಿಸಲೂ ಕೂಡ ಬಳಸಿದ್ದು. ಅಥೆಲೋನ ಮೇಲೆ ಇದು ಪರಿಣಾಮ ಬೀರುವುದಿಲ್ಲವೆಂದು ಹೇಳಲು ಸಾಧ್ಯವೇ ಇಲ್ಲ.

ಲೋಡೊವಿಕೋ ಪ್ರವೇಶಿಸಿದ ನಂತರ ಪರಸ್ಪರ ಶುಭಗಳನ್ನು ಕೋರಿದ ಮೇಲೆ ಲೋಡೊವಿಕೋ ವೆನಿಸಿನಿಂದ ತಂದ ಪತ್ರವನ್ನು ಅಥೆಲೋನಿಗೆ ನೀಡಿ ಇಯಾಗೋನ ಕಡೆ

ತಿರುಗಿ ಮಾತನಾಡುತ್ತಾನೆ. ಇಯಾಗೋ ಅವನಿಗೆ ಸ್ವಾಗತಕೋರಿ ಅವನನ್ನು ನೋಡಿ ತನಗೆ ಸಂತೋಷವಾಗಿದೆಯೆಂದು ಹೇಳುತ್ತಾನೆ. ಲೋಡೊವಿಕೋಗೆ ಲೆಫ್ಟಿನೆಂಟ್ ಕ್ಯಾಷಿಯೋ ಹೇಗಿದ್ದಾನೆ ಎಂದು ತಿಳಿಯುವ ಸಹಜ ಕುತೂಹಲ. ಇಯಾಗೋನ ಉತ್ತರ ಬಹು ಮಾರ್ಮಿಕವಾದದ್ದು 'Lives, Sir'. ಇದ್ದಾನೆ. ಹೇಗೆ ಬೇಕಾದರೂ ಅರ್ಥಮಾಡಿಕೋ ಎಂಬ ರೀತಿ. ಡೆಸ್ಡಿಮೋನಾ ತತ್‌ಕ್ಷಣ ಮುಂದೆ ಬಂದು ತನ್ನ ಗಂಡನಿಗೂ ಕ್ಯಾಷಿಯೋಗೂ ಮಧ್ಯೆ ಒಂದಷ್ಟು ವಿರಸವಾಗಿದೆ, ಅದೆಲ್ಲವನ್ನೂ ಲೋಡೊವಿಕೋ ಸರಿಪಡಿಸಬೇಕು ಎಂದು ವಿನಂತಿ ಮತ್ತು ಆಗ್ರಹ ಎರಡೂ ಬೆರೆಸಿ ಹೇಳುತ್ತಾಳೆ. ಪತ್ರ ಓದುತ್ತಿರುವ ಅಥೆಲೋ ಕಿವಿಯೆಲ್ಲ ಸುತ್ತ ನಡೆಯುತ್ತಿರುವ ಮಾತುಕತೆಯ ಕಡೆಯೇ ಇರುವುದರಿಂದ 'ಅದು ಖಂಡಿತವೋ ನಿನಗೆ ?' ಎಂದು ಸಿಡುಕುಧ್ವನಿಯಲ್ಲಿ ಕೇಳುತ್ತಾನೆ. ಡೆಸ್ಡಿಮೋನಾಳಿಗೆ ಏನೂ ಅರ್ಥವಾಗದೆ 'ಏನಾದರೂ ಅಂದೆಯಾ ?' ಎಂದು ಗಂಡನ ಕಡೆ ತಿರುಗಲು ಅವನು ಪತ್ರ ಓದುತ್ತಿರುವವನಂತೆ ಅಲ್ಲಿಯ ಸಾಲುಗಳನ್ನು ದೊಡ್ಡ ಧ್ವನಿಯಲ್ಲಿ ಓದುತ್ತಾನೆ. ಇಲ್ಲ ಅವನು ಪತ್ರ ಓದುತ್ತಿದ್ದಾನೆ ಎಂದು ಸಮಾಧಾನ ಹೇಳಿದ ಲೋಡೊವಿಕೋ, ಅಥೆಲೋ-ಕ್ಯಾಷಿಯೋರ ಮಧ್ಯೆ ಬಿರುಕುಗಳು ಬಿಟ್ಟಿವೆಯೆ ಎಂದು ತಿಳಿಯಬಯಸುತ್ತಾನೆ. ಹೌದು, ಬಹು ದುರದೃಷ್ಟಕರ ರೀತಿಯಲ್ಲಿ. ಅವರಿಬ್ಬರ ಮಧ್ಯೆ ಮತ್ತೆ ರಾಜಿ ಮಾಡಿಸಲು ಏನು ಮಾಡಲೂ ತಾನು ಸಿದ್ಧ ಎಂದ ಡೆಸ್ಡಿಮೋನಾ, ಅಲ್ಲಿಗೆ ನಿಲ್ಲಿಸದೆ ತನಗೆ ಕ್ಯಾಷಿಯೋ ಬಗ್ಗೆ ಇರುವ ಪ್ರೀತಿಗಾಗಿ ಇದನ್ನು ಮಾಡುತ್ತೇನೆ ಎಂದೂ ಸೇರಿಸುತ್ತಾಳೆ. 'love' ಎಂಬುವ ಶಬ್ದಕ್ಕೆ ಪ್ರೀತಿ ಎಂಬುದು ಹೇಗೆ ಅರ್ಥವೋ ಅಂತೆಯೇ ಗೌರವ, ಅಭಿಮಾನ, ಕಳಕಳಿ ಎಂದೂ ಅರ್ಥಗಳಿವೆ. 'for the love I bear Cassio' ಡೆಸ್ಡಿಮೋನಾ ಪ್ರಕಾರ ಕ್ಯಾಷಿಯೋನ ಬಗೆಗಿನ ತನ್ನ ಕಳಕಳಿಗಾಗಿ ಎಂದು ಅರ್ಥ. ಆದರೆ ಕೇಳುತ್ತಿರುವ ಕಿವಿಗಳು ಅಥೆಲೋನದೂ ಕೂಡ – ಅವನಿಗೆ love ಎಂದರೆ ಒಂದೇ – ಪ್ರೀತಿ, ಕಾಮನೆಗಳು, ಬಯಕೆಗಳು ಅಷ್ಟೆ. ಅಲೆಅಲೆಯಾಗಿ ಇಯಾಗೋ ಆಡಿದ ಮಾತುಗಳು, ತಾನು ಕಂಡ ಇಯಾಗೋ-ಕ್ಯಾಷಿಯೋ ದೃಶ್ಯ, ತನ್ನ ಕರವಸ್ತ್ರ ಎಲ್ಲವೂ ಭೋರ್ಗರೆಯುತ್ತ ಅವನ ಪ್ರಜ್ಞೆಯಲ್ಲಿ ಅಪ್ಪಳಿಸುತ್ತ ಸಂಪೂರ್ಣ ಸಮತೋಲನವನ್ನು ಕಳೆದುಕೊಳ್ಳುವಂತಾಗುತ್ತದೆ. 'Fire and brimstone' ಎಂದು ಗುಟುರು ಹಾಕುತ್ತಾನೆ. ಡೆಸ್ಡಿಮೋನಾಗೆ ಗಂಡ ಈಗ ತನ್ನ ಕುರಿತು ಮಾತನಾಡಿದನೇ ಎಂದು ಸ್ಪಷ್ಟವಿಲ್ಲ. 'ನಿನಗೇನು ಬುದ್ಧಿ ಸ್ತಿಮಿತದಲ್ಲಿದೆಯೇ ?' ಎಂದು ಕೇಳುತ್ತಾನೆ. ಈ ಮಾತುಗಳು, ಅಂದರೆ 'Are you wise' ಎಂದು ಅಥೆಲೋ ಆಡುವ ಮಾತುಗಳು ತಪ್ಪಾಗಿ ಅವನ ಬಾಯಲ್ಲಿ ಆಡಿಸಲಾಗಿದೆ, ಅದು ನಿಜವಾಗಿ ಇಯಾಗೋ ಅಥೆಲೋವನ್ನು ಕುರಿತು ಆಡಿದ ಎಚ್ಚರಿಕೆಯ ಮಾತು ಎಂದೂ ಒಂದು ವಾದವಿದೆ. ಹಾಗಲ್ಲದಿದ್ದರೆ ಈ ಮಾತುಗಳು ಈ ಸಂದರ್ಭದಲ್ಲಿ ಅಥೆಲೋ ಆಡುವುದಕ್ಕೆ ಏನೂ ಸಮರ್ಥನೆ ಇಲ್ಲ ಎಂದೂ ವಾದಿಸುತ್ತಾರೆ. ಆದರೆ ನನಗೆ ಅನ್ನಿಸುವಂತೆ

ಇದು ಅಥೆಲೋ ಡೆಸ್ಡಿಮೋನಾಳಿಗೆ ಆಡಿದ ಮಾತುಗಳು ಎಂದು ತೀರ್ಮಾನಿಸುವುದೇ ಸರಿ. 'Wise' ಎಂಬ ಶಬ್ದಕ್ಕೆ ಇಲ್ಲಿ ವಿವೇಕವೆಂದಷ್ಟೇ ಅಲ್ಲ. ಇಷ್ಟು ಜನರೆದುರಿಗೆ ಲಜ್ಜೆಗೆಟ್ಟು 'for the love I bear Cassio' ಎಂದು ನಿರ್ಭಿಡೆಯಿಂದ ಸಾರುವುದಕ್ಕೆ ನಿನಗೆ ತಲೆಕೆಟ್ಟಿರಬೇಕು ಎಂದೂ ಅರ್ಥ. ಆದರೆ ಈ ಮಾತುಗಳ ಅರ್ಥವೇ ಆಗದ ಡೆಸ್ಡಿಮೋನಾಳಿಗೆ ತನ್ನ ಗಂಡನಿಗೆ ಸಿಟ್ಟು ಬಂದಿದೆ ಎಂದು ಅರ್ಥವಾಗುವುದಿಲ್ಲ. ಲೋಡೊವಿಕೋವಿಗೂ ಒಂದಷ್ಟು ಅಚ್ಚರಿಯಾಗಿದ್ದರೆ ಸಹಜವೇ. ಆದರೆ ಏನೂ ಆಗದವನಂತೆ ನಟಿಸುತ್ತ ವೆನಿಸಿನ ಪತ್ರ ಅವನ ಮನಸ್ಸನ್ನು ಕದಡಿರಬೇಕು, ತನಗೆ ಗೊತ್ತಿದ್ದ ಮಟ್ಟಿಗೆ ಆ ಕಾಗದದ ಪ್ರಕಾರ ಅಥೆಲೋ ವೆನಿಸಿಗೆ ಹಿಂತಿರುಗಬೇಕು ಹಾಗೂ ಅವನ ಸ್ಥಾನವನ್ನು ಕ್ಯಾಷಿಯೋಗೆ ನೀಡಬೇಕು ಎಂದು ಆದೇಶಿಸಲಾಗಿದೆ. ಇದು ತಿಳಿದು ಡೆಸ್ಡಿಮೋನಾಳಿಗೆ ತೃಪ್ತಿಯಾಗುತ್ತದೆ. ಅವಳಿಗೆ ತೃಪ್ತಿಯಾಯಿತೆಂದು ಕೇಳಿ ಅಥೆಲೋ 'Indeed ?' ಎಂದು ವ್ಯಂಗ್ಯಮಿಶ್ರಿತ ಕ್ರೌರ್ಯದಲ್ಲಿ ಕೇಳುತ್ತಾನೆ. ಮತ್ತು ಡೆಸ್ಡಿಮೋನಾಳಿಗೆ ಗಂಡನ ವರ್ತನೆ ಅರ್ಥವಾಗುವುದಿಲ್ಲ. 'My lord ?' ಎಂದದ್ದಕ್ಕೆ ಅಥೆಲೋ ಅವಳು ಇಷ್ಟು ತಲೆಕೆಟ್ಟು ನಡೆದುಕೊಳ್ಳುತ್ತಿರುವುದನ್ನು ನೋಡಿ ತನಗೆ ಬಹು ತೃಪ್ತಿಯಾಗಿದೆ ಎಂದು ಘೀಳಿಡುತ್ತಾನೆ. ಈ ಮಾತು ತೋರುವುದಕ್ಕಿಂತ ಹೆಚ್ಚು ಮಹತ್ವ ಪಡೆದುಕೊಳ್ಳುತ್ತದೆ. ಅಥೆಲೋ ತಾನು ಮಾಡಹೊರಟಿರುವ ಕೃತ್ಯಕ್ಕೆ ಡೆಸ್ಡಿಮೋನಾಳೇ ತನ್ನ ಮಾತು, ನಡವಳಿಕೆಗಳಿಂದ ಹೆಚ್ಚು ಹೆಚ್ಚು ಸಮರ್ಥನೆಗಳನ್ನು ಒದಗಿಸುತ್ತಿದ್ದಾಳೆ. 'I am glad....' ತನ್ನ ಮನಸ್ಸಿಗೆ ಸಮಾಧಾನ – ತಾನು ಮುಂದೆ ಎಸಗುತ್ತಿರುವ ಕೃತ್ಯ ಪಾಪವೂ ಅಲ್ಲ, ಅಪರಾಧವೂ ಅಲ್ಲ ಎಂದು. ಡೆಸ್ಡಿಮೋನಾಳಿಗೆ ಅಥೆಲೋನ ಒಂದೊಂದು ಮಾತೂ ಒಗಟಿನ ತರಹ ಕೇಳುತ್ತಿದೆ. ಏನು ಹೇಳುತ್ತಿದ್ದಾನೆ ? 'How, Sweet Othello' ಎಂದು ಆರ್ತದನಿಯಲ್ಲಿ ಕೇಳುತ್ತಾನೆ. 'Sweet' ಎಂಬ ಶಬ್ದ ವಿಷದ ಹಾಗೆ ಮೈಯಲ್ಲಿ ಸಂಚಾರ ಮಾಡಿರಬೇಕು. ಎಲ್ಲರೆದುರೂ ಉಕ್ಕಿದ ಆವೇಶವನ್ನು ಹತ್ತಿಕ್ಕಲಾರದೆ 'Devil' ಎಂದು ಅವಳಿಗೆ ಅಪ್ಪಳಿಸಿ ಹೊಡೆದುಬಿಡುತ್ತಾನೆ. ಇದ್ದಕ್ಕಿದ್ದಂತೆ ಆದ ಈ ಆಘಾತ ಡೆಸ್ಡಿಮೋನಾಳನ್ನು ಎಷ್ಟು ಅವಮಾನ, ದುಃಖಗಳಿಂದ ನಡುಗಿಸಿಬಿಟ್ಟಿದೆಯೋ ಅಷ್ಟೇ ಪ್ರಬಲವಾಗಿ ಲೋಡೊವಿಕೋ ಮತ್ತು ಸುತ್ತ ನೆರೆದಿರುವ ಪರಿಜನರು – ಇಯಾಗೋ ಒಬ್ಬನನ್ನು ಬಿಟ್ಟು – ಎಲ್ಲರನ್ನೂ ದಿಗ್ಭ್ರಾಂತ ಗೊಳಿಸಿಬಿಟ್ಟಿದೆ. 'I have not deserved this' ಎಂದು ಬಿಕ್ಕುತ್ತಾಳೆ ಡೆಸ್ಡಿಮೋನಾ. ಲೋಡೊವಿಕೋ ಈ ಘಟನೆಯ ಕುರಿತಾಗಿ ಎಲ್ಲರ ಪರವಾಗಿ ತನ್ನ ಅಸಮ್ಮತಿ ಹಾಗೂ ಒಂದು ಅರ್ಥದಲ್ಲಿ ಪ್ರತಿಭಟನೆಯನ್ನೇ ವ್ಯಕ್ತಪಡಿಸುತ್ತಾನೆ. ವೆನಿಸಿನಲ್ಲಿ ತಾನು ಈ ವಿಷಯ ಕಣ್ಣಾರೆ ಕಂಡೆನೆಂದು ತಿಳಿಸಿದರೂ ನಂಬುವವರು ಯಾರೂ ಇರುವುದಿಲ್ಲ. ''ಇದು ತೀರ ವಿಪರೀತವಾಯಿತು ; ಆಕೆ ಕಣ್ಣೀರಿಡುತ್ತಿದ್ದಾಳೆ. ಸಮಾಧಾನಪಡಿಸು'' ಎಂದು ವಿನಂತಿಸುತ್ತಾನೆ. ಅಥೆಲೋ ಹೃದಯ ಕಲ್ಲಾಗಿದೆ. 'Oh Devil, devil ! ಹೆಣ್ಣಿನ ಕಣ್ಣೀರಿನಿಂದ ಈ ಇಡೀ

ಭೂಮಿ ತುಂಬಿಕೊಂಡರೆ ಅದರಿಂದ ಜಾರಿದ ಪ್ರತಿ ಹನಿಯೂ ಒಂದು ಮೊಸಳೆಗೆ ಜನ್ಮ ನೀಡುತ್ತದೆ. ನನ್ನ ಕಣ್ಣೆದುರಿನಿಂದ ತೊಲಗು' ಎಂದು ಗುಡುಗುತ್ತಾನೆ. 'ನಿನ್ನನ್ನು ಕೆರಳಿಸುವಂತಾದರೆ ನಾನಿಲ್ಲಿ ಇರುವುದಿಲ್ಲ' ಎಂದು ಡೆಸ್ಡಿಮೋನಾ ಹೊರಡುತ್ತಿದ್ದಂತೆ ಲೋಡೊವಿಕೋ ತೀರ ಅಸಮಾಧಾನದಲ್ಲಿ ನಿಜವಾಗಿ ಇಷ್ಟು ವಿಧೇಯ ಮಹಿಳೆ.... ಅವಳನ್ನು ತಿರುಗಿ ಬರಲು ಹೇಳು ಎಂದು ಅಥೆಲೋನನ್ನು ಕೋರುತ್ತಾನೆ. ಅಥೆಲೋ ಮುಂದೆ ನಾಲ್ಕು ಐದು ಸಾಲುಗಳಲ್ಲಿ ಯಾರೂ ಯಾರನ್ನೂ ನಡೆಸಿಕೊಳ್ಳಬಾರದ ರೀತಿಯಲ್ಲಿ – ಒಬ್ಬ ಗಂಡನಾಗಿ ತನ್ನ ಹೆಂಡತಿಯನ್ನು ನಡೆಸಿಕೊಳ್ಳುತ್ತಾನೆ. ಲೋಡೊವಿಕೋ ಅವಳನ್ನು ತಿರುಗಿ ಬರಲು ಹೇಳು ಎಂದದ್ದಕ್ಕೆ ಬಹು ವಿದೇಯನಾಗಿ 'ಇಲ್ಲಿ ನೋಡು' ಎಂದು ಕರೆದು ಹಿಂತಿರುಗುವುದ್ಕಕೆ ಸೂಚನೆ ನೀಡುತ್ತಾನೆ. ಅವಳು ಬರುತ್ತಿದ್ದಂತೆಯೇ ಲೋಡೊವಿಕೋ ಕಡೆ ತಿರುಗಿ 'ಏನು ? ಅವಳಿಂದ ತಮಗೇನು ಆಗಬೇಕು ?' ಎಂದು ವಿನಯದಿಂದ ಕೇಳುತ್ತಾನೆ. ಅಪ್ರತಿಭನಾದ ಲೋಡೊವಿಕೋ 'ಯಾರು ?.... ನನಗೆ ?' ಎಂದು ಉಸುರುತ್ತಾನೆ. 'ನೀನೇ ತಾನೆ ಅವಳನ್ನು ತಿರುಗಿ ಕರೆಸು ಅಂದದ್ದು ? ಓ ನಿಮಗೆ ತಿಳಿಯದು ಅವಳು ತಿರುಗುತ್ತಾಳೆ.... ಮತ್ತೆ ತಿರುಗುತ್ತಾಳೆ.... ತಿರುಗುತ್ತಲೇ ಇದ್ದು ಮತ್ತೆ ತಿರುಗುತ್ತಾಳೆ. ಮತ್ತೆ ಕಣ್ಣೀರು ಹರಿಸಬಲ್ಲಳು. ಹೌದು ಹೌದು ಬೇಕಾದಷ್ಟು ಅಳಬಲ್ಲಳು. ಮತ್ತೆ ವಿಧೇಯಳು ಕೂಡ. ನೀನು ಹೇಳಿದೆಯಲ್ಲ ಹಾಗೆ ತುಂಬ ವಿಧೇಯಳು. ತುಂಬ ತುಂಬ ವಿಧೇಯಳು. ಹೋಗು ಗೋಳಾಡು ಹೋಗು. ಮತ್ತೆ ಸ್ವಾಮಿ, ಈ ಆದೇಶದ ಪ್ರಕಾರ ....ಓ, ಬಣ್ಣಗಳು ಬಳಿದುಕೊಂಡ ಮನೋವಿಕಾರಗಳೇ.... ಈ ಆದೇಶದಲ್ಲಿ ನನಗೆ ....ತೊಲಗು ಇಲ್ಲಿಂದ, ಮತ್ತೆ ಕರೆಕಳಿಸುತ್ತೇನೆ.... ಆಯಿತು ಸ್ವಾಮಿ, ಈ ಅಣತಿಯನ್ನು ಪಾಲಿಸುತ್ತೇನೆ.... ವೆನಿಸಿಗೆ ಹಿಂತಿರುಗುತ್ತೇನೆ.... ಹೊರಡು ಇಲ್ಲಿಂದ, ತೊಲಗು' ಎಂದು ಬುದ್ಧಿ ಮತ್ತು ಮಾತುಗಳ ಮೇಲೆ ಸಂಪೂರ್ಣ ಸ್ತಿಮಿತ ಕಳೆದುಕೊಂಡು ಕೂಗಾಡುತ್ತಾನೆ. ಡೆಸ್ಡಿಮೋನಾ ಅಲ್ಲಿಂದ ತೆರಳಿದ ಮೇಲೆ ಲೋಡೊವಿಕೋನ ಕಡೆ ಸಂಪೂರ್ಣ ಗಮನಹರಿಸಿ ಕ್ಯಾಷಿಯೋ ತನ್ನ ಸ್ಥಾನವನ್ನು ತುಂಬುತ್ತಾನೆ, ಮತ್ತೆ ಈ ಸಂಜೆ ಎಲ್ಲ ಒಟ್ಟಿಗೆ ಊಟ ಮಾಡೋಣ, 'ನಿಮಗೆಲ್ಲ ಸೈಪ್ರಸ್ಸಿಗೆ ಸ್ವಾಗತ....' ಎಂದು ನಿಷ್ಕ್ರಮಿಸುತ್ತ 'goats and monkeys' ಎಂದು ಇಡೀ ಜಗತ್ತನ್ನು ಶಪಿಸುವಂತೆ ಶಪಿಸಿ ಹೋಗುತ್ತಾನೆ. ಮೂರನೇ ಅಂಕದ ಮೂರನೇ ದೃಶ್ಯದಲ್ಲಿ ಇಯಾಗೋ ಡೆಸ್ಡಿಮೋನಾಳು ಗಂಡನಿಗೆ ಬಗೆದ ದ್ರೋಹದ ಕುರಿತು ಅತ್ಯಂತ ಕೀಳು ರೀತಿಯಲ್ಲಿ ವರ್ಣಿಸುತ್ತಿರುವಾಗ ಆಡಿದ 'were they as prime as goats, as hot as monkeys' ಎಂಬ ಮಾತು ದಿಢೀರನೆ ನೆನಪಿನಲ್ಲಿ ಹಾಯ್ದು ಹೋದರೆ ಅಚ್ಚರಿಯೇನಿಲ್ಲ. ಈಗ ಲೋಡೊವಿಕೋ, ಇಯಾಗೋ ಇಬ್ಬರೇ ರಂಗದ ಮೇಲೆ ಇದ್ದಾರೆ. ಲೋಡೊರಿಕೋವಿಗೆ ಏನು ಹೇಳುವುದಕ್ಕೂ ತೋರುವುದಿಲ್ಲ, ತಾನು ಕಂಡದ್ದು, ಕೇಳಿದ್ದು ನಿಜವೆ ? ಎಂಬ

ಆಶ್ಚರ್ಯದಲ್ಲಿ ದಿಜ್ಯೂಡ್ತಸಾಗಿ 'ವೆನಿಸಿನ ಸೆನೆಟರುಗಳೆಲ್ಲ ಮುಕ್ತಕಂಠದಿಂದ ಪರಿಪೂರ್ಣ ವ್ಯಕ್ತಿ ಎಂದು ಬಣ್ಣಿಸುವ ಉದಾತ್ತ ಅಥೆಲ್ಲೋ ಇವನೆಯೆ ? ಯಾವ ಮನೋವಿಕಾರಗಳಿಂದಲೂ ಸ್ತಿಮಿತಗೆಡದ ಅಥೆಲೋ ಇವನೇ ಎಂದು ನಂಬಬೇಕೆ ? ಆಕಸ್ಮಿಕಗಳ ಹೊಡೆತಗಳಾಗಲಿ, ಅದೃಷ್ಟದ ಚುಚ್ಚು ಮುಳ್ಳುಗಳಾಗಲೀ ಅವನನ್ನು ಮುಟ್ಟುವುದಾಗಲೀ ಘಾಸಿಗೊಳಿಸುವುದಾಗಲೀ ಸಾಧ್ಯವಿಲ್ಲವೆಂದು ನಂಬಿದ್ದ ಅದೇ ಮೂರನೇ ಇವನು ? ಎಂದು ಸೋಜಿಗ ವ್ಯಕ್ತಪಡಿಸುತ್ತಾನೆ. ಇಯಾಗೋವಿನದು ಒಂದೇ ವಾಕ್ಯದ ಕ್ಲುಪ್ತ ಉತ್ತರ 'He is much changed' ಎಂದು ಮಾತ್ರ, ಎಂದಿನ ಹಾಗೆ ಜಾಣನಂತೆ ಮಾತನಾಡುತ್ತಾನೆ. ಅವನ ಬುದ್ಧಿ ಹಿಡಿತ ತಪ್ಪಿದೆಯೊ, ಕೊಂಚ ಸಮತೋಲನ ಕಳೆದುಕೊಂಡಿದ್ದಾನೆಯೋ ಎಂದು ಮತ್ತೂ ಆತಂಕ ವ್ಯಕ್ತಪಡಿಸುವ ಲೋಡೊವಿಕೋವಿಗೆ ಸಮಾಧಾನ ರೂಪದಲ್ಲಿ "ಅವನು ಅವನಾಗಿಯೇ ಇದ್ದಾನಷ್ಟೆ; ಅವನ ಬಗ್ಗೆ ಏನೂ ಅಪಶಬ್ದವಾಡಲು ಬಯಸುವುದಿಲ್ಲ ನಾನು" ಎಂದು ಇಯಾಗೋವಿಗೆ ಬಹು ಸಾಮಾನ್ಯವಾದ – ಕೆಲವು ಸಲ ಅರ್ಥವೇ ಇಲ್ಲದ - ಶಬ್ದಚಮತ್ಕಾರವನ್ನು ಪ್ರದರ್ಶಿಸುತ್ತಾನೆ. '....if, as he might, he is not, / I would to heaven he were' ಆದರೆ ಈ ಸಂಭಾಷಣೆಯ ಮೊದಲ ವಾಕ್ಯ 'ಅವನು ಅವನಾಗಿಯೇ ಇದ್ದಾನಷ್ಟೆ' ಎಂಬುದು ಬಹು ಗಮನಾರ್ಹವಾದುದು. ಅವನ ಬಗ್ಗೆ ಇಲ್ಲಸಲ್ಲದ ಮಹಾಗುಣಗಳನ್ನು ಆರೋಪಿಸಿ ಅವನನ್ನು ಉದಾತ್ತತನಕ್ಕೆ ಏರಿಸಿದ್ದು ಅವನ ತಪ್ಪಲ್ಲ. ಅವನು ಅವನಿಗೆ ಸಹಜವಾದ ಗುಣಗಳಿಂದ ನಡೆದುಕೊಂಡಿದ್ದಾನೆ ಎಂದು ಕೂಡ ಇಯಾಗೋ ಮನಸ್ಸಿನಲ್ಲಿರುವುದು ಸಹಜ. ಅಂದರೆ, ಹೆಂಡತಿಯನ್ನು ಹೊಡೆಯುವುದು ಕೂಡ ? ಎಂದು ಲೋಡೊವಿಕೋ ಗಾಬರಿಗೊಳ್ಳುತ್ತಾನೆ. ಹೌದು, ಹೌದು ಅದು ಅಷ್ಟು ಸರಿಯಲ್ಲ. ಆದರೆ ಈ ಹೊಡೆತವಷ್ಟಕ್ಕೇ ಈ ಎಲ್ಲವೂ ಮುಗಿದರೆ ಚೆನ್ನ ಎಂದು ಕಳಕಳಿಯಿಂದ ಹಾರೈಸುತ್ತಾನೆ. ಲೋಡೊವಿಕೋಗೆ ಅರ್ಥವಾಗದ್ದೆಂದರೆ ಇದೇನು ಅವನ ದಿನನಿತ್ಯದ ರೀತಿಗಳೋ ಅಥವಾ ವೆನಿಸಿನ ಪತ್ರದಿಂದ ವಿಚಲಿತನಾಗಿದ್ದಾನೆಯೋ ಎಂದು. ಇಯಾಗೋ ಕರುಣಾಜನಕ ದನಿಯಲ್ಲಿ ಉತ್ತರಿಸುತ್ತಾನೆ. 'ಅಯ್ಯೋ.... ನಾನು ನೋಡಿರುವುದು, ನನಗೆ ಗೊತ್ತಿರುವುದು ಇವುಗಳ ಬಗ್ಗೆ ಮಾತನಾಡುವುದು ತರವಲ್ಲ, ನೀನೇ ನೋಡುತ್ತೀಯಲ್ಲ.... ಅವನು ನಡೆದುಕೊಳ್ಳುವ ರೀತಿಯೇ ಎಲ್ಲವನ್ನೂ ವಿವರಿಸುತ್ತದೆ. ನಾನು ಬಾಯಿ ಬಿಡಲೇಬೇಕಾಗಿಲ್ಲ. ಆದ್ದರಿಂದ ಹೋಗು, ಅವನನ್ನು ಅನುಸರಿಸಿ ನಡೆ. ಹೇಗೆ ನಡೆದುಕೊಳ್ಳುತ್ತಾನೆಂದು ಸ್ವತಃ ನಿನ್ನ ಅನುಭವಕ್ಕೇ ಬರಲಿ' ಎಂದು ವಿಷಾದಿಸುತ್ತಾನೆ. ಲೋಡೊವಿಕೋವಿಗೆ ಅಥೆಲೋನಲ್ಲಿ ತಾನಿಟ್ಟಿದ್ದ ಗೌರವ ನಂಬಿಕೆಗಳು ಹೀಗೆ ಸುಳ್ಳಾದುವಲ್ಲ ಎಂಬ ವ್ಯಥೆ ಕಾಡುತ್ತದೆ. ಎರಡನೇ ಅಂಕದ ಮೂರನೇ ದೃಶ್ಯದಲ್ಲಿ ಕ್ಯಾಷಿಯೋ ಪಾನಮತ್ತನಾಗಿ ನಾಲಿಗೆ ಸಡಿಲಬಿಟ್ಟು ಮಾತನಾಡಿದಾಗ, ಅವನ ಬೆನ್ನ ಹಿಂದೆ ಮಾಂಟನೋ ಮತ್ತೆ ಇತರರ ಮುಂದೆ ಇಯಾಗೋ

ಅವನ ಬಗ್ಗೆ ಮಾತನಾಡಿದ ಕುತ್ಸಿತ ರೀತಿಯನ್ನು ನಾವು ಮರೆತಿಲ್ಲ. ಅಲ್ಲಿ ಕ್ಯಾಷಿಯೋನ ಪಾನಮತ್ತಸ್ಥಿತಿಯ ಹಿಂದೆ ಹಾಗೂ ಇಲ್ಲಿ ಅಥೆಲೋನ ಅಮಾನುಷವರ್ತನೆಯ ಹಿಂದೆ ಯಾರು ಸೂತ್ರಗಳನ್ನು ಹಿಡಿದು ಆಡಿಸುತ್ತಿದ್ದಾರೆ ಎಂಬುದನ್ನು ಪ್ರತ್ಯೇಕವಾಗಿ ಏನೂ ಹೇಳಬೇಕಾಗಿಲ್ಲ.

ನಾಲ್ಕನೇ ಅಂಕದ ಮೊದಲನೇ ದೃಶ್ಯದಲ್ಲಿ ಇಯಾಗೋ -ಕ್ಯಾಷಿಯೋ ನಡುವಿನ ಮಾತುಕತೆಗಳನ್ನು ಕದ್ದುಕೇಳುವ ದೃಶ್ಯದಲ್ಲಿ ಅಥೆಲೋ ಎಂಥ ಹೀನಾಯಸ್ಥಿತಿಗೆ ತನ್ನನ್ನು ತಾನು ಮನಃಪೂರ್ತಿಯಾಗಿ ಒಡ್ಡಿಕೊಂಡಿದ್ದಾನೆ ಎಂದು ನೋಡಿದೆವು. ಮಹಾನ್ ನಾಯಕನ ಭೀಕರ ಕುಸಿತದ ಮೊದಲ ಹಂತ ಅದು. ಎರಡನೆಯ ಹಂತ ಎರಡನೇ ದೃಶ್ಯದಲ್ಲಿ ಕಾಣುತ್ತೇವೆ. ತನ್ನ ಖಾಸಗಿ ಕೋಣೆಯತ್ತ ನಡೆಯುತ್ತ ಡೆಸ್ಡಿಮೋನಾಳ ಆಪ್ತಸಹಚರಳೂ, ಇಯಾಗೋವಿನ ಹೆಂಡತಿಯೂ ಆದ ಎಮಿಲಿಯಾ ಜೊತೆ ಮಾತನಾಡುತ್ತಿದ್ದಾನೆ. ತನ್ನ ಹೆಂಡತಿಯನ್ನು ಕಾಣಲು ಅಲ್ಲಿಗೆ ಬರುತ್ತಿರುವ ಎಮಿಲಿಯಾಳನ್ನು ತನ್ನ ಹೆಂಡತಿಯ ನಡತೆಯ ಬಗ್ಗೆ ಪ್ರಶ್ನೆ ಮಾಡುತ್ತಿದ್ದಾನೆ – ಒಂದಿಷ್ಟು ಕಸಿವಿಸಿಯಿಲ್ಲದೆಯೆ, ಮುಜುಗರವಿಲ್ಲದೆಯೆ. ಇದನ್ನೆ ನಾನು ಎರಡನೆಯ ಹಂತದ ಕುಸಿತ ಎಂದದ್ದು. ಮದುವೆ ಎಂಬ ಅತ್ಯಂತ ಆಪ್ತ ಖಾಸಗಿ ಸಂಬಂಧದ ಕುರಿತು ಯಾವ ಗೌರವಾನ್ವಿತ ವ್ಯಕ್ತಿಯೂ ಮೂರನೆಯವನ ಬಳಿ ಮಾತನಾಡಿಕೊಳ್ಳುವುದಿಲ್ಲ. ಗಂಡಹೆಂಡಿರು ತಮ್ಮ ಪರಸ್ಪರರ ಚಾರಿತ್ರ್ಯದ ಮೆಚ್ಚುಗೆಯ ಪತ್ರವನ್ನು ಬೇರೆಯವರಿಂದ ನಿರೀಕ್ಷಿಸುವುದಿಲ್ಲ. ಆದರಿಲ್ಲಿ ಅಥೆಲೋ ಬೇರೆಯವರ ಜೊತೆ ಚರ್ಚಿಸುವುದಷ್ಟೇ ಅಲ್ಲ, ಒಬ್ಬ ಅನುಚರಳ ಜೊತೆಗೂ ತನ್ನ ಸಂಶಯಗಳನ್ನು ಬಿಚ್ಚಿಡುತ್ತಾ ಅವಳಿಂದ ತನ್ನ ಮನಸ್ಸಿಗೊಪ್ಪುವ ರೀತಿಯ ಉತ್ತರಗಳನ್ನು ನಿರೀಕ್ಷಿಸುತ್ತಾ ಹೋಗುತ್ತಾನೆ. ಅಥೆಲೋ ಈ ದೃಶ್ಯದ ಆರಂಭದಲ್ಲಿ ಯಾವ ಮಟ್ಟ ಮುಟ್ಟಿದ್ದಾನೆಂದರೆ ತನ್ನ ಖಾಸಗಿ ಮಲಗುವ ಕೋಣೆ ಈಗ ಒಂದು ವೇಶ್ಯಾಗೃಹ, ತನ್ನ ಹೆಂಡತಿ ವೇಶ್ಯೆ ಮತ್ತು ಎಲಿಮಿಯಾ ಒಬ್ಬ ತಲೆಹಿಡುಕಿ ಹೆಂಗಸು ಎಂದು ಮಾತ್ರ ಕಾಣುವ ಮಟ್ಟಕ್ಕೆ ಇಳಿದಿದ್ದಾನೆ. ಈ ವೇಶ್ಯಾಗೃಹಕ್ಕೆ ಬರುತ್ತಿರುವ ವಿಟನೊಬ್ಬ ಹೇಗೆ ಯಾವ ವೇಶ್ಯೆಯ ಚಾರಿತ್ರ್ಯಯನ್ನು ನಂಬುವುದಿಲ್ಲವೋ ಅಂಥದೇ ಮನಃಸ್ಥಿತಿಯಲ್ಲಿ ಅಥೆಲೋ ಇದ್ದಾನೆ. ಎಮಿಲಿಯಾ ಹೇಳುವ ಯಾವ ಉತ್ತರವೂ ಅವನಿಗೆ ಸಮಾಧಾನ ನೀಡಲು ಸಾಧ್ಯವಿಲ್ಲ. ಅವಳಿಗೆ ಗೊತ್ತಾಗುವುದಿಲ್ಲ. ಅವಳೊಬ್ಬ ಮೂರ್ಖ ಹೆಂಗಸು ; ಅನುಮಾನಾಸ್ಪದ ವಾದದ್ದೇನೂ ನೋಡಿಲ್ಲ ಅವಳು ಹಾಗಾದರೆ ? ಖಂಡಿತ ಇಲ್ಲ – ನೋಡಿಯೂ ಇಲ್ಲ, ಕೇಳಿಯೂ ಇಲ್ಲ, ಎಂದೂ ಅನುಮಾನವೂ ಪಟ್ಟಿಲ್ಲ ಅವಳು. ಅಥೆಲೋವಿಗೆ ಖಂಡಿತ ವಿರುವಂತೆ ಕ್ಯಾಷಿಯೋ-ಡೆಸ್ಡಿಮೋನಾ ಒಟ್ಟಿಗೆ ಇದ್ದದ್ದಾದರೂ ಅವಳು ನೋಡಿರಬೇಕಲ್ಲ. ಹೌದು ನೋಡಿದ್ದಾಳೆ. ಆದರೆ ಆದರಲ್ಲೇನೂ ಕೆಡುಕು ಕಾಣಲಿಲ್ಲ. ಅವರಿಬ್ಬರು ಆಡಿದ ಪ್ರತಿಮಾತನ್ನು ಕೇಳಿದ್ದಾಳೆ. ಇರಬಹುದು. ಆದರೆ ಅವರು ಆಗ-ಈಗ ಒಂದಷ್ಟು ಪಿಸುಗುಟ್ಟಿರಬಹುದಲ್ಲ? ಇಲ್ಲ ಖಂಡಿತ ಇಲ್ಲ. ಅಥೆಲೋ ಮತ್ತೂ ಮುಂದುವರೆಯುತ್ತಾನೆ –

'ನಿನ್ನನ್ನು ಎಂದೂ ಹೊರಕಳಿಸಲೇ ಇಲ್ಲವೆ!' ಇಲ್ಲ, ಯಾವಾಗಲೂ ಇಲ್ಲ'. ಅಥೆಲೋ ಮತ್ತೂ ಅಷ್ಟು ಅವಳ ನೆನಪು ಕೆದಕುತ್ತಾನೆ – ಆವಳ ಬೀಸಣಿಕೆ ಅಥವಾ ಕೈಗವುಸು, ಮುಖವಸ್ತ್ರ ಅಥವಾ ಮತ್ತೆ ಇನ್ನೇನಾದರೂ ತರಲು ಹೊರಕಳಿಸಲಿಲ್ಲವೆ ? ಇಲ್ಲ, ಇಲ್ಲ...ಎಮಿಲಿಯಾಗೆ ಸಂಶಯವೇ ಇಲ್ಲ. ಬಹಳ ವಿಚಿತ್ರವೆನಿಸುತ್ತದೆ ಅಥೆಲೋನಿಗೆ. ವಿಚಿತ್ರ ಎಂಬುವುದು ತನ್ನ ತೀರ್ಮಾನಗಳು ಅನುಮಾನಕ್ಕೆ ಕಾರಣವಾಗುತ್ತಿದೆಯಲ್ಲ ಎಂಬುದಕ್ಕಿಂತ ಹೆಚ್ಚಿಗೆ ಎಮಿಲಿಯಾಗೆ ಹೇಗೆ ಇವು ಯಾವುವೂ ಕಣ್ಣಿಗೆ ಬಿದ್ದಿಲ್ಲ ಎಂಬ ಕಾರಣಕ್ಕಾಗಿ. ಎಮಿಲಿಯಾ ಈ ಒಂದು ಅವಕಾಶವನ್ನು ಸಂಪೂರ್ಣ ಬಳಸಿಕೊಂಡು ತನ್ನ ಯಜಮಾನಿಯ ವಿಷಯ ಅಥೆಲೋನ ಮುಂದೆ ಮುಕ್ತಕಂಠದಿಂದ ಹೊಗಳುತ್ತಾಳೆ. ''ಅವಳೊಬ್ಬ ಪ್ರಾಮಾಣಿಕ ಮಹಿಳೆ ಎಂದು ನಾನು ಪ್ರಮಾಣ ಮಾಡಿ ಹೇಳುತ್ತೇನೆ. ನಾನು ನನ್ನ ಜೀವನವನ್ನೇ ಇದಕ್ಕೆ ಪಣವಾಗಿಡಬಲ್ಲೆ. ನಿನಗೆ ಬೇರೆ ಭಾವನೆಗಳಿದ್ದರೆ ಅವುಗಳನ್ನು ಬಿಸುಡು. ಅವು ನಿನ್ನ ಮನಸ್ಸನ್ನು ಕಲುಷಿತಗೊಳಿಸುತ್ತದೆ, ಅಷ್ಟೆ. ಯಾವನಾದರೂ ಪಾಪಿ ನಿನ್ನ ತಲೆಯಲ್ಲಿ ಈ ಭಾವನೆ ಹಾಕಿದ್ದರೆ ಅವನಿಗೆ ಉಗ್ರಶಾಪ ಬೀಳಲಿ. ಯಾಕೆಂದರೆ ಡೆಸ್ಡಿಮೋನಾಳಂಥ ಹೆಣ್ಣು ನಿಷ್ಕಪಟಳೂ ಪವಿತ್ರಳೂ ನಿಷ್ಠಳೂ ಅಲ್ಲವಾದರೆ ಯಾವ ಗಂಡಸೂ ಸುಖವಾಗಿಲ್ಲ ಎಂದರ್ಥ. ಹೆಣ್ಣುಗಳಲ್ಲೇ ಅತ್ಯಂತ ಶುದ್ಧಾತ್ಮಳಾದವಳೂ ಕೊಳೆತುನಾರುತ್ತಿದ್ದಾಳೆ ಎಂದು ಹೇಳಬೇಕಾಗುತ್ತದೆ'' ಎಂದು ದಿಟ್ಟವಾಗಿ ನುಡಿಯುತ್ತಾಳೆ. ಅಥೆಲೋ ಈ ದಿಟ್ಟತನದೆದುದುರು ಅಧೀರನಾದನೆ ? ಅವಳ ಮಾತುಗಳು ಕೇಳಿದ ತತ್‌ಕ್ಷಣವೇ 'ಹೋಗು ಅವಳನ್ನು ಇಲ್ಲಿಗೆ ಬರಲು ಹೇಳು' ಎಂದು ಕಳಿಸಿಬಿಡುತ್ತಾನೆ. ಅವಳ ಮಾತುಗಳು ದೃಢವಾಗಿ ಕಾಣುತ್ತವೆ ನಿಜ. ಆದರೆ ಅವಳೊಬ್ಬ ದಡ್ಡ ಕುಂಟಲಗಿತ್ತಿ, ಅವಳಿಗೇನು ಅರ್ಥವಾಗುತ್ತದೆ ಈ ಮಹಾಕುತಂತ್ರದ ಹಾದರಗಿತ್ತಿಯ ಕುಟಿಲೋಪಾಯಗಳು ? ಡೆಸ್ಡಿಮೋನಾ ಒಂದು ಬೀಗ ಬಡಿದ ಮಾಡ ಇದ್ದ ಹಾಗೆ. ಒಳಗೆಲ್ಲ ಗೂಢ ಧೂರ್ತತನಗಳೇ. ಇಷ್ಟಿದ್ದೂ ಅವಳು ಮಂಡಿಯೂರಿ ಪ್ರಾರ್ಥನೆ ಮಾಡುವುದನ್ನು ನಾನು ನೋಡಿದ್ದೇನೆ.... ಅದೂ ಮಾಡುತ್ತಾಳೆ ಅವಳು.

ಡೆಸ್ಡಿಮೋನಾ, ಎಮಿಲಿಯಾ ಪ್ರವೇಶಿಸುತ್ತಾರೆ. ಗಂಡನ ಇಚ್ಛೆಯೇನು ಎಂದು ಕೇಳುತ್ತಾಳೆ ಡೆಸ್ಡಿಮೋನಾ. 'Pray, chuck, come hither' ಎಂದು ಹತ್ತಿರ ಕರೆಯುತ್ತಾನೆ. ಈ 'chuck' ಎಂಬ ಶಬ್ದವನ್ನು ಹಿಂದೊಮ್ಮೆ ಮೂರನೇ ಅಂಕದ ನಾಲ್ಕನೇ ದೃಶ್ಯದಲ್ಲಿ ಬಳಸಿದ ನೆನಪಿದೆ ನಮಗೆ. ಆಗ ಅವರಿಬ್ಬರ ಮಧ್ಯದಲ್ಲಿ ಪ್ರೀತಿ ಇನ್ನೂ ಮಧುರವಾಗಿದ್ದಿತು. ಅಲ್ಲಿ 'Chuck' ಎಂದು ಬಳಸಿದಾಗ ಪ್ರೀತಿಯಿಂದ ಸಂಬೋಧಿಸಿದ್ದು ಎಂಬುದು ಸ್ಪಷ್ಟವಾಗಿದ್ದಿತು. ಆದರೆ ಅಲ್ಲಿಂದ ಈ ಅಂಕದ ವೇಳೆಗೆ ಬಹಳಷ್ಟು ನಡೆದುಹೋಗಿದೆ. ಡೆಸ್ಡಿಮೋನಾಳ ಕುರಿತ ಅಥೆಲೋನ ದೃಷ್ಟಿ ವಿಕಾರವಾಗಿದೆ. ಹಾಗಾಗಿಯೇ Chuck ಶಬ್ದಕ್ಕೆ ತಿರಸ್ಕಾರದ ಲೇಪವೂ ಆಗುತ್ತದೆ. ಹತ್ತಿರ ಬಂದ ಡೆಸ್ಡಿಮೋನಾ 'ಹೇಳು, ಏನು ನಿನ್ನ ಇಚ್ಛೆ' ಎಂದು ಮತ್ತೆ ಕೇಳುತ್ತಾಳೆ.

ಅಥೆಲೋ ಅವಳ ಕಣ್ಣುಗಳಲ್ಲಿ ಕಣ್ಣಿಟ್ಟು ಆಳಗಳನ್ನು ಹುಡುಕುವವನ ಹಾಗೆ 'Let me see your eyes, look in my face' ಎಂದು ಅಪ್ಪಣೆ ಮಾಡುತ್ತಾನೆ. ತಾನಷ್ಟೇ ಅವಳ ಕಣ್ಣುಗಳನ್ನು ಹುಡುಕಿದರೆ ಸಾಲದು, ಅವಳಿಗೆ ತನ್ನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡುವ ಧೀಶಕ್ತಿಯಿದೆಯೆ ನೋಡಬೇಕು. ಡೆಸ್ಡಿಮೋನಾಳಿಗೆ ಈ ವಿಚಿತ್ರ ಹಾಗೂ ಕುಬ್ಜರೀತಿಯ ಬಯಕೆ ಅರ್ಥವಾಗದೆ ಅಸ್ಥಿರಗೊಳ್ಳುತ್ತಾಳೆ. 'ಏನು ನಿನ್ನ ಈ ಭಯಾನಕ ಚಪಲ' ಎಂದು ತಿಳಿಯಬಯಸುತ್ತಾಳೆ. ಅಲ್ಲಿಯೇ ಇನ್ನೂ ನಿಂತಿದ್ದ ಎಮಿಲಿಯಾಳನ್ನು ನೋಡಿ ಅಥೆಲೋ 'ಹೋಗು, ನಿನ್ನ ಎಂದಿನ ಕರ್ತವ್ಯ ಮಾಡು ಹೋಗು. ಗಂಡು ಹೆಣ್ಣುಗಳನ್ನು ಏಕಾಂತಕ್ಕೆ ಬಿಟ್ಟು ಬಾಗಿಲು ಮುಚ್ಚಿಕೊಂಡು ಹೋಗು. ಯಾರಾದರೂ ಬಂದರೆ ಕೆಮ್ಮಿಯೋ ಮತ್ತೇನೋ ಮಾಡಿ ಎಚ್ಚರಿಸು.... ಹೋಗು. ನಿನ್ನ ನಿಗೂಢಗಳಲ್ಲಿ ತೊಡಗಿಕೋ ಹೋಗು' ಎಂದು ಅಟ್ಟುತ್ತಾನೆ. ಹಿಂದೆಯೇ ಹೇಳಿದಂತೆ ಅಥೆಲೋವಿಗೆ ಇದು ಒಂದು ವೇಶ್ಯಾಗೃಹ ಮತ್ತು ಎಮಿಲಿಯಾ ಆ ವೇಶ್ಯಾಗೃಹದ ಒಬ್ಬ ಪರಿಚಾರಿಕೆ ಅಷ್ಟೆ. ಗಂಡು-ಹೆಣ್ಣುಗಳ ಏಕಾಂತಕ್ಕೆ ಅವನು ಬಳಸುವ ಶಬ್ದ 'procreants' ಎಂದೇ ಹೊರತು 'ಗಂಡ-ಹೆಂಡಿರು' ಎಂದಲ್ಲ. ಎಮಿಲಿಯಾ ಅತ್ತ ಹೊರಟಕೂಡಲೆ ಡೆಸ್ಡಿಮೋನಾ ಮಂಡಿಯೂರಿ ''ಏನು ನಿನ್ನ ಮಾತುಗಳ ಅರ್ಥ ? ನಿನ್ನ ಶಬ್ದಗಳಲ್ಲಿನ ಉಗ್ರಕ್ರೋಧ ತಿಳಿಯುತ್ತದೆಯೇ ವಿನಾ ನಿನ್ನ ಮಾತುಗಳ ಅರ್ಥವೇ ಆಗುತ್ತಿಲ್ಲ'' ಎಂದು ಆತಂಕಗೊಳ್ಳುತ್ತಾಳೆ. ಇಲ್ಲಿಂದ ಮೂರು ನಾಲ್ಕು ಸಾಲುಗಳಲ್ಲಿ ಅಥೆಲೋವಿನಲ್ಲಿ ಒತ್ತಿಕೊಂಡು ಬರುತ್ತಿರುವ ಒಳಗಿನ ಆವೇಶವೆಲ್ಲ ಉಕ್ಕಿ ಹರಿಯುತ್ತವೆ. 'ಹೇಳು, ನೀನು ಯಾರು ?' ಎಂದು ಅಬ್ಬರಿಸಿದ ಪ್ರಶ್ನೆಗೆ ಡೆಸ್ಡಿಮೋನಾ ಕಕ್ಕಾಮಿಕ್ಕಿಯಾದವಳಂತೆ 'ನಿನ್ನ ಹೆಂಡತಿ, ನಿನ್ನ ನಿಷ್ಠ ಹಾಗೂ ನಿಷ್ಕಪಟ ಪತ್ನಿ' ಎಂದು ದೃಢವಾಗಿ ಹೇಳುತ್ತಾಳೆ. ''ಹಾಗಾದರೆ ಆಣೆ ಮಾಡು, ಆಣೆ ಮಾಡಿ ಹಾಳಾಗು. ನೋಡಲು ದೇವತೆಯಷ್ಟು ಪವಿತ್ರಳಾಗಿ ಕಾಣುವ ನಿನ್ನನ್ನು ನರಕದ ಶಕ್ತಿಗಳೂ ಮುಟ್ಟಲು ಹೆದರಬಹುದು. ಎಂದೇ ನೂರು ಪಟ್ಟು ಆಣೆ ಮಾಡು. ಪ್ರಾಮಾಣಿಕಳೆಂದು ಪ್ರಮಾಣ ಮಾಡು'' ಮಾತಿನಿಂದ ಮಾತಿಗೆ ಅಥೆಲೋ ತನ್ನ ಸಂಪೂರ್ಣ ಸ್ತಿಮಿತ ಕಳೆದುಕೊಳ್ಳುತ್ತಿರುವುದು ಬಹು ಸ್ಪಷ್ಟವಾಗಿ ಕಾಣುತ್ತಿರುವಾಗ್ಗೆಯೂ ಡೆಸ್ಡಿಮೋನಾಳ ಸೌಂದರ್ಯ ಹಾಗೂ ಆ ಸೌಂದರ್ಯದ ಹಿಂದೆ ತಾನು ಎಂದೂ ಗಮನಿಸುತ್ತ ಬಂದಿರುವ, ತನ್ನ ಅನುಭವಕ್ಕೆ ವೇದ್ಯವಾಗಿರುವ ಮುಗ್ಧತೆ ಇವುಗಳು ತನ್ನ ಉಕ್ಕಿಬರುತ್ತಿರುವ ಆಕ್ರೋಶದ ಅಲೆಗಳಿಗೆ ಹೆಬ್ಬಂಡೆಗಳ ಹಾಗೆ ಅಡ್ಡಬರುತ್ತಿವೆ ಎಂಬುದೂ ಸ್ಪಷ್ಟವಾಗಿ ನಮಗೆ ಕಾಣುತ್ತದೆ. ಅವನ ಸಂಕಟ ಆರಂಭವಾಗುವುದು ಈ ಗಳಿಗೆಯಿಂದಲೇ. ಡೆಸ್ಡಿಮೋನಾಳು ಮತ್ತೂ ದೃಢವಾಗಿ ಹೇಳುತ್ತಾಳೆ : 'ದೇವಲೋಕಕ್ಕೂ ಗೊತ್ತು ನಾನು ಪರಿಶುದ್ಧಳೆಂದು' 'ಹೌದು, ಹೌದು. ದೇವಲೋಕಕ್ಕೂ ಖಂಡಿತ ಗೊತ್ತು ನೀನೊಬ್ಬ ಕುಲಗೆಟ್ಟ ವಿಶ್ವಾಸಘಾತಕಳೆಂದು' ಎಂದು ಅವರಿಬ್ಬರ ಸಂಬಂಧದಲ್ಲಿ ಮೊದಲ ಬಾರಿಗೆಂಬಂತೆ ಘೋರ ದೂಷಣೆ ಮಾಡುತ್ತಾನೆ. ಡೆಸ್ಡಿಮೋನಾ ಕೂಡ ಮೊದಲ ಬಾರಿಗೆಂಬಂತೆ ಅವನೆದುರು ಧೈರ್ಯವಾಗಿ ದನಿ ಎತ್ತರಿಸಿ 'To

whom, my lord ? with whom ? how am I false?' ಎಂದು ಒತ್ತಾಯಪಡಿಸಿ ಕೇಳುತ್ತಾಳೆ. ಅಥೆಲೋವಿಗೆ ಉತ್ತರ ನೀಡಲು ಸಾಧ್ಯವಿಲ್ಲ. ಈ ಕ್ಷಣದಲ್ಲೇ ಹೆಬ್ಬಂಡೆಗೆ ಅಪ್ಪಳಿಸಹೋಗಿ ಸೋತು ಹಿಂದುರುಗಿ ನೊರೆಯಾಗಿ ಹರಿದುಹೋಗುವ ಅಲೆಗಳಂತೆ ಅವನ ಎತ್ತರೆತ್ತರಕ್ಕೆ ಏರಿದ್ದ ಕ್ರೋಧವೂ ಧುತ್ತನೆ ನೆಲಕ್ಕೆ ಕುಸಿಯುತ್ತದೆ. ಈ ಕ್ಷಣದಲ್ಲೇ ಅಥೆಲೋನ ಒಳಜಗತ್ತಿನ ಭಯಂಕರ ಅಲ್ಲೋಲಕಲ್ಲೋಲದ ಇಣುಕುನೋಟವೂ ನಮಗೆ ಸಾಧ್ಯವಾಗುವುದು. ಇಲ್ಲಿಯೇ ಈ ಇಡೀ ನಾಟಕ ಅಥೆಲೋ-ಡೆಸ್ಡಿಮೋನಾರ ಮಧ್ಯದ ಒಂದು ಅಗಾಧ ಪ್ರೇಮಕಥೆಯಾಗಿಯೂ ನಮ್ಮ ಮೇಲೆ ಪ್ರಭಾವ ಬೀರುವುದು. ಹೇಗೆ, ಹೇಗೆ ತಾನು ವಿಶ್ವಾಸಘಾತುಕಳು ಎಂದು ಕೇಳಿದಾಗ ಅಥೆಲೋ ನಿರುತ್ತರನಾಗುತ್ತಾನೆ ಯಾಕೆ ? ಒಂದು ಕ್ಷಣದ ಹಿಂದೆ ಎಮಿಲಿಯಾ ಎದುರು ಡೆಸ್ಡಿಮೋನಾ-ಕ್ಯಾಷಿಯೋರ ಕುರಿತಾಗಿ ಅಷ್ಟು ಸೂಕ್ಷ್ಮವಾಗಿ ಪರೀಕ್ಷಿಸಿದವನು ಈಗ ಯಾಕೆ ಡೆಸ್ಡಿಮೋನಾಳ ಎದುರು ಉತ್ತರ ಕೊಡಲಾಗದೆ ನಿಲ್ಲುತ್ತಾನೆ ? ಉತ್ತರ ಕೊಡಲಿಕ್ಕಾಗದ ಸ್ಥಿತಿಯಷ್ಟೇ ಅಲ್ಲ, ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯಲು ಆರಂಭಿಸಿ ಅವಳ ಮುಖ ನೋಡಲಾಗದೆ 'O Desdemona, away, away, away' ಎಂದಷ್ಟು ಮಾತ್ರ ತೊದಲಲು ಸಾಧ್ಯವಾಗುತ್ತದಷ್ಟೆ ಯಾಕೆ! ಇದೇ ಹಿಂದಿನ ದೃಶ್ಯದಲ್ಲಿ ಲೋಡೊವಿಕೋ ಮತ್ತಿತರರ ಮುಂದೆ ಸಾರ್ವಜನಿಕವಾಗಿ ಹೆಂಡತಿಗೆ ಅಪ್ಪಳಿಸಿ ಹೊಡೆದ ಆ ಕ್ರೋಧ, ಇಬ್ಬರೇ ಇದ್ದಾಗ ಯಾಕೆ ಇದ್ದಕ್ಕಿದ್ದಂತೆ ಮಾಯವಾಯಿತು ? ಬದಲಿಗೆ ವೀರಾಗ್ರಣಿ, ಸೋಲನ್ನೇ ಕಂಡರಿಯದ ಮಹಾಶೂರ, ನಾಡಿನ ಅಗ್ರಗಣ್ಯ ಸೇನಾನಿ, ಗಂಡಸು ಒಂದು ಹೆಣ್ಣಿನ ಎದುರು ಕಣ್ಣೀರು ಹರಿಸುತ್ತಾನೆ ಯಾಕೆ ? ಮೊದಲನೆಯದಾಗಿ ಬಹುಶಃ ಅವನ ಮನಸ್ಸನ್ನು ಕಾಡಿದ ಒಂದು ಭಯದ ಬಗ್ಗೆ ಹೇಳಿಬಿಡೋಣ. ಇಯಾಗೋ ಈ ವೆನಿಸಿನ ಹೆಣ್ಣುಮಕ್ಕಳ ಬಗ್ಗೆ ಏನು ಹೇಳಿದಾದ ಎಂಬುದು ನೆನಪಿದೆಯಲ್ಲ ನಮಗೆ ? : 'In Venice they do let god see the pranks / They do not show their husbands : Their best conscience / Is not to leave it undone, but keep unknown.' ಅದಕ್ಕೆ ಉತ್ತರವಾಗಿ ಸಂಪೂರ್ಣ ಧೃತಿಗೆಟ್ಟ ಅಥೆಲೋನ ಪ್ರತಿಕ್ರಿಯೆಯೂ ನಮಗೆ ನೆನಪಿದೆ. 'Dost thou say so ?' ಡೆಸ್ಡಿಮೋನಾ 'To whom my lord, with whom, how am I false ?' ಎಂದು ಕೇಳಿದ್ದಕ್ಕೆ ತಾನು ಉತ್ತರವಾಗಿ 'ಕ್ಯಾಷಿಯೋನೊಡನೆ' ಎಂದು ಹೇಳಿಬಿಟ್ಟರೆ ಡೆಸ್ಡಿಮೋನಾ ದೊಡ್ಡದಾಗಿ ನಕ್ಕು ನಿನಗೇನು ವೆನಿಸಿನ ರೀತಿಗಳ ಅರಿವಿಲ್ಲವೇನು ? ಇದರಲ್ಲೇನು ಅತಿಶಯ ಕಂಡೆ ? ನಿನ್ನ ಗೊಡ್ಡು ನೀತಿಗಳನ್ನೆಲ್ಲ ಇಲ್ಲಿ ತರಬೇಡ ಅಂದು ತನ್ನ ಬಾಯಿಬಡಿದು ಬಿಟ್ಟರೆ ? ನಿಷ್ಠೆ, ಪ್ರಾಮಾಣಿಕತೆಗಳನ್ನು ಬಯಸುವ ತನ್ನದೇ ಮೂರ್ಖತನವೋ ಏನೋ. ಕೇಳಿ ಅವಮಾನಿತನಾಗುವುದಕ್ಕಿಂತ ಕೇಳದೆ ಒಳಗೆ ನರಳುವುದೇ ಉತ್ತಮ. ಆದರೆ ಇದಿಷ್ಟೇ ಕಾರಣವೆಂದು ನನಗೆ ಅನ್ನಿಸುವುದಿಲ್ಲ. ಈ ಸಂದರ್ಭ ಮತ್ತೂ ಸಂಕೀರ್ಣವಾದದ್ದು. ಪ್ರತಿಬಾರಿ ಅಥೆಲೋ ಡೆಸ್ಡಿಮೋನಾಳನ್ನು ಏಕಾಕಿಯಾಗಿ ಸಂಧಿಸಿದಾಗಲೂ, ಹತ್ತು ಜನರ ಮಧ್ಯೆ ಇದ್ದೂ

ಅವಳೊಡನೆ ಆಪ್ತವಾಗಿ ಎರಡು ಮಾತನಾಡಿದಾಗಲೂ ಅವಳ ಇಡೀ ವ್ಯಕ್ತಿವೈಶಿಷ್ಟ್ಯ, ವ್ಯಾಪಕ ಗುಣ ತನ್ನನ್ನು ಮುಟ್ಟಿ, ಆಳದಲ್ಲಿ ಕದಡಿಬಿಡುತ್ತದೆ. ಈ ಅಂಶವನ್ನು ನಾವು ಪದೇ ಪದೇ ಗಮನಿಸಿದ್ದೇವೆ. ಮುಗಿಲೆತ್ತರಕ್ಕೆ ಜಿಗಿಯುತ್ತ ಭೋರ್ಗರೆವ ತನ್ನ ಆಕ್ರೋಶಗಳ ಅಲೆಗಳು ಈ ನಿಶ್ಚಲ, ಪ್ರಶಾಂತ, ವಿಶಾಲ ಕೊಳದ ತಿಳಿಯ ಎದುರು ಸ್ತಬ್ಧವಾಗಿಬಿಡುತ್ತದಲ್ಲ ! ಒಟ್ಟು ಆತ್ಮವಿಶ್ವಾಸ, ನಿರ್ಧಾರಗಳೆಲ್ಲ ಕರಗಿಹೋಗುವ ಅನುಭವವಾಗುತ್ತದಲ್ಲ? ಇದು ಪ್ರೀತಿಯೋ ? ತನ್ನ ದೌರ್ಬಲ್ಯವೋ ? ಈ ಉತ್ಕಟ ಸಂಘರ್ಷದ ಸುಳಿಗೆ ಸಿಕ್ಕು ತಾನು ಬಸವಳಿದು ಕಣ್ಣೀರು ಹರಿಸುವುದರಲ್ಲಿ ಅಚ್ಚರಿಯೇನು ? ಅವಳನ್ನು ನೋಡಿದಲೆ ಇಯಾಗೋವಿನಿಂದ ಕಲಿತ ಪಾಠಗಳೆಲ್ಲ ಮರೆತು, ಅವಳ ಸೊಬಗು, ಲಾವಣ್ಯಗಳಷ್ಟೇ ಮನಸ್ಸನ್ನು ತುಂಬುತ್ತ ಹೋಗುತ್ತವಲ್ಲ ! ಇದರಿಂದ ಮುಕ್ತನಾಗಬೇಕಾದರೆ ಅವಳಿಂದ ದೂರವಾಗಬೇಕು.... ಎಂದೇ 'O Desdemona, away, away, away' ಎಂದು ತನ್ನ ಮನಸ್ಸಿಗೇ ತನಗಿರುವ ಪರಿಹಾರ ಒಂದೇ ಎಂದು ಹೇಳಿಕೊಳ್ಳುವ ರೀತಿ ಹೇಳಿಕೊಳ್ಳುತ್ತಾನೆ. 'O Desdemona' ಎಂಬ ಉಕ್ತಿಯಲ್ಲೇ ಸ್ಪಷ್ಟವಾಗುತ್ತದೆ, ಆಡುತ್ತಿರುವ ಮಾತು ನೋವಿನಿಂದ, ಅರ್ಥವಾಗದ ಸಂಕಟಗಳಿಂದಲೇ ಹೊರತು ಹಿಂದಿನ ಸಾಲುಗಳಲ್ಲಿಯಂತೆ ಆವೇಶದಲ್ಲಿ ಅಲ್ಲ ಎಂದು.

ಡೆಸ್ಡಿಮೋನಾಳಿಗೆ ತೃಣವೂ ಅರ್ಥವಾಗದೆ, ಗಂಡನ ಕಣ್ಣುಗಳಲ್ಲಿ ನೀರು ಕಂಡು ಉದ್ವಿಗ್ನಳಾಗಿ 'ಎಂಥ ಕ್ರೂರ, ಕರಾಳ ದಿನಗಳಿವು ? ಏಕೆ ಈ ಕಣ್ಣೀರು ? ಈ ನಿನ್ನ ದುಃಖಕ್ಕೆ ನಾನು ಕಾರಣಳೆ ?' ಎಂದು ತನಗೆ ತೋರುವ ಇದಕ್ಕಿರಬಹುದಾದ ಒಂದೇ ಕಾರಣದ ಬಗ್ಗೆ ಮಾತನಾಡುತ್ತಾಳೆ. ಅವಳ ಅನುಮಾನ, ಅಥೆಲೋವಿಗೆ ತನ್ನ ತಂದೆಯ ಮೇಲೆ ಸಿಟ್ಟು ಬಂದಿರಬಹುದು ಎಂದು. ಬ್ರಬಾನ್ಷಿಯೋ ಚಿತಾವಣೆಯ ಮೂಲಕ ಡ್ಯೂಕನು ತನ್ನನ್ನು ವೆನಿಸಿಗೆ ಹಿಂತಿರುಗಿ ಕರೆಸಿಕೊಳ್ಳುತ್ತಿದ್ದಾನೆ ಎಂದು ಅಥೆಲೋ ನಂಬಿರಬಹುದು. ಆದರೆ ಹಾಗಾಗಿದ್ದರೆ ಅದಕ್ಕೂ ತನಗೂ ಏನೂ ಸಂಬಂಧವಿಲ್ಲ ಎನ್ನುತ್ತಾಳೆ ಡೆಸ್ಡಿಮೋನಾ. ತನ್ನ ತಂದೆಯ ವಿಶ್ವಾಸವನ್ನು ಅಥೆಲೋ ಕಳೆದುಕೊಂಡಿದ್ದರೆ ತಾನೂ ಕೂಡ ಅಷ್ಟೇ ಮಟ್ಟಿಗೆ ಅವನಿಂದ ದೂರವಾಗಿದ್ದೇನೆ.

'O Desdemona, away away away' ಎಂದು ಅವಳನ್ನು ತನ್ನ ಕಣ್ಣೆದುರಿನಿಂದ ದೂರ ತಳ್ಳಬಹುದು. ಆದರೆ ತನ್ನ ಇಡೀ ವ್ಯಕ್ತಿತ್ವವನ್ನು ವ್ಯಾಪಿಸಿಬಿಟ್ಟ ತನ್ನ ಪ್ರೀತಿಯ ಹೆಣ್ಣನ್ನು ತಾನು ಅಷ್ಟು ಸುಲಭವಾಗಿ ಅಳಿಸಿಹಾಕಲು ಸಾಧ್ಯವೇ ಇಲ್ಲ. ಇದು ಕೇವಲ ತಾನು ಕೀಳು ಎಂದು ಭಾವಿಸಿರುವ ಕಪ್ಪುಮನುಷ್ಯನನ್ನು ಪ್ರೀತಿಸಿದ ಉಚ್ಚವರ್ಗದ ಬಿಳಿಹೆಣ್ಣಿನ ಬಗೆಗೆ ಬೆಳೆದ ಅಪಾರ ಕೃತಜ್ಞತಾಭಾವವಲ್ಲ. ತನ್ನನ್ನು ಅವಳು ಪ್ರೀತಿಸುತ್ತಾಳೆಂದು ತಾನು ಗೌರವಿಸಲ್ಪಟ್ಟು ಉಬ್ಬಿದ ಭಾವನೆಯೂ ಅಲ್ಲ. ಹಂತದಿಂದ ಹಂತಕ್ಕೆ ಡೆಸ್ಡಿಮೋನಾಳ ವ್ಯಕ್ತಿತ್ವ ತನ್ನನ್ನು ಆವರಿಸಿದೆ. ಈ ಪ್ರೀತಿಯ ಅನುಭವದಲ್ಲಿ ಕಪ್ಪು-ಬಿಳುಪು, ಉಚ್ಚ-ನೀಚ ಮತ್ತೆಲ್ಲ ತೆರನ ಅಂತರಗಳೂ

ಅಳಿಸಿಹೋಗಿ ತಾವಿಬ್ಬರೂ ಗಂಡು-ಹೆಣ್ಣುಗಳಾಗಿ ಮಾತ್ರವಾಗಿಬಿಟ್ಟ ಅನುಭವವಾಗಿದೆ ಅವನಿಗೆ. ಈ ಅನುಭವದಿಂದ ತನ್ನನ್ನು ಮತ್ತೆ ಈ ಅಂತರಗಳ ಮೇಲೆ ನಿರ್ಮಿಸಲ್ಪಟ್ಟ ಸತ್ಯಗಳ ಲೋಕಕ್ಕೆ ಎಳೆದು ತಂದಿದ್ದಾನೆ ಇಯಾಗೋ. ಅಮೂರ್ತಗಳ ಹಠಾತ್‌ದರ್ಶನ, ಸ್ಪರ್ಶಗಳಾಗಿ ಇಡೀ ತನ್ನ ಅಸ್ತಿತ್ವವೇ ರೂಪಾಂತರಗೊಂಡಿದ್ದ ಸಂಭ್ರಮದಲ್ಲಿ ತೇಲುತ್ತಿದ್ದ ತನ್ನನ್ನು ಈ ತಣ್ಣನೆಯ ವಾಸ್ತವದ ಕಲ್ಲುನೆಲದ ಮೇಲೆ ತಂದು ಕುಕ್ಕಿದ್ದಾನೆ ಇಯಾಗೋ. ಅಥೆಲೋವಿನ ಅಂತರಾಳದ ಸಂಘರ್ಷ ಇದು. ಈ ಎರಡು ಲೋಕಗಳಲ್ಲಿ ಆಯ್ಕೆ ಮಾಡಿಕೊಳ್ಳಲಾಗದ ಹತಾಶಭಾವದಲ್ಲಿ ಪಡುವ ಸಂಕಟ ಅಥವಾ ಈ ಎರಡೂ ಲೋಕಗಳಲ್ಲಿ ಏಕಕಾಲದಲ್ಲಿ ಸಲ್ಲಬೇಕಾಗಿ ಬಂದಿರುವ ತನ್ನ ದುರ್ದೈವದ ಅರಿವು ಹೀಗೆ ಅವನ ಅನುಭವವು ಪ್ರಾಮಾಣಿಕವೂ, ಅಪ್ಪಟವೂ ಆಗಿಲ್ಲದಿದ್ದರೆ ಅಥವಾ ಕೇವಲ ಊದಿಕೊಂಡ ಆತ್ಮ ಮರುಕವಷ್ಟೇ ಆಗಿದ್ದಿದ್ದರೆ ಅವನ ಬಾಯಿಂದ ಹೊರಡುವ ಅದ್ಭುತ ಕಾವ್ಯಾತ್ಮಕ ಸಾಲುಗಳು ಖಂಡಿತ ಸಾಧ್ಯವೇ ಆಗುತ್ತಿರಲಿಲ್ಲ. ಅವನ ಅನುಭವದ ಸಾಂದ್ರತೆ, ಆಳ ಹಾಗೂ ತೀವ್ರತೆಗಳು ಅವನಲ್ಲಿ ಕಾವ್ಯ ಹೊಮ್ಮಿಸುತ್ತದೆಯೇ ವಿನಾ ಅವನು ಕವಿಹೃದಯದವನಾದ್ದರಿಂದ ಅವನ ಅನುಭವಗಳನ್ನು ಇಷ್ಟು ದಟ್ಟವಾಗಿ ಮನಗಾಣಬಲ್ಲ ಎಂದು ಹೇಳುವುದು ತಪ್ಪಾಗುತ್ತದೆ. 'her father loved me....' ಎಂಬ ಮೊದಲನೆಯ ಅಂಕದ ಮೂರನೇ ದೃಶ್ಯದ ಶೈಲಿಯಿಂದ ಎಷ್ಟು ಬದಲಾಗಿದೆ ಅವನ ಮಾತಿನ ವೈಖರಿ ಮತ್ತು ಅದರಲ್ಲಿನ ಕಾವ್ಯಗುಣ ಎಂದು ನಾವು ಗಮನಿಸಿಯೇ ಇದ್ದೇವೆ.

ಮತ್ತೆ ಇನ್ನೂ ಒಂದು ಮಾತಿದೆ. ಹಿಂದಿನ ದೃಶ್ಯದಲ್ಲಿಯಷ್ಟೇ ಇಯಾಗೋನ ಎದುರು ಡೆಸ್ಡಿಮೋನಾಳ ಅಂತ್ಯ ಮತ್ತು ಅದರ ವಿಧಾನ ಇವುಗಳ ತೀರ್ಮಾನವಾಗಿ ಬಿಟ್ಟಿದೆ. ಮನಸ್ಸು ಈ ಬಗ್ಗೆ ಗಟ್ಟಿಯಾಗಿದೆ. ಹಾಗಾದರೆ ಈ ದೃಶ್ಯದಲ್ಲಿ ಆ ಗಟ್ಟಿತನ ಕರಗಿ ಕಣ್ಣೀರು ಮಿಡಿಯುವ ಮಟ್ಟ ಮುಟ್ಟಿತೇಕೆ ಎಂಬ ಪ್ರಶ್ನೆಗೂ ಮೇಲಿನ ವಿವರಣೆಯೇ ಬಹುಶಃ ಉತ್ತರವಾಗಬಲ್ಲದು. 'ಅಥೆಲೋ' ನಾಟಕವಾಗಲೀ ಅಥೆಲೋ ಪಾತ್ರವಾಗಲೀ ನಮ್ಮ ಮೇಲೆ ಅಗಾಧ ಪರಿಣಾಮ ಬೀರುವುದು ಇದೇ ಕಾರಣಕ್ಕಾಗಿ.

ಡೆಸ್ಡಿಮೋನಾಳ ಮಾತಿಗೆ ಉತ್ತರರಾಗಿ ಅಥೆಲೋ ನಾಟಕದ ಅತ್ಯಂತ ಕಾವ್ಯಾತ್ಮಕವಾದ ಒಂದು ಭಾಗವಾದ ಈ ಸಾಲುಗಳನ್ನು ಆಡುತ್ತಾನೆ. ತನ್ನ ಸ್ಥಿತಿಯನ್ನು ಇಡಿಯಾಗಿ ನೇರವಾಗಿ ನೋಡಿಕೊಂಡು ತನ್ನ ದುರಂತದ ಬಗೆಯನ್ನು ವಿಶ್ಲೇಷಿಸಿಕೊಳ್ಳುವ ಯತ್ನವಾಗಿಯೂ ಕಾಣುತ್ತದೆ ಈ ಭಾಗ.

> Had it pleased heaven
> To try me with affliction, and it rained
> All kinds of sores and shames on my bare head ;
> Steeped me in poverty, to the very lips;
> Given to captivity me and my hopes ;

I should have found in some part of my soul
A drop of patience....

ಏನನ್ನು ಬೇಕಾದರೂ ಸಹಿಸಲು ಸಿದ್ಧವಿದ್ದೆ ತಾನು. 'afflictions', 'sores and shames' 'poverty' ಮತ್ತೆ ತನ್ನ ಎಲ್ಲ ಜೀವನದ ಆದರ್ಶ, ಕನಸುಗಳನ್ನು ಕಸಿದುಕೊಂಡು ತನ್ನನ್ನು ನಿಸ್ತೇಜಗೊಳಿಸಿದ್ದರೂ ಎಲ್ಲೋ ತನ್ನ ಹೃದಯದ ಮೂಲೆಯಲ್ಲಿ ಒಂದಷ್ಟು ಸಂಯಮ, ಸ್ಥೈರಣೆಗಳನ್ನು ಕಾಪಾಡಿಕೊಳ್ಳುತ್ತಿದ್ದೆ. ಅವನ ಜೀವನ ಏಳನೇ ವರ್ಷದಿಂದ ಎಂಥ ಬಗೆಯದಿತ್ತು ಎಂಬುದನ್ನು ಅಥೆಲೋ ಸ್ವತಃ ತಾನೇ ವಿವರಿಸಿದ್ದನ್ನು ನಾವು ಮರೆಯಲು ಸಾಧ್ಯವಿಲ್ಲ. ಧೈರ್ಯ, ಸಾಹಸ, ಜೀವನೋತ್ಸಾಹ, ಸೋಲೇ ಕಂಡರಿಯದ ನಿರಂತರ ಯಶಸ್ಸು, ಕೀರ್ತಿ, ಇಂತಹ ಬದುಕು ಸಂಪೂರ್ಣ ವಿರುದ್ಧ ದಿಕ್ಕಿನಲ್ಲಿ ಸಾಗಿದ್ದರೂ ತಾನು ಚಿಂತಿಸುತ್ತಿರಲಿಲ್ಲ ಎಂದು ಅವನು ಹೇಳುವಾಗ ಅವನ ಮನಃಸ್ಥಿತಿ ಯಾವ ಮಟ್ಟದ ಹಿಂಸೆಯನ್ನೂ ಅನುಭವಿಸುತ್ತಿರಬಹುದೆಂದು ನಾವು ಕಲ್ಪಿಸಿಕೊಳ್ಳಬಹುದು. ಇಷ್ಟೇ ಸಾಲದೆಂಬಂತೆ ಮತ್ತೂ ಮುಂದುವರೆದು ಹೇಳುತ್ತಾನೆ.

But, alas, to make me
A fixed figure, for the time of scorn
To point his slow unmoving fingers at, oh, oh......

ಎಂಥ ಹೇಯ ಸ್ಥಿತಿಗೆ ತಂದುಕೊಂಡಿದ್ದೇನೆ ತನ್ನನ್ನು ತಾನು ? ತಾನೊಂದು ನಿಶ್ಚಲವಾಗಿ ಸೆಟೆದುಕೊಂಡು ಬಿದ್ದ ಪುರುಷಾಕೃತಿ. ಕಾಲದ ಮುಳ್ಳುಗಳು ತೋರುಬೆರಳುಗಳಂತೆ ಈ ಆಕೃತಿಯತ್ತ ಬೊಟ್ಟುಮಾಡಿ ತನ್ನ 'slow unmoving' ಲಕ್ಷಣಗಳಿಂದ ತನ್ನನ್ನು ಹೀಯಾಳಿಸುತ್ತಿವೆ. ಕಾಲದ, ಅನಂತದ ಕುಚೋದ್ಯದ ವಸ್ತು ತಾನು ಅಷ್ಟೆ. ಒಂದೇ ಕ್ಷಣದಲ್ಲಿ ತಾನು ಬಿಳಿ ಹುಡುಗಿಯನ್ನು ಪ್ರೀತಿಸಿದ್ದು, ಮದುವೆಯಾದದ್ದು, ಅಲ್ಲಿಯ ಜಗತ್ತಿನ ಅಂಗವಾಗ ಬಯಸಿದ್ದು ಇವೆಲ್ಲವು ಜಗತ್ತಿನ ಅಪಹಾಸ್ಯಕ್ಕೆ ಹೇಗೆ ಗುರಿಯಾಗುತ್ತದೆಂಬುದು ಮಿಂಚಿ ಹಾದುಹೋಗಿರಬೇಕು. 'Oh, Oh....' ಎಂದು ದೀರ್ಘವಾಗಿ ನಿಡುಸುಯ್ಯುತ್ತಾನೆ. ಇಷ್ಟಿದ್ದೂ ಇವನ್ನು ಕೂಡ ಸಮರ್ಪಕವಾಗಿ ತಾನು ಸಹಿಸುತ್ತಿದ್ದೆ.

Yet could I bear that too, well, very well:
But there where I have garnered up my heart,
Where either I must live or bear no life
The fountain from which my current runs,
Or else dries up, to be discarded thence
Or keep it as a cistern, for foul toad
To knot and gender in....

ಆದರೆ ತನಗೆ ಉಂಟಾದ ದುರದೃಷ್ಟಗಳು ತನ್ನ ಐಶ್ವರ್ಯ, ತನ್ನ ಕೀರ್ತಿ, ತನ್ನ ಸಾಹಸ ಅಥವಾ ದೇಹಾರೋಗ್ಯಗಳಿಗೆ ಸಂಬಂಧಿಸಿದವಲ್ಲ. ತಾನು ನಗೆಪಾಟಲಾಗುತ್ತಿದ್ದೇನೆಂಬ ಭಯವೂ ತನ್ನನ್ನು ಕಾಡಿದ್ದಲ್ಲ. ತನ್ನ ದುರಂತ ತನ್ನ ಹೃದಯ, ಮನಸ್ಸುಗಳಿಗೆ ಸಂಬಂಧಿಸಿದವು. ತೀರ ವೈಯಕ್ತಿಕವಾದವು.

ತನ್ನ ಜೀವನ್ಮರಣದ ಕಾಳಜಿಯಾಗಿದ್ದ ತನ್ನ ಹೃದಯ, ಅದನ್ನು ತಾನು ಜತನದಿಂದ ಕಾಪಾಡಿಕೊಂಡು ಬಂದಿದ್ದೆ. ಈಗ ಈ ಹೃದಯದಿಂದಲೇ ಉಚ್ಚಾಟಿಸಲ್ಪಟ್ಟು ಅನಾಥನಾಗಿದ್ದೇನೆ ತಾನು. ತನ್ನ ಪ್ರೀತಿಯಿಂದ ತಾನು ವರ್ಜಿಸಲ್ಪಟ್ಟಿದ್ದೇನೆ. ಅಷ್ಟೇ ಸಾಲದೆಂಬಂತೆ ತನ್ನ ಜೀವನದ ಚಿಲುಮೆಯೆಂದು ನಂಬಿದ್ದ ಈ ಊಟೆ ಇಂದು ಬಚ್ಚಲ ನೀರಾಗಿ ಹೇಸಿಗೆಯ, ಜುಗುಪ್ಸೆ ತರುವ ಕಾಡುಕಪ್ಪೆಗಳ ವಾಸಸ್ಥಾನವಾಗಿ ಕಲುಷಿತಗೊಂಡಿದೆ. ಇದು ಭಯಾನಕ ಸ್ಥಿತಿ. ಅಸಹನೀಯ ಸ್ಥಿತಿ.

Turn thy complexion there :
Patience thy young and rose lipped cherubin,-
Ay, there, look grim as hell.

ಡೆಸ್ಡಿಮೋನಾ ಇದನ್ನು ಅರಿಯಬೇಕು. ತನ್ನ ಸ್ಥಿತಿಯ ಅರಿವಾಗಬೇಕು ಅವಳಿಗೆ. ಅವಳ ಸುಂದರ ಸೊಬಗಿನ complexion ತನ್ನ ಈ ಸ್ಥಿತಿ ಕಂಡು ಬಣ್ಣಗೆಡಬೇಕು. ಸಹನೆ, ತಾಳ್ಮೆಗಳಿಂದ ತಾನು ಹೇಳುತ್ತಿರುವುದು ಅರ್ಥಮಾಡಿಕೊಳ್ಳಬೇಕು. ಅವಳನ್ನೇ 'Patience' ಎಂದು ಸಂಬೋಧಿಸಿ 'ನಿನ್ನ ಮುಗ್ಧ ಶಿಶುವಿನ ಮುಖದ ಅಂದದ ಬಣ್ಣವು ಹೊಳಪು ಕಳೆದುಕೊಂಡು ನೋಡು, - ಇಲ್ಲಿ ನಾನು ಈ ನನ್ನ ಸ್ಥಿತಿಯಿಂದ 'look grim as hell'. ಮಾನವ ಲಕ್ಷಣಗಳೆಲ್ಲವೂ ನನ್ನಿಂದ ಹೀರಿಹೋಗಿವೆ. ಈಗ ಉಳಿದಿರುವುದು ಇಷ್ಟೆ. ಈ ನನ್ನ ನರಕ ಸದೃಶ, ಪೈಶಾಚಿಕ ಮುಖ'.

ತಾನು ಇಷ್ಟು ಹೇಳಿದ ಮೇಲೂ, ತಾನು ಯಾವ ರೀತಿಯಲ್ಲಿಯೂ ಅಥೆಲೋನ ಈ ಬದಲಾದ ರಾಜಕೀಯ ಸಂದರ್ಭಕ್ಕೆ ಕಾರಣಳಲ್ಲ ಎಂದು ಹೇಳಿದರೂ ತಿಳಿಯಲಿಲ್ಲವೆ ? ಇನ್ನು ಕೂಡ ತಾನೇ ಹೊಣೆಗಾರಳು ಎಂದು ಭಾವಿಸಿದ್ದಾನೆಯೆ ? 'I hope my noble lord esteems me honest' ತಾನು ಪ್ರಾಮಾಣಿಕಳು, ಸತ್ಯ ಹೇಳುತ್ತಿದ್ದೇನೆಂದು ಅಥೆಲೋ ನಂಬುತ್ತಾನೆ ತಾನೆ ? ಅವಳ ಮುಗ್ಧತನವೇ ಅವನನ್ನು ಚುಚ್ಚಿ ಕೆರಳಿಸುತ್ತದೆ. ಮುಂದಿನ ಸಾಲಿನಿಂದ ಈ ದೃಶ್ಯದಲ್ಲಿ ಅಥೆಲೋನ ನಿಷ್ಕ್ರಮಣದವರೆಗೆ ಅಥೆಲೋನ ಹಲ್ಲೆ ನೇರವಾಗಿ ಅವಳ ಮೇಲೆ ನಡೆಯುತ್ತದೆ. ತಾನು ಪ್ರಾಮಾಣಿಕಳೇ ಎಂದು ನಂಬುತ್ತಿ ತಾನೆ ಎಂದು ಎಷ್ಟು ಮುಗ್ಧವಾಗಿ ಕೇಳುತ್ತಿದ್ದಾಳೆ ಇವಳು. ವಂಚನೆ ತೊಟ್ಟ ಸುಂದರ ಮೊಗ. ಈ ಕವಚವನ್ನು ತನ್ನ ನಿಷ್ಕರುಣೆಯ ಕ್ರೂರ ಮಾತುಗಳಿಂದ ಹರಿದು ಕಿತ್ತೊಗೆಯಬೇಕು. 'ಹೌದು, ಹೌದು.... ಕಸಾಯಿಖಾನೆಯಲ್ಲಿ ಕತ್ತರಿಸಿಟ್ಟ ಮಾಂಸದ ಸುತ್ತ ಸುತ್ತುವ ತಿಪ್ಪೆನೊಣ ನೀನು. ನೂರು ಮೊಟ್ಟೆ

ಇಟ್ಟ ಮರುಕ್ಷಣವೇ ಮತ್ತೆ ನೂರಕ್ಕೆ ಬಸಿರಾಗುವ ಕ್ರಿಯೆ ....' ಹೀಗೆ ಅನ್ನುತ್ತಿರುವಾಗಲೇ ಅವಳ ಮುಖದ ಹತ್ತಿರ ಇಟ್ಟ ತನ್ನ ಕಣ್ಣುಗಳಿಗೆ ಅವಳ ಸುಂದರ ಮುಖ ಮತ್ತೆ ಮತ್ತಿನ ಹಾಗೆ ತನ್ನ ತಲೆ ತಿರುಗಿಸುತ್ತದೆ. 'O thou black weed, Why art thou so lovely fair ? Thou smellest so sweet, that the sense aches at thee....' ಎಂದು ಸಂಬೋಧಿಸುತ್ತಾನೆ. ಕಳಪೆಕಳೆ, ಕಪ್ಪು ಕಳಪೆ ಕಳೆ.... ತಾನು ಮೈಬಣ್ಣದಲ್ಲಿ ಕಪ್ಪು.... ಅವಳ ಇಡೀ ವ್ಯಕ್ತಿತ್ವ ಕಪ್ಪು.... ಆದರೆ ಈ ಕಪ್ಪು ಯಾಕೆ ಇಷ್ಟೊಂದು 'so lovely fair '? ಇಲ್ಲಿ lovely fair ಕೇವಲ ಮುಖ ಸೌಂದರ್ಯಕ್ಕೆ ಮಾತ್ರ ಅನ್ವಯಿಸಿ ಹೇಳಿದುದಲ್ಲ. ಅವನ ಮನಸ್ಸಿನಲ್ಲಿ ಅವಳ ಸರಳತೆಯೂ ನಿಷ್ಕಳಂಕ ಮುಖಭಾವವೂ ಸುಳಿಗಳನ್ನು ಸೃಷ್ಟಿಮಾಡಿ ತನ್ನನ್ನು ಕಬಳಿಸುವಂತೆ ಕಾಣಿಸುತ್ತಿದೆ. ನೋಟಕ್ಕೆ 'lovely fair', ನಿನ್ನ ಸುತ್ತಲ ಪರಿಸರವೇ ಇಂಥವಳ ಬಳಿ ಇರುವುದೆಂದರೆ 'sense aches at thee'. ಪ್ರಾಮಾಣಿಕವಾಗಿ ತಾನೂ ಅನುಭವಿಸುತ್ತಿರುವ ಭೀಕರ ಸಂದಿಗ್ಧವನ್ನು ಒಪ್ಪಿಕೊಳ್ಳುತ್ತಾನೆ. ಎಂದೇ ಇಂಥ ಸಂಕಟಕ್ಕೆ, ತಾನು ಪರಿಹರಿಸಲಾಗದ ಸಂಘರ್ಷಕ್ಕೆ ತಳ್ಳಿರುವ ಡೆಸ್ಡಿಮೋನಾ 'woulds't thou hads't never been born !' ತನ್ನ ಇಡೀ ಪೌರುಷಕ್ಕೆ, ಗಂಡುತನಕ್ಕೆ ಸವಾಲಾಗಿ, ತನ್ನನ್ನು ಅವಮಾನಿಸಲೆಂದೇ ಜನ್ಮತಾಳಿದಂತೆ ಕಾಣುತ್ತಿರುವ ಇವಳು ಹುಟ್ಟಿರದೇ ಇದ್ದಿದ್ದರೆ ಎಷ್ಟು ಚೆನ್ನಿತ್ತು!

ಡೆಸ್ಡಿಮೋನಾಳ ಸ್ಥಿತಿಯ ಕುರಿತು ಮರುಕವೇ ಆಗಬೇಕು ನಮಗೆ. ಸಾಗರದ ವ್ಯತಿರಿಕ್ತ ತೀರಗಳಲ್ಲಿ ನಿಂತು ಸಂಭಾಷಣೆ ಸಾಧ್ಯವೆಂದು ಹೆಣಗುತ್ತಿರುವ ಇಬ್ಬರು ನತದೃಷ್ಟರು ಇವರುಗಳು. 'Alas, what ignorant sin have I committed ?' ಎಂದು ಗೋಗರೆದು ಕೇಳುತ್ತಾಳೆ. ''ನಿನ್ನ ಮಾತಿನ ಅರ್ಥದಲ್ಲಿ, ನೀನು ಬಳಸುತ್ತಿರುವ ಶಬ್ದಗಳಲ್ಲಿ ನಾನೊಂದು ಪಾಪವೆಸಗಿದ ಹೀನ ಹೆಂಗಸು ಎಂದು ಹೇಳುತ್ತಿದ್ದೀ ಎಂಬುದು ಸ್ಪಷ್ಟವಾಗುತ್ತದೆ - ಆದರೆ ನನಗೆ ಅದರ ಬಗ್ಗೆ ಏನೂ ತಿಳಿಯದು. ನಾನು ಸಂಪೂರ್ಣ ಅಜ್ಞಳು. ಯಾವ .... ಎಸಗಿದ್ದೇನೆ ನಾನು ?' ಎಂಬರ್ಥದಲ್ಲಿ ಕೇಳಿದ ಪ್ರಶ್ನೆ ಅಥೆಲೋ ಮತ್ತೂ ಒಂದು ಹೆಜ್ಜೆ ಮುಂದುವರೆದು ಅವಳನ್ನು ಜರೆಯುತ್ತಾನೆ. ಅವನ ಮಾತುಗಳೆಲ್ಲ ಅವಳ ಬಗೆಗಿನ ಆಳದ ಸಿನಿಕತನದಿಂದ ಹೊಮ್ಮುವುದು.

> Was this fair paper, the most goodly book,
> Made to write 'whore' on ? ....what committed ?
> Committed : O thou public commoner !......

ತನ್ನೊಳಗೆ ಧಗಧಗಿಸುತ್ತಿರುವ ವಿರುದ್ಧ ಶಕ್ತಿಗಳ ಕಿಡಿಯಿಂದ ಹತ್ತಿ ಉರಿಯುತ್ತಿರುವ ಅಗ್ನಿ ಜ್ವಾಲೆ ತಣಿಯಬೇಕಾದರೆ ಇದೊಂದೇ ಮಾರ್ಗ. ಅವಳನ್ನು ಸಾಧ್ಯವಾದಷ್ಟೂ ಹಿಂಸಿಸಬೇಕು ; ತನ್ನ ಮಾತುಗಳಲ್ಲಿ ಎಷ್ಟು ಕ್ರೌರ್ಯ ಸಾಧ್ಯವೋ ಅಷ್ಟು ತುಂಬಿ ವಿಷಕಾರಬೇಕು. '' 'whore'

'Public Commoner' ನೀನು ಏನು ಎಸಗಿದ್ದೀ ಎಂದು ಕೇಳುವಷ್ಟು ಛಾತಿಯೆ ನಿನಗೆ ? 'fair paper, 'goodly book' ಈಗ ಹೊಲಸು, ತಿಪ್ಪೆಗೂ ಸಲ್ಲದ ಕಸ. 'committed ?' ಹೇಳಬೇಕೇನು ಏನೆಂದು ? ಹೇಳ ಹೋದರೆ 'I should make very forges of my cheeks, / That would to cinders burn up modesty / Did I but speak thy deeds. ನನ್ನ ಕೆನ್ನೆಗಳು ಕುಲುಮೆಯಲ್ಲಿ ಉರಿಯುವ ಕೆಂಡದ ಹಾಗೆ ಕಾದು ಗಾರಾಗಿ ಬಿಡುತ್ತದೆ. ನನ್ನ ಎಲ್ಲ ಮಾನ, ಮರ್ಯಾದೆಗಳೂ ಸುಟ್ಟು ಬೂದಿಯಾಗಿ ಬಿಡುತ್ತದೆ. ಅಂಥ ಪಾಪವೆಸಗಿದ್ದೀ ನೀನು. 'What committed ?' ಎಂದು ಕೇಳುವಷ್ಟು ಎದೆಗಾರಿಕೆಯೆ ನಿನಗೆ ?'' ಅಥೆಲೋವಿಗೆ ಆ ಕ್ಷಣ ಇಯಾಗೋ ಹೇಳಿದ ಮಾತು ಮತ್ತೆ ಮಾರ್ದನಿಗೊಂಡಿರಬೇಕು – ವೆನಿಸಿನ ಹೆಣ್ಣು ಮಕ್ಕಳ ರೀತಿನೀತಿಗಳನ್ನು ಬಣ್ಣಿಸಿದ್ದನಲ್ಲ ಅವನು ! ಅದಕ್ಕೆ ತಕ್ಕ ಹಾಗೆ ಏನೂ ತಿಳಿಯದ ಮಳ್ಳಿಯ ಹಾಗೆ 'What committed ?' ಎಂದು ಕೇಳುತ್ತಾಳೆ ಇವಳು. ನೀನು ಮಾಡಿದ ಕೃತ್ಯ ಅರಿತ 'heaven stops the nose at it, and the moon winks, / The bawdy wind, that kisses all it meets / Is hushed within the hollow mine of earth / And will not hear it .... ಆಕಾಶ, ಭೂಮಿ, ಚಂದ್ರ, ವಾಯು ಯಾವುವೂ ಕಣ್ತೆರೆದು ನೋಡಲಾಗದ, ಹೊಲಸಿನ ಮೂಗು ತೆರೆದು ಉಳಿಯಲಾಗದಂಥ ಕೃತ್ಯವೆಸಗಿದ್ದೆ ನೀನು. ಎಂದೂ, ಎಲ್ಲಿಯೂ ತರತಮವೆಣಿಸದೆ ಸ್ವಚ್ಛಂದವಾಗಿ ಆಡುವ ಲಂಪಟ ತಂಗಾಳಿ ಕೂಡ ನೀನು ಎಸಗಿದ ಕೃತ್ಯಕ್ಕೆ ಹೇಸಿ ಭೂಮಿಗರ್ಭದಲ್ಲಿ ಅಡಗಿ ಮುಖಮುಚ್ಚಿಕೊಂಡು ಬಿಡುತ್ತದೆ. ಮತ್ತೆ ಕೇಳುವ ಧಾರ್ಷ್ಟ್ಯವೆ ನಿನಗೆ ?' 'What committed ?, Impudent strumpet !' ನಿರ್ಲಜ್ಜ ಹಾದರಗಿತ್ತಿ ಎಂದು ಔಡುಗಚ್ಚುತ್ತಾನೆ. ಡೆಸ್ಡಿಮೋನಾಳಿಗೆ ಪ್ರಥಮ ಬಾರಿಗೆಂಬಂತೆ ಗುಂಡಿಗೆ ಒಡೆದಂತಾಗಿ ತಲ್ಲಣಿಸಿಬಿಡುತ್ತಾಳೆ. ಆದರೂ ಆದ ಆಘಾತಕ್ಕೂ, ಅವಳು ಅದನ್ನು ಹೇಳಿಕೊಳ್ಳುವ ರೀತಿಗೂ ಒಂದಷ್ಟೂ ಹೋಲಿಕೆಯಾಗದಷ್ಟು ಪೇಲವವಾಗಿ ಕೇಳುತ್ತದೆ 'By heaven, you do me wrong' ಅಷ್ಟೆ. ಮಾತೇ ಹೊರಡದಷ್ಟು ಧಕ್ಕೆಯಾಗಿದೆ. ಈ ಮಾತುಗಳಿಂದ ತನಗೆ ಅನ್ಯಾಯವಾಗಿದೆ ಎಂದು ಮಾತ್ರ ಉಸುರಬಲ್ಲಳು ಅವಳು. 'ಹಾಗಾದರೆ ಕೇಳು, ನೀನು ಬೆಲೆವೆಣ್ಣು ಅಲ್ಲವೇನು ?' 'ಅಲ್ಲ.... ಒಬ್ಬ ಕ್ರಿಸ್ತನ ಅನುಯಾಯಿಯಾಗಿ ಹೇಳುತ್ತಿದ್ದೇನೆ. ಅಲ್ಲ. ನನ್ನ ಈ ಒಡಲನ್ನು , ನನ್ನ ಸ್ವಾಮಿಗಲ್ಲದೆ ಬೇರೆ ಯಾರಿಗೂ ಅನೈತಿಕವಾಗಿ ಮುಟ್ಟಿಸಿ ಹೊಲಸುಗೊಳಿಸಿಕೊಳ್ಳದಿರುವುದು ಹಾದರಗಿತ್ತಿಯ ಲಕ್ಷಣವಲ್ಲವೆನ್ನುವುದಾದರೆ ನಾನು ಖಂಡಿತ ಹಾದರಗಿತ್ತಿಯಲ್ಲ.' ಡೆಸ್ಡಿಮೋನಾ ಇಡೀ ನಾಟಕದಲ್ಲಿ ಅಥೆಲೋನೊಂದಿಗೆ ಆಡುವ ಮೊದಲ ಮತ್ತು ಕೊನೆಯ ಬಾರಿಯ ದೃಢವಿಶ್ವಾಸದ ಮಾತುಗಳು. ಕೊನೆಯ ಅಂಕದಲ್ಲಿ ತನ್ನ ಸಾವು ಸನಿಹವಾಗುತ್ತಿದೆ ಎಂಬ ನಂಬಿಕೆ ಬಲವಾಗುತ್ತಿದ್ದಂತೆ ಅವಳು ಇದಕ್ಕಿಂತ ಹೆಚ್ಚು ಸ್ಥೈರ್ಯದಿಂದ ಮಾತನಾಡುವುದು ನಿಜ. ಆದರದು ನೀರಿನಲ್ಲಿ ಮುಳುಗುತ್ತಿರುವವನ ತಲೆ, ಕೈಗಳು ನೀರೊಳಗೆ ಕುಸಿಯುತ್ತಿದ್ದಂತೆ ಜೀವಕ್ಕೆ

ಅಂಟಿಕೊಳ್ಳುವ ಕೊನೆಯ ಯತ್ನದ ಆಕ್ರಂದನವಾಗುತ್ತದೆಯೇ ವಿನಾ ಪ್ರತಿಭಟನೆಗಳಾಗಿ ಕೇಳುವುದಿಲ್ಲ. ಆದರೆ ಇಲ್ಲಿ ಪ್ರಪ್ರಥಮ ಬಾರಿಗೆಂಬಂತೆ ಪ್ರತಿಭಟಿಸುತ್ತಾಳೆ. ಅಥೆಲೋನ ವಿವರಣೆಯಲ್ಲಿ ಪರಿಶುದ್ಧತೆಗೆ ಅರ್ಥವೇನೋ ಅವಳಿಗೆ ಗೊತ್ತಿಲ್ಲ. ಆದರೆ ತನ್ನ ಮಟ್ಟಿಗೆ, ತಾನು ಅರ್ಥವಾಗುವ ರೀತಿಯಲ್ಲಿ ತಾನು ಪವಿತ್ರಳು, ನಿಷ್ಠಳು. ಈ ಮಾತುಗಳಲ್ಲಿ ಹಿಂದಿನ ಕಠೋರತೆಯಿಲ್ಲದಿದ್ದರೂ, ದೃಢತೆಗೆ ಅಥೆಲೋ ಕೊಂಚ ಅಸ್ಥಿರನಾದನೆ ? 'What, not a whore ? ಎಂದಷ್ಟೇ ಅನ್ನುತ್ತಾನೆ. ಅಲ್ಲ, ದೇವರ ದಯೆ ನನ್ನ ಮೇಲೆ ಇರಲಾಗಿ ತಾನು ಹಾದರಗಿತ್ತಿಯಲ್ಲ ಅನ್ನುತ್ತಾಳೆ. ಆದೇ ವೇಳೆಗೆ, ಬಹುಶಃ ಗಂಡ-ಹೆಂಡಿರ ಮಧ್ಯದ ಎತ್ತಿದ ದನಿಯ ವಾಗ್ವಾದ ಕಿವಿಗೆ ಬಿದ್ದು ಎಮಿಲಿಯಾ ಪ್ರವೇಶಿಸಿ ದೂರ ನಿಲ್ಲುತ್ತಾಳೆ. ಅಥೆಲೋನ ಮುಂದಿನ ಪ್ರಶ್ನೆ ಅತ್ಯಂತ ಮಾರ್ಮಿಕವೂ, ಅರ್ಥಪೂರ್ಣವೂ ಹೌದು. 'Is it possible ?' ಅವಳನ್ನು ಕೇಳಿದ ಪ್ರಶ್ನೆ, ತನ್ನನ್ನೇ ಕೇಳಿಕೊಂಡ ಪ್ರಶ್ನೆ, ಪ್ರಶ್ನೆಯೂ ಹೌದು, ಅರ್ಥವಾಗದ ಒಗಟು ಏಕಾಏಕಿ ಎದುರಾದ ಅನುಭವವೂ ಹೌದು. ತಾನು ತಿಳಿದಂತೆ ನೀತಿಗೆಟ್ಟ ಹೆಣ್ಣೊಂದು ಇಷ್ಟು ಆತ್ಮವಿಶ್ವಾಸದಿಂದ ತನ್ನನ್ನು ಎದುರಿಸಬಲ್ಲಳೆ ? ಇಯಾಗೋ ಹೇಳಿದ್ದಕ್ಕಿಂತ ಕುಲಗೆಟ್ಟಿದೆಯೆ ಈ ವೆನಿಸಿನ ಸಂಸ್ಕೃತಿ ? ಅಥವಾ ತನ್ನ ಎಲ್ಲ ಎಣಿಕೆ ತೀರ್ಮಾನಗಳೂ ತಪ್ಪಿದ್ದು ಡೆಸ್ಡಿಮೋನಾಳ ಮಾತೇ ಸತ್ಯವಿರಬಹುದೆ ? 'It is possible ?' ಗೊಂದಲ ಪರಾಕಾಷ್ಠೆಯನ್ನು ಮುಟ್ಟಿದಂತಾಗಿ ಕ್ಷಣವಷ್ಟೇ ದಡಬಡಿಸುತ್ತಾನೆ. 'O heaven, forgiveness' ದೇವರು ಕರುಣೆ ತೋರಲಿ ; ದೇವರ ಕ್ಷಮೆಯಿರಲಿ. ಇಬ್ಬರ ಮೇಲೂ ....ಅಥೊಲೋ ಎಚ್ಚೆತ್ತವನಂತೆ, ಆದರೂ ಈ ವಿಚಾರಣೆ ಇಲ್ಲಿಗೆ ಸಾಕೆಂಬಂತೆ, ಇಡೀ ಗೊಂದಲ ಸ್ಥಿತಿಯಿಂದ ಆಯಾಸಗೊಂಡವನಂತೆ ನಿಷ್ಕ್ರಮಿಸುವುದಕ್ಕೆ ಮುಂಚೆ ವ್ಯಂಗ್ಯ ಮಿಶ್ರಿತ ಕ್ರೌರ್ಯದಿಂದ ಹೇಳುತ್ತಾನೆ:

'ಒಳ್ಳೆಯದಾಗಲಿ ನಿನಗೆ ಎಂದು ಹಾರೈಸುತ್ತೇನೆ. ವೆನಿಸಿನ ವಂಚಕ ಹಾದರಗಿತ್ತಿ ಆ ಅಥೆಲೋನನ್ನು ಮದುವೆಯಾದಳಲ್ಲ ಅವಳೇ ನೀನು ಎಂದು ಭಾವಿಸಿಬಿಟ್ಟಿದ್ದೆ' ಎಂದು ಹೇಳಿ ಅಲ್ಲಿ ದೂರ ನಿಂತ ಎಮಿಲಿಯಾಳನ್ನು ಸಂಬೋಧಿಸಿ 'ನೀನು, ಸಂತ ಪೀತರನ ನಿವಾಸದ ಎದುರಿನ ಬಾಗಿಲು ಕಾಯುವ ನೀನು, ನರಕದ ದ್ವಾರಪಾಲಕಿ, ಆ್ಞ..ಆ್ಞ... ನೀನೇ....ನೀನು.... ನಮ್ಮ ಕೆಲಸ ಮುಗಿಯಿತು. ನಿನ್ನ ಸೇವೆಗಾಗಿ ತಗೋ ಈ ಭಕ್ಷೀಸು. ಬೀಗ ಹಾಕಿಟ್ಟುಕೊಂಡು ಗುಟ್ಟುಗಳೆಲ್ಲ ಭದ್ರವಾಗಿಟ್ಟುಕೋ....' ಎಂದು ಗುಡುಗಿ ನಿಷ್ಕ್ರಮಿಸಿ ಬಿಡುತ್ತಾನೆ. ಅವನು ಬಳಸುವ ಒಂದು ಮಾತು ನೋಡಬೇಕು : 'We have done our course'... ಹಿಂದೆ ಈ ದೃಶ್ಯದಲ್ಲಿ ಪ್ರವೇಶ ಮಾಡಿದಾಗ ಎಮಿಲಿಯಾಗೆ ಹೊರ ಹೋಗಲು ಹೇಳುವಾಗ ಆಡಿದ ಮಾತುಗಳೂ ನಮ್ಮ ನೆನಪಿನಲ್ಲಿವೆ. ....'Leave procreants alone and shut the door'. ಈಗ ಹೊರಡುವಾಗ 'we have done our course....' ಇಲ್ಲಿ 'Course' 'intercourse' ಅರ್ಥವನ್ನೂ ಒಳಗೊಂಡಿರಲೇಬೇಕು. ವೇಶ್ಯಾಗೃಹಕ್ಕೆ ಬಂದು ವೇಶ್ಯೆಯೊಡನೆ ಏಕಾಂತದ

ವ್ಯವಹಾರ ಮುಗಿಸಿ ಹೊರಟಿದ್ದಾನೆ. ಈ ಕುಂಟಣಿಗಿತ್ತಿ ಎಮಿಲಿಯಾ ಈ ನರಕದ, ಪಾಪಕೂಪದ ಬಾಗಿಲು ಕಾಯುವ ಹೆಣ್ಣು. ಅಥೆಲೋ ಡೆಸ್ಡಿಮೋನಾರ ಉಪಾಂತ ದೃಶ್ಯ ಇದು. ಮತ್ತೆ ಅವರನ್ನು ನಾವು ಕಾಣುವುದು ನಾಟಕದ ಅಂತಿಮ ದೃಶ್ಯದಲ್ಲಿ. ಡೆಸ್ಡಿಮೋನಾಳ ಜೀವಶಕ್ತಿಯೆಲ್ಲ ಬಸಿದು ಹೋಗಿ ಬಳಲಿ ಹೋಗಿದ್ದಾಳೆ. ಅಥೆಲೋವಿನ ನಿಷ್ಕ್ರಮಣದ ನಂತರ ಮುದುಡಿಬಿದ್ದಿದ್ದಾಳೆ. ಎಮಿಲಿಯಾಗೆ ಅಥೆಲೋವಿನ ವರ್ತನೆ ಎಳ್ಳಷ್ಟೂ ಅರ್ಥವಾಗುವುದಿಲ್ಲ. ಯಜಮಾನಿತಿಯ ಕಳೆಗುಂದಿದ ಈ ಸ್ಥಿತಿ ನೋಡಿ ಅವಳು ಹಿಂಡಿ ಹೋಗಿದ್ದಾಳೆ. ಏನು ಈ ಮನುಷ್ಯನ ಅರ್ಥ ? ಏನವನ ಕಲ್ಪನೆಗಳು ಎಂದು ಅಚ್ಚರಿಪಟ್ಟು ಡೆಸ್ಡಿಮೋನಾಳ ಬಳಿ ಬಂದು 'ಹೇಗಿದ್ದೀ ತಾಯಿ ಚೆನ್ನಾಗಿದ್ದಿ ತಾನೆ ?' ಎಂದು ಕಳಕಳಿಯಿಂದ ಕೇಳಿದ್ದಕ್ಕೆ ಉತ್ತರವಾಗಿ ಡೆಸ್ಡಿಮೋನಾ 'ಅರೆನಿದ್ರಾವಸ್ಥೆಯಲ್ಲಿದ್ದೇನೆ....' ಎಂದು ಮಂಪರಿನಲ್ಲಿ ಮಾತನಾಡಿದಂತೆ ಉಸುರುತ್ತಾಳೆ. 'ಏನು ನನ್ನ ಧಣಿಗೆ ಏನಾಗಿದೆ' ಎನ್ನುತ್ತಾಳೆ ಎಮಿಲಿಯಾ. 'ಯಾರು ?' ?' 'ನಿನ್ನ ಅರ್ಥವಾಗದವಳಂತೆ ಕೇಳುತ್ತಾಳೆ. 'ನನ್ನ ಪ್ರಭುವಿಗೆ, ತಾಯಿ....' 'ಯಾರು ನಿನ್ನ ಪ್ರಭು....?' 'ನಿನ್ನ ಪ್ರಭುವಾದವನೇ' ಎಂದು ಆಶ್ಚರ್ಯದಿಂದ ಹೇಳಿದ ಎಮಿಲಿಯಾಗೆ ಡೆಸ್ಡಿಮೋನಾ 'ನನಗೆ ಯಾರೂ ಪ್ರಭುವಿಲ್ಲ, ಎಮಿಲಿಯಾ, ನನ್ನ ಬಳಿ ಮಾತನಾಡಬೇಡ. ಅಳಲೂ ಆಗದೆ ಉತ್ತರಗಳೂ ಇಲ್ಲದೆ ತೊಳಲಾಡುತ್ತಿದ್ದೇನೆ. ನನ್ನಲ್ಲಿರುವುದೆಲ್ಲ ಈಗ ನೀರಾಗಿ ಹರಿಯಬೇಕಷ್ಟೆ. ನೋಡು, ಈ ರಾತ್ರಿ ನನ್ನ ಹಾಸಿಗೆಗೆ ಮದುಮೆಯ ರಾತ್ರಿಯ ಪ್ರಸ್ತದ ಹೊದಿಕೆಗಳನ್ನು ಹಾಸು. ಮತ್ತೆ ನಿನ್ನ ಗಂಡನನ್ನೂ, ಇಲ್ಲಿ ಕರೆದು ತಾ' ಜೀವದ್ರವವೆಲ್ಲ ಬತ್ತಿ ಹೋದಂತೆ ಹೇಳುತ್ತಾಳೆ. ಇಲ್ಲಿ ಎಲ್ಲವೂ ಖಂಡಿತ ಬದಲಾಗಿ ಬಿಟ್ಟಿದೆ ಎಂದು ಮರುಗುತ್ತ ಎಮಿಲಿಯಾ ನಿಷ್ಕ್ರಮಿಸುತ್ತಾಳೆ.

ಇಡೀ ನಾಟಕದಲ್ಲಿ ಡೆಸ್ಡಿಮೋನಾಳು ಆಡುವ ಒಂದೇ ಸ್ವಗತ, ಈಗ ಏಕಾಕಿಯಾಗಿರುವ ಅವಳು ಆಡುತ್ತಾಳೆ. ತನ್ನನ್ನು ಹೀಗೆ ನಡೆಸಿಕೊಂಡದ್ದಕ್ಕೆ ಬಹುಶಃ ತಾನು ಅರ್ಹಳೇ ಇರಬೇಕು. ....ಆಗಲಿ, ಒಳ್ಳೆಯದು.... ಆದರೆ ತಾನು ಏನು ಮಾಡಿದ್ದೇನೆಂದು ಹೀಗೆ ತನ್ನನ್ನು ಹಿಂಸಿಸಬೇಕು ? ತನ್ನ ಅತಿ ಘೋರ ಅಪರಾಧವೂ ಕೂಡ ಅವನ ತೀರ ಸಣ್ಣ ಟೀಕೆಗೂ ಅರ್ಹವಾಗದಷ್ಟು ನಿಕೃಷ್ಟವಿರುವಾಗ, ಇದು ಯಾಕೆ ಹೀಗೆ ಎಂದು ಅರ್ಥವಾಗದೇ ವಿಚಲಿತಳಾಗುತ್ತಾಳೆ.

ಇಯಾಗೋ ಬಂದವನೆ ಡೆಸ್ಡಿಮೋನಾಳನ್ನು ಏಕೆ ಕರೆಕಳಿಸಿದಿ, ಹೇಗಿದ್ದೀ ಎಂದು ನಮ್ರನಾಗಿ ಕೇಳುತ್ತಾನೆ. ಈ ಇಡೀ ದೃಷ್ಯದಲ್ಲಿ ಡೆಸ್ಡಿಮೋನಾಳ ಮಾತಿನ ರೀತಿ, ಅವಳು ತನ್ನ ಮನಸ್ಸಿಗಾದ ಭಯಂಕರ ವೇದನೆಯನ್ನು ಹೇಳಿಕೊಳ್ಳುವ ಬಗೆ ಇವುಗಳನ್ನು ನಾವು ಬಹು ಸೂಕ್ಷ್ಮವಾಗಿ ಗಮನಿಸಬೇಕು. ಡೆಸ್ಡಿಮೋನಾ, ಇಯಾಗೋ, ಎಮಿಲಿಯಾರ ನಡುವೆ ನಡೆಯುವ ಈ ದೃಶ್ಯ ಅತ್ಯಂತ ನಾಟಕೀಯ ಹಾಗೂ ಪ್ರೇಕ್ಷಕರು ಮೂರು ಪಾತ್ರಗಳ ಬಗ್ಗೆ ಇದುವರೆವಿಗೆ ಸ್ಪಷ್ಟ ಕಾಣದಿದ್ದ ವಿವರಗಳೂ ಗೋಚರವಾಗುತ್ತ ಹೋಗುವ ದೃಶ್ಯ. ಇಯಾಗೋನ ಪ್ರಶ್ನೆಗೆ ಡೆಸ್ಡಿಮೋನಾ ಏನೂ ಹೇಳಲಿಕ್ಕೆ ಆಗದಂಥ ಸ್ಥಿತಿಯಲ್ಲಿದ್ದೇನೆ ತಾನು

ಎನ್ನುತ್ತಾಳೆ. ಮಕ್ಕಳಿಗೂ ಕೂಡ ಹೆಚ್ಚು ಮಮತೆಯಿಂದ, ಮೃದುವಾಗಿ ಬುದ್ಧಿ ಹೇಳುತ್ತಾರೆ. ನನಗೆ ಹಾಗೆ ಸರಿ ತಪ್ಪುಗಳ ವಿಷಯ ತಿಳಿಸಬೇಕಿದ್ದರೆ ಮಕ್ಕಳಿಗೆ ಹೇಳಿದಂತೆ ಹೇಳಬಹುದಿತ್ತು. ಕಠಿಣ ಶಬ್ದಗಳು ಕಠಿಣ ರೀತಿಗಳು ತನಗೆ ಅನವಶ್ಯಕವಾಗಿದ್ದಿತು. ಅಥೆಲೋ ಆ ರೀತಿ ನನ್ನನ್ನು ನಡೆಸಿಕೊಳ್ಳಬಹುದಿತ್ತು. ಇಯಾಗೋವಿಗೆ ಅವಳ ಮಾತಿನ ಅರ್ಥವಾಗದಂತೆ, ಏನಾಯಿತು, ಏನು ವಿಷಯ ಎಂದು ತಿಳಿಯಬಯಸುತ್ತಾನೆ. ಡೆಸ್ಡಿಮೋನಾಳು ಆಡಬಹುದಾಗಿದ್ದ, ಆದರೆ ಅವಳ ಬಾಯಲ್ಲಿ ಅಂಥ ಮಾತುಗಳೇ ಸಾಧ್ಯವಿಲ್ಲದಂಥ ಮಾತುಗಳನ್ನು ಎಮಿಲಿಯಾ ಆಡುತ್ತಾಳೆ – ನೇರವಾಗಿ, ಕಟುವಾಗಿ, ಮಾತುಗಳಲ್ಲಿ ಯಾವ ಸಂಕೋಚವೂ ಇಲ್ಲದಂತೆ. ಅಥೆಲೋ ಹೆಂಡತಿಯನ್ನು ವೇಶ್ಯೆಯೆಂದು ಹಳಿದಿದ್ದಾನೆ. ಯಾವ ಕೋಮಲ ಮನಸ್ಸೂ ಸಹಿಸಲಾರದಂಥ ಶಬ್ದಗಳನ್ನು ಬಳಸಿದ್ದಾನೆ. ಡೆಸ್ಡಿಮೋನಾ ತಾನು ಅಂಥ ಮಾತುಗಳಿಗೆ ಅರ್ಹಳೆ ಎಂದು ಕೇಳಿದ್ದಕ್ಕೆ ಇಯಾಗೋ ಎಂಥ ಮಾತುಗಳು ಎಂದು ತಿಳಿಯ ಬಯಸುತ್ತಾನೆ. ಡೆಸ್ಡಿಮೋನಾಳಿಗೆ ಎಮಿಲಿಯಾ ಬಳಸಿದ ಶಬ್ದಗಳನ್ನು ಮತ್ತೆ ಆಡಲು ಸಾಧ್ಯವೇ ಇಲ್ಲ. ಅಥೆಲೋ ಬಳಸಿದನೆಂದು ಎಲಿಮಿಯಾ ಹೇಳಿದ ಶಬ್ದಗಳಿಗೆ ತಾನು ಅರ್ಹಳೇ ಎನ್ನುತ್ತಾಳೆ. ಎಮಿಲಿಯಾ ಮತ್ತೆ ವಿಶದವಾಗಿ ಮಾತನಾಡುತ್ತಾಳೆ. ಪಾನಮತ್ತ ನಿರ್ಗತಿಕನೊಬ್ಬ ಕೂಡ ತನ್ನ ಸೂಳೆಗೆ ಬಳಸಬಾರದಂಥ ಶಬ್ದಗಳು. ಆದರೆ ಹೀಗೇಕೆ ಮಾಡಿದನೆಂದು ಇಯಾಗೋವಿಗೆ ಅರ್ಥವಾಗುವುದಿಲ್ಲ. ತನಗೆ ಗೊತ್ತಿಲ್ಲ. ತಾನು ಸತ್ಯವಾಗಿ ಅಂಥವಳಲ್ಲ ಎಂಬುದು ಮಾತ್ರ ತನಗೆ ಗೊತ್ತು ಎನ್ನುತ್ತಾಳೆ ಡೆಸ್ಡಿಮೋನಾ. ಈ ಕ್ಷಣದಲ್ಲಿ ಅವಳು ತನ್ನ ದುಃಖ ತಡೆಯಲಾಗದೆ ಕಣ್ಣೀರಿಡುತ್ತಾಳೆ. ಅಥೆಲೋ ಅಷ್ಟೆಲ್ಲ ರೋಷಾವಿಷ್ಟನಾಗಿ ಮಾತನಾಡಿದಾಗ ಕೂಡ ಕಣ್ಣೀರು ಸುರಿಸದಿದ್ದ ಡೆಸ್ಡಿಮೋನಾ ಈಗ ತನ್ನ ಸಂಕಟವನ್ನು ಹೆಚ್ಚು ಭರಿಸಲಾಗದೆ ಈ ಭಾರದಲ್ಲಿ ಕುಸಿಯುತ್ತಾಳೆ. ಇಯಾಗೋ ಅಳಬೇಡ, ಅಳಬೇಡ ಎಂದು ಅವಳಿಗೆ ಸಮಾಧಾನ ಹೇಳಿ, ಎಂಥ ದುರ್ದೈವ ಇದು ಎಂದು ಮರುಗುತ್ತಾನೆ. ಉಚ್ಚ ಸಂಬಂಧಗಳನ್ನೆಲ್ಲ ತಿರಸ್ಕರಿಸಿ, ತನ್ನ ತಂದೆ, ತನ್ನ ನಾಡು, ತನ್ನ ಬಂಧು ಮಿತ್ರರು ಎಲ್ಲರನ್ನೂ ತ್ಯಜಿಸಿ ಇವನನ್ನು ಮದುವೆಯಾಗಿದ್ದು 'ಸೂಳೆ' ಎಂದು ಕರೆಸಿಕೊಳ್ಳುವುದಕ್ಕೇನು ? ಯಾರಿಗಾದರೂ ಅಳದೆ ಇರಲು ಸಾಧ್ಯವೆ ಎಂದು ಕನಲುತ್ತಾಳೆ ಎಮಿಲಿಯಾ. ಎಲ್ಲ ನನ್ನ ಕೆಟ್ಟ ಹಣೆಬರಹ ಎಂದು ಇಡೀ ಪ್ರಸಂಗಕ್ಕೆ ತನ್ನನ್ನೇ ಹಳಿದುಕೊಳ್ಳುತ್ತಾಳೆ ಡೆಸ್ಡಿಮೋನಾ. ಅವನಾಡಿದ ಮಾತುಗಳಿಗೆ ಅಥೆಲೋನನ್ನು ಜರಿಯಬೇಕು ನೀನು ಎಂದು ಮುಂದುವರೆದು ಆದರೆ ಹೀಗೇಕಾಯಿತು ಎಂದು ಅಚ್ಚರಿಪಡುತ್ತಾನೆ ಇಯಾಗೋ. ದೇವರಿಗೆ ಗೊತ್ತು ಎಂದು ವಿವರ ಹುಡುಕಲು ಸಾಧ್ಯವಿಲ್ಲದೆ ಹೇಳುತ್ತಾಳೆ ಡೆಸ್ಡಿಮೋನಾ. ಇಲ್ಲಿಂದ ಮುಂದಕ್ಕೆ ಹದಿನೆಂಟು ಸಾಲುಗಳು ಇಯಾಗೋ ಮತ್ತು ಎಮಿಲಿಯಾ ಮಧ್ಯೆ ಮಾತ್ರ ನಡೆಯುವ ಸಂಭಾಷಣೆ. ಎಮಿಲಿಯಾಗೆ ಖಂಡಿತವಾಗಿದೆ ಈಗ – ಈ ಇಡೀ ಪ್ರಸಂಗದ ಹಿಂದೆ ಯಾವನೋ ಒಬ್ಬ 'Eternal villian' 'Busy and insinuating rogue' 'cogging, cozening slave' ತನ್ನದೇನೋ ಸ್ವಾರ್ಥ ಸಾಧಿಸುವುದಕ್ಕೆ ಹೀಗೆ

ಮಾಡಿರಬೇಕು ಎಂದು. ಇಯಾಗೋ ಕೊಂಚ ಅಧೀರನಾಗುತ್ತಾನೆ ; ಅವಳ ಮಾತನ್ನು ಸಾಧ್ಯವೇ ಇಲ್ಲದ ಊಹೆಗಳೆಂಬಂತೆ ತಳ್ಳಿಹಾಕುತ್ತಾನೆ. ಈ ಕ್ಷಣವೂ ಕೂಡ ಡೆಸ್ಡಿಮೋನಾ ತನ್ನ ಮುಗ್ಧ ಸಜ್ಜನಿಕೆಯನ್ನು ಕಳೆದುಕೊಳ್ಳುವುದಿಲ್ಲ. ಅಂಥವನೊಬ್ಬನಿದ್ದರೆ ದೇವರು ಅವನನ್ನು ಕ್ಷಮಿಸಲಿ ಎಂದು ಬಯಸುತ್ತಾಳೆ. ಗಲ್ಲಿಗೇರಿಸುವ ವಧಕಾರ ಕ್ಷಮಿಸಲಿ, ನರಕದಲ್ಲಿ ಅವನ ಮೂಳೆಗಳನ್ನು ಕಿತ್ತು ತಿನ್ನಲಿ ಎಂದು ಶಪಿಸುತ್ತಾಳೆ ಎಮಿಲಿಯಾ. ವೇಶ್ಯೆ ಎಂದು ಕರೆಯಬೇಕು ಯಾಕೆ ಅವನು ? ಯಾರು ಅವಳ ಗೆಣೆಕಾರರು ? ಯಾವಾಗ, ಎಲ್ಲಿ, ಹೇಗೆ ಸಾಧ್ಯ ಎಂದು ತಿಳಿದು ಆರೋಪಮಾಡುತ್ತಿದ್ದಾನೆ ಇವನು ? ಯಾವನೋ 'outrageous rogue' 'base notorious knave', 'scurvy fellow' ಇಂಥ ಕೆಲಸ ಮಾಡಿರಬೇಕು. ಯಾರೆಂದು ತಿಳಿದರೆ ಜಗತ್ತಿನ ಎಲ್ಲರ ಕೈಗಳಿಗೆ ಚಾಟಿಗಳು ನೀಡಿ ಈ ಭೂಮಿಯ ಅಂಚಿನವರೆವಿಗೆ, ಪೂರ್ವದಿಂದ ಪಶ್ಚಿಮದವರೆವಿಗೆ ಅವನನ್ನು ಅಟ್ಟಿಸಿಕೊಂಡು ಹೋಗಿ ಥಳಿಸಬೇಕು ಎಂದು ಹೃತ್ಪೂರ್ವಕವಾಗಿ ಹಾರೈಸುತ್ತಾಳೆ. ಅಡ್ಡ ಬರಲು ಯತ್ನಿಸಿದ ಇಯಾಗೋನ ಬಾಯಿಮುಚ್ಚಿಸಿ ಅಂಥದೇ ಒಬ್ಬ ಮಹಾನುಭಾವ ಯಾರೋ ಇಯಾಗೋನ ತಲೆಯೂ ಕೆಡಿಸಿ ಮೂರನ ಜೊತೆಗೆ ತನ್ನ ಸಂಬಂಧ ಸೃಷ್ಟಿಸಿ ತಮ್ಮಿಬ್ಬರ ಸಂಬಂಧಕ್ಕೆ ಕಲ್ಲು ಹಾಕಲು ಹೊರಟಿದ್ದ. ಇಯಾಗೋನಿಗೆ ಇದು ಕೊಂಚ ವಿಪರೀತವೆನಿಸಿ, ನೀನೊಬ್ಬ ಮೂರ್ಖ ಹೆಂಗಸು ಎಂದು ಅವಳ ವಾಗ್ಝರಿಗೆ ಮುಕ್ತಾಯ ತರಲು ಯತ್ನಿಸುತ್ತಾನೆ. ಡೆಸ್ಡಿಮೋನಾಳಿಗೂ ಇದು ಸಾಕೆನಿಸಿರಬೇಕು. ತನ್ನ ಚಿಂತೆ ತನ್ನ ಗಂಡನನ್ನು ಮತ್ತೆ ಪಡೆಯುವುದು ಹೇಗೆ ಎಂದು. 'ಪ್ರಿಯ ಮಿತ್ರ ಇಯಾಗೋ ಅವನ ಬಳಿ ಹೋಗು' ದೇವರಾಣೆ ತನಗೆ ತನ್ನ ಗಂಡನನ್ನು ಹೇಗೆ ಕಳೆದುಕೊಂಡೆ ಎಂದು ಅರ್ಥವಾಗುತ್ತಿಲ್ಲ. 'ನನ್ನ ಮಂಡಿಯೂರಿ ಇಲ್ಲಿ ಪ್ರಮಾಣ ಮಾಡುತ್ತೇನೆ. ನನ್ನ ಕಲ್ಪನೆಯಲ್ಲಿ, ಕ್ರಿಯೆಯಲ್ಲಿ ಎಂದಾದರೂ ನಾನು ಅವನ ಪ್ರೀತಿಗೆ ಅಪಚಾರವೆಸಗಿದ್ದರೆ, ಅಥವಾ ನನ್ನ ಕಣ್ಣು, ಕಿವಿ ಅಥವಾ ಯಾವುದೇ ಇಂದ್ರಿಯವಾಗಲಿ ಅವನನ್ನಲ್ಲದೆ ಬೇರೆ ಪುರುಷರ ವಿಷಯದಲ್ಲಿ ಆಸಕ್ತಿವಹಿಸಿದ್ದರೆ ಅಥವಾ ಹಿಂದೂ, ಇಂದೂ ಮತ್ತು ಎಂದೆಂದಿಗೂ ಅವನನ್ನು ಅಪಾರವಾಗಿ ಪ್ರೀತಿಸದೇ ಇದ್ದರೆ ಎಲ್ಲ ದುರ್ಗತಿಗಳೂ ನನ್ನನ್ನು ಆವರಿಸಿ ಹಾಳುಮಾಡಲಿ. ನನ್ನನ್ನು ಅವನು ತಿರಸ್ಕರಿಸಿ ದೂರ ತಳ್ಳಿದರೂ ಕೂಡ ಅವನ ಕುರಿತಾದ ಪ್ರೀತಿ ಮಾತ್ರ ಅಚಲವಾಗಿ ಉಳಿಯುತ್ತದೆ ಎಂದು ನನಗೆ ಖಂಡಿತವಿದೆ. ನಿರ್ದಯತೆ ಯಾರನ್ನೂ ಧೃತಿಗೆಡಿಸಬಹುದು. ಅವನ ನಿರ್ದಯತೆ ನನ್ನ ಬದುಕನ್ನೇ ನಾಶಮಾಡಿಬಿಡುತ್ತದೆ. 'ವೇಶ್ಯೆ' ಎಂಬ ಶಬ್ದ ನನ್ನ ಬಾಯಲ್ಲಿ ನಾನು ಆಡಲಾರೆ. ಹೀಗೆ ಆ ಮಾತು ನನ್ನ ನಾಲಗೆಯಿಂದ ಹೊರ ಬಂದ ಕೂಡಲೇ ನನ್ನ ಬಗ್ಗೆಯೇ ಅಸಹ್ಯವಾಗುತ್ತದೆ. ಹಾಗಿರುವಾಗ ಕ್ರಿಯೆಯಲ್ಲಿಯೂ ಆ ರೀತಿ ನಡೆದುಕೊಳ್ಳುವುದಕ್ಕೆ ನನಗೆ ಈ ಇಡೀ ಜಗತ್ತಿನ ವೈಭವವೂ ಆಕರ್ಷಿಸಲು ಸಾಧ್ಯವಿಲ್ಲ.' ಹೃದಯ ಮಿಡಿಯುವ ಮಾತುಗಳು ಇವು. ನಿರ್ಮಲ ಮನಸ್ಸಿನ ಹೂವಿನಂಥ ಮಾತುಗಳು. ಈ ಬಗ್ಗೆ ಮತ್ತೂ ಹೇಳುವುದಕ್ಕೆ ಮುಂಚೆ ಈ ದೃಶ್ಯದ ಕೊನೆಯ ಮೂರು ನಾಲ್ಕು ಸಾಲುಗಳ ಕುರಿತು

ಮಾತನಾಡಿಬಿಡೋಣ. ಇಯಾಗೋ ಅವಳಿಗೆ ಸಮಾಧಾನ ಮಾಡುತ್ತಾನೆ. ''ಅಸ್ವಸ್ಥಗೊಂಡಿರುವ ಅಥೆಲೋವಿನ ಮನಃಸ್ಥಿತಿಯಷ್ಟೆ ಇದು. ರಾಜ್ಯಕ್ಕೆ ಸಂಬಂಧಿಸಿದ ಯಾವುದೋ ವಿಷಯದಲ್ಲಿ ಅವನು ಮುಳುಗಿರಬೇಕು. ಅಲ್ಲಿ ತಲೆಕೆಡಿಸಿಕೊಂಡು ನಿನ್ನ ಮೇಲೆ ಕಿಡಿಕಾರುತ್ತಿದ್ದಾನೆ'', 'ಅದು ಇಷ್ಟು ಮಾತ್ರವಾಗಿದ್ದರೆ' ಎಂದು ಆಶಿಸಿದ ಡೆಸ್ಡಿಮೋನಾಳಿಗೆ 'ಅದು ಅಷ್ಟೆ, ನಿನಗೆ ಆಶ್ವಾಸನೆ ನೀಡುತ್ತೇನೆ' ಎಂದನ್ನುತ್ತಿದ್ದಂತೆ ಇಯಾಗೋವಿಗೆ ದೂರದಲ್ಲಿ ಕಹಳೆಗಳು ಮೊಳಗಿದ್ದು ಕೇಳಿ ಡೆಸ್ಡಿಮೋನಾಳನ್ನು ಭೋಜನಕ್ಕೆ ಆಹ್ವಾನಿಸುತ್ತಿರುವ ಸೂಚನೆ, ವೆನಿಸಿನಿಂದ ದೂತರು ಅವಳಿಗಾಗಿ ಕಾದಿದ್ದಾರೆ ಎಂದು ಹೇಳಿ 'Go in, weepnot, all things shall be well' ಎಂದು ಧೈರ್ಯ ಹೇಳುತ್ತಾನೆ. ಅಲ್ಲಿಗೆ ಈ ಮೂವರ ದೃಶ್ಯ ಮುಗಿಯುತ್ತದೆ.

ಈ ದೃಶ್ಯದ ಕುರಿತು ಆರಂಭದಲ್ಲಿ ಒಂದು ಮಾತು ಹೇಳಿದ್ದೆ ''....ಈ ದೃಶ್ಯ ಅತ್ಯಂತ ನಾಟಕೀಯವೂ ಹಾಗೂ ಪ್ರೇಕ್ಷಕರಿಗೆ ಈ ಮೂರು ಪಾತ್ರಗಳ ಬಗ್ಗೆ ಇದುವರೆವಿಗೆ ಸ್ಪಷ್ಟವಾಗಿ ಕಾಣದಿದ್ದ ವಿವರಗಳೂ ಗೋಚರವಾಗುತ್ತ ಹೋಗುವ ದೃಶ್ಯ'' ಎಂದು. ಈಗ ಆ ಮಾತನ್ನು ಪುಷ್ಟೀಕರಿಸಬೇಕಾದುದು ಅವಶ್ಯವೇ ಹೌದು. ಮತ್ತು ಇದಕ್ಕೂ ಮುಂಚೆ ನಾಲ್ಕನೇ ಅಂಕದ ಮೊದಲ ದೃಶ್ಯದ ಆರಂಭದಲ್ಲಿ ಇಯಾಗೋನ ಕುರಿತು ಮಾತನಾಡುತ್ತ 'ನನಗನ್ನಿಸುವ ಮಟ್ಟಿಗೆ ಇಡೀ ನಾಟಕದಲ್ಲಿ ಅವನ ಪ್ರಧಾನ ಗುರಿ ಹಾಗು ಲಕ್ಷ್ಯ ಡೆಸ್ಡಿಮೋನಾಳೇ, ಅಥೆಲೋ ಅಲ್ಲ' ಎಂದಿದ್ದೆ. ಮತ್ತೆ ಆ ಮಾತನ್ನು ಮುಂದುವರೆಸದೆ 'ಈ ಹಂತದಲ್ಲಿ ಇಷ್ಟು ಸಾಕು' ಎಂದು ಹೇಳಿ ಇಯಾಗೋವಿನ ಕುರಿತಾದ ಆ ಭಾಗಕ್ಕೆ ತಾತ್ಕಾಲಿಕ ತಡೆ ನೀಡಿದ್ದೆ. ಈಗ ಇಯಾಗೋವಿನ ಬಗ್ಗೆ ನಮ್ಮ ವಿಶ್ಲೇಷಣೆ ಮುಂದುವರೆಯಬಹುದು ಎಂದೂ ಮತ್ತು ಅದಕ್ಕಿಂತ ಹೆಚ್ಚಿಗೆ ಹೇಗೆ ಡೆಸ್ಡಿಮೋನಾಳೇ ಅವನ 'ಅಂತಿಮ ಗುರಿ ಹಾಗೂ ಲಕ್ಷ್ಯ' ಎಂಬ ಮಾತು ಸಕಾರಣವಾದುದು ಎಂದು ನೋಡಲು ಯತ್ನಿಸುವುದಕ್ಕೆ ಸಕಾಲವೆನಿಸುತ್ತದೆ. ಡೆಸ್ಡಿಮೋನಾಳ ಎದುರು ಮಾತ್ರ ತಗ್ಗಿ ಬಗ್ಗಿ ನಡೆಯುತ್ತಾನೆ ಇಯಾಗೋ ಎಂದು ಕೂಡ ಹೇಳಿದ್ದೆ. ಯಾಕೆ ಹೀಗೆ ? ಅವನ ಸಹಜಗುಣಗಳೆಲ್ಲ ಮಾಯವಾಗುತ್ತವೆ ಯಾಕೆ ? ತಾನು ಬಿಳಿಯ, ಅವಳು ಬಿಳಿಯಳು, ಇಬ್ಬರೂ ವೆನಿಷಿಯವರು, ಒಂದೇ ಸಂಸ್ಕೃತಿಯವರು. ಈ ಕರಿ ಹುಡುಗ - ಬಿಳಿ ಹುಡುಗಿಯ ಮಧ್ಯದ ಮದುವೆಗೆ ಹುಳಿ ಹಿಂಡಬೇಕೆನಿಸಿದರೆ ಅವನಿಗೆ ಬಹುಶಃ ಡೆಸ್ಡಿಮೋನಾಳನ್ನೂ ಬಳಸಿಕೊಳ್ಳುವುದು ಹೆಚ್ಚು ಸುಲಭವಾಗುತ್ತಿತ್ತಲ್ಲವೆ ? ಇಬ್ಬರೂ ಮೇಲ್ನೋಟ್ಟಕಾದರೂ ಒಂದೆ ತರಂಗಮಾನದವರು. ಆದರೂ ಅವಳ ಹತ್ತಿರ ಆಪ್ತವಾಗಿ ಮಾತನಾಡವುದಿರಲಿ, ಸುಳಿದಾಡಲೂ ಅವನಿಗೆ ವಿಚಿತ್ರ ಕಸಿವಿಸಿ ಉಂಟಾಗುತ್ತದಲ್ಲ ಯಾಕೆ ?

ಇದಕ್ಕೆ ಉತ್ತರ ಕೊಡುವ ಮೊದಲು ಬಹುಶಃ ನಾಟಕದ ಈ ಹಂತದಲ್ಲಿ ಇಯಾಗೋವಿನ ವ್ಯಕ್ತಿತ್ವದ ಮೂಲ ಹಾಗೂ ಪ್ರಾಧಾನ ಲಕ್ಷಣ ಯಾವುದು ಎಂದು ಹುಡುಕಿ ನೋಡುವುದು ಸೂಕ್ತ ಎಂದೆನಿಸುತ್ತದೆ. ಜನಾಂಗದ್ವೇಷ, ಸ್ತ್ರೀದ್ವೇಷ, ಅಧಿಕಾರವ್ಯಾಮೋಹ, ಅಸೂಯೆ

ಇವುಗಳೆಲ್ಲಕ್ಕಿಂತ ಬಹುಮುಖ್ಯವಾಗಿ ಇಯಾಗೋ ಒಬ್ಬ ಜೀವದ್ವೇಷಿ. ಸಹಜತೆಗಳೂ, ಮುಗ್ಧತೆಗಳೂ, ಸುಂದರ ವಿಷಯಗಳೂ ಕಂಡಿತೆಂದರೆ ತೀರ ಅಸ್ವಸ್ಥನಾಗುತ್ತಾನೆ. ಈ ಮಾತುಗಳನ್ನು ಕೂಡ ಪುನರುಚ್ಚರಿಸುವುದಕ್ಕೆ ಕಾರಣ ಇಲ್ಲಿ ಡೆಸ್ಡಿಮೋನಾಳ ಸಂದರ್ಭದಲ್ಲಿ ಇದು ಪ್ರಸ್ತುತವಾಗುತ್ತದೆ ಎಂಬ ಕಾರಣಕ್ಕೆ. ತನ್ನ ಜೀವದ್ವೇಷದ ರಸಾಯನವನ್ನು ಉಣಿಸಲು ಅವನು ಆರಿಸಿಕೊಳ್ಳುವುದು ಅಥೆಲೋನನ್ನು, ಡೆಸ್ಡಿಮೋನಾಳನ್ನಲ್ಲ ಎಂಬುದಕ್ಕೆ ಕಾರಣ ಇಲ್ಲಿದೆ. ಇಯಾಗೋ ಮತ್ತು ಡೆಸ್ಡಿಮೋನಾ ಜೀವನ ಮೌಲ್ಯಗಳ ವಿರುದ್ಧ ತುದಿಗಳಲ್ಲಿರುವವರು. ಇಯಾಗೋ ಜೀವದ್ವೇಷಿ, ಡೆಸ್ಡಿಮೋನಾ ಸುತ್ತಲ ಜಗತ್ತು, ಜನ, ಹಾಗೂ ಎಲ್ಲ ಸುಂದರ ವಸ್ತುಗಳ ಕುರಿತು ಅಪಾರ ಆಸಕ್ತಿ, ಪ್ರೀತಿ, ಹಾಗೂ ತಾದಾತ್ಮ್ಯವನ್ನು ಹೊಂದಿರುವ ಹೆಣ್ಣು. ಅವಳಿಗೆ ವಕ್ರಗಳೇ ಕಾಣುವುದಿಲ್ಲ, ವಕ್ರ ಕಂಡಿತೆಂದರೆ ಅದು ತನ್ನ ನೋಟದ ದೋಷವಾಗಿ ಕಾಣುತ್ತದೆಯೇ ವಿನಾ ವಸ್ತುವಿನ ದೋಷವಾಗಿಯಲ್ಲ. ಬದುಕಿನ ಬಗೆಗಿನ ಅವಳ ಬದ್ಧತೆ ಅವಳನ್ನೊಂದು ಪ್ರಕೃತಿ ಸೃಷ್ಟಿಸಿದ ಅತ್ಯಂತ ಮುಗ್ಧ ಮನೋಹರ ಪಾತ್ರ ಡೆಸ್ಡಿಮೋನಾ. ಎಂದೇ ಜೀವ ಪ್ರೇಮದ ಸಾಕಾರಮೂರ್ತಿಯಾದ ಡೆಸ್ಡಿಮೋನಾ ಜೀವದ್ವೇಷದ ಸಾಕಾರಮೂರ್ತಿಯಾದ ಇಯಾಗೋವಿನ ಪರಮ ಗೀಳಾಗುವುದರಲ್ಲಿ, ಮನಸ್ಸನ್ನೆಲ್ಲ ಆವರಿಸಿ ಕಾಡುವ ಪೀಡೆಯಾಗಿ ಕಾಣುವುದರಲ್ಲಿ ಆಶ್ಚರ್ಯವಿಲ್ಲ. ಈ ಗೀಳೇ ಡೆಸ್ಡಿಮೋನಾಳನ್ನು ಇಯಾಗೋವಿನ 'ಪರಮ ಗುರಿ ಹಾಗೂ ಲಕ್ಷ್ಯ'ವನ್ನಾಗಿ ಮಾರ್ಪಡಿಸಿ ಕೊನೆಗೆ ಅವಳನ್ನೇ ತನ್ನ ಪ್ರಧಾನ ಬಲಿಪಶುವನ್ನಾಗಿ ಮಾಡಬೇಕೆಂಬ ನಿರ್ಧಾರದಲ್ಲಿ ಕೊನೆಗಾಣಿಸುವುದು. ವಿರೋಧಾಭಾಸವಾಗಿ ಕಂಡರೂ ಮತ್ತೂ ಒಂದು ಮಾತನ್ನು ಈ ಸಂದರ್ಭದಲ್ಲಿ ಸೇರಿಸಲೇಬೇಕು. ಇಡೀ ನಾಟಕದಲ್ಲಿ ಡೆಸ್ಡಿಮೋನಾಳ ವ್ಯಕ್ತಿತ್ವದ ಆಳ-ಎತ್ತರಗಳನ್ನು ಯಾರಾದರೂ ಸರಿಯಾಗಿ ಗ್ರಹಿಸಿದ್ದರೆ ಅದು ಇಯಾಗೋನೇ ಹೊರತು, ಅಥೆಲೋನನ್ನು ಸೇರಿಸಿದ ಹಾಗೆ ಮತ್ತೆ ಯಾರೂ ಅಲ್ಲ. ಅವಳು ತನಗೆ ಸವಾಲಾಗಿ ಕಾಣುವುದೂ ಅದಕ್ಕಾಗಿಯೇ. ನಾಟಕದ ಮಿಕ್ಕ ಯಾವ ಪಾತ್ರವೂ ತನಗೆಂದೂ ಸಮಸ್ಯೆಯೇ ಅಲ್ಲ. ಬ್ರಬಾನ್ಷಿಯೋ, ಕ್ಯಾಷಿಯೋ, ತನ್ನ ಹೆಂಡತಿ ಎಮಿಲಿಯಾ ಅಥವಾ ವಿಶೇಷವಾಗಿ ಹೇಳಲೇ ಬೇಕಿಲ್ಲದ ರೋಡರಿಗೋ ಯಾರೂ ಅಲ್ಲ. ಅಥೆಲೋನ ಗಟ್ಟಿ ವ್ಯಕ್ತಿತ್ವವೂ ಡೆಸ್ಡಿಮೋನಾಳ ಕುರಿತಾಗ ಅವನ ಅಗಾಧ ಪ್ರೀತಿಯೂ ತನ್ನ ಎಟುಕಿಗೆ ಕೊಂಚ ಕಠಿಣವಾಗಿ ಕಂಡದ್ದು ನಿಜವಾದರೂ ಕೊನೆಗೂ ಅವನನ್ನು ಕೂಡ ತನ್ನ ತಾಳಕ್ಕೆ ಕುಣಿಸುವುದರಲ್ಲಿ ಯಶಸ್ವಿಯಾಗುತ್ತಾನೆ. ನಾನು ಈ ಮೊದಲೇ ಕೇಳಿಕೊಂಡ ಪ್ರಶ್ನೆಗೆ ಉತ್ತರ ಕಂಡುಕೊಳ್ಳ ಬೇಕಾದ ಸಮಯ ಬಂದಿದೆ. ಇಯಾಗೋ ತನ್ನ ಪರಿಸರದವಳೇ ಆದ ಡೆಸ್ಡಿಮೋನಾಳ ಮನಸ್ಸನ್ನು ವಿಷ ಹಾಕಿ ನಾಶಮಾಡುವುದರ ಬದಲು ತನ್ನ ಜಗತ್ತಿಗೇ ಪರಕೀಯನಾದ ಅಥೆಲೋನನ್ನು ಯಾಕೆ ಆರಿಸಿಕೊಳ್ಳುತ್ತಾನೆ ? ಅಥೆಲೋ ಗಟ್ಟಿ ವ್ಯಕ್ತಿತ್ವದ ಮನುಷ್ಯ ಹೌದು. ಬೆಳಕೇ ಕಾಣದ ಕಪ್ಪು ನೆಲದ ಅನಾಗರಿಕ ಸಂಸ್ಕೃತಿಯ ಜನಾಂಗದವನು ಎಂದು ಬಿಳಿಯರು

ತಿಳಿದಿದ್ದರೂ ಅಥೆಲೋ ತನ್ನ ಪರಾಕ್ರಮ, ವೈಯಕ್ತಿಕ ಘನತೆ ಹಾಗೂ ಸಾಧನೆಗಳಿಂದ ವೆನಿಸ್ ನಾಗರಿಕರ ಗೌರವಾದರಗಳನ್ನು ಗಳಿಸಿ ಗಣ್ಯನೆನಿಸಿಕೊಂಡವನು ಎಂಬುದೂ ನಿಜ. ಮತ್ತು ಡೆಸ್ಡಿಮೋನಾಳ ಪ್ರೀತಿ ಮತ್ತು ತಾನು ಅವಳ ಬಗ್ಗೆ ಹೊಂದಿರುವ ಉದಾತ್ತ ಭಾವನೆಗಳು ಅವನನ್ನು ವ್ಯಕ್ತಿಯಾಗಿ ಮತ್ತೂ ಅಷ್ಟು ಆಯಾಮಗಳನ್ನು ಗಳಿಸಿಕೊಳ್ಳುವಂತಾಗಿದೆ. ಅವನ ಮಿಲಿಟರಿ ಕರಾರುವಾಕ್ ಭಾಷೆ ಕ್ರಮೇಣ ಕಾವ್ಯಮಯತೆಯ ಸೊಗಡು ಪಡೆದುಕೊಂಡು ಹೊಳೆಯುತ್ತದೆ. ಇವೆಲ್ಲ ನಿಜ. ಆದರೆ ಇಯಾಗೋ ಗುರಿ ಇಡುವುದು ಅಥೆಲೋವಿನ ಪ್ರಜ್ಞೆಯ ಗುಪ್ತ ನಿಗೂಢ ಸಂದುಗೊಂದುಗಳಲ್ಲಿ, ಅಳಿಸಲಿಕ್ಕಾಗದೆ ಅಂಟಿಕೊಂಡೇ ಇರುವ ಅವನ ಕೀಳರಿಮೆಯ ಮೇಲೆ. ಅವನ ಬಣ್ಣದ, ಅವನ ಜನಾಂಗದ, ಅವನ ಮನಸ್ಸಿನ, ಅವನ ಕರಾಳ ರೂಪದ ಕುರಿತಾದ ಕೀಳರಿಮೆಯ ಮೇಲೆ, ಒಂದು ಗಂಡು - ಒಂದು ಹೆಣ್ಣು ಶೂನ್ಯದಲ್ಲಿ ಪ್ರೀತಿಸುವುದು ಸಾಧ್ಯವಿಲ್ಲ. ಎಷ್ಟೇ ಗಾಢವಾದರೂ ಒಂದು ಸಂದರ್ಭದಲ್ಲಿ ಪ್ರೀತಿ ಸಾಧ್ಯ. ಈ ಸಂದರ್ಭ ಸಾಮಾಜಿಕ, ಕೌಟುಂಬಿಕ, ಆರ್ಥಿಕ ವಿವರಗಳನ್ನು ಹೇಗೆ ಹೊಂದಿರುತ್ತವೆಯೋ ಹಾಗೆಯೇ ಜನಾಂಗ, ಬಣ್ಣ, ಭಾಷೆ, ವೈಯಕ್ತಿಕ ಕನಸುಗಳು, ಪೂರ್ವ ಗ್ರಹಗಳು ಇವೂ ಕೂಡ ಸಂದರ್ಭದ ಭಾಗವಾಗಿರುತ್ತದೆ. ಆದರೆ ಪ್ರೀತಿ ಹೆಚ್ಚು ಹೆಚ್ಚು ಆಳಕ್ಕೆ ಇಳಿಯುತ್ತಿದ್ದಂತೆ, ಹೆಚ್ಚು ವಿಸ್ತಾರವಾಗುತ್ತಿದ್ದಂತೆ ಸೀಮಿತಗೊಳಿಸಿಬಿಡುವ ಸಂದರ್ಭದ ಸಂಕೋಲೆಗಳನ್ನು ಕಳಚಿಕೊಳ್ಳುತ್ತ ಅದಕ್ಕೂ ಮೀರಿ ಬೆಳೆದು ನಿಲ್ಲುತ್ತದೆ. ಅಂದರೆ ಆ ಮನುಷ್ಯನಿರ್ಮಿತ ಸಂದರ್ಭವನ್ನು ಮೀರಿ ಪ್ರಕೃತಿಯ ಅಂಗವಾಗಿ ಬಿಡುತ್ತದೆ. ಈ ಕಪ್ಪು ಮನುಷ್ಯ - ಬಿಳಿ ಹುಡುಗಿಯ ಮಧ್ಯದ ಮದುವೆ ಈ ಬಗೆಯ ಸಂದರ್ಭಗಳನ್ನು ಮೀರಿ ಬೆಳೆದು ಬಿಡುವ ಅಪಾಯಗಳು ಇಯಾಗೋನಿಗೆ ಕಾಣುತ್ತಿವೆ. ಎಂದೇ ಮತ್ತೆ ಇದನ್ನು ಸಂದರ್ಭಕ್ಕೆ ಎಳೆದು ತರಬೇಕಾದರೆ, ಇಬ್ಬರನ್ನೂ ಆಗದಿದ್ದರೂ ಒಬ್ಬರನ್ನಾದರೂ ಮಾನಸಿಕವಾಗಿ ನಾಶ ಮಾಡಬೇಕು. ತಾನು ಎಂದಿಗೂ ಹೊರಗಿನವನೇ ಎಂಬ ಅಥೆಲೋವಿನ ಆಳದ ಭಾವನೆಯನ್ನು ಪೋಷಿಸಬೇಕು ; ಬೆಳೆಸಬೇಕು. ಅದೇ ಭಾರದಡಿಯಲ್ಲಿ ಅವನು ಕುಸಿಯುವಂತಾಗಬೇಕು. ಡೆಸ್ಡಿಮೋನಾ ತಾನೆಷ್ಟು ಕೈ ಚಾಚಿದರೂ ಸಿಗದಷ್ಟು ಎತ್ತರದಲ್ಲಿದ್ದಾಳೆ. ಎಷ್ಟೇ ನೋವಿನಲ್ಲಿಯೂ ಹುಳಿಯಾಗದ ಮನಸ್ಸು ಅವಳದು. ನೋಡಿದಷ್ಟೂ ಅವಳು ಬೆಳೆಯುತ್ತಿದ್ದಾಳೆ ಎಂದು ಮಾತ್ರ ತನಗೆ ವೇದ್ಯವಾಗುತ್ತದೆ. ತನ್ನ ಪ್ರಜ್ಞೆಯಾಳದಲ್ಲಿ ಸದಾಕಾಲ ಚುರುಗುಟ್ಟುವ ಈ ಭಾವನೆಯನ್ನು ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಳ್ಳಲು ತಯಾರಿಲ್ಲದ ಅವನ ಅಹಂಕಾರ, ಸಿನಿಕತನದಲ್ಲಿ ಡೆಸ್ಡಿಮೋನಾಳನ್ನು 'Super subtle venitian' ಎಂದು ವರ್ಣಿಸಿ ಸಮಾಧಾನ ಪಟ್ಟುಕೊಳ್ಳುವ ಯತ್ನ ಮಾಡುವುದು. ಎಂದೇ ಮುಟ್ಟಲಿಕ್ಕಾಗದ ಇವಳನ್ನು ಅಥೆಲೋನ ಮೂಲಕ ನಾಶ ಮಾಡಬೇಕು. ಇಯಾಗೋನ ಪ್ರಕಾರ ತನ್ನ ಅಹಮಿಕೆಯ ವ್ಯಾಪ್ತಿಯೊಳಗೆ ಬರದ ಯಾವುದಕ್ಕೂ ಅಥವಾ ಯಾರಿಗೂ ಉಳಿಯುವ ಹಕ್ಕಿಲ್ಲ. ಇಂದ್ರಿಯಾತೀತ ಜಗತ್ತಿನ ಕುರಿತಾದ ನಂಬಿಕೆಯಾಗಲಿ, ಶ್ರದ್ಧೆಯಾಗಲಿ ಅವನಿಗೆ ಇಲ್ಲ. ಈ ಕ್ಷಣವನ್ನು ಮೀರಿ ಚಿಂತಿಸಿ ತಲೆಕೆಡಿಸಿಕೊಳ್ಳುವ ರೀತಿಯವನಲ್ಲ ಅವನು.

ಅಹಮಿನ ಲವಲೇಶವೂ ಕಾಣದ ಡೆಸ್ಡಿಮೋನಾಳ ವ್ಯಕ್ತಿತ್ವ ಅವನಿಗೆ ಅರ್ಥವೇ ಆಗುವುದಿಲ್ಲ. ಅದೇ ಕಾರಣಕ್ಕಾಗಿಯೇ ಅಂಥ ವ್ಯಕ್ತಿತ್ವದ ಕುರಿತಾಗಿ ಸಹನೆಯೂ ಸಾಧ್ಯವಿಲ್ಲ ಅವನಿಗೆ. ಒಂದಿಷ್ಟಾದರೂ ಆ ಚಿಹ್ನೆ ಅವನ ಗಮನಕ್ಕೆ ಬಂದಿದ್ದರೆ, ಈ ದೃಶ್ಯದಲ್ಲಿ ಅಂದರೆ ನಾಲ್ಕನೇ ಅಂಕದ ಎರಡನೇ ದೃಶ್ಯದಲ್ಲಿ ವಿಶೇಷವಾಗಿ ಬರಬೇಕಿತ್ತು. ಅನುಮಾನವಾದರೂ ಸಾಧ್ಯವಿದ್ದಿದ್ದರೆ ಸಂಪೂರ್ಣ ಅದರ ದುರ್ಲಾಭ ಪಡೆಯುವುದರಲ್ಲಿ ಸಂದೇಹವೇ ಇರುತ್ತಿರಲಿಲ್ಲ. ಅಥೆಲೋ ತನ್ನನ್ನು ಹೀನ ಶಬ್ದಗಳಿಂದ ಅವಮಾನಗೊಳಿಸಿದನೆಂದು ಹೇಳಿದಾಗ 'ಅವನ ಯೋಗ್ಯತೆ ಅಷ್ಟೆ, ಅವನೊಬ್ಬ ಅನಾಗರಿಕ ಮೃಗ, ಕಪ್ಪು ದೈತ್ಯ' ಎಂದೆಲ್ಲ ಹೇಳಿ ಅವಳನ್ನು ತನ್ನ ಬಲೆಗೆ ಸಿಲುಕಿಸಿಕೊಳ್ಳಬಹುದಿತ್ತಲ್ಲ ? ಹಿಂದೆ ಮಾಂಟನೋ ನಂತರ ಲೋಡೊವಿಕೋ ಬಳಿ ಕ್ಯಾಷಿಯೋ ಮತ್ತು ಅಥೆಲೋರ ಬಗ್ಗೆ ಅವರ ಬೆನ್ನ ಹಿಂದೆ ಎಷ್ಟು ಲಘುವಾಗಿ ಮಾತನಾಡಿ ಅವರ ಮನಸ್ಸುಗಳ ಮೇಲೆ ಪರಿಣಾಮ ಉಂಟುಮಾಡಿದ್ದ ತಾನು ? ಆದರೆ ಡೆಸ್ಡಿಮೋನಾ ಈ ಬಗೆಯ ಟೊಳ್ಳು ವ್ಯಕ್ತಿತ್ವದ ಹೆಣ್ಣಲ್ಲ. ಹೀಗಾಗಿಯೇ ತನ್ನನ್ನು ಸದಾ ಕೆಣಕುವ ಈ ನಿಶ್ಚಲ, ನಿರ್ಮಲ, ಶುಭ್ರ ಕೊಳದಲ್ಲಿ ಕೆಸರು ತುಂಬಿ ರಾಡಿ ಮಾಡಬೇಕು. ತನ್ನ ವಿಷದ ಝಳ ತಾಗಿ ಈ ಕೊಳ ಬತ್ತಿ ಹೋಗಿ ಮಣ್ಣು ಕಲ್ಲುಗಳಾಗಿ ಬಿಡಬೇಕು. ಇದು ಇಯಾಗೋನ ವ್ಯಕ್ತಿತ್ವ. ಇಷ್ಟಾದರೂ ಅವನಿಗೆ ಸಾಂಪ್ರದಾಯಿಕ ಅರ್ಥದ ಖಳನಾಯಕ ಎಂಬ ಹಣೆ ಪಟ್ಟಿ ತಗಲಿಸುವುದಕ್ಕೂ ಮನಸ್ಸು ಒಪ್ಪುವುದಿಲ್ಲ. ಶೇಕ್ಸ್‌ಪಿಯರನಿಗೆ ಅಪ್ಪಟ ನಾಯಕ-ನಾಯಕಿಯರು-ಖಳನಾಯಕರು ಎಂಬುದೇ ಇರಲಿಲ್ಲ. ಮನುಷ್ಯರು ಮಾತ್ರ ಅವನ ಕಾಳಜಿಗಳು. ದೇವತೆಗಳೂ ಅಲ್ಲ, ರಾಕ್ಷಸರೂ ಅಲ್ಲ. ರೋಗಗ್ರಸ್ತನೊಬ್ಬನನ್ನು ಖಳನಾಯಕನೆಂದು ತಳ್ಳಿಹಾಕಿಬಿಡುವುದು ನಮ್ಮದೇ ವ್ಯಕ್ತಿತ್ವಗಳಲ್ಲಿನ ಅಸಹನೆ ಹಾಗೂ ಅತಿಸಾತ್ವಿಕತನದ ಲಕ್ಷಣಗಳಾಗುತ್ತವೆ.

ಈ ದೃಶ್ಯದಲ್ಲಿ ಎಮಿಲಿಯಾ ನಡೆದುಕೊಳ್ಳುವ ರೀತಿ ಕೂಡ ಅನೇಕ ಕುತೂಹಲಗಳನ್ನು ಹುಟ್ಟುಹಾಕುತ್ತದೆ. ಅಥೆಲೋ ತನ್ನೊಡನೆ ಮಾತನಾಡುವಾಗ ಕ್ಯಾಷಿಯೋ ಹೆಸರು ಸೂಚಿಸಿ ತನ್ನ ಅನುಮಾನಗಳನ್ನು ವ್ಯಕ್ತಪಡಿಸಿದ್ದಾನೆ. ಅದಕ್ಕೆ ತಾನು ಬಹು ದೃಢವಾಗಿ ಉತ್ತರಗಳನ್ನು ಕೊಟ್ಟಿದ್ದಾಳೆ. ಸದ್ಯದ ಈ ದೃಶ್ಯದಲ್ಲಿ 'Why should he call her a whore ? who keeps her company....' ಎಂದು ತಾನೇ ಹೇಳುತ್ತಾಳೆಯೆ ಹೊರತು ಮೂರನು ಹೇಳಿದ್ದ ಕ್ಯಾಷಿಯೋ ಹೆಸರನ್ನು ಹೇಳುವುದಿಲ್ಲ. ಮರೆವಿನಿಂದ ಸಾಧ್ಯವಿಲ್ಲ. ಮರೆಯುವಂಥ ಸಾಮಾನ್ಯ ವಿಷಯವಲ್ಲ ಇದು. ಒಂದೇ ವಿವರಣೆ ಸಾಧ್ಯ. ಶೇಕ್ಸ್‌ಪಿಯರ್ ಉದ್ದಿಶ್ಯಪೂರ್ವಕವಾಗಿ ಅವಳ ಬಾಯಲ್ಲಿ ಆಡಿಸುವುದಿಲ್ಲ. ಹಾಗೊಮ್ಮೆ ಆಡಿಸಿದ್ದರೆ ಡೆಸ್ಡಿಮೋನಾ ಖಂಡಿತ ಮರುಕ್ಷಣದಲ್ಲಿ ಅಥೆಲೋನನ್ನು ಈ ವಿಷಯದಲ್ಲಿ ನೇರ ಪ್ರಶ್ನೆ ಮಾಡಿಬಿಡುತ್ತಿದ್ದುದರಲ್ಲಿ ಸಂಶಯವಿಲ್ಲ. ನಾಟಕದ ದಿಕ್ಕೇ ಬದಲಾಗಿ ಬಿಡುತ್ತಿತ್ತು. ಆದರೆ ಸೂಕ್ಷ್ಮವಾಗಿ ನಾಟಕ ಗಮನಿಸುತ್ತಿರುವ ನಮಗೆ ಎಮಿಲಿಯಾ ಬಗ್ಗೆ ಅಚ್ಚರಿಯಾದರೆ ಆಶ್ಚರ್ಯವೇನಿಲ್ಲ. ಇನ್ನೂ ಒಂದು ಕುತೂಹಲವಿದೆ.

ಇದಕ್ಕೇ ನೇರವಾಗಿ ಎಮಿಲಿಯಾಳೇ ಜವಾಬ್ದಾರಳು. ಇಯಾಗೋ ಎದುರಿಗಿದ್ದಾನೆ, ಆಥೆಲೋ ಡೆಸ್ಡಿಮೋನಾಳನ್ನು ಕರವಸ್ತ್ರದ ವಿಷಯದಲ್ಲಿ ಎಷ್ಟೊಂದು ಹಿಂಸಿಸಿದ ಎಂದು ಕಂಡಿದ್ದಾಳೆ, ಡೆಸ್ಡಿಮೋನಾಳು ಆ ಬಗ್ಗೆ ಎಷ್ಟು ನರಳುತ್ತಿದ್ದಾಳೆ ಎಂದು ತನಗೆ ಗೊತ್ತಿದೆ. ಈ ಕರವಸ್ತ್ರವನ್ನು ತಾನು ಗಂಡನಿಗೆ ಕೊಟ್ಟಿದ್ದು , ಈಗ ಆ ಗಂಡ ಎದುರೇ ಇರುವಾಗ ಯಾಕೆ ನೇರವಾಗಿ ಅವನಿಗೆ ಕರವಸ್ತ್ರ ಹಿಂತಿರುಗಿಸುವುದಕ್ಕೆ ಹೇಳುವುದಿಲ್ಲ ? ಗಂಡನನ್ನು ರಕ್ಷಿಸಲೆಂದೆ ? ಇಂದಲ್ಲ ನಾಳೆ ಕರವಸ್ತ್ರ ತನ್ನ ಕೈಗೆ ಬಂದೇ ಬರುತ್ತದೆ ಎಂದು ಖಾತ್ರಿಯಲ್ಲಿಯೆ ? ಗಂಡನ ಬಗ್ಗೆ ನಂಬಿಕೆಯೇ ? ಅಥವಾ ಕರವಸ್ತ್ರದಂಥ ಕ್ಷುಲ್ಲಕ ವಿಷಯಕ್ಕೆ ಆಥೆಲೋನ ರೀತಿ ತಲೆಕೆಡಿಸಿಕೊಳ್ಳುವುದು ಮೂರ್ಖತನವೆಂದೆ ? ಅಷ್ಟೇ ಗಟ್ಟಿ ದನಿಯಲ್ಲಿ 'Eternal villian' ಅನ್ನು ಖಂಡಿಸಿದ ಎಮಿಲಿಯಾ ಹೆಚ್ಚು ನಿರ್ದಿಷ್ಟವಾಗಿ ಮಾತನಾಡಬಹುದಿತ್ತಲ್ಲ? ಇದು ಕೇವಲ ಶೆಕ್ಸ್‌ಪಿಯರನ ನಾಟಕ ರಚನೆಯ ತಂತ್ರಗಾರಿಕೆ ಮಾತ್ರವಲ್ಲ. ಇದಕ್ಕೂ ಮತ್ತು ಒಟ್ಟಾರೆ ಎಮಿಲಿಯಾಳ ಪಾತ್ರದ ಕುರಿತು ಬಹುಶಃ ಇದೇ ಅಂಕದ ಮೂರನೇ ದೃಶ್ಯದ ಕೊನೆಯ ಭಾಗಕ್ಕೆ ಮುಂದೆ ಹಾಕಬಹುದು. ಡೆಸ್ಡಿಮೋನಾಳ ಕುರಿತಾಗಿಯೂ ಹೇಳಬೇಕಾದದ್ದು ಸಾಕಷ್ಟಿದೆ. ಇದೂ ಕೂಡ ಕೊಂಚ ಕಾಯಬಹುದು.

ಡೆಸ್ಡಿಮೋನಾ, ಎಮಿಲಿಯಾ ನಿಷ್ಕ್ರಮಿಸುವುದನ್ನೇ ಕಾಯುತ್ತಿದ್ದವನಂತೆ ರೋಡರಿಗೋ ಪ್ರವೇಶಿಸುತ್ತಾನೆ. ತೀರ ವ್ಯಗ್ರ ಮನಃಸ್ಥಿತಿಯಲ್ಲಿದ್ದಾನೆ ಅವನು. ಇಯಾಗೋನ ಬಗ್ಗೆ ನಂಬಿಕೆ ಸಂಪೂರ್ಣವಾಗಿ ಹೋಗಿದೆ. ತನ್ನ ಹಣ, ಚಿನ್ನ ಬೆಳ್ಳಿ, ಎಲ್ಲ ಅವನ ಕೈಗೆ ಕೊಟ್ಟು ಡೆಸ್ಡಿಮೋನಾಳು ಇಂದಲ್ಲ ನಾಳೆ ತನ್ನ ವಶವಾಗುತ್ತಾಳೆಂದು ನಂಬಿ ಕಾಯುತ್ತಿದ್ದಾನೆ. ತಾನು ಕೊಟ್ಟಷ್ಟು ಐಶ್ವರ್ಯ ಸಂತಳನ್ನೂ ತನ್ನ ಕಡೆ ಮನಸ್ಸು ವಾಲಿಸುವಂತೆ ಮಾಡುವುದರಲ್ಲಿ ಯಶಸ್ವಿಯಾಗುತ್ತಿತ್ತು. ಆದರೆ ಡೆಸ್ಡಿಮೋನಾಳು ತನ್ನ ಕಡೆ ಕಣ್ಣೂ ಹಾಯಿಸಿಲ್ಲ. ಇನ್ನು ತಾನು ತಾಳ್ಮೆಯಿಂದ ಇರಲು ಸಾಧ್ಯವಿಲ್ಲ. ಮತ್ತು ಮೂರ್ಖ ವ್ಯಾಮೋಹಗಳೆಲ್ಲ ಮರೆತು ಹಿಂತಿರುಗಲು ನಿಶ್ಚಯಿಸಿದ್ದೇನೆ ಎನ್ನುತ್ತಾನೆ ರೋಡರೀಗೋ. ಇಡೀ ತನ್ನ - ಇಯಾಗೋವಿನ ಸಂಬಂಧದಲ್ಲಿ ಮೊದಲ ಬಾರಿಗೆಂಬಂತೆ ತೀರ ದನಿ ಎತ್ತರಿಸಿ, ರೇಗಿನಲ್ಲಿ, ಸಿಟ್ಟಿನಲ್ಲಿ ಇಯಾಗೋನನ್ನು ಉದ್ದೇಶಿಸಿ ಮಾತನಾಡುತ್ತಾನೆ.

ರೋಡರಿಗೋ ಕೂಗಾಡಿ ದಮ್ಮು ಎಳೆದುಕೊಂಡು ತನ್ನ ಶಕ್ತಿಯನ್ನೆಲ್ಲ ವ್ಯಯ ಮಾಡಿಕೊಳ್ಳುವುದನ್ನೇ ಕಾಯುತ್ತಿರುವವನಂತೆ ಇಯಾಗೋ ಸಹನೆಯಿಂದ ಆಗೊಂದು ಈಗೊಂದು ಮಾತನಾಡುತ್ತಾನೆ. ಆದರೆ ಸಾಕಷ್ಟು ಕೇಳಿಯಾಯಿತೆನಿಸಿದ ಮೇಲೆ ರೋಡರಿಗೋನಿಗೆ ಸಮಾಧಾನ ಮಾಡುವವನಂತೆಯೂ ಮತ್ತು ಅದೇ ಸಮಯಕ್ಕೆ ಉಬ್ಬಿಸುವವನಂತೆಯೂ ಮಾತನಾಡುತ್ತಾನೆ. ತನ್ನ ಬಗ್ಗೆ ಅನ್ಯಾಯದ ಆರೋಪಗಳನ್ನೇ ಹೊರಿಸುತ್ತಿದ್ದೆ ನೀನು ಎನ್ನುತ್ತಾನೆ. ಯಾವತ್ತೂ ಅವನ ವಿಷಯದಲ್ಲಿ ತಾನು ನ್ಯಾಯವಾಗಿ

ನಡೆದುಕೊಂಡಿದ್ದೇನೆ ಎಂದು ನಂಬಿಸಲು ಯತ್ನಿಸುತ್ತಾನೆ. 'ಹೌದು ನನ್ನ ಕೃತ್ಯಗಳಲ್ಲಿ ಅದು ನಿನಗೆ ಸಾಬೀತಾಗಿಲ್ಲ.' ಈಗ ರೋಡರಿಗೋ ಎಂಥ ದೃಢಮನಸ್ಸಿನ ಮನುಷ್ಯ ಎಂದು ತನಗೆ ಕಾಣುತ್ತಿದೆ. ಆ ಶಕ್ತಿಯನ್ನು ಅವನು ಈ ರಾತ್ರಿ ಪ್ರದರ್ಶಿಸಬೇಕು. ಮತ್ತೆ ಮುಂದಿನ ರಾತ್ರಿಯೇ ಡೆಸ್ಡಿಮೋನಾಳನ್ನು ಅವನು ಪಡೆಯದೇ ಹೋದರೆ ತನಗಾಗಿ ಎಂಥ ಘೋರ ಶಿಕ್ಷೆಗಳನ್ನಾದರೂ ರೂಪಿಸಿ ಈ ಭೂಮಿಯಿಂದಲೇ ಒರೆಸಿಹಾಕಿ ಬಿಡಬಹುದು. ರೋಡರಿಗೋನಿಗೆ ಮತ್ತೂ ಅನುಮಾನ, ಅವನು ಹೇಳುತ್ತಿರುವುದು ಸಾಧ್ಯವಾದದ್ದೇ ಅಲ್ಲವೆ ಎಂದು. ಇಯಾಗೋ ಅವನಿಗೆ ಇಡೀ ಯೋಜನೆಯನ್ನು ವಿವರಿಸಿ ಹೇಳುತ್ತಾನೆ. ಕ್ಯಾಷಿಯೋ ಅಥೆಲೋವಿನ ಸ್ಥಾನವನ್ನು ಗಳಿಸುತ್ತಿದ್ದಾನೆ. ಹಾಗೆಂದಾಕ್ಷಣ ಅಥೆಲೋ ಡೆಸ್ಡಿಮೋನಾಳೊಂದಿಗೆ ವೆನಿಸಿಗೆ ಹೊರಟು ಬಿಡುತ್ತಾನೆಂದಲ್ಲ. ಮಾರಿಟಾನಿಯಾಗೆ ಅವಳೊಂದಿಗೆ ಹೋಗುತ್ತಾನೆ. ಆದರೆ ಅವನು ಹೋಗಲಿಕ್ಕಾಗದಂಥ ಸಂದರ್ಭವೇನಾದರೂ ಏರ್ಪಟ್ಟರೆ ಹೋಗಲು ಆಗುವುದಿಲ್ಲ. ಹೀಗೆ ಹೋಗಲಿಕ್ಕಾಗದಂತೆ ಮಾಡುವುದಕ್ಕೆ ಒಂದೇ ದಾರಿ - ಕ್ಯಾಷಿಯೋನನ್ನು ಇಲ್ಲವಾಗಿಸುವುದು. ರೋಡರಿಗೋಗೆ ಅರ್ಥವಾಗುವುದಿಲ್ಲ. ಇಲ್ಲವಾಗಿಸುವುದು ಎಂದರೆ ? ಅಂದರೆ ಅಥೆಲೋವಿನ ಸ್ಥಾನ ಗಳಿಸದ ಹಾಗೆ ಮಾಡುವುದು. ಅವನ ತಲೆಯನ್ನು ಒಡೆದು ಬಿಡುವುದು. ಈ ಕೆಲಸ ಇಯಾಗೋ ತನ್ನಿಂದ ಮಾಡಿಸಲು ಯತ್ನಿಸುತ್ತಿದ್ದಾನೆಯೆ ಎಂದು ರೋಡರಿಗೋ ಕೇಳುತ್ತಾನೆ. ಹೌದು. ಹಾಗೆ ಮಾಡಿದರೆ ಮಾತ್ರ ಅವನು ತನ್ನ ನ್ಯಾಯ ಸಾಧಿಸಿದಂತೆ. ಈ ರಾತ್ರಿ ಕ್ಯಾಷಿಯೋ ಅವನ ಬೆಲೆವೆಣ್ಣಿನ ಮನೆಗೆ ಊಟಕ್ಕೆ ಹೋಗುತ್ತಿದ್ದಾನೆ. ಅವನಿಗಿನ್ನೂ ತನ್ನ ಹೊಸ ಅದೃಷ್ಟದ ಬಗೆಗೆ ಗೊತ್ತಿಲ್ಲ. ಅವನು ಹೋಗುವ ವೇಳೆಗೆ ಸರಿಯಾಗಿ ನೀನು ಅಡ್ಡ ಹಾಕಿ ಅವನ್ನು ಮುಗಿಸಬೇಕು. ತಾನು ಕೂಡ ಇಲ್ಲಿಯೇ ಇದ್ದು ರೋಡರಿಗೋವಿಗೆ ಸಹಾಯ ಮಾಡುತ್ತೇನೆ. ಅವನ ಸಾವು ಎಷ್ಟು ಅವಶ್ಯಕ ಎಂಬುದನ್ನು ನೀನೇ ಮನಗಾಣುತ್ತಿ. ಊಟದ ವೇಳೆಯಾಗುತ್ತ ಬಂತು. ನಡಿ ಹೊತ್ತು ಹಾಳುಮಾಡಬಾರದು ಎಂದು ಕರೆದುಕೊಂಡು ಹೋಗುತ್ತಾನೆ. ಡೆಸ್ಡಿಮೋನಾಳ ಜೊತೆಗಿನ ದೃಶ್ಯದಲ್ಲಿ ಕೊಂಚ ನೆಮ್ಮದಿ ಕೆಡಿಸಿಕೊಂಡಿದ್ದ ಇಯಾಗೋ ರೋಡರಿಗೋನ ಸಹವಾಸದಲ್ಲಿ ಮತ್ತೆ ತನ್ನ ಸಹಜಸ್ಥಿತಿಗೆ ಮರಳುತ್ತಾನೆ.

ನಾಲ್ಕನೇ ಅಂಕದ ಮೂರನೇ ದೃಶ್ಯದ ಮೊದಲ ಭಾಗದಲ್ಲಿ ಅಥೆಲೋ ಅತಿಥಿ ಲೋಡೊರಿಕೋನೊಂದಿಗೆ ಒಂದಷ್ಟು ದೂರ ನಡೆದು ಹೋಗುವ ನಿರ್ಧಾರ ಮಾಡಿದ್ದಾನೆ. ಹೋಗುವುದಕ್ಕೆ ಮುಂಚೆ ಸಮಾಧಾನದ ದನಿಯಲ್ಲಿ ಹೆಂಡತಿಗೆ ಮಲಗಲು ಹೋಗು ಎಂದು ಹೇಳುತ್ತಾನೆ. ತಾನು ಇಷ್ಟರಲ್ಲಿಯೇ ಹಿಂತಿರುಗುವುದಾಗಿಯೂ ಹೇಳಿ ಡೆಸ್ಡಿಮೋನಾ ತನ್ನ ಸಹಾಯಕ ಹೆಣ್ಣು ಎಮಿಲಿಯಾಳನ್ನು ಕಳಿಸಿಬಿಟ್ಟಿರಲು ಹೇಳುತ್ತಾನೆ. ಮರೆಯದಂತೆ ಹೇಳಿದ್ದನ್ನು ಮಾಡು ಎಂದು ಮತ್ತೆ ಎತ್ತಿ ಹೇಳಿ ಹೊರಡುತ್ತಾನೆ.

ಎಮಿಲಿಯಾಗೆ ಆಶ್ಚರ್ಯ. ಇದೇನು ಅಥೆಲೋ ಸ್ವಲ್ಪ ಹೊತ್ತಿಗೆ ಮುಂಚೆಗಿಂತ ಹೆಚ್ಚು ಮೃದುವಾಗಿ ಕಾಣುತ್ತಿದ್ದಾನಲ್ಲ ಎಂದು. ಅವನು ಇಷ್ಟರಲ್ಲೇ ತಿರುಗಿ ಬರುವವನಿದ್ದಾನೆಂದೂ ಅವನ ಆದೇಶದ ಪ್ರಕಾರ ಎಮಿಲಿಯಾ ಯಜಮಾನಿತಿ ಒಬ್ಬಳನ್ನೇ ಬಿಟ್ಟು ಹೋಗಬೇಕೆಂದೂ ಡೆಸ್ಡಿಮೋನಾ ಹೇಳುತ್ತಾಳೆ. ತನ್ನನ್ನು ಕಳಿಸಿಬಿಡಲು ಹೇಳಿದನೆ ಎಂದು ಅರ್ಥವಾಗದವಳಂತೆ ಕೇಳುತ್ತಾಳೆ ಎಮಿಲಿಯಾ. ''ಹೌದು, ಅದು ಅವನ ಅಪ್ಪಣೆ. ನನ್ನ ರಾತ್ರಿ ಉಡುಪು ಕೊಡು. ಈ ಸಂದರ್ಭದಲ್ಲಿ ನಾವು ಅವನನ್ನು ಅಸಂತೋಷಗೊಳಿಸಬಾರದು.'' ಎಮಿಲಿಯಾ ಆ ಕ್ಷಣದಲ್ಲಿ ತನ್ನ ನಿಜವಾದ ಭಾವನೆಯನ್ನು ಹೇಳಿಬಿಡುತ್ತಾಳೆ – 'ನೀನು ಅವನನ್ನು ಎಂದೂ ನೋಡದೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತು' ಎಂದು. 'ಅಲ್ಲ ನನಗೆ ಹಾಗೆ ಅನ್ನಿಸುವುದಿಲ್ಲ' ಅನ್ನುತ್ತಾಳೆ ಡೆಸ್ಡಿಮೋನಾ.... 'My love doth so approve him / That even his stubbornness, his checks and frowns – prithee unpin me here – have grace and favour in them'. ಈ ನಿಶ್ಚಲ ನಿರ್ಮಲ ಕೊಳದ ಮೇಲೆ ಪುಟ್ಟ ಕಲ್ಲು ಎಸೆದರೂ ಅಷ್ಟೆ, ಹೆಬ್ಬಂಡೆ ಹಾಕಿದರೂ ಅಷ್ಟೆ ಒಂದಷ್ಟು ವರ್ತುಲ ವರ್ತುಲವಾಗಿ ತರಂಗಗಳು ಎದ್ದು ಮತ್ತೆ ಆ ನಿಶ್ಚಲತೆಯಲ್ಲಿ ಕರಗಿಹೋಗುತ್ತವೆ. ಕ್ಷಣಮಾತ್ರ ಪ್ರಕ್ಷುಬ್ಧಗೊಳಿಸಬಹುದಷ್ಟೇ ಈ ಪ್ರಶಾಂತ ಸರೋವರವನ್ನು. ಆಕಾಶದ ನೀಲಿಯನ್ನೇ ಪ್ರತಿಬಿಂಬಿಸುತ್ತ ಅಷ್ಟೇ ತಂಪು ನೀಡುವ ಕೊಳ ಇದು. 'ಅವನ ಹಟಮಾರಿತನ, ನನ್ನ ಮೇಲಿನ ಅವನ ನಿಯಂತ್ರಣಗಳು, ಸಿಡುಕು, ಸೆಡವುಗಳೂ ಕೂಡ ರಮ್ಯತೆ ಸೌಮ್ಯತೆಗಳಿಂದ ಕೂಡಿವೆ. ಎಂದೇ my love doth so approve him'. ಮುಂದುವರೆಯುವುದಕ್ಕೆ ಮುನ್ನ ಡೆಸ್ಡಿಮೋನಾಳ ವ್ಯಕ್ತಿತ್ವದ ಮತ್ತೂ ಅಷ್ಟು ಪರಿಚಯ, ಮತ್ತೂ ಒಂದಷ್ಟು ವಿಶ್ಲೇಷಣೆಯನ್ನು ಮಾಡಿಕೊಳ್ಳಬಹುದೆನಿಸುತ್ತದೆ. ಮೊದಲಿನಿಂದ ಹೇಳುತ್ತಿರುವ ಹಾಗೆ ಅವಳು ಅತ್ಯಂತ ಮುಗ್ಧ ಲಾವಣ್ಯವತಿ ಮಹಿಳೆ ಹೌದು. ಅವಳ ಬಗ್ಗೆ ಅಪಾರ ಗೌರವವೂ, ವಿಶ್ವಾಸವೂ ಹುಟ್ಟುವುದೂ ಸಹಜ. ಸಹೋವರದ ಪ್ರತಿಮೆಗೆ ತಕ್ಕುದಾದ ವ್ಯಕ್ತಿತ್ವ ವೆನಿಸುವುದೂ ಸರಿ. ಆದರೆ ಈ ಮುಗ್ಧತನದ ಅನುಭವದೊಂದಿಗೆ, ಸುತ್ತಲ ಜಗತ್ತಿನೊಡನೆಯ ಹಲವು ಹತ್ತು ರೀತಿಯ ಸಂಬಂಧಗಳೊಂದಿಗೆ ಆಯಾಮಗಳನ್ನು ಪಡೆದುಕೊಳ್ಳುತ್ತ ಹೋಗಬೇಕು. ಮಕ್ಕಳ ಮುಗ್ಧತನಕ್ಕೂ ಪ್ರಬುದ್ಧರ ಮುಗ್ಧತನಕ್ಕೂ ಸಾಕಷ್ಟು ಅಂತರವಿದೆ. ಈ ಲೋಕವು ಎಲ್ಲ ತರದ ಜನಗಳಿಂದಲೂ ತುಂಬಿದೆ ; ನಮ್ಮ ಎಣಿಕೆಗಳಿಗೆ, ಕಲ್ಪನೆಗಳಿಗೆ ಎಟುಕಲಾರದಂಥ ನೂರು ಬಗೆಯ ಗುಣಗಳ ಜನಗಳಿದ್ದಾರೆ. ನಮ್ಮ ಮುಗ್ಧತೆ, ಸ್ವಚ್ಛತೆಗಳನ್ನು ಕಳೆದುಕೊಳ್ಳದೆಯೂ ಇಂಥ ಜನಗಳ ಮಧ್ಯದಲ್ಲಿ ಬದುಕುವುದನ್ನು ನಾವು ಕಲಿಯ ಬೇಕಾಗುತ್ತದೆ. ಮದುವೆಯಂಥ ಸಂಬಂಧದಲ್ಲಿಯಂತೂ ನಮ್ಮ ಮುಗ್ಧತನ, ಸ್ವಚ್ಛತನಗಳು ಗಟ್ಟಿತನವನ್ನು ಪಡೆಯಬೇಕಾಗುತ್ತದೆ. ಅಥೆಲೋ ಪರ್ವತದೆತ್ತರದ ವ್ಯಕ್ತಿಯಿರಬಹುದು. ಅವನು ಸಮುದ್ರದಂಥ ರೌದ್ರ ಭೋರ್ಗರೆತಗಳೂ ಭವ್ಯವಾಗಿ ಕಾಣಬಹುದು. ಆದರೆ

ಅವನೂ ಒಬ್ಬ ಮನುಷ್ಯ ಮಾತ್ರ. ಎಷ್ಟೇ ದೊಡ್ಡವನಾದರೂ ಅವನಲ್ಲಿಯೂ ಮನುಷ್ಯ ಸಹಜ ದೌರ್ಬಲ್ಯಗಳು, ಪೂರ್ವಗ್ರಹಗಳು, ಭಾವಾತಿರೇಕಗಳೂ ಇದ್ದೇ ಇರುತ್ತದೆಂಬ ತಿಳಿವು ವಿಶೇಷವಾಗಿ ಹೆಂಡತಿಯಾದವಳಿಗೆ ಇರಬೇಕು. ಪ್ರೀತಿ ಎಷ್ಟೇ ಆಳದ್ದಾದರೂ ಅದು ಫಲಿಸಬೇಕಾದುದು ಇಂಥ ಮನುಷ್ಯಲೋಕದ ಸಂದರ್ಭದಲ್ಲಿ ಎಂದು ತಿಳಿದಿರಬೇಕು. ಇದನ್ನೇ ನಾನು ಅನುಭವದೊಂದಿಗೆ ನಮ್ಮ ಮುಗ್ಧತನವೂ ಗಟ್ಟಿಯಾಗುತ್ತ ಹೋಗಬೇಕು ಎಂದು ವಿವರಿಸಿದ್ದು. 'My love doth so approve him' ಎಂಬ ಮಾತು ಸತ್ಯವೂ ಹೌದು, ಪ್ರಾಮಾಣಿಕವಾಗಿ ಆಡಿದುದೂ ಹೌದು. ಆದರೆ ಈ ಪ್ರೀತಿ ದಿಟ್ಟವಾಗಿ ಗಂಡನ ರೀತಿನೀತಿಗಳನ್ನು ಪ್ರಶ್ನಿಸುವ, ಎದುರಿಸುವ ಶಕ್ತಿಯನ್ನು ಪಡೆದುಕೊಳ್ಳಬೇಕು. ಉದಾಹರಣೆಗಾಗಿ ಡೆಸ್ಡಿಮೋನಾಳ ಸ್ಥಾನದಲ್ಲಿ 'ಜೂಲಿಯಸ್ ಸೀಸರ್' ನಾಟಕದ ಬ್ರೂಟಸ್‌ನ ಹೆಂಡತಿ ಪೋರ್ಷಿಯಾ ಇದ್ದಿದ್ದರೆ ? ಅಥವಾ 'ಕಿಂಗ್ ಲಿಯರ್' ನಾಟಕದ ಕಾರ್ಡೀಲಿಯಾ ಇದ್ದಿದ್ದರೆ, 'ಮರ್ಚೆಂಟ್ ಆಫ್ ವೆನಿಸ್'ನ ಪೋರ್ಷಿಯಾ ಇದ್ದಿದ್ದರೆ ? ಈ ಮೂರೂ ಪಾತ್ರಗಳೂ ಡೆಸ್ಡಿಮೋನಾಳಷ್ಟೇ ಸುಂದರ ಪಾತ್ರಗಳು. ಅಂತಃಸತ್ವವುಳ್ಳ ದೃಢ ವ್ಯಕ್ತಿತ್ವಗಳು ಅವರದು. ಮುಗ್ಧತನ ಅವರುಗಳ ಪ್ರಧಾನ ಲಕ್ಷಣವೂ ಹೌದು. ಆದರೆ ಮೂರೂ ಪಾತ್ರಗಳೂ ತಮ್ಮ ತಮ್ಮ ಸಂದರ್ಭದಲ್ಲಿ ತಮ್ಮ ವ್ಯಕ್ತಿತ್ವವನ್ನು ಸ್ಥಾಪಿಸುತ್ತಾರೆ. ಅಹಿತವಾದ, ಕ್ರೂರವಾದ ಸಂದರ್ಭಗಳಲ್ಲಿ ಮೂಕರಾಗಿ ಈಡಾಗುವುದಕ್ಕೆ ಒಪ್ಪದ ಪಾತ್ರಗಳು ಅವು. ಡೆಸ್ಡಿಮೋನಾಳ ದುರಂತವಿರುವುದು ಅವಳ ಈ ಲೋಪದಲ್ಲಿ, ಅಥೆಲೋವಿನ stubbornness, checks frowns ತನಗೆ graceful ಆಗಿ ಕಾಣಬಹುದು. ಹಾಗೆ ತಾನು ಎಲ್ಲದರಲ್ಲಿಯೂ ಒಳ್ಳೆಯದನ್ನೇ ಕಾಣುವುದು ತನ್ನ ಜೀವನ ಧರ್ಮವನ್ನಾಗಿ ಮಾಡಿಕೊಂಡಿರಬಹುದು. ಆದರೆ ಮದುವೆಯ ಸಂಬಂಧ ಮುರಿದು ಹೋಗುತ್ತಿದೆ ಎಂಬ ಅರಿವು ಬಾರದೆ ಹೋಗುವುದು ಅತ್ಯಂತ ದುರದೃಷ್ಟಕರ ಸಂಗತಿ. ಕೊಳವನ್ನು ಬತ್ತಿಸ ಹೊರಟ ಶಕ್ತಿಗಳಿಗೆ ಅಪ್ರಜ್ಞಾಪೂರ್ವಕವಾಗಿ ಸಹಾಯಹಸ್ತ ಚಾಚಿದಂತೆ ಆಗಿಬಿಡುತ್ತದೆ ಇದು. ಇಷ್ಟು ಹೇಳಿದ ಮೇಲೂ ಅವಳ ಕುರಿತಾದ ನಮ್ಮ ಅಪಾರ ಗೌರವಾದರಗಳು ಕಿಂಚಿತ್ತೂ ಕಡಿಮೆಯಾಗುವುದಿಲ್ಲ. ಅವಳ ಬಗ್ಗೆ ಪ್ರಬುದ್ಧರೀತಿಯ ಮೆಚ್ಚುಗೆ ಸಹಾನುಭೂತಿಗಳು ಕೊನೆಯವರೆವಿಗೂ ಉಳಿದು ಕೊಂಡು ಬರುತ್ತದೆಂಬ ಅಂಶವನ್ನು ನಾವು ಮರೆಯಲೇಬಾರದು. ಈ ಭಾವನೆಗಳು ಈ ದೃಶ್ಯದ ಮುಂದುವರೆದ ಭಾಗದಲ್ಲಿ ಮತ್ತೂ ಅಷ್ಟು ಗಾಢವಾಗಿ ನಮ್ಮನ್ನು ತಟ್ಟುತ್ತವೆ. ತಾನು ಹಿಂದೆ ಎಮಿಲಿಯಾಗೆ ಹೇಳಿದ್ದಂತೆ ಅವಳು ಹಾಸಿಗೆಗೆ ಪ್ರಸ್ತದ ಹೊದಿಕೆಗಳನ್ನು ಹಾಸಿದ್ದಾಳೆ. ಆದರೆ ಡೆಸ್ಡಿಮೋನಾಳ ಪ್ರತಿಕ್ರಿಯೆ ಇದ್ದಕ್ಕಿದ್ದಂತೆ ಕೊಂಚ ಕುಗ್ಗಿದ ದನಿಯಲ್ಲಿದ್ದಂತೆ ಇದೆ. ತನ್ನ ಹಣೆಬರಹದಲ್ಲಿ ಬರೆದಂತೆ ಆಗಲಿ ಎಂಬಂತೆ ಕೈ ಚೆಲ್ಲಿ ಕೂತ ಹಾಗೆ ಕಾಣುತ್ತಾಳೆ **ಡೆಸ್ಡಿಮೋನಾ**. 'ಎಲ್ಲ ಒಂದೆ....ಒಳ್ಳೆಯದು ಎಷ್ಟು ಮೂರ್ಖತನದ್ದು ನೋಡು. ನಮ್ಮ ಮನಸ್ಸುಗಳು !' ಎಂದವಳು ಈ ನಾಟಕದಲ್ಲಿ ಪ್ರಪ್ರಥಮಬಾರಿಗೆ ದುರಂತದ

ನೆರಳು ತನ್ನ ಮೇಲೆ ಹಾದು ಹೋಗಿರುವ ಅನುಭವವಾಗಿರುವಂತೆ ಮಾತನಾಡುತ್ತಾಳೆ – ವಿಷಾದದಲ್ಲಿ. ಹೌದು; ಆದರೆ ಆತ್ಮಮರುಕದಲ್ಲಿ ಅಲ್ಲ. 'ನಿನಗೂ ಮೊದಲು ನಾನು ಕಣ್ಣು ಮುಚ್ಚಿದರೆ, ಇಲ್ಲಿ ನೋಡು, ಆ ಒಂದು ಹೊದಿಕೆಯಲ್ಲಿಯೇ ನನ್ನ ದೇಹವನ್ನು ಮುಚ್ಚು' ಎಂದೆನ್ನುತ್ತಾಳೆ. ಎಮಿಲಿಯಾ - ನಮ್ಮಹಾಗೆಯೇ - ಹೌಹಾರುತ್ತಾಳೆ. 'ಸಾಕು; ಸಾಕು, ಸುಮ್ಮನೆ ಮಾತನಾಡಬೇಡ' ಎಂದು ಅವಳ ಬಾಯಿ ಮುಚ್ಚಿಸಲು ಯತ್ನಿಸುತ್ತಾಳೆ.

ಡೆಸ್ಡಿಮೋನಾಳಿಗೆ ತನ್ನ ಇಂದಿನ ಸ್ಥಿತಿ ಬಹುಶಃ ಬಹು ಚಿಕ್ಕವಯಸ್ಸಿನಲ್ಲಿಯೇ ಆದ ಒಂದು ಅನುಭವದ ಮೂಲಕ ಸೂಚನೆಗಳನ್ನು ದೊರಕಿಬಿಟ್ಟಿದ್ದವೆ ? ಈಗ ಇದ್ದಕ್ಕಿದ್ದಂತೆ ಆ ನೆನಪು ಯಾಕೆ ತನ್ನನ್ನು ಕಾಡುತ್ತಿದೆ. ಆ ಇಡೀ ಪ್ರಸಂಗ ಒಂದು ರೂಪಕ ಶಕ್ತಿಯನ್ನು ಪಡೆದುಕೊಂಡು ಬಿಟ್ಟಿದೆ ಈಗ. ತನ್ನ ತಾಯಿಯ ಬಳಿ ಒಬ್ಬ ಚಿಕ್ಕವಯಸ್ಸಿನ ಹೆಣ್ಣಾಳು ಇದ್ದಳು. ಬಾರ್ಬರೀ ಎಂದು ಹೆಸರು ಅವಳದು. ಅವಳು ಒಬ್ಬ ಹುಡುಗನನ್ನು ಪ್ರೀತಿಸಿದ್ದಳು. ಆ ಹುಡುಗನಿಗೆ ಹುಚ್ಚು ಹಿಡಿದು ಇವಳನ್ನು ತೊರೆದು ಹೋದ. ಆ ಹುಡುಗಿ ಒಂದು ಹಾಡು ಹೇಳುತ್ತಿದ್ದಳು. ಹಳೆಯ ಹಾಡು ಅದು. ಆದರದು ಆ ಹುಡುಗಿಯ ವಿಧಿಯನ್ನು ಅಭಿವ್ಯಕ್ತಗೊಳಿಸುತ್ತಿತ್ತು. ಮತ್ತೆ ಅವಳು ಆ ಹಾಡು ಹಾಡುತ್ತಲೇ ಕಣ್ಣುಮುಚ್ಚಿದಳು. ಆ ಹಾಡು willow ಹಾಡು. willow ಅಂದರೆ ತೊರೆದು ಹೋದ ಪ್ರಿಯಕರನ ಸಂಕೇತ. ಯಾಕೋ ಏನೋ ಡೆಸ್ಡಿಮೋನಾಳ ನೆನಪಿನಲ್ಲಿ ಈ ಹಾಡು ಈ ಸಂಜೆ ಮತ್ತೆ ಮತ್ತೆ ಮರುಕಳಿಸುತ್ತಿದೆ. ಆ ಹಾಡು ಹಾಡದಿರಲು ತನಗೆ ಸಾಧ್ಯವೇ ಆಗುತ್ತಿಲ್ಲ. ತಲೆಯನ್ನೊಂದು ಕಡೆಗೆ ವಾಲಿಸಿ ನತದೃಷ್ಟ ಬಾರ್ಬರಿಯಂತೆ ಆ ಹಾಡು ಗುನುಗುವುದೇ ನನಗೆ ಈಗ ಮಾಡಲಿಕ್ಕಿರುವುದು. 'ಸರಿ ಎಮಿಲಿಯಾ, ಇನ್ನು ಹೋಗಬಹುದು' ಎಂದು ಅವಳಿಗೆ ಅನುಮತಿ ನೀಡುತ್ತಾಳೆ. 'ಬೇಡ ನನ್ನ ರಾತ್ರಿ ಉಡುಪು ಈಗ ಬೇಡ' ಎಂದವಳು ಇದ್ದಕ್ಕಿದ್ದಂತೆ ಲೋಡೊವಿಕೋ ಒಬ್ಬ ಸಂಭಾವಿತ ಮನುಷ್ಯ ಎಂದೆನ್ನುತ್ತಾಳೆ. ಈ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ತೂರಿ ಬಂದ ಈ ಮಾತು ಸಾಕಷ್ಟು ಗೊಂದಲವುಂಟುಮಾಡುತ್ತದೆ. ತನ್ನ ಚಿಕ್ಕಂದಿನ ಬಾರ್ಬರಿ ಹಾಡು ಎಲ್ಲಿ? ಈ ಲೋಡೊವಿಕೋ ಎಲ್ಲಿ? ಕೆಲವು ವಿಮರ್ಶಕರ ಪ್ರಕಾರ ಈ ಮಾತು ಅವಳು ಆಡುವುದೇ ಇಲ್ಲ – ಎಮಿಲಿಯಾ ಆಡುವುದು. ಬಹುಶಃ ಡೆಸ್ಡಿಮೋನಾಳ ಮನಸ್ಸನ್ನು ಬೇರೆ ಕಡೆ ತಿರುಗಿಸುವ ಯತ್ನವಾಗಿ ಆಡಿದ ಮಾತಿರಬಹುದು ಎಂದು ವಾದಿಸುತ್ತಾರೆ. ಮತ್ತೆ ಕೆಲವರ ವಾದ ಡೆಸ್ಡಿಮೋನಾಳು ತನ್ನ ಕ್ಷೋಭೆಗೊಂಡ ಮನಃಸ್ಥಿತಿಯಲ್ಲಿ ಸಾಂಗತ್ಯವೇ ಇಲ್ಲದ ಮಾತುಗಳನ್ನು ಆಡುತ್ತಿದ್ದಾಳೆ ಎಂದು. ಡೆಸ್ಡಿಮೋನಾಳ ಈ ಮಾತನ್ನು ಪಟಕ್ಕನೆ ಹಿಡಿದುಕೊಂಡು ಅದಕ್ಕೊಂದು ಹೆಚ್ಚಿನ ಅರ್ಥಕೊಡಲು ಬಯಸುತ್ತಾಳೆ ಎಮಿಲಿಯಾ. ಹೌದು ಅವನು ಬಹು ಸುಂದರಪುರುಷ ಎನ್ನುತ್ತಾಳೆ. ಆದರೆ ಡೆಸ್ಡಿಮೋನಾಳಿಗೆ ಇರುವುದು ಅವನ ವ್ಯಕ್ತಿತ್ವದ ಆಕರ್ಷಣೆ : ಅವನು ಬಹು ಸೊಗಸಾಗಿ ಮಾತನಾಡುವುದು ಅವಳಿಗೆ ಆಕರ್ಷಣೆಯಾಗಿರುವುದು. ಎಮಿಲಿಯಾ ಅಲ್ಲಿಗೂ ಬಿಡುವುದಿಲ್ಲ. – ವೆನಿಸಿನ ಹೆಣ್ಣೊಂದು

ಅವನ ತುಟಿಗಳ ಚುಂಬನಕ್ಕಾಗಿ ಪಾಲಸ್ಟೀನ್‌ವರೆಗೆ ಬರಿಗಾಲಲ್ಲಿ ನಡೆದು ಅವನನ್ನು ಅನುಸರಿಸಿ ಹೋಗುತ್ತಿದ್ದಳೆಂಬುದರ ಕುರಿತು ತನಗೆ ಅನುಮಾನವೇ ಇಲ್ಲವೆನ್ನುತ್ತಾಳೆ. ಡೆಸ್ಡಿಮೋನಾಳಿಗೆ ಆ ವೇಳೆಗೆ ಬಾರ್ಬರಿ ಹಾಡು ಒತ್ತಿಕೊಂಡು ಬಂದು ಹಾಡಲಾರಂಭಿಸುತ್ತಾಳೆ.

The poor soul sat sighing, by a sycamore tree,
Sing all a green willow;
Her hand on her bosom, her head on her knee
Sing willow, willow, willow

ಹಾಡುತ್ತಿದ್ದಂತೆ ಯಾವ ಕ್ಷಣವಾದರೂ ಆಥೆಲೋ ಬಂದುಬಿಡಬಹುದು. ನೀನು ಹೊರಡು ಎಂದು ಎಮಿಲಿಯಾಗೆ ಹೇಳುತ್ತಲೇ ಹಾಡು ಮುಂದುವರೆಸುತ್ತಾಳೆ.

The fresh streams ran by her, and murmered her moans,
Sing willow, willow, willow
Her salt tears fell from her, which softoned the stones,
Sing willow, willow, willow

ಎಂಥ ಸಂದರ್ಭದಲ್ಲಿಯೂ ಮನಸ್ಸನ್ನೂ ಹುಳಿಯಾಗಿಸಿಕೊಳ್ಳಬಾರದೆಂಬ ಪಾಠ ಎಷ್ಟು ಚಿಕ್ಕ ವಯಸ್ಸಿನಲ್ಲಿಯೇ ಕಲಿತಿರಬೇಕು ಅವಳು ! ಇದ್ದಕ್ಕಿದ್ದಂತೆ ಬಾಗಿಲು ಶಬ್ದವಾಗಿ ನೋಡು, ಯಾರು ಬಾಗಿಲು ಬಡಿಯುವುದು ಎಂದು ಆತಂಕಪಡುತ್ತಾಳೆ. ಆದರೆ ಅದು ಗಾಳಿಯಷ್ಟೆ ಎಂದು ತಿಳಿದು ಹಾಡಿನ ಕೊನೆಯ ಎರಡು ಸಾಲು ಹಾಡುತ್ತಾಳೆ.

Sing all a green willow must be my garland
Let nobody blame him, his scorn I approve....

ಈ ಇಡೀ ಹಾಡು ಹನಿಹನಿಯಾಗಿ ನಮ್ಮ ಪ್ರಜ್ಞೆಯ ಆಳಕ್ಕೆ ಇಳಿದು ಗಟ್ಟಿ ಪಾಕವಾಗುತ್ತ ಹೋಗುತ್ತದೆ. willow willow willow ಎಂಬ ಪಲ್ಲವಿಯೇ ನಿಟ್ಟುಸಿರುಗೈವ ಶೈಲಿಯಲ್ಲಿದೆ. ಎಲ್ಲೋ ಏಕಾಕಿ ನಿಂತ ಮರದಲ್ಲಿ ಆಡುವ ಗಾಳಿಗೆ ತನ್ನ ಅನಾಥ ಸ್ಥಿತಿಯ ನೂರು ನೆನಪುಗಳು ಕಾಡಿ ಮರೆದೆಲೆಗಳು ಮರ್ಮರಗಟ್ಟಿದಂತೆ ಕೇಳುತ್ತದೆ ಇಡೀ ಹಾಡು. ವಿಷಾದವೆಷ್ಟು ಇದೆಯೋ ಅಷ್ಟೇ ಮಟ್ಟಿಗೆ ಆ ವಿಷಾದಕ್ಕೆ ಗಾಂಭೀರ್ಯದ ನಯವೂ ಇದೆ. ತೀರ ಖಾಸಗಿಯಾಗಿ ಉಸುರಿದ ಈ ಮೆಲುದನಿಯು ಕೇಳುಗನನ್ನು ಹಿಡಿಯಲ್ಲಿ ಹಿಡಿದು ಹಿಂಡುವ ಬಗೆಯ ಶೋಕಗೀತೆ. ಡೆಸ್ಡಿಮೋನಾ ತನ್ನ ಚರಮಗೀತೆಯನ್ನು ಹಾಡಿಕೊಳ್ಳುತ್ತಿದ್ದಾಳೆಯೆ ? ಇದೇ ಅವಳ ಹಂಸಗೀತೆಯೆ ? ಈ ತನ್ನ ನೆನಪಿನ ಹುಡುಗಿಯ ಕತೆಯ ಪ್ರತಿಯೊಂದು ವಿವರವೂ ತನ್ನ ಸ್ಥಿತಿಯನ್ನೇ ಬಿಂಬಿಸುವಂತಿದೆ. ಪ್ರೀತಿ, ಪ್ರಿಯಕರನಿಗೆ ಹಿಡಿದ ಹುಚ್ಚು, ತೊರೆದು ಹೋದ

ದುಃಖ, ಕೊನೆಗೆ ಈ ಎಲ್ಲವೂ ಒಟ್ಟಾರೆ ಸೇರಿ ತನಗೆ ತಂದ ಸಾವು. ಮತ್ತೆ ಆ ಹಾಡಿನಲ್ಲಿಯಂತೆ 'Let nobody blame him, his scorn I approve' ತಾನೂ ಕೂಡ ತನ್ನ ಪ್ರಿಯಕರನನ್ನು ದೂಷಿಸುವುದಿಲ್ಲ, ಅವನ ನಿರಾಕರಣೆಯನ್ನು ತಾನು ಒಪ್ಪಿಕೊಳ್ಳುತ್ತೇನೆ. ಬದುಕಿನಲ್ಲಿ ಪಶ್ಚಾತ್ತಾಪಗಳೂ ಇಲ್ಲ, ದೋಷಾರೋಪಣೆಗಳೂ ಇಲ್ಲ. ಡೆಸ್ಡಿಮೋನಾ ಈ ಹಿಂದೆ ಹೆಸರಿಸಿದ ಶೇಕ್ಸ್‌ಪಿಯರ್‌ನ ನಾಯಕಿಯರ ಬಗೆಯಲ್ಲ ನಿಜ. ಅವಳ ಸೋಲಿಗೆ, ಅವಳ ದುರಂತಕ್ಕೆ ಬಹಳಷ್ಟು ಅವಳ ಪೂರ್ಣಮಟ್ಟದ ಬೇಷರತ್ ಒಳ್ಳೆಯತನವೇ ಕಾರಣ. ಆದರೂ ಒಂದು ಬಗೆಯಲ್ಲಿ ಆ ನಾಯಕಿಯರಿಗಿಂತಲೂ ಒಂದು ಮೆಟ್ಟಿಲು ಮೇಲೆ ಇದ್ದಾಳಲ್ಲವೆ ಎಂದೂ ಅನೇಕ ಬಾರಿ ನನಗೆ ಅನ್ನಿಸಿದೆ. ಅವಳ ಸೋಲು, ದುರಂತಗಳೂ ಕೂಡ ಒಂದು ಬಗೆಯಲ್ಲಿ, ವಿಶಿಷ್ಟ ಅರ್ಥದಲ್ಲಿ ಇಡೀ ಮನುಷ್ಯಕುಲದ ಬದುಕಿನ ಸಾಧ್ಯತೆಗಳ ದೃಷ್ಟಿಯಲ್ಲಿ ಆಶಾದಾಯಕವೇ ಅಲ್ಲವೆ ? ಒಂದು ಬಂಗಾರದ ಕಿರಣವೇ ಅಲ್ಲವೆ ?

ಹಾಡು ಮುಗಿಯುತ್ತಿದ್ದಂತೆ, ಯಾವ ಕ್ಷಣವಾದರೂ ಬರಬಹುದಾದ ಅಥೆಲೋನ ಜ್ಞಾಪಕವಾಗಿ ಎಮಿಲಿಯಾಗೆ ಹೊರಡಲು ಹೇಳುತ್ತಾಳೆ. ಒಳ್ಳೆಯದಾಗಲಿ ಹೋಗಿ ಬಾ. ನನ್ನ ಕಣ್ಣುಗಳು ಉರಿಯುತ್ತಿವೆ. ಇದೇನು ಅಳುವ ಸೂಚನೆಯೋ ಎಂದು ಅಚ್ಚರಿಪಡುತ್ತಾಳೆ. ಶೇಕ್ಸ್‌ಪಿಯರ್ ಒಬ್ಬ ಸಾಧಾರಣ ಮಟ್ಟದ ನಾಟಕಕಾರನಾಗಿದ್ದಿದ್ದರೆ ಈ ದೃಶ್ಯವನ್ನು ಇಲ್ಲಿಗೆ ಮುಕ್ತಾಯ ಮಾಡಿ ಎಮಿಲಿಯಾಳನ್ನು ನಿಷ್ಕ್ರಮಿಸುವಂತೆ ಮಾಡಿಬಿಡುತ್ತಿದ್ದ. ಆದರೆ ಎಂಥ ಮಹಾ ಪ್ರತಿಭಾಶಾಲಿ ನಾಟಕೀಯತೆಯ ಪ್ರಜ್ಞೆ ಅವನದೆಂದರೆ ಈ ದೃಶ್ಯವನ್ನು ಮತ್ತೂ ಮುಂದುವರೆಸುತ್ತಾನೆ – ನಲವತ್ತೈದು ಸಾಲುಗಳಷ್ಟು. ಈ ನಲವತ್ತೈದು ಸಾಲುಗಳಲ್ಲಿ ಡೆಸ್ಡಿಮೋನಾ ಮಾತನಾಡುವುದು ಹದಿಮೂರು ಸಾಲುಗಳು ಮಾತ್ರ, ಮಿಕ್ಕ ಮೂವತ್ತೆರಡು ಸಾಲುಗಳು ಎಮಿಲಿಯಾ ಮಾತನಾಡುವುದು. ನಾಟಕ ಪರಾಕಾಷ್ಠೆಯ ಮಟ್ಟ ಮುಟ್ಟಿದ್ದು, ಈಗಷ್ಟೇ ಡೆಸ್ಡಿಮೋನಾಳ ಬಾಲ್ಯದ ನೆನಪಿನ ಮಧುರಗೀತೆಯನ್ನು ಕೇಳಿದ್ದ ನಮಗೆ ಈ ಕ್ಷಣದಲ್ಲಿ ಎಮಿಲಿಯಾಗೆ ಏನು ಇಷ್ಟೊಂದು ಪ್ರಾಶಸ್ತ್ಯ ಎಂದು ಅನ್ನಿಸಿದರೆ ಅಚ್ಚರಿಯಿಲ್ಲ. ಆದರೂ ಈ ದೃಶ್ಯ ಬಹು ಪ್ರಸ್ತುತವೂ ಹಾಗೂ ಬಹು ವಿಷಯಗಳ ಮೇಲೆ ಬೆಳಕು ಚೆಲ್ಲುವ ದೃಶ್ಯವೂ ಆಗಿದೆ. ಒಬ್ಬ ಸಾಮಾನ್ಯ ಹೆಣ್ಣಿನ ಬಡಬಡಿಕೆಯೆಂದು ಅಸಹನೆ ತೋರಬಾರದು ನಾವು.

ನನ್ನ ಕಣ್ಣುಗಳು ಉರಿಯುವುದು ಅಳುವ ಸೂಚನೆಯೇ ? ಎಂದದ್ದಕ್ಕೆ ಎಮಿಲಿಯಾ ಬಿಡು ಬಿಡು, ಅದಕ್ಕೇನು ವಿಶೇಷ ಅರ್ಥಗಳಿಲ್ಲ ಎಂದು ವಿಷಯವನ್ನು ಮುಗಿಸುತ್ತಾಳೆ. ಆದರೆ ತಾನು ಹಾಗೆ ಕೇಳಿದ್ದೇನೆ ಎಂದು ಡೆಸ್ಡಿಮೋನಾ ಇದ್ದಕ್ಕಿದ್ದಂತೆ 'ಓ ಈ ಗಂಡಸರು, ಈ ಗಂಡಸರು' ಎಂದು ಉದ್ಗಾರ ತೆಗೆದು ಅತ್ಯಂತ ಕುತೂಹಲಿಯಾದವಳಂತೆ ಎಮಿಲಿಯಾಳನ್ನು ಈ ಲೋಕದಲ್ಲಿ ಗಂಡಂದಿರಿಗೆ ದ್ರೋಹ ಬಗೆಯುವ ಹೆಣ್ಣುಗಳಿರುತ್ತಾರೆಯೇ ?.... ಅವರು ಆತ್ಮಸಾಕ್ಷಿ ಪೂರ್ವಕವಾಗಿ ಹಾಗೆ ಮಾಡಬಲ್ಲರೆ ಎಂದು ಕೇಳುತ್ತಾಳೆ. ವಿಚಿತ್ರ ಗಳಿಗೆಯಲ್ಲಿ ವಿಚಿತ್ರ

ಪ್ರಶ್ನೆ. ಎಮಿಲಿಯಾಳ ಪ್ರಕಾರ ಕೆಲವರು ಅಂಥವರಿರಬಹುದು ಎಂದು. ಡೆಸ್ಡಿಮೋನಾ ಎಮಿಲಿಯಾಳನ್ನು ನೇರ ಕೇಳುತ್ತಾಳೆ 'ಈ ಇಡೀ ಜಗತ್ತು ಲಾಭವಾಗುತ್ತದೆ ಎಂದರೂ ನೀನು ಈ ಬಗೆಯ ಕೃತ್ಯಕ್ಕೆ ಇಳಿಯುವೆಯಾ' ಎಮಿಲಿಯಾಗೆ ಆಶ್ಚರ್ಯ. ಯಾಕೆ ಡೆಸ್ಡಿಮೋನಾ ಮಾಡುವುದಿಲ್ಲವೇನು ? ಖಂಡಿತ ಇಲ್ಲ .... ಈ ಸೂರ್ಯಕಿರಣಗಳ ಆಣೆ ಎನ್ನುತ್ತಾಳೆ ಡೆಸ್ಡಿಮೋನಾ. ಅವಳು ಬಳಸುವ ಮಾತು .... 'no, by this heavenly light' ಎಂದು. ಆದರೆ ಎಮಿಲಿಯಾ ಅದರ ಅಕ್ಷರಶಃ ಅರ್ಥವನ್ನು ಮಾತ್ರ ಹಿಡಿದು ತಾನೂ ಅಷ್ಟೆ ಹಾಡು ಹಗಲಲ್ಲಿ ಅಂಥ ಕೃತ್ಯಗಳನ್ನು ಮಾಡುವವಳಲ್ಲ, ಕತ್ತಲಲ್ಲಿ ಈ ಇಂಥವುಗಳಲ್ಲಿ ತೊಡಗುವವಳು ತಾನು ಅನ್ನುತ್ತಾಳೆ. ಅಂದರೆ ಈ ಲೋಕದ ಆಮಿಷಕ್ಕೆ ಇಂಥ ದ್ರೋಹದ ಕೆಲಸ ಮಾಡಬಲ್ಲೆಯಾ ಎಂದು ನಂಬದವಳಂತೆ ಕೇಳುತ್ತಾಳೆ ಡೆಸ್ಡಿಮೋನಾ. ಓ, ಈ ಜಗತ್ತು ಬಹು ವಿಸ್ತಾರವಾದದ್ದು. ನಾವು ಎಸಗುವ ದ್ರೋಹ ಬಹು ಸಣ್ಣ ಪ್ರಮಾಣದ್ದು. ಡೆಸ್ಡಿಮೋನಾಳಿಗೆ ನಂಬಿಕೆ ಯಾಗುವುದಿಲ್ಲ, ಖಂಡಿತ ಎಮಿಲಿಯಾ ಹೀಗೆ ಮಾಡಲಾರಳು ಎಂದೇ ಅವಳ ನಂಬಿಕೆ. ಎಮಿಲಿಯಾಳ ಉತ್ತರ ಇಡೀ ಅವಳ ವ್ಯಕ್ತಿತ್ವದ ಮೇಲೆ ಅಷ್ಟೇ ಅಲ್ಲ, ಅವಳು ಭಾಗವಾಗಿರುವ ವೆನಿಸಿನ ಸಾಮಾಜಿಕ ಮೌಲ್ಯಗಳ ಮೇಲೆ ಕೂಡ ಬೆಳಕು ಚೆಲ್ಲುವಂಥವು. ಅವಳು ಹೇಳುತ್ತಾಳೆ, ನಿಜ ಹೇಳಬೇಕೆಂದರೆ ತಾನು ಹಾಗೆ ಮಾಡುವುದೂ ನಿಜ, ಹಾಗೆ ಮಾಡಿದ್ದನ್ನು ಇಲ್ಲವೆನಿಸುವುದೂ ನಿಜ. ಛೆ. ಛೆ. ಒಂದು ಪುಟ್ಟ ಉಂಗುರಕ್ಕೆ, ಅಂಗೈಅಗಲದ ಭೂಮಿ ಕಾಣಿಕೆ. ಒಂದು ಹೊಸ ಉಡುಪಿಗೆ ಅಥವಾ ಒಂದು ಒಳಲಂಗಕ್ಕೆ ಇಂಥ ಕೆಲಸ ಮಾಡುವವಳಲ್ಲ ತಾನು. ಗಂಡನಿಗೆ ಒಂದು ಚಿಕ್ಕ ಪ್ರಮಾಣದ ದ್ರೋಹ ಬಗೆದರೆ ಅವನು ಚಕ್ರವರ್ತಿಯಾಗುವುದಾದರೆ ಯಾರು ಬೇಡವೆನ್ನುತ್ತಾರೆ. ಇದಕ್ಕಾಗಿ ನರಕಕ್ಕೂ ಕೂಡ ಹೋಗಿ ಬರಬಲ್ಲೆ ತಾನು. ಇಲ್ಲಿದೆ ಅವಳು ಉಸಿರಾಡಿದ ಸಂಸ್ಕೃತಿ. ತೃಣವೂ ಪಾಪಭಾವನೆ ಹೋಗಲಿ, ಕಸಿವಿಸಿಯೂ ಇಲ್ಲದೆ ಈ ಮಾತುಗಳನ್ನಾಡುತ್ತಾಳೆ. ಕೇವಲ ಡೆಸ್ಡಿಮೋನಾಳನ್ನು ಬೆಚ್ಚಿಸುವುದಕ್ಕೂ ಅಲ್ಲ ತಮಾಶೆಗೂ ಅಲ್ಲ. ಅಥವಾ ಎಮಿಲಿಯಾ ಮೂಲತಃ ನೀಚ ಮಟ್ಟದ ಹೆಣ್ಣು ಎಂದೂ ಅಲ್ಲ. ಅವಳು ಕೂಡ ಗೌರವಾನ್ವಿತ ಮನೆಗೆ ಸೇರಿದವಳು. ಇಯಾಗೋವಿನಂಥ ಸಾಕಷ್ಟು ಪ್ರಮುಖ ಪ್ರಜೆಯ ಪತ್ನಿ ಡೆಸ್ಡಿಮೋನಾಳ ಆಪ್ತ ಸಂಗಾತಿ. ಆದರೆ ಅವಳು ನಂಬುವ ಈ ವಿಚಾರಗಳು ಮಾತ್ರ ಅವಳ ವ್ಯಕ್ತಿತ್ವದ ಅಂಗವಾಗಿ, ಬದುಕನ್ನು ನೋಡುವ ರೀತಿಯೇ ಆಗಿಬಿಟ್ಟಿದೆ. ಈ ಕ್ಷಣ ಮುಖ್ಯ. ಕೈಗೆ ಕಾಣುವುದು, ಎಣಿಕೆಗೆ ಬರುವುದು ಮುಖ್ಯ. ಈ ಬ್ರಹ್ಮಾಂಡದ ಅಧಿಪತಿಯಾಗುವುದಾದರೆ ಕಣ್ಣಿಗೆ ಕಾಣದ, ಅಮೂರ್ತಗಳಾದ ಚಾರಿತ್ರ್ಯ, ಆತ್ಮಸಾಕ್ಷಿ, ಪ್ರಾಮಾಣಿಕತೆ ಇವುಗಳಿಗೇನು ಬೆಲೆ ? ಇಂದ್ರಿಯಲೋಕ ಸತ್ಯವಾದದ್ದು. ಪ್ರಜ್ಞೆ ಸೃಷ್ಟಿಸುವ ಲೋಕ ಕನಸಿನ ಜಗತ್ತು. ಗಂಡನಿಗೆ ದ್ರೋಹ ಬಗೆದರೇನು ? ಅದನ್ನು ತಾನು ಮಾಡುತ್ತಿರುವುದು ಅವನಿಗಾಗಿಯೇ ಎಸಗಿದ ತ್ಯಾಗ. ತರ್ಕದ ಜಗತ್ತು ಇದು. ಇದೇ ಲೋಕಕ್ಕೆ ಸೇರುವವರು ವೆನಿಸಿನ ಡ್ಯೂಕ್, ಬ್ರಬಾನ್ಷಿಯೋ, ಕ್ಯಾಷಿಯೋ, ಮಾಂಟನೋ, ಲೋಡೋವಿಕೋ ಇತ್ಯಾದಿಗಳು. ವೆನಿಸಿನ ಡ್ಯೂಕನಿಗೆ ಮತ್ತು

ಪುರಪ್ರಮುಖರಿಗೆ ಅಥೆಲೋನ ಪ್ರೇಮಗಾಥಕ್ಕಿಂತ ಮುಖ್ಯವಾದದ್ದು ತಮ್ಮ ದೇಶದ ರಕ್ಷಣೆ. ಇದು ಮೀರಿ ಎಲ್ಲವೂ ಪ್ರಸ್ತುತಗಳಲ್ಲದ ವೈಯಕ್ತಿಕ ವಿವರಗಳು. ಅವರ ಲೋಕ ಎಷ್ಟು ಸಂಕುಚಿತವೆಂಬುದು ಅವರಾಡುವ ಸವಕಲು ಭಾಷೆಯಲ್ಲಿಯೇ ಧ್ವನಿತವಾಗುತ್ತದೆ. ಬ್ರಬಾನ್ಷಿಯೋಗೆ ತನ್ನ ಮಗಳು ನಿಜವಾಗಿ ಪ್ರೀತಿಸಿರಬಹುದು, ಪ್ರೀತಿ ಎಂಬುದೊಂದು ಯಾರ ಅಂಕೆಗೂ ಸಿಗದ ಅನುಭವ ಎಂದು ಅರ್ಥವೇ ಆಗುವುದಿಲ್ಲ. ಅವನಿಗೆ ಈ ಪ್ರೀತಿ ಅಥೆಲೋನ ಮಾಟ ಮಂತ್ರಗಳ ಪರಿಣಾಮವಾಗಿಯೇ ಆಗಿರಬೇಕೇ ವಿನಾ ಸಹಜವಾಗಿ ಏರ್ಪಡಲು ಸಾಧ್ಯವೇ ಇಲ್ಲ. ಕ್ಯಾಷಿಯೋ ಸಂಪ್ರದಾಯದ ಅರ್ಥದಲ್ಲಿ ಒಬ್ಬ ಸಜ್ಜನ. ಆದರೆ ಅವನ ವ್ಯಕ್ತಿತ್ವ ಎಂಥದು ಎಂಬುದನ್ನು ಅವನು ಬಿಯಾಂಕಳನ್ನು ಒಬ್ಬನೇ ಇದ್ದಾಗ ಹೇಗೆ ನಡೆಸಿಕೊಂಡ, ಇಯಾಗೋ ಪ್ರಶ್ನಿಸಿದಾಗ ಹೇಗೆ ಪ್ರತಿಕ್ರಿಯಿಸಿದ ಎಂಬುದರಲ್ಲಿ ಸ್ಪಷ್ಟವಾಗುತ್ತದೆ. ಸುಲಭವಾಗಿ ಸಿಕ್ಕ ಹೆಣ್ಣು, ತನ್ನ ಒಂಟಿ ಖಾಸಗೀ ಜೀವನದಲ್ಲಿ ಒಂದು ಮನರಂಜನೆ ಅಷ್ಟೆ. ಇಲ್ಲಿಯೂ ಅಷ್ಟೆ, ಅವನು ದುಷ್ಟನೆಂದಲ್ಲ, ನಡೆದುಕೊಳ್ಳುವ ಸಹಜ ರೀತಿ ಅಷ್ಟೆ. ಹಾಗೆಯೇ ಎಮಿಲಿಯಾ. ಲವಲೇಶವೂ ಅವಳಲ್ಲಿ ಸಣ್ಣತನ, ಸ್ವಾರ್ಥಗಳಿಲ್ಲದಿದ್ದರೂ ಯಾರಿಗೂ ಹೆಚ್ಚಿಗೆ ಅನ್ಯಾಯ ವಾಗದೆ ಎಸಗಿದ ಒಂದು ಕ್ಷಣದ ಪುಟ್ಟ ತಪ್ಪಿಗೇಕೆ ಪಶ್ಚಾತ್ತಾಪಪಡಬೇಕು ಎಂಬುದು ಅವಳ ಸಿದ್ಧಾಂತ. ನನಗನ್ನಿಸುವ ಮಟ್ಟಿಗೆ ಈ ಇಡೀ ವೆನಿಸ್ ಲೋಕದ ಸಂಸ್ಕೃತಿಯಿಂದ ಕೊಂಚವೇ ಕೊಂಚ ಭಿನ್ನಳಾಗಿ ಕಾಣುವವಳು ಬಿಯಾಂಕಾ. ಆದರೆ ಅವಳ ಬಗ್ಗೆ ಬಹು ನಿರ್ದಿಷ್ಟವಾಗಿ ಹೇಳುವುದು ಅವಸರದ ಕ್ರಮವೂ ಆಗುತ್ತದೆ. ನಾಟಕದ ಇತರ ಪಾತ್ರಗಳಾದ ಮಾಂಟನೋ, ಲೋಡೊವಿಕೋ, ಗ್ರೇಷಿಯಾನೋ ಎಲ್ಲರೂ ಕೂಡ ಒಂದಲ್ಲ ಒಂದು ಮಟ್ಟದಲ್ಲಿ ಈ ವೆನಿಸಿನ ಸಂಸ್ಕೃತಿಯ ಭಾಗವಾಗಿ ಉಳಿದುಬಿಡುವವರು. ಈ ಸಂಸ್ಕೃತಿಯ ಎರಡು ತುತ್ತತುದಿಯಲ್ಲಿ ನಿಲ್ಲುವವರು ಇಯಾಗೋ ಮತ್ತು ರೋಡರಿಗೋ. ಇಯಾಗೋ ಎಲ್ಲರ ಕಣ್ಣಿನಲ್ಲಿಯೂ ರಾರಾಜಿಸುವ ಮೇಧಾವಿ, ಪ್ರಾಮಾಣಿಕ, ಸರ್ವಜನ ಹಿತೈಷಿ ಹಾಗೂ ನಿಸ್ವಾರ್ಥಿ. ಇಂಥ ಭೋಳೇ ಜಗತ್ತಿನಲ್ಲಿ ಕನಿಷ್ಠ ಬುದ್ಧಿಶಾಲಿಯೂ ಕಂಗೊಳಿಸುವುದಕ್ಕೆ ಸಾಧ್ಯವಿರುವಾಗ ಇಯೋಗನಂಥ ಪ್ರಚಂಡ ಬುದ್ಧಿಶಾಲಿ ತಾರೆಯ ಹಾಗೆ ಬೆಳಗುವುದಕ್ಕೇನು ಕಷ್ಟ ? ಇಂಥ ಭೋಳೇ, ಸವಕಲು ಜಗತ್ತೇ ಸೃಷ್ಟಿಸುವಂಥ ವ್ಯಕ್ತಿ ಇಯಾಗೋ. ರೋಡರಿಗೋ ಒಬ್ಬ ಮಳ್ಳ. ಈ ಜಗತ್ತಿಗೆ ಹೊರ ಪ್ರಪಂಚದಿಂದ ಬಂದು ಇಲ್ಲಿ ಕೂಡಿಕೊಳ್ಳುವುದಕ್ಕೆ, ಒಂದಾಗುವುದಕ್ಕೆ ಯತ್ನಿಸುವುದು ಅಥೆಲೋ. ಈ ವಿವರಗಳನ್ನೆಲ್ಲ ನಾವು ಈಗಾಗಲೇ ನೋಡಿದ್ದೇವೆ. ಈ ಕೆಸರಿನಲ್ಲಿ ಅರಳಿದ ಕಮಲ ಡೆಸ್ಡಿಮೋನಾ. ಕ್ರಮೇಣ ತನ್ನ ಸುತ್ತಲನ್ನೂ ಒಂದು ನಿರ್ಮಲ ಶುಭ್ರ ಕೊಳವಾಗಿಸಿಕೊಂಡು ಪವಿತ್ರವಾಗಿ ಉಳಿದ ಪ್ರಕೃತಿಯ ಶಿಶು ಆಕೆ. ಈ ಸಮಾಜಕ್ಕೆ ಯಾವ ಅರ್ಥದಲ್ಲಿಯೂ ಹೊಂದಿಕೊಳ್ಳದ, ಎಂದೂ ಹೊರಗಿನವಳಾಗೇ ಉಳಿಯುವ ಪಾತ್ರವೆಂದರೆ ಡೆಸ್ಡಿಮೋನಾ. ಅವಳೇ ಇಲ್ಲಿ Outsider, ಈ ಜಗತ್ತಿನೊಡನೆ ಕಟ್ಟ ಕಡೆಯವರೆವಿಗೆ ಶಾಮಿಲಾಗದೇ ಉಳಿಯುವುದು · ಆದ್ದರಿಂದಲೇ ಗರಿಷ್ಠ ಮಟ್ಟದಲ್ಲಿ ಹಿಂಸೆ ಅನುಭವಿಸುವುದು,

ಕೊನೆಗೆ ಸಾವನ್ನೂ ಅಪ್ಪುವುದು. ಇದನ್ನು ಸ್ಪಷ್ಟಪಡಿಸಲೆಂದೇ ಈ ದೃಶ್ಯವನ್ನು ರೂಪಿಸ ಲಾಗಿರುವುದು ಎಂದು ನನಗನ್ನಿಸುತ್ತದೆ. ಎಮಿಲಿಯಾ ಮೂಲಕ ಅವಳ ಅರಿವಿಲ್ಲದೇ, ಈ ಲೋಕವು ಕಡೆಯ ಯತ್ನಮಾಡಿ ಡೆಸ್ಡಿಮೋನಾಳನ್ನು ಸೆಳೆದುಕೊಳ್ಳಲು ಹವಣಿಸುತ್ತದೆ. ಸೋಲುತ್ತದೆ. ಎಮಿಲಿಯಾ ಮಾತುಗಳು ಡೆಸ್ಡಿಮೋನಾಳಿಗೆ ಒಂದಿಷ್ಟೂ ಹಿಡಿಸುವುದಿಲ್ಲ. ಈ ಬ್ರಹ್ಮಾಂಡದಾಸೆಗೂ ತಾನು ಇಂಥ ಕೆಲಸ ಮಾಡುವುದು ಅಸಾಧ್ಯ ಎನ್ನುತ್ತಾಳೆ. ಎಮಿಲಿಯಾ ವಾದ ಬಹು ಸ್ಪಷ್ಟವಾಗಿದೆ. ಈ ಒಂದು ಪುಟ್ಟ ಅಕೃತ್ಯಕ್ಕಾಗಿ ಇಡೀ ಲೋಕವೇ ಗಳಿಸುವುದಾದರೆ, ಆ ಲೋಕ ನಮ್ಮದು ಎಂದಾದ ಮೇಲೆ ನಮ್ಮ ಮೌಲ್ಯಗಳನ್ನು ನಮ್ಮ ಅನುಕೂಲಕ್ಕೇ ಬದಲಿಸಬಹುದಲ್ಲ ಎನ್ನುತ್ತಾಳೆ. ಆದರೂ ಅಂಥ ಒಂದು ಹೆಣ್ಣು ಇರಲಿಕ್ಕೆ ಸಾಧ್ಯವಿಲ್ಲರೆಂದೇ ಡೆಸ್ಡಿಮೋನಾಳ ನಂಬಿಕೆ. ಯಾಕಿಲ್ಲ ಡಜನ್‌ಗಟ್ಟಲೆ ಇದ್ದಾರೆ. ಮತ್ತೂ ಮುಂದುವರೆಯುತ್ತಾಳೆ. ಹೆಣ್ಣು ಹೀಗೆ ವರ್ತಿಸುವುದಾದರೆ ಅದಕ್ಕೆ ಅವರ ಗಂಡಂದಿರದೇ ದೋಷ ಕಾರಣ. ಗಂಡಸಿನ ಸಿಟ್ಟು, ಸೆಡವು, ಅಸೂಯೆ ಅಥವಾ ಅವರ ಪರಸ್ತ್ರೀ ವ್ಯಾಮೋಹ ಇವುಗಳೇ ಕಾರಣ. ನಮ್ಮ ಮೇಲೆ ಮಾತ್ರ ನೀತಿಶಾಸ್ತ್ರಗಳನ್ನು ಆರೋಪಿಸುವ ಗಂಡಸರು, ನಮ್ಮನ್ನು ಥಳಿಸಬಹುದಾದರೆ ಅಥವಾ ನಮ್ಮ ಖರ್ಚಿಗೂ ಅಡ್ಡಿ ಅಂಕೆಗಳನ್ನು ವಿಧಿಸಿದರೆ ? ಯಾಕೆ ನಮಗೂ ಧಾರ್ಷ್ಟ್ಯ, ಸೊಕ್ಕುಗಳು ಇರಬಾರದೇನು ? ನಮ್ಮ ಗಂಡಂದಿರಿಗೂ ತಿಳಿದಿರಲಿ – ತಮ್ಮ ಹೆಂಡತಿಯರಿಗೂ ಸಿಹಿ-ಕಹಿ ಭಾವನೆಗಳಿವೆ ಎಂದು. ನಮ್ಮನ್ನು ಬಿಟ್ಟು ಬೇರೆ ಹೆಣ್ಣುಗಳ ಬೆನ್ನಟ್ಟುವುದೇಕೆ ಅವರು ? ವಿನೋದಕ್ಕಾಗಿಯೇನು ? ಬಹುಶಃ ಇರಬಹುದು. ಪ್ರೀತಿವಿಶ್ವಾಸಗಳು ಕಾರಣವೇನು ? ಅದೂ ಇರಬಹುದು. ಅಥವಾ ಅವರ ದೌರ್ಬಲ್ಯಗಳೋ ? ಅದೂ ಸಾಧ್ಯ. ನಮಗೇನು ಪ್ರೀತಿ ವಿಶ್ವಾಸಗಳಿಲ್ಲವೇನು ? ನಮಗೂ ದೌರ್ಬಲ್ಯಗಳು ಇರಬಾರದೇನು ? ಅವರಿಗೂ ತಿಳಿಯಲಿ – ನಮ್ಮ ದುರ್ನಡತೆಗೆ ಕಾರಣ ಅವರೇ. ಅದನ್ನು ಅವರಿಂದಲೇ ನಾವು ಕಲಿತದ್ದೆಂದು. ಇಂದ್ರಿಯಲೋಕವನ್ನು ಮೀರಿ ಏರಲಾಗದ ಜಗತ್ತಿನ ಅಭೂತಪೂರ್ವ ದರ್ಶನ ಇದು. ಡೆಸ್ಡಿಮೋನಾಳಿಗೆ ಇನ್ನು ಸಾಕು ಎನಿಸಿ ಅವಳಿಗೆ ಶುಭರಾತ್ರಿ ಹೇಳುತ್ತಾಳೆ. ಕೆಟ್ಟದ್ದರಿಂದ ಕೆಟ್ಟದ್ದನ್ನು ಕಲಿಯುವ ಗುಣದಿಂದ ಪಾರು ಮಾಡಿ, ಕೆಟ್ಟದ್ದನ್ನು ಸನ್ಮಾರ್ಗಕ್ಕೆ ತಿರುಗಿಸುವಂಥ ಶಕ್ತಿ ದೇವರು ತನಗೆ ನೀಡಲಿ ಎಂದು ಪ್ರಾರ್ಥಿಸಿ ಈ ದೃಶ್ಯಕ್ಕೆ, ಈ ಅಂಕಕ್ಕೆ ತೆರೆ ಎಳೆಯುತ್ತಾಳೆ. ಡೆಸ್ಡಿಮೋನಾಳ ಈ ಮಹೋನ್ನತ ಗುಣ ಅವಳ ಗೊನೆ ಗಳಿಗೆಯ ಕೊನೆ ಉಸಿರಿನವರೆವಿಗೆ ಉಳಿದು ಬರುತ್ತದೆ. ಅಥೋಲೋವಿನಿಂದ ಹತಳಾಗಿ, ಕುಟುಕು ಜೀವ ಮಾತ್ರವಿದ್ದ ಗಳಿಗೆಯಲ್ಲಿ ಎಮಿಲಿಯಾ 'ಯಾರು ಹೀಗೆ ಮಾಡಿದ್ದು' ಎಂದು ಕೇಳಿದಾಗ 'nobody ; I myself. Farewell / Commend me to my kind lord ; o farewell' ಎಂದು ಕಣ್ಣು ಮುಚ್ಚುತ್ತಾಳೆ. ಅತ್ಯುನ್ನತ ಎತ್ತರದ ಪ್ರೀತಿ, ಧಾರ್ಮಿಕ ಭಾವನೆಗಳನ್ನು ಹೇಗೆ ಸ್ಫುರಿಸುತ್ತದೆ ಎಂಬುದಕ್ಕೆ ಇದು ಸಾಕ್ಷಿ. ಪ್ರೀತಿ ಕೂಡ ಒಂದು ಧರ್ಮವೇ ತಾನೆ ?

ಐದನೇ ಅಂಕದ ಮೊದಲನೇ ದೃಶ್ಯ ಬಹು ಬಿರುಸಿನಿಂದ ಸಾಗುವ ದೃಶ್ಯ. ಇಯಾಗೋನ ಯೋಜನೆಗಳೆಲ್ಲ ಕಾರ್ಯರೂಪಕ್ಕೆ ಬರಲಾರಂಭಿಸುವ ದೃಶ್ಯ. ಇಲ್ಲಿಂದ ಮೊದಲುಗೊಂಡು ಎರಡನೆಯ ದೃಶ್ಯದವರೆವಿಗೂ ಈ ಮಾತು ಹೇಳಬಹುದು. ಆರಂಭದಲ್ಲಿ ರೋಡರಿಗೋನಿಗೆ ಇಯಾಗೋ ಧೈರ್ಯ ತುಂಬುತ್ತಲಿದ್ದಾನೆ. ಕ್ಯಾಷಿಯೋ ಯಾವ ಕ್ಷಣದಲ್ಲಿಯಾದರೂ ಬರಬಹುದು. ಇಲ್ಲೇ ನಿಂತು ತಕ್ಷಣ ಅವನ ಮೇಲೆ ಕತ್ತಿಹಾಯಿಸಬೇಕು. ತಾನು ಪಕ್ಕದಲ್ಲಿಯೇ ಇರುತ್ತೇನೆ. ಈ ಕೃತ್ಯದಿಂದ ನಾವು ಗೆಲ್ಲುತ್ತೇವೆ ಅಥವಾ ಸೋಲುತ್ತೇವೆ. ಜೀವನ್ಮರಣದ ಪ್ರಶ್ನೆ ಇದು ಎಂಬಂತೆ ಎಚ್ಚರಿಕೆ ನೀಡುತ್ತಾನೆ. ರೋಡರಿಗೋನಿಗೆ ಇನ್ನೂ ಧೈರ್ಯ ಸಾಲದು. 'ಪಕ್ಕದಲ್ಲೇ ಇರು, ನನ ಕೈಗಳು ಗುರಿ ತಪ್ಪಬಹುದು' ಎಂದು ಇಯಾಗೋನನ್ನು ಕೇಳಿಕೊಳ್ಳುತ್ತಾನೆ. ಇಲ್ಲಿಯೇ ಇರುತ್ತೇನೆ ಸಿದ್ಧನಾಗು ಎಂದು ಹೇಳಿ ಹೊರಹೋಗುತ್ತಾನೆ. ರೋಡರಿಗೋಗೆ ಈ ಕೆಲಸದಲ್ಲಿ ಆಸಕ್ತಿಯೇ ಇಲ್ಲ. ಆದರೂ ಇಯಾಗೋ ನಂಬಿಕೆಗೆ ಬರುವಂಥ ವಿವರಗಳನ್ನು ನೀಡಿದ್ದಾನೆ. ಏನು ಮಹಾ ಒಬ್ಬ ಮನುಷ್ಯನ ಹತ್ಯೆ ತಾನೆ ? ತಾನು ಸಿದ್ಧ. ಇಯಾಗೋ ಸ್ವಲ್ಪ ದೂರದಲ್ಲಿ ಕಾಣಿಸಿಕೊಂಡು ತನ್ನ ಹಂಚಿಕೆಗಳು ಹೇಗೆ ಕೈಗೂಡುತ್ತವೆ ಎಂದು ನೋಡಲು ಕಾದಿದ್ದಾನೆ. 'ಯಾರು ಯಾರನ್ನಾದರೂ ಕೊಲ್ಲಲಿ ಕ್ಯಾಷಿಯೋ ರೋಡರಿಗೋನನ್ನು ಅಥವಾ ಇವನು ಅವನನ್ನು ಅಥವಾ ಇಬ್ಬರೂ ಸಾಯಲಿ. ನನ್ನ ಕಾರ್ಯ ಸಿದ್ಧಿಸಿದ ಹಾಗೆ. ಈ ರೋಡರಿಗೋ ಬದುಕಿ ಉಳಿದರೆ ಇಂದಲ್ಲ ನಾಳೆ ಡೆಸ್ಡಿಮೋನಾಳಿಗೆಂದು ಅವನಿಂದ ಹಾರಿಸಿದ ತನ್ನ ಹಣ, ಬಂಗಾರ ಎಲ್ಲ ಹಿಂತಿರುಗಿಸಲು ಕೇಳುತ್ತಾನೆ. ಅದು ಆಗಗೊಡಕೂಡದು. ಈ ಕ್ಯಾಷಿಯೋ ಉಳಿದುಕೊಂಡರೆ ಎಂದೂ ಮಾಸದ ತನ್ನ ಪ್ರಭೆಯಿಂದ ನನ್ನನ್ನು ವಿರೂಪಗೊಳಿಸುತ್ತಿರುತ್ತಾನೆ. ಅದಕ್ಕೂ ಹೆಚ್ಚಿನ ಭಯವೆಂದರೆ ಇಂದಲ್ಲ ನಾಳೆ ಮೂರನು ಗುಟ್ಟುಗಳನ್ನೆಲ್ಲ ರಟ್ಟು ಮಾಡಿ ತನ್ನನ್ನೇ ಬಯಲು ಮಾಡಿಬಿಡಬಹುದು. ಅಲ್ಲಿಯೂ ಕೂಡ ತನಗೆ ಅಪಾಯವೇ. ಇಲ್ಲ ಕ್ಯಾಷಿಯೋ ಸಾಯಲೇ ಬೇಕು. ಹಾಗೇ ಆಗಲಿ ಅದು.' ಇಷ್ಟು ಚಿಂತಿಸುವ ವೇಳೆಗೆ ಕ್ಯಾಷಿಯೋ ಅಲ್ಲಿಗೆ ಬರುವ ಸೂಚನೆ ಕಾಣುತ್ತದೆ. ಇಯಾಗೋನಂಥ ಅದಮ್ಯ ಆತ್ಮವಿಶ್ವಾಸದ ವ್ಯಕ್ತಿಗೂ ಗೊತ್ತು – ಪಿತೂರಿಯನ್ನು ಬಹುಕಾಲ ಕದ್ದು ಮುಚ್ಚಿ ಕಾಪಾಡಲಾಗದು ಎಂದು. ಎಲ್ಲರನ್ನೂ ನಾಶಗೊಳಿಸುವ ಹುನ್ನಾರದಲ್ಲಿ ತಾನೂ ನಾಶವಾಗದ ಹಾಗೆ ಎಚ್ಚರ ವಹಿಸಬೇಕು ಅಷ್ಟೆ.

ಕ್ಯಾಷಿಯೋ ಬಂದ ಕೂಡಲೆ ರೋಡರೀಗೋ ಅವನನ್ನು ಇರಿಯುವ ಯತ್ನ ಮಾಡಲು ಹೋಗಿ, ಅವನಿಗಿಂತ ಹೆಚ್ಚು ಚಾಕಚಕ್ಯತೆಯಿಂದ ಆಯುಧ ಬಳಸಬಲ್ಲ ಕ್ಯಾಷಿಯೋನಿಂದ ತಾನೇ ಇರಿಯಲ್ಪಡುತ್ತಾನೆ. 'ಸತ್ತೇ' ಎಂಬ ರೋಡರಿಗೋ ಧ್ವನಿ ಕೇಳಿದ ಕೂಡಲೆ ಇಯಾಗೋವಿಗೆ ಕ್ಯಾಷಿಯೋ ತಪ್ಪಿಸಿಕೊಂಡುಬಿಟ್ಟನೆಂಬ ಆತಂಕ, ತಾನೇ ಮರೆಯಲ್ಲಿ ನಿಂತು ಅವನಿಗೆ ಇರಿಯಲು ಹೋಗಿ ಕಾಲಿಗೆ ಮಾತ್ರ ಪೆಟ್ಟು ತಾಗುವ ಹಾಗೆ ಮಾಡುತ್ತಾನೆ. ಇದೇ ಕ್ಷಣಕ್ಕೆ

ಕಾದಿದ್ದವನಂತೆ ಅಥೆಲೋ ರಂಗದ ತುದಿಯಲ್ಲಿ ಕಾಣಿಸಿಕೊಂಡು ಗಾಯಗೊಂಡ ಕ್ಯಾಷಿಯೋನ ದನಿಕೇಳಿ ಅವನು ಹತ್ಯೆಗೊಂಡನೆಂದು ಪುಲಕಿತನಾಗುತ್ತಾನೆ. ಇಯಾಗೋ ತನ್ನ ಮಾತು ಉಳಿಸಿಕೊಂಡ ಎಂದು ಸ್ನೇಹಿತನಿಗೆ ಮನಸ್ಸಿನಲ್ಲಿಯೇ ಧನ್ಯತೆಯ ಭಾವ ಸೂಚಿಸುತ್ತಾನೆ. ಸುತ್ತಲ ಅರಚಾಟ, ಕಿರುಚಾಟದ ಮಧ್ಯದಲ್ಲಿ ಅಥೆಲೋ ಮಾತ್ರ ಸಂಭ್ರಮಿಸುತ್ತ ನಿಂತಿದ್ದಾನೆ. 'O brave Iago, honest and just, / That hast such noble sense of thy friends wrong, / Thou teachest me, ಪ್ರತೀಕಾರ ತೆಗೆದುಕೊಳ್ಳುವ ವಿಷಯದಲ್ಲಿಯೂ ಅಥೆಲೋನಿಗೆ ಇಯಾಗೋವೇ ಗುರು. ಅವನ ಕುರಿತಾದ ಕೃತಜ್ಞತೆಗೆ ಎಣೆಯೇ ಇಲ್ಲ...ಈಗ ತನ್ನ ಜವಾಬ್ದಾರಿ ನಿರ್ವಹಿಸಬೇಕು. 'Minion your dear lies dead, / And your fate hies apace ; strumpet, I come,' ಎಂದು ತನ್ನ ನಿರ್ಧಾರಕ್ಕೆ ಮತ್ತೂ ಅಷ್ಟು ಕುಮ್ಮಕ್ಕು ನೀಡುವವನಂತೆ Forth of my heart those charms, thine eyes, are blotted.

Thy bed, lust stained, shall with lust's blood be spotted

ಎಂದು ಹೇಳಿಕೊಳ್ಳುತ್ತಾನೆ. ಮನಸ್ಸು ಕಲುಷಿತಗೊಂಡಾಗ ಮಾತುಗಳೂ ಎಷ್ಟು ಸೊರಗಿಕೊಂಡು ಒಣಗಿ ಹೋಗುತ್ತವೆ ಎನ್ನುವುದಕ್ಕೆ ಈ ಕೊನೆಯ ಎರಡು ಸಾಲುಗಳೇ ನಿದರ್ಶನ. ಬಹುಶಃ ಇಡೀ ನಾಟಕದಲ್ಲಿ ಎಲ್ಲಿಯೂ ಕೂಡ ಅಥೆಲೋ ಇಷ್ಟು ಪೇಲವವಾಗಿ, ಅತಿ ನಾಟಕೀಯವಾಗಿ ಮಾತನಾಡಿಯೇ ಇಲ್ಲ. ಅಥೆಲೋ ಅಲ್ಲಿಂದ ನಿಷ್ಕ್ರಮಿಸುತ್ತಾನೆ.

ಇನ್ನು ಮುಂದೆಲ್ಲ ನಡೆಯುವುದನ್ನು ಎರಡು ಮಾತುಗಳಲ್ಲಿ ಹೇಳಬಹುದು. ಈ ಗೊಂದಲದ ಸುದ್ದಿ ಕೇಳಿ ಗ್ರೇಷಿಯಾನೋ, ಲೋಡೊವಿಕೋ ಕೂಡ ಅಲ್ಲಿಗೆ ಬಂದಿದ್ದಾರೆ. ಕ್ಯಾಷಿಯೋಗೆ ಕಾಲು ಮಾತ್ರ ಪೆಟ್ಟಾಗಿದೆ. ರೋಡರಿಗೋ ನೋವಿನಲ್ಲಿ ಅರಚುತ್ತಿದ್ದಾನೆ. ಈ ಇಷ್ಟಕ್ಕೂ ಇವನೇ ಕಾರಣ ಎಂಬಂತೆ ಇಯಾಗೋ ಅವನನ್ನು ತಿವಿದು ಸಾಯಿಸುತ್ತಾನೆ. ರೋಡರಿಗೋವಿಗೆ ಈಗ ಸಾವಿನ ಗಳಿಗೆಯಲ್ಲಿ ಇಯಾಗೋನ ದುಷ್ಟತನದ ಪೂರ್ಣದರ್ಶನವಾಗುತ್ತದೆ. 'O damned Iago, O inhuman dog, oh, oh, oh' ಎಂದು ನರಳುತ್ತಾ ಸಾಯುತ್ತಾನೆ. ಅಲ್ಲಿಗೆ ಬಿಯಾಂಕಾ ಪ್ರವೇಶಿಸುತ್ತಾಳೆ. ಕ್ಯಾಷಿಯೋವಿನ ದುಃಸ್ಥಿತಿ ನೋಡಿ ಗೋಳಾಡುತ್ತಾಳೆ. ಇಯಾಗೋ ಈ ಇಷ್ಟಕ್ಕೂ ಯಾರು ಮೂಲಕಾರಣ ಎಂದು ಶೋಧನೆ ನಡೆಸಿ ಕಡೆಗೆ ಅಲ್ಲಿ ಸತ್ತು ಬಿದ್ದಿರುವವನೇ ಇರಬೇಕೆಂದು ಹತ್ತಿರ ಹೋಗಿ ಅದು ರೋಡರಿಗೋ ಎಂದು ತಿಳಿದು ದಿಗ್ಭ್ರಾಂತಿ ವ್ಯಕ್ತಪಡಿಸುತ್ತಾನೆ. ಅಲ್ಲಿಂದ ಮುಂದಕ್ಕೆ ಒಂದು ಕುರ್ಚಿ ತರಿಸಿ ಕ್ಯಾಷಿಯೋನನ್ನು ಅಲ್ಲಿಂದ ಸಾಗಿಸಲಾಗುತ್ತದೆ. ಬಿಯಾಂಕ ಕಡೆ ತಿರುಗಿ ಅವಳೂ ಕೂಡ ತನ್ನ ಅಳುವಿನಿಂದ ತನ್ನ ಪಾಪಗಳನ್ನು ತೊಳೆದುಕೊಳ್ಳಲಿಕ್ಕೆ ಆಗದು ಎಂದು ಎಚ್ಚರಿಸುತ್ತಾನೆ. ಅಲ್ಲಿಗೆ

ಬಂದ ಎಮಿಲಿಯಾಗೆ ವಿವರಗಳನ್ನು ತಿಳಿಸಿ ಇವೆಲ್ಲ ಸೂಳೆಗಾರಿಕೆಯ ಫಲಗಳು ಎಂದು ತೀರ್ಪು ನೀಡಿಬಿಡುತ್ತಾನೆ. ಕ್ಯಾಷಿಯೋ ಬಿಯಾಂಕಾ ಮನೆಯಲ್ಲಿ ತನ್ನ ಭೋಜನ ಮಾಡಿದ್ದನೆಂದು ತಿಳಿದು ಇಯಾಗೋ, ಎಮಿಲಿಯಾ ಇಬ್ಬರೂ ಕೂಡಿಯೇ ಅವಳನ್ನು ದೂಷಿಸಿ ಈ ಎಲ್ಲ ಅನಾಹುತಕ್ಕೆ ಅವಳೇ ಕಾರಣ ಎಂದೆನ್ನುತ್ತಾರೆ. ಎಮಿಲಿಯಾಗೆ ಹೋಗಿ ಅಥೆಲೋನಿಗೆ ಈ ಎಲ್ಲ ಸುದ್ದಿ ತಿಳಿಸಲು ಹೇಳುತ್ತಾನೆ. ಮಿಕ್ಕೆಲ್ಲರೂ ಕ್ಯಾಷಿಯೋನ ಆರೈಕೆಗೆ ಗಮನ ಕೊಡಬೇಕೆಂದು ಆಶಿಸುತ್ತಾನೆ. ದೃಶ್ಯದ ಕೊನೆಗೆ ತನ್ನ ಎರಡು ಸಾಲುಗಳ ಸ್ವಗತವಾಡುತ್ತಾನೆ.

This is the night
That either makes me or foredoes me quite.

ಈ ದೃಶ್ಯದಲ್ಲಿ ಅರ್ಧ ಕೆಲಸವಾಗಿದೆ, ಕ್ಯಾಷಿಯೋ ಉಳಿದುಕೊಂಡುಬಿಟ್ಟನೆಂಬ ನಿರಾಸೆಯಿದ್ದರೂ ಕೂಡ. ಆದರೆ ಮಿಕ್ಕರ್ಧಭಾಗ ಉಳಿದಿದೆ. ತನ್ನ ಅಳಿವು, ಉಳಿವಿನ ರಾತ್ರಿಯಿದು. ಇಡೀ ನಾಟಕದಲ್ಲಿ ಪ್ರಥಮಬಾರಿಗೆಂಬಂತೆ ಆತಂಕದ ಸ್ಥಿತಿಯಲ್ಲಿದ್ದಾನೆ ಅವನು.

ನಾಟಕದ ಅಂತಿಮ ದೃಶ್ಯ ಇದು. ಅಥೆಲೋ-ಡೆಸ್ಡಿಮೋನಾ ಮದುವೆಯಾದಾಗಿನಿಂದ ಈ ಕ್ಷಣದವರೆವಿಗೆ ಅಡ್ಡಿ ಆತಂಕಗಳಿಲ್ಲದೆ ಆಪ್ತಗಳಿಗೆಗಳನ್ನು ಕಳೆದದ್ದಿಲ್ಲ. ಸುಖವಾಗಿ ನಿದ್ರೆ ಮಾಡಿದ್ದಿಲ್ಲ. ಒಂದೋ ನಾಡಿನ ತುರ್ತುಪರಿಸ್ಥಿತಿ, ಇಲ್ಲವೇ ಹೊರಗೆ ನಡೆಯುವ ಗಲಭೆಗಳು, ಯಾವುದಾದರೊಂದು ಅವರ ಏಕಾಂತವನ್ನು ಅಡ್ಡಿಪಡಿಸಿದೆ. ನಾಲ್ಕನೇ ಅಂಕದ ಮೂರನೇ ದೃಶ್ಯದಲ್ಲಿ ಅಥೆಲೋ ಡೆಸ್ಡಿಮೋನಾಳಿಗೆ ಹೋಗಿ ಮಲಗಲು ಹೇಳಿದ್ದಾನೆ. ತಾನು ಬಹು ಬೇಗ ಬರುವುದಾಗಿಯೂ ಹೇಳಿದ್ದಾನೆ. ಹೀಗಾಗಿ ಈ ದೃಶ್ಯದಲ್ಲಿ ಮೊದಲ ಬಾರಿಗೆಂಬಂತೆ ಅವರನ್ನು ಅವರ ಮಲಗುವ ಕೋಣೆಯಲ್ಲಿ ನೋಡುತ್ತಿದ್ದೇವೆ. ಡೆಸ್ಡಿಮೋನಾ ಈಗಾಗಲೇ ನಿದ್ರೆಯಲ್ಲಿದ್ದಾಳೆ. ಅಥೆಲೋ ಕೈನಲ್ಲಿ ಮೇಣದ ದೀಪ ಹಿಡಿದು ಪ್ರವೇಶಿಸುತ್ತಾನೆ. ಪ್ರಕ್ಷುಬ್ಧತೆಯೆಲ್ಲ ಮಾಯವಾಗಿದೆ. ಮನಸ್ಸು ನಿರಾಳವಾಗಿದೆ. ನಿರ್ಧಾರ ಗಟ್ಟಿಯಾಗಿದೆ.

ಇಯಾಗೋ ತನ್ನ ನಿಷ್ಠೆಯಿಂದ ಮಾತು ಉಳಿಸಿಕೊಂಡು ತನಗೆ ಮಾದರಿಯಾಗಿದ್ದಾನೆ. 'Thou teachest me' ಎಂದು ಅಥೆಲೋ ಅವನಿಗೆ ಗುರುಸ್ಥಾನವನ್ನು ನೀಡಿದ್ದಿನೆ. ಈಗ ಆ ಗುರುವಿಗೆ ತನ್ನ ಕಾಣಿಕೆ ಅರ್ಪಿಸಬೇಕಾಗಿದೆ. ಅದೂ ಅಲ್ಲದೆ ತನ್ನದೇ ಸ್ವಾಭಿಮಾನವಿಲ್ಲವೆ ? ತಾನು ಈಗ ಧೃತಿಗೆಡುವುದೆಂದರೆ ಇಯಾಗೋವಿಗೆ ಅಷ್ಟೇ ಅಲ್ಲ ತನ್ನ ಕಣ್ಣಿನಲ್ಲಿಯೇ ಕೀಳಾಗಿ ಬಿಡುತ್ತೇನೆ. ಮತ್ತು ತಾನು ಯೋಧ, ಸೈನಿಕ. ಶತ್ರು ಯಾರು ಎಂದು ಗುರುತಿಸಿದ ಮೇಲೆ ಶತ್ರು ನಾಶವಾಗಬೇಕು ಅಷ್ಟೆ. ಈ ದೃಶ್ಯದ ಮೊದಲ ಭಾಗದಲ್ಲಿ, ಡೆಸ್ಡಿಮೋನಾ ಎಚ್ಚರವಾಗು ವವರೆಗೆ ಅಥೆಲೋನದು ಒಂದು ಸ್ವಗತವಿದೆ. ಈ ಸ್ವಗತದ ಧಾಟಿ, ಶೈಲಿ ಹಾಗೂ ಗಾಂಭೀರ್ಯ ನಮಗೆ ಅವನು ಮೊದಲ ಅಂಕದ ಮೂರನೇ ದೃಶ್ಯದಲ್ಲಿ ಡ್ಯೂಕನೆದುರು ತನ್ನ –

ಡೆಸ್ಡಿಮೋನಾರ ಪ್ರೀತಿ ಹೇಗೆ ಅಂಕುರಿಸಿತು ಎಂದು ಹೇಳುವಾಗಿನ ಧಾಟಿ, ಶೈಲಿಗಳನ್ನು ನೆನಪು ಮಾಡುತ್ತವೆ. ಆ ದೃಶ್ಯದಲ್ಲಿ ಅಥೆಲೋನಿಗೆ ತಮ್ಮಿಬ್ಬರ ಪ್ರೀತಿಯು ಎಷ್ಟು ಗಾಢವಾದದ್ದು ಎಂದು ಇನ್ನೂ ಸಂಪೂರ್ಣ ಅರಿವಿಗೆ ಬಂದಿರಲಿಲ್ಲ ಎಂದು ನಾವು ನೋಡಿದ್ದೆವು. ಆದ್ದರಿಂದಲೇ ಅವನ ಮಾತುಗಳು ತರ್ಕಬದ್ಧವಾಗಿದ್ದವೇ ಹೊರತು ಒಂದು ಅನುಭವದ ಸಂಕೀರ್ಣ ಗುಣವನ್ನು ಬಿಂಬಿಸಲು ಸಾಧ್ಯವಾಗಿರಲಿಲ್ಲ. 'She loved me for the dangers I had passed / And I loved her that she did pity them' ಎಂದು ಮುಂದೆ ವಾದವೇ ಅನವಶ್ಯಕವೆನ್ನುವಷ್ಟು, ಗಣಿತಶಾಸ್ತ್ರದ ಪ್ರಮೇಯವನ್ನು ಸಾಧಿಸಿ ತೋರಿಸಿದ ಹಾಗೆ ತೋರಿಸಿಬಿಡುತ್ತಾನೆ. ಅದೇ ಶೈಲಿ ಇಲ್ಲಿ ಮತ್ತೆ ಮರುಕಳಿಸುತ್ತದೆ. ವಾದ, ತರ್ಕ, ತೀರ್ಮಾನ ಬಹು ಸ್ಪಷ್ಟವಾಗಿ ಕಾಣುತ್ತದೆ. ರಂಗಪ್ರವೇಶಿಸಿದ ಕೂಡಲೆ ಅಥೆಲೋ 'It is the cause, It is the cause my soul, / Let me not name it to you, you chaste stars' ಎಂದು ಆರಂಭಿಸುತ್ತಾನೆ. ತಾನೊಂದು ದೈವನಿಯಾಮಕಕರ್ತವ್ಯವನ್ನು ನಿರ್ವಹಿಸಬೇಕಾದ ಜವಾಬ್ದಾರಿಯಿದೆ ಎಂಬ ದನಿಯಲ್ಲಿ ಮಾತನಾಡುತ್ತಾನೆ. ಒಂದು 'Cause'ಗಾಗಿ ತಾನು ಈಗ ಬದ್ಧನಾಗಿದ್ದೇನೆ. 'It is the cause, my soul' ಇಲ್ಲಿ 'My soul' ತನ್ನ 'soul'ಗೆ ಹೇಳಿಕೊಂಡದ್ದೋ ಅಥವಾ ಡೆಸ್ಡಿಮೋನಾಳಿಗೆ ಹೇಳುತ್ತಿರುವುದೋ ? ನನ್ನ ಪರಮಪ್ರೀತಿಯ ವಸ್ತುವಾದ ಡೆಸ್ಡಿಮೋನಾಳು ಕೂಡ ತಿಳಿಯಬೇಕು ಮತ್ತು ತನ್ನ ಅಂತರಾತ್ಮವೂ ಸಂಪೂರ್ಣ ತಿಳಿಯಾಗಿರಬೇಕು ಈ ವಿಷಯದಲ್ಲಿ. 'It is the cause' ಆದರೆ ಈ 'cause' ತಾನು ಬಾಯಿಬಿಟ್ಟು ಹೇಳಲಿಕ್ಕಾಗದಂಥ, ಕಸಿವಿಸಿ ಹುಟ್ಟಿಸುವಂಥ ಬಹುಶಃ ಅಸಹ್ಯಗೊಳಿಸುವಂಥದು. ಈ ಜಗತ್ತಿಗೆ, ಆಕಾಶ, ನಕ್ಷತ್ರಗಳಿಗೆ ತಾನು ಬಾಯಿಬಿಟ್ಟು ಹೇಳಲಿಕ್ಕಾಗದು, ಹೇಳಬಾರದು. ಈ ಇಡೀ ಭಾಗದಲ್ಲಿ ಅಥೆಲೋ ಒಬ್ಬ ಅತಿ ಸಾತ್ವಿಕತನದ ನೀತಿವಂತನಂತೆ ಮಾತನಾಡುತ್ತಾನೆ, ಹಾಗೆಯೇ ನಡೆದುಕೊಳ್ಳುತ್ತಾನೆ. ಎರಡನೇ ಅಂಕದಲ್ಲಿ ಡೆಸ್ಡಿಮೋನಾಳ ಪ್ರೀತಿಯಿಂದ ಅನುಭವಿಸಿದ ಭವ್ಯಸ್ಥಿತಿಯನ್ನು ಬಿಂಬಿಸುವ ಅಥೆಲೋನನ್ನಲ್ಲ ನಾವು ಕಾಣುವುದು, ಮೂರನೇ ಮತ್ತು ನಾಲ್ಕನೇ ಅಂಕಗಳಲ್ಲಿ ತನ್ನ ಭಯಂಕರ ಸಂಕಟ, ನರಳಾಟಗಳಲ್ಲಿ ತನ್ನ ಅನುಭವಗಳ ಜೊತೆ ಸೆಣಸಾಡುವ ಅಥೆಲೋನನ್ನಲ್ಲ ನಾವು ಇಲ್ಲಿ ಕಾಣುವುದು ; ಇಲ್ಲಿ ಕಾಣುವುದು ಒಬ್ಬ ನಿರ್ಭಾವುಕ, ಕರ್ತವ್ಯನಿಷ್ಠ ಫಿರ್ಯಾದಿ, ನ್ಯಾಯವಾದಿ ಹಾಗೂ ತೀರ್ಪು ಜಾರಿಗೊಳಿಸುವ ವಧಕಾರ. ಮೊದಲ ಅಂಕದ ಮೂರನೇ ದೃಶ್ಯದಲ್ಲಿಯಂತೆಯೇ ಭಾಷೆ ಇಲ್ಲಿಯೂ ಕೂಡ ತುಂಬ ಆಕರ್ಷಕವಾಗಿದೆ. ಬಹು ಪರಿಣಾಮಕಾರೀ ಪ್ರತಿಮೆಗಳಿವೆ. ಆದರೆ ಅಲ್ಲಿಯಂತೆ ಇಲ್ಲಿಯೂ ಅವು ಪ್ರಭಾವ ಬೀರುವುದಕ್ಕೆ, ತನ್ನನ್ನು ತಾನೇ ಅನುಮಾನಗಳಿಂದ ಪರಿಹರಿಸಿಕೊಂಡು ಗಟ್ಟಿ ಮನಸ್ಸಿನಿಂದ ಹಿಡಿದ ಕಾರ್ಯವನ್ನು ಸಾಧಿಸುವುದಕ್ಕೆ ಬಳಸಿದವು. ಒಳಗೆ ಹಿಂಸೆಯ ನಿರ್ಧಾರವಿರುವಾಗ ಹೊರಗೆ ಕಾವ್ಯ ಸಾಧ್ಯವೇ ಇಲ್ಲ, ಅಲಂಕಾರ ಸಾಧ್ಯ, ಶಬ್ದಾಡಂಬರ ಸಾಧ್ಯ – ಕಾವ್ಯ ಸಾಧ್ಯವಿಲ್ಲ. ಅನುಗ್ರಹ ತೋರುವ ದನಿಯಂತೆಯೇ ಕೇಳಿಬಿಡುವ ಮುಂದಿನ ಸಾಲು ನೋಡೋಣ : Yet I'll not

shed her blood / nor scar that whiter skin of hers than snow / And smooth, as monumental alabaster ;' ಕಿವಿಯಲ್ಲಿ ಮಾರ್ದನಿಸುವ ಮಾತುಗಳು. ಬಹುಶಃ ನವಿರೇಳಿಸುವುವೂ ಕೂಡ ಹೌದು. ಇಂಥ ಕ್ಷಣಗಳಲ್ಲಿ ನಾವು ನಮ್ಮ ಕಟ್ಟೆಚ್ಚರದಲ್ಲಿಲ್ಲದಿದ್ದರೆ ಫ್ಯಾಸಿಸ್ಟರ ಭಾಷೆಯೂ ನಮ್ಮನ್ನು ಸೆರೆಯಲ್ಲಿ ಹಿಡಿದು ಬಿಡಬಹುದು. ಈ ಭೂಮಿಗೇ ಸೇರಿರದ ಅತಿಮಾನವರಂತೆ ನಮ್ಮ ಉತ್ತಮಿಕೆಯ ಭಾವದಲ್ಲಿ ನಮಗೆ ತೋರುವಂತೆ ಕಂಡ ಪಾಪಗಳಿಗೆಲ್ಲ ಅತಿ ಧಾರ್ಮಿಕ ಭಾವನೆಯಲ್ಲಿ ಶಿಕ್ಷೆವಿಧಿಸುತ್ತ ಹೋಗುವುದೇ ಅತ್ಯಂತ ಅಪಾಯಕಾರಿ ಪ್ರವೃತ್ತಿ. 'Yet she must die, else she'll betray more men' ಮಹಾ ದುರಹಂಕಾರದ, ಪರಿಪೂರ್ಣತೆಯ ಸೋಗಿನ ಮಾತುಗಳು. ಮತ್ತೂ ಅಷ್ಟು ಜನಗಳನ್ನು ಮೋಸಗೊಳಿಸದಿರಲಿ ಎಂಬ ಬಹು ಸಾರ್ವಜನಿಕ ಹಿತದೃಷ್ಟಿಯ ಬುದ್ಧಿಯಿಂದ ಪ್ರೇರೇಪಿತವಾದ ನಿರ್ಧಾರ - ಈ ಕೊಲೆ. ಕ್ಷಣಕಾಲ ಪ್ರೀತಿಯಿಂದ, ಮಧುರಬಾಂಧವ್ಯದಿಂದ ಪುಲಕಿತನಾಗಿದ್ದ ಅಥೆಲೋ ಈಗ ಈ ಇಡೀ ಸ್ವಗತದ ಭಾಗದಲ್ಲಿ ಅಂಗುಲ ಅಂಗುಲವೂ ತನ್ನನ್ನು ತಾನು ಈ ಪ್ರೀತಿ, ಈ ಮಾಧುರ್ಯಗಳಿಂದ ಮಲಿನಗೊಂಡವನಂತೆ ಶುದ್ಧೀಕರಿಸಿಕೊಳ್ಳುತ್ತಿದ್ದಾನೆ. ಪಾಪಗಳನ್ನೆಲ್ಲ ತೊಳೆದುಕೊಳ್ಳಲು ಕೈಗೊಂಡಿರುವ ತೀರ್ಥಯಾತ್ರೆ, ಗಂಗಾಸ್ನಾನ ; ತನ್ನ ಕೈಯಲ್ಲಿರುವ ದೀಪ, ಅಲ್ಲಿ ಹಾಸಿಗೆಯಲ್ಲಿ ಮಲಗಿರುವ ಜೀವಜ್ಯೋತಿ ಎರಡನ್ನೂ ನಂದಿಸಬೇಕು ಈಗ. 'Put out the light, and then put out the light'. ಈ ಸಾಲಿನ ಕುರಿತಾಗಿ ಕೆಲವು ಸಂಪಾದಕರು ವಿರಾಮಚಿಹ್ನೆಗಳಲ್ಲಿ ಒಂದು ಬದಲಾವಣೆ ಸೂಚಿಸುತ್ತಾರೆ. 'put out the light and then - put out the light ?' ಎರಡನೆಯ 'put out the light' ಎಂಬುದನ್ನು ಅಥೆಲೋ ತನಗೆ ತಾನೇ ದೀಪ ಆರಿಸುವುದು ಎಂದರೇನು ಎಂದು ಅಚ್ಚರಿಪಟ್ಟು ಕೇಳಿಕೊಳ್ಳುವಂತೆ ಎಂದು ವಿವರಿಸಿದ್ದಾರೆ. ಈಗ ಇರುವ ಹಾಗೆಯೇ ನೋಡಿದರೂ ಅರ್ಥ ಸ್ಪಷ್ಟವಾಗುತ್ತದೆ. ''ಕೈಯಲ್ಲಿರುವ ಈ ದೀಪ ವಾರಿಸು ಮತ್ತು ನಂತರ ದೀಪವಾರಿಸು'' ಎರಡನೇ ದೀಪ ಜೀವದ ಬೆಳಕು ಎಂಬ ಅರ್ಥದಲ್ಲಿ ನೋಡಬಹುದು. ಎರಡನೆಯ ರೂಪದಲ್ಲಿ 'ದೀಪವಾರಿಸು ಮತ್ತೆ.... ದೀಪವಾರಿಸು ?' ದೀಪವಾರಿಸು ಎಂದರೆ ಅರ್ಥವೇನು ? ದೀಪವಾರಿಸಲು ಸಾಧ್ಯವೇ ಎಂದು ಕೇಳಿಕೊಂಡ ರೀತಿ. ತನ್ನ ಸಂದಿಗ್ಧಕ್ಕೆ ತಾನೇ ವಿವರಣೆಯನ್ನು , ಉತ್ತರವನ್ನೂ ಕಂಡುಕೊಳ್ಳುತ್ತಾನೆ.

> If I quench thee, thou flaming minister
> I can again thy former light restore
> Should I repent me ; but once put out thine,
> Thou cunning'st pattern of excelling nature,
> I know not where is that promethean heat
> That can thy light relume ;

ಇಲ್ಲಿ ಬಳಕೆಯಾದ ಅತಿ ಶಕ್ತಿಶಾಲಿ ಶಬ್ದಗಳನ್ನು ನೋಡಿ : 'flaming minister' 'cunning pattern of excelling nature' 'promethean heat' ಮತ್ತು ಹಲವು ಅರ್ಥಗಳಲ್ಲಿ 'light', ಮತ್ತು ಒಟ್ಟಾರೆಯಾಗಿ ಇಡೀ ಆರು ಸಾಲುಗಳೂ ಬಹು ಆಕರ್ಷಕ ಲಯಗಾರಿಕೆಯಲ್ಲಿ ರಚನೆಯಾದವು. ಕೈಯಲ್ಲಿ ಹಿಡಿದಿರುವ ಈ ದೀಪವನ್ನು ನಂದಿಸಿ, ನಂತರ ಪಶ್ಚಾತ್ತಾಪಪಟ್ಟರೆ ಆರಿದ ದೀಪ ಪುನಃ ಹೊತ್ತಿಸಬಹುದು. ಆದರೆ ಉತ್ಕೃಷ್ಟಪ್ರಕೃತಿಯ ಈ ಕಪಟ ಮಾದರಿಯನ್ನು ಒಂದು ಸಾರಿ ನಂದಿಸಿದರೆ ಬ್ರಹ್ಮಾಂಡದ ಯಾವ ಮೂಲೆಯಿಂದ ಬೆಳಕು ತಂದು ಮತ್ತೆ ಉರಿಸಲು ಸಾಧ್ಯವೋ ತಿಳಿಯದು ಎಂದು ಉದ್ಗರಿಸುತ್ತಾನೆ. 'When I have plucked the rose, / I cannot give it vital growth again, / It must needs wither ; ಕುತೂಹಲಕ್ಕಾಗಿ ಈ ಸಾಲುಗಳನ್ನು ಮೂರನೇ ಅಂಕದ ಮೂರನೇ ದೃಶ್ಯದ ಸಾಲುಗಳ ಪಕ್ಕದಲ್ಲಿಟ್ಟು ನೋಡಿದರೆ ನಾನು ಏನನ್ನು ಹೇಳಲು ಯತ್ನಿಸುತ್ತಿದ್ದೇನೆ ಎಂಬುದು ಸ್ಪಷ್ಟವಾಗಬಹುದು ; 'Excellent wretch perdition catch my soul, / But I do love thee, and when I love thee not, / Chaos is come again.'

ತನ್ನ ಗೊಂದಲ ಸ್ಥಿತಿಯ ಸೂಜಿಮೊನೆಗಳು ತನ್ನ ಹೃದಯವನ್ನು ಚುಚ್ಚಿ ಚಿಲುಮೆಯಾಗಿ ಉಕ್ಕಿಸಿದ ಶಬ್ದಗಳು ಇವು. ನಮ್ಮ ಮೇಲೂ ಸಿಡಿದು ಅಂಟಿಕೊಳ್ಳುವ ಮಾತುಗಳು. ಈ ಬಗೆಯ ಗೊಂದಲದ ಸ್ಥಿತಿ ಒಂದೇ ಒಂದು ಕ್ಷಣ ಈ ದೃಶ್ಯದಲ್ಲಿಯೂ ಈ ಸ್ವಗತದಲ್ಲಿಯೂ ಹಣಕಿ ಹಾಕುತ್ತದೆ. ಅವನ ಮನಸ್ಸು ಅಸ್ತವ್ಯಸ್ತಗೊಳ್ಳುವುದು ಕಾಣುತ್ತದೆ. ಅಥೆಲೋನ ಕುರಿತಾಗಿ ಎಷ್ಟೇ ನಿಷ್ಠುರವಾಗಿ ಮಾತನಾಡುತ್ತಿದ್ದರೂ ಅವನು ಡೆಸ್ಡಿಮೋನಾಳನ್ನು ಬಹು ಪ್ರಾಮಾಣಿಕವಾಗಿ ಪ್ರೀತಿಸಿದ್ದನೆಂಬುದು ನಿರ್ವಿವಾದದ ಸಂಗತಿ. ಆ ಪ್ರೀತಿಯನ್ನು ನಿರಾಕರಿಸಿ, ಅಲ್ಲಿ ದ್ವೇಷವನ್ನು ಬಿತ್ತಿ ಈಗ ಹಗೆಸಾಧನೆಗೆ ತಯಾರಿ ನಡೆಸಿದ್ದರೂ ಅವನಲ್ಲಿ ಆಕೆಯ ಕುರಿತಾದ ಭಾವನೆಗಳು ಅಳಿಸಲಾಗದಂಥವು ಎಂಬುದೂ ಕೂಡ ಸತ್ಯದ ಮಾತು. ಎಂದೇ 'I'll smell it on the tree, (Kisser her) A balmy breath, that doth almost persuade, / Justice herself to break her sword / ಔಪಚಾರಿಕವಾಗಿ ಮುತ್ತಿಟ್ಟು ವಿದಾಯ ಹೇಳಲು ಬಗ್ಗಿ ಅವಳ ಮುಖಕ್ಕೆ ಮುಖ ತಂದು ಮುತ್ತಿಟ್ಟ ಗಳಿಗೆಯೇ ಅವಳ ಮುಖದ ಸಾಮೀಪ್ಯ, ತನ್ನ ವೇದನೆ ಯಾತನೆಗಳನ್ನು ಸಾಂತ್ವನಗೊಳಿಸಿಬಿಡುವ ಸತ್ವವುಳ್ಳ ಅವಳ ಉಸಿರಿನ ಸ್ಪರ್ಶ ಅವನನ್ನು ದಿಕ್ಕುಗೆಡಿಸಿಬಿಡುತ್ತದೆ. ನ್ಯಾಯದೇವತೆಯೂ ತನ್ನ ಖಡ್ಗವನ್ನು ತುಂಡರಿಸಿಕೊಂಡು ಬಿಡಬೇಕೆಂದು ಪುಸಲಾಯಿಸಿ ಬಿಡಬಹುದಾದಷ್ಟು ಶಕ್ತಿಯುತವಾದದ್ದು ಇದು. ತರ್ಕವನ್ನೂ ತನ್ನ ನಿರ್ಧಾರವನ್ನೂ ಮೀರಿ ನಿಂತುಬಿಡಬಹುದಾದಂಥ ತನ್ನ ಪ್ರೀತಿಯ ಅನುಭವ ಒಂದು ಕ್ಷಣವಷ್ಟೇ ಆದರೂ ಅನುಭವಿಸಿ ಬಿಡುತ್ತಾನೆ. ಹೀಗೆ ಈ ಸಮ್ಮೋಹನಾಸಕ್ತಿಗೆ ಬಲಿಯಾಗುತ್ತಿರುವ ಪ್ರಜ್ಞೆಯಿದ್ದೂ "once more / Be thus, when thou art dead, And I will kill thee / And love thee after" ಎಂದು ಮತ್ತೆ ಮುತ್ತಿಡುತ್ತಾನೆ. ಈ ಸ್ಪರ್ಶದಿಂದ ಮೈ ಮಾತ್ರ

ಪುಲಕಗೊಂಡಿತೆಂದಲ್ಲ. ಬಹುಶಃ ಅವನ ಇಡೀ ವ್ಯಕ್ತಿತ್ವವೇ ಭಾವಪರವಶಗೊಂಡಿರುವುದೂ ಸ್ಪಷ್ಟ. ಅಥೆಲ್ಲೋ ನಮಗೆ ಆಪ್ತನಾಗುವುದು ಇಂಥ ಗಳಿಗೆಗಳಲ್ಲಿ. once more, and this the last, / So sweet was never so fatal ; I must weep, / But they are cruel tears ; this sorrow is heavenly, / It strikes where it does love. ನಾಲ್ಕನೇ ಅಂಕದ ಮೊದಲನೇ ದೃಶ್ಯದ ಅತೆಲ್ಲೋ ಮತ್ತೆ ಕಂಡುಬಿಡುತ್ತಾನೆ. I must weep – ಏನೂ ಎಗ್ಗಿಲ್ಲದೆ, ಸಂಕೋಚವಿಲ್ಲದೆ. ತನ್ನ ಕಣ್ಣಿನಲ್ಲಿ ಎಂಥ ಗಲಿಗೆಯಲ್ಲಿಯೂ ನೀರುಬರಲು ಸಾಧ್ಯವೆಂದರೆ ಅದಕ್ಕೆ ಒಂದೇ ಅರ್ಥ – ಅವು ಕರುಣೆಯ, ಅನುತಾಪದ ಕಣ್ಣೀರಲ್ಲ – ಆದರೆ ಕ್ರೌರ್ಯಸೂಚಕ ಕಣ್ಣೀರು. ತನ್ನ ದೌರ್ಬಲ್ಯಕ್ಕೆ ತಾನೇ ವಿವರಗಳನ್ನು ಕೊಟ್ಟುಕೊಳ್ಳುತ್ತಿದ್ದಾನೋ ಎಂದು ಅನ್ನಿಸುತ್ತದೆ ನಮಗೆ. ಆದರೆ ಇದೂ ಸತ್ಯ – ಈ ದುಃಖ ದಿವ್ಯವೂ ಅಲೌಕಿಕವೂ ಆದದ್ದು. ಎಂದೇ ತನಗೆ ಇದನ್ನು ಬಾಯಿಬಿಟ್ಟು ಒಪ್ಪಿಕೊಳ್ಳುವುದಕ್ಕೆ ಏನೂ ಹಿಂಜರಿಕೆ ಇಲ್ಲ ಅಥವಾ ನಾಚಿಕೆಯೂ ಇಲ್ಲ. ಪ್ರೀತಿಸುತ್ತಲೇ ಪ್ರಹಾರವೂ ಮಾಡಬಹುದು. ಹೀಗೆ ತನ್ನಷ್ಟಕ್ಕೆ ತಾನು ಈ ವಿರುದ್ಧ ದಿಕ್ಕುಗಳಲ್ಲಿ ತುಯ್ಯುತ್ತಿರುವ ಶಕ್ತಿಗಳ ಸೆಳೆತದಲ್ಲಿ ಮತ್ತೂ ಸ್ವಲ್ಪ ವೇಳ ಸಿಲುಕಿದ್ದಿದ್ದರೆ – ಅಂದರೆ ಡೆಸ್ಡಿಮೋನಾ ಆ ಕ್ಷಣದಲ್ಲಿ ಎಚ್ಚರವಾಗೇ ಇದ್ದುಬಿಡುತ್ತಿದ್ದರೆ – ಏನಾಗುತ್ತಿತ್ತೋ ಹೇಳುವುದು ಕಷ್ಟ. ಆದರೆ ಅವಳಿಗೆ ಈ ಕ್ಷಣದಲ್ಲಿ ಎಚ್ಚರವಾಗಿಬಿಡುತ್ತದೆ. ಅಥೆಲ್ಲೋ ಕೂಡ ಗಮನಿಸಿದ್ದಾನೆ. ಗಂಡ ಮಲಗುವ ಕೋಣೆಗೆ ಬಂದಿರುವುದನ್ನು ನೋಡಿದ್ದಾಳೆ. 'ನೀನೇ ತಾನೇ, ಹಾಗಾದರೆ ಮಲಗು ಬಾ' ಎಂದು ಆಹ್ವಾನಿಸುತ್ತಾಳೆ. ಮುತ್ತಿಟ್ಟಾಗ ಗಲಿಬಿಲಿಗೊಂಡಿದ್ದ ಮನಃಸ್ಥಿತಿ ಡೆಸ್ಡಿಮೋನಾ ಎಚ್ಚೆತ್ತ ಗಳಿಗೆಯಲ್ಲಿಯೇ ಸಂಪೂರ್ಣ ಸ್ತಿಮಿತಕ್ಕೆ ಬಂದು, ತನ್ನ ಪೂರ್ವನಿರ್ಧಾರಕ್ಕೆ ಮತ್ತೆ ಬದ್ಧನಾಗಿ ಭಾವಶೂನ್ಯನಾಗಿ ಅಂದು ರಾತ್ರಿ ಅವಳು ಪ್ರಾರ್ಥನೆ ಸಲ್ಲಿಸಿದ್ದಾಳೆಯೆ ಎಂದು ಕೇಳುತ್ತಾನೆ. ಅವಳು ಹೌದೆಂದುದಕ್ಕೆ ಉತ್ತರವಾಗಿ 'ನೀನು ಯಾವುದಾದರೂ ಪಾಪವನ್ನು ದೇವರ ಮುಂದೆ ಇನ್ನೂ ಒಪ್ಪಿಕೊಳ್ಳದೇ ಇರುವುದು ಇದ್ದರೆ ತತ್‌ಕ್ಷಣದಲ್ಲಿ ಅದನ್ನು ಮಾಡಿ ಮುಗಿಸು' ಎಂದು ದೃಢವಾಗಿ ಹೇಳುತ್ತಾನೆ. ಡೆಸ್ಡಿಮೋನಾಳಿಗೆ ಅವನು ಏನು ಹೇಳುತ್ತಿದ್ದಾನೆಂದು ಅರ್ಥವಾಗುವುದಿಲ್ಲ. ''ಹೇಳಿದಷ್ಟು ಮಾಡು, ಮತ್ತು ಶೀಘ್ರದಲ್ಲಿ ಮುಗಿಸು. ಸಿದ್ಧವಿರದ ನಿನ್ನ ಆತ್ಮವನ್ನು ನಾನು ಕೊಲೆ ಮಾಡಲಾರೆ....ಖಂಡಿತ ಇಲ್ಲ, ದೇವರು ನನ್ನನ್ನು ಕಾಪಾಡಲಿ. ನಿನ್ನ ಜೀವಾತ್ಮವನ್ನು ಸಾಯಿಸಲಾರೆ'' ಮೊದಲ ಬಾರಿಗೆಂಬಂತೆ ಸಾವು ಮತ್ತು ಕೊಲೆಗಳ ಮಾತನಾಡುತ್ತಾನೆ. ಡೆಸ್ಡಿಮೋನಾಳಿಗೆ ಭಯಕ್ಕಿಂತ ಅಚ್ಚರಿ ಯಾಗುತ್ತದೆ. ಇದೇನು ತನಗೆ ಸರಿಯಾಗಿ ಕೇಳಿಸಿತೆ ? ಕೊಲ್ಲುವ ವಿಷಯ ಮಾತನಾಡು ತ್ತಿದ್ದಿಯೇನು ಎಂದದ್ದಕ್ಕೆ ಸ್ಪಷ್ಟವಾಗಿ ಹೌದು ಅದೇ ವಿಷಯ ಮಾತನಾಡುತ್ತಿದ್ದೇನೆ ಎಂದು ಒತ್ತಿ ಹೇಳುತ್ತಾನೆ. 'ಹಾಗಾದರೆ ದೇವರು ನನ್ನ ಮೇಲೆ ಕರುಣೆ ತೋರಲಿ' ಎಂದು ಪ್ರಾರ್ಥಿಸುತ್ತಾಳೆ. 'ಹಾಗೇ ಆಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ' ಎಂದು ದನಿಗೂಡಿಸುತ್ತಾನೆ, ಅಥೆಲ್ಲೋ. ಈ ನಾಟಕದಲ್ಲಿ ನಾವು ಕಂಡ ಹಲವು ಪಾತ್ರಗಳ ಹಲವು ಬಾರಿಯ

ಪ್ರಾರ್ಥನೆಯಂತೆ ಇದೂ ಕೂಡ ಆ ಪಟ್ಟಿಗೆ ಸೇರುತ್ತದೆ. ನಾವು ಗಮನಿಸುತ್ತ ಬಂದಂತೆ ಪ್ರತಿಪ್ರಾರ್ಥನೆಯೂ ಒಂದು ವಿಶಿಷ್ಟ ಸಂದರ್ಭದಲ್ಲಿ ಮಾಡಿದವು. ಆ ಗಳಿಗೆಯ ಒತ್ತಡ, ಆತಂಕಗಳನ್ನು ಬಿಂಬಿಸುವಂಥ ಪ್ರಾರ್ಥನೆಗಳು. ಒಂದು ರೀತಿಯ ವ್ಯಂಗ್ಯವೂ ಈ ಪ್ರಾರ್ಥನೆಗಳಿಗೆ ಅಂಟಿಕೊಳ್ಳುತ್ತವೆ. ಕೊಲ್ಲುವುದಿಲ್ಲ ಎಂದು ಅರ್ಥವೆ ಹಾಗಾದರೆ ? ಡೆಸ್ಡಿಮೋನಾಳಿಗೆ ಅರ್ಥವಾಗುವುದಿಲ್ಲ. ಉತ್ತರವಾಗಿ ಗುರುಗುಟ್ಟುತ್ತಾನಷ್ಟೆ. ಡೆಸ್ಡಿಮೋನಾಳಿಗೆ ಆದರೂ ಹೆದರಿಕೆ. ತಾನು ಯಾತಕ್ಕಾಗಿ ಹೆದರಬೇಕು ಎಂದು ಅವಳಿಗೆ ತಿಳಿಯದು. ಆದರೂ ಅಥೆಲೋನ ಕಣ್ಣುಗಳು ಹಾಗೆ ಹೊರಳಿದರೆ ಮಾರಕವಾಗಿ ಕಾಣುತ್ತವೆ. ತಾನು ಎಂಥ ಪಾಪವೂ ಎಸಗಿಲ್ಲದಿರುವಾಗ ಏಕೆ ಹೀಗೆ ಭಯಪಡಬೇಕು ಎಂದೂ ಅವಳಿಗೆ ತಿಳಿಯದು. ನಿನ್ನ ಪಾಪಗಳ ಕುರಿತು ಚಿಂತಿಸು ಎಂದು ಗುಡುಗಿದ್ದಕ್ಕೆ ಅಷ್ಟೇ ಶಾಂತವಾಗಿ ನಿನ್ನನ್ನು ಪ್ರೀತಿಸಿದ್ದೊಂದೇ ನನಗೆ ಗೊತ್ತಿರುವುದು ಎಂದು ಹೇಳುತ್ತಾಳೆ. ಮತ್ತು ಅದಕ್ಕಾಗಿಯೇ ನೀನು ಸಾಯುತ್ತಿ ಎಂದು ಅವಳ ದೃಷ್ಟಿಯಲ್ಲಿ ಮತ್ತೂ ಒಗಟಿನಂತೆ ಮಾತನಾಡುತ್ತಾನೆ. ಇದೆಂಥ ಶಿಕ್ಷೆ – ಪ್ರೀತಿಗೆ ಮರಣ ದಂಡನೆಯೆ ? ಅವನ ತುಟಿಗಳು ಹಾಗೆ ಕಚ್ಚಿ ಹಿಡಿಯುವುದೇಕೆ ? ಯಾವ ಶಕ್ತಿಗಳು ಅವನ ಇಡೀ ವ್ಯಕ್ತಿತ್ವವನ್ನು ಹೀಗೆ ಥರಗುಟ್ಟಿಸುತ್ತಿವೆಯೋ ಅವಳಿಗೆ ತಿಳಿಯುತ್ತಿಲ್ಲ. ಆದರೆ ಇವು ಶುಭವನ್ನು ಸೂಚಿಸುವುದಿಲ್ಲ ಎಂಬ ಮಾತಂತೂ ಸತ್ಯ. ಹೀಗಿದ್ದೂ ಈ ಕ್ರೋಧ ತನ್ನ ಕುರಿತಾಗಿಯಲ್ಲ ಎಂದು ನಂಬುತ್ತಾಳೆ. ವಿಷಯ ಏನು ತನಗೆ ತಿಳಿಯಲೇ ಬೇಕು ಎಂದು ಮತ್ತೆ ಕೇಳುತ್ತಾಳೆ. ಇಪ್ಪತ್ತು ಸಾಲುಗಳ ಈ ಸುತ್ತುಬಳಸುಗಳನ್ನು ಒಮ್ಮೆಗೇ ಕೈಬಿಟ್ಟು ಅಥೆಲೋ ಮೊದಲ ಬಾರಿಗೆಂಬಂತೆ ತನ್ನ ಕ್ರೋಧಕ್ಕೆ ಹಲವು ಕಾರಣಗಳಲ್ಲಿ ಬಹು ಪ್ರಧಾನವಾದದ್ದು ಬಾಯಿಬಿಟ್ಟು ಹೇಳಿಬಿಡುತ್ತಾನೆ. ಈ ಕೆಲಸ – ನಾವು ಈ ಮೊದಲೇ ಅಂದರೆ ನಾಲ್ಕನೇ ಅಂಕದ ಮೊದಲ ದೃಶ್ಯದ ವಿವರಣೆಯಲ್ಲಿ ಕಂಡುಕೊಂಡಿದ್ದಂತೆ – ಮೊದಲೇ ಮಾಡಿಬಿಟ್ಟಿದ್ದಿದ್ದರೆ ಈ ನಾಟಕ ಈ ಬಗೆಯ ದುರಂತವಾಗುತ್ತಲೇ ಇರಲಿಲ್ಲ. ಆದರೆ ಆ ಕ್ಷಣದಲ್ಲಿ ಯಾತಕ್ಕಾಗಿ ಅವನು ನಿಜವಾದ ಕಾರಣಗಳನ್ನು ಹೇಳುವುದಿಲ್ಲ ಎಂಬುದರ ಕುರಿತೂ ನಾಲ್ಕು ಮಾತು ಆಡಿದ್ದೆವು. ಈಗ ಎಲ್ಲವೂ ಮುಕ್ತಾಯ ಹಂತದಲ್ಲಿದೆ. ಇಲ್ಲಿಗೆ ತಾನು ಬಂದಿರುವುದು ತನ್ನ ನಿರ್ಧಾರವನ್ನು ಕಾರ್ಯಗತಗೊಳಿಸುವುದಕ್ಕೆ ಮಾತ್ರ. ಅವಳ ಯಾವುದೇ ಬಗೆಯ ವಿವರ, ಅದು ಎಷ್ಟೇ ಆಘಾತಕಾರಿಯಾಗಿರಲಿ ತನ್ನನ್ನು ಅಸ್ಥಿರಗೊಳಿಸುವುದಿಲ್ಲ. ಸಾಯುವುದರಲ್ಲಿರುವ ಅವಳು ಏನು ತಾನೇ ತನಗೆ ಶಾಕ್ ಮಾಡಬಲ್ಲಳು ? ತನ್ನದು ಈಗ ಮೇಲುಗೈ. ಆದದ್ದರಿಂದ ಕಾರಣಗಳನ್ನೂ ಅವಳ ಮುಖಕ್ಕೆ ರಾಚಿದರೆ ಏನು ಅಪಾಯವೂ ಇಲ್ಲ ನಷ್ಟವೂ ಇಲ್ಲ.

> That handkerchief which I so loved, and gave thee
> Thou gavest to Cassio....

ಶಾಕ್ ಆಗುವುದು ಡೆಸ್ಡಿಮೋನಾಳಿಗೆ. 'ನನ್ನಾಣೆಗೂ ಇಲ್ಲ....ಅವನನ್ನೇ ಕರೆಸಿ ಕೇಳು'

ಎಂದು ಸ್ಪಷ್ಟವಾಗಿ ಹೇಳುತ್ತಾಳೆ. ಅಥೆಲೋವಿಗೆ ಅವಳ ಬಗ್ಗೆ ದ್ವೇಷವೆಷ್ಟು ಹೊಗೆಯಾಡುತ್ತಿದೆಯೋ ಅಷ್ಟೇ ಮಟ್ಟಿಗೆ ಇಂಥ ಕ್ಷಣದಲ್ಲಿಯೂ ಸುಳ್ಳು ಹೇಳುತ್ತಾಳಲ್ಲ, ಇಷ್ಟು ನಿರ್ಭಿಡೆಯಿಂದ ? ಸಾಯುವ ಪಲ್ಲಂಗದಲ್ಲಿದ್ದೂ ಹೀಗೆ ಸುಳ್ಳು ಪ್ರಮಾಣ ಮಾಡುತ್ತಿದ್ದಾಳಲ್ಲ ? ಹುಚ್ಚು ಹಿಡಿದಂತಾಗುತ್ತದೆ ಅವನಿಗೆ. ಅವಳು ಎಷ್ಟೇ ಕಟುಹೃದಯಿಯಾಗಿ ಪ್ರತಿ ವಿಷಯದಲ್ಲಿಯೂ ಸುಳ್ಳು ಹೇಳಿದರೂ ತನ್ನನ್ನು ನಂಬಿಸಲು ಸಾಧ್ಯವಿಲ್ಲ. ಅಂತೆಯೇ ತನ್ನ ನಿರ್ಧಾರವೂ ಬದಲಿಸಲಾಗುವುದಿಲ್ಲ. ಮತ್ತೂ ಒಂದು ಪ್ರಾರ್ಥನೆ, ಮತ್ತೂ ಒಂದು 'ಹಾಗೆ ಆಗಲಿ' ಎಂಬ ಉತ್ತರ. ಅವನನ್ನು ಬಿಟ್ಟು ತಾನು ಮತ್ತೆ ಯಾರನ್ನೋ ಪ್ರೀತಿಸಿದೆನೆಂಬುದು ಸುಳ್ಳು. ಕ್ಯಾಷಿಯೋನ ವಿಷಯದಲ್ಲಿ ರೀತಿ ರಿವಾಜುಗಳನ್ನು ಮೀರಿ ಎಂಥ ಬಗೆಯ ಆಸಕ್ತಿಯನ್ನೂ ತಾನು ಹೊಂದಿರಲಿಲ್ಲ. ಅವನಿಗೆ ಏನೂ ಕಾಣಿಕೆಗಳನ್ನು ತಾನು ನೀಡಿಲ್ಲ. ಅಥೆಲೋನಿಗೆ ಇಯಾಗೋನ ಮಾತುಗಳು ಥಟ್ಟನೆ ನೆನಪಾಗಿರಬೇಕು ಈಗ :

In venice they do let god see the pranks / They dare not show their husbands : their best conscience / Is not to leave undone, (III iii 206-208) ಎಂಥ ಸುಳ್ಳುಗಳ ಹೆಂಗಸು ಇವಳು. ''ನಿನ್ನ ಹೃದಯವನ್ನು ಇಷ್ಟೆ ಕಲ್ಲಾಗಿಸಿಕೊಂಡು ಸುಳ್ಳು ಹೇಳುತ್ತಿದ್ದಿ. ನಾನು ಈ ಕೊಲೆಯನ್ನು ಬಲಿದಾನವೆಂದು ತಿಳಿದಿದ್ದೆ. ಆದರೆ ನೀನು ಅದನ್ನು ಕೊಲೆಯೇ ಎಂದು ತಿಳಿಯುವಂತೆ ಮಾಡುತ್ತಿದ್ದಿ. ನಾನು ಆ ಕರವಸ್ತ್ರವನ್ನು ಕಣ್ಣಾರೆ ಕಂಡೆ'' ತನ್ನನ್ನು ಇಷ್ಟೊಂದು ಮೋಸಗೊಳಿಸಲು ವೆನಿಸಿನ ಅತ್ಯಂತ ನಿಪುಣ ಸುಳ್ಳುಗಾರನಿಗೂ ಸಾಧ್ಯವಿಲ್ಲ ಎಂಬಂತೆ ಗುಡುಗುತ್ತಾನೆ. ಇವಳು ಪ್ರತಿಬಾರಿ ತಾನು ಮುಗ್ಧಳು ಎಂದು ಕೊಂಡಾಗಲೂ ಅದು ಅವನ ಅಹಂಕಾರಕ್ಕೆ ಪೆಟ್ಟು ಕೊಡುತ್ತಿದೆ. ಆದ್ದರಿಂದಲೇ ಅವನ ನಿರ್ಧಾರ ಮತ್ತೂ ಗಟ್ಟಿಯಾಗುತ್ತಿದೆ. ಕ್ಯಾಷಿಯೋಗೆ ಆ ಕರವಸ್ತ್ರ ಎಲ್ಲೋ ಸಿಕ್ಕಿರಬೇಕು, ತಾನು ಕೊಟ್ಟಿದ್ದಲ್ಲ, ಅವನನ್ನು ಕರೆಕಳಿಸು, ಅವನೇ ಒಪ್ಪಿಕೊಳ್ಳಲಿ, ಸತ್ಯವನ್ನು ಬಾಯಿಬಿಡಲಿ ಎಂದು ಮತ್ತೂ – ಅಥೆಲೋವಿನ ದೃಷ್ಟಿಯಲ್ಲಿ – ಅಳುಕುಗಳೇ ಇಲ್ಲದೆ ಹೇಳುತ್ತಾಳೆ. ಅವನು ಒಪ್ಪಿಕೊಂಡಾಗಿದೆ ಎಂದ ಅಥೆಲೋವಿನ ಮಾತು ನಂಬಲಾರದೆ ಏನು ಹೇಳುತ್ತಿದ್ದಾನೆ ಅವನು ಎಂದು ನಿಬ್ಬೆರಗನ್ನು ವ್ಯಕ್ತಪಡಿಸುತ್ತಾಳೆ. ಏನು ? ಎಂದದ್ದಕ್ಕೆ, ಏನು ಒಪ್ಪಿಕೊಂಡ ಎಂಬ ಅರ್ಥದಲ್ಲಿ – ಅಥೆಲೋ ಉತ್ತರಿಸುತ್ತಾನೆ – 'ತಾನು ನಿನ್ನನ್ನು ಉಪಯೋಗಿಸಿದ್ದೇನೆ' ಎಂದು. ಹೌದು, ನ್ಯಾಯಬಾಹಿರವಾಗಿ ಎಂದು ಹೇಳಿದ್ದಾನೆ ಎಂಬುದನ್ನು ಕೇಳಿ ಡೆಸ್ಡಿಮೋನಾ, ಅವನು ಹಾಗೆ ಹೇಳಲು ಸಾಧ್ಯವೇ ಇಲ್ಲ ಎಂದು ಪ್ರತಿಭಟಿಸುತ್ತಾಳೆ. ಇಲ್ಲ ಹೇಳುವುದಿಲ್ಲ. ಹೇಳಲಿಕ್ಕಾಗದಂತೆ ಅವನ ಬಾಯಿ ಮುಚ್ಚಿಸಿಯಾಗಿದೆ. ಪ್ರಾಮಾಣಿಕ ಇಯಾಗೋ ಅದನ್ನು ಮಾಡಿ ಮುಗಿಸಿದ್ದಾನೆ ಎಂದು ವಿಜಯೋತ್ಸಾಹದಲ್ಲಿ ಸಾರುತ್ತಾನೆ. ಪ್ರಥಮ ಬಾರಿಗೆಂಬಂತೆ ಡೆಸ್ಡಿಮೋನಾ ಅಚ್ಚರಿ, ಭಯ, ಗೊಂದಲಗಳನ್ನೆಲ್ಲ ದಾಟಿಕೊಂಡು ಆವರಿಸಿದ ದುಃಖವನ್ನೂ

ದನಿಯಲ್ಲಿ ಬಿಂಬಿಸುತ್ತಾಳೆ. ''ನನ್ನ ಆತಂಕಗಳು ಪ್ರತಿಧ್ವನಿತವಾಗುತ್ತಿವೆ ; ಹಾಗಾದರೆ ಅವನು ಸತ್ತುಹೋದನೆ ಎಂದು ಮರುಗಿದ್ದಕ್ಕೆ ಅವಳ ದುಃಖವೇ ತನ್ನ ದ್ವೇಷ ಹಾಗೂ ಆಕ್ರೋಶಗಳನ್ನು ದ್ವಿಗುಣಗೊಳಿಸಿದಂತೆ 'Had all his hairs been lives / my great revenge had stomach for them all' ಎಂದು ಅಬ್ಬರಿಸುತ್ತಾನೆ. ಡೆಸ್ಡಿಮೋನಾಳ ದುಃಖ ಈಗ ಕಟ್ಟೆಯೊಡೆಯುತ್ತದೆ. 'Alas, he is betrayed, and I undone' ಎಂದು ಕಣ್ಣೀರಿಡುತ್ತಾಳೆ. ತನ್ನ ಶವದ ಪೆಟ್ಟಿಗೆಯ ಕೊನೆಯ ಮೊಳೆ ತಾನೇ ಹೊಡೆದುಕೊಂಡಾಯಿತು. ಅಥೆಲೋವಿನ ದೃಷ್ಟಿಯಲ್ಲಿ ಮತ್ತೆ ಯಾವ ಪಾಪಕ್ಕೂ ಕಣ್ಣೀರಿಡದೆ, ಪ್ರಾಯಶ್ಚಿತ್ತ ವ್ಯಕ್ತಪಡಿಸದೆ ಈ ಕ್ಯಾಷಿಯೋನ ಸಾವಿಗೆ ಕಣ್ಣೀರಿಡುವುದೆಂದರೆ ಅವನ ಬಗೆಗಿನ ಇವಳ ಪ್ರೀತಿ ಎಷ್ಟು ಗಾಢವಾಗಿದ್ದಿರಬೇಕು ಎಂಬುದರ ಸೂಚನೆ ಎಂದು ಸ್ಪಷ್ಟವಾಯಿತು. ಇಷ್ಟೆ ಇನ್ನು ಮಾತುಗಳು ಇಲ್ಲ 'strumpet, weepest thou for him to my face' ಕದ್ದು ಮುಚ್ಚಿ ಪ್ರೀತಿಸಿದ್ದು ಸಾಲದೆಂಬಂತೆ ಈಗ ನನ್ನ ಕಣ್ಣೆದುರೇ ಅವನಿಗಾಗಿ ಅಳುವುದೆಂದರೆ ? 'ನನ್ನನ್ನು ತಿರಸ್ಕರಿಸು ದಯವಿಟ್ಟು ಕೊಲ್ಲಬೇಡ' ಎಂದು ಗೋಗರೆಯುತ್ತಾಳೆ. 'Down strumpet' ಎಂದು ಅವಳನ್ನು ಹಾಸಿಗೆಯ ಮೇಲೆ ಉರುಳಿಸುತ್ತಾನೆ. 'ನನಗೆ ಸಾವು ನಾಳೆ ಬರಲಿ, ಇಂದು ಬೇಡ' ಮತ್ತೂ ನಿವೇದಿಸುತ್ತಾಳೆ. 'ಒಂದರ್ಧಗಂಟೆ, ಒಂದು ಪ್ರಾರ್ಥನೆ ಸಲ್ಲಿಸುವಷ್ಟು ವೇಳೆ.... 'ಕಟ್ಟಕಡೆಯ ಯತ್ನವೂ ಮಾಡುತ್ತಾಳೆ. 'It is too late', ಅದಕ್ಕೆಲ್ಲ ಈಗ ವೇಳೆಯಾಯಿತು, ಇನ್ನು ತಡೆಯಲು ಸಾಧ್ಯವಿಲ್ಲವೆಂಬಂತೆ ಕತ್ತು ಹಿಸುಕುತ್ತಾನೆ.

'O LOrd, Lord, Lord' ಎಂದು ಉಸಿರು ಅಳಿಸಿ ಹೋಗುತ್ತಿದ್ದಂತೆ ಕ್ಷೀಣಿಸುತ್ತ ಹೋದ ದನಿಯಲ್ಲಿ ಮನವಿ ಮತ್ತು ಪ್ರಾರ್ಥನೆಗಳನ್ನು ಕೂಡಿಸಿ ಸಲ್ಲಿಸುತ್ತಾಳೆ. ಗಂಡನೂ 'Lord', ಕರುಣಾಮಯಿ ದೇವರೂ 'Lord'. ಶೇಕ್ಸ್‌ಪಿಯರನ ನಾಟಕರಚನಾಪ್ರತಿಭೆಗೆ ಮತ್ತೊಂದು ನಿದರ್ಶನ ಇಲ್ಲಿದೆ. ಡೆಸ್ಡಿಮೋನಾಳ 'O Lord...'ಗೆ ಸರಿಸಮವಾಗಿ ಮತ್ತೊಂದು ಗಾಬರಿಗೊಂಡ ದನಿ O Lord, my Lord...what, ho, my Lord, my lord !' ಎಂದು ಅರಚುತ್ತಿದೆ. ಧ್ವನಿ ಎಮಿಲಿಯಾಳದು ಎಂದು ತಿಳಿಯುತ್ತದೆ. ಬಹುಶಃ ಕ್ಯಾಷಿಯೋನ ಸಾವಿನ ಸುದ್ದಿ ತಂದಿರಬೇಕು. ಇದೇನು ಮತ್ತೆ ಶಬ್ದ ? ಇವಳಿನ್ನೂ ಸತ್ತಿಲ್ಲವೆ ? ಇಲ್ಲ ಚಲನೆಯೇ ಇಲ್ಲದೆ ಗೋರಿಯ ಹಾಗೆ ಬಿದ್ದುಕೊಂಡಿದ್ದಾಳೆ. ಎಮಿಲಿಯಾಳನ್ನು ಒಳಗೆ ಬಿಡಬೇಕೆ, ಬೇಡವೆ ? ಬಂದರೆ ತನ್ನ ಹೆಂಡತಿಯೊಡನೆ ಮಾತನಾಡುತ್ತಾಳೆ. 'ನನ್ನ ಹೆಂಡತಿ....ನನಗೆ ಹೆಂಡತಿಯಿಲ್ಲ....' ಹಾಗೆ ಹೇಳಿಕೊಳ್ಳುವುದೇ ಎಂಥ ದಾರುಣ ಅನುಭವ. ಎಂಥ ಅನಿಷ್ಟದ ಗಳಿಗೆ ಇದು ; ಈ ಇಡೀ ವಿಶ್ವ ಸೂರ್ಯಚಂದ್ರಗ್ರಹಣಗಳು ಒಟ್ಟಿಗೇ ಆಗಿದ್ದಂತೆ ಭಯಂಕರವಾಗಿ ಬಿರಿಯುತ್ತಿದೆ.... ಅಥೆಲೋವಿಗೆ ತಾನು ಎಸಗಿದ ಕೃತ್ಯದ ಅರಿವು ಕ್ಷಣಕ್ಷಣಕ್ಕೂ ತನ್ನ ಕಣ್ಣ ಮುಂದೆ, ಮನಸ್ಸಿನಲ್ಲಿ ರುದ್ರಭಯಾನಕ ರೂಪುಗಳು ತಾಳಿ

ನಡುಗಿಸುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಬಹುಶಃ ದೃಶ್ಯದ ಕೊನೆಯ ಭಾಗದಲ್ಲಿ ತನ್ನ ಕೃತ್ಯ ಎಷ್ಟು ಹೀನ, ಪಾಶವೀಯ ಎಂದು ತಿಳಿದ ಮೇಲೆ ಅವನಾಡುವ ಮಾತುಗಳನ್ನು ಬಿಟ್ಟರೆ ಏಕಾಕಿಯಾಗಿ ಈಗ ಆಡಿದ ಈ ಸಾಲುಗಳು ಮನಮುಟ್ಟುವಂಥವು. ಅನೇಕ ಬಾರಿ ಹೇಳಿರುವಂತೆ ಡೆಸ್ಡಿಮೋನಾಳ ಕುರಿತಾದ ಅವನ ಪ್ರೇಮ ಬಹು ಆಳದ್ದು ಹಾಗೂ ಪ್ರಾಮಾಣಿಕವೂ ಆದದ್ದು ಎಂಬುದರಲ್ಲಿ ಎರಡನೇ ಮಾತಿಲ್ಲ. ದುರದೃಷ್ಟದ ಹಾಗೂ ಕೊನೆಯ ದುರಂತವೂ ಆದ ಮಾತೆಂದರೆ ಅವನ ವ್ಯಕ್ತಿತ್ವದ ಆಳದಲ್ಲಿ ಹುದುಗಿಕೊಂಡಿದ್ದ ಅವನ ಬಣ್ಣ, ಹಿನ್ನೆಲೆ, ವಯಸ್ಸು ಇವುಗಳ ಕುರಿತಾದ ಕೀಳರಿಮೆಯ ಭೂತವನ್ನು ಆವಾಹನೆ ಮಾಡಿದ ಇಯಾಗೋನ ಕುಟಿಲ ತಂತ್ರಗಳು ಅವನನ್ನು ಇಡಿಯಾಗಿ ಕಬಳಿಸಿಬಿಟ್ಟ ಮಾತು. ಪ್ರೀತಿ ಕೊನೆಗೂ ಅವನು ತಾತ್ಕಾಲಿಕವಾಗಿ ತೊಟ್ಟುಕೊಂಡಿದ್ದ ರಾಜವಸ್ತ್ರವಾಗಿ ಮಾತ್ರ ಕಂಡು ಮತ್ಸರ, ದ್ವೇಷಗಳ ವ್ಯಾಘ್ರನಖಗಳು ಹರಿದು ಚಿಂದಿ ಮಾಡಿಬಿಟ್ಟಂತೆ ಅನ್ನಿಸುತ್ತದೆ. ಅವನು ಎಸಗಿದ ಈ ಘೋರ ಪಾತಕದ ಬಗ್ಗೆ ಎಳ್ಳಷ್ಟೂ ಕ್ಷಮೆ ಸಾಧ್ಯವಿಲ್ಲದಿದ್ದರೂ – ಯಾವ ಕೊಲೆಯೂ, ಹಾಗೆ ನೋಡಹೋದರೆ – ಕ್ಷಮಾರ್ಹವಲ್ಲ – ವ್ಯಕ್ತಿಯಾಗಿ ಅಥೆಲೋನ ಬಗ್ಗೆ ಅಪಾರ ಕನಿಕರ ಅನುಕಂಪಗಳು ಮಾತ್ರ ಸಾಧ್ಯ. ಡೆಸ್ಡಿಮೋನಾಳ ವಿಷಯದಲ್ಲಿ ಹೇಳಿದ ಹಾಗೆಯೇ ಅಥೆಲೋ ಕೂಡ ಒಬ್ಬ ಬ್ರೂಟಸ್‌ನಂತೆ, ಹ್ಯಾಮ್‌ಲೆಟ್‌ನಂತೆ ಅಥವಾ ಸೀಸರ್‌ನಂತೆ ಇದ್ದಿದ್ದರೆ ಇಯಾಗೋನಂಥವನು ಅವನ ಹತ್ತಿರ ಸುಳಿಯುವುದೂ ಸಾಧ್ಯವಿರುತ್ತಿರಲಿಲ್ಲ. ಅವರುಗಳಂತೆಯೇ ಅಥೆಲೋನಿಗೂ ಪೌರುಷವಿದೆ, ಶ್ರೀಮಂತ ಮನಸ್ಸಿದೆ, ಕೀರ್ತಿಗೌರವಗಳಿಗೆ ಹಾಗೂ ಬಹುಮುಖ್ಯವಾಗಿ ಅವರಂತೆಯೇ ಅವನ ವ್ಯಕಿತ್ತ್ವದಲ್ಲಿಯೂ ಒಂದು ಎಳೆಯಷ್ಟಾದರೂ ಕಾವ್ಯಮಮತೆಯಿದೆ. ಆದರೆ ತನ್ನ ನೆಲವಲ್ಲದ, ತನ್ನ ಜಲವಲ್ಲದ, ತನ್ನ ಸಂಸ್ಕೃತಿಯಲ್ಲದ ಪರಕೀಯ ಪರಿಸರದಲ್ಲಿ ಬೇರು ಬಿಡಲು ಹೋಗಿ ಸೋಲುತ್ತಾನೆ. ಚಿಗುರುವುದಕ್ಕೆ ಮುನ್ನವೇ ಪಲ್ಲಟಗೊಂಡು ಬಿಸಿಲಿಗೆ ಬಿದ್ದು ಒಣಗಿ ಹೋಗುತ್ತದೆ ಅವನ ಪ್ರೀತಿ, ಬದುಕು.

ಮುಂದೆ ಆಗುವುದೆಲ್ಲವೂ ನಿರೀಕ್ಷಿತ ರೀತಿಯಲ್ಲಿ ಜರುಗುತ್ತದೆ. ಎಮಿಲಿಯಾಳಿಗೆ ವಿಷಯ ತಿಳಿಯುತ್ತದೆ. ತನ್ನ ಗಂಡನೇ ಈ ಇಷ್ಟು ದುರಂತನಾಟಕದ ಸೂತ್ರಧಾರ ಎಂದು ತಿಳಿದು ಅವಮಾನದಲ್ಲಿ, ಸಿಟ್ಟಿನಲ್ಲಿ ಥರಥರಗುಟ್ಟಿಬಿಡುತ್ತಾಳೆ. ಒಂದು ಕ್ಷಣ, ಕರವಸ್ತ್ರದ ಪ್ರಸಂಗ ಬಂದಾಗ, ತನ್ನ ಪಾಲೂ ದುರಂತದಲ್ಲಿ ಸೇರಿದ ಎಂದು ಹಠಾತ್ ಪ್ರಜ್ಞೆಯಿಂದ ಗುಟ್ಟಾಗಿ ನಲುಗಿ ಹೋಗಿರಬೇಕು ಅವಳು. ತನ್ನ ಯಜಮಾನಿತಿಯನ್ನು ಪ್ರೀತಿಸಿದ್ದವಳು, ಗೌರವಿಸಿದ್ದವಳು ಮತ್ತು ಅವಳಿಗೆ ತುಂಬ ಹತ್ತಿರವಾಗಿದ್ದವಳು. ತನ್ನ ಸಲಿಗೆಯಲ್ಲಿ ಅವಳನ್ನು ಈ ಮದುವೆ ಮತ್ತು ಅವಳ ಗಂಡನ ಬಗ್ಗೆ ಎಚ್ಚರಿಸಿದ್ದವಳು. 'ನೀನು ಅವನನ್ನು ಎಂದೂ ನೋಡದೇ ಇದ್ದಿದ್ದರೆ ಚೆನ್ನಿರುತ್ತಿತ್ತು' ಎನ್ನುವವರೆವಿಗೆ ಅವಳ ಒಳಿತನ್ನು ಹಾರೈಸಿದ್ದವಳು. ಅಥೆಲೋ ತನ್ನ ಧಣಿ. ಆದರೆ ಈಗ ಅವಳ

ಕಣ್ಣಿನಲ್ಲಿ ಒಬ್ಬ ನೀಚ ಕೊಲೆಗಾರ. 'ಧಗಧಗಿಸುವ ನರಕದ ಕೂಪಕ್ಕೆ ಬಿದ್ದ ಸುಳ್ಳುಗಾತಿ ಡೆಸ್ಡಿಮೋನಾ' ಎಂದು ಅಥೆಲೋ ತನ್ನ ಬಾಯಿಮುಚ್ಚಲು ಯತ್ನಿಸಿದಾಗ ಎಮಿಲಿಯಾ 'O, the more angel she / And you the blacker devil' ಕಾಣುವುದಕ್ಕಿಂತಲೂ ಕಪ್ಪು ರಾಕ್ಷಸ ನೀನು ಎಂದು ಅಷ್ಟೇ ಕಟುವಾಗಿ ಮಾತನಾಡುತ್ತಾಳೆ. ಇಯಾಗೋನ ದುಷ್ಟತನಗಳೆಲ್ಲ ಬಯಲಿಗೆ ಬಂದು, ತಾನು ಎಸಗಿದ ಕೊಲೆಯ ನಿಜವಾದ ಅನುಭವ ಕ್ಷಣಕ್ಷಣಕ್ಕೆ ವಿಷವೇರಿದಂತೆ ವ್ಯಾಪಿಸುತ್ತಿರುವಾಗ ಶಬ್ದಗಳೇ ಸಿಗದೆ 'o,o,o' ಎಂದು ಚೀರುತ್ತ ಹಾಸಿಗೆಯ ಮೇಲೆ ಕುಸಿದ ಅಥೆಲೋಗೆ ಮತ್ತೆ ಹೇಳುತ್ತಾಳೆ. Nay lay thee down, and roar, / For thou hast killed the sweetest innocent / That ever did lift up eye.' ಎಂದು ಚಾಟಿಯಲ್ಲಿ ಹೊಡೆದಂತೆ ಹೇಳುತ್ತಾಳೆ. ಕೊನೆಗೆ ಇಯಾಗೋನ ಕತ್ತಿ ತನ್ನನ್ನು ಇರಿದು ತಾನು ಸಾಯುವುದು ಖಂಡಿತ ಎಂದು ಗೊತ್ತಾದ ಮೇಲೆ ಡೆಸ್ಡಿಮೋನಾಳ ದೇಹದ ಬಳಿ ಸರಿದು 'What did thy song bode, Lady ? / Hark, canst thou hear me ? I will play the swan, / And die in music (Singing) willow, willow, willow' ಎಂದು ಜೋಗುಳವೂ ಹಂಸಗೀತೆಯೂ ಒಟ್ಟಿಗೆ ಹಾಡಿ ಮೂರನ ಕಡೆ ತಿರುಗಿ ತನ್ನ ಕೊನೆಯ ಮಾತನಾಡುತ್ತಾಳೆ: "Moor, she was chaste, she loved thee moor, cruel moor,/ So come my soul to bliss, I speak true / So speaking as I think, I die, die."

ಅಥೆಲೋವಿಗೂ ತನ್ನ ಅಂತ್ಯ ಸಮೀಪಿಸಿದ ಅರಿವಾಗುತ್ತಿದೆ. ಇನ್ನು ಈ ಮನುಷ್ಯಲೋಕದ ಕಾನೂನು, ಶಿಕ್ಷೆಗಳಿಗೆ ಕಾಯುತ್ತ ಕೂಡುವುದಿಲ್ಲ, ತಾನು, ಏನಿದ್ದರೂ ಬೇರೆ ಲೋಕದಲ್ಲಿ ಇವುಗಳನ್ನು ನಿರೀಕ್ಷಿಸಲು ನಿರ್ಧರಿಸಿದ್ದಾನೆ. ಇಯಾಗೋನನ್ನು ಕೊಲ್ಲಲಾಗಲಿಲ್ಲ, ಬಹುಶಃ ಅವನು ಸಾಯಲೂಬಹುದು. ಸಾವೊಂದು ವರವಿದ್ದ ಹಾಗೆ. ಅದಕ್ಕೆ ತಕ್ಕ ಮನುಷ್ಯನಲ್ಲ ಇಯಾಗೋ. ಇಯಾಗೋ ಈ ಕ್ಷಣದಲ್ಲಿ ಆಡುವ ಒಂದು ಮಾತು ಅತ್ಯಂತ ಗಮನಾರ್ಹವಾದದ್ದು. ಯಾಕೆ ಹೀಗೆ ತನ್ನ ಮೈಮನಸ್ಸುಗಳಲ್ಲಿ ವಿಷ ತುಂಬಿ ಹಾಳುಗೆಡವಿದನೆಂದು ಅವನನ್ನು ಕೇಳಿ ಎಂದು ಅಥೆಲೋ ಕೂಗಿಕೊಂಡಾಗ "Demand me nothing, what you know, you know / From this time forth, I never will speak word" ಎಂದು ಘೋಷಿಸಿಬಿಡುತ್ತಾನೆ. ಇಯಾಗೋವಿನ 'ಪ್ರತಿಭೆ' ಯೂ ತನ್ನ ಕೊನೆ ಕಂಡಿದೆ. ವಿಕೃತ ಮನಸ್ಸಿಗೆ, ಜೀವದ್ವೇಷಕ್ಕೆ ಅಂತರ್ಗತ ದುಷ್ಟತನಕ್ಕೆ ನಿರ್ದಿಷ್ಟ ಕಾರಣಗಳು, ವಿವರಣೆಗಳು ಇರುವುದಿಲ್ಲ. ಇಡೀ ನಾಟಕದಲ್ಲಿ ಮೊದಲ ಬಾರಿಗೆಂಬಂತೆ ಒಂದು ಪ್ರಾಮಾಣಿಕವಾದ ಮಾತು ಆಡಿದ್ದಾನೆ ಎಂದು ಒಂದು ಕಪಟದ ಪ್ರಶಂಸೆಯ ಮಾತು ಹೇಳಬಹುದೋ ಏನೋ.

ಅಥೆಲೋನ ಬಳಿ ಒಂದು ಆಯುಧವಿದೆ. ಆದರೆ ಅದರಿಂದ ಯಾರಿಗೂ ಅಪಾಯವಿಲ್ಲ. ಈ ಆಯುಧವನ್ನು ಹಿಡಿದು ತಾನು ಶತ್ರುಸೈನ್ಯವನ್ನು ಭೇದಿಸಿದ ನಿದರ್ಶನಗಳು ಇದೆ. ತನ್ನನ್ನು

ತಡೆಯ ಬಂದವರಿಂದ ರಕ್ಷಿಸಿಕೊಳ್ಳಲು ಬಲ್ಲೆ ತಾನು. ಆದರೆ ಎಂಥ ಅರ್ಥರಹಿತ ಅಹಂಕಾರದ ಮಾತುಗಳು ಇವು ! ಈಗ ತನ್ನ ಜೀವನದ ಯಾನ ಮುಗಿದಿದೆ.'' "....here is my butt, / And very sea-mark of my utmost sail." ಈಗ ತನ್ನನ್ನು ಯಾರೂ ಕೂಡ ಅಡಗಿಸಬಿಡಬಹುದು. 'Where should Othelo go ? now : how dost thou look now ? O ill - starred wench / pale as they smock, when we shall mett at count, / This look of thine will hurl my soul from heaven, / And friends will snatch it : cold, cold my girl, / Even like they chastity....' ಆತ್ಮಮರುಕ, ತೀವ್ರನರಳಿಕೆ, ಇದ್ದಕ್ಕಿದ್ದಂತೆ ಅರಿವಿಗೆ ಬರುತ್ತಿರುವಂತೆ ಕಾಣುವ ತನ್ನ ಮಹಾಕ್ರೌರ್ಯ, ಅಮಾನವೀಯತೆ ಎಲ್ಲವೂ ಸೇರಿ ಕೊಂಡ ಹಾಗೆ ಆಡಿದ ಮಾತುಗಳು. ಮುಂದೆ ಮತ್ತೂ ಉತ್ಕೃಷ್ಟವಾಗುತ್ತ ಹೋಗುವ ಈ ತಿಳಿವು ಅವನ ಮಾತುಗಳಿಗೆ ಮತ್ತಷ್ಟು ಚೂಪು, ಹೊಳಪುಗಳನ್ನು ನೀಡುತ್ತವೆ.

> ....O cursed slave !
> whip me, you devils
> from the possession of this heavenly sight,
> Blow me about in winds, roast me in sulphur,
> Wash me in steep-down gulfs of liquid fire !
> O Desdemona, Desdemona dead,
> oh, oh, oh....

ತನ್ನ ಬಗ್ಗೆ ಏನು ತಾನೇ ಹೇಳಬೇಕು ? ಹೇಗೆ ತಾನೆ ಜನ ತನ್ನನ್ನು ಬಣ್ಣಿಸಬೇಕು ? ''ಏನಾದರೂ ಹೇಳಿ / ಗೌರವಾನ್ವಿತ ಹಂತಕ, ನಿಮಗೆ ಸರಿಕಂಡರೆ / ಯಾಕೆಂದರೆ ಯಾವುದನ್ನೂ ನಾನು ದ್ವೇಷದಿಂದ ಪ್ರೇರಿತನಾಗಿ ಮಾಡಲಿಲ್ಲ - ಎಲ್ಲವೂ ಗೌರವ ಘನತೆಗಳಿಗಾಗಿ'' ಎಂದು ಅನ್ನುತ್ತಾನೆ. ದೃಶ್ಯದ ಮೊದಲಲ್ಲೇ ತಾನೇ ಹೇಳಿದ್ದನಲ್ಲ.... "It is the cause.... Yet she must die, else she will betray more men" ತನ್ನ ವಿವರಣೆಗೆ ದಕ್ಕದ ಗೌರವ ಘನತೆಗಳ ಅರ್ಥಕ್ಕೆ ತಕ್ಕುದಾಗಿ ಈ ಕೃತ್ಯವೆಸಗಿದ್ದಾನೆ ಅವನು. ದ್ವೇಷವೂ ಇಲ್ಲ, ಸ್ವಾರ್ಥವೂ ಇಲ್ಲ. ಅತ್ಯಂತ ಗೊಂದಲದ ಮನಃಸ್ಥಿತಿಯಲ್ಲಿ ಅಥೆಲೋ ಇರುವುದನ್ನು ನಾವು ಕಾಣುತ್ತೇವೆ. ಮತ್ತೂ ಅಷ್ಟು ಸಹಾನುಭೂತಿ ನಮ್ಮಲ್ಲಿ ಸ್ಫುರಿಸುತ್ತದೆ. ಸುತ್ತ ನೆರೆದಿರುವ ವೆನಿಸಿನ ಪ್ರಮುಖರು ಅಥೆಲೋ ಮತ್ತು ಇಯಾಗೋ ಇಬ್ಬರನ್ನು ವೆನಿಸಿಗೆ ಕರೆದೊಯ್ಯುವ ತೀರ್ಮಾನ ಮಾಡಿ ಹೊರಡಬೇಕು ಅನ್ನುವಷ್ಟರಲ್ಲಿ ಅಥೆಲೋ ಅವರನ್ನು ಉದ್ದೇಶಿಸಿ ಮಾತನಾಡುತ್ತಾನೆ. ''ಒಂದು ಕ್ಷಣ, ಒಂದೆರಡು ಮಾತು ಹೇಳಬೇಕಿದೆ. ಈ ನಾಡಿಗೆ ನಾನು ಒಂದಷ್ಟು ಸೇವೆ ಸಲ್ಲಿಸಿದ್ದೇನೆ. ಈ ಎಲ್ಲ ಘಟನೆಗಳ ಕುರಿತು ತಮ್ಮ ಪತ್ರಗಳನ್ನು ಬರೆಯುವಾಗ ನೈಜಸಂಗತಿಗಳನ್ನು ಬರೆಯಿರಿ. ಯಾವುದನ್ನೂ ಹಗುರವಾಗಿಯೂ ಕಾಣಬೇಡಿರಿ. ಮತ್ತೆ ಯಾವುದನ್ನೂ

ಹಗೆತನದಲ್ಲಿಯೂ ಆಡಬೇಡಿ. ಹಾಗೆ ಬರೆದಾಗ must you speak / Of one that loved not wisely, but too well / Of one not easily jealous, but being wroght, / Peerpexed in the extreme ; of one whose hand, / like the base Indian, threw a pearl away, / Richer than all his tribe ; of one whose subdued eyes / Albeit unused to the melting mood, / Drops tears as fast as the Arabian trees / Their medicinal gum ;" ಅದ್ಭುತ ಸಾಲುಗಳು, ನಂದುತ್ತಿರುವ ದೀಪದ ಕೊನೆಯ ಕ್ಷಣಗಳ ಪ್ರಖರ ಜ್ವಾಲೆ, ಬೆಳಕು. ಆಧ್ಯಾತ್ಮಿಕ ರೀತಿಯಲ್ಲಿ ಸಾರ್ವಜನಿಕವಾಗಿ ಮಾಡಿದ ಪಾಪನಿವೇದನೆ – ಕಸಿವಿಸಿಗಳು, ಅವಮಾನಭಾವ ಯಾವುದೂ ಲವಲೇಶವಿಲ್ಲದೆ. ಮತ್ತು ಬಹು ಮುಖ್ಯವಾಗಿ ತನ್ನ ಕೃತ್ಯಗಳಿಗೆ ಯಾರನ್ನೂ - ಇಯಾಗೋನನ್ನು ಕೂಡ - ಹೊಣೆಗಾರನಾಗಿ ಮಾಡುವ ಯತ್ನವೂ ಕಾಣುವುದಿಲ್ಲ. ಸಂಪೂರ್ಣ ಜವಾಬ್ದಾರಿ ತನ್ನದು. ತಪ್ಪೊಪ್ಪಿಗೆಯಾದ ಮೇಲೆ ಶಿಕ್ಷೆಯೂ ಆಗಬೇಕು. ಡೆಸ್ಡಿಮೋನಾಳ ವಿಷಯದಲ್ಲಿಯಂತೆಯೇ ತಪ್ಪು ಹೊರಿಸುವುದು, ಶಿಕ್ಷೆ ವಿಧಿಸುವುದು, ಶಿಕ್ಷೆ ಕಾರ್ಯಗತಗೊಳಿಸುವುದು ಎಲ್ಲವೂ ತಾನೇ. ತಪ್ಪೊಪ್ಪಿಗೆಯ ಭಾಗ ಮುಗಿಯಿತು. ಇನ್ನು ಶಿಕ್ಷೆ ; ಅಥೆಲೋ ತನ್ನ ಮಾತುಗಳನ್ನು ಮುಂದುವರೆಸುತ್ತಾನೆ - 'ಅಲೆಪ್ಪೋದಲ್ಲಿ ಒಂದು ಬಾರಿ ಪಗಡಿ ಧರಿಸಿದ ಕೇಡಿಗ ಮನಸ್ಸಿನ ತುರ್ಕನೊಬ್ಬ ವೆನಿಷಿಯನ್‌ನೊಬ್ಬನನ್ನು ಥಳಿಸಿ ವೆನಿಸ್ ದೇಶದ ಬಗ್ಗೆ ಕೀಳಾಗಿ ಮಾತನಾಡಿದಾಗ ಆ ಸುನತಿಗೊಂಡ ನಾಯನ್ನು ಕತ್ತುಪಟ್ಟಿ ಹಿಡಿದು ಹೀಗೆ ಕತ್ತರಿಸಿಬಿಟ್ಟೆ' ಎಂದು ಹೇಳುತ್ತಲೇ ಪುಟ್ಟದೊಂದು ಚೂರಿಯಿಂದ ತನ್ನನ್ನು ತಾನು ಇರಿದುಕೊಳ್ಳುತ್ತಾನೆ. ತೆವಳುತ್ತ ಹೋಗಿ ಹೆಂಡತಿಯ ದೇಹದ ಬಳಿ ಬಂದು 'I kissed thee ere I killed thee, no way but this, / Killing myself, to die upon a kiss' ಎಂದು ಉಸುರುತ್ತ ಉರುಳುತ್ತಾನೆ. ಅಷ್ಟೇ ಅಲ್ಲಿಗೆ ಮುಗಿಯಿತು. ಒಂದು ಅತಿ ನಾಜೂಕಿನ, ಅತಿ ಕೋಮಲ ಪ್ರೇಮಕತೆ. ವೆನಿಸ್ ಗಾಳಿಯಲ್ಲಿ ಬೆರೆಯಲು ಯತ್ನಿಸಿದ ಸುಗಂಧ ಪೂಸಿದ ತಂಗಾಳಿ. ಆದರೆ ಕ್ಷಣಕಾಲವೂ ಸಹಿಸದೆ ಚಂಡಮಾರುತವೊಂದು ಬೀಸಿ ಕೊಚ್ಚಿಕೊಂಡು ಹೋದ ಈ ಅಸಹಾಯಕ ಮೆಲುಗಾಳಿಯ ಕತೆ ಇದು. ಮಹೋನ್ನತ ಬದುಕಿಗೊಂದು ಮಹೋನ್ನತ ಅಂತ್ಯದ ಕತೆ.

ಮಿಕ್ಕೆಲ್ಲ ಗಣ್ಯರೂ ಮತ್ತೆ ವೆನಿಸಿಗೆ, ಮತ್ತದೇ ಮಾತುಗಳಿಗೆ, ಅದೇ ಬದುಕಿನ ರೀತಿಗೆ, ಅದೇ ಸ್ವಕೇಂದ್ರಿತ ಆಸೆ ಆಕಾಂಕ್ಷೆಗಳಿಗೆ. ಮತ್ತೆ ಇಲ್ಲೊಂದು ಕಮಲ ಅರಳುವುದು ಎಂದು ? ಮತ್ತೆ ಬದುಕು ತನ್ನ ತಾನು ಸ್ಥಾಪಿಸಿಕೊಳ್ಳುವುದು ಎಂದು ? ಮತ್ತೆ ಪ್ರೀತಿ ಅನುರಾಗಗಳ ಕಂಪು, ನಾದ ಗಾಳಿಯಲ್ಲಿ ಬೆರೆಯುವುದೆಂದು ? ವರ್ಷವಿಡೀ ಮುಳ್ಳುಗಳಿರುವ ಗಿಡದಲ್ಲಿ ಗುಲಾಬಿಗಳು ಅರಳುವುದು ಆಗೊಮ್ಮೆ ಈಗೊಮ್ಮೆ ತಾನೆ ? ಆ ಕ್ಷಣಕ್ಕಾಗಿ ಕಾಯಬೇಕು ನಾವು - ತಾಳ್ಮೆಯಿಂದ, ನಂಬಿಕೆಯಿಂದ, ಆಸೆಯಿಂದ.

⌝

ಇಂಗ್ಲೀಷ್ ಪ್ರಾಧ್ಯಾಪಕರಾಗಿ ದೇಶ ಭಾಷೆ ಸಂಸ್ಕೃತಿಗಳ ಗಡಿಗೆರೆಗಳನ್ನು ದಾಟಿ ಸಾಹಿತ್ಯವನ್ನು ಮಾನವೀಕರಣದ ದ್ರವ್ಯಮೂಲದಲ್ಲಿ ಅರ್ಥೈಯಿಸುವ ವಿಶೇಷತೆ ಪ್ರೊ. ಜಿ. ಕೆ. ಗೋವಿಂದರಾವ್ ಅವರದು. ಇದು ಕಾರಣವಾಗಿ ಶೇಕ್ಸ್‌ಪಿಯರನ ಎರಡು ನಾಟಕಗಳನ್ನು ಕುರಿತ ಅಧ್ಯಯನದ ಈ ಕೃತಿ ಕನ್ನಡದ ಓದುಗರಿಗೆ ಒಂದು ಅನನ್ಯ ಕೊಡುಗೆ. ನಾಟಕಗಳ ವಸ್ತುದ್ರವ್ಯದಲ್ಲಿ ಮಾನವ ಸ್ವಭಾವಗಳನ್ನು ನಿರೀಕ್ಷಿಸುವ ಮಹಾನ್ ಕಲಾಕಾರ ಶೇಕ್ಸ್‌ಪಿಯರ್. ಕಾಲದ ಸದ್ಯತನವನ್ನು ಮೀರಿ ಎಲ್ಲಕಾಲದ ತವಕ ತಲ್ಲಣಗಳಿಗೆ ಉತ್ತರ ಮುಖಿಯಾಗಬಲ್ಲ ಧಾತು ಸಂಪನ್ನತೆ ಈ ನಾಟಕಗಳ ವಿಶೇಷತೆ.

ಸಂದರ್ಭವಶದಲ್ಲಿನ ಮನುಷ್ಯನ ವರ್ತನೆ ಜೀವನ ಮೌಲ್ಯಗಳನ್ನು ಬಲಿತೆಗೆದು ಕೊಳ್ಳುತ್ತ ವ್ಯವಸ್ಥೆಗೆ ಬೇರೊಂದು ಬಗೆಯ ಅವಸ್ಥಾಂತರವನ್ನು ಕೊಡುವ ಪರಿಯನ್ನು 'ಸೀಸರ್' ನಾಟಕ ಮನೋಜ್ಞವಾಗಿ ಅನ್ವೇಷಿಸಿದೆ. ಕೋಮಲವಾದ ಪ್ರೇಮ ಪ್ರಸಂಗವು ಮಾನವ ಸಹಜ ದೌರ್ಬಲ್ಯ ಕಾರಣದಿಂದಾಗಿ ದುರಂತವನ್ನೆದುವ ಪರಿಯನ್ನು 'ಒಥೆಲೋ' ನಾಟಕ ಗಂಭೀರವಾಗಿ ಶೋಧಿಸಿದೆ. ಈ ಎರಡೂ ನಾಟಕಗಳಲ್ಲಿ ಅಂತರ್‌ಗಾಮಿಯಾಗಿ ಸಂಚರಿಸಿರುವ ಮನೋವ್ಯಾಪಾರಗಳನ್ನು ಪ್ರೊ. ಜಿ. ಕೆ. ಗೋವಿಂದರಾವ್ ರವರು ವಿಶ್ಲೇಷಿಸಿರುವ ರೀತಿ ವಿಸ್ಮಯ ಹುಟ್ಟಿಸುತ್ತದೆ.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ



ಬೆಲೆ ರೂ. ೧೦೦/-

ISBN 81-7713-136-2

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು